
ಕೇಶವಶರ್ಮ ಕೆ



ಕಾರ್ಯ ಕಾರಣ

ಕಾರ್ಯ-ಕಾರಣ

ಡಾ. ಕೇಶವಶರ್ಮ ಕೆ.

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರು ಅಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ – ೫೭೭೨೦೧

Karya Karanna

Written by:
Dr. Keshavasharma K.
Proffesor, Kannada Bharathi, Kuvempu University,
Shankaraghatta, Shivamogga Dist - 577451
Mob : 9448730611
Email: dr.keshavasharma.k@gmail.com

Published by
GEETHANJALI PUSTHAKA PRAKASHANA
Revenue Building, 100ft Road, Rajendra Nagar
Shivamogga - 577 201, Karnataka
Mobile: 9449886390, 9916197291
Email : gbtmohan@gmail.com

First Edition : 2017
Pages: 220
Paper : 70 gsm NS Maplitho
Price: 160/-
Size : 1/8 Demy
ISBN : 978-93-86855-39-8

ಮೊದಲ ಮುದ್ರಣ : ೨೦೧೭
ಪುಟಗಳು : ೨೨೦
ಪುಸ್ತಕದ ಅಳತೆ : ೧/೮ಡೆಮ್ಮಿ
ಬೆಲೆ : ೧೬೦/-
ರಕ್ಷಾಪುಟ : ಸೌಮ್ಯ ಕಲ್ಯಾಣಕರ್
ಪುಟ ವಿನ್ಯಾಸ : ಎಂ.ಎಂ. ಗ್ರಾಫಿಕ್ಸ್

ಪ್ರಕಾಶಕರು
ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ,
ಶಿವಮೊಗ್ಗ ೫೭೭ ೨೦೪
ದೂರವಾಣಿ: ೯೪೪೯೮೮೬೩೯೦

ಪುಸ್ತಕ ದೊರೆಯುವ ಸ್ಥಳ
ಜಿ.ಬಿ.ಟಿ. ಪಬ್ಲಿಕೇಷನ್ಸ್
ದೊಣ್ಣೇಹಳ್ಳಿ ಅಂಚೆ, ಜಗಳೂರು (ತಾ) ೫೭೭ ೫೨೮
ದಾವಣಗೆರೆ ಜಿಲ್ಲೆ. ಮೊ: ೯೯೧೬೧೯೭೨೯೧
ಮುದ್ರಣ : ರೀಗಲ್ ಪ್ರಿಂಟ್ ಸರ್ವಿಸ್, ಬೆಂಗಳೂರು

ಲೇಖಕರ ಮಾತು

ಬರಹ ಮತ್ತು ಅದರ ಸಾಧ್ಯತೆಯು ಬೇರೆ. ಅದನ್ನು ವಿವಿಧ ರೀತಿಯಲ್ಲಿ ನಿರೂಪಿಸುತ್ತೇವೆ. ಬರಹ ಎನ್ನುವುದು ಮಾತು ಅಲ್ಲ ಎನ್ನುವುದು ಎಲ್ಲರಿಗೂ ಗೊತ್ತು. ಲೇಖಕರು ನಮಗೆ ಸಿಕ್ಕಿದರೆ ನಾವು ಕೇಳುವ ಅತ್ಯಂತ ಮುಖ್ಯವಾದ ಒಂದು ಪ್ರಶ್ನೆ – ನೀವು ಈಗ ಏನು ಬರೆಯುತ್ತಿದ್ದೀರಿ? ನಾವು ಉತ್ತರಕೊಡುತ್ತೇವೆ. ಒಂದು ಖಾಲಿಯಾದ ಹಾಳೆಯ ಮೇಲೆ ಯಾವುದನ್ನು ಬರೆಯುತ್ತಿದ್ದೇವೆಯೋ ಅದನ್ನು ನಾವು ಬರಹ ಎಂದು ಹೇಳುತ್ತೇವೆ. ಬರಹ ಎನ್ನುವುದು ಒಂದು ಗುರುತು. ಹಾಗೆಂದು ಅದು ಒಂದು ಸಾಮಾನ್ಯವಾದ ನಮ್ಮ ಸಂವೇದನೆಯನ್ನು ಹೇಳುವುದಿಲ್ಲ. ಅದರಲ್ಲಿ ಬೇರೆ ಆಯಾಮವೂ ಇದೆ. ಬರಹವನ್ನು ನಾವು ಅನೇಕ ಬಾರಿ ಒಂದು ಸ್ವಾಯತ್ತವಾದ ಪ್ರಕ್ರಿಯೆ ಎಂದು ಭಾವಿಸುತ್ತೇವೆ. ಆದರೆ ಅದು ಅಷ್ಟು ಸಾಯತ್ತವಲ್ಲ. ನಮಗೆ ನಮ್ಮ ಬಾಲ್ಯದಲ್ಲಿ ಮೊದಲು ಬರೆಯುವುದಕ್ಕೆ ಹೇಳಿಕೊಡುತ್ತಾರೆ. ಬರೆಯುವುದು ಅಂದರೆ ಅದನ್ನು ಒಂದು ಕೌಶಲ ಎಂದು ರೂಪಿಸಲು ಬೇಕಾದ ಶಿಸ್ತನ್ನು ರೂಪಿಸುತ್ತಾರೆ. ಅದರಲ್ಲಿ ಬರೆಯುವುದು ಅಂದರೆ ಅ, ಆ ಮುಂತಾದವುಗಳನ್ನು ಮತ್ತೆ ಮತ್ತೆ ಬರೆಯುವುದು. ಹೀಗೆ ಬರೆಯುತ್ತಾ ಅದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು. ಅದು ನಮಗೆ ಹೆಚ್ಚು ಅಗತ್ಯ. ಒಂದು ವೇಳೆ ನಮಗೆ ಬರೆಯಲು ಸಾಧ್ಯವಾಗುವುದಿಲ್ಲ ಎಂದರೆ ಆಗ ಅದರ ಚಹರೆಗಳು ಗೊತ್ತಾಗುವುದಿಲ್ಲ. ಬರಹಕ್ಕೆ ಒಂದು ರೇಖೆಯು ಇರುತ್ತದೆ. ಆ ರೇಖೆಯೇ ಅತ್ಯಂತ ಮುಖ್ಯ. ಬರಹವನ್ನು ನಾವು ಕಲಿಯುವುದು ಅಂದರೆ ನಿರ್ದಿಷ್ಟವಾದ ಜ್ಞಾನ ಮತ್ತು ಅದರ ಮಾದರಿಯ ಒಳಗೆ ನಾವು ಪ್ರವೇಶಮಾಡುವುದು ಕೂಡಾ ಸತ್ಯ. ನಾವು ಯಾವುದನ್ನು ಬರೆಯಬೇಕು ಎನ್ನುವುದು ನಮಗೆ ಬಿಟ್ಟದ್ದು. ಆದರೆ ಅದು ಪ್ರಜ್ಞಾಪೂರ್ವಕವಾದ ಪ್ರಕ್ರಿಯೆ. ಬರಹಕ್ಕೆ ಒಂದು ತಲ್ಲೀನತೆ ಎನ್ನುವುದು ಇರಬೇಕು. ನಾವು ತಲ್ಲೀನವಾಗದೆ ಬರೆಯಲು ಆಗುವುದಿಲ್ಲ.

ಆದರೆ ಇಲ್ಲಿ ಬರಹವನ್ನು ನಾವು ಬೇರೆ ಬೇರೆ ಥರ ರೂಢಿಸಿಕೊಳ್ಳುತ್ತೇವೆ. ಬರಹವು ಅತ್ಯಂತ ಮುಖ್ಯವಾದ ಪ್ರಕ್ರಿಯೆಯೂ ಹೌದು ಅದರಲ್ಲಿ ನಾವು ನಮ್ಮ ಕಲ್ಪನೆಯನ್ನು ಹೇಳಬಹುದು. ಅದರಲ್ಲಿ ನಾವು ಪತ್ರವನ್ನೂ ಬರೆಯಬಹುದು. ಆದ್ದರಿಂದ ನಮ್ಮ ಸ್ಥಿತಿಗೆ ಹಾಗೂ ಬರಹಕ್ಕೆ ಒಂದು ಸಂಬಂಧವೂ ಇದೆ. ಅತ್ಯಂತ ಸ್ಪಷ್ಟವಾದ ಮನೋಸ್ಥಿತಿಯು ನಮಗೆ ಅತ್ಯಂತ ಖಚಿತವಾದ ಬರಹವನ್ನು ರೂಪಿಸಲು ಕಾರಣವೂ ಆಗುತ್ತದೆ. ಅದು ಗುಣಾತ್ಮಕವಾದ ಒಂದು ಪ್ರಕ್ರಿಯೆ. ಬರಹವು ವ್ಯಾಕರಣಕ್ಕೆ ಬದ್ಧವಾಗಿರುತ್ತದೆ. ಆದರೆ ಅದು ಹಾಗೆ ಇರುವುದಕ್ಕೂ ಅದರ ರಚನೆಗೂ , ಒಂದು ಇತಿಹಾಸಕ್ಕೂ ಒಂದು ಸಂಬಂಧವು ಇದೆ. ಬರಹವು ಅಕ್ಷರಗಳ ಸಂಯೋಜನೆಯು ಆಗಿದೆ. ಹಾಗೆ ಮಾತಾಡುವುದಿದ್ದರೆ ನಾವು ಈವತ್ತು ಬರಹ ಮತ್ತು ಅದರ ಶಕ್ತಿಯನ್ನು ನಿರಾಕರಣೆ ಮಾಡಲು ಬರುವುದಿಲ್ಲ. ಸಮಾಜ ಮತ್ತು ಚರಿತ್ರೆಯು ಬದಲಾಗುವಾಗ ಅದಕ್ಕೆ ತಕ್ಕಂತೆ ನಮ್ಮ ಬರಹ ಮತ್ತು ಅದರ ಸ್ವರೂಪವೂ ಬದಲಾಗುತ್ತದೆ. ಬರಹವು ನಮ್ಮ ಕಣ್ಣಿಗೆ ಕಾಣುತ್ತದೆ. ಆದ್ದರಿಂದ ಅದರ ಪಲ್ಲಟವೂ ನಮಗೆ ತಿಳಿಯುತ್ತದೆ. ಕತೆಯನ್ನು ಹೇಳುವುದು ಒಂದು ಕ್ರಮ, ಆದರೆ ನಾಟಕವನ್ನು ಬರೆಯುವುದು ಮತ್ತೊಂದು ಕ್ರಮ. ಇದಕ್ಕೆ ಮೂಲಭೂತವಾದ ವ್ಯತ್ಯಾಸವೂ ಇದೆ. ಈವತ್ತು ನಮ್ಮ ಅನೇಕ ಚರ್ಚೆಗಳು ಇದನ್ನು ಆಧರಿಸಿಕೊಂಡು ಇದೆ. ಬರಹ ಎನ್ನುವುದು ಸ್ಥಳ, ಕಾಲ ಮತ್ತು ಅವಕಾಶಗಳನ್ನು ಹೇಳುತ್ತವೆ. ನನಗೆ ಅವಕಾಶವು ಸಿಕ್ಕಿದೆ. ಕಾಲವೂ ದೊರೆತಿದೆ. ವಿವಿಧ ಪುಸ್ತಕಗಳನ್ನು ಗ್ರಹಿಸಲು ಬೇಕಾದ ವಾತಾವರಣವೂ ಇದೆ. ಆದರೆ ಈ ಕೃತಿಯು ಎರಡು - ಮೂರು ವರ್ಷಗಳ ಹಿಂದೆ ಬರಬೇಕಾಗಿತ್ತು. ಕಾರಣಾಂತರದಿಂದ ತಡವಾಗಿ ಪ್ರಕಟವಾಗುತ್ತದೆ. ಆದರೂ ಒಂದು ಖುಶಿಯು ಇದ್ದೇ ಇರುತ್ತದೆ. ಪುಸ್ತಕವು ಎಲ್ಲರಿಗೆ ಅಲ್ಲವಾದರೂ ಕೆಲವರಿಗೆ ಸಿಕ್ಕುತ್ತದೆ. ಅವರು ಓದುತ್ತಾರೆ. ನನಗೆ ಕೆಲವು ವರ್ಷಗಳ ಕೆಳಗೆ ಒಬ್ಬರು ಒಂದು ಪ್ರಶ್ನೆಯನ್ನು ಕೇಳಿದರು: ನೀವು ಯಾಕೆ ಬರೆಯುತ್ತೀರಿ? ನಿಮ್ಮ ಬರಹವು ಯಾರಿಗಾದರೂ ತಲುಪುತ್ತದೆಯೇ? ಅದೆಲ್ಲಕ್ಕಿಂತ ಹೆಚ್ಚಾಗಿ ಈ ಥರದ ಕೃತಿಗಳು ಕನ್ನಡಕ್ಕೆ ಅಗತ್ಯವಿದೆಯೇ? ಜನರಿಗೆ ಅರ್ಥವಾಗದ ಪುಸ್ತಕವನ್ನು ಬರೆದು ಏನು ಉಪಯೋಗ?" ಇದಕ್ಕೆ ಉತ್ತರವನ್ನು ಕೊಡುವ ಮೊದಲು ಎರಡು ಸಂಗತಿಗಳನ್ನು ಹೇಳಬೇಕು: ಒಂದು ಬಹು ವರ್ಷದ ಹಿಂದೆ ನಡೆದುದು. ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ಮೂಡಿಗೆರೆಯಲ್ಲಿ ಕುವೆಂಪು ಕಾವ್ಯ ದೃಶ್ಯವಿತ್ತು. ಅದರ ನಿರ್ದೇಶಕರು ಶ್ರೀಪಾದ ಭಟ್. ಅದನ್ನು ನೋಡಲು ತೇಜಸ್ವಿಯವರು ಬಂದರು. ಅವರನ್ನು ನೋಡಿ ನಮಗೆ ಗಾಬರಿಯಾಯಿತು. ಗೆಳೆಯ ಶ್ರೀಪಾದ ಭಟ್ ಅವರಿಗೆ, "ಈ ನಾಟಕವು ಚೆನ್ನಾಗಿಲ್ಲ" ಎಂದು ಮಾತ್ರ ಹೇಳಬೇಡಿ ಎಂದರು. " ಅದಕ್ಕೆ ತೇಜಸ್ವಿಯವರು ಕೊಟ್ಟ ಉತ್ತರವನ್ನು ಮರೆಯುವುದು ಅಸಾಧ್ಯ. "ಅಲ್ಲಯ್ಯಾ ಒಮ್ಮೆ ಒಬ್ಬ ಬಂದು ನನಗೆ ನನ್ನ ಕತೆಯನ್ನು ಓದಿ ಕತೆಯು ಚೆನ್ನಾಗಿಲ್ಲ ಎಂದ. ನಾನು ಹೇಳಿದೆ_ ನಾನೇನು ಒಳ್ಳೆಯ ಕತೆಯನ್ನು ಬರೆಯುತ್ತೇನೆ ಎಂದು ಬರೆದುಕೊಟ್ಟಿದ್ದೇನೆಯಾ? ನಿನಗೆ ಬೇಕಾದರೆ ನೀನು ಓದು. ಬೇಡವಾದರೆ ಬಿಡು. ಹಾಗೆಯೇ ನಿಮ್ಮ ನಾಟಕವು ಕೂಡಾ. ಬೇಕಾದರೆ ನೋಡುತ್ತಾರೆ. ಬೇಡವಾದರೆ ಬಿಡುತ್ತಾರೆ. ಅದಕ್ಕೆ ಯಾಕ್ರಯ್ಯಾ ನೀವು ಯೋಚನೆ ಮಾಡುತ್ತೀರಿ? "

ಇನ್ನೊಂದು ಮಾತನ್ನು ನನ್ನ ಸ್ನೇಹಿತರಾದ ಡಾ. ಭಂಡಾರಿಯವರು ಹೇಳಿದ್ದರು. "ಬರೆದ ಮೇಲೆ ಮುಗಿಯಿತು. ಅದರ ಬಗ್ಗೆ ಹೆಚ್ಚು ಯೋಚನೆ ಮಾಡಬೇಡಿ ಮುಂದೆ ಏನು ಬರೆಯಬೇಕು ಅದನ್ನು ಮಾತ್ರವೇ ಯೋಚನೆ ಮಾಡಿ. ಇಲ್ಲವಾದರೆ ನಮ್ಮ ತಲೆ ಕೆಡುತ್ತದೆ ಅಷ್ಟೆ " ಇದು ನನಗೆ ಸದಾ ನೆನಪಿಗೆ ಬರುತ್ತದೆ.

ಈ ಪುಸ್ತಕವನ್ನು ಬರೆಯುವಾಗ ನಾನು ಲೂಶಿಯನ್ ಗೋಲ್ಡ್ ಮನ್, ರೇಮಾಂಡ್ ವಿಲಿಯಂಸ್, ಜೇಮ್ಸನ್, ಟೆರಿಈಗಲ್ಟನ್ ಅವರ ಕೃತಿಗಳನ್ನು ಓದಿದ್ದೇನೆ. ಅವರ ಚಿಂತನೆಗಳು ಅತ್ಯಂತ ಮುಖ್ಯವಾದವುಗಳು.

ಡಾ. ಭಂಡಾರಿ, ಕೆವಿಯನ್, ಬರಗೂರು, ಆರ್.ಜಿ.ಹಳ್ಳಿ ನಾಗರಾಜ್, ಮೇಟಿಮಲ್ಲಿಕಾರ್ಜುನ, ಅವಿನಾಶ್, ಅರವಿಂದ ಮಾಲಗತ್ತಿ, ಧರಣೀದೇವಿ, ಎಚ್.ಎಲ್. ಪುಷ್ಪ, ರಂಗನಾಥ್ ಕುಳಗಟ್ಟೆ, ವಿಠಲ, ನಾಗಾರ್ಜುನರಿಗೆ ವಂದನೆಗಳು.

ಪ್ರೀತಿಯ ಮಕ್ಕಳಾದ ನಹುಷ ಮತ್ತು ನಿಯತಿ, ಸಂಗಾತಿ ಸಬಿತಾರಿಗೆ,

ಕರಡು ತಿದ್ದಿದ ಪಾಂಡುರಂಗ, ಅಭಿಲಾಷ, ಸುನಿಲ್, ಕೃಷ್ಣಮೂರ್ತಿ , ಮೇಘನಾ, ವಿಜಯಕುಮಾರ್, ರಮೇಶ್ ಅವರಿಗೆ ,

ಬೆರಳಚ್ಚು ಮಾಡಿದ ಮೇರಿಯವರಿಗೆ, ಅರ್ಪುದಾ ಮೇರಿ, ಅಂದವಾಗಿ ಪುಸ್ತಕವನ್ನು ತರುತ್ತಿರುವ ಗೀತಾಂಜಲಿಯ ಮೋಹನ್ ಜಿ.ಬಿ.ಟಿ., ಮುಖಪುಟ ವಿನ್ಯಾಸ ಸೌಮ್ಯ ಕಲ್ಯಾಣ್‌ಕರ್ ಮತ್ತು ಪುಟ ವಿನ್ಯಾಸ ಮಾಡಿದ ಎಂ.ಎಂ. ಗ್ರಾಫಿಕ್ಸ್ ಮತ್ತು ಮುದ್ರಿಸಿದ ರಿಗಲ್ಸ್ ಪ್ರಿಂಟ್ಸ್ ಸರ್ವಿಸ್ ಮತ್ತು ಓದುಗರಿಗೆ, ವಂದನೆಗಳು.

–ಕೇಶವ ಶರ್ಮ.ಕೆ

ಪರಿವಿಡಿ

ಸಾಹಿತ್ಯ ಮತ್ತು ಸಮಾಜಶಾಸ್ತ್ರ

ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವು ದ್ವಂದ್ವಾತ್ಮಕವಾಗಿದೆ. ಆದರೆ ಅದರ ಕುರಿತು ನಾವು ಮತ್ತೆ ಕೆಲವು ಅಂಶಗಳನ್ನು ಯೋಚಿಸಬೇಕಾದ ಅಗತ್ಯವೂ ಇದೆ. ಅಂದರೆ ಯಾವುದೇ ವಿಷಯಗಳು ತನ್ನಿಂದ ತಾನೇ ಉಂಟಾಗುವುದು ಇಲ್ಲ. ಈ ಅರ್ಥದಲ್ಲಿ ವಾಸ್ತವತೆಯೆ ನಮಗೆ ಬಲವನ್ನು ಕೊಡುತ್ತದೆ. ಅಂದರೆ ವಾಸ್ತವವು ಬರೀ ಸಾಹಿತ್ಯಕ್ಕೆ ಮಾತ್ರವೇ ಸೀಮಿತವಾದ ಚಟುವಟಿಕೆ ಎಂದೂ ಭಾವಿಸಬೇಕಾದ ಅಗತ್ಯವಿಲ್ಲ. ಆದರೆ ಯಾವುದೇ ಬದಲಾವಣೆ ಮತ್ತು ಅದರ ಸಾಧ್ಯತೆಗಳಿಗೂ ವಿವಿಧ ಆಯಾಮಗಳೂ ಇರುತ್ತವೆ. ಕಾರಂತರನ್ನು ಓದುವಾಗ ಅವರು ಯಾಕೆ ಕಾದಂಬರಿಯನ್ನು ಬರೆದರು ಮತ್ತು ಆ ರೀತಿಯಲ್ಲಿ ಹೇಗೆ ಪ್ರತಿಕ್ರಿಯೆಯನ್ನು ನೀಡಿದರು ಎಂದು ನೋಡಬೇಕಾಗುತ್ತದೆ. ಇದರಲ್ಲಿ ಅಭಿವ್ಯಕ್ತಿ ಮತ್ತು ಅದರ ಸ್ವರೂಪವೂ ಇದೆ. ಕಾರಂತರು ಕಾದಂಬರಿಯನ್ನು ಬಳಸಿಕೊಂಡ ವಿಧಾನವೂ ಅತ್ಯಂತ ಮಹತ್ವದ್ದು. ಅವರು ಕಾದಂಬರಿಯನ್ನು ಒಂದು ವಾಹಕವಾಗಿ ಬಳಸಿಕೊಂಡರು. ಕಾರಂತರಿಗೆ ಅತ್ಯಂತ ಮಹತ್ವದ್ದಾಗಿ ಕಂಡದ್ದು ಈ ಮಾಧ್ಯಮ. ಇದು ಆ ಕಾಲಕ್ಕೆ ಅಗತ್ಯವೂ ಆಗಿತ್ತು. ಅವರ ಬರಹ ಮತ್ತು ಅದರ ಅಗತ್ಯವನ್ನು ನಾವು ಈ ದೃಷ್ಟಿಯಿಂದ ಕಾಲದ ಅಗತ್ಯವೆಂದು ಹೇಳಿದರೂ ಅದರ ಹಿಂದೆ ಚಾರಿತ್ರಿಕವಾದ ಒತ್ತಡವೂ ಇದೆ ಎಂಬುದನ್ನು ಮರೆಯಬಾರದು. ಗೋಲ್ಡ್‌ಮನ್ ಈ ಮಾದರಿಗಳನ್ನು ಕಾಲ ಮತ್ತು ಸ್ಥಳವನ್ನು ಆಧರಿಸಿಕೊಂಡು ನೋಡಬೇಕಾಗುತ್ತದೆ ಎಂದು ಹೇಳಿದ್ದು ಇಲ್ಲಿ ಉಲ್ಲೇಖನೀಯವಾಗಿದೆ. ಅಭಿವ್ಯಕ್ತಿ ಮತ್ತು ಅದರ ಸಾಧ್ಯತೆಗಳು ಯಾವಾಗಲೂ ಕಾಲದ ಚಹರೆಯನ್ನು ಭಿನ್ನವಾಗಿಯೂ ನೋಡುತ್ತದೆ. ವಸಾಹತುಕಾಲದಲ್ಲಿ ಕಾದಂಬರಿಯ ಓದು ಎನ್ನುವುದೂ ಕೂಡಾ ಭಿನ್ನವಾದ ಅಗತ್ಯವಾಗಿತ್ತು. ಅದು ಹೊಸ ನಮೂನೆಯ ಓದು. ಕಾದಂಬರಿ ಮತ್ತು ಅದರ ಓದು ಸಾಮಾನ್ಯ ವರ್ಗಕ್ಕೆ ಹೆಚ್ಚು

ಪ್ರಿಯವೆಂದು ಅನಿಸಿತು. ಯಾರೂ ಕಾದಂಬರಿಯನ್ನು ಓದದೇ ಹೋಗಿದ್ದರೆ ಕಾದಂಬರಿ ಎನ್ನುವ ಪ್ರಕಾರವೇ ಹುಟ್ಟುತ್ತಿರಲಿಲ್ಲ. ಈ ಕಾರಣದಿಂದ ಅಭಿವ್ಯಕ್ತಿ ಮತ್ತು ಅದರ ಹಿಂದೆ ಇರುವ ಲೇಖಕನ ಮನೋಭಾವವು ಬೇರೆ ಬೇರೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅದರಲ್ಲಿ ಲೇಖಕನೂ ಭಾಗವಹಿಸುತ್ತಾನೆ. ಅದು ದ್ವಂದ್ವಾತ್ಮಕವಾದ ಅಗತ್ಯವೂ ಆಗಿರುತ್ತದೆ. ಕಾದಂಬರಿಯಲ್ಲಿ ಯಾವುದನ್ನು ಹೇಳಬೇಕು ಎನ್ನುವುದು ಲೇಖಕನ ಆಯ್ಕೆ. ಲೇಖಕ ಮತ್ತು ಸಾಮಾಜಿಕ ಆಯ್ಕೆಗಳು ಮಾತ್ರವೇ ಅವನ ನಿಲುವನ್ನು ಹೇಳುತ್ತವೆ. ಕಾರಂತರು ಬರೆದಿರುವುದು ಮತ್ತು ಜನರಿಗೆ ಕೊಟ್ಟದ್ದು ಬರೀ ಕಾದಂಬರಿಯೆಂದು ಭಾವಿಸಬಾರದು. ಅದರಲ್ಲಿ ಅವರ ನಿಲುವುಗಳು ಇವೆ. ಅದು ಕಾದಂಬರಿಗಳಲ್ಲಿ ಪಾತ್ರಗಳು, ನಿರೂಪಣೆ ಮತ್ತು ತಾಂತ್ರಿಕತೆಯ ಮೂಲಕ ಹರಡಿಹೋಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕಾರಂತರು ಕಾದಂಬರಿಯನ್ನು ಬರೆದದ್ದು ಮತ್ತು ಅದನ್ನು ಕನ್ನಡದ ಓದುಗರು ಸ್ವೀಕರಿಸಿದ್ದು ಕನ್ನಡದಲ್ಲಿ ಮಹತ್ವದ ಚಾರಿತ್ರಿಕ ಘಟನೆಯೂ ಹೌದು. ಅದನ್ನು ನಾವು ನಿರಾಕರಿಸಲು ಬರುವುದು ಇಲ್ಲ. ಅದು ಓದುಗರ ಚರಿತ್ರೆಯನ್ನು ಹೇಳುತ್ತದೆ. ಆ ಓದುಗರು ಬ್ರಿಟೀಷ್ ಮಾದರಿಯ ಶಿಕ್ಷಣದ ಕ್ರಮದಲ್ಲಿಯೇ ಪಳಗಿದವರು. ಆ ಓದುಗ ವರ್ಗಕ್ಕೆ ಹಳೆಯ ಮಾದರಿಯ ಕತೆಗಳು ಇಷ್ಟವಾಗಿರಲಿಲ್ಲ. ಅವರಿಗೆ ಬಂಕಿಮಚಂದ್ರರೇ ಇಷ್ಟವಾಗಿದ್ದರು. ಅವರೂ ಗಳಗನಾಥರನ್ನು ಓದಲು ಪ್ರಾರಂಭಿಸಿದರು. ಆದರೆ ಅದರ ಹಿನ್ನೆಲೆಯಲ್ಲಿ ಸಮಾಜದಲ್ಲಿ ಎಲ್ಲರೂ ಕಾದಂಬರಿಯನ್ನು ಓದಿದರು ಎಂದು ಭಾವಿಸಬೇಕಾಗಿಯೂ ಇಲ್ಲ. ಕಾದಂಬರಿಯು ಆಗ ಇದ್ದ ಅವಕಾಶಗಳನ್ನು ತುಂಬಿತು. ಅದು ಅಭಿರುಚಿಯನ್ನು ಬದಲಿಸಿತು. ವಸಾಹತುಕಾಲವು ಒಂದು ಭಿನ್ನವಾದ ಸಂಗತಿಯನ್ನು ನಮಗೆ ಹೇಳಿತು ಎನ್ನುವುದು ಸ್ಪಷ್ಟ. ಅದರಲ್ಲಿ ಹೊಸದಾದ ಸಾಹಿತ್ಯದ ಸಂಗತಿಗಳು ಬಹಳ ಮುಖ್ಯವಾಗಿದ್ದವು. ಅಭಿವ್ಯಕ್ತಿಯು ಬದಲಾಗುವುದಕ್ಕೂ; ಕಾಲಕ್ಕೂ ಒಂದು ನಿರ್ಣಾಯಕವಾದ ಸಂಬಂಧವಿದೆ. ಸಾಹಿತ್ಯವನ್ನು ಓದುವ ಮತ್ತು ಗ್ರಹಿಸುವ ವಿಧಾನದಲ್ಲಿಯೂ ವ್ಯಾಪಕವಾದ ಬದಲಾವಣೆಯು ಕಾಣಿಸಿತು. ವ್ಯಕ್ತಿ ಮತ್ತು ಪಠ್ಯದ ಸಂಬಂಧವನ್ನು ಅದು ಬದಲಿಸಿದ್ದೂ ಅಷ್ಟೇ ನಿಜ. ಆಗಿನ ಕೆಲವು ಸಿದ್ಧಾಂತಗಳು ಸಾಹಿತ್ಯವನ್ನು ನೋಡುವ ಮತ್ತು ಗ್ರಹಿಸುವ ಕ್ರಮವನ್ನು ಬದಲಿಸಿದವು. ಹಾಗೆ ನೋಡುವುದಿದ್ದರೆ ಯಾವುದೇ ಸಿದ್ಧಾಂತಗಳೂ ನಮ್ಮ ಓದಿನ ಕ್ರಮವನ್ನು ಬದಲಿಸುತ್ತವೆ. ಸಾಹಿತ್ಯ ಮತ್ತು ಅದರ ಸಿದ್ಧಾಂತಗಳು ಅನೇಕವಿವೆ. ಆದರೆ ವಸಾಹತು ದೇಶದಲ್ಲಿ ಆಗ ಅತ್ಯಂತ ಹೆಚ್ಚು ಯಾವುದನ್ನು ಓದಿದರೋ ಅಥವಾ ಓದಿಸಿದರೋ ಅದು ಹೆಚ್ಚು ಪ್ರಭಾವಶಾಲಿಯೂ ಆದವು. ರೊಮಾಂಟಿಕ್‌ಪಂಥ ಮತ್ತು ಅದರ ಪರಿಣಾಮವು ಭಾರತದಲ್ಲಿ ಒಂದು ವಿಧವಾದ ಓದನ್ನು ರೂಪಿಸಿತು. ಆಗ ದೊರಕಿದ ಕೆಲವು ಪಠ್ಯಗಳು ಅದಕ್ಕೆ ಪೂರಕವಾಗಿದ್ದವು. ಎರಡನೆಯದಾಗಿ ಆಗ ಯಾವುದನ್ನು ಓದಬೇಕು ಮತ್ತು ಹೇಗೆ ಓದಬೇಕು ಎನ್ನುವುದಕ್ಕೆ ನಡೆದ ತರಬೇತಿಗಳ ಪರಿಣಾಮವು ಸಾಮಾನ್ಯವಾದುದು ಅಲ್ಲ. ಆಗಿನ ಕೃತಿಗಳು ನಿರೂಪಿಸಿದ ಕೃತಿಗಳ ತಾತ್ವಿಕತೆಯೇ ಹೆಚ್ಚು ಭಾವುಕವಾದದ್ದೂ

ನಿಜ. ಆಗ ಅನೇಕರು ಅನೇಕ ರೀತಿಯ ಕೃತಿಗಳನ್ನು ಓದಿದರು. ಮತ್ತು ಅದರ ಪರಿಣಾಮವನ್ನೂ ಗಮನಿಸಿದರು. ಸಾಹಿತ್ಯ ಮತ್ತು ಅದರ ಕಲಿಕೆಯು ನಮ್ಮಲ್ಲಿ ಬೇರೆ ವಿಧದ ಪ್ರಭಾವವನ್ನು ಬೀರಿತು. ಕಾರಂತರು ಆಗ ಬರೆದ ಅನೇಕ ಕಾದಂಬರಿಗಳು ಒಂದು ಅರ್ಥದಲ್ಲಿ ಅತ್ಯಂತ ಮಹತ್ವದ್ದೂ ಹೌದು. ಅದು ವಸಾಹತುಕಾಲದ ಚರಿತ್ರೆಯನ್ನು ಹೇಳುತ್ತವೆ. ಅದರ ಹಿಂದೆ ಇರುವ ತಾತ್ವಿಕತೆಯನ್ನು ನಾವು ಹೇಗೆ ನೋಡಬೇಕು ಎನ್ನುವುದು ಈಗ ಮಹತ್ವದ ಪ್ರಶ್ನೆ. ವಸಾಹತುಕಾಲದ ಚರಿತ್ರೆಯೇ ಅತ್ಯಂತ ಸಂಕೀರ್ಣವಾದದ್ದು. ಅದರ ಪರಿಣಾಮವು ಆರ್ಥಿಕತೆಯ ಮೇಲೆ ಆಗಿತ್ತು. ಆದರೆ ಒಂದು ಮಾತನ್ನು ಇಲ್ಲಿ ಹೇಳಬೇಕು: ಕಾರಂತರಿಗೆ ವರ್ಡ್ಸ್‌ವರ್ತನ ಪ್ರಭಾವವಿಲ್ಲ. ಕಾಲ್‌ರಿಜ್ ಅವರಿಗೆ ಹೆಚ್ಚು ಮುಖ್ಯವಾಗಲಿಲ್ಲ. ಅವರಿಗೆ ಹೆಚ್ಚು ಮುಖ್ಯವಾದದ್ದು ಚೋಮ ಮತ್ತು ಸಂಕಪ್ಪಯ್ಯರೇ. ಈ ಅರ್ಥದಲ್ಲಿ ಕಾರಂತರಿಗೆ ಒಂದು ನಿರ್ದಿಷ್ಟವಾದ ಗುರಿಯು ಇರುವ ಹಾಗೆ ಕಾಣುತ್ತದೆ. ಇದೇ ಮಾತು ನಮ್ಮ ರಾವ್‌ಬಹದ್ದೂರರಿಗೆ ಅನ್ವಯವಾಗುತ್ತದೆ. ಪಡದಯ್ಯನ ಕ್ರೌರ್ಯವು ಅನ್ಯರಿಗಿಂತ ಕಡಿಮೆಯದು ಅಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಆಗಿನ ವಾಸ್ತವವಾತವಾದಿ ಲೇಖಕರ ಗಮನವು ಬೇರೆಯಿತ್ತು. ಮತ್ತು ಅದರಲ್ಲಿ ಹಿಡುವಳಿ, ಆಚಾರ, ಜೀವನ ಶ್ರದ್ಧೆಯ ಪ್ರಶ್ನೆಗಳು ಇದ್ದವು. ಆಗ ಇದ್ದ ಕಾಲವೂ ಅದರ ಪರಿಣಾಮವೂ ಮತ್ತೆ ಬೇರೆ ವಿಧವಾಗಿದ್ದವು. ಲೇಖಕ ಮತ್ತು ಅವನು ಕೊಟ್ಟ ಸೂಚನೆಗಳು ಮತ್ತು ಅವುಗಳು ಪ್ರಾರಂಭಿಸಿದ ಸಂಕಥನಗಳು ಒಂದು ವಿಧವಾದದ್ದೂ ಅಲ್ಲ. ಸೂಚಕರು ಬದಲಾಗಿದ್ದಾರೆ. ಸೂಚನೆಗಳು ಬದಲಾಗಿವೆ. ಮತ್ತು ಸೂಚಿತರೂ ಬದಲಾಗಿದ್ದಾರೆ. ಅವರು ಹಿಂದಿನ ಕಾಲದ ಓದುಗರು ಅಲ್ಲ. ಆದ್ದರಿಂದ ಆಗ ಪ್ರಾರಂಭವಾದ ಸಂಕಥನಗಳು ಒಂದು ವಿಧವಾಗಿವೆ. ಸೂಚಕರಾದ ಕಾರಂತರು ಸೂಚಿತರಾದ ನಮಗೆ ತಮ್ಮ ಕಾದಂಬರಿಯೆನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅರ್ಥವಿದೆ. ಆ ಅರ್ಥವನ್ನು ಅವರ ಕಾಲದ ಹಿನ್ನೆಲೆಯಿಂದ ನೋಡಿಕೊಂಡು ಗಮನಿಸುತ್ತೇವೆ. ನಾವು ಎಲ್ಲರೂ ನಮಗೆ ಬೇಕಾದ ಸಂಗತಿಯನ್ನು ಮತ್ತು ನಾವು ಹೇಳಬೇಕಾದ್ದದನ್ನು ಮಾತಿನಲ್ಲಿ ಹೇಳುತ್ತೇವೆ. ಆದರೆ ಅದನ್ನು ಹೇಳುವುದು ನಮ್ಮ ಉದ್ದೇಶಕ್ಕೆ ಅನುಸಾರವಾಗಿ ಮಾತ್ರವೇ. ನಮಗೆ ಗೊತ್ತಿರುವ ಸತ್ಯವನ್ನು ನಾವು ನಮಗೆ ಬೇಕಾದ ರೀತಿಯಲ್ಲಿ ಹೇಳುತ್ತೇವೆ. ಅಂದರೆ ಅದನ್ನು ನಾವು ರೂಪುಗೊಳಿಸುತ್ತೇವೆ. ಅದೇ ರೀತಿಯಲ್ಲಿ ಲೇಖಕನು ತನಗೆ ಬೇಕಾದ್ದನ್ನು ನಮಗೆ ಕೊಡುತ್ತಾನೆ. ಕಾರಂತರು ಅವರಿಗೆ ಯಾವುದು ಸರಿಯೆಂದು ಅನಿಸಿದೆಯೋ ಅಥವಾ ಯಾವುದನ್ನು ಹೇಳಬಹುದು ಎಂದು ಅನಿಸಿದೆಯೋ ಅದನ್ನು ಮಾತ್ರವೇ ಹೇಳಿದ್ದಾರೆ. ಅದು ಅವರ ದೃಷ್ಟಿಕೋನ. ನಮಗೆ ಅವರು ಹೇಳಿದ ಕಾದಂಬರಿಗಳು ಸರಿಯಾಗಿದೆಯೇ ಅಥವಾ ಇಲ್ಲವೇ ಎಂದು ಹೇಳಲು ಅವಕಾಶವಿದೆ. ಕೃತಿಗೆ ಅವಕಾಶವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಮತ್ತು ಅದರ ಅರ್ಥವು ಭಿನ್ನವಾಗಿದೆ. ಕೃತಿಯೆನ್ನುವುದೂ ಒಂದು ದೃಷ್ಟಿಯಿಂದ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಸಂಯೋಜನೆ. ಅದು ವ್ಯಕ್ತಿಯೊಬ್ಬನ ದರ್ಶನವೆಂದು

ಕುವೆಂಪು ಹೇಳುತ್ತಾರೆ. ಈ ದರ್ಶನವು ವ್ಯಕ್ತಿ ಮತ್ತು ಅವನ ನೋಟವನ್ನು ಮತ್ತು ಅದರ ಹಿಂದೆ ಇರುವ ಸತ್ಯವನ್ನು ಹೇಳುತ್ತದೆ. ಅದು ಅವನ ತಾತ್ವಿಕತೆಯ ಪ್ರಶ್ನೆಯೂ ಹೌದು. ಆದರೆ ಇದೇ ಕಾರಣಕ್ಕೆ ನಮಗೆ ಸಾಹಿತ್ಯವನ್ನು ಗ್ರಹಿಸಲು ಮತ್ತು ಅದರ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ತಾತ್ವಿಕತೆಯೂ ಬೇಕಾಗುತ್ತದೆ.

ವಿಮರ್ಶೆಯೂ ಒಂದು ತಾತ್ವಿಕವಾದ ಉದ್ದೇಶವಾಗಿದೆ. ಕೃತಿಗೆ ಯಾವ ರೀತಿಯ ನಿಯಮವು ಇದೆಯೋ ಅದೇ ರೀತಿಯಲ್ಲಿ ವಿಮರ್ಶೆಗೂ ಒಂದು ಬಗೆಯಲ್ಲಿ ಉದ್ದೇಶವಿರುತ್ತದೆ. ಆ ಉದ್ದೇಶವೇ ನಿಯಮವನ್ನು ಹೇಳುತ್ತವೆ. ನಿಯಮ ರಹಿತವಾದ ಉದ್ದೇಶವು ಇರುವುದು ಅಸಾಧ್ಯ. ಸಾಹಿತ್ಯದಲ್ಲಿ ಬರುವ ಸಂಕೇತಶಾಸ್ತ್ರವನ್ನು ನೋಡುವುದು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆದರೆ ನವ್ಯ ವಿಮರ್ಶಕರು ಸಂಕೇತವನ್ನು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾದ ನೆಲೆಗಳಿಂದ. ಅವರಿಗೆ ಕೃತಿ ಮತ್ತು ಅದರ ಅಗತ್ಯವು ಮಾತ್ರವೇ ಬಹಳ ಮುಖ್ಯವಾಗುತ್ತದೆ. ಇಡೀ ಕೃತಿಯೇ ಒಂದು ಸಂಕೇತವೆಂದು ಮತ್ತು ಅದರಲ್ಲಿ ನಿರ್ದಿಷ್ಟವಾದ ಸಂಗತಿಯು ಇದೆ ಎಂದು ಭಾವಿಸಿದರೆ ಮಾತ್ರವೇ ಅರ್ಥವು ಬೇರೆಯಾಗುತ್ತದೆ. "ಮೂಡಲ ಮನೆಯ ಮುತ್ತಿನ ನೀರಿನ ಎರಕಾಽವ ,,,,,' ಎನ್ನುವ ಕವಿತೆಯಲ್ಲಿ ಬೆಳಗು ಅತ್ಯಂತ ಅರ್ಥ ಪೂರ್ಣವಾದ ಸಂಕೇತವೇ ಆಗುತ್ತದೆ. ಸಮಾಜ ವಿಜ್ಞಾನಗಳಲ್ಲಿ ತತ್ವಜ್ಞಾನ ಮತ್ತು ಅದರ ಪರಿಕರಕ್ಕೆ ಹೆಚ್ಚಿನ ಮಹತ್ವವೂ ಇದೆ. ವಿಮರ್ಶಕರು ಮತ್ತು ಅವರ ನಿಲುವು ವ್ಯಕ್ತವಾಗುವುದು ಈ ದೃಷ್ಟಿಯಲ್ಲಿ ಅತ್ಯಂತ ಮುಖ್ಯ. ಅವರು ಸಮಾಜದ ಒಂದು ಭಾಗವಾಗಿದ್ದಾರೆ. ಅವರು ಹೇಳುವುದು ಅಥವಾ ತಮ್ಮ ನಿಲುವನ್ನು ವ್ಯಕ್ತಪಡಿಸುವುದು ಸಮಾಜ ಮತ್ತು ಅದರ ಅರಿವಿನಲ್ಲಿಯೇ ಆಗುತ್ತದೆ. ಆದರೆ ಯಾರಿಗೆ ಸಮಾಜವು ಬೇಡ ಮತ್ತು ಅದರ ಅರಿವು ಬೇಡವೆಂದು ಅನಿಸುತ್ತದೆಯೋ ಅವರು ಕವಿತೆಯನ್ನು ಮಾತ್ರವೇ ನೋಡುತ್ತಾರೆ. ಅದರ ಅರ್ಥವನ್ನು ಮಾತ್ರವೇ ಹೇಳುತ್ತಾರೆ. ಬಹುತೇಕ ತರಗತಿಗಳಲ್ಲಿ ನಡೆಯವುದು ಇದುವೇ. ಕೃತಿ ಮತ್ತು ಅದರ ಅರ್ಥವನ್ನು ಮಾತ್ರವೇ ನೋಡುವುದು ಸಾಹಿತ್ಯವನ್ನು ಕಲಿಸುವವರಿಗೆ ಅಭ್ಯಾಸವಾಗುತ್ತದೆ. ಆದರೆ ಅವರು ಯಾವತ್ತೂ ಯಾವುದೇ ಕೃತಿಯನ್ನು ಯಾರು ಹೇಳಿದರು ಮತ್ತು ಯಾಕೆ ಹೇಳಿದರು, ಹೇಳಿದ್ದರ ಕಾರಣವು ಯಾವ ಬಗೆಯದು ಎನ್ನುವುದನ್ನು ಚರ್ಚಿಸುವುದೇ ಇಲ್ಲ. ಪಂಪನು ಅರಿಕೇಸರಿಯನ್ನು ಹೊಗಳಿದ್ದಕ್ಕೆ ಕಾರಣವಿದೆ. ಅದು ಅವನ ಅಗತ್ಯವಾಗಿತ್ತು. ಅವನ ಕೃತಿಯು ಸಮಾಜವನ್ನು ಹೇಳುತ್ತದೆ. ಪ್ರಭುತ್ವ ಮತ್ತು ಅದರ ದೌರ್ಬಲ್ಯವನ್ನು ವಿವರಿಸುತ್ತದೆ. ಸಾಹಿತ್ಯ ಮತ್ತು ಅದರ ಅರ್ಥವು ಈ ದೃಷ್ಟಿಯಿಂದ ಆಗ ಬೇರೆ ಬೇರೆ ಸಂಗತಿಗಳನ್ನು ಹೇಳಿತ್ತು. ಆಧುನಿಕ ಜ್ಞಾನ ಜಗತ್ತಿನಲ್ಲಿ ವಿಮರ್ಶೆಯೂ ಒಂದು ಬಗೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಪಂಪನಿಗೆ ಯಾವ ಭಾಷೆಯಲ್ಲಿ ಹೇಳಬೇಕು ಮತ್ತು ಅದನ್ನು ಹೇಗೆ ನಿರೂಪಿಸಬೇಕು ಎನ್ನುವುದೇ ಅತ್ಯಂತ ಮಹತ್ವದ ಸಂಗತಿಯೂ ಆಗಿತ್ತು. ಅದು ಆಗ

ನಿಜವಾದ ಭಾಷಿಕ ಸಂಘರ್ಷ. ಅವನಿಗೆ ಯಾವುದನ್ನು ಹೇಳಬೇಕು ಎಂದು ಅನಿಸಿತ್ತೋ ಅದರ ಸ್ವರೂಪವು ಬೇರೆಯಾಗಿ ಕಾಣಿಸಿತ್ತು. ವ್ಯಾಸನ ಮಹಾಭಾರತವು ಇದ್ದದ್ದು ಸಂಸ್ಕೃತದಲ್ಲಿ. ಅದು ಸಾಮಾನ್ಯ ಮನುಷ್ಯರ ಭಾಷೆಯು ಅಲ್ಲ. ಆದರೆ ಅದು ಪಾಂಡಿತ್ಯವನ್ನು ಸೂಚಿಸುತ್ತದೆ. ಅದರ ಅಗತ್ಯವೇ ಬೇರೆಯಿದೆ. ವ್ಯಾಸನ ಕಥನವು ವ್ಯಕ್ತಿಯನ್ನು ಆಧರಿಸಿಕೊಂಡಿಲ್ಲ. ಅರ್ಜುನನ್ನು ವ್ಯಾಸ ನೋಡುವುದೇ ಬೇರೆ ವಿಧಾನದಲ್ಲಿ. ಧರ್ಮರಾಯ ಅಂದರೆ ಧಾರ್ಮಿಕ ವ್ಯಕ್ತಿ. ಭೀಮನು ಮತ್ತೊಂದು ಥರದವನು. ಅರ್ಜುನನ ಸ್ವಭಾವವು ಬೇರೆ. ಈ ಮಾದರಿಗಳು ಪಂಪನಲ್ಲಿ ಬದಲಾಗುತ್ತವೆ. ಪಂಪನ ಚರಿತ್ರೆಯು ಬದಲಾಗಿದೆ. ಅವನ ಸಾಮಾಜಿಕ ಸ್ವರೂಪವೂ ವ್ಯತ್ಯಾಸವಾಗಿದೆ. ಚರಿತ್ರೆ ಮತ್ತು ಅದರ ಬದಲಾವಣೆಯು ವಾಸ್ತವವಾಗಿ ಒಂದು ನಿಸರ್ಗ ಮತ್ತು ಅದರ ಸ್ವರೂಪದಲ್ಲಿ ಉಂಟಾದ ಬದಲಾವಣೆಯು ಅಲ್ಲ. ಅದರಲ್ಲಿ ವಾಸ್ತವವಾಗಿ ಭಾಷೆಯೂ ಬದಲಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ವಿಮರ್ಶೆಯೂ ಬದಲಾಗುತ್ತದೆ. ಅದರ ಪ್ರಜ್ಞೆಯಲ್ಲಿ ವ್ಯತ್ಯಾಸವಾಗುತ್ತದೆ. ಪ್ರಜ್ಞೆಯು ನಮ್ಮ ವಿಮರ್ಶಾತ್ಮಕವಾದ ನೆಲೆಗಳನ್ನು ಭಿನ್ನಗೊಳಿಸುತ್ತವೆ. ವಿಮರ್ಶೆಯು ಎಷ್ಟರ ಮಟ್ಟಿಗೆ ಮೂಲವನ್ನು ಹೇಳುತ್ತದೆ. ಮತ್ತು ಅದು ಕೃತಿಯನ್ನು ಹೇಗೆ ಭಾವಿಸುತ್ತದೆ ಎನ್ನುವುದು ಮುಖ್ಯ. ವಾಸ್ತವವಾಗಿ ಕೃತಿ ಮತ್ತು ಅದರ ಪರಿಶೀಲನೆಯನ್ನು ಮಾಡುವಾಗ ಅದರ ಹಿಂದೆ ಯಾವುದು ಇದೆ ಎಂದು ನೋಡಬೇಕು. ಸಾಹಿತ್ಯದ ತಾತ್ವಿಕತೆ, ಅದರ ಮನೋಸ್ಥಿತಿ, ಅದರ ಚಾರಿತ್ರಿಕತೆ ಬಹಳ ಮುಖ್ಯವಾಗುತ್ತದೆ. ಕೃತಿಯ ಉದ್ದೇಶವು ಯಾವ ಬಗೆಯದು ಮತ್ತು ಅದು ಯಾವುದನ್ನು ಎತ್ತಿಕೊಳ್ಳುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಗಂಭೀರವಾದ ವಿಮರ್ಶೆಯು ಅನೇಕ ಪ್ರಶ್ನೆಗಳನ್ನು ಎತ್ತುತ್ತವೆ. ಅದು ಅನೇಕವನ್ನು ಒಳಗೊಳ್ಳುತ್ತವೆ. ಸಾಹಿತ್ಯ ಮತ್ತು ಸೌಂದರ್ಯದ ಪ್ರಶ್ನೆಗಳು: ಅನೇಕ ಅರ್ಥಗಳನ್ನು ಒಳಗೊಂಡಿರುತ್ತವೆ. ಸಮಾಜ ಮತ್ತು ಅದರ ಭಾಷೆಯ ಕ್ರಮಗಳಿಗೆ ಇರುವ ಕೆಲವು ನಿಯಮವನ್ನು ನಾವು ನೋಡಬೇಕಾಗುತ್ತದೆ. ಸಾಹಿತ್ಯ ಮತ್ತು ಅದರ ಭಾಷೆಯನ್ನು ನಾವು ಅದರ ಚೌಕಟ್ಟಿನಲ್ಲಿ ನೋಡಬೇಕೇ ಅಥವಾ ಬೇಡವೇ ಎನ್ನುವುದು ಮಹತ್ವದ ಪ್ರಶ್ನೆಯು ಆಗಿದೆ. ಭಾಷೆಯು ಕೆಲವು ನಿರ್ದಿಷ್ಟವಾದ ಕೆಲವನ್ನು ಮಾಡುತ್ತದೆ. ಮತ್ತು ಅದರ ಅಗತ್ಯವೂ ಇದೆ. ಲೇಖಕನು ಯಾವುದನ್ನು ನೋಡಿದ್ದಾನೆ ಮತ್ತು ಗ್ರಹಿಸಿದ್ದಾನೆ ಅದನ್ನು ಆವನು ಭಾಷೆಯಲ್ಲಿ ಹೇಳುತ್ತಾನೆ. ಪರಿವೀಕ್ಷಣೆ ಮತ್ತು ಅದರ ಅನ್ವಯವು ಅತ್ಯಂತ ಮಹತ್ವದ್ದೂ ಹೌದು. ಗಮನಿಸುವುದು ಮತ್ತೆ ಅದಕ್ಕೆ ನಾವು ಅನ್ವಯವನ್ನು ಮಾಡುವುದು ಬಹಳ ಮುಖ್ಯವಾದ ಒಂದು ಸಮಾಜದ ಚಟುವಟಿಕೆಯೂ ಆಗಿದೆ. ಸಾಮಾಜಿಕ ವಾಸ್ತವವನ್ನು ಹೇಗೆ ನೋಡುತ್ತೇವೆಯೋ ಅದನ್ನು ನಾವು ಅನ್ವಯಿಸುತ್ತೇವೆ. ಭಾಷೆ ಮತ್ತು ಅದರ ಸಂಜ್ಞೆ ಯಾವಾಗಲೂ ಬೇರೆಯಾಗುತ್ತದೆ. ಮತ್ತು ಅದನ್ನು ಹೇಳುವುದು ಆಯಾ ಸನ್ನಿವೇಶವನ್ನು ಆಧರಿಸಿಕೊಂಡು ಎನ್ನುವುದು ಇಲ್ಲಿ ಗಮನಾರ್ಹ. ಆದರೆ ಈ ಸಂಗತಿಯನ್ನು ನೋಡುವಾಗ ಲೇಖಕನು ಯಾವುದನ್ನು, ಯಾಕೆ, ಹೇಗೆ, ಹೇಳುತ್ತಾನೆ ಎನ್ನುವುದನ್ನೂ ನೋಡಬೇಕಾಗುತ್ತದೆ. ವಾಸ್ತವವಾಗಿ

ಲೇಖಕರು ಕೆಲವನ್ನು ಆಯ್ಕೆ ಮಾಡುತ್ತಾರೆ ಮತ್ತು ಆ ಆಯ್ಕೆಗಳು ಅವರ ತಾತ್ವಿಕತೆಯನ್ನು ಹೇಳುತ್ತದೆ. ಕಾರಂತರು ಯಾವುದನ್ನು ಹೇಗೆ ಹೇಳಿದ್ದಾರೆ ಎನ್ನುವುದನ್ನು ಓದುವುದು ಮಾತ್ರವೇ ಅಲ್ಲ: ಅವರು ಹೇಳಿದ್ದನ್ನು ನಾವು ನಿರ್ದಿಷ್ಟವಾದ ಕಾಲದ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅವರು ನಿರ್ದಿಷ್ಟವಾದ ಒಂದು ಚರಿತ್ರೆಯಲ್ಲಿ ನಿಂತುಕೊಂಡು ಚೋಮನ ಪ್ರಶ್ನೆಯನ್ನು ಎತ್ತಿಕೊಂಡರು. ಅವರ ಪ್ರಜ್ಞೆಯೇ ಅವರ ನುಡಿಯನ್ನು ನಿಯಂತ್ರಿಸಿದೆ. ಅದರಲ್ಲಿ ನಿಜವಾದ ಅರ್ಥವೂ ಇದೆ. ಅದು ಚೆನ್ನಾಗಿದೆಯೇ ಇಲ್ಲವೇ ಎಂದು ಹೇಳುವಾಗ ಅನೇಕರು ಅದರ ಸ್ವರೂಪವನ್ನು; ಅದರ ನಿಲುವನ್ನು ಒಂದು ದೃಷ್ಟಿಕೋನದಲ್ಲಿ ಮಾತ್ರವೇ ಹೇಳುತ್ತಾರೆ. ಆ ಆಧಾರವು ಮಾತ್ರವೇ ನಮಗೆ ಸಾಕಾಗುವುದು ಇಲ್ಲ. ಅದರಲ್ಲಿ ವ್ಯತ್ಯಾಸವಿದೆ. ಅವರು ಹೇಳುವುದನ್ನು ಅವರು ಆಧರಿಸಿದ ಸ್ಥಳವನ್ನು ನೋಡಿಕೊಂಡು ಮಾತಾಡಬೇಕಾಗುತ್ತದೆ. ಅದರಲ್ಲಿ ಒಂದು ಕಾಲದ ಜೀವನ ಮತ್ತು ಅದರ ಪರಿವರ್ತನೆಯ ರೂಪಗಳು ಇವೆ. ವಾಸ್ತವವಾದ ಒಂದು ಪ್ರಶ್ನೆಯನ್ನು ಹೇಗೆ ಎತ್ತಲು ಸಾಧ್ಯವೋ ಅದೇ ರೀತಿಯಲ್ಲಿ ಕಾದಂಬರಿಯು ಕೆಲವು ಪ್ರಶ್ನೆಗಳನ್ನು ಎತ್ತುತ್ತದೆ. ಆಗ ದಕ್ಷಿಣ ಕನ್ನಡದಲ್ಲಿ ಕಾರ್ನಾಡ ಸದಾಶಿವರಾಯರು ಕೆಲಸವನ್ನು ಮಾಡುತ್ತಿದ್ದರು. ಮತ್ತೊಂದು ಕಡೆಗೆ ಕುದ್ಮಲ್ ರಂಗರಾಯರು ಕೆಲಸವನ್ನು ಮಾಡುತ್ತಿದ್ದರು. ಬೇರೆ ಕಡೆಗೆ ಗಾಂಧಿಯವರ ನಿಲುವುಗಳು ಇದ್ದವು. ವಿನೋಬಾಭಾವೆಯರು ಭೂದಾನವನ್ನು ಹೇಳುತ್ತಿದ್ದರು. ಆಗಿನ ಅನೇಕ ಚರ್ಚೆಗಳು ಅಸ್ಪೃಶ್ಯರ ಸಮಸ್ಯೆಯನ್ನು ಬೇರೆ ರೀತಿಯಲ್ಲಿ ಗ್ರಹಿಸುವ ಪ್ರಯತ್ನಗಳು ಆಗಿದ್ದವು. ಕಾರಂತರ ಅನುಭವವೂ ಇದರ ಜೊತೆಗೆ ಇತ್ತು ಅಂದರೆ ವಾದವು ಇಷ್ಟೆ: ಯಾವುದೇ ಕಾದಂಬರಿಕಾರರು ಹೇಳುವ ವಿಷಯಗಳು ಬರೀ ಒಂದು ನೀತಿಯನ್ನು ಮಾತ್ರವೇ ಹೇಳುವುದಿಲ್ಲ. ಅದು ಅನೇಕವನ್ನು ಹೇಳುತ್ತವೆ. ಕಾರಂತರ ಭಾಷೆ ಮತ್ತು ಅದರ ಚಹರೆಗಳು ಕೂಡಾ ಆಗಿನ ಸಂಗತಿಗಳನ್ನು ಹೇಳುತ್ತವೆ. ಸಾಹಿತ್ಯ ಮತ್ತು ಅದರ ಸಂಹಿತೆಗಳು ಆಗ ಒಂದು ರೀತಿಯಲ್ಲಿ ಇದ್ದವು. ಮತ್ತು ಅದರ ಅರ್ಥಗಳು ಬೇರೆಯಾಗಿದ್ದವು. ಇಲ್ಲಿ ನೋಡಬೇಕಾದ ಮತ್ತೊಂದು ಅಂಶವಿದೆ. ಕಾರಂತರು ಆಗಿನ ವಾಸ್ತವವನ್ನು ಹೇಳುತ್ತಾರೆ. ಆಗ ಇದ್ದ ಮತ್ತೊಂದು ಮನೋಭಾವವನ್ನು ಕಾರಂತರು ಹೇಳುತ್ತಾರೆ. ಕಾದಂಬರಿಯಲ್ಲಿ ದನ ಮತ್ತು ಅದರ ಪ್ರಶ್ನೆಗಳನ್ನು, ಅಸ್ಪೃಶ್ಯರ ಸಮಸ್ಯೆಗಳನ್ನು ಸಮಾಜವು ಹೇಗೆ ನೋಡಿದೆ ಎಂದು ಕಾರಂತರು ಹೇಳುತ್ತಾರೆ. ಅದು ಸರಿಯೇ ಅಥವಾ ಅದು ನಿಜವಾಗಿ ಏನು ಮಾಡುತ್ತದೆ ಎನ್ನುವುದು ಅವರ ಆಸಕ್ತಿಯ ವಿಷಯವಾಗಿದೆ. ಆಗ ಅಸ್ಪೃಶರ ಸಮಸ್ಯೆಯನ್ನು ಹೇಗೆ ನೋಡಲಾಗಿತ್ತು ಎನ್ನುವುದನ್ನು ಮಾತ್ರವೇ ಅವರು ಹೇಳುತ್ತಾರೆ. ಅದರಲ್ಲಿ ಮೇಲು ಜಾತಿಯವರ ಮನೋಸ್ಥಿತಿಯ ಪ್ರಶ್ನೆಯು ಇದೆ. ತಾತ್ವಿಕ ಸಂಘರ್ಷದ ಪ್ರಶ್ನೆಯೂ ಇದೆ. ಚರಿತ್ರೆಯ ಪ್ರಶ್ನೆಯೂ ಇದೆ. ಹೀಗಾಗಿ ಕಾರಂತರು ಈ ಕಾದಂಬರಿಯಲ್ಲಿ ಅತ್ಯಂತ ಮಹತ್ವದ ಪ್ರಶ್ನೆಯನ್ನು ಹೇಳುತ್ತಿದ್ದಾರೆ. ಅದರಲ್ಲಿ ನಿರ್ದಿಷ್ಟವಾದ ಉದ್ದೇಶವೂ ಇದೆ. ಗಂಭೀರವಾದ ಪ್ರಶ್ನೆಗಳು ನಿಜವಾಗಿಯೂ ಅನೇಕ ಸಮಸ್ಯೆಗಳನ್ನು ಎತ್ತುತ್ತವೆ. ದಲಿತರ ಪ್ರಶ್ನೆ, ಭೂಮಿಯ ಪ್ರಶ್ನೆ. ಜಾತಿಯ

ಪ್ರಶ್ನೆಗಳನ್ನು ಆಗಿನ ಲೇಖಕರು ವಿವರಿಸಿದ ಕ್ರಮವು ಅತ್ಯಂತ ಕುತೂಹಲಕಾರಿಯಾಗಿದೆ. ಅದು ಸಾಹಿತ್ಯ ಮತ್ತು ಸಾಮಾಜಿಕ ಜೀವನವನ್ನು ನೋಡಿದ ಕ್ರಮಗಳು ಭಿನ್ನವಾಗಿವೆ. ಸಮಾಜ ಮತ್ತು ಅದರ ಭಾಷಿಕ ಕ್ರಮವನ್ನು ಆಗ ಗ್ರಹಿಸಿದ ಕ್ರಮವೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಸಮಾಜ ಮತ್ತು ಅದರ ಭಾಷೆಯನ್ನು ಆಗ ಅನೇಕರು ಬೇರೆ ರೀತಿಯಲ್ಲಿಯೂ ಎತ್ತಿಕೊಂಡರು. ಸಾಹಿತ್ಯದ ಭಾಷೆಯು ಕೆಲವು ವರ್ಗಾಂತರವನ್ನು ಮಾಡುವುದು ನಿಜ. ಅದರ ಮಾರ್ಗಾಂತರವನ್ನು ಮತ್ತು ಅದರ ಸ್ವರೂಪವನ್ನು ಬರೀ ಸಾಹಿತ್ಯದಲ್ಲಿ ಮಾತ್ರವೇ ನೋಡಲು ಸಾಧ್ಯವಾಗುವುದೂ ಇಲ್ಲ. ಅದು ಸಮಾಜವನ್ನು ಹೇಳುತ್ತದೆ. ಸಮಾಜದಲ್ಲಿ ಅಸ್ತಿತ್ವದಲ್ಲಿ ಇಲ್ಲದ ಯಾವುದೇ ಭಾಷೆಯನ್ನು ಒಬ್ಬ ಲೇಖಕ ಬಳಸಲಾರ. ಭಾಷೆಗೆ ಕೆಲವು ಪ್ರಾಥಮಿಕವಾದ ನಿಯಮವು ಇರುತ್ತದೆ. ಆ ನಿಯಮವನ್ನೇ ಲೇಖಕನು ಬಳಸುತ್ತಾನೆ. ಬೇರೆ ಬೇರೆ ಕಾಲದ ಅನೇಕ ಸಂಗತಿಗಳನ್ನು ಅವನು ಹೇಳುತ್ತಾನೆ. ಲೇಖಕ ಪರಿಶೀಲಿಸುತ್ತಾನೆ. ಮತ್ತು ಅನ್ವಯವನ್ನೂ ಮಾಡುತ್ತಾನೆ. ಅನ್ವಯದಲ್ಲಿಯೇ ಅವನ ಜ್ಞಾನವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಅನ್ವಯವು ಎಷ್ಟರ ಮಟ್ಟಿಗೆ ಸತ್ಯದ ಹತ್ತಿರವಿದೆ ಮತ್ತು ಅದರ ಅನ್ವಯವು ಹೇಗಿದೆ ಎನ್ನುವುದು ಬಹಳ ಮುಖ್ಯ. ಸಾಮಾಜಿಕ ಜೀವನ ಮತ್ತು ಅದರ ಆಳವನ್ನು ಲೇಖಕ ಗಮನಿಸಿದಷ್ಟು ಅವನ ಬರಹವು ಹೆಚ್ಚು ಆಪ್ತವಾಗುತ್ತದೆ. ಸತ್ಯವನ್ನು ಅವನು ನಿರಾಕರಿಸಿದರೆ ಅವನ ಬರಹವು ತೆಳುವಾಗುತ್ತದೆ. ಒಬ್ಬ ಲೇಖಕ ವೀಕ್ಷಕ. ಅವನು ನೋಡುತ್ತಾನೆ. ಮತ್ತು ಕೆಲವನ್ನು ಅನುಭವಿಸುತ್ತಾನೆ. ಅನುಭವಿಸಿದ್ದನ್ನು ಅಥವಾ ವೀಕ್ಷಿಸಿದ್ದನ್ನು ಅನ್ವಯಿಸುತ್ತಾನೆ. ಲೇಖಕನು ಬರೆಯತ್ತಾನೆ. ಅವನು ಸಿಟ್ಟನ್ನು ಬರಹದಲ್ಲಿ ತೋಡಿಕೊಳ್ಳುತ್ತಾನೆ. ಅವನು ತಾನು ಯಾವ ವ್ಯವಸ್ಥೆಯಲ್ಲಿ ಕಂಡ ಲೋಪವನ್ನು ಪಾತ್ರದ ಮೂಲಕವೇ ನಿರೂಪಿಸಬಲ್ಲ. ಬರಹವು ಮೂಲಭೂತವಾಗಿ ಕೆಲವನ್ನು ಹೇಳುತ್ತದೆ. ಅದರಲ್ಲಿ ಸ್ವಾತಂತ್ರ್ಯವಿದೆ. ಆಲೋಚನೆಯ ಸ್ವಾತಂತ್ರ್ಯವೆಂದರೆ ಅದು ಮಾತಿನ ಸ್ವಾತಂತ್ರ್ಯವೂ ಹೌದು ಎಂದು ಕಿರ್ಕೆಗಾರ್ಡ ಹೇಳಿದ್ದು ಗಮನಾರ್ಹ. ಮೊದಲಿಗೆ ನಮಗೆ ಆಲೋಚಿಸುವ ಸ್ವಾತಂತ್ರ್ಯವು ಬೇಕಾಗುತ್ತದೆ. ನಾವು ಯಾವುದರ ಕುರಿತು ಯೋಚಿಸುತ್ತೇವೆಯೋ ಅದರ ಕುರಿತು ಬರೆಯಲು ಸಾಧ್ಯ. ನಮಗೆ ಹೇಳಲು ಒಂದು ಮಾರ್ಗವು ಬೇಕಾಗುತ್ತದೆ. ಅದು ಬರಹವಾಗುತ್ತದೆ, ಅದು ಮಾತಾಗುತ್ತದೆ, ಅದು ಅಳುವೂ ಆಗುತ್ತದೆ ಅಥವಾ ಅದು ಸಂಗೀತದ ಒಂದು ರಾಗವೂ ಆಗುತ್ತದೆ. ನಾವು ಯಾಕೆ ನಗುತ್ತೇವೆ ಮತ್ತು ಯಾಕೆ ಅಳುತ್ತೇವೆ ಎನ್ನುವುದು ನಿಜವಾದ ಪ್ರಶ್ನೆಯೂ ಹೌದು. ನಗು ಮತ್ತು ಅಳು ಎನ್ನುವುದು ಮೂಲತಃ ನಮಗೆ ಅನುಭವವನ್ನು ಹೇಳಲು ಸಿಕ್ಕ ಒಂದು ಮಾಧ್ಯಮವು ಮಾತ್ರವೇ ಆಗಿದೆ. ಜನಪದರು ಕಾವ್ಯವನ್ನು ಹೇಳಿದರು. ಅವರು ಬರೆಯಲಿಲ್ಲ. ಅವರ ಕಥನಗಳು ಮಾತಿನಲ್ಲಿ ಮತ್ತು ಹಾಡಿನಲ್ಲಿ ಇದೆ. ಅವುಗಳು ಅವರ ಬಯಕೆಯನ್ನು ಹೇಳಿದವು. ಅವರ ಆಸಕ್ತಿಯನ್ನು ಸೂಚಿಸಿದವು. ಹಾಗೆ ನೋಡುವುದಿದ್ದರೆ ಮಲೆಯಮಾದೇಶ್ವರ,

ಜನಪದ ರಾಮಾಯಣದಂಥ ಕೃತಿಗಳು ಜನರ ಪ್ರಜ್ಞೆ ಮತ್ತು ಅವರ ನಿಲುವನ್ನು ಹೇಳುತ್ತವೆ. ಅವರಿಗೆ ಅದು ಸಮ್ಮತವಾಗಿದೆ. ಅವರಿಗೆ ಅದೃಷ್ಟ ಮತ್ತು ದುರಾದೃಷ್ಟ ಎನ್ನುವುದು ಗೊತ್ತಿದೆ. ಅದನ್ನು ಅವರು ನಿರೂಪಿಸಿದರು. ಅವರು ಅನೇಕವನ್ನು ತಮ್ಮ ಹಾಡಿನಲ್ಲಿ ಅನ್ವಯವನ್ನು ಮಾಡಿದರು. ಆ ಅನ್ವಯವು ಅವರ ಪ್ರಜ್ಞೆಯನ್ನು ಹೇಳುತ್ತವೆ. ಅನ್ವಯವು ಎರಡು ವಿಷಯಗಳ ನಡುವೆಯೇ ನಡೆಯುತ್ತದೆ. ಕಾರಂತರು ಚೋಮನನ್ನು ನೋಡಿದ್ದು ಮತ್ತು ಅವನ ಸ್ಥಿತಿಗತಿಯನ್ನು ಗಮನಿಸಿದ್ದು ಸುಳ್ಳು ಎಂದು ಹೇಳಲು ಬರುವುದೇ ಇಲ್ಲ. ಅದರಲ್ಲಿ ಅರ್ಥವಿದೆ. ಆದರೆ ಅದರಲ್ಲಿ ಕಾರಂತರ ದೃಷ್ಟಿಕೋನವೂ ಸೇರಿಕೊಂಡಿದೆ. ವಾಸ್ತವವಾಗಿ ವಿಶ್ಲೇಷಣೆ ಮತ್ತು ಅದರ ಹಿಂದೆ ಮನಸ್ಸಿನ ವಿವರಗಳು ಕಾರಂತರಿಗೆ ಬಹಳ ಮುಖ್ಯವಾಗುತ್ತದೆ. ಕಾರಂತರು ನೋಡಿದ ಚೋಮನಿಗೂ ಕಾದಂಬರಿಯಲ್ಲಿ ಬರುವ ಚೋಮನಿಗೂ ವ್ಯತ್ಯಾಸವಿದೆ. ಅಥವಾ ಇರಬಹುದು. ಚೋಮನೂ ಒಂದು ಮಾದರಿ. ಆಗ ನಡೆಯುತ್ತಿದ್ದ ಮತಾಂತರವನ್ನು ಒಪ್ಪವುದಿಲ್ಲವೆಂದರೆ ಅವನು ಅನ್ಯವನ್ನು ಸ್ವೀಕರಿಸುತ್ತಿಲ್ಲ. ಅವನಿಗೆ ಅಸ್ಪೃಶ್ಯತೆಯ ನೋವು ಇದೆ. ಭೂಮಿಯ ಸಮಸ್ಯೆಯೂ ಇದೆ. ಚೋಮನಿಗೆ ಚೋಮನೇ ಮಾದರಿಯಾಗಿದ್ದಾನೆ. ಕಾರಂತರು ಸಂಕಪ್ಪಯ್ಯ ಭೂಮಿಯನ್ನು ಕೊಡಲಿಲ್ಲವೆಂಬ ಸತ್ಯವನ್ನು ಹೇಳುತ್ತಿದ್ದಾರೆ. ಅವರ ಮಟ್ಟಿಗೆ ಅದು ಸಮಾಜದ ವಾಸ್ತವ. ಗ್ರಾಮಾಯಣದಲ್ಲಿ ದಾದನದೂ ಒಂದು ವಾಸ್ತವ. ಆದರೆ ಅದರ ಸಮಸ್ಯೆಯು ಭಿನ್ನ. ಕಾರಂತರೇ ಆಗಲಿ, ಮಿರ್ಜಿಯವರೇ ಆಗಲಿ ಇರುವ ವ್ಯವಸ್ಥೆಯು ಸರಿಯಿದೆ ಎಂದು ಹೇಳುತ್ತಿಲ್ಲ. ಒಂದು ಪ್ರಗತಿಪರತೆಯ ಅಗತ್ಯವನ್ನು ಹೇಳುತ್ತಿದ್ದಾರೆ. ಇದರ ಮತ್ತೊಂದು ರೂಪವನ್ನು ನಾವು ನೋಡಬೇಕು: ಸಂಕಪ್ಪಯ್ಯನು ತನಗೆ ಬೇಕಾದುದನ್ನು ಹೇಳುತ್ತಿದ್ದಾನೆ. ಅವನ ಪ್ರಜ್ಞೆಯು ಒಂದು ಬಗೆಯಲ್ಲಿ ಇದೆ. ಚೋಮನದು ಆಳಿಸಿಕೊಂಡವರ ಪ್ರಾತಿನಿಧಿಕವಾದ ಪ್ರಜ್ಞೆ. ಎರಡೂ ಮುಖಾಮುಖಿಯಾಗುತ್ತವೆ. ಚೋಮನನ್ನು ಆಳುವವರು ಒಬ್ಬರು ಮಾತ್ರವೇ ಅಲ್ಲ. ಸಂಕಪ್ಪಯ್ಯ, ಅವನ ತಾಯಿ, ಕಲ್ಕುಡ, ಕಲ್ಲುರ್ಟಿಯರೂ ಆಳುತ್ತಾರೆ. ಕಾಫಿತೋಟದವರೂ ಅವನನ್ನು; ಅವನ ಸಾಲವನ್ನು ಮರೆಯುವುದೂ ಇಲ್ಲ. ಕಾಸು ಕೊಡು ಇಲ್ಲವಾದರೆ ನಿನ್ನ ಮಕ್ಕಳನ್ನು ಕೂಲಿಗೆ ಕಳಿಸು ಎನ್ನುವುದು ಇಲ್ಲಿ ಮುಖ್ಯವಾದ ಪ್ರಶ್ನೆ. ಸಾಲವೂ ಹೇಗೆ ವ್ಯಕ್ತಿಯನ್ನು ನಿಯಂತ್ರಿಸುತ್ತದೆ ಎನ್ನುವುದನ್ನು ಕಾದಂಬರಿಯು ಹೇಳುತ್ತದೆ. ಆಗಿನ ಚರಿತ್ರೆಯನ್ನೂ ಹೇಳುತ್ತದೆ. ಮನ್ವೇಲನ ಕೇಡಿನ ಸ್ವಭಾವವೂ ಗಮನ ಸೆಳೆಯುವ ಅಂಶವಾಗಿದೆ. ಮತ್ತು ಇದರಲ್ಲಿ ಅಡಕವಾಗಿರುವ ನಿಲುವನ್ನು ನಾವು ನಮಗೆ ಬೇಕಾದಂತೆ ಹೇಳುವ ಅವಕಾಶವೂ ಇಲ್ಲ. ಅದರಂತೆ ಇಲ್ಲಿ ಬೇರೆ ಬೇರೆ ಸಮಾಜದ ರಚನೆಗಳು ಇವೆ. ಒಂದು ಕಡೆಯಿಂದ ಸಂಕಪ್ಪಯ್ಯ ಮತ್ತು ಅವನ ಕುಟುಂಬ. ಮತ್ತೊಂದು ಕಡೆಯಿಂದ ಚೋಮ. ಬೇರೆ ಕಡೆಯಿಂದ ಕಿರಿಸ್ತಾನರು. ಆ ಕಾಲದ ರಚನೆಗಳನ್ನು ಮತ್ತು ಆಂತರಿಕ ವೈರುಧ್ಯವನ್ನು ಹೇಳುತ್ತದೆ. ಇದು ಚಾರಿತ್ರಿಕವಾದ ಸತ್ಯವೂ ಹೌದು. ಆ ರಚನೆಗಳು ಮನುಷ್ಯ ಮತ್ತು ಅವನ ತಲ್ಲಣವನ್ನು ಹೇಳುತ್ತದೆ. ಅದರ ಸಂವೇದನೆಗಳು

ಭಿನ್ನವಾಗುತ್ತವೆ. ಕುತೂಹಲದಾಯಕವಾದ ಸಂಗತಿಯೆಂದರೆ ಈ ಸಮಾಜವೂ ಬದಲಾಗುತ್ತದೆ. ಜಾತಿ ಮತ್ತು ಅದರ ರಚನೆಗಳಲ್ಲಿ ಬೇರೆಯಾಗುತ್ತವೆ. ಮನುಷ್ಯರ ಕೆಲವು ಲಕ್ಷಣಗಳನ್ನು ಮಾತ್ರವೇ ಕಾರಂತರು ಹೇಳುತ್ತಾರೆ. ಅದರಲ್ಲಿ ಒಂದು ರಚನೆಯು ಮತ್ತೊಂದು ರಚನೆಯ ಜೊತೆಗೆ ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಯಾವುದು ಅಭಿವ್ಯಕ್ತಿಯಾಗುತ್ತದೆ ಮತ್ತು ಅದರ ಹಿಂದೆ ಏನು ಇದೆ ಎನ್ನುವುದು ಇಲ್ಲಿ ಮುಖ್ಯವಾದ ಪ್ರಶ್ನೆ. ಕಾರಂತರು ಯಾವುದನ್ನು ಹೇಳಿದ್ದಾರೆ ಮತ್ತು ಅವರು ಅಭಿವ್ಯಕ್ತಿ ಮಾಡಿದ ವಸ್ತುವು ಯಾವುದು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ. ಕಾರಂತರು ಯಾವುದನ್ನು ಹೆಚ್ಚು ಕೇಂದ್ರೀಕರಿಸುತ್ತಾರೆ. ಅವರ ಗಮನವು ಯಾವುದರ ಕುರಿತಾಗಿ ಇದೆ ಎನ್ನುವುದು ಇಲ್ಲಿ ಅಧ್ಯಯನ ಮಾಡಬೇಕಾದ ಅಗತ್ಯವೂ ಇದೆ. ಅದನ್ನು ಕಾರಂತರು ಆಯ್ಕೆಯನ್ನು ಮಾಡಿಕೊಂಡಿದ್ದಾರೆ ಮತ್ತು ಅದನ್ನು ನಮಗೆ ಕಾದಂಬರಿಯ ಮೂಲಕ ದಾಟಿಸಿದ್ದಾರೆ. ದಿನನಿತ್ಯವು ನಡೆಯುವ ಅನೇಕ ಸಂಗತಿಗಳು ಕಾರಂತರಿಗೆ ಮುಖ್ಯವಾಗಿದೆ. ವಾಸ್ತವವಾಗಿ ಸಾಹಿತ್ಯವೂ ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಸಾಹಿತ್ಯವು ಭಾಷೆಯ ಮೂಲಕ ವ್ಯಕ್ತವಾಗುತ್ತವೆ. ಸಂಗೀತದಲ್ಲಿಯೂ ಭಾಷೆಯು ಇರುತ್ತದೆ. ಮಾನವಿಕ ಅಧ್ಯಯನದಲ್ಲಿಯೂ ಭಾಷೆಯು ಅತ್ಯಂತ ಮಹತ್ವದ್ದು. ಆದರೆ ಲೆವಿಸ್ಟ್ರಾಸ್ ಸಂಗೀತದ ಭಾಷೆಯು ಯಾವುದೇ ಒಬ್ಬನ ಮಾತುಕತೆಯನ್ನು ಹೇಳುವುದಿಲ್ಲವೆಂದು ಅಭಿಪ್ರಾಯ ಪಡುತ್ತಾನೆ. ಸಂಗೀತದಲ್ಲಿಯೂ ಹಾಡುವನಿಗೆ ಅನುಸಾರವಾಗಿಯೇ ಬೇರೆಯಾಗುತ್ತದೆ. ದಿನನಿತ್ಯದ ಮಾತು ಅದರ ಸತ್ಯವು ಒಂದು ರೀತಿಯಲ್ಲಿ ಇರುತ್ತದೆ. ಸಾಹಿತ್ಯ ಮತ್ತು ಅದು ಸೂಚಿಸುವ ಚಿಹ್ನೆಗಳು ಒಂದು ಮಾದರಿಯಲ್ಲಿ ಇರುತ್ತವೆ. ಅದರ ಸಂಕೇತ ಮತ್ತು ಅದರ ಅರ್ಥಗಳು ಸಂಗೀತದಂತೆ ಅಲ್ಲವೆನ್ನುವುದು ಎಲ್ಲರಿಗೂ ತಿಳಿದಿದೆ. ಸಾಹಿತ್ಯದಲ್ಲಿ ಭಾಷೆ ಮತ್ತು ಅದರ ಸಂಕೇತಗಳು ಹಾಗೂ ಅದರ ಅರ್ಥಗಳು ಬೇರೆಯಾಗುತ್ತವೆ. ಹಾಗೆಂದು ಸಾಹಿತ್ಯ ಮತ್ತು ಅದರ ಭಾಷೆಯನ್ನು ನಾವು ಅನಿರ್ದಿಷ್ಟವೆಂದು ಹೇಳಲಾಗುವುದು ಇಲ್ಲ. ಕಾವ್ಯದ ಭಾಷೆಯು ಒಂದು ಅನಿರ್ದಿಷ್ಟ ಅರ್ಥದ ವಲಯವೆಂದು ಹೇಳಬೇಕಾಗಿಯೂ ಇಲ್ಲ. ಸಂಕೇತ ಮತ್ತು ಅದರ ಸ್ವರೂಪವನ್ನು ಈಗ ನಾವು ಈ ಅರ್ಥದಲ್ಲಿ ಬೇರೆ ಮಾಡಬೇಕಾಗಿಯೂ ಇಲ್ಲ. ಅದು ಸಂಕೇತವಾಗಿದೆ ಎಂದರೆ ಅದರಲ್ಲಿ ಅನಿರ್ದಿಷ್ಟವಾದ ಅಸ್ಪಷ್ಟವಾದ ಅರ್ಥವು ಇದೆ ಎಂದು ತಿಳಿಯಬೇಕಾಗಿಯೂ ಇಲ್ಲ. ಈ ಕಾರಣದಿಂದ ಬಯಕೆ ಮತ್ತು ಭಾಷೆಗೆ ಸಂಬಂಧವಿದೆ. ಕೃತಿಯನ್ನು ನೋಡಿದರೆ ಕೃತಿಯ ಹಿಂದೆ ಕೆಲವು ಭಾವನೆಗಳು ಇವೆ ಎಂದು ಹೇಳಬೇಕಾಗುತ್ತದೆ. ಅದು ಬಯಕೆಯನ್ನು ಸೂಚಿಸುತ್ತಾ ಬಂದಿದೆ. ಬಯಕೆ ಮತ್ತು ಕೃತಿಗಳ ನಡುವೆ ಇರುವ ಸಂಬಂಧವನ್ನು ಈ ದೃಷ್ಟಿಯಿಂದ ಗಂಭೀರವಾಗಿಯೇ ನೋಡಬೇಕಾಗುತ್ತದೆ. ಸಾಹಿತ್ಯ ಮತ್ತು ಅದರ ಚಹರೆಗಳು ಬೇರೆಯಾಗುವುದು ಅದರ ಕಾರ್ಯದ ವಿಧಾನದಿಂದ. ಅದರ ಸ್ವರೂಪವು ಅದರ ಉದ್ದೇಶವನ್ನು ಹೇಳುತ್ತದೆ. ಅದರ ಉದ್ದೇಶವು ಯಾವ ರೀತಿಯಲ್ಲಿ ಇರುತ್ತದೆಯೋ ಅದರ ಅಗತ್ಯವನ್ನು ಅವಲಂಬಿಸಿಕೊಂಡು

ಅದರ ಅರ್ಥವನ್ನು ಯೋಚಿಸಬೇಕಾಗುತ್ತದೆ. ಅರ್ಥವನ್ನು ನಾವು ಹೇಳಲು ಹೊರಟಾಗ ಅದು ಅರ್ಥದ ಹಿಂಸೆಯು ಮಾತ್ರವೇ ಆಗುತ್ತದೆ. ಅದರ ಸಾರ್ವಜನಿಕವಾದ ಅಸ್ತಿತ್ವವು ಮಾತ್ರವೇ ಅಗ ಮುಖ್ಯವಾಗುತ್ತದೆ. ಅಂದರೆ ಅದರಲ್ಲಿ ವಿವಿಧತೆಯು ಹೋಗಿ ಅದರ ಒಂದು ಅರ್ಥವನ್ನು ನಮ್ಮ ಓದಿಗೆ ಮತ್ತು ಜ್ಞಾನಕ್ಕೆ ಸರಿಯಾಗಿ ಹೇಳುತ್ತೇವೆ. ಅನೇಕ ಸಂದರ್ಭದಲ್ಲಿ ಈ ಸಹಯೋಗವನ್ನು ಮರೆಯುತ್ತೇವೆ. ಮತ್ತು ಅದರ ಅರ್ಥವನ್ನು ಮಾತ್ರವೇ ಕೇಂದ್ರಮಾಡಿಕೊಂಡು ನೋಡುತ್ತೇವೆ. ಆದರೆ ಭಾಷೆಯು ಹೇಳುಗನನ್ನು ಹೊರತುಪಡಿಸಿಕೊಂಡು ಇರುವುದೂ ಇಲ್ಲ. ಹೇಳುವವನು ಯಾರು ಮತ್ತು ಹೇಳುಗನು ಯಾವ ರೀತಿಯಲ್ಲಿ ಇರುತ್ತಾನೆ ಎನ್ನುವುದು ಬಹಳ ದೊಡ್ಡ ಪ್ರಶ್ನೆ. ರೊಮಾಂಟಿಕ್‌ಯುಗವು ವಾಸ್ತವವಾಗಿ ಸುಂದರ ಆತ್ಮವನ್ನು ಹೇಳಿಕೊಂಡಿತ್ತು. ಸುಂದರವಾದದು ಯಾವುದು ಇದೆಯೋ ಅದರ ಸ್ವಭಾವವನ್ನು ಮಾತ್ರವೇ ಹೇಳಿದರೆ ಸಾಕು ಎಂದೇ ಭಾವಿಸಿಕೊಂಡಿತ್ತು. ಆದರ ಆಶಯವು ಹಾಗೆ ಇದ್ದುದರಿಂದ ಅದರ ಅರ್ಥವನ್ನು ಮಾತ್ರವೇ ನೋಡಿದರೆ ಸಾಕಾಗುವುದೂ ಇಲ್ಲ. ಅದರ ಅರ್ಥವು ಅದರ ಅಭಿವ್ಯಕ್ತಿಯಲ್ಲಿ ಮಾತ್ರವೇ ಇರುವುದು ಇಲ್ಲ. ಅಂದರೆ ರೊಮಾಂಟಿಕರು ಹೇಳಿದ್ದರಲ್ಲಿ ಮಾತ್ರವೇ ಅರ್ಥವು ಇಲ್ಲ. ಅದು ಹೇಳಿದ್ದರ ಹಿಂದೆ ಅಮೂರ್ತವಾದದ್ದು ಅನೇಕವು ಇದೆ. ಅದು ತನ್ನ ಸದ್ಯತನವನ್ನು ಹೇಳಿತು. ತಕ್ಷಣವೇ ಯಾವುದು ಮುಖ್ಯವೆಂದು ಅದಕ್ಕೆ ಅನಿಸಿತೋ ಅದನ್ನು ಮಾತ್ರವೇ ಪ್ರತಿಪಾದಿಸಿತು. ರೊಮಾಂಟಿಕರ ನಿಲುವನ್ನು ಅನಂತರ ಬಂದ ನವ್ಯರು ತಿರಸ್ಕರಿಸಿದರು. ಹೀಗೆ ತಿರಸ್ಕರಿಸುವಾಗ ಅವರ ದೃಷ್ಟಿಕೋನವು ಬೇರೆಯಿತ್ತು. ಅವರು ಅನುಭವವನ್ನು ಹೆಚ್ಚು ಪ್ರಧಾನವೆಂದು ಪರಿಗಣಿಸಿದರು. ವಾಸ್ತವವಾಗಿ ನವ್ಯರು ಸುಂದರ ಮತ್ತು ಕುರೂಪವನ್ನು ಹೇಳಿದ ಕ್ರಮಗಳು ಬೇರೆಯಾಗಿದೆ. ನವ್ಯರು ಸುಂದರ ಮತ್ತು ಅಸಹ್ಯ ಎನ್ನುವುದನ್ನು ನೋಡಿದ ರೀತಿಯೇ ಬೇರೆಯಿದೆ. ವಾಸ್ತವವಾಗಿ ಇದನ್ನು ನಾವು ನೋಡುವ ಕ್ರಮಗಳಲ್ಲಿ ಬೇರೆ ದೃಷ್ಟಿಕೋನದ ಅವಶ್ಯಕತೆಯು ಇದೆ ಎಂದು ನವ್ಯರು ಹೇಳಿದರು. ನವ್ಯ ಮತ್ತು ನವೋದಯದ ಒಳನೋಟಗಳನ್ನು ನಾವು ಈ ದೃಷ್ಟಿಯಿಂದ ಬೇರೆ ಮಾಡಿಕೊಂಡು ನೋಡಬೇಕಾಗುತ್ತದೆ. ನವೋದಯ ಮತ್ತು ಅದರ ಧೋರಣೆಗಳು ಒಂದು ರೀತಿಯಲ್ಲಿವೆ. ನವ್ಯಕ್ಕೆ ಬಂದಾಗ ಅದರ ಧೋರಣೆಯು ಬದಲಾಯಿತು. ಅಥೆಂಟಿಕ್ ಎನ್ನುವುದನ್ನು ಅದು ಹೇಳಿದ ಕ್ರಮಗಳಲ್ಲಿ ಭಿನ್ನತೆಯೂ ಇದೆ. ಸಾಹಿತ್ಯದಲ್ಲಿ ನೋಡಬೇಕಾದ್ದು ಅದರ ಪ್ರಸ್ತುತತೆಯ ಪ್ರಶ್ನೆ. ರೊಮಾಂಟಿಕರಲ್ಲಿ ವಿಶ್ವದ ಪ್ರಶ್ನೆಯೂ ಇದೆ. ಅದರ ತಾತ್ವಿಕತೆಯೇ ಬೇರೆ ಮಾದರಿಯದು. ಜ್ಞಾನವನ್ನು ಒಂದು ತತ್ವಜ್ಞಾನವಾಗಿಯೂ ನೋಡುತ್ತದೆ. ಕುವೆಂಪು ಮಾಡಿದ್ದು ಇದನ್ನು. ಕುವೆಂಪುಗೆ ಸಾಹಿತ್ಯ ಮತ್ತು ಅದರ ಅನುಸಂಧಾನದ ಪ್ರಶ್ನೆಯು ಬೇರೆಯಾಯಿತು. ತತ್ವಜ್ಞಾನವೂ ಒಂದು ಬಗೆಯಲ್ಲಿ ಒಂದು ವಿಶ್ವಾತ್ಮಕತೆಯ ಕಡೆಗಿನ ಪಯಣ. ಅವರ ಕೃತಿಯಲ್ಲಿ ಮಾತ್ರವೇ ಇದು ಇದೆ ಎಂದು ಭಾವಿಸಬೇಕಾಗಿಯೂ ಇಲ್ಲ. ಕುವೆಂಪು ರಾಮಕೃಷ್ಣರನ್ನು ಒಪ್ಪಿ ಅಂಗೀಕರಿಸಿದವರು. ಹೀಗೆ ಮಾಡಿದ್ದರಿಂದ ಅವರಿಗೆ ದೇವಸ್ಥಾನವು ಮುಖ್ಯವೆಂದು

ಅನಿಸಿಲ್ಲ. ರಾಮಕೃಷ್ಣ ಮತ್ತು ವಿವೇಕಾನಂದರ ಆಯ್ಕೆಯು ಜಾತಿ ಆಗಿರಲಿಲ್ಲ. ದೇವಸ್ಥಾನ ಮತ್ತು ಮಧ್ಯವರ್ತಿ ಪೂಜಾರಿಗಳನ್ನು ಕುವೆಂಪು ಒಪ್ಪಿರಲಿಲ್ಲ. ಅದು ಅವರ ತಾತ್ವಿಕ ಆಯ್ಕೆಯೂ ಹೌದು. ಅದನ್ನು ಕುವೆಂಪುರವರ ನಿರ್ದಿಷ್ಟವಾದ ಒಂದು ನಿಲುವು ಎಂದೇ ಅಂಗೀಕರಿಸಬೇಕಾಗುತ್ತದೆ. ಕಾಳಿಯ ಭಕ್ತರಾದ ಪರಮಹಂಸರಿಗೆ ಉಳಿದದ್ದು ಮುಖ್ಯವಾಗಲಿಲ್ಲ. ಅವರಲ್ಲಿ ಅದು ನಂಬಿಕೆಯ ಪ್ರಶ್ನೆ. ಈ ಅರ್ಥದಲ್ಲಿ ಕುವೆಂಪು ಗ್ರಹಿಕೆಯು ಕನ್ನಡದ ಮಟ್ಟಿಗೆ ವಿಶಿಷ್ಟವಾಗಿತ್ತು ಬೇಂದ್ರೆಗೆ ಅರವಿಂದರು ಮುಖ್ಯರಾದರು. ಕನ್ನಡದಲ್ಲಿ ಆಗ ಒಂದು ಸನ್ನಿವೇಶವು ನಿರ್ಮಾಣವಾಗಿತ್ತು. ಆದರೆ ಆಗಿನ ಎಲ್ಲಾ ಸನ್ನಿವೇಶವನ್ನು ಕನ್ನಡದ ಕವಿಗಳು ಪ್ರತಿಪಾದಿಸಿದರು ಎಂದು ಅರ್ಥವಲ್ಲ. ಒಟ್ಟಾರೆಯಾದ ಒಂದು ದೃಷ್ಟಿಕೋನವು ಕನ್ನಡಕ್ಕೆ ಇತ್ತು. ಅನೇಕ ವಿಷಯಗಳು ಅವರ ಬರಹದಲ್ಲಿ ಪ್ರತಿಫಲಿಸಿತು ಎಂದು ಹೇಳಲು ಬರುವುದು ಇಲ್ಲ. ಅದರಲ್ಲಿ ಭಿನ್ನತೆಗಳು ಇವೆ. ಕೆಲವು ಅಂಶಗಳು ಪ್ರತಿಫಲಿಸಿದವು. ಮತ್ತೆ ಕೆಲವು ಪ್ರತಿಫಲಿಸಲೂ ಇಲ್ಲ. ಮಿರ್ಜಿಯವರ ನಿಸರ್ಗವನ್ನು ನೋಡಿದರೆ ಮತ್ತೆ ಕೆಲವು ಅಂಶಗಳು ನಮಗೆ ಕಂಡು ಬರುತ್ತವೆ. ನಿಸರ್ಗ ಕಾದಂಬರಿಯು ಒಂದು ಅಥೆಂಟಿಕ್ ಎನ್ನಬಹುದಾದ ಕೃತಿ. ಇದರಲ್ಲಿ ಸೂಚಿತವಾದ ಸಮಾಜವನ್ನು ನೋಡಿದರೆ ಅನೇಕ ಸಂಗತಿಗಳು ನಮ್ಮ ಗಮನಕ್ಕೆ ಬರುತ್ತವೆ. ಅದರಲ್ಲಿ ಭಾಷೆಯೇ ಹೆಚ್ಚು ಮುಖ್ಯವಲ್ಲ. ಸತ್ಯವೇ ಅದರ ಮಾನದಂಡವಾಗಿದೆ. ಕಥನವೇ ಮುಖ್ಯವಾದ ಸಂಗತಿಯೂ ಹೌದು. 'ನಿಸರ್ಗ'ದಲ್ಲಿ ಕಥನ ಮತ್ತು ವಾಸ್ತವವನ್ನು ಬೇರೆ ಮಾಡಿದಷ್ಟು ಒಂದಾಗಿದೆ. 'ಹಳ್ಳ ಬಂತು ಹಳ್ಳ' ಕಾದಂಬರಿಗೂ ಇದು ಅನ್ವಯವಾಗುತ್ತದೆ. ಈ ಕಾದಂಬರಿಗಳಲ್ಲಿ ಯಾವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಲಾಗಿದೆ ಎಂದು ನೋಡಿದರೂ ಈ ಮಾತು ಅರ್ಥವಾಗುತ್ತದೆ. ಮಿರ್ಜಿಯವರು ತಮ್ಮ ಪ್ರಜ್ಞೆಗೆ ಯಾವುದು ದಕ್ಕಿದೆಯೋ ಅದನ್ನು ಮಾತ್ರವೇ ಹೇಳಿದ್ದಾರೆ. ಆದ್ದರಿಂದ 'ನಿಸರ್ಗ'ದಲ್ಲಿ ಪ್ರಜ್ಞೆಯನ್ನು ಹೊರತುಪಡಿಸಿದ ಸಂಗತಿಯು ಇಲ್ಲವಾಗಿದೆ. ಯಾವುದನ್ನು ಹೆಚ್ಚು ಕೇಂದ್ರಿಕರಣ ಮಾಡಬೇಕು ಎನ್ನುವುದು ಆಯಾ ಲೇಖಕರಿಗೆ ಬಿಟ್ಟ ವಿಷಯವೂ ಆಗಿದೆ. ಸಾಹಿತ್ಯದ ಭಾಷೆ ಮತ್ತು ಅದರ ಪ್ರಾಥಮಿಕ ಸಂಗತಿಗಳು ಮಾತ್ರವೇ ಈ ಕಾದಂಬರಿಗಳಲ್ಲಿ ಮುಖ್ಯವಾಗುತ್ತದೆ. ಈ ಕಾದಂಬರಿಗಳು ನಮಗೆ ಒಂದು ಅಚಾರಿತ್ರಿಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಬೇಕಾದ ಆವರಣವನ್ನು ಮಾತ್ರವೇ ಸೃಷ್ಟಿ ಮಾಡುತ್ತವೆ. ಆದ್ದರಿಂದ ಈ ಕಾದಂಬರಿಗಳಲ್ಲಿ ಶುದ್ಧ ಭಾಷೆಯೆ ಮುಖ್ಯವಾದ ಪ್ರಶ್ನೆಯು ಅಲ್ಲ. ನಮ್ಮ ನವ್ಯರು ತಳೆದ ನಿಲುವಿಗೂ ಅಮೇರಿಕ ಹಾಗೂ ಯರೋಪಿನ ನವ್ಯರು ಬಳಸಿಕೊಂಡ ಪರಿಕರಕ್ಕೂ ಅಗಾಧ ವ್ಯತ್ಯಾಸವಿದೆ. ಹಾಗೆ ನೋಡುವುದಿದ್ದರೆ ಯಾವುದೇ ಸಾಹಿತ್ಯವು ತನ್ನ ಅನನ್ಯತೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುತ್ತದೆ. ಸಾಹಿತ್ಯ ಮತ್ತು ಅದರ ಹಿಂದೆ ಇರುವ ನಿಜವಾದ ಸಂಗತಿಯು ಯಾವ ಬಗೆಯದು ಎನ್ನುವುದು ಮುಖ್ಯವಾಗುತ್ತದೆ. ಚರಿತ್ರೆಯ ಜ್ಞಾನ ಮತ್ತು ಅದರ ಹಿಂದೆ ಇರುವ ನಿಜವಾದ ಶಕ್ತಿಯ ಅರಿವು ನಮಗೆ ಗಂಭೀರವಾದ ಸಂವೇದನೆಗೆ ಕಾರಣವಾಗುತ್ತದೆ. ಆದರೆ ಯಾವಾಗ

ನಾವು ನಮ್ಮ ಚರಿತ್ರೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲವೋ ಆಗ ಅದರ ಅರ್ಥವು ಬೇರೆಯಾಗುತ್ತದೆ. ಅಂದರೆ ಅದರಲ್ಲಿ ಅಚಾರಿತ್ರಿಕ ವಿಧಾನವು ಕಾಣಿಸಿಕೊಳ್ಳುತ್ತದೆ. ಈಗ ನಾವು ನಮ್ಮ ಅಧ್ಯಯನದ ಕ್ರಮದಲ್ಲಿ ಹೆಚ್ಚಿನ ವಿಶಿಷ್ಟತೆಯನ್ನು ಮತ್ತು ವಿಶೇಷ ತಜ್ಞತೆಯನ್ನು ಹೇಳುತ್ತಾ ಬರುತ್ತಿದ್ದಿದ್ದೇವೆ. ಅದರಿಂದ ನಮಗೆ ಕೆಲವು ಜ್ಞಾನ ಮತ್ತು ಅದರ ವಿಶಿಷ್ಟತೆಯು ಮಾತ್ರವೇ ಮುಖ್ಯವಾಗುತ್ತದೆ. ಜ್ಞಾನವನ್ನು ವರ್ಗೀಕರಿಸಿಕೊಂಡು ನೋಡುತ್ತಾ ಬಂದಿರುವುದರಿಂದ ನಮಗೆ ಬಹುಜ್ಞಾನ ಪರಂಪರೆಯು ಅಳಿದು ಹೋಗುತ್ತಿದೆ. ವಿಶೇಷ ತಜ್ಞತೆಯೇ ನಮಗೆ ಬೇಲಿಯಾಗಿದೆ. ಬುದ್ಧಿ ಎನ್ನುವುದೇ ಸ್ವಾಯತ್ತವಾದ ಒಂದು ಚಟುವಟಿಕೆಯೂ ಆಗಿದೆ ಎಂದು ಭಾವಿಸಿಕೊಳ್ಳುತ್ತಿದ್ದೇವೆ. ಆದರೆ ಇದರ ಮೂಲಕ ಕೆಲವನ್ನು ಜ್ಞಾನವಾಗಿ ವರ್ಗೀಕರಿಸಿಕೊಂಡಿದ್ದೇವೆ. ಸಾಹಿತ್ಯವನ್ನು ಪ್ರತ್ಯೇಕವಾಗಿ ನೋಡುವುದು ಈಗ ಅನೇಕರಿಗೆ ಅತ್ಯಂತ ಮುಖ್ಯವಾಗಿದೆ. ಸಾಹಿತ್ಯದ ಉದ್ದೇಶ ಯಾವುದು ಮತ್ತು ಮತ್ತು ಅದು ಏನು ಮಾಡುತ್ತದೆ ಎನ್ನುವುದರ ಬದಲು ಅದರ ಉದ್ದೇಶವನ್ನು ವ್ಯವಸ್ಥಿತವಾಗಿ ನಿರಾಕರಿಸುವ ಯತ್ನವನ್ನು ಅನೇಕರು ಮಾಡುತ್ತಾರೆ. ಸಾಹಿತ್ಯವು ಅತ್ಯಂತ ಹೆಚ್ಚಿನ ಮಟ್ಟದ ಸ್ವಾತಂತ್ರ್ಯವನ್ನು ಹೊಂದಬೇಕು ಮತ್ತು ಸಾಹಿತಿಗೆ ಯಾರ ಹಂಗೂ ಇಲ್ಲವೆಂದು ಅನೇಕರು ಹೇಳುತ್ತಾರೆ. ಆದರೆ ನಿಜವಾದ ಸ್ವಾಯತ್ತತೆಯು ಇದೆಯೇ ಎನ್ನುವ ಪ್ರಶ್ನೆಗೆ ಅನೇಕರು ಉತ್ತರವನ್ನು ಕೊಡಲು ಹೋಗುವುದೂ ಇಲ್ಲ. ಸಾಹಿತ್ಯ ಮತ್ತು ಅದರ ಕಾರ್ಯಗಳನ್ನು ಕೆಲವರು ಬರೀ ಸೀಮಿತವಾದ ಉದ್ದೇಶಕ್ಕಾಗಿ ಮಾತ್ರವೇ ಬಳಸುತ್ತಾರೆ. ಆದ್ದರಿಂದ ಅದರ ಉಳಿದ ಅಂದರೆ ಅದರ ಚಾರಿತ್ರಿಕ ಸನ್ನಿವೇಶ, ಅದರ ತಾತ್ವಿಕತೆ ಮತ್ತು ಅದರ ಕಾರಣಗಳ ವಿಷಯಗಳು ಗೌಣವಾಗುತ್ತವೆ. ನಮಗೆ ಗೊತ್ತಿರಬೇಕಾದ ಮತ್ತೊಂದು ಅಂಶವೆಂದರೆ ಅಮೇರಿಕಾದ ರೂಪನಿಷ್ಟರು ಸಾಹಿತ್ಯ ಮತ್ತು ಅದರ ಸ್ವಾಯತ್ತತೆಯನ್ನು ಹೇಗೆ ನೋಡಿದರು ಎಂದು ಮಾತ್ರವೇ. ಭಾಷೆಯನ್ನು ರೂಪಿಸುವ ಪ್ರಜ್ಞೆಯು ಅವರಿಗೆ ಹೆಚ್ಚು ಮುಖ್ಯವಾಗಲಿಲ್ಲ. ಸಾಹಿತ್ಯದ ಭಾಷೆಯನ್ನು ನಾವು ಪ್ರಜ್ಞಾಪೂರ್ವಕವಾಗಿಯೇ ರೂಪಿಸುತ್ತೇವೆ. ಈ ದೃಷ್ಟಿಯಿಂದ ಸಾಹಿತ್ಯ ಮತ್ತು ಅದರ ಭಾಷೆಯನ್ನು ರೂಪನಿಷ್ಟರು ನೋಡುವ ರೀತಿಯಲ್ಲಿ ನೋಡಲು ಸಾಧ್ಯವಿಲ್ಲ. ಸಾಹಿತ್ಯದ ರೂಪಕ್ಕೂ ಒಂದು ಉದ್ದೇಶವಿದೆ. ಅದನ್ನು ರೂಪನಿಷ್ಟರ ರೀತಿಯಲ್ಲಿ ನೋಡುವುದರ ಅಗತ್ಯವಿಲ್ಲ. ಅದರ ಬದಲು ಅದನ್ನು ಲೇಖಕನು ಆ ರೀತಿಯಲ್ಲಿ ನೋಡಿದ್ದಾನೆ ಎಂದು ಹೇಳಬೇಕಾಗುತ್ತದೆ. ನಾವು ಯಾವುದನ್ನು ಹೇಳುತ್ತೇವೆಯೋ ಅದಕ್ಕೂ ನಿರ್ದಿಷ್ಟವಾದ ಒಂದು ಮೌಲ್ಯವು ಇದೆ. ಅದನ್ನು ನಾವು ಹೊರತು ಮಾಡಿಕೊಂಡು ನೋಡಲು ಸಾಧ್ಯವಿಲ್ಲ. ಹೇಳುವ ಕ್ರಮಕ್ಕೂ ಅದರ ಮೌಲ್ಯಕ್ಕೂ ಇರುವ ಸಂಬಂಧವನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಬರಹಗಾರನಿಗೂ ಅದರ ಗುಣಗಳಿಗೂ ಸಂಬಂಧವಿದೆ. ಅದನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದು ಕೂಡಾ ಅತ್ಯಂತ ಅಗತ್ಯವಾಗಿದೆ. ಶೈಲಿಗೂ ಲೇಖಕನ ಮನೋಸ್ಥಿತಿಗೂ ಒಂದು ಸಂಬಂಧವಿದೆ. ಕೆಲವು ಸಂಗತಿಗಳಿವೆ. ಅದನ್ನು ನಾವು ಗ್ರಹಿಸುತ್ತೇವೆ. ಅದು ಸಂವೇದನೆಯ

ಭಾಗ. ಮಾತು, ಬರಹ, ಧ್ವನಿ, ಕಲ್ಪನೆಗಳು ಸಂವೇದನೆಯ ಭಾಗವೂ ಆಗಿದೆ. ಮಾತು ಮತ್ತು ಬರಹವೂ ಕೂಡಾ ನಮ್ಮ ಭಾಗವೇ ಆಗಿದೆ. ನಾವು ಯಾವ ಸಂದರ್ಭದಲ್ಲಿ ನಿಂತು ಮಾತಾಡುತ್ತೇವೆ ಎನ್ನುವುದು ಬಹಳ ಮುಖ್ಯ. ನಾವು ಬರೆಯುವಾಗ ಕೆಲವನ್ನು ಆಯ್ಕೆ ಮಾಡುತ್ತೇವೆ. ಮತ್ತು ನಮಗೆ ಬೇಕಾದಂತೆ ಅದನ್ನು ಪರಿವರ್ತನೆ ಮಾಡುತ್ತೇವೆ. ಈ ಪರಿವರ್ತನೆಗಳಿಗೆ ಒಂದು ಉದ್ದೇಶವೂ ಇದೆ. ಆಯ್ಕೆ ಮತ್ತು ಅದರ ಪರಿವರ್ತನೆಯನ್ನು ನಾವು ಬೇಕಾಬಿಟ್ಟಿಯಾದ ಸಂಗತಿಯೆಂದು ಭಾವಿಸಬೇಕಾದ ಅಗತ್ಯವಿಲ್ಲ. ಕಾರಂತರು ಬರೆದ ಕುಡಿಯರ ಕೂಸು ಕಾದಂಬರಿಗೂ ಅವರ ಆಲೋಚನೆಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಬೇಕಾಗಿಲ್ಲ. ಅದನ್ನು ಅವರು ಉದ್ದೇಶಪೂರ್ವಕವಾಗಿ ಬರೆದಿದ್ದಾರೆ. ನವ್ಯ ವಿಮರ್ಶೆಯು ಭಾವನೆ ಮತ್ತು ಅದರ ಹಾಜರಾತಿಯನ್ನು ನಿರಾಕರಿಸುತ್ತದೆ. ಅದು ಯಾವುದು ಪಠ್ಯದಲ್ಲಿ ಹಾಜರಾಗಿದೆಯೋ ಅದನ್ನು ಮಾತ್ರವೇ ನೋಡುತ್ತದೆ. ಕೃತಿ ಮತ್ತು ಅದರ ಸಾರಂಶವು ಮಾತ್ರವೇ ಅದಕ್ಕೆ ಮುಖ್ಯವಾಗಿದೆ. ಅದು ಭಾಷೆಯನ್ನು ಒಂದು ಮಾನದಂಡವೆಂದು ಹೇಳುತ್ತದೆ. ಹೀಗೆ ಮಾಡುವಾಗ ಅದು ಅದನ್ನು ಉದ್ದೇಶಪೂರ್ವಕವಾಗಿ ನೋಡುತ್ತದೆ. ಆದ್ದರಿಂದಲೇ ನಿರಚನವಾದಿಗಳು ಕೃತಿಯನ್ನು ಭಾಷೆಯಿಂದ ಮುಕ್ತ ಮಾಡಿ ಎಂದು ಹೇಳಿದರು. ಭಾಷೆಯನ್ನು ವಾಸ್ತವವಾಗಿ ಲೇಖಕನು ಒಂದು ವಾಹಕವಾಗಿ ನೋಡುತ್ತಾನೆ. ಅವನು ಅದರ ಮೂಲಕ ತನ್ನ ಅಭಿಪ್ರಾಯವನ್ನು ರವಾನೆ ಮಾಡುತ್ತಾನೆ. ಅಭಿವ್ಯಕ್ತಿಯನ್ನು ಅವನು ವಿಸ್ತರಿಸುತ್ತಾನೆ. ಕಾವ್ಯವೆನ್ನುವುದೂ ಒಂದು ಅಭಿವ್ಯಕ್ತಿ ಮಾತ್ರವೇ ಆಗಿದೆ. ಕಾವ್ಯಾತ್ಮಕ ಪ್ರಜ್ಞೆ ಮತ್ತು ಮಾತಿನ ಜೋಡಣೆಗೆ ಒಂದು ಸಂಬಂಧವೂ ಇದೆ. ಪಠ್ಯವನ್ನು ಈ ದೃಷ್ಟಿಯಲ್ಲಿ ನಾವು ನೋಡಬೇಕಾದ ಕ್ರಮವು ಬೇರೆಯಾಗುತ್ತದೆ. ಯಾವುದನ್ನು ನಾವು ಹೇಳಬೇಕೆಂದು ಕೊಂಡಿದ್ದೇವೆಯೋ ಅದರ ರೂಪಕ್ಕೂ ಅದರ ಶೈಲಿಗೂ ಮತ್ತು ಅದರ ಆಶಯಕ್ಕೂ ಒಂದು ಸಂಬಂಧವಿದೆ. ವಾಸ್ತವವಾಗಿ ಯಾವುದನ್ನು ನಾವು ಈಗ ಹೇಳಬೇಕು ಎನ್ನುವುದೂ ಗೊತ್ತಿರಬೇಕಾದ ಅಗತ್ಯವಿದೆ. ಅಂದರೆ ನಮ್ಮ ಮಾತು ಮತ್ತು ನಮ್ಮ ಬರಹವು ಕೊಂಚ ವ್ಯತ್ಯಾಸವಾದರೂ ಅದು ಅರಾಜಕತೆಯನ್ನು ಸೃಷ್ಟಿಸುವ ಅಪಾಯವೂ ಇದೆ. ಅಷ್ಟೇ ಅಲ್ಲ ಅದರ ಮೂಲಕವೇ ನಾವು ಮತ್ತೊಂದು ಪಂಥವನ್ನು ಬೆಳೆಸುವ ಅಪಾಯವೂ ಇರುತ್ತದೆ. ಉದ್ದೇಶವು ಭೌತಿಕ ಮತ್ತು ಮಾನಸಿಕವೂ ಆಗಿರುತ್ತದೆ. ಅಂದರೆ ಅದು ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ. ಮನಸ್ಸು ಮತ್ತು ಬರಹಕ್ಕೆ ಯಾವುದೇ ಸಂಬಂಧವೇ ಇಲ್ಲವೆಂದು ಹೇಳಬೇಕಾಗಿಲ್ಲ. ಮತ್ತು ಅದರ ಆಶಯವು ಒಂದು ರೀತಿಯಲ್ಲಿ ಇರಬೇಕಾಗುತ್ತದೆ. ಬದ್ಧತೆಯವರು ಮಾತಾಡುವುದಕ್ಕೂ; ಅರಾಜಕತಾವಾದಿಗಳು ಮಾತಾಡುವುದಕ್ಕೂ; ಬಲಪಂಥೀಯರು ಮಾತಾಡುವುದಕ್ಕೂ ಅನೇಕ ವ್ಯತ್ಯಾಸವಿದೆ. ಉದ್ದೇಶ ಮತ್ತು ಅದರ ಗುರಿಗಳು ಈ ದೃಷ್ಟಿಯಿಂದ ಬಹಳ ಮುಖ್ಯ. ಹಾಗೆ ನಮ್ಮ ಚಟುವಟಿಕೆ ಮತ್ತು ಅದರ ಅಗತ್ಯವನ್ನು ಈಗ ಬೇರೆ ರೀತಿಯಲ್ಲಿಯೂ ನೋಡಬೇಕು. ಯಾವುದೇ ಉದ್ದೇಶವಿಲ್ಲದೆ ಯಾರೂ ಕೆಲಸವನ್ನು ಮಾಡುವುದೂ ಇಲ್ಲ. ಕೆಲಸವನ್ನು

ಮಾಡುವುದು ಮತ್ತು ಅದರಿಂದ ಪರಿಣಾಮವನ್ನು ಊಹಿಸುವುದು ನಮಗೆ ಅತ್ಯಂತ ಅಗತ್ಯವಾದ ಸಂಗತಿಯೂ ಆಗಿದೆ. ನಾವು ನಮ್ಮ ಕೆಲಸವನ್ನು ಮಾಡುವುದು ಮತ್ತು ಅದರಿಂದ ಕೆಲವನ್ನು ಸಾಧಿಸುವುದು ಅತ್ಯಂತ ಅಗತ್ಯವಾದ ಪ್ರಕ್ರಿಯೆ ಕೂಡಾ ಆಗಿದೆ. ನಾನು ಬರೆಯುವುದರಿಂದ ಯಾರಿಗೆ ಉಪಯೋಗವೆಂದು ಕುವೆಂಪು ಕೇಳಿದ್ದರೆ ಅಥವಾ ಅನಂತಮೂರ್ತಿ ಭಾವಿಸಿದ್ದರೆ ಪರಿಣಾಮವೂ ಭಿನ್ನವಾಗುತ್ತಿತ್ತು. ಒಂದು ನಿರ್ವಾತವು ಸೃಷ್ಟಿಯಾಗುತ್ತಿತ್ತು. ಮತ್ತೆ ಒಂದು ಅಂಶವನ್ನು ನೋಡಬೇಕು: ನಾವು ಉದ್ದೇಶವನ್ನು ಯಾಕೆ ನಿರಾಕರಿಸಬೇಕು ಎನ್ನುವುದಕ್ಕೆ ನಿಜವಾಗಿಯೂ ಸರಿಯಾದ ಉತ್ತರವು ಇಲ್ಲವಾಗಿದೆ. ಒಂದು ಕೃತಿಯಲ್ಲಿ ಬರುವ ಕೆಲವು ಅನುಕ್ರಮತೆಯನ್ನು ನಾವು ನಿರಾಕರಿಸಬೇಕಾಗಿಯೂ ಇಲ್ಲ. ಲೇಖಕನು ಯಾವುದನ್ನು ಮೊದಲು ಹೇಳಬೇಕು ಮತ್ತು ಯಾವುದನ್ನು ಅಂತಿಮವಾಗಿ ತಿಳಿಸಬೇಕು ಎನ್ನುವುದನ್ನು ನಿರ್ಧರಿಸುತ್ತಾನೆ. ನವ್ಯವು ಈ ಸಂಗತಿಗಳನ್ನು ಗಮನಿಸಿಲ್ಲ. ಕೃತಿ ಮತ್ತು ಅದರ ಉದ್ದೇಶವು ಅದಕ್ಕೆ ಹೆಚ್ಚು ಮುಖ್ಯವಾಗಲಿಲ್ಲ. ಉದ್ದೇಶ ಮತ್ತು ಅದರ ರೂಪವನ್ನು ಅದು ಹೆಚ್ಚು ಅಧಿಕೃತವಗಿ ವಿವರಿಸಲು ಹೋಗುವುದೂ ಇಲ್ಲ. ಯಾವುದನ್ನು ಈಗ ಅತ್ಯಂತ ನಿಕಟವಾದ ಓದು ಎಂದು ಹೇಳುತ್ತೇವೆಯೋ ಅದರ ಸ್ವರೂಪವೂ ಮತ್ತೊಂದು ಬಿಕ್ಕಟ್ಟನ್ನು ರೂಪಿಸಿದೆ. ನಿಕಟ ಓದು ಎನ್ನುವುದು ಮೂಲಭೂತವಾಗಿ ಅನೇಕವನ್ನು ಪ್ರತ್ಯೇಕ ಮಾಡುತ್ತದೆ. ಅದಕ್ಕೆ ಕೃತಿ ಮತ್ತು ಅದರ ಆಶಯವು ಮುಖ್ಯವಾಗುವುದೂ ಇಲ್ಲ. ಅದು ಕೃತಿಯನ್ನು ಬರೀ ತುಂಡಾಗಿಯೂ ನೋಡುತ್ತದೆ. ರೂಪವನ್ನು ಅದು ಈ ಅರ್ಥದಲ್ಲಿ ನಿರಾಕರಿಸುತ್ತದೆ. ಅದರ ರೂಪಭೇದ ಗುಣವೇ ಅದಕ್ಕೆ ಮುಳುವಾಗಿದೆ. ನಿಕಟ ಓದು ಎನ್ನುವುದು ಬರೀ ಒಂದು ತಂತ್ರ ಮಾತ್ರವೇ ಆಗಿದೆ. ಸಾಲು ಮತ್ತು ಸಾಲುಗಳು ಮತ್ತು ಅದರರ್ಥ ವಿನ್ಯಾಸವು ಮಾತ್ರವೇ ಅದಕ್ಕೆ ಅತ್ಯಂತ ಮುಖ್ಯವಾಗುತ್ತದೆ. ಸಾಲುಗಳಲ್ಲಿ ಸಾಹಿತ್ಯವನ್ನು ಗ್ರಹಿಸುವುದು ಮಾತ್ರವೇ ಅದಕ್ಕೆ ಅತ್ಯಂತ ಗಂಭೀರವಾದ ಚಟುವಟಿಕೆಯ ಥರ ಕಾಣಿಸುತ್ತದೆ. ಕಾವ್ಯ ಮತ್ತು ಅದರ ವ್ಯಂಗ್ಯವನ್ನು ಅದು ಅಂಗೀಕರಿಸುವ ವಿಧಾನವೂ ಭಿನ್ನವಾಗುತ್ತದೆ. ಕಾವ್ಯವನ್ನೇ ಅದು ಒಂದು ಲೋಕವೆನ್ನುವಂತೆ ನೋಡುತ್ತದೆ. ಅದರ ಮೂಲಕ ಒಂದು ಹಿತಾಸಕ್ತಿಯನ್ನು ಸ್ಥಾಪಿಸುತ್ತದೆ. ಓದುವುದು ಮತ್ತು ಅದರಲ್ಲಿಯೇ ಮಗ್ನವಾಗುವುದು ಸರಿಯಾದ ಕ್ರಮವು ಅಲ್ಲ. ಓದುವುದು ಮತ್ತು ಅದರ ಅರ್ಥವನ್ನು ಗ್ರಹಿಸುವುದು ಮುಖ್ಯವಾಗಬಾರದು. ಅದರ ಬದಲಿಗೆ ಕೃತಿಯು ಯಾವುದನ್ನು ಹೇಳುತ್ತದೆ ಮತ್ತು ಹೇಗೆ ಹೇಳುತ್ತದೆ ಹಾಗೂ ಯಾವುದನ್ನು ಹೇಳುತ್ತದೆ ಎನ್ನುವುದೂ ಮುಖ್ಯವಾಗಬೇಕು. ಆದರೆ ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳನ್ನು ನವ್ಯವು ಎತ್ತುತ್ತದೆ. ಲೇಖಕನು ಯಾರೆ ಆಗಿರಲಿ ಅವನ ಕುರಿತಾಗಿ ಯಾವುದೇ ಆಸಕ್ತಿಯನ್ನು ನಾವು ತಳೆಯಬೇಕಾದ ಅಗತ್ಯವಿಲ್ಲ. ಆದರೆ ಕೃತಿಯನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಅದರ ಸಾಲುಗಳನ್ನು ಮಾತ್ರವೇ ನೋಡುವುದು ಎಂದು ನಿಕಟ ಓದು ಹೇಳುತ್ತದೆ. ಕಾವ್ಯದ ಸಾಲನ್ನು ಓದುವುದು ಮತ್ತು ಗ್ರಹಿಸುವುದು ಮಾತ್ರವೇ ಮುಖ್ಯವೆಂದು ಅದರ ಪ್ರತಿಪಾದನೆಯು ಆಗಿದೆ.

ಯಾವುದನ್ನು ಅನ್ವಯಿಸಬೇಕು ಎಂದೂ ಭಾವಿಸುತ್ತದೆ. ಅರ್ಥವಿಸಿಕೊಳ್ಳುವುದು ಮತ್ತು ಅದರ ಗ್ರಹಿಸುವುದು ಮಾತ್ರವೇ ಮುಖ್ಯವೆಂದು ಅದರ ನಿಲುವು. ಆದರೆ ಕಣ್ಣಿಗೆ ಕಾಣಿಸುವುದು ಮಾತ್ರವೇ ಸತ್ಯವೂ ಅಲ್ಲ. ಪಠ್ಯವನ್ನು ಓದಿಗೆ ಮುಕ್ತ ಮಾಡುವುದು ಅಂದರೆ ಅದನ್ನು ಬೇಕಾದ ರೀತಿಯಲ್ಲಿ ಓದುವುದು ಅಲ್ಲ. ಅದರ ನಿಯಮವು ಒಂದು ನೆಲೆಗೆ ಮಾತ್ರವೇ ಮುಖ್ಯವಾಗಬೇಕಾದ ಅಗತ್ಯವೂ ಇಲ್ಲ. ಸಾಹಿತ್ಯದ ಕೃತಿಗಳೆಂದರೆ ಅದು ರೋಗಿಯೆಂದು; ಓದುಗನು ಅದನ್ನು ಮರುಪರೀಕ್ಷೆ ಮಾಡಿದರೆ ಸಾಕು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಕೃತಿ ಮತ್ತು ಅದರ ಓದು ಅನೇಕ ರೀತಿಯ ಸಂಬಂಧವನ್ನು ನಿರೂಪಿಸುತ್ತದೆ. ವಾಸ್ತವವಾಗಿ ಅದರಲ್ಲಿ ಈಗಾಗಲೇ ಹೇಳಲಾಗಿರುವ ಅರ್ಥವು ಇಲ್ಲ. ಈಗಾಗಲೇ ವಿಧಿಸಿರುವ ಅರ್ಥವನ್ನು ಮಾತ್ರವೇ ನೋಡಬೇಕು ಎನ್ನುವುದು ಸರಿಯಾದ ನಿಲುವು ಅಲ್ಲ. ಕೃತಿಯ ಸತ್ಯವು ಕೃತಿಯ ಒಳಗೆ ಮಾತ್ರವೇ ಇಲ್ಲ. ಅದು ಅದರಾಚೆಗೂ ಇದೆ. ಮತ್ತು ಅದರ ಅರ್ಥವು ಸೀಮಿತವಾದ ಒಂದು ಚಟುವಟಿಕೆಯು ಮಾತ್ರವೇ ಅಲ್ಲವಾಗಿದೆ. ಅನೇಕ ಸರ್ತಿ ವೈಜ್ಞಾನಿಕ ಸತ್ಯವನ್ನು ನಾವು ಬೇರೆ ಬೇರೆ ರೀತಿಯಲ್ಲಿ ಶೋಧಿಸಬೇಕಾಗುತ್ತದೆ. ಅದಕ್ಕೆ ಕೆಲವು ರೀತಿಯಲ್ಲಿ ನಿರ್ಣಯವನ್ನು ನೀಡಬೇಕಾಗುತ್ತದೆ. ಅದನ್ನು ಬೇರೆ ಬೇರೆ ರೀತಿಯಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ. ಯಾವುದೇ ಕವಿತೆಯನ್ನು ಓದುವಾಗ ನಮಗೆ ಕೆಲವು ರೀತಿಯ ಪೂರ್ವಜ್ಞಾನವು ಇರಬೇಕಾಗುತ್ತದೆ. ಅಷ್ಟೇ ಅಲ್ಲ ರಚನೆಯು ಆಗಿರುತ್ತದೆ. ಮತ್ತು ಅದಕ್ಕಿಂತ ಪೂರ್ವದಲ್ಲಿಯೂ ಬೇರೆ ಬೇರೆ ಮಾದರಿಯ ರಚನೆಗಳು ಇರುತ್ತವೆ. ಮತ್ತು ಕೃತಿಯೇ ಜ್ಞಾನವೆಂದು ಹೇಳಬೇಕಾದ ಅಗತ್ಯವೂ ಇಲ್ಲ. ಆನ್ವಯಿಕತೆಯು ಯಾವುದನ್ನು ಹಿಡಿದಿಡುತ್ತದೆ ಎನ್ನುವುದು ಮಾತ್ರವೇ ಮುಖ್ಯವಲ್ಲ. ಕೃತಿಯನ್ನು ನೋಡಲು ನಾವು ನಮಗೆ ಇರುವ ಜ್ಞಾನವನ್ನು ಅವಲಂಬಿಸುತ್ತದೆ. ಸಾಮಾನ್ಯವಾದ ನಮ್ಮ ಜ್ಞಾನವು ಕೃತಿಯನ್ನು ಓದಲು ಸಹಾಯವನ್ನು ಮಾಡುತ್ತದೆ. ಸಾಮಾನ್ಯವಾದ ನಮ್ಮ ಭಾಷೆಯು ಒಂದು ರೂಪವನ್ನು ನಮಗೆ ಕಟ್ಟಿಕೊಡುತ್ತದೆ. ಒಂದು ರೂಪವಾಗಿ ಅದು ಪರಿವರ್ತನೆಯಾಗುತ್ತದೆ. ಕೃತಿಕಾರ ಮತ್ತು ವಿಮರ್ಶಕರ ನಡುವೆ ಒಂದು ಸಂಬಂಧವು ಇರುತ್ತದೆ. ಅದನ್ನು ನಾವು ದ್ವಂದ್ವಾತ್ಮಕವಾಗಿ ನೋಡಬೇಕಾಗುತ್ತದೆ. ಕೃತಿಯನ್ನು ವಿಮರ್ಶೆ ಮಾಡುವುದೂ ಕೂಡಾ ಒಂದು ಕ್ರಿಯೆ. ಕೃತಿಯನ್ನು ಓದುವುದು ಮತ್ತು ಅದರ ಕುರಿತಾದ ಒಂದು ಅನ್ವಯವನ್ನು ಮಾಡುವುದು ಎಂದರೆ ಅದು ಮುಕ್ತಾಯವೇ ಇಲ್ಲದ ಚಟುವಟಿಕೆಯೂ ಆಗಿದೆ. ನವ್ಯ ವಿಮರ್ಶೆಯು ವಾಸ್ತವವಾಗಿ ಕೆಲವೊಂದು ಸಂದರ್ಭದಲ್ಲಿ ವಿವರಣಾತ್ಮಕವೂ ಆಗಿರುತ್ತದೆ. ಅದು ಏಕಪಕ್ಷೀಯವಾದ ನಿಲುವನ್ನು ಹೊಂದಿರುತ್ತದೆ. ಅದು ಭಾಷೆಯನ್ನು ಗುರುತಿಸುತ್ತದೆ. ಫ್ರೆಂಚ್ ಭಾಷೆಯ ಅನೇಕ ನಿಲುವುಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದು ಲೇಖಕ ಮತ್ತು ಸಾಹಿತ್ಯ ವಿಮರ್ಶೆಯನ್ನು ಒಂದು ರೂಪವಾಗಿ ನೋಡಲು ಯತ್ನವನ್ನು ಮಾಡುತ್ತದೆ. ವಾಸ್ತವವಾಗಿ ಮನುಷ್ಯ ಮತ್ತು ಅವನ ನಿಲುವನ್ನು ನೋಡಬೇಕಾದ ಅಗತ್ಯವೂ ಇದೆ. ಮನುಷ್ಯನು

ಕೆಲವು ಕಲ್ಪನೆಯನ್ನು ಕಟ್ಟುತ್ತಾನೆ. ಅದು ವಾಸ್ತವ. ಆದ್ದರಿಂದ ವ್ಯಕ್ತಿ ಮತ್ತು ಅವನ ಚಟುವಟಿಕೆಯನ್ನು ನಾವು ಭಿನ್ನವಾಗಿ ನೋಡಬೇಕಾಗುತ್ತದೆ. ಮನುಷ್ಯನು ತನ್ನ ಕಲ್ಪನೆಯನ್ನು ಒಂದು ನಿರ್ದಿಷ್ಟವಾದ ಕಾರಣಕ್ಕೆ ಕಟ್ಟುತ್ತಾನೆ. ಅದು ಅವನ ವ್ಯಕ್ತಿತ್ವದ ಪ್ರದರ್ಶನವೂ ಹೌದು. ವ್ಯಕ್ತಿತ್ವಕ್ಕೆ ಚಾರಿತ್ರಿಕವಾದ ಒಂದು ಅಸ್ತಿತ್ವವು ಇರುತ್ತದೆ. ಸಾಹಿತ್ಯ ಮತ್ತು ಅದರ ಕೆಲಸವನ್ನು ಅವಾಸ್ತವ ಎಂದು ಹೇಳಬೇಕಾದ ಅಗತ್ಯವಿಲ್ಲ. ಆದರೆ ಇಲ್ಲಿ ಮತ್ತೆ ನೋಡಬೇಕಾದ ಅಂಶಗಳು ಇವೆ. ಸಾಹಿತ್ಯವು ಮನಸ್ಸನ್ನು ಹೇಳುತ್ತದೆ. ಯಾವುದನ್ನು ನಾವು ಕೇಳಿದ್ದೇವೆ, ನೋಡಿದ್ದೇವೆ ಮತ್ತು ಆಸ್ವಾದಿಸಿದ್ದೇವೆ ಅದನ್ನು ಮಾತ್ರವೇ ಹೇಳುತ್ತೇವೆ. ಅದರ ಅರ್ಥವೂ ವ್ಯತ್ಯಾಸವಾಗುತ್ತಾ ಬಂದಿದೆ. ನೋಟ ಮತ್ತು ಮನಸ್ಸು ಮಹತ್ವದ ಪಾತ್ರವನ್ನು ವಹಿಸುತ್ತದೆ. ಫುಕೋ ಆಲೋಚನೆ ಮತ್ತು ಅದರ ಪ್ರಾತಿನಿಧಿಕತೆಯನ್ನು ಹೇಳುತ್ತಾನೆ. ಅವನು ಜ್ಞಾನ ಮತ್ತು ಅದರ ರೂಪವನ್ನು ಹೇಳುವಾಗ ಅದರ ಪ್ರಾಕ್ತನ ರೂಪವನ್ನು ಚರ್ಚಿಸುತ್ತಾನೆ. ಜ್ಞಾನವೂ ಹೀಗೆ ಬೇರೆ ಬೇರೆ ವಿಧದಲ್ಲಿ ಕಟ್ಟಲಾಗಿದೆ. ಲೇಖಕ ಮತ್ತು ಅವನ ಪ್ರಜ್ಞೆಯನ್ನು ಅನೇಕವು ನಿರ್ಧರಿಸುತ್ತವೆ. ಮತ್ತು ಅದಕ್ಕೆ ಅತ್ಯಂತ ಮಹತ್ವದ ಜಾಗವೂ ಇದೆ. ನಮ್ಮ ಸಾಮಾಜಿಕ ಜ್ಞಾನ ಮತ್ತು ಅದರ ರೂಪಗಳು ತುಂಬಾ ಮಹತ್ವದ್ದೂ ಆಗಿದೆ. ಈ ದೃಷ್ಟಿಯಿಂದ ವ್ಯಕ್ತಿ ಮತ್ತು ಅವನ ಬರಹ ಹಾಗೂ ಅದನ್ನು ಗ್ರಹಿಸುವ ವಿಮರ್ಶಕನು ಒಂದು ಸಮಾನವಾದ ಪಾತಳಿಯಲ್ಲಿ ನಡೆಯಬೇಕಾಗುತ್ತದೆ. ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆಯು ಒಂದು ಕಡೆಗೆ ಸಂಧಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಅರ್ಥಶಾಸ್ತ್ರ, ರಾಜಕಾರಣ, ಸಮಾಜಶಾಸ್ತ್ರ ಮುಂತಾದವುಗಳು ಹೆಚ್ಚು ಸ್ಪಷ್ಟವಾಗಿರುತ್ತವೆ. ಪ್ರತಿಯೊಂದು ಆಲೋಚನೆಯ ಕ್ರಮವೂ ಕೂಡಾ ಚರಿತ್ರೆಯ ಬೇರನ್ನು ಹೊಂದಿರುತ್ತವೆ. ಫುಕೋ ಆಲೋಚನೆ ಮತ್ತು ಅದರ ಗ್ರಹಿಕೆಗೆ ಒಂದು ದೊಡ್ಡ ಇತಿಹಾಸವೂ ಇದೆ. ಯಾವುದೇ ಆಲೋಚನೆಯು ಸುಮ್ಮನೆ ಉಂಟಾಗಿರುವುದೂ ಇಲ್ಲ ಎಂದು ಹೇಳುತ್ತಾನೆ. ತತ್ವಜ್ಞಾನಕ್ಕೂ ಒಂದು ಪ್ರಾಕ್ತನ ರೂಪವಿರುತ್ತದೆ. ಆದರೆ ಸಾಹಿತ್ಯಕ್ಕೆ ಬಂದರೆ ಸ್ವಂತಿಕೆಯ ಪ್ರಶ್ನೆಯು ಹೆಚ್ಚು ಸೂಕ್ಷ್ಮವಾಗುತ್ತದೆ. ಮತ್ತು ಸ್ವಂತಿಕೆಯ ಪ್ರಶ್ನೆಯು ಸ್ವಲ್ಪ ಮಟ್ಟಿಗೆ ಅನುಮಾನವನ್ನು ಉಂಟು ಮಾಡುತ್ತದೆ. ಸಾಹಿತ್ಯವು ಒಂದು ನಿಯಮವನ್ನು ಒಳಗೊಂಡಿರುವುದರಿಂದ ಅದರ ಸ್ವರೂಪವನ್ನು ಅದು ಯಾವಾಗ ರಚಿತವಾಗಿದೆ ಎಂದೂ ಗ್ರಹಿಸಬೇಕಾಗುತ್ತದೆ. ಓದಿನ ಬಹುತ್ವ ಮತ್ತು ಅದರ ಚಾರಿತ್ರಿಕತೆಯು ಈ ಕಾರಣದಿಂದ ಒಂದು ನಿಲುವನ್ನು ಹೊಂದುವುದೂ ಅಗತ್ಯವಾಗುತ್ತದೆ. ಸ್ವಂತಿಕೆಯು ಓದಿನಲ್ಲಿ, ಮೌಲ್ಯಮಾಪನದಲ್ಲಿ, ಬರಹದಲ್ಲಿ ಕಾಣಿಸುತ್ತದೆ. ಅದರಲ್ಲಿ ಸಮಾಜ ಮತ್ತು ಮನಸ್ಸಿನ ಲೋಕವೂ ಇದೆ. ಕೃತಿಯ ಆಶಯವೆನ್ನುವುದು ಈ ದೃಷ್ಟಿಯಿಂದ, ಭಾವನೆರಹಿತವಾಗಿ ರಚಿತವಾಗುವುದೂ ಇಲ್ಲ. ನಾವು ಸ್ವಂತಿಕೆ ಮತ್ತು ಅದರ ವಿಸ್ತರಣೆಯನ್ನು ಬಯಸುತ್ತೇವೆ. ಆದರೆ ಈ ವಿಸ್ತರಣೆಯು ಯಾವ ರೂಪದಲ್ಲಿದೆ ಮತ್ತು ಅದರಲ್ಲಿ ನಾವು ಹೇಗೆ ಹೇಳುತ್ತೇವೆ ಎನ್ನುವುದು ಬಹಳ ಮುಖ್ಯ. ಸಾಹಿತ್ಯವು ಹೆಚ್ಚು ಖಚಿತವಾದರೆ ಅದರಲ್ಲಿ ಅನುಮಾನಕ್ಕೆ ಅವಕಾಶವು ಇಲ್ಲ. ಆದರೆ

ಅದು ಹೆಚ್ಚು ಅಸ್ಪಷ್ಟವಾಗಿದ್ದರೆ ಅದರ ಅನ್ವಯವು ಬೇರೆಯಾಗುತ್ತದೆ. ಅನ್ವಯವೇ ಮುಂಚೂಣಿಗೆ ಬಂದು ಹಲವು ಅರ್ಥವನ್ನು ಸೃಷ್ಟಿಸುತ್ತದೆ. ರಚನೆ ಮತ್ತು ಅದರ ಸ್ವರೂಪದಲ್ಲಿ ಲೇಖಕನು ವಹಿಸುವ ಪಾತ್ರವನ್ನು ಲುಕಾಕ್ಸ್ ಹೇಳುತ್ತಾನೆ. ವ್ಯಕ್ತಿಯ ನಿಲುವು ಈ ದೃಷ್ಟಿಯಿಂದ ಸಂವಾದಿಯಾಗಿಯೂ ಇರುತ್ತದೆ ಎಂದು ಅವನ ವಾದವಾಗಿದೆ. ಆದರೆ ಬರಹಗಾರ ಮತ್ತು ಬರಹವು ನಿಶ್ಚಿತವಾಗಿ ಸಮಸ್ಯಾತ್ಮಕವಲ್ಲ. ಬರಹದ ರೂಪವು ನಿಜವಾಗಿಯೂ ಉತ್ಪಾದನೆ. ಮತ್ತು ಅದರ ಉತ್ಪಾದನೆಯು ಯಾವ ರೀತಿಯಲ್ಲಿ ಕೆಲಸವನ್ನು ಮಾಡುತ್ತದೆ ಎನ್ನುವುದು ಮಾತ್ರವೇ ಮುಖ್ಯ. ಕಲಾತ್ಮಕವಾದ ರಚನೆಗಳು ಯಾವುದಾದರೂ ಕಾರಣಕ್ಕೆ ಹುಟ್ಟಿರುತ್ತವೆ. ಮತ್ತು ಅದರಲ್ಲಿ ನೀತಿ ಮತ್ತು ಅದರ ಸ್ವರೂಪಗಳೂ ಇರುತ್ತವೆ. ಯಾವುದನ್ನು ನಾವು ಈಗ ಸತ್ಯವೆಂದು ಹೇಳುತ್ತೇವೆಯೋ ಅದೂ ಒಂದು ತರ್ಕ. ಮತ್ತು ಅದರಲ್ಲಿ ಲೇಖಕ ಮತ್ತು ಓದುಗರು ಜೊತೆಯಲ್ಲಿ ಹೋಗುತ್ತಾರೆ. ಲೇಖಕರು ಮತ್ತು ಅವರ ಸ್ವಂತಿಕೆಯು ಬರಹದಲ್ಲಿ ವ್ಯಕ್ತವಾಗುತ್ತವೆ. ಮತ್ತು ಬರಹವೂ ಒಂದು ಬಗೆಯಲ್ಲಿ ಸ್ವಂತಿಕೆಯನ್ನು ತೃಪ್ತಿಪಡಿಸುವ ಪ್ರಕ್ರಿಯೆ ಕೂಡಾ ಆಗಿರುತ್ತವೆ. ಯೋಚನೆ ಮತ್ತು ಬರಹವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಲೇಖಕರ ಬಗ್ಗೆ ನಾವು ಯಾವುದೇ ರೀತಿಯಲ್ಲಿ ಕರುಣೆಯನ್ನು ವ್ಯಕ್ತಪಡಿಸಬೇಕಾದ ಅಗತ್ಯವಿಲ್ಲ. ಕೃತಿಯ ಬಗ್ಗೆ ಉದಾರತೆಯೂ ಅವಶ್ಯಕತೆಯಿಲ್ಲ. ಓದುವುದು ಮತ್ತು ಬರೆಯುವುದು ಎಂದರೆ ಬರೀ ಅಂತರವನ್ನು ಕಾಪಾಡಿಕೊಳ್ಳುವುದು ಅಲ್ಲ. ಕೃತಿಯ ಮೂಲಕ ಕೆಲವು ರೀತಿಯ ಸಂವಾದಗಳು ಏರ್ಪಡುತ್ತವೆ. ಕಾದಂಬರಿಯಲ್ಲಿ ನಾವು ಧ್ರುವೀಕರಣ ಮಾಡಬೇಕೆಂದು ಇಲ್ಲ. ಆದರೆ ಈಗ ನಮ್ಮ ಬರಹದ ಕುರಿತಾದ ಧೋರಣೆಯು ಬದಲಾಗಿದೆ. ಅದನ್ನು ಕೆಲವರಿಗೆ ಮಾತ್ರವೇ ಸೀಮಿತ ಮಾಡಲಾಗಿದೆ. ಸಾಹಿತ್ಯವನ್ನು ಒಂದು ವರ್ಗಕ್ಕೆ ಮಾತ್ರವೇ ಸೀಮಿತ ಮಾಡಲಾಗಿದೆ. ಮತ್ತು ಅದನ್ನು ನೋಡುವಾಗ ಅದನ್ನು ತಾತ್ವಿಕ ಕಾರಣಕ್ಕೆ ಯಾರೂ ನೋಡುವುದೂ ಇಲ್ಲ. ಸಾಹಿತ್ಯವನ್ನು ನೋಡುವುದು ಅಂದರೆ ಅದನ್ನು ವಸ್ತು ಮತ್ತು ವಿಷಯ ಎನ್ನುವ ರೀತಿಯಲ್ಲಿ ವರ್ಗೀಕರಿಸಲಾಗುತ್ತದೆ. ಧ್ರುವೀಕರಣವನ್ನು ನಾವು ಕಾಣುತ್ತೇವೆ. ವಿಮರ್ಶೆಯು ಯಾವುದನ್ನು ವಿಸ್ತರಿಸುತ್ತದೆ. ಮತ್ತು ಅದನ್ನು ಹೇಗೆ ಕಾಣುತ್ತದೆ ಎನ್ನುವುದು ನಮಗೆ ಹೆಚ್ಚು ಮುಖ್ಯವಾಗಬೇಕಾಗುತ್ತದೆ. ಓದುವುದು ಅಂದರೆ ಪದವನ್ನು ಮಾತ್ರವೇ ನೋಡುವುದು ಮತ್ತು ಅದನ್ನು ಬದಲಿಸುವುದು ಎಂದು ಮಾತ್ರವೇ ಭಾವಿಸಲಾಗುತ್ತದೆ. ಸಾಹಿತ್ಯ ಮತ್ತು ಲೆಕ್ಕಕ್ಕೆ ಯಾವುದನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದು ನಮಗೆ ಮುಖ್ಯ. ಯಾವುದು ಸಾಹಿತ್ಯದಲ್ಲಿ ಗಮನಿಸಬೇಕಾದ ಅಂಶವೆನ್ನುವುದು ಬಹಳ ಮುಖ್ಯ. ಸಾಹಿತ್ಯ ಮತ್ತು ಅದರ ಓದಿನ ಪ್ರಶ್ನೆಯೆಂದರೆ ಅದನ್ನು ಮುಕ್ತವಾದ ಸ್ವಾತಂತ್ರ್ಯವೆಂದು ಅನೇಕರು ಭಾವಿಸುತ್ತಾರೆ. ಓದಿನಲ್ಲಿ ಕೆಲವನ್ನು ನಾವು ಆಯ್ಕೆ ಮಾಡುತ್ತೇವೆ. ನಿಜ. ಆದರೆ ಅದು ಮುಕ್ತವಾದ ಸಂಗತಿಯು ಅಲ್ಲ. ಓದಿನಲ್ಲಿ ನಾವು ಕೆಲವನ್ನು

ಒಪ್ಪಿಕೊಳ್ಳಬೇಕಾಗುತ್ತದೆ. ಓದು ಅಂದರೆ ಅದು ಒಂದು ನಿರ್ದಿಷ್ಟವಾದ ಒಂದು ಬಗೆಯಲ್ಲಿ ನಿರ್ದಿಷ್ಟವಾದ ಅನುಸಂಧಾನವೂ ಹೌದು. ಸಾಹಿತ್ಯ ಮತ್ತು ಅದರ ಓದಿನ ಮುಕ್ತತೆಯೆಂದರೆ ಅದು ನಿರ್ದಿಷ್ಟವಾದ ಆಯ್ಕೆಯೂ ಹೌದು. ಲೇಖಕನೆಂದರೆ ಅವನು ಪ್ರಶ್ನಾತೀತನು ಅಲ್ಲ. ಓದುವುದು ಅಂದರೆ ಅದು ಕೃತಿಯ ಮೇಲಿನ ಪ್ರಭುತ್ವವೂ ಅಲ್ಲ. ಓದುವುದು ಮತ್ತು ಅದನ್ನು ಅನುಭವಿಸುವುದು ಅಂದರೆ ಅದನ್ನು ದ್ವಂದ್ವಾತ್ಮಕವಾಗಿಯೂ ನೋಡುವುದು. ಯಾವುದೇ ಲೇಖಕನು ಯಾವುದನ್ನು ಬರೆಯುತ್ತಾನೆಯೋ ಅದನ್ನು ಮೀರುವ ಅಗತ್ಯವಿಲ್ಲ. ಅದರ ಬದಲು ನಾವು ಅವನ ಬಳಿಗೆ ಹೋಗುವ ಅಗತ್ಯವೂ ಇದೆ. ಹಾಗೆ ನೋಡುವುದಿದ್ದರೆ ಲೇಖಕ ಮತ್ತು ಓದುಗರು ಒಂದು ಹಂತದಲ್ಲಿ ತಮ್ಮ ಅನನ್ಯತೆಯನ್ನು ನಿರ್ದಿಷ್ಟವಾದ ಘಟ್ಟದಲ್ಲಿ ಕಳೆದುಕೊಳ್ಳುತ್ತಾರೆ. ಕೆಲವು ಸಂದರ್ಭದಲ್ಲಿ ಅವರು ವರ್ಗಾಂತರವೂ ಆಗುತ್ತಾರೆ. ಓದುವಾಗ ನಾವು ಅನೇಕವನ್ನು ಭಿನ್ನವಾಗಿಯೂ ನೋಡಬೇಕಾಗುತ್ತದೆ. ಓದುವಾಗ ಕೆಲವನ್ನು ನಾವು ನಿರ್ದಿಷ್ಟವಾಗಿ ಅದನ್ನು ನೋಡಬೇಕಾಗುತ್ತದೆ. ಅನೇಕವು ಭಾಷೆಯ ಮೂಲಕವೇ ಸ್ಥಾನಂತರವು ಆಗುತ್ತದೆ. ಅಂದರೆ ಅದರ ಸ್ವರೂಪವನ್ನು ನಾವು ನೋಡುವ ಕ್ರಮವು ಬೇರೆಯಾಗಬೇಕಾಗುತ್ತದೆ. ಬರೆದ ಮೇಲೆ ಲೇಖಕನು ಅದರಿಂದ ಹೊರಗೆ ಬರುತ್ತಾನೆ. ಆದ್ದರಿಂದ ನಾವು ಯಾವುದನ್ನು ಅನ್ವಯ ಮಾಡುತ್ತೇವೆಯೋ ಅದರ ಅರ್ಥವನ್ನು ಖಚಿತ ಮಾಡಬೇಕಾಗುತ್ತದೆ. ಯಾವುದನ್ನು ನಾವು ಕೃತಿಯ ಸಾರವೆಂದು ಹೇಳುತ್ತೇವೆಯೋ ಅದರಲ್ಲಿ ಕೃತಿಯನ್ನು ಗ್ರಹಿಸಬೇಕಾಗುತ್ತದೆ. ಕೃತಿಯಲ್ಲಿ ಓದು ಎನ್ನುವುದಕ್ಕೆ ಕೆಲವು ರೀತಿಯ ಆದ್ಯತೆಯೂ ಇದೆ. ಬೇಕಾದಂತೆ ಓದುತ್ತೇವೆ ಎಂದರೆ ನಾವು ಕೃತಿಯ ಕೇಂದ್ರವನ್ನು ಬದಲಿಸುವ ಸಾಧ್ಯತೆಯೂ ಇರುತ್ತದೆ. ಓದು ಎನ್ನುವುದು ಮೂಲಭೂತವಾಗಿ ಅಸಂಗತವಾದ ಒಂದು ಪ್ರಕ್ರಿಯೆಯು ಅಲ್ಲ. ಓದು ಅಂದರೆ ಅದನ್ನು ನಾವು ಒಂದು ನಿರ್ದಿಷ್ಟವಾದ ಪ್ರಕ್ರಿಯೆ ಎಂದೂ ತಿಳಿಯಬೇಕಾಗುತ್ತದೆ. ಅಂದರೆ ಅದನ್ನು ಅನಿಯತವೆಂದು ಭಾವಿಸುವುದು ಸರಿಯಾದ ಕ್ರಮವು ಅಲ್ಲ. ಅನ್ವಯವು ಯಾವಾಗಲೂ ಅದರ ಕೇಂದ್ರಕ್ಕೆ ಬರಬೇಕಾಗುತ್ತದೆ. ಮತ್ತು ಅದರ ಅರ್ಥವನ್ನು ನಾವು ಅದರ ಆಶಯವನ್ನು ನೋಡಿಕೊಂಡು ಗಮನಿಸಬೇಕಾಗುತ್ತದೆ. ಯಾವುದೇ ಅಥೆಂಟಿಕ್ ಎನ್ನಬಹುದಾದ ಸಂಗತಿಗಳು ನಿಜವಾಗಿಯೂ ಕೃತಿಕಾರನ ಹತ್ತಿರ ಹೋಗುತ್ತದೆ. ಈ ದೃಷ್ಟಿಯಿಂದ ಯಾವ ಮಾರ್ಕ್ಸ್‌ವಾದಿಯೂ ಸಾಹಿತ್ಯ ಮತ್ತು ಅದರ ವಿಮರ್ಶೆಯನ್ನು ನಿರಾಕರಿಸುವುದು ಇಲ್ಲ. ಅದು ಅತ್ಯಂತ ಗಂಭೀರವಾದ ಚಟುವಟಿಕೆಯು ಆಗಿದೆ. ಲೇಖಕನು ಯಾವುದನ್ನು ಅಭಿವ್ಯಕ್ತ ಮಾಡಿದ್ದಾನೆಯೋ ಅದನ್ನು ಗ್ರಹಿಸುವುದು ಈ ದೃಷ್ಟಿಯಿಂದ ಹೆಚ್ಚು ಸಕ್ರಿಯವಾದ ಸಂಗತಿಯೂ ಹೌದು. ಲೇಖಕ ಮತ್ತು ವಿಮರ್ಶಕನ ಪಾತ್ರವು ಈ ದೃಷ್ಟಿಯಿಂದ ಹೆಚ್ಚು ಸಂಕೀರ್ಣವಾಗಿದೆ. ಸಾಹಿತ್ಯದ ಚರ್ಚೆಯಲ್ಲಿ ಮತ್ತೆ ಮತ್ತೆ ಬಂದ ಒಂದು ಪ್ರಶ್ನೆಯನ್ನು ಇಲ್ಲಿ ನೋಡಬೇಕಾಗುತ್ತದೆ.

ಜೀವನ ಮತ್ತು ಸಾಹಿತ್ಯ

ವಾಸ್ತವವಾಗಿ ಬರಹಗಳಲ್ಲಿ ಬರುವ ಸಮಸ್ಯೆಯು ಒಂದಲ್ಲ ಒಂದು ರೀತಿಯಲ್ಲಿ ವಿಶ್ವಾತ್ಮಕವೂ ಆಗಿರುತ್ತದೆ. ಕಾದಂಬರಿಯಲ್ಲಿ ಯಾವುದನ್ನು ಮುಖ್ಯವಾದ ಆಶಯವನ್ನಾಗಿ ಮಾಡಲಾಗಿದೆ ಎನ್ನುವುದು ಮಾತ್ರವೇ ನಮ್ಮ ಮುಂದಿರುವ ಪ್ರಶ್ನೆ. ಕಾದಂಬರಿಯಲ್ಲಿ ತಾತ್ವಿಕತೆಯನ್ನು ಮುಂದೆ ತರಲಾಗಿದೆ ಎನ್ನುವುದು ಮಾತ್ರವೇ ಬಹಳ ಮುಖ್ಯ. ನಿಜವಾದ ಮಾನವೀಯತೆ ಮತ್ತು ಅದರ ಚಹರೆಗಳು ಮುಖ್ಯವಾಗಿದೆ. ನೀತಿ ಮತ್ತು ಅದರ ಸ್ವರೂಪವು ಬರಹದಲ್ಲಿ ಅಗತ್ಯಕ್ಕೆ ತಕ್ಕ ಹಾಗೆ ಮಾತ್ರವೇ ಬರುತ್ತದೆ. ಅನೀತಿಯನ್ನು ಕೂಡಾ ಲೇಖಕನು ತನಗೆ ಬೇಕಾದ ನಿರೂಪಿಸುತ್ತಾನೆ. ಆದರೆ ಗಮನಿಸಬೇಕಾದ ಅಂಶವೆಂದರೆ ವಿಮರ್ಶೆಯು ಕೂಡಾ ನೈತಿಕವಾಗಿಯೇ ಸರಿಯಿರಬೇಕಾಗುತ್ತದೆ. ಅದಕ್ಕೆ ಒಂದು ತಳಹದಿಯು ಬೇಕಾಗುತ್ತದೆ. ಈ ಅರ್ಥದಲ್ಲಿ ವಿಮರ್ಶೆಯು ಕೂಡಾ ಒಂದು ಸಂವಾದ. ಅದರಲ್ಲಿಯೂ ಒಂದು ಕಾರಣವು ಇರಬೇಕಾಗುತ್ತದೆ. ಆದ್ದರಿಂದ ಇಲ್ಲಿ ನೋಡಬೇಕಾದ ಅಂಶವೆಂದರೆ ಅನೇಕವು ನಮಗೆ ಬಹಳ ಮುಖ್ಯವಾಗುತ್ತದೆ. ವಾಸ್ತವವು ಅತ್ಯಂತ ಶಕ್ತಿಯುತವಾದುದು. ಅದರಲ್ಲಿ ಒಂದು ಸನ್ನಿವೇಶವೂ ಅತ್ಯಂತ ಮುಖ್ಯವಾಗುತ್ತದೆ. ಸಾಹಿತ್ಯ ಮತ್ತು ಅದರ ಕೆಲಸವು ಜನರೊಂದಿಗೆ ಸಂವಾದವನ್ನು ಮಾಡುವುದು ಮಾತ್ರ. ಈ ಅರ್ಥದಲ್ಲಿ ಸಾಹಿತ್ಯ ಮತ್ತು ಅದರ ಚರ್ಚೆಯು ಕೆಲವು ಪರಿಕಲ್ಪನೆಯನ್ನು ಹೊಂದಿರುತ್ತವೆ. ಅವುಗಳು ಕೆಲವು ರಚನೆಗಳನ್ನು ಮಾತ್ರವೇ ನೋಡುತ್ತವೆ. ಸಾಹಿತ್ಯ ವಿಮರ್ಶೆಯಲ್ಲಿ ಲೇಖಕ ಮತ್ತು ಅವನ ನಿಲುವುಗಳು ಬಹಳ ಮುಖ್ಯವಾಗುತ್ತದೆಯೇ ಎಂದು ಕೇಳುವವರು ಬಹಳ ಜನರು ಇದ್ದಾರೆ. ಲೇಖಕ ಮತ್ತು ವಿಮರ್ಶಕರ ನಡುವಣ ಸಂವಾದವೂ ಮುಖ್ಯವಾಗುತ್ತದೆ. ರಚನೆಗಳು ಕೆಲವು ಉಪಯೋಗವನ್ನು ಕೊಡುತ್ತವೆ. ವಿಮರ್ಶೆಯೆಂದರೆ ಅದರ ಲೇಖಕ ಮತ್ತು ವಿಮರ್ಶಕರ ನಡುವೆ ನಡೆಯುವ ಸ್ಪರ್ಧೆಯು ಅಲ್ಲ. ಕಾಲಮಾನ ಮತ್ತು ಆಶಯಗಳಿಗೂ ಒಂದು ಸಂಬಂಧವಿದೆ ಎಂದು ಭಾವಿಸಬೇಕಾಗುತ್ತದೆ. ಕೃತಿಯು ನೀಡುವ ಸೂಚನೆಗಳು ಮತ್ತು ಅದರ ಚಹರೆಗಳು

ಬಹಳ ಮುಖ್ಯ. ಅದರ ಜೊತೆಗೆ ಸಂಜ್ಞೆ ಮತ್ತು ಅದರ ಅರ್ಥವೂ ಸಾಹಿತ್ಯದಲ್ಲಿ ಬಹಳ ಮುಖ್ಯವಾಗುತ್ತದೆ. ಏಕಾಕಿತನ ಮತ್ತು ಅದರ ಸ್ವರೂಪವನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ಏಕಾಕಿತನವು ಒಂದು ಸಮಸ್ಯೆ. ಅದನ್ನು ಅನುಭವಿಸಿಕೊಳ್ಳುವುದು ಅತ್ಯಂತ ಕಷ್ಟ. ಹಾಗೆಂದು ಏಕಾಕಿತನವನ್ನು ಯಾರಾದರೂ ತಮಗೆ ಬೇಕಾಗಿದೆ ಎಂದು ಆಯ್ಕೆ ಮಾಡುವುದಿಲ್ಲ. ಅದರಲ್ಲಿ ಬರೀ ವೈಯಕ್ತಿಕ ಆಯ್ಕೆ ಮತ್ತು ಅದರ ಪರಿಣಾಮವು ಇಲ್ಲ. ಅದು ಘಟಿಸಿದೆ. ಹಾಗೆಯೇ ಜೀವನದ ಎಲ್ಲಾ ಅಂಶಗಳು ಕೃತಿಯಲ್ಲಿ ಬರುತ್ತದೆ ಎಂದು ಹೇಳಲು ಆಗುವುದಿಲ್ಲ. ಆದರೆ ಕೃತಿಯ ಮೂಲಕ ಜೀವನವನ್ನು ಅರ್ಥ ಮಾಡಲು ಸಾಧ್ಯವಾಗುತ್ತದೆ. ವಾಸ್ತವವಾಗಿ ಪಠ್ಯ ಎನ್ನುವುದು ಮೂಲಭೂತವಾಗಿ ನಮ್ಮ ಅನುಭವ ಮತ್ತು ಜೀವನವನ್ನು ಅರ್ಥ ಮಾಡಿಕೊಳ್ಳಲು ಇರುವ ಅಂಶ. ಜೀವನ ಮತ್ತು ಅದರ ಸಾಧ್ಯತೆಯನ್ನು ನಾವು ಬರಹದಲ್ಲಿ ಹುಡುಕುತ್ತೇವೆ. ಜೀವನವನ್ನು ಮತ್ತು ಅದರ ಸ್ವರೂಪವನ್ನು ನಾವು ಬರೀ ಸಾಹಿತ್ಯದಲ್ಲಿ ಮಾತ್ರವೇ ನೋಡುತ್ತೇವೆ ಎಂದು ಇದರ ಅರ್ಥವಲ್ಲ. ಲೇಖಕನು ತನಗೆ ಕಂಡದ್ದನ್ನು ಹೇಳುತ್ತಾನೆ. ಆದರೆ ಬರಹವನ್ನು ನಾವು ಸ್ವಂತದ ಚಿತ್ರವೆಂದು ಹೇಳಬೇಕಾದ ಅಗತ್ಯವು ಇಲ್ಲ. ನಮ್ಮ ಮನೋಸ್ಥಿತಿಗೆ ಮತ್ತು ಮನೋಭಾವಕ್ಕೆ ಸರಿಯಾಗುವಂತೆ ನಾವು ಬರೆಯುತ್ತೇವೆ. ಬರಹವು ಈ ದೃಷ್ಟಿಯಲ್ಲಿ ನಮ್ಮ ಅಗತ್ಯ. ಅದು ಒಂದು ಬಗೆಯಲ್ಲಿ ನಮ್ಮ ಚಟುವಟಿಕೆ. ಬರವಣಿಗೆಯಲ್ಲಿ ನಾವು ಬೇರೆ ಬೇರೆ ಸೂಚನೆಗಳನ್ನು ಬಳಸುತ್ತೇವೆ. ಹಾಗೆ ನೋಡುವುದಿದ್ದರೆ ಸಾಹಿತ್ಯವೇ ಆಗಲಿ, ಇತರ ಬರಹಗಳೇ ಆಗಲಿ ಅವುಗಳು ಒಂದು ರೀತಿಯಲ್ಲಿ ಒಂದು ಸೂಚನೆಗಳು. ಯಾವುದೇ ಸೂಚನೆಗಳು ಮತ್ತು ಅವುಗಳ ಕೆಲಸವು ಒಂದು ಬಗೆಯಲ್ಲಿ ಇರುತ್ತವೆ. ಅವುಗಳಿಗೆ ಸಾಮಾಜಿಕ ಅಸ್ತಿತ್ವವು ಇರುತ್ತದೆ. ವಾಸ್ತವವಾಗಿ ಒಬ್ಬ ಲೇಖಕನು ಅನೇಕವನ್ನು ಬರೆಯುತ್ತಾನೆ ಎಂದಾದರೆ ಅವನ ಬರಹವೆಲ್ಲವೂ ಒಂದೇ ರೀತಿಯಲ್ಲಿ ಇರುತ್ತದೆ ಎಂದು ಅರ್ಥವಲ್ಲ. ಅವನು ಬೇರೆ ಬೇರೆ ಸಂವೇದನೆಯನ್ನು ಒಳಗೊಂಡಿರುತ್ತಾನೆ ಎಂದು ಮಾತ್ರವೇ ಅರ್ಥ. ಬರಹವೂ ಒಂದು ಬಗೆಯಲ್ಲಿ ಸುಖವೂ ಆಗುತ್ತದೆ. ಅದರೆ ಅದರಲ್ಲಿ ಅವನು ಮನಸ್ಸು ಮತ್ತು ಅದರ ಬಿಡುಗಡೆಯ ಅನುಭವವನ್ನು ಪಡೆಯುತ್ತಾನೆ. ಆದರೆ ಲೇಖಕನು ಗ್ಯಾರೇಜಿನಲ್ಲಿ ಕೆಲಸವನ್ನು ಮಾಡುವ ಒಬ್ಬ ಮೆಕಾನಿಕ್ ಅಲ್ಲ. ಲೇಖಕನು ಒಂದು ಬೌದ್ಧಿಕ ಅಗತ್ಯವನ್ನು ಪೂರೈಸುತ್ತಾನೆ. ಒಮ್ಮೊಮ್ಮೆ ಬರವಣಿಗೆಯು ಹರಿದುಹಂಚಾಗಿ ಹೋಗುತ್ತದೆ. ಅದರಲ್ಲಿ ಕೆಲವು ವಿಚಾರಗಳು ತುಂಡಾಗಿಯೂ ಬರುತ್ತದೆ. ವಿಚಾರಗಳು ಅಸ್ತವ್ಯಸ್ತವಾಗುತ್ತವೆ. ಅದಕ್ಕಾಗಿ ಯಾರು ಚಿಂತೆಯನ್ನು ಮಾಡಬೇಕಾದ ಅಗತ್ಯವಿಲ್ಲ. ಬರಹ ಮತ್ತು ಅದರ ಸ್ವರೂಪವನ್ನು ನಾವು ನೋಡಿಕೊಂಡು ಅದರ ಅರ್ಥವನ್ನು ಕೂಡಲೇ ಲೇಖಕನಿಗೆ ನೇರವಾಗಿ ಅನ್ವಯವನ್ನು ಮಾಡಬೇಕೆಂದು ಹೇಳಬೇಕಾಗಿಲ್ಲ. ಲೇಖಕನು ಬರೆಯುತ್ತಾನೆ ಎಂದರೆ ಅವನು ಯಾವುದನ್ನೋ ಹೇಳಲು ಉದ್ದೇಶ ಮಾಡಿಕೊಂಡಿದ್ದಾನೆ ಎಂದು ಅರ್ಥವಾಗುತ್ತದೆ. ಬರಹ ಮತ್ತು ಅದರ ಅಗತ್ಯಗಳ ಪ್ರಶ್ನೆಯು ಯಾವತ್ತೂ ಬೇರೆಯಾಗುತ್ತವೆ. ಅಂದರೆ ಅದನ್ನು ಉಳಿದ ಕೆಲಸವನ್ನು ನೋಡಿದ ಹಾಗೆ ನೋಡುವುದು ಅಸಾಧ್ಯ. ಅದು ಅದೃಷ್ಟದ ಪ್ರಶ್ನೆಯು ಅಲ್ಲ. ಅದು ಕಾಲವನ್ನು ಆಧರಿಸಿಕೊಳ್ಳುತ್ತದೆ. ಹಾಗೆ ನೋಡಿಕೊಂಡರೆ ನಾವು ಬಳಸುವ ಕುರ್ಚಿ ಮುಂತಾದ ಪರಿಕರವೂ ಕೂಡಾ

ಬೇರೆ ಬೇರೆ ವಿನ್ಯಾಸವನ್ನು ಪಡೆದುಕೊಂಡಿದೆ. ನಾವು ಬಳಸುವ ಕುರ್ಚಿಯ ಒಂದು ಥರವಿರುತ್ತದೆ. ಕಾಲ ಮತ್ತು ಅದರ ಪರಿಕ್ರಮವು ಬೇರೆ ಬೇರೆ ಅಭಿವ್ಯಕ್ತಿಯನ್ನು ಪಡೆಯುತ್ತವೆ. ಅದರಲ್ಲಿ ತಾರತಮ್ಯವು ಇರುತ್ತದೆ. ಪಂಪನ ನೀಲಾಂಜನೆಯು ಅನಂತಮೂರ್ತಿಯವರ ಬರಹದಲ್ಲಿ ಬರುವುದು ಅಸಾಧ್ಯವಾಗುತ್ತದೆ. ನೀಲಾಂಜನೆಯು ಬರುವುದು ಒಂದು ರೀತಿಯಲ್ಲಿ. ಭರತ ಮತ್ತು ಬಾಹುಬಲಿಯು ಬರುವುದು ಮತ್ತೊಂದು ರೀತಿಯಲ್ಲಿ. ಆದರೆ ಅವರು ಬಂದದ್ದು ನಮ್ಮ ಕಾಲದಲ್ಲಿ ಅಲ್ಲ. ಅವರ ಅಸ್ತಿತ್ವವು ಇರುವುದು ಹತ್ತನೆಯ ಶತಮಾನದ ಕಾವ್ಯದಲ್ಲಿ. ಅದರ ಅರ್ಥವು ಇಷ್ಟೇ. ಈ ಪಾತ್ರಗಳನ್ನು ನಾವು ಈವತ್ತು ಕಾಣುವುದು ಅಸಾಧ್ಯವಾಗುತ್ತದೆ. ಪಂಪನಲ್ಲಿ ಒಂದು ತಲ್ಲಣಗಳನ್ನು ಹೇಳುತ್ತಾನೆ. ತಲ್ಲಣಗಳು ಯುದ್ಧ ಮತ್ತು ಇತರ ಅಂಶಗಳನ್ನು ಹೇಳುತ್ತವೆ. ಆದರೆ ಅದು ತಲ್ಲಣವನ್ನು ನಿರಸನ ಹೊಂದುವುದು ನಿಜವಾಗಿಯೂ ಒಂದು ಪರ್ಯಾಯದ ಮೂಲಕ ಮಾತ್ರವೇ. ಇಲ್ಲಿ ಮತ್ತೊಂದು ಅಂಶವಿದೆ. ಕಾರಂತರ ಕಾದಂಬರಿಗಳು ಹೇಳುವ ತಲ್ಲಣಗಳು ಭಿನ್ನವಾಗುತ್ತದೆ. ಅಂದರೆ ಅದರ ಅರ್ಥವು ಭಿನ್ನವಾಗುತ್ತದೆ. ಕಾರಂತರು ಬದಲಾಗುತ್ತಿರುವ ವೈಚಾರಿಕ ಆಕೃತಿಯನ್ನು ಹೇಳುತ್ತಾರೆ. ವಾಸ್ತವವಾಗಿ ಯಾವುದನ್ನು ನಾವು ಈವತ್ತು ವಸಾಹತು ಆದ ಸ್ಥಿತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ಈಗ ವ್ಯಾಖ್ಯಾನಿಸುವುದು ಅತ್ಯಂತ ಕಷ್ಟವಾಗಿದೆ. ವಸಾಹತು ಎನ್ನುವುದು ಬೇರೆ ಬೇರೆ ರೀತಿಯ ಸಂಕಥನಗಳು ಆಗುತ್ತವೆ. ಅದು ಬೇರೆ ವಿಚಾರ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ವಿಚಾರಗಳು ಇವೆ. ಅದನ್ನು ಹೀಗೆ ಹೇಳಬಹುದು– ಒಂದು ಪುಸ್ತಕವು ಪ್ರಕಟವಾದರೆ ಅದರ ನೂರಾರು ಪ್ರತಿಗಳು ಯಾರಿಗೋ ತಲುಪುತ್ತವೆ. ಮತ್ತು ಅವು ಒಂದು ಸಂಸ್ಕೃತಿಯನ್ನು ಹುಟ್ಟುಹಾಕುತ್ತವೆ. ಸಿನಿಮಾ ಕೂಡಾ ಜನರ ಮೇಲೆ ಪ್ರಭಾವವನ್ನು ಬೀರುತ್ತದೆ. ಅದರ ಪರಿಣಾಮವು ಒಂದು ಬಗೆಯದು ಅಲ್ಲ. ಅದರಲ್ಲಿ ಬೇರೆ ಸಂಗತಿಗಳೂ ಜೊತೆಗೆ ಸೇರುತ್ತವೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಯಾವುದೇ ಪುಸ್ತಕಗಳು ಮತ್ತು ಅವುಗಳ ಕುರಿತಾದ ಪ್ರತಿಕ್ರಿಯೆಗಳು ಮೂಲಭೂತವಾಗಿ ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ್ದೂ ಆಗಿದೆ. ಅದು ಅಗತ್ಯವೂ ಆಗುತ್ತದೆ. ಪುಸ್ತಕಗಳು ಮತ್ತು ಅವುಗಳ ಕುರಿತಾದ ಪ್ರತಿಕ್ರಿಯೆಗಳು ಹಾಗೂ ಅದರ ಅನುವಾದಗಳು ಮುಖ್ಯವಾದ ಸೂಚನೆಯನ್ನು ಕೊಡುತ್ತದೆ. ಅನುವಾದಗಳು ಮೂಲವನ್ನು ಅನುಕರಿಸುತ್ತವೆ. ಅನುಕರಣೆ ಎನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅನುಕರಣೆ ಎನ್ನುವುದು ಅತ್ಯಂತ ಸಾಮಾನ್ಯವಾದ ಪದದ ಹಾಗೆ ಕಾಣಿಸುತ್ತದೆ. ಆದರೆ ವಾಸ್ತವವಾಗಿ ಅನುಕರಣೆಯನ್ನು ಮಾಡುವ ಮಗುವು ಕೂಡಾ ಅನೇಕವನ್ನು ಕಲಿಯುತ್ತದೆ. ಈ ಅರ್ಥದಲ್ಲಿ ಇದಕ್ಕೆ ಹೆಚ್ಚು ಮಹತ್ವವು ಇದೆ. ಅನುಕರಣೆಯ ಮೂಲಕ ಮಗುವು ಹೆಚ್ಚು ಕಲಿಯುತ್ತದೆ. ಬರಹವೂ ಹೊರಗೆ ಇರುವುದನ್ನು ಅನುಕರಿಸುತ್ತದೆ. ಅದರ ಅಗತ್ಯವೇ ಅದು. ಅನುಕರಣೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ಆದರೆ ಅದರಲ್ಲಿ ಕೆಲವು ಆಯ್ಕೆಗಳು ಇರುತ್ತವೆ. ಬರಹವೇ ಉದ್ದೇಶ ಪೂರ್ವಕವಾದ ಒಂದು ಚಟುವಟಿಕೆಯೂ ಆಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಬರಹವು ಒಂದು ಕಾರಣದಿಂದ ಹುಟ್ಟಿರುತ್ತದೆ. ಆದರೆ ಅದರಲ್ಲಿ ವ್ಯಕ್ತಿ ಮತ್ತು ಅವನ ವೈಯಕ್ತಿಕ ಆಯ್ಕೆಗಳು ಹೆಚ್ಚು ಮುಖ್ಯವಾಗುತ್ತದೆ. ಬರಹವು ನಮ್ಮ ಆಸಕ್ತಿಯನ್ನು

ಹೇಳುತ್ತದೆ. ಬರೆಯುವುದು ವೈಯಕ್ತಿಕವಾದ ನಿಲುವು ಹೌದು. ಅದರಲ್ಲಿ ನಾವು ಯಾವುದನ್ನು ಹೇಳಬೇಕೆಂದುಕೊಂಡಿದ್ದೇವೆಯೋ ಅದರ ನಿಲುವು ಬಹಳ ಮುಖ್ಯವಾಗುತ್ತದೆ. ಬರಹವು ಒಂದು ಸನ್ನಿವೇಶ ಮತ್ತು ಅದರ ಸಂಗತಿಯನ್ನು ಹೇಳುತ್ತದೆ. ಬರಹವು ವ್ಯಕ್ತಿಯ ಕಾರಣವನ್ನು ಹೇಳುತ್ತದೆ. ಮತ್ತು ಅದರಲ್ಲಿ ಖಾಸಗಿಯಾದ ನೆಲೆಯೂ ಇರುತ್ತದೆ. ಅದರಲ್ಲಿ ಗುರಿಯೂ ಬಹಳ ಮುಖ್ಯವಾಗುತ್ತದೆ. ವ್ಯಕ್ತಿ ಮತ್ತು ಅವನ ಅಗತ್ಯಗಳ ಬಹಳ ಪ್ರಶ್ನೆಯು ಅತ್ಯಂತ ಮುಖ್ಯವಾಗುತ್ತದೆ. ಅದರಲ್ಲಿ ಬಹಳ ಮುಖ್ಯವಾಗುವ ಸಂಗತಿಯೆಂದರೆ ವ್ಯಕ್ತಿಯ ಅಭಿರುಚಿಯು ಮುಖ್ಯವಾಗುತ್ತದೆ. ನಾವು ನೋಡಬೇಕಾದ ಅಂಶವೆಂದರೆ ಯಾವುದು ಅವನನ್ನು ಬರೆಯುವ ಹಾಗೆ ಮಾಡುತ್ತದೆ ಎನ್ನುವುದು ಮಾತ್ರವೇ.

ರಾಷ್ಟ್ರ ಮತ್ತು ಅದರ ಅರ್ಥವನ್ನು ಈಗ ಯಾರು ಹೇಗೆ ಬೇಕಾದರೂ ಬಳಸಬಹುದು ಎನ್ನುವುದು ಈವತ್ತು ನಮಗೆ ದೊಡ್ಡ ತೊಡಕಾಗಿದೆ. ಜಾಗತೀಕರಣ ಮತ್ತು ಭವಿಷ್ಯತ್ತಿನ ಪರಿಣಾಮವನ್ನು ನಾವು ಈಗ ಹೇಗೆ ನೋಡಬಹುದು ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗಿದೆ. ಯಾವುದು ಈಗ ಖಾಲಿಯಾದ ಜಾಗವಾಗಿದೆಯೋ ಅದನ್ನು ಸಂಸ್ಕೃತಿಯ ಹೆಸರಿನಲ್ಲಿ ಕೋಮುವಾದಿಗಳು ತುಂಬುತ್ತಿದ್ದಾರೆ. ಅವರ ಮಟ್ಟಿಗೆ ಅದು ಸವಾಲು ಯಾಕೆಂದರೆ ಅವರಿಗೆ ಸಂಸ್ಕೃತಿಯು ಒಂದು ನೆಪ ಮಾತ್ರವೇ ಆಗಿರುತ್ತದೆ. ಕೋಮುವಾದ ಸಂಸ್ಕೃತಿಯ ಹೆಸರಿನಲ್ಲಿ ಮಾಡುವ ಕೆಲಸವನ್ನು ನೋಡಿದರೆ ಇದರ ಅರ್ಥವು ತಿಳಿಯುತ್ತದೆ. ಅದು ಗತವನ್ನು ವೈಭವೀಕರಿಸುತ್ತದೆ. ಆದರೆ ಅದರಲ್ಲಿ ಬರುವ ಗತವು ಒಂದು ನಿರ್ದಿಷ್ಟವಾದ ವ್ಯಾಖ್ಯೆಗೆ ಸಿಕ್ಕಿ ಹಾಕಿಕೊಂಡಿದೆ. ಅದನ್ನು ನೋಡುವುದು ಅಂದರೆ ಕೋಮುವಾದಿಗಳ ನಿಯಮವನ್ನು ಮಾತ್ರವೇ ನೋಡುವುದು ಹೌದು. ವಾಸ್ತವವಾಗಿ ಸಂಸ್ಕೃತಿಯನ್ನು ಹೆಚ್ಚು ವೈಭವೀಕರಿಸಬೇಕಾಗಿಯೂ ಇಲ್ಲ. ಅದರ ವಿವರಣೆಗಳಲ್ಲಿ ಭಿನ್ನತೆಗಳು ಇವೆ. ಹಾಗೆಂದು ಅದು ಎಲ್ಲವನ್ನು ತುಂಬುವ ಗೋಣಿಚೀಲವು ಅಲ್ಲ. ನಮಗೆ ರಾಷ್ಟ್ರೀಯತೆಯು ಅನೇಕವನ್ನು ಹೇಳಿದೆ. ಅದು ಸಮೂಹವನ್ನು ಗುರುತಿಸಲು ಒಂದು ಮಾನದಂಡವನ್ನು ಕೊಟ್ಟಿರುವುದು ನಿಜ. ಒಂದನ್ನು ಸಮಷ್ಟಿಯಾಗಿ ನೋಡಿ ಎಂದು ವಿವರಿಸಿದೆ. ಸಂಸ್ಕೃತಿ ಮತ್ತು ಅದರ ಮೌಲ್ಯವನ್ನು ಅದು ನೋಡಿದ ಕ್ರಮವು ಬೇರೆ. ಈವತ್ತು ರಾಷ್ಟ್ರವು ಆತಂಕಕಾರಿಯಾಗಿರುವುದೂ ಸತ್ಯ. ಕೆಲವರಿಗೆ ಮಾತ್ರವೇ ಇರುವ ರಾಷ್ಟ್ರವೆಂದು ಕೋಮುವಾದವು ಹೇಳುತ್ತದೆ. ಧರ್ಮ ಮತ್ತು ರಾಷ್ಟ್ರವನ್ನು ರಾಷ್ಟ್ರೀಯತೆಯ ಆಂದೋಲನವು ಹೇಳಿದ್ದಕ್ಕೂ ಈಗ ನಡೆಯುತ್ತಿರುವುದಕ್ಕೂ ಕೆಲವು ವ್ಯತ್ಯಾಸಗಳು ಇವೆ. ರಾಷ್ಟ್ರೀಯತೆಯು ಧರ್ಮವನ್ನು ಹೆಚ್ಚು ಸಾಮಾಜೀಕರಣ ಮಾಡಲು ಯತ್ನವನ್ನು ಮಾಡಿತು. ಹಿಂದೂ ಎನ್ನುವುದನ್ನು ರಾಷ್ಟ್ರೀಯತೆಯು ಬಳಸಿಕೊಂಡ ಕ್ರಮವು ಬೇರೆಯಾಗಿದೆ. ಆದರೆ ಈಗ ಕೋಮುವಾದವು ಹೇಳಿಕೊಳ್ಳುತ್ತಿರುವ ಕ್ರಮವು ಬೇರೆಯಾಗಿದೆ. ಆಗಿನ ರಾಷ್ಟ್ರೀಯತೆಯು ಆಗಿನ ಚಾರಿತ್ರಿಕ ತುರ್ತು. ಆದರೆ ಈಗ ಪರಿಸ್ಥಿತಿಯು ಬದಲಾಗಿದೆ.

ಹಾಗೆಯೇ ವಾಸ್ತವವಾಗಿ ಒಂದು ಸಂಗತಿಯನ್ನು ಇಲ್ಲ ಹೇಳಬಹುದು– ನಮಗೆ ಬೇಂದ್ರೆಯವರು ಬರೆದ ಅನೇಕ ಪದ್ಯಗಳು ಈವತ್ತು ಒಂದು ಚರಿತ್ರೆಯನ್ನು ಕಟ್ಟಿಕೊಡುತ್ತವೆ.

ಅದರಲ್ಲಿ ಒಂದು ರಾಷ್ಟ್ರ ಮತ್ತು ಅದರ ಚರಿತ್ರೆಯು ಇದೆ. ಅದರಲ್ಲಿ ಹುಬ್ಬಳ್ಳಿ ಮತ್ತು ಅದರ ಚಿತ್ರಣವೂ ಇದೆ. ಒಂದು ಪಾತರಗಿತ್ತಿಯ ಕತೆಯೂ ಇದೆ. ಒಂದು ಹೂತ ಹುಣಿಸೆಯ ಚರಿತ್ರೆಯು ಇದೆ. ಅಂದರೆ ಬೇಂದ್ರೆಯವರು ನಮಗೆ ಅತ್ಯಂತ ಮೌಲಿಕವಾದ ಸಂಗತಿಯನ್ನು ಕೊಟ್ಟಿದ್ದಾರೆ. ರಾಷ್ಟ್ರೀಯತೆ ಮತ್ತು ರೊಮ್ಯಾಂಟಿಸಿಸಂನ್ನು ಅತ್ಯಂತ ವಿಶಿಷ್ಟವಾದ ಒಂದು ಎರಕವನ್ನಾಗಿ ಮಾಡಿಕೊಂಡು ಅವರು ತೋರಿಸಿದ್ದಾರೆ. ಅವರ ರಾಗರತಿ ಮತ್ತು ಹುಬ್ಬಳ್ಳಿಯಾಂವ ಪದ್ಯಗಳು ಒಪ್ಪಿತವಾದ ಒಂದು ಮೌಲ್ಯವನ್ನು ಹೇಳುವುದು ಇಲ್ಲ. ಅದರಲ್ಲಿ ಬೇರೆ ಮೌಲ್ಯಗಳು ಸೇರಿಕೊಂಡಿವೆ. ವ್ಯಕ್ತಿ, ಚರಿತ್ರೆ, ನೀತಿ, ರಾಜಕಾರಣ, ಸೌಂದರ್ಯಶಾಸ್ತ್ರಗಳು ಜೊತೆಗೆ ಹೋಗುತ್ತವೆ. ಇದರ ಜೊತೆಗೆ ಅವರು ಜೀವನ ಮತ್ತು ಅದರ ಮೌಲ್ಯಗಳನ್ನು ಹೇಳುತ್ತವೆ. ಒಂದು ಆದರ್ಶವೂ ಇದೆ. ಅದು ನಮಗೆ ಅನೇಕ ತಿಳುವಳಿಕೆಯನ್ನು ಕೊಟ್ಟಿವೆ. ಇಲ್ಲಿ ಚರಿತ್ರೆಯ ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಚರಿತ್ರೆಯು ಆಗಿದೆ ಮತ್ತು ಅದರಲ್ಲಿ ಅನೇಕ ಘಟನೆಗಳು ಸಂಭವಿಸಿವೆ. ಆದರೆ ಅದನ್ನು ನಾವು ಕೇವಲ ನಮ್ಮ ಪ್ರಮೇಯದ ಮೂಲಕವೇ ನೋಡಲು ಬರುವುದು ಇಲ್ಲ. ಅದು ಹೇಳಿಕೆಯು ಆಗಿಲ್ಲ. ಆದ್ದರಿಂದ ಅದನ್ನು ಕೇವಲ ಪ್ರಮೇಯದ ಮೂಲಕವೇ ಹೇಳುವುದು ಅಸಾಧ್ಯ. ನಮ್ಮ ವರ್ತಮಾನದ ಜ್ಞಾನವು ಮಾತ್ರವೇ ಸಾಕಾಗುವುದು ಇಲ್ಲ. ಅದರಲ್ಲಿ ಭಿನ್ನತೆಗಳು ಇರುವುದು ಮೂಲಭೂತವಾಗಿ ನಮ್ಮ ತಾತ್ವಿಕತೆಯದು. ಆದರೆ ಇಲ್ಲಿ ಉದ್ಭವಿಸುವ ಕೆಲವು ವಿಚಾರಗಳನ್ನು ಹೇಳುವುದು ಒಳ್ಳೆಯದು. ಜಾಗತಿಕ ಚರಿತ್ರೆ ಮತ್ತು ಅದರ ಪರಿಣಾಮಗಳು ಎಲ್ಲಾ ಕಡೆಗೆ ಆಗುತ್ತದೆ. ಆದರೆ ಇಲ್ಲಿ ಮತ್ತೆ ಮತ್ತೆ ನಾವು ಕೆಲವು ಸಂಗತಿಗಳನ್ನು ನೋಡಬೇಕಾಗುತ್ತದೆ. ಆದರೆ ಇಲ್ಲಿ ಜಾಗತಿಕತೆ ಮತ್ತು ಅದರ ವೈರುಧ್ಯಗಳು ಸಾಮಾನ್ಯವಾದ ಬಗೆಯದು ಅಲ್ಲ. ಅದರಲ್ಲಿ ಬೇರೆ ಬೇರೆ ರೂಪಗಳು ಇರುತ್ತವೆ. ಆದರೆ ನಾವು ಇದನ್ನು ಒಂದು ರೂಪವೆಂದು ಮಾತ್ರವೇ ಬಗೆದರೆ ಕಷ್ಟವಾಗುತ್ತದೆ. ವಾಸ್ತವವಾಗಿ ಯಾವುದನ್ನೇ ನೋಡಿದರೂ ಅದನ್ನು ಸಂವಾದಿಯೆಂದು ಹೇಳುವ ಅಭ್ಯಾಸವು ಇತ್ತೀಚೆಗೆ ಹೆಚ್ಚಾಗಿದೆ. ಆಧುನಿಕತೆಯನ್ನು ಹೊಗಳುವವರ ಸಮಸ್ಯೆಗಳು ಕೂಡಾ ಹೆಚ್ಚಾಗಿದೆ. ವಾಸ್ತವವಾಗಿ ನಾವು ಈವತ್ತು ಚರಿತ್ರೆಯೆಂದು ಹೇಳುತ್ತಾ ಒಂದು ಮಿಥ್ಯೆಯನ್ನು ಮಾತ್ರವೇ ಸಂಭ್ರಮಿಸುತ್ತಿದ್ದೇವೆ. ಅದರ ಅರ್ಥವೂ ಭಿನ್ನವಾಗಿದೆ. ಹಾಗೂ ಪ್ರಾಚೀನ ಮತ್ತು ಮಧ್ಯಕಾಲೀನ, ಆಧುನಿಕವೆಂದು ಕರೆಯುವಾಗ ನಾವು ಬೇರೆ ಬೇರೆ ಪರಿಕರವನ್ನು ಬಳಸಿಕೊಂಡಿದ್ದೇವೆ. ಆಧುನಿಕವೆಂದರೆ ಪುನರುಜ್ಜೀವನ ಮತ್ತು ಅದರ ಪರಿಣಾಮಗಳನ್ನು ಮಾತ್ರವೇ ಹೇಳುತ್ತೇವೆ. ಅಂದರೆ ಆಧುನಿಕವೆನ್ನುವುದಕ್ಕೆ ನಮ್ಮಲ್ಲಿ ಪರಿಕರವು ಯಾವುದು ಬದಲಾಗಿದೆಯೋ ಅದು ಮಾತ್ರವೇ ನಮಗೆ ಮುಖ್ಯವಾಗಬೇಕಾಯಿತು. ಮಧ್ಯಯುಗೀನ ಕಾಲದಲ್ಲಿ ನಾಗರಿಕತೆ ಮತ್ತು ಅದರ ತಾಂತ್ರಿಕತೆಯು ಹೆಚ್ಚು ಮುಖ್ಯವಾಯಿತು. ವಾಸ್ತವವಾಗಿ ಮಧ್ಯಯುಗೀನ ಕಾಲದಲ್ಲಿ ತಾಂತ್ರಿಕತೆಯು ಹೆಚ್ಚು ಮುಖ್ಯವಾಯಿತು. ಚರಿತ್ರೆಯ ವರ್ಗೀಕರಣದಲ್ಲಿ ಪರಿಕಲ್ಪನೆಗಳು ಹೆಚ್ಚು ಕೆಲಸವನ್ನು ಮಾಡಿವೆ. ಕ್ರಿಸ್ತ ಪೂರ್ವ ಮತ್ತು ಕ್ರಿಸ್ತಶಕವೆಂದು ಹೇಳುವಾಗ ನಮಗೆ ಕ್ರಿಸ್ತ ಮತ್ತು ಅವನ ಹುಟ್ಟು ಮಾತ್ರವೇ ಮುಖ್ಯವಾಯಿತು. ಈ ಮಾನದಂಡವನ್ನು ವಾಸ್ತವವಾಗಿ ಪಾದ್ರಿಗಳು ಮಾಡಿದರು. ಅದೇ ರೀತಿಯಲ್ಲಿ ರೋಮನ್ ಪ್ರಭುತ್ವ ಎಂದು ಕರೆಯುವಾಗ ರಾಜಪ್ರಭುತ್ವವು ಮಾತ್ರವೇ ನಮಗೆ ಮುಖ್ಯವಾಯಿತು. ರಾಜಪ್ರಭುತ್ವ

ಮತ್ತು ಅದರ ಅಧಿಕಾರವು ಮಾತ್ರವೇ ಈ ಗಣನೆಗೆ ಕಾರಣವೂ ಆಯಿತು. ಇವುಗಳಲ್ಲಿ ಯಾವುದು ಮೂಲಭೂತವಾಗಿ ನಮಗೆ ಅತ್ಯಂತ ಮುಖ್ಯವಾಯಿತು ಎಂದರೆ ಯಾವುದು ನಮ್ಮ ಎದುರಿನಲ್ಲಿ ಹಾಜರಾಗಿದೆಯೋ ಅದನ್ನು ಮಾತ್ರವೇ ಗಣಿಸಲಾಯಿತು. ಆಧುನಿಕ ಮತ್ತು ಪ್ರಾಚೀನವೆಂದು ಹೇಳುವಾಗ ನಮಗೆ ಯಾವುದು ಮಾನದಂಡವಾಗಿದೆ ಎನ್ನುವುದು ಅಷ್ಟೇ ಮುಖ್ಯ. ಹಾಗೆ ನೋಡುವುದಿದ್ದರೆ ಯಾವುದೇ ವರ್ಗೀಕರಣಗಳು ತನ್ನದೇ ಆದ ತಾತ್ವಿಕತೆಯನ್ನು ಕಟ್ಟಿಕೊಂಡಿರುತ್ತವೆ. ಅದರ ಆಧಾರದ ಮೇಲೆ ಪ್ರತಿವಾದವನ್ನು ಹುಟ್ಟು ಹಾಕುತ್ತವೆ. ಆಧುನಿಕ ಮತ್ತು ಮಧ್ಯಕಾಲೀನ ಎಂದು ಕರೆಯುವಾಗ ರಾಜಕೀಯವಾದ ಪರಿಭಾಷೆಯೂ ಬಂದಿದೆ. ಈವತ್ತು ಯಾವುದನ್ನು ವೈಜ್ಞಾನಿಕ ಮತ್ತು ವಸ್ತುನಿಷ್ಟವಾದ ಪಂಥಗಳು ಎಂದು ಹೇಳುತ್ತೇವೆಯೋ ಅದು ಕೂಡಾ ನಿರ್ದಿಷ್ಟವಾದ ತಾತ್ವಿಕತೆಯನ್ನು ಹೊಂದಿದೆ. ಈಗಿನ ವೈಜ್ಞಾನಿಕತೆ ಎನ್ನುವುದು ಮೂಲಭೂತವಾಗಿ ರಾಚನಿಕತೆಯನ್ನು ಹೇಳುತ್ತದೆ. ಅದರಲ್ಲಿ ರಾಚನಿಕತೆಯ ಏಕತೆಯ ಪ್ರಶ್ನೆಯೂ ಬಂದಿದೆ. ಆಫ್ರಿಕಾ, ಯರೋಪ್, ಏಶಿಯಾ, ಅಮೇರಿಕ, ಮುಂತಾದ ಪ್ರಶ್ನೆಗಳು ಬಂದಾಗ ನಾವು ಅದರ ರಾಚನಿಕವಾದ ಗುಣವನ್ನು ಮಾತ್ರವೇ ಹೇಳುತ್ತೇವೆ. ಅದು ತೊಡಕಿನದೂ ಹೌದು. ಆಫ್ರಿಕಾ ಚರಿತ್ರೆ, ಭಾರತದ ಚರಿತ್ರೆ ಮುಂತಾದ ವರ್ಗೀಕರಣಗಳು ಕೆಲವು ಸೀಮಾರೇಖೆಯನ್ನು ಹೇಳುತ್ತವೆ. ಅದರಲ್ಲಿ ಗಡಿಗಳು ಮಾತ್ರವೇ ಮುಖ್ಯವಾಗುತ್ತವೆ. ಭಾರತದ ಜನರು, ಅಮೇರಿಕಾದ ಜನರು, ರಷ್ಯಾದ ಜನರು ಮುಂತಾದ ವರ್ಗೀಕರಣಗಳು ಮೂಲಭೂತವಾಗಿ ಈ ಸೀಮೆಯನ್ನು ಹೇಗೆ ವಿವರಿಸುತ್ತಿವೆ ಎನ್ನುವುದೂ ಅಷ್ಟೇ ಸತ್ಯ. ಆದರೆ ಅದು ದೇಹದ ಪ್ರಜ್ಞೆಯಲ್ಲ. ವ್ಯಕ್ತಿ ಮತ್ತು ಅವನ ದೇಹದ ಪ್ರಶ್ನೆಯು ಮೂಲಭೂತವಾಗಿ ಜೀವಶಾಸ್ತ್ರದ ಪ್ರಶ್ನೆ ಅಷ್ಟೇ. ಜೀವಶಾಸ್ತ್ರವು ಮನುಷ್ಯ ಮತ್ತು ಅವನ ಹಿಂದೆ ಏನೇನು ವಿಕಾಸವಾಗಿದೆಯೋ ಅದನ್ನು ಹೇಳುತ್ತದೆ. ಆದರೆ ಮನುಷ್ಯ ಮತ್ತು ಅವನ ಬುದ್ಧಿವಂತಿಕೆಯು ಕೂಡಾ ಬೆಳೆದು ಬಂದಿದೆ. ಅದರಲ್ಲಿ ವ್ಯಕ್ತಿತ್ವ ಮತ್ತು ಅವನ ಚರಿತ್ರೆಯು ಬಂದಿದೆ. ಅವನು ಚರಿತ್ರೆಯನ್ನು ರೂಪಿಸಿದ್ದಾನೆ. ಅವನಿಗೆ ಅದರ ಅಗತ್ಯವೂ ಆಗಿದೆ. ಅದರ ಮೂಲಕವೇ ಅವನು ಅನೇಕವನ್ನು ಸಾಧಿಸಿದ್ದಾನೆ. ಚರಿತ್ರೆಯು ಬೇರೆ ಬೇರೆ ರೂಪಗಳ ಮೂಲಕವೇ ಬೆಳೆದು ಬಂದಿದೆ. ಸಮಾಜದಲ್ಲಿ ಒಂದು ವಿಶಿಷ್ಟತೆಯು ಇದೆ. ಅದರಲ್ಲಿ ಆದರ್ಶವೂ ಇದೆ. ನೈತಿಕತೆ ಮತ್ತು ಅದರ ಸ್ವರೂಪವೂ ಬೆಳೆದು ಬಂದಿದೆ. ನೀತಿ ಮತ್ತು ಅದರ ಪರಿಣಾಮಗಳಿಗೆ ಬೇರೆ ಬೇರೆ ಆಯಾಮವೂ ಇರುವುದರಿಂದ ಅದು ಚರಿತ್ರೆಯ ಒಳಗೆ ಬರುತ್ತದೆ. ನೀತಿ ಮತ್ತು ಅದರ ಸಾಧ್ಯತೆಗಳು ವಾಸ್ತವವಾಗಿ ಒಂದು ಸಮಾಜದಲ್ಲಿ ವಿಶಿಷ್ಟವಾದ ಕೆಲಸವನ್ನು ಮಾಡುತ್ತದೆ. ಅದರಲ್ಲಿ ಕೆಲವು ನಿಯಮವು ಇರುತ್ತದೆ. ನೀತಿಯು ವಾಸ್ತವವಾಗಿ ಕೆಲವನ್ನು ಹೇಳುತ್ತದೆ. ಅದರಲ್ಲಿ ಅಂತಸ್ಥವಾದ ನಿಯಮವೂ ಇರುತ್ತದೆ. ಅದರಲ್ಲಿ ಕಟ್ಟುಕಟ್ಟಳೆಗಳೂ ಇರುತ್ತವೆ. ವಾಸ್ತವವಾಗಿ ಯಾವುದೇ ಸಂಗತಿಯು ಕೆಲಸವನ್ನು ಮಾಡುವುದು ಆಯಾ ಸನ್ನಿವೇಶವನ್ನು ಆಧರಿಸಿಕೊಂಡು ಎನ್ನುವುದು ಇಲ್ಲಿ ಮುಖ್ಯವಾದ ಸಂಗತಿಯೂ ಹೌದು. ವ್ಯಕ್ತಿ ಮತ್ತು ನಡತೆಯನ್ನು ಅದು ಹೇಳುತ್ತದೆ. ಅದರಲ್ಲಿ ಬರುವ ಸಂಗತಿಗಳು ಆಯಾ ಕಾಲಕ್ಕೆ ಬೇರೆಯೂ ಆಗಬಹುದು. ಆದರೆ ಅದರ ಅಗತ್ಯವನ್ನು ಸಮಾಜವು ಇಷ್ಟಪಡುತ್ತದೆ. ಜೀವನ ಮತ್ತು ಅದರ ಧೋರಣೆಯನ್ನು ಕೂಡಾ ಅದು ಹೇಳುತ್ತದೆ. ಮೌಲ್ಯ ಮತ್ತು

ಅದರ ಪರಿಣಾಮವನ್ನು ಸಮಾಜದ ಮೇಲೆ ಕಾಣುತ್ತೇವೆ. ಅದರಲ್ಲಿ ನಿರ್ದಿಷ್ಟವಾದ ಉದ್ದೇಶವೂ ಇರುತ್ತದೆ. ಈ ಉದ್ದೇಶವನ್ನು ನಾವು ನಡೆ ಮತ್ತು ನುಡಿಗಳಲ್ಲಿ ಕಾಣುತ್ತೇವೆ. ಹೀಗಾಗಿ ಸಮಾಜದಲ್ಲಿ ಇರುವ ಅನೇಕ ಆದರ್ಶಗಳನ್ನು ನಾವು ಒಂದು ಚರಿತ್ರೆಯ ಮೂಲಕವೂ ಕಾಣಲು ಸಾಧ್ಯವಾಗುತ್ತದೆ. ನೀತಿ ಮತ್ತು ಅದರ ವಾಸ್ತವವಾದವು ಬೇರೆಯೂ ಹೌದು. ಅದರಲ್ಲಿ ನೀತಿಯನ್ನು ಒಂದು ಸಮಾಜ ಮತ್ತು ಅದರ ವಿಸ್ತರಣೆಯಲ್ಲಿಯೂ ಕಾಣಬಹುದು. ಇದನ್ನೇ ಅನೇಕ ಬುದ್ಧಿಜೀವಿಗಳು ನಮಗೆ ಬೇರೆ ರೀತಿಯಲ್ಲಿ ಹೇಳುತ್ತಾರೆ. ಅವರ ಪ್ರಕಾರ ಅದು ಬೇರೆಯಾಗುತ್ತದೆ. ನಮ್ಮ ಅನೇಕ ಆದರ್ಶವಾದಿಗಳು ಚರಿತ್ರೆಯನ್ನು ಬುದ್ಧಿಜೀವಿಗಳಿಗೆ ಅನುಗುಣವಾಗಿಯೂ ನೋಡುವುದು ಸತ್ಯ. ಆದರೆ ಆದರ್ಶವಾದಿಗಳು ಚರಿತ್ರೆಯನ್ನು ವೈಭವೀಕರಿಸುವುದೂ ಅಷ್ಟೇ ನಿಜವಾಗಿದೆ. ಅದರಲ್ಲಿ ವೈಭವೀಕರಣವು ಇದೆ. ಆದರೆ ನಿಜವು ಕಡಿಮೆಯಿರುತ್ತದೆ. ಭೌತಿಕವಾದಿ ವಿವರಣೆಯು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಅದು ಉತ್ಪಾದನೆಯನ್ನು ಮತ್ತು ಅದರ ಪರಿಣಾಮವನ್ನು ನೋಡುತ್ತದೆ. ಯಾವುದು ನಿಜವಾಗಿಯೂ ಚರಿತ್ರೆಯಲ್ಲಿ ನಡೆಯುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ನಿಜವಾದ ಚರಿತ್ರೆಯು ವಾಸ್ತವವಾಗಿ ಭಿನ್ನವಾದ ನೆಲೆಯನ್ನು ಹೇಳುತ್ತದೆ. ಯಾವುದು ನಿಜವಾದ ಚರಿತ್ರೆಯು ಆಗಿದೆಯೋ ಅದರ ಸ್ವರೂಪವು ಜನರ ಮೇಲೆ ಬೇರೆ ಬೇರೆ ಪರಿಣಾಮವನ್ನು ಬೀರುತ್ತದೆ. ಚರಿತ್ರೆಯು ಸುಮ್ಮನೆ ನಡೆಯುವುದೂ ಇಲ್ಲ. ಅದು ಆಕಸ್ಮಿಕವಾದ ಒಂದು ಘಟನೆಯು ಅಲ್ಲ. ಅದರಲ್ಲಿ ಬೇರೆ ನೆಲೆಗಳು ಇರುತ್ತವೆ. ಬದಲಾವಣೆಯು ಬೇರೆ ಬೇರೆ ಸಂಸ್ಥೆಗಳು ಬೆಳೆಯುವ ಕ್ರಮದಲ್ಲಿಯೂ ಕಾಣಬಹುದು. ಸಂಸ್ಥೆಗಳು ನಿಧಾನವಾಗಿ ಬದಲಾಗುತ್ತವೆ. ಯಾವುದೇ ದೇಶದಲ್ಲಿ ಉದಾರವಾದಿಗಳು ಚರಿತ್ರೆಯನ್ನು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಅದರಲ್ಲಿ ಕಾರ್ಯ ಮತ್ತು ಕಾರಣಗಳ ಸಂಬಂಧವನ್ನು ನೋಡುವ ಕ್ರಮವು ಬೇರೆಯಾಗುತ್ತದೆ. ಅವರು ಕಾರಣವನ್ನು ನೋಡಲು ಹೋಗಲು ಹೋಗುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ಈ ಅರ್ಥದಲ್ಲಿ ಸಮಾಜ ಮತ್ತು ಅದರ ಚರಿತ್ರೆಯಲ್ಲಿ ಆರ್ಥಿಕತೆಯು ಅತ್ಯಂತ ಮಹತ್ವದ್ದೂ ಹೌದು. ಮನುಷ್ಯ ಮತ್ತು ಅವನ ವರ್ತನೆಗೆ ಅನುಸಾರವಾಗಿಯೇ ಸಮಾಜವು ಬದಲಾಗುತ್ತದೆ. ಭೌತಿಕವಾದ ಚರಿತ್ರೆಯು ಜೀವನವನ್ನು ರೂಪಿಸುತ್ತದೆ. ಆದ್ದರಿಂದ ವ್ಯಕ್ತಿ ಮತ್ತು ಅವನ ಮನೋಸ್ಥಿತಿಯನ್ನು ನಾವು ಪ್ರತ್ಯೇಕವಾಗಿಯೂ ನೋಡಲು ಬರುವುದು ಇಲ್ಲ. ವ್ಯಕ್ತಿಯು ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿಯು ಮಾತ್ರವೇ ಆಗಿರುತ್ತಾನೆ. ಅವನ ಮನೋಸ್ಥಿತಿ ಮತ್ತು ಅವನ ಜೀವನವು ಸಮಾಜದ ಭಾಗವೇ ಆಗಿರುತ್ತದೆ. ನಾವು ಯಾವ ಕಡೆಗೆ ಚಲಿಸುತ್ತೇವೆ ಮತ್ತು ನಮ್ಮ ಗುರಿಯು ಯಾವುದು ಎನ್ನುವುದು ಮುಖ್ಯವಾದ ಅಂಶ. ಈ ದೃಷ್ಟಿಯಿಂದ ನಾವು ನಮ್ಮ ಅಗತ್ಯಕ್ಕಾಗಿ ಕೆಲಸವನ್ನು ಮಾಡುತ್ತೇವೆ. ವ್ಯಕ್ತಿ ಮತ್ತು ಅವನ ಭಾವನೆಗಳು ಸಮಾಜದಿಂದ ಹುಟ್ಟುತ್ತದೆ. ಅದರ ಅಗತ್ಯವಿರುತ್ತದೆ. ಆದ್ದರಿಂದ ಯಾವುದೇ ಬೌದ್ಧಿಕವಾದ ಒತ್ತಡವನ್ನು ನಾವು ನಿರಾಕರಿಸಲು ಬರುವುದು ಇಲ್ಲ. ಬುದ್ಧಿಜೀವಿಗಳು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಚರಿತ್ರೆಯು ಒಂದು ಅಂತರ್ ಪ್ರವಾಹವೂ ಆಗಿದೆ. ಅದರಲ್ಲಿ ಬೇರೆ ಬೇರೆ ಅರ್ಥವೂ ಇರುತ್ತದೆ. ಅದು ನಮ್ಮ ಪ್ರಾಚೀನತೆಯನ್ನು ಹೇಳುತ್ತದೆ. ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಂಬಂಧಗಳು ಇರುತ್ತವೆ. ಮತ್ತು ಆ ಸಂಬಂಧವನ್ನು

ನಾವು ಆರ್ಥಿಕತೆಯಲ್ಲಿ, ಕಾನೂನಿನಲ್ಲಿ, ಕಲೆಯಲ್ಲಿ, ಧರ್ಮದಲ್ಲಿ, ತತ್ವಜ್ಞಾನದಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಕಾಣುತ್ತೇವೆ. ಚರಿತ್ರೆಯು ಒಂದು ದೃಷ್ಟಿಯಿಂದ ನಮ್ಮ ಅಭಿವ್ಯಕ್ತಿಯೂ ಆಗುತ್ತದೆ. ಅದರಲ್ಲಿ ಭಿನ್ನತೆಗಳು ಇವೆ. ಜೀವನ ಮತ್ತು ಚರಿತ್ರೆಯು ಜೊತೆಗೆ ಸಾಗುತ್ತವೆ. ನಾವು ಯಾವುದರ ಕುರಿತು ಹೇಳುತ್ತೇವೆಯೋ ಅದು ಕೂಡಾ ಚರಿತ್ರೆಯ ಭಾಗವೇ ಆಗಿರುತ್ತದೆ. ಅದರಲ್ಲಿ ಅರ್ಥವಂತಿಕೆಯು ಇರುತ್ತದೆ ಎನ್ನುವುದನ್ನು ಮರೆಯಲು ಬರುವುದು ಇಲ್ಲ. ಚಾರಿತ್ರಿಕ ಸಂಕೀರ್ಣತೆಯು ನಮ್ಮನ್ನು ಬೇರೆ ಬೇರೆ ವಿಧವಾಗಿಯೂ ರೂಪಿಸುತ್ತದೆ. ಚರಿತ್ರೆ ಎನ್ನುವುದು ಮೂಲಭೂತವಾಗಿ ಜೀವನದ ಕಥನವೂ ಹೌದು. ಸಮಕಾಲೀನವಾದ ಸಮಾಜವೂ ಚರಿತ್ರೆಯಿಂದ ಪ್ರೇರಣೆಯನ್ನು ಪಡೆಯುತ್ತದೆ. ಅದು ಅದರ ಅಗತ್ಯವಾಗಿದೆ. ಅದೇ ರೀತಿಯಲ್ಲಿ ಪ್ರಭುತ್ವಕ್ಕೂ, ಸಮಾಜಕ್ಕೂ ಒಂದು ಸಂಬಂಧವಿದೆ. ಅದರಲ್ಲಿ ಕೆಲವು ಒತ್ತಡಗಳು ಕೆಲಸವನ್ನು ಮಾಡುತ್ತವೆ. ಅಂತರ್ರಾಷ್ಟ್ರೀಯವಾದ ಸಂಗತಿಗಳು ಅತ್ಯಂತ ಪ್ರಭಾವಶಾಲಿ. ಅದರಲ್ಲಿ ಅನೇಕವು ಒಂದು ದೇಶ ಮತ್ತು ಒಂದು ಗಡಿಯೆಂದು ನಿಲ್ಲುವುದು ಇಲ್ಲ. ಅಂತರ್‌ರಾಷ್ಟ್ರೀಯ ಸಂಗತಿಗಳು ವರ್ಗಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ಆರ್ಥಿಕವಾದ ಪರಿಸ್ಥಿತಿಗಳು ಕೂಡಾ ವರ್ತಮಾನದ ಮೇಲೆ ಪ್ರಭಾವವನ್ನು ಬೀರುತ್ತದೆ. ರಾಜಕೀಯ ಕೂಡಾ ಕೆಲವು ಹೊಂದಾಣಿಕೆಯನ್ನು ಮಾಡುತ್ತವೆ. ಒಂದು ಸಮಾಜವೆಂದರೆ ಅದರಲ್ಲಿ ಒಂದು ಒಕ್ಕೂಟವೂ ಇರುತ್ತದೆ ಎನ್ನುವುದನ್ನು ಮರೆಯಲು ಬರುವುದು ಇಲ್ಲ. ಇದಕ್ಕೆ ಪೂರಕವಾಗಿ ಹೇಳುವುದಿದ್ದರೆ ಮಹಾಯುದ್ಧವು ಒಂದು ಕಾಲದಲ್ಲಿ ಇಡೀ ಜಗತ್ತನ್ನು ಪ್ರಭಾವಿಸಿತು. ಅದು ತಕ್ಷಣದ ಪ್ರಭಾವವನ್ನು ಬೀರಿತು. ಆದರೆ ಈವತ್ತು ಅದು ನೆನಪೂ ಆಗಿದೆ. ಮತ್ತು ಅದರ ಪರಿಣಾಮವೂ ಅತ್ಯಂತ ಘೋರವಾದ್ದರಿಂದ ಅದರ ನೆನಪು ನಮಗೆ ಮರೆಯಲು ಸಾಧ್ಯವೂ ಆಗಲಿಲ್ಲ. ಉತ್ಪಾದನೆ ಮತ್ತು ಅದರ ರೂಪಗಳು ಕೂಡಾ ಮಹತ್ವದ ಪ್ರಭಾವವನ್ನು ಬೀರುತ್ತದೆ. ಆದರೆ ಈ ಪ್ರಭಾವವನ್ನು ನಾವು ಈವತ್ತು ಬರೀ ಒಂದು ಪ್ರತಿಕ್ರಿಯೆ ಎಂದು ಭಾವಿಸಬಾರದು. ಅಂದರೆ ಯಾರೂ ಒಬ್ಬರೂ ಉತ್ಪಾದನೆ ಮತ್ತು ಅದರ ಪರಿಣಾಮಗಳನ್ನು ತಕ್ಷಣವೇ ಎದುರಿಸುವುದು ಇಲ್ಲ. ಹಾಗೆ ನೋಡುವುದಿದ್ದರೆ ಶಾಲೆ, ಕಾಲೇಜು, ಆಚರಣೆಗಳು, ಧರ್ಮ ಮುಂತಾದವು ಒಟ್ಟಿಗೆ ಒಂದೇ ಕ್ಷಣದಲ್ಲಿ ಬದಲಾಗುವುದು ಇಲ್ಲ. ಅವುಗಳು ನಿಧಾನವಾಗಿಯೇ ಪರಿವರ್ತನೆಯನ್ನು ಹೊಂದುತ್ತವೆ. ಮತ್ತು ಕೆಲವು ಸಾಂಸ್ಕೃತಿಕ ಸಮಸ್ಯೆಗಳು ಒಂದು ನಿಮಿಶದಲ್ಲಿ ಬದಲಾಗುವುದು ಸಾಧ್ಯವಿಲ್ಲ. ಆದರೆ ಅವುಗಳು ಕೆಲವು ಸೂಚನೆಗಳನ್ನು ಕೊಡುತ್ತವೆ. ನಮ್ಮ ಜೀವನಕ್ರಮದ ಮೇಲೆ ಕೆಲವು ರೀತಿಯ ಸಾಂಸ್ಕೃತಿಕ ರೂಪಗಳು ಕೆಲಸವನ್ನು ಮಾಡುತ್ತವೆ. ನಮ್ಮ ನಡತೆ ಮತ್ತು ನಮ್ಮ ಗುಣಗಳು ಸಾಂಸ್ಕೃತಿಕ ರೂಪವನ್ನು ಆಧರಿಸಿಕೊಂಡಿದೆ ಎನ್ನುವುದು ಅಷ್ಟೇ ನಿಜ. ಆದರೆ ಸಂಪ್ರದಾಯಸ್ಥರು ಕೆಲವು ಚೌಕಟ್ಟಿನಲ್ಲಿ ಬದುಕುತ್ತಾರೆ. ಚರಿತ್ರೆ ಮತ್ತು ಅದರ ನಿರ್ಧಾರಾತ್ಮಕವಾದ ಕ್ರಮಗಳು ಅದರ ಮೇಲೆ ಪ್ರಭಾವವನ್ನು ಬೀರಿದರು ಅಂತಿಮವಾಗಿ ನಮಗೆ ಹೆಚ್ಚು ಮುಖ್ಯವಾಗುವುದು ಆರ್ಥಿಕತೆಯೇ. ಆದ್ದರಿಂದ ಅದರ ಅರ್ಥಗಳು ಬೇರೆ ಬೇರೆಯಾಗುತ್ತವೆ. ಆರ್ಥಿಕತೆಯು ವಾಸ್ತವವಾಗಿ ಒಂದು ಸಾಧ್ಯತೆಯೂ ಆಗಿರುತ್ತದೆ. ಅಭಿವೃದ್ಧಿ ಹೊಂದಿದ ದೇಶದಲ್ಲಿ ಚರಿತ್ರೆಯು ಒಂದು ರೀತಿಯಲ್ಲಿ ಇರುತ್ತದೆ. ಅನಭಿವೃದ್ಧಿ ಹೊಂದಿದ ದೇಶಗಳ ಕಥನವು ಮತ್ತೊಂದು ರೀತಿಯಲ್ಲಿ ಇರುತ್ತದೆ. ಚರಿತ್ರೆ ಮತ್ತು

ಅದರ ಅರಿವು ಎನ್ನುವುದು ಅತ್ಯಂತ ಮಹತ್ವದ್ದು. ಅದರ ಜ್ಞಾನವು ಅಂದರೆ ದೇಶ ಮತ್ತು ಅದರ ಜ್ಞಾನ ರೂಪಗಳು ಬೇರೆ ಬೇರೆ ಕೆಲಸವನ್ನು ಮಾಡುತ್ತವೆ. ಜ್ಞಾನ ಮತ್ತು ಅದರ ಸಾಮಾಜಿಕ ಸಂಬಂಧಗಳು ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ್ದೂ ಆಗಿರುವುದೂ ನಿಜ. ಹಾಗೆ ನೋಡುವುದಿದ್ದರೆ ಯಾವುದೇ ಸಮಾಜವು ಒಂದು ವರ್ಗೀಕರಣದ ಮೇಲೆ ನಿಂತಿರುತ್ತವೆ. ಯಾವುದನ್ನು ನಾವು ಈವತ್ತು ವರ್ಗೀಕರಣವೆಂದು ಹೇಳುತ್ತೇವೆಯೋ ಅದರ ರೂಪಗಳಿಗೆ ಬೇರೆ ಆಯಾಮವೂ ಇದೆ. ಅದರಲ್ಲಿ ಜಾತಿ ಇತ್ಯಾದಿಗಳು ಸೇರಿಕೊಂಡಿವೆ. ಆದರೆ ವರ್ಗೀಕರಣಕ್ಕೆ ಕೆಲವು ಚಲನೆಗಳೂ ಇರುತ್ತವೆ. ಪ್ರಭುತ್ವ ಮತ್ತು ಅದರ ಶಕ್ತಿಯು ನಮಗೆ ಕೆಲವನ್ನು ಹೇಳುತ್ತವೆ. ಆದರೆ ವಾಸ್ತವವಾಗಿ ಬುದ್ಧಿಜೀವಿಗಳು ಇರುವ ಪ್ರಭುತ್ವವನ್ನು ಬೆಂಬಲಿಸಿದರೆ ಅದರ ಅಪಾಯವು ಮತ್ತಷ್ಟು ಹೆಚ್ಚಾಗುತ್ತದೆ. ಒಂದು ರೂಪವು ಏನು ಅಸ್ತಿತ್ವದಲ್ಲಿ ಇರುತ್ತದೆಯೋ ಅದನ್ನು ಮುರಿದು ಮತ್ತೊಂದು ರೂಪವು ಹುಟ್ಟುತ್ತದೆ. ಅದರಲ್ಲಿ ಇದು ಮುಖ್ಯವಾಗುತ್ತದೆ. ಮನುಷ್ಯ ಮತ್ತು ಅವನ ನಂಬಿಕೆಗಳು ಹಾಗೂ ಅವನ ನೈತಿಕತೆಯು ಒಂದು ದೃಷ್ಟಿಯಿಂದ ಕೆಲಸವನ್ನು ಮಾಡುತ್ತವೆ. ವ್ಯಕ್ತಿ ಮತ್ತು ಅವನ ನಂಬಿಕೆಗಳು ಸಮಾಜದ ಮೇಲೆ ಪರಿಣಾಮವನ್ನು ಬೀರುತ್ತದೆ. ಆದರೆ ಇವು ಯಾವುದೂ ಸ್ಥಿರವಾದ ಒಂದು ಸಂಗತಿಯು ಅಲ್ಲ. ಅದರಲ್ಲಿ ಚಲನೆಯು ಇರುತ್ತದೆ. ಹಾಗೆ ನೋಡಿದರೆ ಅಧಿಕಾರ ಮತ್ತು ಅದರ ಸಂಬಂಧಗಳು ಒಂದು ರೀತಿಯಲ್ಲಿ ಇರುತ್ತವೆ. ಅದರ ಜೊತೆಗೆ ಮನುಷ್ಯನು ಯಾವ ರೀತಿಯಲ್ಲಿ ವ್ಯವಹರಿಸುತ್ತಾನೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಪ್ರಭುತ್ವವು ತನಗೆ ಬೇಕಾದ್ದನ್ನು ಮಾತ್ರವೇ ರೂಪಿಸುತ್ತದೆ. ಅದರ ಅಗತ್ಯವೇ ಬೇರೆ. ವಾಸ್ತವವಾಗಿ ಯಾವುದೇ ಬದಲಾವಣೆಯು ಸುಮ್ಮನೆ ಉಂಟಾಗುವುದೇ ಇಲ್ಲ. ಪುನರುಜ್ಜೀವನದ ಅನಂತರ ಮನೋಸ್ಥಿತಿಯು ಬದಲಾಯಿತು. ಅದರಲ್ಲಿ ಜೀವನ ಮತ್ತು ಅದರ ಕುರಿತಾಗಿ ತಳೆದಿರುವ ನಿಲುವು ಬೇರೆಯಾಯಿತು. ವರ್ಗ ಮತ್ತು ಅದರ ಹಿಂದೆ ಇರುವ ಸಂಬಂಧಗಳು ಕೂಡಾ ಪುನರ್ ವ್ಯಾಖ್ಯೆಗೆ ಗುರಿಯಾದವು. ವರ್ಗಕ್ಕೂ ಮನೋಸ್ಥಿತಿಗೂ ಒಂದು ಸಂಬಂಧವಿದೆ. ಅದನ್ನು ನಾವು ಅದರ ಪ್ರಕ್ರಿಯೆಯಲ್ಲಿ ನೋಡಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಮನೋಸ್ಥಿತಿಯು ವ್ಯಕ್ತವಾಗುವುದು ನಮ್ಮ ಸಾಮಾಜಿಕ ಚಟುವಟಿಕೆಯಲ್ಲಿಯೇ ಎನ್ನುವುದನ್ನು ಮರೆಯಲು ಆಗುವುದು ಇಲ್ಲ. ಅದರಲ್ಲಿ ಸಮಾಜ ಮತ್ತು ಅದರ ಅರಿವು ಹೆಚ್ಚು ಮುಖ್ಯವಾಗಿದೆ. ಆದರೆ ಯಾವುದು ಸಾಮಾಜಿಕ ಮತ್ತು ಯಾವುದು ಸಾಮಾಜಿಕವಲ್ಲ ಎನ್ನುವುದನ್ನು ನಾವು ಆಯಾ ಸನ್ನಿವೇಶ ಮತ್ತು ಅದರ ಗ್ರಹಿಕೆಯಲ್ಲಿ ನೋಡಬೇಕಾಗುತ್ತದೆ. ವಾಸ್ತವವಾಗಿ ಇಲ್ಲಿ ಮತ್ತೊಂದು ಸಂಗತಿಯೂ ಇದೆ. ಅದು ಜೀವನದ ದೃಷ್ಟಿಕೋನವನ್ನು ಹೇಳುತ್ತದೆ. ಅದರಲ್ಲಿ ಜೀವನ ಮತ್ತು ಅದರ ಸಾಧ್ಯತೆಗಳು ಬೇರೆಯಾಗುತ್ತವೆ. ಅದು ಜೀವನವೂ ಆಗಿದೆ. ಮನುಷ್ಯ ಮತ್ತು ಅವನ ಸಂಬಂಧಗಳನ್ನು ನಾವು ಈವತ್ತು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆ. ಸಮಾಜವು ನಮಗೆ ಬೇರೆ ಬೇರೆ ನಿಲುವುಗಳನ್ನು ಹೇಳಿಕೊಡುತ್ತದೆ. ಆದರೆ ಯಾವುದು ನಿಜವಾಗಿಯೂ ವಾಸ್ತವವೆಂದು ಅನಿಸುತ್ತದೆಯೋ ಅದು ಮಾತ್ರವೇ ಆಗಿರುವುದೂ ಇಲ್ಲ. ಅದರ ಹಿಂದೆ ಕೆಲವು ತರ್ಕಗಳು ಇರುತ್ತವೆ. ನಮ್ಮ ಸದ್ಯದ ಸ್ಥಿತಿಯು ಯಾಕೆ ಹೀಗಿದೆ ಎಂದು ಕೇಳಿದರೆ ಮಾತ್ರವೇ ನಮಗೆ ಕೆಲವು ಉತ್ತರಗಳು

ದೊರೆಯುತ್ತವೆ. ಕುಟುಂಬ, ಶಾಲೆ, ಚರ್ಚ್ ಮತ್ತು ಸಮಾಜವು ನಮ್ಮನ್ನು ಬೇರೆ ರೀತಿಯಲ್ಲಿ ತರಬೇತಿಗೊಳಿಸುತ್ತವೆ. ಇವುಗಳ ಕಾನೂನಿಗೂ ನಮಗೂ ಒಂದು ಸಂಬಂಧವಿದೆ. ಹಾಗೆ ನೋಡುವುದಿದ್ದರೆ ಲೈಂಗಿಕ ಸಂಬಂಧವು ನಮ್ಮ ಮನಸ್ಸನ್ನು ರೂಪಿಸುತ್ತದೆ. ಕುಟುಂಬ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಗಂಡ ಮತ್ತು ಹೆಂಡತಿಯ ಸಂಬಂಧವು ಒಪ್ಪಿತವಾಗಿದ್ದು ಅದರ ವ್ಯಾಪ್ತಿಯು ಒಂದು ರೀತಿಯಲ್ಲಿ ಇರುತ್ತದೆ. ಆದರೆ ಇದನ್ನು ಮೀರಿದರೆ ಅದರ ಸ್ವರೂಪವು ಭಿನ್ನವಾಗುತ್ತದೆ. ಕುಟುಂಬ ಮತ್ತು ಅದರ ಸಂಬಂಧವನ್ನು ನಾವು ಆರ್ಥಿಕತೆಯ ಮೂಲಕವೇ ನೋಡಬೇಕಾಗುತ್ತದೆ. ಸಹಜ ಲೈಂಗಿಕ ಸಂಬಂಧ ಮತ್ತೊಂದು ಬಗೆಯದು. ಪರಸ್ಪರ ಸ್ನೇಹ ಎನ್ನುವುದು ಇನ್ನೊಂದು ರೀತಿಯದು. ಸಂಸ್ಕೃತಿ ಮತ್ತು ಅದರ ಪರಿಣಾಮವು ಇನ್ನೊಂದು ಬಗೆಯದು. ಅದು ಬೇರೆ ಬೇರೆ ಮಾದರಿಯ ಸ್ನೇಹವನ್ನು ಹೇಳುತ್ತವೆ. ನಮ್ಮನ್ನು ಸಂಸ್ಕೃತಿಯು ಕೆಲವು ರೀತಿಯಲ್ಲಿ ನಿಗದಿ ಮಾಡುತ್ತವೆ. ಇದನ್ನು ಸಮಾಜ ಮತ್ತು ಅದರ ಸದಸ್ಯರು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಬದುಕುತ್ತಾರೆ. ಯಾವುದು ನಮಗೆ ನಿಜವಾದ ಸಂಬಂಧ ಮತ್ತು ಯಾವುದು ಹುಸಿಯಾದ ಸಂಬಂಧವೆಂಬ ಅರಿವು ನಮಗೆ ಇರಬೇಕಾಗುತ್ತದೆ. ಕೆಲವು ಅಭಿವ್ಯಕ್ತಿಗಳು ಹುಸಿಯಾಗಿರುತ್ತವೆ. ಆದ್ದರಿಂದ ಸಮಾಜ ಮತ್ತು ಸಂಸ್ಕೃತಿಯ ನಡುವೆ ಇರುವ ಆಂತರಿಕ ಸಂಬಂಧವನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಯಾವುದೇ ಸಮಾಜಕ್ಕೂ ನಿಜವಾದ ಕೆಲವು ಅಗತ್ಯದ ಅಂಶಗಳು ಇರುತ್ತವೆ. ಉದಾಹರಣೆಗೆ ನಮ್ಮ ಕೃಷಿ ಪದ್ಧತಿಗೂ ನಮ್ಮ ಜೀವನಕ್ಕೂ ಒಂದು ಸಂಬಂಧವಿದೆ. ಕೃಷಿಯೇ ನಮಗೆ ಕೆಲವು ಜ್ಞಾನವನ್ನು ಕೊಡುತ್ತದೆ. ಒಂದು ಕೃಷಿಕೇಂದ್ರಿತ ಸಮಾಜಕ್ಕೆ ಅದರದೇ ಆದ ಒಂದು ಜ್ಞಾನವೂ ಇದೆ. ಕೃಷಿ ಮತ್ತು ಅದರ ವ್ಯವಹಾರವು ಒಂದು ಬಗೆಯದು. ಅದರಲ್ಲಿ ಇಡೀ ಜೀವನವೂ ಇರುತ್ತದೆ. ಅದರ ಜ್ಞಾನವನ್ನು ಶಾಲೆಯಲ್ಲಿ ಕಲಿಯಲು ಆಗುವುದೇ ಇಲ್ಲ. ಕೃಷಿ ಮತ್ತು ಅದರ ಜ್ಞಾನವನ್ನು ಇತರ ಜ್ಞಾನದ ಜೊತೆಗೆ ಹೋಲಿಸಲು ಬರುವುದು ಇಲ್ಲ. ವಾಸ್ತವವಾಗಿ ಯಾವುದನ್ನು ಸಮಾಜ ಮತ್ತು ಅದರ ಸಂಗತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಸಂಕೀರ್ಣವೂ ಹೌದು. ಅದರ ಸಂಬಂಧವನ್ನು ಕೃಷಿಯು ಹೇಳುವುದು ಒಂದು ರೀತಿಯಲ್ಲಿ ರೈತರು ತಮಗೆ ಬೇಕಾದ ಸಂಬಂಧವನ್ನು ನಿರ್ವಹಿಸುತ್ತಾರೆ. ತಮ್ಮ ಜ್ಞಾನವನ್ನು ಹಂಚಿಕೊಳ್ಳುತ್ತಾರೆ. ಕೃಷಿ ಮತ್ತು ಅದರ ಸಂಬಂಧವನ್ನು ಆಯಾ ದೇಶದ ಪರಿಸ್ಥಿತಿಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅಂದರೆ ಮಣ್ಣು ಮತ್ತು ಅದರ ಜೊತೆಗಿನ ಸಂಬಂಧವು ಜೀವನವನ್ನು ರೂಪಿಸುತ್ತದೆ. ಕೃಷಿ ಮತ್ತು ಅದರ ಸನ್ನಿವೇಶಗಳು ನಮಗೆ ಬೇರೆ ಬೇರೆ ಹಾದಿಯನ್ನು ತೋರಿಸುತ್ತದೆ. ಆದರೆ ಬಂಡವಾಳವಾದವು ಮತ್ತೊಂದು ಬಗೆಯದು. ಅದರಲ್ಲಿ ಬರುವ ಸಂಬಂಧವನ್ನು ಇತ್ಯಾತ್ಮಕವಾಗಿಯೇ ಹೇಳಲು ಬರುವುದು ಇಲ್ಲ. ಸಹಕಾರ ಮತ್ತು ಸ್ಪರ್ಧೆಯು ಒಂದು ರೀತಿಯಲ್ಲಿ ಇರುತ್ತದೆ. ನಮ್ಮ ಹಿರಿಯರು ನಮಗೆ ಕೃಷಿಯನ್ನು ಹೇಳಿಕೊಟ್ಟರು. ಅದರ ಮೂಲಕವೇ ನಮಗೆ ಬೇರೆಯದಾದ ಶಕ್ತಿಯನ್ನು ಒದಗಿಸಿದರು. ಕೃಷಿಯೂ ಒಂದು ರೀತಿಯ ಮನೋಸ್ಥಿತಿ. ಅದು ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತದೆ. ಇನ್ನೊಂದು ರೀತಿಯನ್ನು ಇಲ್ಲಿ ಹೇಳಬೇಕು– ಅದು ನಮ್ಮ ಹಿರೀಕರನ್ನು ನಾವು ನೋಡುವ ಕ್ರಮ. ಅದರಲ್ಲಿ ಗತಿಸಿದ ನಮ್ಮ

ಹಿರೀಕರನ್ನು ನಾವು ಆರಾಧಿಸುತ್ತೇವೆ. ಅದು ಒಂದು ರೀತಿಯಿಂದ ಧಾರ್ಮಿಕವಾದ ಸಂಗತಿಯೂ ಹೌದು. ನಮಗೆ ನೀತಿಯನ್ನು ಮತ್ತು ನಮಗೆ ನಡವಳಿಕೆಯನ್ನು ನಮ್ಮ ಹಿರೀಕರು ಮತ್ತು ನಮ್ಮ ಅಜ್ಜ ಅಜ್ಜಿಯರು ಹೇಳಿಕೊಟ್ಟರು. ಕೆಲವು ವಿಧಿ ನಿಷೇಧಗಳನ್ನು ಅವರು ನಮಗೆ ತಿಳಿಸಿದರು. ಜಾತಿ ಮತ್ತು ಧರ್ಮ ಎನ್ನುವುದು ಹೀಗೆಯೂ ಬೆಳೆದು ನಂಬಿಕೆಯಾಗಿ ಬಂದಿದೆ. ಅದರ ಹಿಂದೆ ಕೆಲವು ಆಲೋಚನೆಗಳು ಇರುತ್ತದೆ. ಜಾತಿಯು ಒಂದು ಸಾಂಸ್ಕೃತಿಕವಾದ ರೂಪ. ಅದು ಜೀವನವನ್ನು ಹೇಳುತ್ತದೆ. ಜಾತಿಯು ಒಂದು ಬಗೆಯಲ್ಲಿ ಜೀವನವನ್ನು ಆವರಿಸಿಕೊಳ್ಳುತ್ತದೆ. ಅದರ ಅಗತ್ಯಗಳೇ ಬೇರೆಯಾಗಿರುತ್ತದೆ. ಜಾತಿಗೂ ಭಾರತೀಯ ಅರ್ಥಶಾಸ್ತ್ರಕ್ಕೂ ಒಂದು ಸಂಬಂಧವು ಕಲ್ಪಿತವಾಗಿದೆ. ಜಾತಿಗೆ ಭಾರತೀಯ ಚರಿತ್ರೆಯಲ್ಲಿ ಒಂದು ಮಹತ್ವದ ಪಾತ್ರವೂ ಇದೆ. ಅದೇ ರೀತಿಯಲ್ಲಿ ಅದರ ನಿಯಮಗಳು ಬೇರೆಯಾಗಿವೆ. ಧರ್ಮವು ಒಂದು ಬಗೆಯಲ್ಲಿ ಕೆಲವು ಆಲೋಚನೆಗಳನ್ನು ಹೇಳುತ್ತವೆ. ಹಾಗೆ ನೋಡಿದರೆ ಅದರ ನಿಯಮವು ಮೂಲಭೂತವಾಗಿಯೇ ಬೇರೆ. ಧರ್ಮವು ಒಂದು ರಚನೆಗಳು ಹೌದು. ಅದು ನಮ್ಮನ್ನು ಒಂದು ದಾರಿಯಲ್ಲಿ ಕರೆದುಕೊಂಡು ಹೋಗುತ್ತದೆ. ಆದರೆ ಅದು ಹೇಳುವ ಮನುಷ್ಯ ಮತ್ತು ಅವನ ಅಸ್ತಿತ್ವವು ಒಂದು ಬಗೆಯಲ್ಲಿ ಇರುತ್ತದೆ. ಮನುಷ್ಯನೆಂದು ಕರೆಯುವಾಗ ಯಾವುದನ್ನು ಮನುಷ್ಯತ್ವ ಎಂದು ಹೇಳುತ್ತೇವೆ ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ. ಸಮಾಜದಲ್ಲಿ ಕೆಲವಕ್ಕೆ ಸ್ಥಿರವಾದ ರೂಪವಿದ್ದು ಅದು ಬದಲಾಗುವುದಿಲ್ಲ. ಆದರೆ ಮನುಷ್ಯ ಮತ್ತು ಅವನ ಕಾಳಜಿಗಳಿಗೆ ಬೇರೆ ಆಯಾಮವಿರುತ್ತದೆ. ಯಾವುದು ನಮಗೆ ಯಜಮಾನಿಕೆಯನ್ನು ಹೇಳುತ್ತದೆ ಮತ್ತು ಅದರ ಪರಿಣಾಮವು ಎಂದು ಮಾತ್ರವೇ ನೋಡಬೇಕಾಗುತ್ತದೆ. ಚರಿತ್ರೆಯಲ್ಲಿ ಕೆಲವು ಒತ್ತಡಗಳು ಇದ್ದು ಅದು ಯಾವುದು ಮತ್ತು ಯಾಕೆ ಅದು ಹಾಗಿದೆ ಎಂದು ನೋಡಬೇಕು. ವಾಸ್ತವವಾಗಿ ಯಾವುದೇ ಬರಹಗಳಿಗೆ ಒಂದು ಆಯಾಮವು ಇರುತ್ತದೆ. ಅದು ಅದನ್ನು ಅದೇ ಪ್ರಸ್ತುತ ಮಾಡುತ್ತದೆ. ಚರಿತ್ರೆಯ ಅಧ್ಯಯನವೆಂದರೆ ಅದರಲ್ಲಿ ಕೆಲವನ್ನು ಮಾತ್ರವೇ ಪ್ರತ್ಯೇಕ ಮಾಡುವುದಲ್ಲ. ಈ ದೃಷ್ಟಿಯಿಂದ ಚರಿತ್ರೆಯಲ್ಲಿ ಯಾವುದು ಮಹತ್ವದ ಪಾತ್ರವನ್ನು ವಹಿಸುತ್ತದೆ ಮತ್ತು ಅದರಲ್ಲಿ ನಿರ್ಣಾಯಕವಾಗುತ್ತದೆ ಹಾಗೂ ಅದರ ಸಾರಂಶವು ಯಾವುದು ಎನ್ನುವುದೂ ಮಹತ್ವದ ಅಂಶವಾಗಿದೆ. ಚರಿತ್ರೆಯಲ್ಲಿ ಯಾವುದನ್ನು ಹಾಜರು ಮಾಡಲಾಗುತ್ತದೆ ಎನ್ನುವುದು ಮಹತ್ವದ ಅಂಶ. ಹಾಗೆ ನೋಡುವುದಿದ್ದರೆ ನಮ್ಮ ಹಿಂದಿನ ಸಮಾಜದಲ್ಲಿ ಕೆಲವರು ಮಾತ್ರವೇ ಬಲಿಷ್ಟರಾಗಿದ್ದರು. ಅವರೇ ಸಮಾಜವನ್ನು ಮತ್ತು ಅದರ ಆಗು ಹೋಗುಗಳನ್ನು ನಿರ್ಧರಿಸುತ್ತಿದ್ದರು. ಮನುಷ್ಯ ಮತ್ತು ಅವನ ಭೌತಿಕ ಅಸ್ತಿತ್ವವನ್ನು ಯಾವುದು ನಿರ್ಧರಿಸುತ್ತದೆ ಎನ್ನುವುದು ಮಹತ್ವದ ಭಾಗವೂ ಆಗಿದೆ. ಮನುಷ್ಯನು ಒಂದೇ ರೀತಿಯಲ್ಲಿ ಇರಲಿಲ್ಲ. ಮತ್ತು ಇರುವುದು ಇಲ್ಲ. ಅವನು ಬದಲಾಗುತ್ತಾನೆ ಅಷ್ಟೇ ಅಲ್ಲ. ಮನುಷ್ಯನು ಸಾಮಾಜಿಕವಾಗಿಯೂ ಆಗಿದ್ದಾನೆ. ಮತ್ತು ಅವನು ಪರಿಸರವನ್ನು ತನಗೆ ಬೇಕಾದ ರೀತಿಯಲ್ಲಿ ಬದಲು ಮಾಡಿಕೊಂಡಿದ್ದಾನೆ. ಹೀಗಾಗಿ ಚರಿತ್ರೆ ಮತ್ತು ಅದರ ಸ್ವರೂಪವನ್ನು ಈ ಕಾರಣದಿಂದ ಬೇರೆ ಮಾಡಿಕೊಂಡು ನೋಡಬೇಕಾಗುತ್ತದೆ. ಚರಿತ್ರೆಯು ಬದಲಾಗುತ್ತಾ ಹೋದಂತೆ ಮನುಷ್ಯ ಮತ್ತು ಅವನ ಸ್ವಭಾವವು ಬದಲಾಗುತ್ತದೆ. ಆದ್ದರಿಂದ ವ್ಯಕ್ತಿಯನ್ನು ಚರಿತ್ರೆಯಿಂದ ಬೇರೆ ಮಾಡಿಕೊಂಡು

ನೋಡಲು ಬರುವುದು ಅಸಾಧ್ಯವಾಗುತ್ತದೆ. ವಾಸ್ತವವಾಗಿ ಚರಿತ್ರೆ ಮತ್ತು ಅದರ ಹಿಂದಣ ಅಧಿಕಾರಕ್ಕೆ ಒಂದು ಸಂಬಂಧವಿದೆ. ಆದ್ದರಿಂದ ಅನೇಕರು ಚರಿತ್ರೆಯ ಅಧ್ಯಯನವನ್ನು ಮಾಡುವಾಗ ಅಧಿಕಾರವನ್ನು ಕೇಂದ್ರ ಮಾಡುತ್ತಾರೆ. ಚರಿತ್ರೆಯಲ್ಲಿ ಯಾವುದು ಹೆಚ್ಚು ಅಧಿಕೃತವಾಗಿ ಮತ್ತು ಯಾವುದು ಪ್ರಧಾನ ಮತ್ತು ಯಾವುದು ಅಧೀನವಾಗಿದೆ ಎನ್ನುವುದು ಅಧ್ಯಯನ ಯೋಗ್ಯ. ಯಾವುದೇ ಸಮಾಜಕ್ಕೆ ಪ್ರಾಯೋಗಿಕವಾದ ಸಮಸ್ಯೆಯು ಇರುತ್ತದೆ. ಚಾರಿತ್ರಿಕವಾದ ಚಹರೆಗಳು ಇರುತ್ತವೆ. ವಾಸ್ತವವಾಗಿ ಅಧಿಕಾರವೆನ್ನುವುದೂ ಚರಿತ್ರೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದರದೇ ಆದ ಚಹರೆಯನ್ನು ರೂಪಿಸುತ್ತದೆ. ಈ ಚಹರೆಯನ್ನು ಮಾತ್ರವೇ ನಂಬಿ ನಾವು ಚರಿತ್ರೆಯನ್ನು ನೋಡಲು ಬರುವುದು ಇಲ್ಲ. ಅಧಿಕಾರವನ್ನು ವಹಿಸುವವರು ನಿರ್ದಿಷ್ಟವಾದ ಸಾಮಾಜಿಕ ಸಂಬಂಧವನ್ನು ರೂಪಿಸುತ್ತಾರೆ. ಅದು ಸಮಸ್ಯೆಯೂ ಆಗಿರುತ್ತದೆ. ಸಮಾಜ ಮತ್ತು ಅದರೊಂದಿಗೆ ಇರುವ ಸಂಬಂಧವನ್ನು ನಾವು ಇತ್ಯಾತ್ಮಕವಾಗಿಯೂ ನೋಡಬೇಕಾಗುತ್ತದೆ. ಮತ್ತು ಅದನ್ನು ನೋಡಬೇಕಾದ ಮತ್ತು ಗ್ರಹಿಸಬೇಕಾದ ಅಗತ್ಯಗಳು ಬೇರೆಯಿರುತ್ತವೆ. ಬೆಂಜಮಿನ್ ಅನೇಕವನ್ನು ಹೇಳಿದ್ದಾನೆ. ಅವನಲ್ಲಿ ಇದು ಅತ್ಯಂತ ಮುಖ್ಯವಾದ ಪ್ರಶ್ನೆ. ಭಾಷೆ ಮತ್ತು ಅದರ ಹಿಂದೆ ಇರುವ ರಾಜಕಾರಣವನ್ನು ಅವನು ಪ್ರಸ್ತಾವಿಸುತ್ತಾನೆ. ಆದರೆ ಸಾಹಿತ್ಯ ಮತ್ತು ಅದರ ಸಿದ್ಧಾಂತಗಳಿಗೂ; ನೀತಿ ಮತ್ತು ಅದರ ಸಾರಕ್ಕೂ ವ್ಯತ್ಯಾಸವಿದೆ. ಅದನ್ನು ಹೀಗೆ ಹೇಳಬಹುದು: ನೀತಿಶಾಸ್ತ್ರವು ವಾಸ್ತವವಾಗಿ ಕೆಲವು ಮೌಲ್ಯವನ್ನು ಹೇಳುತ್ತದೆ. ಅದನ್ನು ಸಾಹಿತ್ಯದ ಕುರಿತು ಹೇಳುವ ಸಂದರ್ಭದಲ್ಲಿ ಅಳವಡಿಸಬೇಕೆ ಅಥವಾ ಬೇಡವೇ ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗುತ್ತದೆ. ಸಾಹಿತ್ಯ ಮತ್ತು ಅದರ ಸಿದ್ಧಾಂತವನ್ನು ಈವತ್ತು ನಾವು ಇತ್ಯಾತ್ಮಕವಾಗಿಯೂ ಹೇಗೆ ನೋಡಬೇಕು ಮತ್ತು ಅದನ್ನು ಹೇಗೆ ಗ್ರಹಿಸಬೇಕು ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗುತ್ತದೆ. ಸಾಹಿತ್ಯ ಮತ್ತು ಅದರ ಸಿದ್ಧಾಂತವನ್ನು ನಾವು ನೋಡುವುದು ಮತ್ತು ಅದನ್ನು ಗ್ರಹಿಸುವುದು ನಿಜವಾಗಿಯೂ ಹೇಗೆ ಎನ್ನುವುದು ಮೂಲಭೂತವಾದ ಸಮಸ್ಯೆ. ಸಾಹಿತ್ಯ ಮತ್ತು ಅದರ ಪ್ರಶ್ನೆಯನ್ನು ನಾವು ಈವತ್ತು ನೋಡುವುದು ನೀತಿಶಾಸ್ತ್ರದ ಪ್ರಶ್ನೆಯು ಆಗುವುದು ಇಲ್ಲ. ಅಷ್ಟೇ ಅಲ್ಲ ಸಾಹಿತ್ಯ ಮತ್ತು ಅದರ ನಿಲುವು ಬರೀ ನೀತಿ ಮತ್ತು ಅದರ ಸಾಧ್ಯತೆಯನ್ನು ಹೇಳುವುದು ಇಲ್ಲ. ಸಾಮಾನ್ಯವಾದ ಜನರಿಗೆ ನೀತಿಶಾಸ್ತ್ರವು ಕೆಲವನ್ನು ಹೇಳುತ್ತದೆ. ಅದನ್ನು ಹೇಗೆ ಅನುಷ್ಠಾನಕ್ಕೆ ತರಬೇಕು ಎಂದು ವಿಧಿಸುತ್ತದೆ. ಸಾಮಾನ್ಯರು ಹೇಳುವ ನೀತಿಯು ಒಂದು ಬಗೆಯದು ಆಗಿತ್ತು. ಅದನ್ನು ತರಗತಿಯ ನೀತಿಯೆಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಸಾಮಾನ್ಯರು ಮತ್ತು ಅವರ ಮಾತುಕತೆಗಳು ಒಂದು ರೀತಿಯಲ್ಲಿ ಇರುತ್ತದೆ. ಅದರಲ್ಲಿ ಬರುವ ಸಂಕಥನವು ಒಂದು ಮಾದರಿಯಲ್ಲಿ ಇರುತ್ತದೆ. ಆದರೆ ಅದೇ ಮಾದರಿಯನ್ನು ತರಗತಿಯಲ್ಲಿ ಹೇಳುವುದಿಲ್ಲ. ವಾಸ್ತವವಾಗಿ ಯಾವುದೇ ಸಮಾಜ ಮತ್ತು ಅದರ ವರ್ಗಗಳಿಗೆ ನಿರ್ದಿಷ್ಟವಾದ ಆಯಾಮವು ಇರುತ್ತದೆ. ಸಾಹಿತ್ಯ ಮತ್ತು ಅದರ ಸಾಧ್ಯತೆಯು ಈ ದೃಷ್ಟಿಯಿಂದ ಬೇರೆಯೂ ಆಗುತ್ತದೆ. ಅಂದರೆ ಸಾಹಿತ್ಯವನ್ನು ನೋಡುವುದು ಮತ್ತು ಗ್ರಹಿಸುವುದು ಬರೀ ಒಂದು ನೀತಿಶಾಸ್ತ್ರದ ಪುರಾಣವೆಂದು ಭಾವಿಸಬೇಕಾದ ಯಾವ ಅಗತ್ಯವೂ ಇಲ್ಲ. ನೀತಿಗೆ ಕೆಲವು ನಿಯಮವು ಇರುತ್ತದೆ.

ನೀತಿ ಮತ್ತು ಅದರ ಗ್ರಹಿಕೆಯು ಇರುವುದು ಒಂದು ರೀತಿಯಲ್ಲಿ. ಸಾಹಿತ್ಯದಲ್ಲಿ ಸಂಕೇತ ಮತ್ತು ಅದರ ನಿಲುವುಗಳು ಬೇರೆಯಾಗುತ್ತವೆ. ಭಾಷಾಶಾಸ್ತ್ರ ಮತ್ತು ಅದರ ವ್ಯವಸ್ಥೆಯು ಇರುವುದು ಒಂದು ರೀತಿಯಲ್ಲಿ. ಸಂಕೇತವನ್ನು ನೋಡುವುದು ಮತ್ತು ಗ್ರಹಿಸುವುದು ಮತ್ತೊಂದು ರೀತಿಯಲ್ಲಿ. ಅನೇಕ ಶೈಕ್ಷಣಿಕ ಸಂಸ್ಥೆಗಳು ನಿಜವಾದ ಸೈದ್ಧಾಂತಿಕವಾದ ಸಮಸ್ಯೆಯನ್ನು ಎದುರಿಸುವುದು ಇಲ್ಲ. ಸಂಘರ್ಷಾತ್ಮಕವಾದ ಸಾರ್ವಜನಿಕವಾದ ನಿಲುವನ್ನು ಅದು ವಿವರಿಸಲು ಹೋಗುವುದು ಇಲ್ಲ. ವಾಸ್ತವವಾಗಿ ಅನೇಕರು ಯಾವುದೇ ಬದ್ಧತೆಯು ಅಗತ್ಯವೇ ಇಲ್ಲವೆಂದು ಅನೇಕರು ಹೇಳುತ್ತಾರೆ. ಆದರೆ ನಿಜವಾಗಿಯೂ ಸಮಸ್ಯೆಯು ಬೇರೆಯಿದೆ. ತರಗತಿ ಮತ್ತು ಅದರ ಸ್ವರೂಪವನ್ನು ನಾವು ನೋಡುವುದು ಮತ್ತು ಅದನ್ನು ಗ್ರಹಿಸುವುದು ಒಂದು ರೀತಿಯಲ್ಲಿ. ಅದರಲ್ಲಿ ಬುದ್ಧಿವಂತಿಕೆ ಮತ್ತು ತರಬೇತಿಯ ಪ್ರಶ್ನೆಯು ಬರುತ್ತದೆ. ಒಬ್ಬ ಮೆಕಾನಿಕ್ ಮತ್ತೊಬ್ಬ ಮೆಕಾನಿಕ್‌ಗೆ ಹೇಳುವುದು ಕೆಲವು ಅಂಶಗಳನ್ನು ಮಾತ್ರವೇ. ಅದನ್ನು ಆಧರಿಸಿಕೊಂಡು ಮತ್ತೊಬ್ಬ ವಾಹನವನ್ನು ರಿಪೇರಿ ಮಾಡುತ್ತಾನೆ. ಇದರಲ್ಲಿ ಸೂಚನೆಗಳು ಮಾತ್ರವೇ ಇರುತ್ತವೆ. ಈ ಸೂಚನೆಗಳು ಇಲ್ಲಿ ಕೆಲಸವನ್ನು ಮಾಡುತ್ತವೆ. ಒಬ್ಬ ತಜ್ಞ ಮತ್ತೊಬ್ಬ ತಜ್ಞನಿಗೆ ಕೆಲವನ್ನು ಮಾತ್ರವೇ ವಿವರಿಸುತ್ತಾನೆ. ಅದು ಅಷ್ಟೇ ಆಗಿರುತ್ತದೆ. ಹಾಗೆ ನೋಡುವುದಿದ್ದರೆ ಅನೇಕ ಸಂಗತಿಗಳು ವಿಶ್ವಾತ್ಮಕ. ಮತ್ತು ಅದರಲ್ಲಿ ಜೀವನ ಮತ್ತು ಅದರ ಸತ್ಯಗಳು ಇರುತ್ತವೆ. ಯಾವಾಗ ನಾವು ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲವೋ ಸಮಸ್ಯೆಯು ಉಂಟಾಗುತ್ತದೆ. ವಾಸ್ತವವಾಗಿ ಇದನ್ನು ನೋಡುವಾಗ ತರಗತಿಗಳು ನೀತಿಯನ್ನು ವಿವರಿಸುವ ಜಾಗಗಳು ಅಲ್ಲವೆನ್ನುವುದು ಸ್ಪಷ್ಟವಾಗುತ್ತವೆ. ಇಲ್ಲಿ ಮತ್ತೆ ಕೆಲವು ಸೂಕ್ಷ್ಮವಾದ ಅಂಶಗಳು ಇರುತ್ತವೆ. ಜೀವನ ಮತ್ತು ಅದರ ಸತ್ಯಗಳು ವಾಸ್ತವವಾಗಿ ಬೇರೆ ಇರುತ್ತವೆ. ಅದನ್ನು ನೋಡುವುದು ಮತ್ತು ಗ್ರಹಿಸುವುದು ಅತ್ಯಂತ ಮುಖ್ಯವಾಗುತ್ತದೆ. ತತ್ವಜ್ಞಾನವು ಹೇಳುವ ಅನೇಕ ವಿಚಾರಗಳು ಜೀವನ ಮತ್ತು ಅದರ ಸತ್ಯವನ್ನು ನಿರೂಪಿಸುತ್ತವೆ. ಅದಕ್ಕೆ ಸೈದ್ಧಾಂತಿಕತೆಯು ಇರುತ್ತದೆ. ಯಾವುದನ್ನು ಈವತ್ತು ಜಗತ್ತು ಎಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ನಾವು ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಅದರಲ್ಲಿ ಜೀವನವನ್ನು ಗ್ರಹಿಸುವ ವಿಧಾನವೂ ಇರುತ್ತದೆ. ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ನಾವು ಮುಕ್ತವೆಂದು ಮತ್ತು ಅದರಲ್ಲಿ ಬರೀ ಸ್ವಾತಂತ್ರ್ಯದ ಪ್ರಶ್ನೆಯು ಇದೆ ಎಂದು ಹೇಳಬೇಕಾದ ಅಗತ್ಯವಿಲ್ಲ. ಅದನ್ನು ಸರ್ವತಂತ್ರ ಸ್ವತಂತ್ರವೆಂದು ಹೇಳಬೇಕಾದ ಅಗತ್ಯವಿಲ್ಲ. ಆದರೆ ಯಾವುದೇ ಸೈದ್ಧಾಂತಿಕತೆಗೆ ಅದರದೇ ಆದ ಆಯಾಮವು ಇರುತ್ತದೆ. ತಾತ್ವಿಕತೆಗೆ ಒಂದು ತಾಂತ್ರಿಕತೆಯ ತಳಹದಿಯು ಇರುತ್ತದೆ. ಸಾರ್ವಜನಿಕ ಮತ್ತು ವಿಶ್ವಾತ್ಮಕವಾದ ನೆಲೆಗಳು ಇರುತ್ತವೆ. ಸಿದ್ಧಾಂತ ಮತ್ತು ಅದರ ಅನ್ವಯದ ಸಾಧ್ಯತೆಯು ಇರುತ್ತದೆ. ಸಿದ್ಧಾಂತ ಮತ್ತು ಅದರ ಸಾಧ್ಯತೆಯನ್ನು ಈ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ. ಆದರೆ ಶೈಕ್ಷಣಿಕ ವಲಯದಲ್ಲಿ ಯಾವುದು ನಿರ್ದಿಷ್ಟವಾಗಿದೆ ಮತ್ತು ಯಾವುದು ನಿಜವಾಗಿಯೂ ಅಗತ್ಯವಿದೆ ಮುಂತಾದ ಚರ್ಚೆಗಳು ಇದ್ದೇ ಇರುತ್ತವೆ. ಅಂದರೆ ಸಾಹಿತ್ಯ ಮತ್ತು ಅದರ ದೃಷ್ಟಿಕೋನವನ್ನು ಈವತ್ತು ಸಮಾಜಕ್ಕೆ ಅಣಿಗೊಳಿಸಬೇಕಾದ ಅಗತ್ಯವೂ ನಮಗಿದೆ. ಆದ್ದರಿಂದ ಲೇಖಕನಿಗೆ ಈವತ್ತು ಒಂದು ನಿರ್ದಿಷ್ಟವಾದ ತಳಹದಿಯು ಇರಬೇಕಾಗುತ್ತದೆ. ಜೀವನ ಮತ್ತು ಸಾಹಿತ್ಯವನ್ನು

ನೋಡುವ ಕ್ರಮವನ್ನು ನಾವು ಹೇಗೆ ನಿರ್ಧಾರ ಮಾಡಬೇಕು ಮತ್ತು ಅದನ್ನು ಗ್ರಹಿಸುವುದು ಹಾಗೂ ಅದನ್ನು ಸ್ವೀಕರಿಸುವುದು; ಅದಕ್ಕೆ ಪ್ರತಿಕ್ರಿಯಿಸುವುದು ಯಾವ ರೀತಿಯಲ್ಲಿ ಎನ್ನುವುದು ಮೂಲಭೂತವಾದ ಪ್ರಶ್ನೆ. ಗಣಿತಶಾಸ್ತ್ರ ಮತ್ತು ನಿಸರ್ಗ ವಿಜ್ಞಾನವು ಇಂದು ಬೇರೆ ಬೇರೆಯಾಗಿದೆ ಎಂದು ಹೇಳಲು ಬರುವುದು ಇಲ್ಲ. ಅದರಲ್ಲಿ ಕೆಲವು ತರ್ಕಗಳು ಇರುತ್ತವೆ. ಮತ್ತು ಅದರಲ್ಲಿ ಒಂದು ಜಾಗದ ಗಣಿತ ಮತ್ತೊಂದು ಜಾಗದ ಗಣಿತ ಎಂದು ಹೇಳಲು ಸಾಧ್ಯವೇ ಇಲ್ಲ. ಆದರೆ ಸಾಹಿತ್ಯ ಮತ್ತು ಅದರ ಪರಿಣಾಮವನ್ನು ಶಾಲೆ ಮತ್ತು ಕಾಲೇಜುಗಳಲ್ಲಿ ಕಲಿಸುವುದು ಮತ್ತು ಅದನ್ನು ರೂಪಿಸುವುದು ಒಂದು ವಿಧಾನದಲ್ಲಿ ಮಾತ್ರವೇ ಆಗಿದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಅಧ್ಯಾಪಕರು ಸಾಹಿತ್ಯವನ್ನು ಅದರ ಉಪಯೋಗವನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದು ಸೀಮಿತವಾಗಿಯೇ. ಸಾಹಿತ್ಯವನ್ನು ಕಲಿಸಲು ಅಧ್ಯಾಪಕರು ಕೆಲವು ಸೀಮಿತವಾದ ರೇಖೆಗಳನ್ನು ಮಾತ್ರವೇ ರೂಪಿಸಿಕೊಳ್ಳುತ್ತಾರೆ. ಜ್ಞಾನ ಮತ್ತು ಅದರ ಉತ್ಪಾದನೆಗೆ ತರಗತಿಯಲ್ಲಿ ಕೆಲವು ಸೀಮಿತವಾದ ರೇಖೆಗಳು ಮಾತ್ರವೇ ಇರುತ್ತವೆ. ಅಧ್ಯಾಪಕರು ಕೆಲವು ಸೀಮಿತವಾದ ವಿಷಯಗಳನ್ನು ಕುರಿತು ಪ್ರಬಂಧವನ್ನು ಬರೆಯಲು ಹೇಳುತ್ತಾರೆ. ಅದರ ಮೂಲಕವೇ ವಿದ್ಯಾರ್ಥಿಗಳನ್ನು ತರಬೇತಿ ಮಾಡುತ್ತಾರೆ. ಅಧ್ಯಾಪಕರಿಗೆ ಕೆಲವು ಪಠ್ಯ ಪುಸ್ತಕಗಳು ಬೇಕಾಗುತ್ತವೆ. ಅದನ್ನು ಇಟ್ಟುಕೊಂಡು ಅವರು ಮಾತಾಡುತ್ತಾರೆ. ಅವರಿಗೆ ಅದು ಮುಖ್ಯ. ಜ್ಞಾನವೆಂದರೆ ಅದು ಪಠ್ಯವನ್ನು ಕುರಿತು ಹೇಳುವ ವಿಷಯಗಳು ಮಾತ್ರವೇ ಆಗುತ್ತವೆ ಎಂದು ಗೊತ್ತಿರಬೇಕು. ತರಗತಿಗಳು ವಾಸ್ತವವಾಗಿ ಕೆಲವು ವಿಷಯಗಳನ್ನು ಮಾತ್ರವೇ ಹೇಳುತ್ತವೆ. ಅದರ ಉದ್ದೇಶವೂ ಅತ್ಯಂತ ಸೀಮಿತವಾದ ಒಂದು ಪ್ರಕ್ರಿಯೆ. ಅದರಲ್ಲಿ ಇರುವ ವಿಷಯಗಳೂ ಸೀಮಿತ. ಆದರೆ ವಿಷಯವು ಅಷ್ಟು ಸುಲಭವೂ ಆಗಿಲ್ಲ. ಕೃತಿ ಮತ್ತು ಅದರ ನಿರೂಪಣೆಯು ಮಾತ್ರವೇ ತರಗತಿಗಳಲ್ಲಿ ಪ್ರಧಾನವಾದ ಅಂಶವೂ ಆಗಿರುತ್ತದೆ. ಅದರಲ್ಲಿ ಬೇರೆ ವಿಷಯಗಳನ್ನು ಅನೇಕರು ವಿವರಿಸಲು ಹೋಗುವುದೂ ಇಲ್ಲ. ಅದರಲ್ಲಿ ಅವರಿಗೆ ಹೆಚ್ಚು ಮುಖ್ಯವಾಗುವುದು ಆಯಾ ಸಂದರ್ಭದ ವಿವರಣೆಯು ಮಾತ್ರ. ಸಿಲೆಬಸ್ ಮಾತ್ರವೇ ನಮಗೆ ಮುಖ್ಯವಾಗುತ್ತವೆ ಮತ್ತು ಅದನ್ನು ಹೊರತುಪಡಿಸಿಕೊಂಡು ಯಾವುದನ್ನು ಹೇಳಬೇಕಾದ ಅಗತ್ಯವೇ ಇಲ್ಲವೆಂದು ಅವರು ಭಾವಿಸುತ್ತಾರೆ. ಸಾಹಿತ್ಯವನ್ನು ಓದುವುದು ಮತ್ತು ಕಲಿಸುವುದು ಅಂದರೆ ಅದರಲ್ಲಿ ಬರೀ ನಿರ್ದಿಷ್ಟವಾದ ಒಂದು ಸಂಕಥನವು ಮಾತ್ರವೇ ಇದೆ ಎಂದು ಹೇಳುತ್ತಾರೆ. ಸಾಹಿತ್ಯದ ಕುರಿತು ಮಾತಾಡುವುದು ಅಂದರೆ ಆಕಾಶದ ಕೆಳಗಿನ ಎಲ್ಲವನ್ನು ನಾವು ಮಾತಾಡುವುದು ಎಂದು ಮಾತ್ರವೇ ಎಂದು ಅನೇಕರು ಭಾವಿಸುತ್ತಾರೆ. ಆದರೆ ಗಣಿತ ಮತ್ತು ಅದರ ಶಾಸ್ತ್ರವು ಬೇರೆಯಾಗಿದೆ. ಅದನ್ನು ದೇಶ ಮತ್ತು ಅದರ ಗಡಿಯ ಮೂಲಕವೇ ನಾವು ಗುರುತಿಸುವುದು ಸರಿಯಾದ ಕ್ರಮವಲ್ಲ. ಗಣಿತಶಾಸ್ತ್ರ ಮತ್ತು ಅದರ ಸ್ವರೂಪವು ಬೇರೆಯಾಗಿದೆ. ಅದನ್ನು ಸೀಮಿತವಾಗಿ ನೋಡಲು ಬರುವುದು ಇಲ್ಲ. ಆದರೆ ಸಾಹಿತ್ಯವನ್ನು ಓದುವುದು ಮತ್ತು ಬರೆಯುವುದು ಒಂದು ಕ್ರಮ. ಅದರಲ್ಲಿ ಕಲಿಕೆಯನ್ನು ನಾವು ಗಣಿತದ ರೀತಿಯಲ್ಲಿ ಮಾಡಲು ಬರುವುದು ಇಲ್ಲ. ಮೇಷ್ಟ್ರುಗಳು ಸಾಹಿತ್ಯವನ್ನು ಓದುವುದು ಮತ್ತು ಬರೆಯುವುದು ಹಾಗೂ ಗ್ರಹಿಸುವುದು ಒಂದು ಕ್ರಮದಲ್ಲಿ ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬಹುದು.

ಸಂಪ್ರಬಂಧವನ್ನು ಬರೆಯಲು ಹೇಳುವುದು ಮತ್ತು ಅದನ್ನು ತಿದ್ದುವುದು ಮಾತ್ರವೇ ನಮ್ಮ ಕೆಲಸವೆಂದು ಅನೇಕರು ಭಾವಿಸಿದಂತೆ ಕಾಣುತ್ತದೆ. ಅನೇಕರು ಸಾಹಿತ್ಯವನ್ನು ಓದಲು ಮತ್ತು ಗ್ರಹಿಸಲು ಬೇಕಾದ ಅರಿವನ್ನು ನೋಡುವುದು ಬೇರೆ ರೀತಿಯಲ್ಲಿ ನೋಡಲು ಹೋಗುವುದಿಲ್ಲ. ಸಾಹಿತ್ಯವನ್ನು ಕುರಿತು ಮಾತಾಡುವುದು ಅಂದರೆ ಸಾಹಿತ್ಯವನ್ನು ವೈಭವೀಕರಿಸುವುದೂ ಅಲ್ಲ. ಅದರಲ್ಲಿ ವ್ಯತ್ಯಾಸವಿದೆ. ಅದರಲ್ಲಿ ಭಿನ್ನತೆಗಳು ಇವೆ. ಸಾಹಿತ್ಯದಲ್ಲಿ ಅನೇಕರು ಸ್ವಂತಿಕೆ ಮತ್ತು ಅದರ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಸಾಹಿತ್ಯ ಮತ್ತು ಅದರ ಸಂಕಥನವೆಂದರೆ ಅದನ್ನು ನಾವು ಒಂದು ಆಧ್ಯಾತ್ಮಿಕವಾದ ಸಂವಾದವೆಂದು ಭಾವಿಸಬೇಕಾದ ಅಗತ್ಯವಿಲ್ಲ. ರಚನೆ ಮತ್ತು ಅದರ ರೂಪ ಹಾಗೂ ಸಂಕೇತಗಳನ್ನು ನಾವು ಈವತ್ತು ಹೇಗೆ ನೋಡಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ವಾಸ್ತವವಾಗಿ ಯಾವತ್ತೂ ನಾವು ಇದರ ಅರಿವನ್ನು ಹೊಂದುವುದು ಅತ್ಯಂತ ಅಗತ್ಯವಾಗಿದೆ. ಬರೀ ಸಾಹಿತ್ಯ ಮತ್ತು ಅದರ ಸಂಕಥನಗಳನ್ನು ನಾವು ಸೀಮಿತವಾದ ಒಂದು ಸಂಗತಿಯೆನ್ನುವಂತೆ ನೋಡುತ್ತೇವೆ. ಸಾಹಿತ್ಯ ಮತ್ತು ಅದರ ಸ್ವರೂಪವನ್ನು ನಾವು ಈವತ್ತು ನೋಡುವಾಗ ಅದರ ಅರಿವನ್ನು ನಾವು ಹೇಗೆ ಮಾಡಿಕೊಳ್ಳಬೇಕು ಎನ್ನುವುದು ಮುಖ್ಯವಾದ ಸಮಸ್ಯೆ. ಸಾಹಿತ್ಯವನ್ನು ಅದರ ಅನನ್ಯತೆಯ ಕಾರಣದಿಂದ ಮಾತ್ರವೇ ನಾವು ಹೇಳಲು ಬರುವುದು ಇಲ್ಲ. ಸಾಹಿತ್ಯ ಮತ್ತು ಅದರ ಅನನ್ಯತೆಯು ಒಂದು ರೀತಿಯಲ್ಲಿ ಇರುತ್ತದೆ. ಅದನ್ನು ನೋಡುವುದು ಮತ್ತು ಗ್ರಹಿಸುವುದು ಒಂದು ಕ್ರಮದಲ್ಲಿ. ಹಾಗೆಂದು ಅದರಲ್ಲಿ ಅನನ್ಯತೆಯು ಇದೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅದು ರೂಪುಗೊಂಡದ್ದು ಒಂದು ಹಿನ್ನೆಲೆಯಿಂದ. ಸಾಹಿತ್ಯ ಮತ್ತು ಅದರ ಸಂಯೋಜನೆಯು ಮಾತ್ರವೇ ನಮಗೆ ಅತ್ಯಂತ ಮುಖ್ಯವಾದದ್ದು ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಲೇಖಕ ಮತ್ತು ಅವನ ಕೊಡುಗೆಯನ್ನು ಮಾತ್ರವೇ ನೋಡುವುದು ಮಾತ್ರವೇ ಸಾಕಾಗುವುದು ಇಲ್ಲ. ಅದರಲ್ಲಿ ಅವನ ತಾತ್ವಿಕತೆಯ ಪ್ರಶ್ನೆಯು ಯಾವುದು ಎನ್ನುವುದು ಬಹಳ ಮುಖ್ಯ. ಲೇಖಕ ಮತ್ತು ಅವನ ಕೊಡುಗೆಯು ಯಾವ ಮಟ್ಟದ್ದು ಎಂದು ಹೇಳುವಾಗ ಅವನ ತಾತ್ವಿಕತೆಯು ಅತ್ಯಂತ ಮಹತ್ವದ್ದು. ಲೇಖಕ ಮತ್ತು ಅವನ ನಿಲುವು ಒಂದು ಕಾಲದಲ್ಲಿ ಒಂದು ರೀತಿಯಲ್ಲಿ ಇರುತ್ತದೆ. ಮತ್ತೊಂದು ಕಾಲದಲ್ಲಿ ಮತ್ತೊಂದು ರೀತಿಯಲ್ಲಿ ಇರುತ್ತದೆ. ಆದರೆ ಇದನ್ನು ನೋಡುವಾಗ ನಾವು ತಾತ್ವಿಕತೆಯನ್ನು ಮರೆಯಲು ಆಗುವುದು ಇಲ್ಲ.

ನವೋದಯದ ಲೇಖಕರಿಗೆ ಒಂದು ಸಾರ್ವಜನಿಕ ಎನ್ನಬಹುದಾದ ನಿಲುವು ಇತ್ತು. ಆದರೆ ರೂಪನಿಷ್ಠರು ಮಾತ್ರವೇ ಅದನ್ನು ನೋಡಿದ ಕ್ರಮವು ಬೇರೆಯಾಗಿದೆ. ಕೃತಿಯನ್ನು ಮಾತ್ರವೇ ನೋಡುವುದು ಈ ದೃಷ್ಟಿಯಿಂದ ಮುಖ್ಯವಾಗುವುದಿಲ್ಲ. ಕೃತಿಯನ್ನು ಈ ದೃಷ್ಟಿಯಿಂದ ಬರೀ ಒಂದು ಶೈಲಿಯೆಂದು ಹೇಳಲು ಬರುವುದು ಇಲ್ಲ. ಕೃತಿಯನ್ನು ಓದುವುದು ಅಂದರೆ ಅದು ಶೈಲಿಯೊಂದಿಗೆ ಮಾತ್ರವೇ ಮಾಡುವ ಅನುಸಂಧಾನವೂ ಅಲ್ಲ. ಆದರೆ ರೂಪನಿಷ್ಠರು ಸಾಹಿತ್ಯ ಮತ್ತು ಅದರ ರೂಪಕ್ಕೆ ಮಾತ್ರವೇ ಹೆಚ್ಚಿನ ಮಹತ್ವವನ್ನು ಕೊಟ್ಟರು. ವಾಸ್ತವವಾಗಿ ಕೃತಿಯನ್ನು ಓದುವುದು ಮಾತ್ರವೇ ಸಾಕಾಗುವುದು ಇಲ್ಲ ಅಷ್ಟೇ ಅಲ್ಲ. ಒಂದು ಕೃತಿಯನ್ನು ಓದುವುದು ಮತ್ತು ಗ್ರಹಿಸುವುದು ಅಂದರೆ ಅದರ ಓದನ್ನು ಅತ್ಯಂತ ಸೀಮಿತವಾಗಿ ಗ್ರಹಿಸುವುದು ಎಂದು ಆಗಬಾರದು. ಬರೀ

ಓದು ಎನ್ನುವುದು ಸಾಕಾಗುವುದು ಇಲ್ಲ. ಅದರಲ್ಲಿ ಓದು ಮತ್ತು ಅದರ ಗ್ರಹಿಕೆಗಳು ವಿಸ್ತಾರವಾಗಬೇಕಾಗುತ್ತದೆ. ಓದು ಮತ್ತು ಅದು ಉಂಟು ಮಾಡುವ ಅನುಭವ ಸಾಕಾಗುವುದು ಇಲ್ಲ. ಅದರಲ್ಲಿ ವ್ಯತ್ಯಾಸವಿದೆ. ಓದು ಎನ್ನುವುದು ಅತ್ಯಂತ ಶೂನ್ಯವಾದ ಒಂದು ಪ್ರಕ್ರಿಯೆಯು ಅಲ್ಲ. ಈ ಕಾರಣದಿಂದ ಪಠ್ಯ ಮತ್ತು ಅದರ ಅರ್ಥವು ಸೀಮಿತವಾದ ಒಂದು ಸಂಗತಿಯು ಅಲ್ಲ. ಅದರಲ್ಲಿ ಭಿನ್ನತೆಯು ಇದೆ. ಅದನ್ನು ನೋಡುವುದು ಅಂದರೆ ಕೃತಿ ಮತ್ತು ಅದರ ಅರ್ಥವು ಬೇರೆಯಾಗುತ್ತದೆ. ಹಾಗೆಂದು ಅದರ ಪಾತ್ರವೇ ಭಿನ್ನವಾಗಿದೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಒಂದು ಅರ್ಥದಲ್ಲಿ ರಷ್ಯನ್ ರೂಪನಿಷ್ಠರು ಸಾಹಿತ್ಯವನ್ನು ರೂಪ ಮತ್ತು ಅದರ ಸಂಹಿತೆಯನ್ನು ನೋಡಿದ್ದಾರೆ. ಅದರ ಮೂಲಕವೇ ಸಾಹಿತ್ಯವನ್ನು ಗ್ರಹಿಸುವ ಯತ್ನವನ್ನು ಮಾಡಿದ್ದಾರೆ. ಒಂದು ಮಾತು ನಿಜ. ಸಾಹಿತ್ಯ ಮತ್ತು ಅದರ ಸೌಂದರ್ಯವು ಮಾತ್ರವೇ ಒಂದು ಸಾಕಾಗುವುದು ಇಲ್ಲ. ಸಾಹಿತ್ಯವನ್ನು ಮಾತ್ರವೇ ನಾವು ಒಂದು ಸೌಂದರ್ಯಶಾಸ್ತ್ರವೆಂದು ಹೇಳಲು ಬರುವುದು ಇಲ್ಲ. ಕೃತಿಯನ್ನು ಓದುವುದು ಮತ್ತು ಗ್ರಹಿಸುವುದು ಮಾತ್ರವೇ ಮುಖ್ಯವಾದ ಅಂಶವಲ್ಲ. ಕೃತಿಯನ್ನು ಓದುವುದು ಒಂದು ಚಟುವಟಿಕೆಯು ಮಾತ್ರ. ಪಠ್ಯದ ಭಾಷೆ ಮತ್ತು ಅದರ ಚಹರೆಯು ಮಾತ್ರವೇ ಸಾಹಿತ್ಯವು ಅಲ್ಲ. ಪಠ್ಯ ಮತ್ತು ಅದರ ಭಾಷೆಯು ಮಾತ್ರವೇ ಮುಖ್ಯವೆಂದು ತಿಳಿಯಬೇಕಾದ ಅಗತ್ಯವಿಲ್ಲ. ಅದು ಒಂದು ದಾರಿಯು ಮಾತ್ರವೇ ಆಗಿದೆ. ಅದರಲ್ಲಿ ಭಾಷೆಯು ವಾಹಕ. ಅದು ಓದುಗನೊಂದಿಗೆ ಒಂದು ಸಂಬಂಧವನ್ನು ರೂಪಿಸುತ್ತದೆ. ಅದರಲ್ಲಿ ವ್ಯತ್ಯಾಸವಿದೆ. ಬರೀ ಓದಿಗೆ ಮಾತ್ರವೇ ನಾವು ಪ್ರಾಶಸ್ಯವನ್ನು ಕೊಡಬೇಕೆ ಎನ್ನುವುದು ಮುಖ್ಯವಾದ ಪ್ರಶ್ನೆ. ಕಾವ್ಯದ ಸಾಲನ್ನು ಮಾತ್ರವೇ ನೋಡಿಕೊಂಡು ಅದನ್ನು ಮಾತ್ರವೇ ವಿಶ್ಲೇಷಣೆ ಮಾಡಿದರೆ ಸಾಕಾಗುದಿಲ್ಲ ಇಲ್ಲ. ಅದರಲ್ಲಿ ಮಾತ್ರವೇ ಸತ್ವವು ಇದೆ ಎಂದು ಹೇಳಬೇಕಾಗಿಯೂ ಇಲ್ಲ. ಅದು ಒಂದು ಸಾಧನವು ಮಾತ್ರ. ಓದಿಗೆ ಯಾವ ರೀತಿಯ ಪ್ರಾಶಸ್ತ್ಯವನ್ನು ಕೊಡಬೇಕು ಎನ್ನುವುದು ವಿವೇಕಕ್ಕೆ ಸಂಬಂಧಿಸಿದ ಪ್ರಶ್ನೆಯೂ ಆಗುತ್ತದೆ. ಓದು ಮತ್ತು ಅದರ ಅನ್ವಯವನ್ನು ನಾವು ಹೇಗೆ ಮಾಡುತ್ತೇವೆ ಹಾಗೂ ಅದರ ಅರ್ಥವೇನು ಎನ್ನುವುದು ಮಾತ್ರವೇ ಮುಖ್ಯವಾಗಬಾರದು. ಕಾವ್ಯ ಮತ್ತು ಅದರ ಸಾಲು ಸಾಲು ವಿವರಣೆಯು ಮಾತ್ರವೇ ಮುಖ್ಯವಾಗಬಾರದು. ಹಾಗೆ ನೋಡಿದರೆ ಸಾಲುಗಳು ಯಾವುದನ್ನೂ ಹೇಳಲಾರದು. ಅದು ಬರೀ ಒಂದು ನಿರೂಪಣೆಯ ಸಾಧನವು ಮಾತ್ರವೇ ಆಗಿರುತ್ತದೆ. ಓದುವುದು ಮತ್ತು ಅದರ ಗ್ರಹಿಕೆಯು ಮಾತ್ರವೇ ಸಾಕಾಗುವುದು ಇಲ್ಲ. ಇಲ್ಲಿ ಮತ್ತೆ ಕೆಲವು ಪ್ರಶ್ನೆ ಇರುತ್ತವೆ. ಕಾವ್ಯ ಮತ್ತು ಅದರ ಸಾಲುಗಳಲ್ಲಿ ಬರುವ ರೂಪಕಗಳು ಒಂದು ದೃಷ್ಟಿಯಿಂದ ಕೆಲವನ್ನು ಸೋಸುತ್ತದೆ. ಕೇವಲ ಓದನ್ನು ಮಾತ್ರವೇ ವೈಭವೀಕರಿಸಿದರೆ ಕಷ್ಟವಾಗುತ್ತದೆ. ಓದುವ ಸ್ವಾತಂತ್ರ್ಯ ಮತ್ತು ಭಾವನೆಗಳ ಸ್ವಾತಂತ್ರ್ಯ ಎನ್ನುವುದು ಒಂದು ಕೋನವು ಮಾತ್ರ. ಓದಿಗೆ ಯಾವುದೇ ಸೈದ್ಧಾಂತಿಕವಾದ ನಿಲುವು ಬೇಡವೆಂದು ಹೇಳುವುದು ಕಷ್ಟ. ಭಾವನೆಗಳೂ ಕೂಡಾ ಒಂದು ಸಮಾಜವನ್ನು ಹೇಳುತ್ತದೆ. ಹಾಗೆ ನೋಡುವುದಿದ್ದರೆ ಸೈದ್ಧಾಂತಿಕವಾದ ನಿಲುವು ಅತ್ಯಂತ ಸಂಕೀರ್ಣ. ಸಿದ್ಧಾಂತವು ನಮಗೆ ಕೆಲವು ವಿಷಯಗಳಲ್ಲಿ ಒಂದು ತೋರು ದೀಪವೂ ಹೌದು. ಅದರಲ್ಲಿ ಅನೇಕ ಅಂಶಗಳು ಇವೆ. ಅದನ್ನು ನಾವು ಗ್ರಹಿಸಬೇಕಾದ ಅಗತ್ಯವೂ ಇದೆ.

ಯಾವುದೇ ಸಿದ್ಧಾಂತದಲ್ಲಿ ಒಂದು ನಿಲುವು ಎನ್ನುವುದು ಬಹಳ ಮುಖ್ಯ. ಅದರಲ್ಲಿ ನಿಲುವು ಇಲ್ಲದೇ ಹೋದರೆ ಅದನ್ನು ಸ್ವೀಕರಿಸುವುದು ಅತ್ಯಂತ ಕಷ್ಟವೂ ಆಗಿರುತ್ತದೆ. ಆದರೆ ಐ.ಎ.ರಿಚರ್ಡ್ ಮುಂತಾದವರು ಓದು ಎನ್ನುವುದನ್ನು ಮಾತ್ರವೇ ಅತ್ಯಂತ ಮುಖ್ಯವೆಂದು ಭಾವಿಸಿದರು. ಆದರೆ ಅವರು ಯಾವುದೇ ಕೃತಿ ಮತ್ತು ಅದರ ನಿಜವಾದ ನಿಲುವನ್ನು ಕುರಿತು ಹೆಚ್ಚು ವಿವರಿಸಲು ಹೋಗಲೂ ಇಲ್ಲ. ಅವರು ಭಾಷೆ ಮತ್ತು ಅದರ ಬಳಕೆಯು ಮಾತ್ರವೇ ನಮಗೆ ಕೆಲವು ಅನುಭವವನ್ನು ಕೊಡುತ್ತದೆ ಎಂದು ಭಾವಿಸಿದ್ದೂ ಸತ್ಯ. ಸಾಹಿತ್ಯ ಮತ್ತು ಅದು ನೀಡುವ ಕೆಲವು ಸಂದೇಶಗಳನ್ನು ಹಾಗೂ ಅದರ ನಿಲುವನ್ನು ನಾವು ನೋಡಬೇಕಾಗುತ್ತದೆ. ಸಾಹಿತ್ಯವೆಂದರೆ ಅದು ಬರೀ ಖುಷಿ ನೀಡುವ ಸಂಗತಿಯು ಮಾತ್ರವೇ ಆಗಿಲ್ಲ. ಸಾಹಿತ್ಯವು ತನ್ನದಾದ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಸಾಹಿತ್ಯವನ್ನು ನಾವು ಸಮಾಜ ಮತ್ತು ಅದರ ಬೆಳವಣಿಗೆಯನ್ನು ನೋಡದೆ ವಿವರಿಸಲು ಬರುವುದಿಲ್ಲ. ಸಾಹಿತ್ಯ ಮತ್ತು ಅದರ ಸಂಕೇತವೆಂದರೆ ಅದು ಬರೀ ಪಠ್ಯವನ್ನು ಅವಲಂಬಿಸಿಕೊಂಡು ಇರಬೇಕಾಗಿಯೂ ಇಲ್ಲ. ಸಾಹಿತ್ಯ ಮತ್ತು ಅದರ ಅರ್ಥವಂತಿಕೆ ಎಂದರೆ ಅದು ಬರೀ ಭಾಷೆಗೆ ಸಂಬಂಧಪಟ್ಟ ಸಂಗತಿಯು ಅಲ್ಲ. ಒಂದು ಹಂತದಲ್ಲಿ ಫ್ರೆಂಚ್ ರೂಪನಿಷ್ಠರು ಶೈಲಿಯನ್ನು ಚರ್ಚಿಸಿದ್ದು ಈ ಕಾರಣಕ್ಕೆ. ಒಂದು ಪಠ್ಯವು ಹೇಗೆ ಪರಿವರ್ತನೆಯನ್ನು ಹೊಂದುತ್ತದೆ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಸಂಕೇತವಾದಿಗಳು ಒಂದು ಕೃತಿಯಲ್ಲಿ ಸಂಕೇತವು ಯಾವ ರೀತಿಯ ಕೆಲಸವನ್ನು ನಿರ್ವಹಿಸುತ್ತದೆ ಎಂದು ಮಾತ್ರವೇ ನೋಡಿದರು. ಆದರೆ ಅಷ್ಟು ಮಾತ್ರವೇ ಸಾಕಾಗುವುದು ಇಲ್ಲ. ಸಂಕೇತವು ಯಾವ ರೀತಿಯಲ್ಲಿ ಇದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಹಾಗೂ ಅದನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ವಾಸ್ತವವಾಗಿ ಸಂಕೇತ ಮತ್ತು ಅದರ ಅರ್ಥಗಳು ಬೇರೆ ರೀತಿಯಲ್ಲಿಯೂ ಇರುತ್ತದೆ. ಅದನ್ನು ನಾವು ತಾತ್ವಿಕ ಕಾರಣಕ್ಕೆ ಕೂಡಾ ನೋಡಬೇಕಾಗುತ್ತದೆ. ಕೃತಿ ಮತ್ತು ಅದರ ಆಶಯವನ್ನು ನಾವು ನೋಡಬೇಕಾಗುತ್ತದೆ. ಮತ್ತು ಅದರಲ್ಲಿ ಅದರ ಅರ್ಥವನ್ನು ಗ್ರಹಿಸಬೇಕಾಗುತ್ತದೆ. ಸಂಕೇತವು ಯಾವುದರ ಜೊತೆಗೆ ಬಂದಿದೆ ಮತ್ತು ಅದರ ನಿಜವಾದ ಅರ್ಥವು ಯಾವುದು ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ಸಂಕೇತಕ್ಕೆ ಅದರದೇ ಆದ ಒಂದು ಅರ್ಥವು ಇರುವುದಿಲ್ಲ. ಅದನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ಎನ್ನುವುದು ಮಾತ್ರವೇ ಇಲ್ಲಿ ಗಮನಾರ್ಹ. ಸಂಕೇತವು ಒಂದು ಕೃತಿಯಲ್ಲಿ ಒಂದು ಘಟಕ ಮಾತ್ರ. ಅದು ಯಾವುದೇ ಸೂಚನೆ ಮತ್ತು ಅದರ ದಿಕ್ಕುಗಳನ್ನು ಬಿಟ್ಟುಕೊಂಡು ಬಿಡುತ್ತದೆ. ಸಂಕೇತವನ್ನು ಹಸ್ರೆಲ್ ಮುಂತಾದವರು ವಿವರಿಸಿದ್ದೂ ನಿಜ. ಭಾಷೆ ಮತ್ತು ಧ್ವನಿಗೆ ಅವರು ಅರ್ಥವು ಇದೆ ಎಂದು ಹೇಳಿದ್ದೂ ಅಷ್ಟೇ ಸತ್ಯ. ಆದರೆ ಸಂಕೇತವು ಬಳಕೆಯಾದ ಮಾತ್ರಕ್ಕೆ ಅದು ಪರಿಪೂರ್ಣವಾಗಿರುವುದೂ ಇಲ್ಲ. ಫ್ರೆಂಚ್ ರೂಪನಿಷ್ಠರು ಸಾಹಿತ್ಯ ಮತ್ತು ಅದರ ರೂಪದಲ್ಲಿ ಬರುವ ಸಂಕೇತವನ್ನು ಒಂದು ಸಂವಾದಿಯಾದ ಅರ್ಥದಲ್ಲಿ ಸ್ವೀಕಾರವನ್ನು ಮಾಡಿದ್ದಾರೆ. ಅದಕ್ಕೆ ಸಂವಾದಿಯಾದ ಒಂದು ಕೆಲಸವೂ ಇದೆ ಎನ್ನುವುದು ಅವರ ನಂಬಿಕೆಯು ಆಗಿದೆ. ಅದಕ್ಕೆ ಅದರದೇ ಆದ ಲಕ್ಷಣಗಳು ಇವೆ. ಅದನ್ನು ನಾವು ಮರೆಯಬಾರದು. ಆದರೆ ಸಂಕೇತವು ಅನೇಕವನ್ನು ಕ್ರೋಢೀಕರಿಸಿಕೊಂಡು ಹೇಳುತ್ತದೆ. ಆದರೆ ಒಂದು ಪಠ್ಯದಲ್ಲಿ ಹೇಗೆ

ಕೆಲವು ಮುಖ್ಯವಾಗುತ್ತದೆ ಮತ್ತು ಯಾವ ರೀತಿಯಲ್ಲಿ ಸಂಕೇತವು ಬಳಕೆಯು ಆಗುತ್ತದೆ ಎಂದು ನೋಡಬೇಕಾದ ಅಗತ್ಯವೂ ಇರುತ್ತದೆ. ಪಠ್ಯವು ಓದಲು ಹೇಗೆ ಮುಖ್ಯವಾಗುತ್ತದೆಯೋ ಅದರಂತೆ ಅದು ತನ್ನ ಅಸ್ತಿತ್ವವನ್ನು ಓದುಗನಿಗೆ ಸೂಚಿಸುವಾಗ ಅದರಲ್ಲಿ ಅದರ ಅರ್ಥ ಮತ್ತು ಅದರ ನಿಲುವೂ ಅಷ್ಟೇ ಮುಖ್ಯ. ಪಠ್ಯವನ್ನು ಗ್ರಹಿಸುವುದು ಅಂದರೆ ಅದರಲ್ಲಿ ಅದರ ಉದ್ದೇಶವನ್ನು ಗ್ರಹಿಸುವುದು ಎಂದು ಆಗುತ್ತದೆ. ಆದರೆ ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳು ಇರುತ್ತವೆ. ಕೃತಿ ಮತ್ತು ಅದರ ಓದನ್ನು ನಾವು ಇತ್ಯಾತ್ಮಕವಾಗಿ ಗ್ರಹಿಸುವಾಗ ಅದರ ಸಾಧ್ಯತೆಯೂ ಅಷ್ಟೇ ಮುಖ್ಯವಾಗುತ್ತದೆ. ಕೃತಿಯು ಒಂದು ಚಲನೆ. ಈ ಚಲನೆಯು ಲೇಖಕನಿಂದ ಓದುಗನ ಕಡೆಗೆ ಹೋಗುತ್ತದೆ. ಇಲ್ಲಿ ಬಹಳ ಮುಖ್ಯವಾದ ಅಂಶವೆಂದರೆ ಈ ಚಲನೆಯು ಸೈದ್ಧಾಂತಿಕವೂ ಆಗಿರಬೇಕಾಗುತ್ತದೆ. ಅದನ್ನು ನಾವು ಜವಾಬ್ದಾರಿ ಎಂದು ಹೇಳಬೇಕಾಗುತ್ತದೆ. ಓದು ಎನ್ನುವುದು ಶೂನ್ಯವಾದ ಒಂದು ಕ್ರಿಯೆಯು ಅಲ್ಲ. ಅದರಲ್ಲಿ ಕೆಲವು ಜವಾಬ್ದಾರಿಯು ಇರುತ್ತದೆ. ಒಂದು ನಿರ್ದಿಷ್ಟವಾದ ಪಠ್ಯವನ್ನು ನಾವು ಬೇರೆ ಬೇರೆ ರೀತಿಯಲ್ಲಿಯೂ ನೋಡುತ್ತೇವೆ ನಿಜ. ಆದರೆ ಪಠ್ಯವೆನ್ನುವುದು ಬರೀ ಪದಗಳು ಸಮೂಹವು ಮಾತ್ರವೇ ಅಲ್ಲ. ಚಿತ್ರವನ್ನು ಓದುವುದು, ನಾಟಕವನ್ನು ಓದುವುದು, ಸಂಗೀತವನ್ನು ಓದುವುದು ಅಂತ ಇಲ್ಲ. ಈ ಕಾರಣಕ್ಕೆ ಪಠ್ಯವನ್ನು ನಾವು ಹೆಚ್ಚು ಕ್ರಿಯಾಶೀಲವಾದ ಒಂದು ಶಕ್ತಿಯೆಂದು ಹೇಳಬೇಕಾಗುತ್ತದೆ. ಆದರೆ ಸಾಹಿತ್ಯವನ್ನು ಓದುವುದು ಮತ್ತು ಗ್ರಹಿಸುವುದು ಅಂದರೆ ಅದು ಹೆಚ್ಚು ಕ್ರಿಯಾಶೀಲ ಮತ್ತು ಅದರಲ್ಲಿ ಹೆಚ್ಚು ಮುಖ್ಯವಾದದ್ದು ಓದುಗನ ಶಕ್ತಿಯೆಂದು ಓದುಗ ಕೇಂದ್ರಿತವಾದ ವಿಮರ್ಶೆಯು ಹೇಳುತ್ತದೆ. ಓದುವುದು ಮತ್ತು ಅದನ್ನು ಹೆಚ್ಚು ವೈಭವೀಕರಿಸುವುದು ಅಂದರೆ ಅರ್ಥ ಹಿಂಸೆಯನ್ನು ಉಂಟು ಮಾಡುವುದೂ ಹೌದು. ಒಂದು ನಿರ್ದಿಷ್ಟವಾದ ಕೃತಿಯು ಮಾತ್ರವೇ ಓದುಗ ಕೇಂದ್ರಿತವಾದ ಪಠ್ಯಕ್ಕೆ ಮುಖ್ಯವಾಗುತ್ತದೆ. ಸಾಹಿತ್ಯ ಕೃತಿ ಮತ್ತು ಅದರ ಆಶಯವನ್ನು ಮಾತ್ರವೇ ನೋಡುವುದು ಅಗತ್ಯವಿಲ್ಲವೆನ್ನುವುದು ಅದರ ನಿಲುವು ಆಗಿದೆ. ಆದರೆ ಕೃತಿಯನ್ನು ಓದುವುದು ಮತ್ತು ಅದನ್ನು ಗ್ರಹಿಸುವುದು ಮಾತ್ರವೇ ಮುಖ್ಯವಾದ ಪ್ರಕ್ರಿಯೆಯು ಆಗಬೇಕಾಗಿಯೂ ಇಲ್ಲ. ಕೃತಿಯನ್ನು ಓದುವುದು ಮತ್ತು ಗ್ರಹಿಸುವುದು ಅಂದರೆ ಅದನ್ನು ದ್ವಂದ್ವಾತ್ಮಕವಾಗಿಯೂ ನೋಡುವುದು ಎನ್ನುವುದು ಅದರಲ್ಲಿ ಮುಖ್ಯವಾಗುವುದು ಇಲ್ಲ. ಓದುವುದು ಮತ್ತು ಅದರ ಅರ್ಥವನ್ನು ಅತ್ಯಂತ ಹೆಚ್ಚು ವೈಭವೀಕರಿಸುವುದು ಅಂದರೆ ಅದರಲ್ಲಿ ಇತರ ಅಂಶಗಳನ್ನು ದೂರ ಇಡುವುದು ಅಂತಲೂ ಆಗುತ್ತದೆ. ಓದುಗ ಕೇಂದ್ರಿತವಾದ ವಿಮರ್ಶೆಯಲ್ಲಿ ಭಾಷೆಯು ಸಂವಾದಿಯೂ ಆಗುತ್ತದೆ. ಕೃತಿ ಮತ್ತು ಓದುಗನು ಮಾತ್ರವೇ ಇಲ್ಲಿ ಮುಖ್ಯನಾಗುತ್ತಾನೆ. ಹಾಗೆಂದು ಸಾಹಿತ್ಯದ ಪಠ್ಯವೆಂದರೆ ಅದರಲ್ಲಿ ಓದುಗನು ಮಾತ್ರವೇ ಇದ್ದಾನೆ ಎಂದು ಅರ್ಥವಲ್ಲ. ಸಾಹಿತ್ಯದ ಕೃತಿಯನ್ನು ಓದುವುದು ಅಂದರೆ ಭೂಮಿಯಲ್ಲಿ ಖನಿಜ ನಿಕ್ಷೇಪವನ್ನು ಹುಡುಕಿದಂತೆ ಅಲ್ಲ. ಸಹಜ ಓದುಗನು ತನಗೆ ಬೇಕಾದ್ದನ್ನು ಆಯ್ಕೆ ಮಾಡುತ್ತಾನೆ. ಆದ್ದರಿಂದಲೇ ಅದರಲ್ಲಿ ಅವನ ಆಯ್ಕೆಗಳು ಮಾತ್ರವೇ ಮುಖ್ಯವಾಗುವುದು ಇಲ್ಲ. ಕೃತಿಯನ್ನು ವಿಮರ್ಶಾತ್ಮಕವಾಗಿ ಓದುವುದು ಅಂದರೆ ಅವನು ಶೈಕ್ಷಣಿಕವಾಗಿಯೂ ರೂಪುಗೊಂಡಿದ್ದಾನೆ ಎಂದು ಅರ್ಥವಾಗುತ್ತದೆ. ಕೃತಿಯನ್ನು ಮಾತ್ರವೇ ನೋಡುವುದು ಮತ್ತು ಅದನ್ನು ಮಾತ್ರವೇ ಸ್ವೀಕರಿಸುವುದು

ಅಂದರೆ ಅದರಲ್ಲಿ ಬೇರೆ ಯಾವ ಅಂಶಗಳನ್ನು ಅರ್ಥ ಮಾಡಿಕೊಳ್ಳದೆ ಇರುವುದು ಅಂತಲೂ ಆಗುತ್ತದೆ. ಎಷ್ಟೋ ಸರ್ತಿ ಓದನ್ನು ಸರಿಯಾಗಿ ಮಾಡದೇ ಹೋದರೆ ಅದರ ಅರ್ಥವು ಬೇರೆಯಾಗುತ್ತದೆ. ಅದರಲ್ಲಿ ಅರ್ಥ ಹಿಂಸೆಯು ಆಗುತ್ತದೆ. ಪಠ್ಯವನ್ನು ಸರಿಯಾಗಿ ಗ್ರಹಿಸುವುದು ಅಂದರೆ ಅದನ್ನು ಬೇಕಾ ಬಿಟ್ಟಿಯಾಗಿ ಗ್ರಹಿಸುವುದು ಎಂದು ಭಾವಿಸಬಾರದು. ವಾಸ್ತವವಾಗಿ ಯಾವುದೇ ಕಲಾಕೃತಿಯನ್ನು ನೋಡುವುದು ಮತ್ತು ಗ್ರಹಿಸುವುದು ಅಂದರೆ ಅದರಲ್ಲಿ ಇರುವ ಸಂಗತಿಯನ್ನು ಗಮನಿಸುವುದೂ ಹೌದು. ಆದರೆ ಅದರೊಂದಿಗೆ ನಾವು ಮತ್ತೆ ಕೆಲವು ಅಂಶವನ್ನು ಕೂಡಾ ತಿಳಿಯಬೇಕಾಗುತ್ತದೆ. ಕಲಾಕೃತಿಯು ಒಂದು ಮಾದರಿಯೂ ಹೌದು. ಆದರೆ ಅದರಲ್ಲಿ ಕೆಲವು ಆಶಯವೂ ಇರುತ್ತದೆ. ಮತ್ತು ಅದನ್ನು ಗ್ರಹಿಸುವುದು ಅತ್ಯಂತ ಅಗತ್ಯ. ಸಾಹಿತ್ಯ ಮತ್ತು ಅದರ ಸಿದ್ಧಾಂತವನ್ನು ನಾವು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಯಾವುದೇ ಸಾಹಿತ್ಯ ಮತ್ತು ಅದರ ಸಿದ್ಧಾಂತವನ್ನು ನೋಡುವಾಗ ಅದರ ಅದರಲ್ಲಿ ಇರುವ ನಿಲುವು ಯಾವ ಮಾದರಿಯು ಆಗಿರುತ್ತದೆ ಮತ್ತು ಅದರಲ್ಲಿ ಯಾವುದನ್ನು ಹೇಳಲಾಗಿದೆ ಎನ್ನುವುದೂ ಅಷ್ಟೇ ಮುಖ್ಯ. ಸಾಹಿತ್ಯದ ಸಿದ್ಧಾಂತವು ವಾಸ್ತವವಾಗಿ ಒಂದು ಸಾಹಿತ್ಯ ಮತ್ತು ಅದರ ಸಂಗತಿಯನ್ನು ನಿರೂಪಿಸುತ್ತದೆ. ಹಾಗೂ ಅದರಲ್ಲಿ ಸಾಹಿತ್ಯ ಮತ್ತು ಅದರ ಕೆಲಸದ ವ್ಯಾಖ್ಯಾನವೂ ಇರುತ್ತದೆ. ಸಾಹಿತ್ಯ ಮತ್ತು ಅದರ ಅದರ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಸಾಹಿತ್ಯ ಸಿದ್ಧಾಂತವು ನಮಗೆ ಸಹಾಯವನ್ನು ಮಾಡುತ್ತದೆ. ಯಾರು ಸಾಹಿತ್ಯ ಮತ್ತು ಅದರ ಪಠ್ಯಕ್ಕೆ ಮಾತ್ರವೇ ಸೀಮಿತವಾಗುತ್ತಾರೆಯೋ ಅವರು ಉಳಿದ ವಿಷಯಗಳನ್ನು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗುವುದೂ ಇಲ್ಲ. ಇಲ್ಲಿ ಮತ್ತೆ ಕೆಲವು ವಿಷಯಗಳು ಇವೆ. ಸಾಹಿತ್ಯ ಸಿದ್ಧಾಂತವು ಕೃತಿಯನ್ನು ಹೇಗೆ ಅರ್ಥ ಮಾಡಿಕೊಳ್ಳಬಹುದು ಮತ್ತು ಅದನ್ನು ಹೇಗೆ ಸ್ವೀಕರಿಸಬಹುದು ಎಂದು ಹೇಳಿಕೊಡುತ್ತದೆ. ವಾಸ್ತವವಾಗಿ ಅದು ಅರ್ಥವಿಸಿಕೊಳ್ಳುವ ಪ್ರಕ್ರಿಯೆಯನ್ನು ಹೇಳುತ್ತದೆ. ಆದರೆ ಅದು ಅರ್ಥಹಿಂಸೆಯನ್ನು ಪ್ರಚೋದಿಸುತ್ತದೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಬರಹ ಮತ್ತು ಅದರ ಅರ್ಥ ಹಿಂಸೆಯನ್ನು ಸಸೂರ್ ವಿರೋಧಿಸುತ್ತಾನೆ. ಉತ್ಪಾದನೆ ಮತ್ತು ಅದರ ಸ್ವರೂಪವನ್ನು ನೋಡುವಾಗ ನಾವು ಅರ್ಥ ಹಿಂಸೆಯನ್ನು ಮಾಡಬೇಕೇ ಎನ್ನುವುದು ಮೂಲಭೂತವಾದ ಪ್ರಶ್ನೆಯು ಆಗಿದೆ. ಪಠ್ಯ ಮತ್ತು ಅದರ ಸಿದ್ಧಾಂತಗಳು ಜೊತೆಗೆ ಹೋಗುತ್ತವೆ. ಮತ್ತು ಕೃತಿಯಲ್ಲಿ ಬರುವ ಸಂಕೇತ ಮತ್ತು ಅದರ ವ್ಯಾಪ್ತಿಯನ್ನು ನಾವು ಈ ದೃಷ್ಟಿಯಿಂದ ಬೇರೆ ಮಾಡುವ ರೀತಿಯಲ್ಲಿ ಯೋಚಿಸುವ ಅಗತ್ಯವಿಲ್ಲ. ಸಂಕೇತ ಮತ್ತು ಅದರ ನಿಯಮವನ್ನು ಒಂದು ಕೃತಿಯು ಹೇಗೆ ಜೊತೆಗೆ ಸೇರಿಸಿಕೊಂಡಿರುತ್ತದೆ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಸಂಕೇತ ಮತ್ತು ಅದರ ವ್ಯಾಪ್ತಿಯು ಈ ದೃಷ್ಟಿಯಿಂದ ಕೃತಿಯಲ್ಲಿ ನಿರ್ದಿಷ್ಟವಾದ ಅರ್ಥದಲ್ಲಿ ಕೆಲಸವನ್ನು ಮಾಡುತ್ತದೆ. ಆದರೆ ಅದರಲ್ಲಿ ಇರುವ ಅರ್ಥವನ್ನು ನಾವು ಹೇಗೆ ನೋಡಬೇಕು ಮತ್ತು ಅದನ್ನು ಹೇಗೆ ಗ್ರಹಿಸಬೇಕು ಎನ್ನುವುದು ಮಾತ್ರವೇ ಬಹಳ ಮುಖ್ಯವಾಗುತ್ತದೆ. ಇಲ್ಲಿ ಸಂಕೇತ ಮತ್ತು ಅದರ ವ್ಯಾಪ್ತಿಯನ್ನು ಅದರ ಉದ್ದೇಶಕ್ಕೆ ಅನುಸಾರವಾಗಿ ಮಾತ್ರವೇ ನೋಡಬೇಕಾಗುತ್ತದೆ. ಸೂಚನೆ ಮತ್ತು ಅದರ ವ್ಯಾಪ್ತಿಯನ್ನು ಈ ದೃಷ್ಟಿಯಿಂದ ನಾವು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಕೃತಿಯಲ್ಲಿ ಬರುವ ಸೂಚನೆಗಳು

ಈ ಕಾರಣದಿಂದ ಬೇರೆಯಾಗುತ್ತದೆ. ಅದರಲ್ಲಿ ಆಶಯ ಮತ್ತು ಅದರ ಅರ್ಥವೂ ಅತ್ಯಂತ ಮುಖ್ಯವಾಗುತ್ತದೆ. ಕೃತಿಯಲ್ಲಿ ಬರುವ ಸೂಚನೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು ಆಗಿರುತ್ತದೆ. ಕೃತಿಯಲ್ಲಿ ಬರುವ ಭಾಷೆಯು ಸೂಚನೆಗಳು ಮಾತ್ರವೇ ಆಗಿರುತ್ತದೆ. ಭಾಷೆಯು ಒಂದು ಕೀಲಿಕೈ. ಕೃತಿಯಲ್ಲಿ ಬರುವ ಪಠ್ಯ ಮತ್ತು ಉಪಪಠ್ಯಗಳನ್ನು ಈ ದೃಷ್ಟಿಯಲ್ಲಿ ನಾವು ಓದಬೇಕಾದ ಕ್ರಮಗಳು ಬೇರೆಯಾಗುತ್ತವೆ. ಉಪಪಠ್ಯಗಳು ವಾಸ್ತವವಾಗಿ ಒಂದು ಪ್ರಧಾನವಾದ ಪಠ್ಯವನ್ನು ಗ್ರಹಿಸಲು ಇರುವ ಸಾಧನವು ಮಾತ್ರವೇ ಆಗಿರುತ್ತದೆ. ಕೃತಿಯಲ್ಲಿ ಬರುವ ಸೂಚನೆಗಳು ಬರಹದಲ್ಲಿದೆ. ಮತ್ತು ಅದು ಕೆಲವು ಅಂಶಗಳನ್ನು ಹೇಳುತ್ತವೆ. ಅದೇ ಮೂಲಭೂತವಾಗಿ ಕೆಲವು ವಿಚಾರಗಳನ್ನು ಹೇಳುತ್ತವೆ. ಲೇಖಕನು ಒಂದು ಕೃತಿಯ ಮೂಲಕವೇ ಕೆಲವನ್ನು ಹೇಳುತ್ತಾನೆ. ಓದುಗನೇ ಒಂದು ದಿಕ್ಕು ಕೃತಿಕಾರನೇ ಒಂದು ದಿಕ್ಕು ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಒಂದು ಕೃತಿಯನ್ನು ಓದುವುದು ಮತ್ತು ವಿಸ್ತರಿಸುವುದು ಅಂದರೆ ಅದರಲ್ಲಿ ಅರ್ಥ ಮತ್ತು ಅದರ ವಿಸ್ತರಣೆಯು ಮಾತ್ರವೇ ಇರುವುದೂ ಇಲ್ಲ. ಒಂದು ಪಠ್ಯದ ಹಿಂದೆ ಅನೇಕ ರೀತಿಯ ಕೌಶಲಗಳು ಇರುತ್ತದೆ ಎನ್ನುವುದೂ ಅಷ್ಟೇ ಸತ್ಯವಾದ ಸಂಗತಿ. ಕೃತಿಯು ಈ ದೃಷ್ಟಿಯಿಂದ ಅನೇಕ ಸಂಜ್ಞೆಗ್ಗಳನ್ನು ಬಳಸುತ್ತದೆ. ಅದರಲ್ಲಿ ಸಂಜ್ಞೆ ಮತ್ತು ಅದರ ಸ್ವರೂಪವು ಅತ್ಯಂತ ಮಹತ್ವ. ಯಾವಾಗ ಈ ಸಂಜ್ಞೆಗ್ಗಳನ್ನು ಹೇಗೆ ಬಳಸುತ್ತೇವೆ ಮತ್ತು ಅದರ ಅರ್ಥವು ಯಾವ ರೀತಿಯಲ್ಲಿ ಇರುತ್ತದೆ ಎನ್ನುವುದೂ ಅಷ್ಟೇ ಮುಖ್ಯವಾದ ಸಂಗತಿ. ಸಂಯೋಜನೆಗೆ ಮತ್ತು ಅದು ಸೂಚಿಸುವ ಅರ್ಥಕ್ಕೆ ಸಂಬಂಧವಿದೆ. ಅರ್ಥ ಮತ್ತು ಅದರ ಕಾರಣವು ಇಲ್ಲಿ ಅತ್ಯಂತ ಮುಖ್ಯವಾಗಿದೆ. ಅರ್ಥ ಮತ್ತು ಅದರ ಭಿನ್ನತೆಯು ಇಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಯಾವುದೇ ಕೃತಿಯಲ್ಲಿ ಅರ್ಥರಹಿತತೆ ಎನ್ನುವುದು ಇಲ್ಲ. ಅದರಲ್ಲಿ ಬರುವ ಅರ್ಥವನ್ನು ನಾವು ಈ ದೃಷ್ಟಿಯಿಂದ ಗ್ರಹಿಸಲೇಬೇಕಾಗುತ್ತದೆ. ಸಾಹಿತ್ಯ ಮತ್ತು ಅದರ ಸನ್ನಿವೇಶವು ಇಲ್ಲಿ ತಾತ್ವಿಕ ಅತ್ಯಂತ ಮುಖ್ಯವಾದ ಸಂಗತಿಯೂ ಹೌದು. ಸನ್ನಿವೇಶವು ಇಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅಂದರೆ ಸಾಹಿತ್ಯ ಮತ್ತು ಅದರ ಅಗತ್ಯವನ್ನು ಇಲ್ಲಿ ನಾವು ಸನ್ನಿವೇಶದ ಹಿನ್ನೆಲೆಯಿಂದ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕವಿತೆ ಎನ್ನುವುದು ಈ ದೃಷ್ಟಿಯಿಂದ ಅಕಾರಣವಲ್ಲ. ಭಾಷೆ ಮತ್ತು ಅದರ ಸ್ವರೂಪವನ್ನು ನಾವು ಕವಿತೆಯಲ್ಲಿ ನೋಡುವಾಗ ಅದರ ಸೂಚಕನಾದ ಕವಿಯನ್ನು ನೋಡಬೇಕಾಗುತ್ತದೆ. ಓದುಗ ಮತ್ತು ಕೃತಿಯೆನ್ನುವುದು ಈ ದೃಷ್ಟಿಯಿಂದ ದ್ವಂದ್ವಾತ್ಮಕವಾದ ಸಂಗತಿಯೂ ಆಗುತ್ತದೆ. ರೂಪನಿಷ್ಠರು ಹೇಳುವ ಕ್ರಮವನ್ನು ಡೆರಿಡಾ ತಿರಸ್ಕರಿಸುತ್ತಾನೆ. ಕೃತಿಯ ಸಂಗತಿಗಳು ನಮಗೆ ಬೇರೆ ಬೇರೆ ಕಾರಣಕ್ಕೆ ತಟ್ಟುತ್ತವೆ. ಅನೇಕ ಸಂದರ್ಭದಲ್ಲಿ ಕೃತಿ ಮತ್ತು ಅದರ ಸಂಯೋಜನೆಯು ನಮ್ಮ ಸಂವೇದನೆಯನ್ನು ತಟ್ಟುತ್ತದೆ. ಅನೇಕ ಸಂದರ್ಭದಲ್ಲಿ ಕೃತಿ ಮತ್ತು ಅದರ ಅರ್ಥವನ್ನು ನಾವು ನೋಡುವಾಗ ಅದರ ನಿರ್ದಿಷ್ಟತೆಯನ್ನು ಗಮನಿಸಬೇಕಾಗುತ್ತದೆ. ಕೃತಿಯಲ್ಲಿ ಅರ್ಥವು ಅಸ್ಪಷ್ಟವಾಗಲು ಸಾಧ್ಯವಿಲ್ಲ. ಅದರಲ್ಲಿ ವಿವಿಧತೆಯು ಇರುತ್ತದೆ. ಅದನ್ನು ನೋಡುವಾಗ ನಾವು ನಮಗೆ ತಿಳಿದ ಅರ್ಥದ ಚರಿತ್ರೆಯನ್ನು ಸ್ವೀಕರಿಸಬೇಕಾಗುತ್ತದೆ. ಅರ್ಥವೂ ಕೂಡಾ ಚರಿತ್ರೆಯನ್ನು ಹೇಳುತ್ತದೆ. ಸಂವೇದನೆ ಮತ್ತು ಅದರ ಚರಿತ್ರೆಯೂ ಇಲ್ಲಿ ಗಮನಾರ್ಹವಾಗುತ್ತದೆ.

ಚರಿತ್ರೆಯು ಕೂಡಾ ಅರ್ಥವನ್ನು ಉತ್ಪಾದಿಸಿದೆ. ಭಾಷೆ ಮತ್ತು ಅದರ ಸಂಜ್ಞೆಗಳು ಅತ್ಯಂತ ಮುಖ್ಯವಾದ ಸಂಗತಿ ಆಗುವುದು ಹೀಗೆ. ಇಲ್ಲಿ ಹೇಳಬೇಕಾದ ಮತ್ತೊಂದು ಸಂಗತಿಯೂ ಇದೆ. ಯಾವುದನ್ನು ಸಂವೇದನೆ ಎಂದು ಹೇಳುತ್ತೇವೆಯೋ ಅದು ರೂಪೀಕರಣವಾಗಿದೆ. ಅದು ಸ್ವತಂತ್ರವಲ್ಲ. ಚರಿತ್ರೆಯಿಂದ ಅದು ರಚಿತವಾಗಿದೆ. ಬರಹ ಮತ್ತು ಅದರ ಸಂಜ್ಞೆಯು ಒಂದು ಬಗೆಯದು. ಮಾತು ಅದರ ಸಂಜ್ಞೆಯು ಮತ್ತೊಂದು ಬಗೆಯದು. ಹಾಗೆಂದು ಅವುಗಳು ಲಕ್ಷಣ ರಹಿತವಾದ ಸಂಗತಿಗಳು ಅಲ್ಲ. ಆದರೆ ಡೆರಿಡಾ ಕೃತಿಯ ಆಂತರಿಕವಾದ ಪಠ್ಯವನ್ನು ಒಪ್ಪಿಕೊಂಡಿದ್ದ. ಆಂತರಿಕವಾದ ಪಠ್ಯಗಳು ಮತ್ತು ಅದನ್ನು ಅರ್ಥ ಮಾಡಿಕೊಳ್ಳುವ ಕ್ರಮಗಳನ್ನು ನಾವು ಅರ್ಥ ರಹಿತವಾದ ಸಂಗತಿಯೆಂದು ಹೇಳಬೇಕಾಗಿಯೂ ಇಲ್ಲ. ನವ್ಯ ವಿಮರ್ಶೆಯು ವಾಸ್ತವವಾಗಿ ತನ್ನ ನಿಲುವನ್ನು ಹೇಳುವಾಗ ಅದನ್ನು ವೈಜ್ಞಾನಿಕವೆಂದು ಹೇಳಿಕೊಂಡಿತು. ಅದನ್ನು ಅದು ನಿರ್ವಹಿಸಿದ ಕ್ರಮವು ಬೇರೆ. ಆದರೆ ಅರ್ಥಗಳ ಚರಿತ್ರೆಯನ್ನು ಗ್ರಹಿಸಲು ಯತ್ನವನ್ನು ಮಾಡಲಿಲ್ಲ. ಪಾಂಡಿತ್ಯವು ಅದಕ್ಕೆ ಹೆಚ್ಚು ಮುಖ್ಯವಾಯಿತು. ಅದರೊಂದಿಗೆ ಅದು ವ್ಯಕ್ತಿ ಮತ್ತು ಅವನ ಪ್ರತಿಭೆಯನ್ನು ಕೇಂದ್ರವಾಗಿರಿಸಿತು. ಸಾಹಿತ್ಯವನ್ನು ವಿಮರ್ಶೆ ಮಾಡುವುದು ಎಂದರೆ ಅದರ ಪ್ರಕಾರ ಪಾಂಡಿತ್ಯವನ್ನು ಸೂಚಿಸುವ ಪ್ರಶ್ನೆಯೂ ಆಗಿರುತ್ತದೆ. ವಿಮರ್ಶೆ ಎಂದರೆ ಅದು ಮೂಲಭೂತವಾಗಿ ಒಂದು ಸಂಗತಿಯೂ ಆಗಿರುತ್ತದೆ. ವಿಮರ್ಶೆಯು ಗಂಭೀರ ಮತ್ತು ಅದರ ಹೆಚ್ಚು ಮಾನವೀಯವಾದ ಬದ್ಧತೆಯನ್ನು ಹೇಳಬೇಕಾಗುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ ಬರೀ ಒಂದು ಓದು ಮಾತ್ರವೇ ಸಾಕು ಎಂದು ಹೇಳುವುದು ಸರಿಯಾದ ಕ್ರಮವಲ್ಲ. ಯಾರೂ ಏನು ಬೇಕಾದರೂ ಹೇಳಬಹುದು ಅಂತಿಮವಾಗಿ ಸಾಹಿತ್ಯವು ಮುಖ್ಯವಾಗಿ ನಿಲ್ಲುವುದು ಬರೀ ಸಮಾಜ ಮತ್ತು ಅದರ ಸ್ವರೂಪದಲ್ಲಿ ಎನ್ನುವುದು ಎಲ್ಲರಿಗೂ ತಿಳಿದ ವಿಷಯವು ಆಗಿದೆ. ವಾಸ್ತವವಾಗಿ ಯಾವುದೇ ಬರಹ ಮತ್ತು ಅದರ ನೆಲೆಗಳು ಸಾಮಾಜಿಕವೂ ಆಗಿರುತ್ತದೆ. ಅದರಲ್ಲಿ ನಿರ್ದಿಷ್ಟವಾದ ಅರ್ಥವೂ ಇರುತ್ತದೆ. ಆದರೆ ನವ್ಯ ವಿಮರ್ಶೆಯು ಮೂಲಭೂತವಾಗಿ ಒಂದು ನಿರ್ದಿಷ್ಟವಾದ ಸಂಗತಿಯನ್ನು ಮಾತ್ರವೇ ವೈಜ್ಞಾನಿಕ ಎಂದು ಹೇಳುತ್ತದೆ. ಅದರ ಸ್ವರೂಪವೂ ಬೇರೆಯಾಗಿರುತ್ತದೆ. ಸಾಹಿತ್ಯವನ್ನು ನೋಡುವುದು ಮತ್ತು ಗ್ರಹಿಸಿಕೊಳ್ಳುವುದು ಮೂಲಭೂತವಾಗಿ ಒಂದು ಸೀಮಿತವಾದ ಚೌಕಟ್ಟಿನಲ್ಲಿ ಮಾತ್ರವೇ ಎನ್ನುವುದನ್ನು ಇಲ್ಲಿ ದಾಖಲಿಸಬೇಕು. ನವ್ಯ ವಿಮರ್ಶೆಯು ವ್ಯಕ್ತಿ ಮತ್ತು ಅವನ ಅನುಭವ ಹಾಗೂ ಅವನ ಪ್ರತಿಭೆಯನ್ನು ಮಾತ್ರವೇ ನಂಬುತ್ತದೆ. ಹಾಗೆ ನೋಡುವುದಿದ್ದರೆ ಸಾಹಿತ್ಯ ಮತ್ತು ಅದರ ವಿಮರ್ಶೆಯು ಕೆಲವು ವಿಚಾರವನ್ನು ಹಂಚಿಕೊಳ್ಳುತ್ತದೆ. ಸಾಹಿತ್ಯ ವಿಮರ್ಶೆಯು ಅಂತಿಮವಾಗಿ ಕೆಲವನ್ನು ಮಾತ್ರವೇ ಹೇಳುತ್ತವೆ. ಅದು ಬದ್ಧತೆಯನ್ನು ಹೊಂದುವುದು ಅನಿವಾರ್ಯವೂ ಆಗುತ್ತದೆ. ಸಾಹಿತ್ಯ ವಿಮರ್ಶೆ, ಸೌಂದರ್ಯಶಾಸ್ತ್ರ ಹಾಗೂ ಸಾಮಾಜಿಕ ಚಿಂತನೆಗಳು ಜೊತೆಯಲ್ಲಿ ಇರುವುದು ಮಾರ್ಕ್ಸ್‌ವಾದದಲ್ಲಿ ಮಾತ್ರವೇ. ಸಾಹಿತ್ಯ ವಿಮರ್ಶೆಯನ್ನು ಒಂದು ಸೈದ್ಧಾಂತಿಕವಾದ ನೆಲೆಯಲ್ಲಿ ನೋಡಿದ್ದು ಅದು ಮಾತ್ರ. ಆದರೆ ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬರುತ್ತವೆ. ಸಾಹಿತ್ಯ ಸಿದ್ಧಾಂತದಲ್ಲಿ ಸೈದ್ಧಾಂತಿಕತೆಗೆ ಹೆಚ್ಚು ಮಹತ್ವವು ಇದೆ. ಅದರಲ್ಲಿ ವಿಚಾರವೂ ಅತ್ಯಂತ ಮಹತ್ವದ್ದೂ ಆಗಿದೆ. ಅದು ಚರಿತ್ರೆಯನ್ನು ನೋಡುತ್ತದೆ. ಅದರಲ್ಲಿ ಜೀವನ ಮತ್ತು ಅದರ ವಿವರಣೆಗೂ ಅತ್ಯಂತ ಖಚಿತವಾದ ಅರ್ಥವು ಇದೆ.

ವಾಸ್ತವವಾಗಿ ಯಾವುದನ್ನು ಈವತ್ತು ಕವಿತೆ ಮತ್ತು ಅದರ ಧ್ವನಿ ಎನ್ನುವುದಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗಿದೆಯೋ ಅದರ ಸ್ವರೂಪವು ಮಾತ್ರವೇ ಸಾಹಿತ್ಯದ ವಿಮರ್ಶೆಯು ಆಗುವುದೂ ಇಲ್ಲ. ಚಾರಿತ್ರಿಕತೆ ಮತ್ತು ಅದರ ಪರಿಣಾಮವನ್ನು ನಾವು ಈವತ್ತು ನೋಡಬೇಕಾಗಿದೆ. ಚರಿತ್ರೆಯನ್ನು ಕೂಡಾ ಕೃತಿಯ ಮೂಲಕವೇ ಅರ್ಥ ಮಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಅದರಲ್ಲಿ ಅರ್ಥವು ಇದೆ. ವಾಸ್ತವವಾಗಿ ಯಾವುದನ್ನು ಈವತ್ತು ಸಾಹಿತ್ಯವನ್ನು ನೋಡುವ ಪರಿಕರವೆಂದು ಹೇಳುತ್ತೇವೆಯೋ ಅದರಲ್ಲಿ ಬರೀ ಕೃತಿಯನ್ನು ಮಾತ್ರವೇ ಕೇಂದ್ರವಾಗಿ ನೋಡುವುದು ಸರಿಯಾದ ಕ್ರಮವು ಅಲ್ಲ. ವಾಸ್ತವವಾಗಿ ಯಾವುದೇ ಒಂದು ಓದು ಎನ್ನುವುದು ಅಸೈದ್ಧಾಂತಿಕತೆಯಾಗಿ ಇರುವುದಿಲ್ಲ. ಮತ್ತು ಅದರಲ್ಲಿ ಅವಿಮರ್ಶಾತ್ಮಕವಾದ ಒಂದು ಓದು ಮಾತ್ರವೇ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಒಂದು ಚಾರಿತ್ರಿಕ ಸನ್ನಿವೇಶವೆನ್ನುವುದು ಮೂಲಭೂತವಾಗಿ ಕೆಲವನ್ನು ಬರೆಯಲು ಹೇಳುತ್ತದೆ. ಚರಿತ್ರೆಯು ನಮಗೆ ಕೆಲವು ಆಲೋಚನೆಯನ್ನು ಹುಟ್ಟು ಹಾಕುತ್ತದೆ. ಆದರೆ ಸ್ವೀಕೃತಿ ಸಿದ್ಧಾಂತವು ಚರಿತ್ರೆಯನ್ನು ನೋಡಲು ಹೋಗುವುದಿಲ್ಲ. ರಚನೆ ಮತ್ತು ಅದರ ಆನ್ವಯಿಕತೆಯು ಕೂಡಾ ಅತ್ಯಂತ ಮಹತ್ವದ್ದು ಆಗಿದೆ. ಇಲ್ಲಿ ಮತ್ತೆ ಕೆಲವು ವಿಚಾರಗಳು ಇರುತ್ತವೆ. ಚರಿತ್ರೆಯಿಂದ ಕೃತಿಯನ್ನು ಹೇಗೆ ಮುಕ್ತ ಮಾಡುವುದು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯವಾಗುವುದಿಲ್ಲ. ಸೌಂದರ್ಯ ಮತ್ತು ಅದರ ಮೌಲ್ಯವನ್ನು ನಾವು ಚರಿತ್ರೆಯ ಹಿನ್ನೆಲೆಯಲ್ಲಿ ಮಾತ್ರವೇ ನೋಡಬೇಕಾಗುತ್ತದೆ. ವಾಸ್ತವವಾಗಿ ಸಾಹಿತ್ಯವು ಕೆಲವು ಅರ್ಥಗಳನ್ನು ಉತ್ಪಾದಿಸುವುದು ಒಂದು ಹಿನ್ನೆಲೆಯಿಂದ. ಅದರ ಅರ್ಥವು ಉತ್ಪಾದಿತ ಎಂದು ಬೆಂಜಮಿನ್ ಹೇಳುತ್ತಾನೆ. ಸಾಹಿತ್ಯವು ಒಂದು ಬಗೆಯಲ್ಲಿ ಅಭಿವ್ಯಕ್ತವಾದ ಒಂದು ರೂಪವಾಗಿದೆ. ಚರಿತ್ರೆಯಲ್ಲಿ ಅನೇಕವು ಪ್ರತಿನಿಧೀಕರಣಕ್ಕೆ ಗುರಿಯಾಗುತ್ತದೆ. ಚರಿತ್ರೆಯಲ್ಲಿ ಕೆಲವು ವಿಚಾರಗಳು ಪ್ರತಿಬಿಂಬವಾಗುತ್ತದೆ. ಯಾವುದು ಚರಿತ್ರೆಯಲ್ಲಿ ಪ್ರಾತಿನಿಧಿಕವಾಗುತ್ತದೆ ಎನ್ನುವುದು ಕೂಡಾ ಅಷ್ಟೇ ಮುಖ್ಯ. ಲೇಖಕ ಮತ್ತು ಪಠ್ಯ ಎನ್ನುವುದು ಇಲ್ಲಿ ಗಮನಾರ್ಹ. ಲೇಖಕ ಮತ್ತು ಅವನ ನಿಲುವುಗಳು ಚರಿತ್ರೆಯಲ್ಲಿ ಮಹತ್ವದ್ದೂ ಆಗಿರುತ್ತದೆ. ಇಲ್ಲಿ ಮತ್ತೆ ಕೆಲವು ಸಂಗತಿಗಳು ಮುಖ್ಯವಾಗುತ್ತವೆ. ಚರಿತ್ರೆಯ ಅರಿವಿನೊಂದಿಗೆ ಸಾಹಿತ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪಠ್ಯ ಮತ್ತು ಅದರ ಅರ್ಥವೂ ಚರಿತ್ರೆಯ ಉತ್ಪಾದನೆಯು ಆಗಿರುವುದರಿಂದ ಒಂದು ಕಾಲದಲ್ಲಿ ಒಂದು ರೀತಿಯಲ್ಲಿ ಇರುತ್ತದೆ. ಚರಿತ್ರೆ ಮತ್ತು ಅದರ ಅರಿವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಇಲ್ಲಿ ಮತ್ತು ಕೆಲವು ವಿಷಯಗಳು ಇರುತ್ತವೆ. ಪಠ್ಯವು ಕೆಲವು ರೀತಿಯ ಸಂವಾದವನ್ನು ರೂಪಿಸುತ್ತದೆ. ಅದರಲ್ಲಿ ತಾತ್ವಿಕತೆಯು ಇರುತ್ತದೆ. ವಾಸ್ತವವಾಗಿ ಕೆಲವು ಪರಿಕಲ್ಪನೆಯು ಅದರಲ್ಲಿ ಅತ್ಯಂತ ಮುಖ್ಯವಾದ ಸಂಗತಿಯೂ ಹೌದು. ಇಲ್ಲಿ ಮತ್ತೆ ಕೆಲವು ಅಂಶಗಳು ಇವೆ. ಪರಿಕಲ್ಪನೆಗಳು ರೂಪುಗೊಂಡಿವೆ. ಹಾಗೂ ಅದು ಸಾಮಾನ್ಯವಾದ ರೀತಿಯಲ್ಲಿ ಇರುವುದೂ ಇಲ್ಲ. ಭಾಷೆಯು ಕೆಲವನ್ನು ಮಾತ್ರವೇ ಸೂಚಿಸುತ್ತದೆ. ಅದರಲ್ಲಿ ಬರುವ ಕೆಲವು ವಿಷಯಗಳು ನಿರ್ದಿಷ್ಟವಾದ ಚರ್ಚೆಗಳನ್ನು ರೂಪಿಸುತ್ತವೆ. ವಾಸ್ತವವಾಗಿ ಭಾಷೆ ಮತ್ತು ಅದರ ಆಧುನಿಕತೆಯು ಮೂಲಭೂತವಾಗಿ ಒಂದು ಕಾಲ ಮತ್ತು ಅದರ ಅರಿವನ್ನು ಹೇಳುತ್ತವೆ. ಆಧುನಿಕತೆಯೆಂದರೆ ಅದು ಬರೀ ಭಾಷೆಗೆ ಮಾತ್ರವೇ

ಸಂಬಂಧಿಸಿದ ಕ್ರಮವೆಂದು ಯಾರೂ ಭಾವಿಸಬಾರದು. ಆಧುನಿಕತೆಯೆಂದರೆ ಅದು ಬರೀ ಭಾಷೆಯಲ್ಲ. ಅದರಲ್ಲಿ ಬೇರೆ ಪ್ರಶ್ನೆಗಳೂ ಇರುತ್ತವೆ. ಅದು ಪ್ರಜ್ಞೆಗೆ ಸಂಬಂಧಪಟ್ಟದ್ದೂ ಆಗಿದೆ. ಪ್ರಜ್ಞೆ ಮತ್ತು ಅದರ ಬದಲಾವಣೆಯು ಮೂಲಭೂತವಾಗಿ ಅನೇಕವನ್ನು ರೂಪಿಸುತ್ತದೆ. ಅದು ಹೊಸ ರೀತಿಯ ಸಂಕಥನವನ್ನು ಹೇಳುತ್ತದೆ. ಸಾಹಿತ್ಯವನ್ನು ನೋಡುವಾಗ ಭಾಷೆ ಮತ್ತು ಅದರ ಆಧುನಿಕತೆಯನ್ನು ಮಾತ್ರವೇ ನೋಡಿದರೆ ಸಾಕಾಗುವುದಿಲ್ಲ. ಭಾಷೆ ಮತ್ತು ಅದರ ಆಧುನಿಕತೆಯು ಮಾತ್ರವೇ ಮುಖ್ಯವಾಗುವುದೂ ಇಲ್ಲ. ಸಾಹಿತ್ಯ ಮತ್ತು ಅದರ ಭಾಷೆಯನ್ನು ಬರೀ ಓದುಗರನ್ನು ಆಧರಿಸಿಕೊಂಡು ಹೇಳುವುದೂ ಅಸಾಧ್ಯವಾಗುತ್ತದೆ. ಇಲ್ಲಿ ಭಾಷೆಯನ್ನು ಬರೀ ಓದುಗರಿಗೆ ಮಾತ್ರವೇ ಎನ್ನುವುದು ಸರಿಯಾದ ಕ್ರಮವೂ ಅಲ್ಲ. ಸಾಹಿತ್ಯವನ್ನು ಬರೀ ಓದುಗರಿಗೆ ಮಾತ್ರವೇ ಎನ್ನುವುದನ್ನು ಬೆಂಜಮಿನ್ ಒಪ್ಪುವುದೂ ಇಲ್ಲ. ಓದುಗ ಮತ್ತು ಅವನು ಮಾಡುವ ಆನ್ವಯಿಕತೆಯು ಮಾತ್ರವೇ ಸಾಹಿತ್ಯವಲ್ಲ. ಓದುಗನು ಬರೀ ತನ್ನ ಆನ್ವಯಿಕತೆಗೆ ಮಾತ್ರವೇ ಕೃತಿಯನ್ನು ಓದುವುದೂ ಇಲ್ಲ. ಒಂದು ಕೃತಿಯನ್ನು ಒಬ್ಬ ಸ್ವೀಕರಿಸಿದ್ದಾನೆ ಎನ್ನುವ ಕಾರಣಕ್ಕೆ ಆ ಕೃತಿಯು ಸಂಪೂರ್ಣವಾಗಿ ಫಲಪ್ರದವಾಯಿತು ಎಂದು ಹೇಳಲು ಬರುವುದು ಇಲ್ಲ. ಕೃತಿಯನ್ನು ಒಬ್ಬನು ಕೇವಲ ಕೃತಿಯನ್ನು ಓದಿದ ಮಾತ್ರಕ್ಕೆ ಒಂದು ಕೃತಿಯು ಸ್ವಯಂ ಸಂಪೂರ್ಣವಾಗಿರುವುದೂ ಇಲ್ಲ. ಕೃತಿಯನ್ನು ಓದಿ ಸ್ವೀಕರಿಸಿದರೆ ಅದು ಸೈದ್ಧಾಂತಿಕವಾದ ಸ್ವೀಕಾರವೆಂದು ಹೇಳಲು ಆಗುವುದೂ ಇಲ್ಲ. ಯಾವುದೇ ಪದ್ಯವು ಬರೀ ಓದುಗನನ್ನು ಮಾತ್ರವೇ ಅವಲಂಬಿಸುವುದೂ ಇಲ್ಲ. ಹೇಗೆ ಒಂದು ಚಲನಚಿತ್ರವು ಒಬ್ಬ ಪ್ರೇಕ್ಷಕನಿಗೆ ಮಾತ್ರವೇ ಇಲ್ಲವೋ ಅದೇ ರೀತಿಯಲ್ಲಿ ಒಂದು ಕೃತಿಯು ಒಬ್ಬ ಓದುಗನನ್ನು ಮಾತ್ರವೇ ಅವಲಂಬಿಸುವುದು ಇಲ್ಲ. ಒಬ್ಬನೇ ಕೇಳುಗನನ್ನು ಮಾತ್ರವೇ ಅವಲಂಬಿಸಿಕೊಂಡು ಸಂಗೀತವು ಇರುವುದೂ ಇಲ್ಲವೆಂದು ಬೆಂಜಮಿನ್ ಹೇಳುತ್ತಾನೆ. ಕಾಂಟ್ ತನ್ನ ತತ್ವಜ್ಞಾನದಲ್ಲಿ ಒಂದು ವಿಷಯವನ್ನು ಹೇಳುತ್ತಾನೆ– ಅವನು ವಾದಿಸುವುದು ಸ್ವೀಕರಿಸುವವರನ್ನು. ಅದನ್ನು ಅನಂತರ ವಿಸ್ತಾರ ಮಾಡಲಾಯಿತು. ಚರಿತ್ರೆ ಮತ್ತು ಅದರ ಮುಕ್ತತೆಯನ್ನು ಬೆಂಜಮಿನ್ ಹೇಳುತ್ತಾನೆ. ಅದರಲ್ಲಿ ಒಂದು ಸ್ವರವು ಮಾತ್ರವೆ ಇದೆ ಎಂದು ಹೇಳಲಾಗುವುದಿಲ್ಲ. ಚರಿತ್ರೆ ಮತ್ತು ಅದರ ಸರಳೀಕರಣವನ್ನು ಬೆಂಜಮಿನ್ ಒಪ್ಪುವುದೂ ಇಲ್ಲ. ಒಬ್ಬ ಇತಿಹಾಸ ತಜ್ಞನಿಗೆ ಮತ್ತು ಒಬ್ಬ ವಿಮರ್ಶಕನಿಗೆ ಕೆಲವು ಜವಾಬ್ದಾರಿಯು ಇರುತ್ತದೆ. ಚರಿತ್ರೆಯನ್ನು ಗ್ರಹಿಸುವುದು ಮತ್ತು ಅದನ್ನು ಸರಿಯಾದ ಜಾಗದಲ್ಲಿ ನಿಲ್ಲಿಸುವುದು ಬಹಳ ಅಗತ್ಯವಾದ ಪ್ರಕ್ರಿಯೆಯೂ ಆಗುತ್ತದೆ. ಅದರಲ್ಲಿ ವಿಷಯವೂ ಇದೆ. ವಸ್ತು ನಿಷ್ಟವಾದ ಗ್ರಹಿಕೆಯೂ ಇದೆ. ಆದರೆ ಇಲ್ಲಿ ಮತ್ತೆ ಕೆಲವು ಅಂಶಗಳನ್ನು ಹೇಳಬೇಕಾಗುತ್ತದೆ. ಒಂದು ಚರಿತ್ರೆಯಲ್ಲಿ ಒಂದು ಪಠ್ಯವನ್ನು ಹೇಗೆ ನಿಲ್ಲಿಸಬೇಕು ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಅದರಲ್ಲಿಯೂ ನಮ್ಮ ಚಾರಿತ್ರಿಕ ನೆನಪುಗಳಿಗೆ ಧರ್ಮ, ಆಧ್ಯಾತ್ಮಿಕತೆ, ಕುಟುಂಬ, ಭಾಷೆ, ಸಮಾಜ ಮುಂತಾದವುಗಳೂ ದಾರಿಗಳಾಗಿವೆ. ಗ್ರಾಮ್ಷಿಯು ತತ್ವಜ್ಞಾನ ಮತ್ತು ಅದರ ಅರಿವನ್ನು ಹಾಗೂ ಸಂಘರ್ಷಗಳನ್ನು ಕುರಿತು ಹೇಳುವಾಗ ಒಂದು ಮಹತ್ವದ ನಿಲುವನ್ನು ಹೇಳುತ್ತಾನೆ. ಸಿದ್ಧಾಂತ ಮತ್ತು ಅದರ ಅರಿವು ಅತ್ಯಂತ ಮಹತ್ವದ್ದು. ಅದು ವಿಫಲವಾದರೆ ಅದರ ಅಭ್ಯಾಸವೂ ಕೂಡಾ ವಿಫಲವಾಗುತ್ತದೆ. ಆಲೋಚನೆ ಮತ್ತು ಅದರ ಕೌಶಲಕ್ಕೂ

ಒಂದು ರೀತಿಯ ಸಂಬಂಧವಿದೆ. ಅಧಿಕಾರವು ಒಂದು ಅರ್ಥದಲ್ಲಿ ನಿಜವಾದ ಯಜಮಾನಿಕೆಯನ್ನು ಪಡೆಯುತ್ತದೆ. ಅದರ ಸ್ವರೂಪವು ಒಂದು ಬಗೆಯಲ್ಲಿ ಇರುತ್ತದೆ. ಅಧಿಕಾರವು ಕೆಲವು ಮಾದರಿಯ ನಿರ್ದೇಶನವನ್ನು ಕೊಡುತ್ತದೆ. ಯಾವುದನ್ನು ಈವತ್ತು ನಾವು ಯಜಮಾನಿಕೆ ಎಂದು ಹೇಳುತ್ತೇವೆಯೋ ಅದರ ಸ್ವರೂಪವು ಈ ಅರ್ಥದಲ್ಲಿ ಅತ್ಯಂತ ಸಂಕೀರ್ಣವಾಗಿದೆ ಎನ್ನುವುದು ಅವನ ಅರಿವಿನಲ್ಲಿ ಇದೆ. ವಾಸ್ತವವಾಗಿ ಯಾವುದನ್ನು ಈವತ್ತು ಅಧಿಕಾರವೆಂದು ಹೇಳುತ್ತೇವೆಯೋ ಅದರ ರೂಪಗಳು ಬೇರೆ ಬೇರೆಯಾಗಿವೆ. ಅದರಲ್ಲಿ ವಿಭಿನ್ನವಾದ ಅರ್ಥಗಳೂ ಇವೆ. ಯಾವಾಗ ಆಳ್ವಿಕೆಗೆ ನಾವು ಒಳಪಡುತ್ತೇವೆಯೋ ಆಗ ಅದರ ಅರ್ಥವು ಬೇರೆ. ಅಂದರೆ ಆಳಿಸಿಕೊಳ್ಳುವವರು ಆಳುವ ವರ್ಗದ ಪರಿಕರವೂ ಆಗುತ್ತಾರೆ. ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳು ಇರುತ್ತವೆ. ಮೊಮೆಂಟೋ ಅವನಲ್ಲಿ ಒಂದು ಸನ್ನಿವೇಶವನ್ನು ಹೇಳುತ್ತದೆ. ಎಲ್ಲಿ ಬೇರೆ ಬೇರೆ ವರ್ಗಗಳು ಇರುತ್ತವೆಯೋ ಆಗ ಅದರ ಅರ್ಥವು ಬೇರೆಯಾಗುತ್ತವೆ. ಅಂದರೆ ವರ್ಗಗಳು ಮತ್ತು ಅಧಿಕಾರದ ನಡುವೆ ಇರುವ ಸಂಬಂಧವನ್ನು ಸಂಕೀರ್ಣವೆಂದು ಅಂಗೀಕರಿಸಬೇಕಾಗುತ್ತದೆ. ಯಜಮಾನಿಕೆಗೆ ವಿಶೇಷವಾದ ಅರ್ಥವೂ ಇದೆ. ಅದನ್ನು ಯಾರು ಸ್ವೀಕರಿಸುತ್ತಾರೆ ಮತ್ತು ಅದನ್ನು ಯಾರು ವಿರೋಧಿಸುತ್ತಾರೆ ಎನ್ನುವುದು ಮಾತ್ರ ಬೇರೆಯಾದ ಪ್ರಶ್ನೆ. ಅದರಲ್ಲಿ ಪ್ರತಿರೋಧ ಮತ್ತು ಸ್ವೀಕಾರವು ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಚರಿತ್ರೆ ಮತ್ತು ಅದರ ರೂಪೀಕರಣವು ಕೂಡಾ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ವಾಸ್ತವವಾಗಿ ಇದನ್ನು ನಾವು ಬೇರೆ ದೃಷ್ಟಿಕೋನದಲ್ಲಿಯೂ ನೋಡಲು ಸಾಧ್ಯವಿದೆ. ವರ್ಗಗಳ ನಡುವೆ ಒಂದು ರೀತಿಯ ಸಂಬಂಧವು ಇರುತ್ತದೆ. ಅಂದರೆ ವರ್ಗಗಳ ನಡುವೆ ಇರುವ ಸಂಬಂಧವು ಒಂದೊಂದು ರೀತಿಯಲ್ಲಿ ಇರುತ್ತದೆ. ಅದರಲ್ಲಿ ಪ್ರತಿರೋಧ ಮತ್ತು ಸ್ವೀಕಾರದ ಸಂಬಂಧವು ಇರುತ್ತದೆ. ಎಲ್ಲೆಲ್ಲಿ ವರ್ಗಗಳು ಇರುತ್ತವೆಯೋ ಅಲ್ಲಿ ವರ್ಗ ಮತ್ತು ಜ್ಞಾನದ ಸ್ವರೂಪದಲ್ಲಿಯೂ ವಿಭಜನೆಯು ಇರುತ್ತದೆ. ವರ್ಗ ಮತ್ತು ಜ್ಞಾನಕ್ಕೆ ಇರುವ ಸಂಬಂಧವು ಅತ್ಯಂತ ಸಂಕೀರ್ಣವಾಗಿರುತ್ತದೆ. ಅನೇಕ ಸಂದರ್ಭದಲ್ಲಿ ವರ್ಗಗಳು ಜ್ಞಾನಗಳಾಗಿ ಪರಿವರ್ತನೆಯನ್ನು ಹೊಂದಿರುತ್ತದೆ. ಸೌಂದರ್ಯಶಾಸ್ತ್ರವು ಕಾವ್ಯ ಮತ್ತು ಇತರ ಕಲೆಗಳ ಸೌಂದರ್ಯವನ್ನು ಹೇಳುತ್ತವೆ. ಮತ್ತೆ ಆರ್ಥಿಕತೆಯು ಯಾವುದು ಉಪಯುಕ್ತ ಮತ್ತು ಯಾವುದು ಜೀವನವು ನಿರುಪಯುಕ್ತ ಎನ್ನುವುದನ್ನು ಹೇಳುತ್ತವೆ. ತರ್ಕಶಾಸ್ತ್ರವು ಯಾವದು ಸತ್ಯವೆನ್ನುವುದನ್ನು ಹೇಳುತ್ತದೆ. ಆದರೆ ಇವುಗಳಲ್ಲಿ ಭಿನ್ನತೆಗಳು ಇರುತ್ತವೆ. ಒಮ್ಮೆ ಚರ್ಚ್ ಕೂಡಾ ಪ್ರಭುತ್ವವನ್ನು ಒಪ್ಪಿಕೊಂಡಿತ್ತು. ಕೆಲವು ನಿರ್ದಿಷ್ಟವಾದ ವರ್ಗಗಳು ಮತ್ತೆ ಕೆಲವು ಚಾರಿತ್ರಿಕವಾಗಿಯೇ ಬೆಳೆದು ಬಂದ ವರ್ಗಗಳು. ಇವುಗಳಲ್ಲಿ ವ್ಯತ್ಯಾಸವಿದೆ. ಕೆಲವು ವರ್ಗಗಳು ಆಯಾ ಸನ್ನಿವೇಶವನ್ನು ಮಾತ್ರವೇ ಸೂಚಿಸುತ್ತವೆ. ನಿರ್ದಿಷ್ಟವಾದ ವರ್ಗಗಳು ಮತ್ತು ಅವುಗಳ ಚಾರಿತ್ರಿಕ ಹಿನ್ನೆಲೆಗಳು ಬೇರೆಯಾಗುತ್ತವೆ. ಯಾವುದೇ ಸಮಾಜದಲ್ಲಿ ಬುದ್ಧಿಜೀವಿಗಳಿಗೆ ಅವರದೇ ಅನ್ನಬಹುದಾದ ಒಂದು ಕೆಲಸವು ಇರುತ್ತದೆ. ಆ ಕೆಲಸವನ್ನು ಅವರು ಮಾಡಲೇಬೇಕಾಗುತ್ತದೆ. ಅವರ ಕೆಲಸ ಮತ್ತು ಅವರ ನಿಲುವನ್ನು ನೋಡಿಕೊಂಡು ಅವರ ಪಾತ್ರವನ್ನು ನಾವು ಗ್ರಹಿಸಬೇಕಾಗುತ್ತದೆ. ಅಂದರೆ ಅವರು ನಿರ್ಲಿಪ್ತರಾಗುವುದು ಅಸಾಧ್ಯ. ಮತ್ತೆ ಹೇಳಬೇಕೆಂದರೆ ಯಾವುದೇ ಸಮಾಜದಲ್ಲಿ ಒಂದು ವರ್ಗವು ಒಂದು

ನಿರ್ದಿಷ್ಟವಾದ ಕೆಲಸವನ್ನು ಮಾಡುತ್ತದೆ. ಮತ್ತು ಆ ಕೆಲಸವನ್ನು ಮಾಡುವಾಗ ಅದರದೇ ಆದ ಒಂದು ನಿಯಮವೂ ಇರುತ್ತದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಓದಿದ ವರ್ಗ ಮತ್ತು ಅದರ ಮನೋಸ್ಥಿತಿಯು ಒಂದು ರೀತಿಯಲ್ಲಿ ಇರುತ್ತದೆ. ಪ್ರತಿವರ್ಗಕ್ಕೂ ಒಂದು ಲೋಕದೃಷ್ಟಿಯು ಇರುತ್ತದೆ. ಅದರಲ್ಲಿಯೂ ಎಲ್ಲಾ ವ್ಯಕ್ತಿಗಳಿಗೂ ಒಂದಲ್ಲ ಒಂದು ರೀತಿಯ ತತ್ವಜ್ಞಾನವು ಇರುತ್ತದೆ. ಅದರಲ್ಲಿ ಬರುವ ನಿಲುವು ಅವನ ವ್ಯಕ್ತಿತ್ವ ಮತ್ತು ಜೀವನ ಕ್ರಮವನ್ನು ಹೇಳುತ್ತದೆ. ಹೀಗಾಗಿ ಪ್ರತಿವ್ಯಕ್ತಿ ಮತ್ತು ಅವನ ಜೀವನದ ನಿಲುವುಗಳು ಮುಖ್ಯವಾಗುತ್ತವೆ. ಅದೇ ಅವನ ಜೀವನದ ತತ್ವಜ್ಞಾನವೂ ಆಗಿರುತ್ತದೆ. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಇರುತ್ತವೆ. ಜೀವನವು ಅನೇಕವನ್ನು ಕಲಿಸುತ್ತದೆ ನಿಜ. ಆದರೆ ನಮ್ಮ ಸಂವೇದನೆಯೇ ನಮ್ಮ ಜೀವನದ ದ್ಯೋತಕವೂ ಆಗಿರುತ್ತದೆ. ಬುದ್ಧಿಜೀವಿಗಳು ವಹಿಸಬೇಕಾದ ಕೆಲವು ಕೆಲಸವನ್ನು ಲೆನಿನ್ ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಗ್ರಾಮ್ಶಿಯು ವಾಸ್ತವವಾಗಿ ಆರ್ಗಾನಿಕ್ ಬುದ್ಧಿಜೀವಿಗಳನ್ನು ಹೇಳುವಾಗ ಇದನ್ನು ಪ್ರಸ್ತಾಪಿಸುತ್ತಾನೆ. ಅವನ ಪ್ರಕಾರ ಈ ಕ್ರಮದ ಬುದ್ಧಿಜೀವಿಗಳು ಸಮೂಹದೊಂದಿಗೆ ಕೆಲವು ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಮತ್ತು ಅವರಿಗೆ ಸಾಂಪ್ರದಾಯಿಕವಾದ ಒಂದು ಬುದ್ಧಿವಂತಿಕೆಯು ಇರುತ್ತದೆ. ಈ ಆರ್ಗ್ಯಾನಿಕ್ ಬುದ್ಧಿಜೀವಿಗಳು ಕಾರ್ಮಿಕರ ಜೊತೆಗೆ ನಿರ್ದಿಷ್ಟವಾದ ಒಂದು ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಈ ವರ್ಗವು ಕೂಡಾ ನಿರ್ದಿಷ್ಟವಾಗಿ ಒಂದು ರಾಜಕೀಯವಾದ ನಿಲುವನ್ನು ಹೊಂದಿರುತ್ತದೆ. ಪ್ರಜ್ಞಾಪೂರ್ವಕವಾಗಿ ಕೆಲವು ಕೆಲಸವನ್ನು ಈ ವರ್ಗದವರು ಮಾಡುತ್ತಾರೆ. ಅವರಿಗೂ ಕೆಲವು ನಿರ್ದಿಷ್ಟವಾದ ಕೆಲವು ಆಲೋಚನೆಗಳು ಇರುತ್ತವೆ. ಅದನ್ನು ಗ್ರಾಂಶಿಯು ಹೇಳುತ್ತಾನೆ. ಅವನು ಬುದ್ಧಿಜೀವಿಗಳು ಎಂದರೆ ಒಂದು ಪ್ರತ್ಯೇಕ ವರ್ಗವಲ್ಲ. ವಾಸ್ತವವಾಗಿ ಯಾವುದೇ ಒಬ್ಬ ಲೇಖಕನು ತನ್ನ ಜವಾಬ್ದಾರಿಯನ್ನು ವಹಿಸದೇ ಹೋದರೆ ಅದರ ಕೊರತೆಯು ಎದ್ದು ಕಾಣಿಸುತ್ತದೆ. ನಮಗೆ ಕೆಲವು ಆಲೋಚನೆಗಳು ಇರುತ್ತವೆ. ಅದನ್ನು ನಾವು ಈಗ ಹೇಳಲೇಬೇಕಾಗುತ್ತದೆ. ಅದು ಅಗತ್ಯವಾಗಿರುತ್ತದೆ. ಈ ಕಾರಣದಿಂದ ಬುದ್ಧಿಜೀವಿಯು ತನ್ನ ನಿಲುವನ್ನು ಹೆಚ್ಚು ಸ್ಪಷ್ಟಪಡಿಸಬೇಕಾದ ಜರೂರು ಇರುತ್ತದೆ. ಹಾಗೆಂದು ಬುದ್ಧಿಜೀವಿಗಳು ಅಂದರೆ ಅದು ಒಂದು ಪ್ರತ್ಯೇಕವಾದ ಒಂದು ವರ್ಗವಾ ಎಂದು ಗ್ರಾಂಶಿಯು ಕೇಳುತ್ತಾನೆ. ಚರಿತ್ರೆಗೂ ಬುದ್ಧಿಜೀವಿಗಳಿಗೂ ಒಂದು ಸಂಬಂಧವಿದೆ. ಅದನ್ನು ಮೀರುವುದು ಅಸಾಧ್ಯವೂ ಹೌದು. ಬುದ್ಧಿಜೀವಿಗಳಿಗೆ ಒಂದು ಚಾರಿತ್ರಿಕವಾದ ಅಗತ್ಯವೂ ಇರುತ್ತದೆ. ಪ್ರತಿಯೊಂದು ವರ್ಗವೂ ಸಮಾಜ ಮತ್ತು ಅದರ ಚರಿತ್ರೆಯನ್ನು ಹೇಳುತ್ತವೆ. ಅದು ಆರ್ಥಿಕವೂ ಆಗಿರುತ್ತದೆ. ಪ್ರತಿಯೊಂದು ಗುಂಪು ಕೂಡಾ ತನ್ನದೇ ಆದ ಆರ್ಥಿಕತೆಯನ್ನು ಹೇಳುತ್ತವೆ. ಮತ್ತು ಅದರಲ್ಲಿ ಆಯಾ ಸನ್ನಿವೇಶವು ಅತ್ಯಂತ ಮಹತ್ವದ ಪಾತ್ರವನ್ನು ಹೊಂದಿರುತ್ತವೆ. ಸಾಮಾಜಿಕ ಮತ್ತು ಆರ್ಥಿಕವಾದ ಕಾರಣಕ್ಕೆ ಕೆಲವು ರೀತಿಯಲ್ಲಿ ಬುದ್ಧಿಜೀವಿಗಳು ಬೇರೆ ಬೇರೆ ಪಾತ್ರವನ್ನು ವಹಿಸುತ್ತಾರೆ. ಸರಕಾರವು ಒಡ್ಡುವ ಆಮಿಷವನ್ನು ಬುದ್ಧಿಜೀವಿಗಳು ಒಪ್ಪಿಕೊಂಡರೆ ಅವರ ಪಾತ್ರವೂ ಬೇರೆಯಾಗುತ್ತದೆ. ವಾಸ್ತವವಾಗಿ ಯಾವುದೇ ಸಮಾಜವು ತನಗೆ ಬೇಕಾದ ಕೌಶಲವನ್ನು ರೂಪಿಸಿಕೊಳ್ಳುತ್ತದೆ. ಅದರಲ್ಲಿ ಬೇರೆ ಮಾದರಿಗಳು ರೂಪುಗೊಳ್ಳುವುದು ಕೂಡಾ ಅಗತ್ಯಕ್ಕೆ ಅನುಸಾರವಾಗಿ ಮಾತ್ರವೇ. ಸಾಮಾಜಿಕ

ವರ್ಗಗಳಿಗೂ ಅದು ತನಗೆ ಬೇಕಾದ ಕೌಶಲವನ್ನು ರೂಪಿಸಿಕೊಳ್ಳುವುದಕ್ಕೂ ಇರುವ ಸಂಬಂಧವನ್ನು ಸರಳವೆಂದು ಹೇಳಬೇಕಾಗಿಯೂ ಇಲ್ಲ. ಆದರೆ ಮೂಲಭೂತವಾಗಿ ಭೂಮಿ ಮತ್ತು ಅದರ ಪ್ರಶ್ನೆಯು ಕೂಡಾ ಒಂದು ನಿರ್ದಿಷ್ಟವಾದ ವರ್ಗವನ್ನು ಸೂಚಿಸಲು ಸಹಾಯವನ್ನು ಮಾಡುತ್ತದೆ. ಭೂಮಿ ಮತ್ತು ಅದರ ಪ್ರಶ್ನೆಯೇ ವಾಸ್ತವವಾಗಿ ರೈತವರ್ಗವನ್ನು ಸೃಷ್ಟಿಸಿದೆ. ಅದರಲ್ಲಿ ವಿಸ್ತಾರವಾದ ತಳಹದಿಯು ಇರುತ್ತದೆ. ರೈತರು ಒಂದು ವರ್ಗವಾಗಿದ್ದಾರೆ. ಸಮಾಜದಲ್ಲಿ ಅವರ ದುಡಿಮೆಯನ್ನು ಅವಲಂಬಿಸಿಕೊಂಡ ಬೂರ್ಜ್ವಾ ವರ್ಗವೂ ಇರುತ್ತದೆ. ಸಮಾಜ ಮತ್ತು ಅದರ ಸ್ವರೂಪವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ವರ್ಗ ಮತ್ತು ಗುಂಪುಗಳನ್ನು ಈವತ್ತು ನಾವು ಬೇರೆ ಬೇರೆ ಹೆಸರಿನಿಂದ ಕರೆಯಬಹುದು ಅಷ್ಟೆ. ಅದರಲ್ಲಿ ಮತ್ತೆ ಬೇರೆ ಯಾವ ಅರ್ಥವೂ ಇರುವುದಿಲ್ಲ. ಬಂಡವಾಳವಾದವು ರೂಪುಗೊಂಡಿರುವುದೂ ಇಲ್ಲಿ ಗಮನಾರ್ಹವಾದ ಬೆಳವಣಿಗೆ ಎನ್ನುವುದನ್ನು ದಾಖಲಿಸಬೇಕಾಗುತ್ತದೆ. ಉತ್ಪಾದನೆ ಮತ್ತು ಅದರ ಲಾಭವನ್ನು ಮಾಡಿಕೊಳ್ಳುವುದು ಮೂಲಭೂತವಾಗಿ ಇದೇ ವರ್ಗವಾಗಿದೆ. ಆದ್ದರಿಂದ ಸಮಾಜ ಮತ್ತು ಅದರ ವರ್ಗಗಳು ರೂಪುಗೊಳ್ಳುವುದಕ್ಕೆ ಸಮಾಜವು ಕಾರಣವಾಗುತ್ತದೆ. ಇಲ್ಲಿ ಮತ್ತೆ ಒಂದು ಅಂಶವಿದೆ. ಸಮಾಜ ಮತ್ತು ಅದರ ವರ್ಗಗಳಲ್ಲಿ ಬೇರೆ ವಿನ್ಯಾಸವೂ ಇರುತ್ತದೆ. ಅದರಲ್ಲಿ ಸಮಾಜಕ್ಕೆ ಯಾವುದು ಬೇಕೋ ಅದನ್ನು ಉತ್ಪಾದಿಸುತ್ತದೆ. ಇಲ್ಲಿ ಗುರುತಿಸಬೇಕಾದ ಅಂಶವೆಂದರೆ ಸಮಾಜದ ಕ್ರಿಯೆ ಎಂದರೆ ಅದು ಸಮಾಜ ಮತ್ತು ರಾಜಕೀಯವಾದ ಕ್ರಿಯೆಗಳೂ ಆಗಿರುತ್ತವೆ. ಬಂಡವಾಳವಾದದಲ್ಲಿ ಕೈಗಾರಿಕೆ ಮತ್ತು ಅದರ ಬೆಳವಣಿಗೆ ಆಗುತ್ತದೆ. ಆದ್ದರಿಂದ ಅದರಲ್ಲಿ ಬೇರೆ ಬೇರೆ ತಂತ್ರಜ್ಞರು ರೂಪುಗೊಳ್ಳುತ್ತಾರೆ. ತಂತ್ರಜ್ಞಾನವನ್ನು ಅವಲಂಬಿಸಿಕೊಂಡು ಬೇರೆ ವಿನ್ಯಾಸಗಳೂ ರೂಪುಗೊಳ್ಳುತ್ತವೆ. ಅದರಲ್ಲಿ ತಂತ್ರಜ್ಞಾನದ ಅರಿವು ಇರುವವರು ಹೆಚ್ಚು ವೇತನವನ್ನು ಪಡೆಯುತ್ತಾರೆ. ಆದರೆ ಅವರ ಶ್ರಮವನ್ನು ಕೂಡಾ ಕೊಂಡುಕೊಳ್ಳಲಾಗುತ್ತದೆ. ತಂತ್ರಜ್ಞಾನವನ್ನು ತಿಳಿದುಕೊಂಡವರು ವಿಶೇಷ ತಜ್ಞರು ಎನ್ನುವ ಹೆಸರನ್ನು ಪಡೆಯುತ್ತಾರೆ. ತಂತ್ರಜ್ಞಾನವನ್ನು ಸಂಘಟಿಸುವವರು ಒಂದು ವರ್ಗವಾಗುತ್ತಾರೆ. ಇಲ್ಲಿ ತಂತ್ರಜ್ಞಾನ ಮತ್ತು ಅದರ ಒಕ್ಕೂಟಗಳು ಬೇರೆ ಮಾದರಿಯದು. ಅದು ಒಂದು ವರ್ಗವನ್ನು ತನ್ನ ಕಾರಣಕ್ಕೆ ರೂಪಿಸುತ್ತದೆ. ಒಂದು ಹೊಸದಾದ ವರ್ಗವು ತನಗೆ ಅನುಕೂಲವಾದ ಒಂದು ಕಾನೂನನ್ನು ರೂಪಿಸುತ್ತದೆ. ಅದು ಹಳೆಯ ಕಾನೂನನ್ನು ತಿದ್ದುಪಡಿ ಮಾಡುತ್ತದೆ. ವ್ಯಕ್ತಿಗಳು ಮತ್ತು ಅವರ ಸಾಧ್ಯತೆಯು ಬೇರೆಯಾಗುತ್ತದೆ. ತಂತಜ್ಞಾನ ಮತ್ತು ಅದರ ಅರಿವು ಹೊಸದಾದ ಕೌಶಲವನ್ನು ರೂಪಿಸುತ್ತದೆ. ತಾಂತ್ರಿಕತೆ ಮತ್ತು ಅದರ ರೂಪವನ್ನು ನಾವು ಈ ದೃಷ್ಟಿಯಲ್ಲಿ ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ತಂತ್ರಜ್ಞಾನವು ಹೊಸದಾದ ರೂಪುರೇಷೆಯನ್ನು ಹೇಳುತ್ತದೆ. ಅದರಲ್ಲಿ ಬರುವ ವಿಶೇಷ ತಜ್ಞತೆಯು ಮುಖ್ಯವಾಗಿ ಒಂದು ವರ್ಗವೂ ಹೌದು. ಕೈಗಾರಿಕೆ ಮತ್ತು ಅದರ ವರ್ಗವನ್ನು ನಿರ್ಧರಿಸುವವರು ಕೆಲವರು ಮಾತ್ರವೇ ಆಗಿರುತ್ತಾರೆ. ಯಾರು ಸಂಘಟಿಸುತ್ತಾರೆಯೋ ಅವರು ಕೈಗಾರಿಕೆಗೆ ಬಂಡವಾಳವನ್ನು ಹಾಕುತ್ತಾರೆ. ನವ ವರ್ಗ ಮತ್ತು ಅದರ ಪರಿಣಾಮವು ಸಮಾಜದ ಮೇಲೆ ಆಗುತ್ತದೆ. ಬುದ್ಧಿಜೀವಿಗಳು ಈ ದೃಷ್ಟಿಯಿಂದ ಯಾವುದಕ್ಕೋ ದುಡಿಯುವ ಪರಿಸ್ಥಿತಿಯು ಬರುತ್ತದೆ. ರೈತರಿಗೆ ಯಾವುದು

ಅಗತ್ಯವಿದೆಯೋ ಅದರ ಬಳಕೆಯನ್ನು ಮಾತ್ರವೇ ಅವರು ಮಾಡಿಕೊಳ್ಳುತ್ತಾರೆ. ಮೂಲತಃ ಯಾರನ್ನು ನಾವು ಸಾಂಪ್ರದಾಯಿಕ ಬುದ್ಧಿಜೀವಿಗಳು ಎಂದು ಹೇಳುತ್ತೇವೆಯೋ ಅವರು ಮೂಲತಃ ರೈತ ವರ್ಗದವರೇ ಆಗಿರುತ್ತಾರೆ. ಹಾಗೆಯೇ ರೈತರು ತಮಗೆ ಬೇಕಾದ ವರ್ಗವನ್ನು ರೂಪಿಸುತ್ತಾರೆ. ಆದರೆ ಬುದ್ಧಿಜೀವಿಗಳು ತಾವು ಸ್ವತಂತ್ರರೆಂದು ಭಾವಿಸಿಕೊಳ್ಳುತ್ತಾರೆ. ಅವರಿಗೆ ಅದು ಹೆಚ್ಚು ಮಹತ್ವದ್ದು ಎಂದು ಅನಿಸುತ್ತದೆ. ಸಾಮಾಜಿಕ ಜೀವನವು ಅಷ್ಟು ಸ್ವತಂತ್ರವಲ್ಲ ಮತ್ತು ಅದು ಅನೇಕವನ್ನು ಅವಲಂಬಿಸಿಕೊಳ್ಳುತ್ತದೆ. ವಿಶಿಷ್ಟವಾದ ಸನ್ನಿವೇಶವು ಅನೇಕ ವಿಶಿಷ್ಟವಾದ ಸಂಬಂಧವನ್ನು ರೂಪಿಸುತ್ತದೆ. ಬೌದ್ಧಿಕವಾದ ಚಟುವಟಿಕೆಗೂ ಸಾಮಾಜಿಕ ಜೀವನಕ್ಕೂ ಒಂದು ನಂಟು ಇದೆ. ಎಲ್ಲಾ ಮನುಷ್ಯರು ಬುದ್ಧಿವಂತರು ಆದರೆ ಎಲ್ಲಾ ಚಟುವಟಿಕೆಗೆ ಬರೀ ಬುದ್ಧಿವಂತಿಕೆಯ ಅಗತ್ಯವಿಲ್ಲ. ಒಂದು ಗುಂಪು ಬುದ್ಧಿವಂತಿಕೆಯನ್ನು ರೂಪಿಸುತ್ತದೆ ನಿಜ. ಹಾಗೆಂದು ಕೈಗಾರೀಕರಣದ ತಾಂತ್ರಿಕತೆಯು ಎಲ್ಲರಿಗೂ ಅಗತ್ಯವಿಲ್ಲ. ಯಾವುದೇ ಗುಂಪಿನ ಭಾಗವಹಿಸುವಿಕೆಯು ಭಿನ್ನವಾಗಿರುತ್ತದೆ. ಹೊಸದಾದ ಆಲೋಚನೆ ಮತ್ತು ಅದರ ಬುದ್ಧಿವಂತಿಕೆಯು ಒಂದು ರೂಪದಲ್ಲಿ ಇರುತ್ತದೆ. ಕೈಗಾರಿಕೆಗಳು ತನಗೆ ಬೇಕಾದ ಬುದ್ದಿವಂತಿಕೆಯನ್ನು ರೂಪಿಸುತ್ತದೆ. ನಮ್ಮ ಪ್ರಾಯೋಗಿಕವಾದ ಅಗತ್ಯಕ್ಕೂ, ಬುದ್ಧಿವಂತಿಕೆಗೂ ಸಂಬಂಧವಿರುವುದು ಅಷ್ಟೇ ನಿಜವಾಗಿದೆ. ಅದಕ್ಕೆ ಕಾರಣಗಳು ಇರುತ್ತವೆ. ಕಾರಣ ಮತ್ತು ಅಕಾರಣವೆಂಬ ವ್ಯತ್ಯಾಸವು ಕೆಲವು ಸೀಮಾರೇಖೆಯನ್ನು ಹಾಕುತ್ತವೆ. ಆದರೆ ಇಲ್ಲಿ ಮತ್ತೆ ನಾವು ಬೇರೆ ವಿಷಯಗಳನ್ನು ಕೂಡಾ ಯೋಚನೆಯನ್ನು ಮಾಡಬೇಕಾಗುತ್ತದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಪೆಟ್ಟಿಕೋಟ್, ರವಿಕೆ ಮುಂತಾದವುಗಳ ಚರ್ಚೆಯೂ ಬಂದಿತ್ತು ಎನ್ನುವುದು ಅರಿವಿಗೆ ಬಂದರೆ ಸೂಕ್ತ. ಸಾಹಿತ್ಯವನ್ನು ಹೆಚ್ಚು ಆಧುನಿಕವಾಗಿ ಓದುವ ಕ್ರಮವನ್ನು ಹೇಳಲಾಯಿತು: (ಪ್ರಾಯೋಗಿಕ ವಿಮರ್ಶೆ). ಆಧುನಿಕ ಜಗತ್ತು ಮತ್ತು ಅದರ ನಿಯಮಗಳು ಈಗ ಬದಲಾಗುತ್ತಿವೆ. ಪೂರ್ವ ಮತ್ತು ಪಶ್ಚಿಮದ ಪ್ರಶ್ನೆಗಳೂ ಬೇರೆಯಾಗಿವೆ. ಅಥೆಂಟಿಕ್ ಪಾಸ್ಟ್ ಮತ್ತು ನಮ್ಮ ವರ್ತಮಾನದ ಸುದ್ದಿಗಳು ಬೇರೆಯಾಗಿವೆ. ಈಗಿನ ಸಾಂಸ್ಕೃತಿಕ ರಾಜಕಾರಣವು ಕೆಲವನ್ನು ಹೊರಗೆ ಇಟ್ಟವೆ. ಗ್ಲೋಬಲ್ ಮೀಡಿಯಾ ತಂತ್ರಜ್ಞಾನಗಳೂ ಬೇರೆಯಾಗಿವೆ. ಚಾರಿತ್ರಿಕ ಪ್ರಾತಿನಿಧ್ಯಕ್ಕೆ ಇರುವ ಅವಕಾಶಗಳು ಬೇರೆಯಾಗಿವೆ. ಈಗ ಒಳಗಿನವರು ಮತ್ತು ಹೊರಗಿನವರು ವ್ಯತ್ಯಾಸವು ಉಳಿದಿಲ್ಲ. ಆದ್ದರಿಂದ ನಮ್ಮ ಮೀಮಾಂಸೆಯ ಅರಿವು ಭಿನ್ನವಾಗಿದೆ. ಅವುಗಳ ನಡುವೆ ಇರುವ ಮೌನವನ್ನು ನಾವು ಮರೆಯಬಾರದು. ಕೆಲವು ಧ್ರುವೀಕರಣಕ್ಕೆ ಗುರಿಯಾಗಿವೆ, ಜ್ಞಾನ ಪರಂಪರೆಗಳು ಬದಲಾಗಿವೆ, ಹೊಸ ಲೇಬರ್ ಮಾರುಕಟ್ಟೆಯು ಬಂದಿದೆ ಮತ್ತು ನಮ್ಮ ಮೀಮಾಂಸೆಗಳ ತಾತ್ವಿಕ ಪ್ರಶ್ನೆಗಳೂ ಬೇರೆ.

ರಾಷ್ಟ್ರ ಮತ್ತು ಅದರ ಸಮಸ್ಯೆಯು ಒಂದು ರೀತಿಯಲ್ಲಿ ಇರುತ್ತದೆ. ಆದರೆ ಅದನ್ನೇ ಜನರ ಸಾಮಾನ್ಯವಾದ ಒಂದು ಸಮಸ್ಯೆ ಎಂದು ಹೇಳಲು ಬರುವುದೂ ಇಲ್ಲ. ಅದರಲ್ಲಿ ಎಲ್ಲವೂ ಒಳಗೊಳ್ಳುವುದು ಅಸಾಧ್ಯ. ಜನರ ಸಮಸ್ಯೆಯನ್ನು ಒಂದು ರಾಷ್ಟ್ರದ ಸಮಸ್ಯೆ ಎಂದೋ ಅಥವಾ ಅದನ್ನು ಬಡವರ ಸಮಸ್ಯೆ ಎಂದೂ

ಹೇಳಲಾಗುವುದಿಲ್ಲ. ಅದರಲ್ಲಿ ಎಷ್ಟೋ ಸರ್ತಿ ಜೀವನದ ನಿಜವಾದ ಸಮಸ್ಯೆಯು ಬರದೆ ಹೋಗಬಹುದು. ಯಾವುದೇ ಸಮಾಜ ಮತ್ತು ಅದರ ಸಮಸ್ಯೆಯನ್ನು ಒಂದು ಸರಕಾರವು ಹೇಗೆ ಬಗೆಹರಿಸುತ್ತದೆ ಎನ್ನುವುದು ಅಷ್ಟೇ ಮುಖ್ಯವಾದ ಸಂಗತಿಯೂ ಆಗಿರುತ್ತದೆ. ಒಂದು ರಾಷ್ಟ್ರ ಮತ್ತು ಅದರ ಚರಿತ್ರೆಯಲ್ಲಿ ಚಳುವಳಿಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಂದರೆ ಅದರಲ್ಲಿ ಚಳುವಳಿ ಮತ್ತು ಅದರ ಕಾರ್ಯ ಸೂಚಿಯು ಅತ್ಯಂತ ಮುಖ್ಯವಾಗಿದೆ. ಜನರನ್ನು ಹಾದಿ ತಪ್ಪಿಸುವ ಚಳುವಳಿಗಳು ಬೇರೆಯದನ್ನು ಸೂಚಿಸುವುದು ಸಾಧ್ಯ. ಅದರಲ್ಲಿ ಬರುವ ಸಂಗತಿಗಳಿಗೆ ಬರೀ ಒಂದು ಭ್ರಮೆಯು ಇರಲು ಸಾಧ್ಯ. ಅಂತಹ ಚಳುವಳಿಯು ದಿಕ್ಕನ್ನು ತಪ್ಪಿಸಬಹುದು. ಅದು ಜನರಲ್ಲಿ ವಾಸ್ತವವನ್ನು ಮರೆಮಾಚುವ ನಡಿಗೆಯೂ ಇರಬಹುದು. ರಾಷ್ಟ್ರ ಮತ್ತು ಅದರ ಸ್ವರೂಪವು ಸಾಮಾನ್ಯರನ್ನು ಹೇಗೆ ನೋಡುತ್ತದೆ ಎನ್ನುವುದೂ ಅಷ್ಟೆ ಮುಖ್ಯ. ರಾಷ್ಟ್ರ ಮತ್ತು ಅದರ ಅಧಿಕಾರ ವ್ಯಾಪ್ತಿಯು ದೊಡ್ಡದೂ ಹೌದು. ಆದರೆ ರಾಷ್ಟ್ರ ಮತ್ತು ಅದರ ಅಧಿಕಾರವನ್ನು ಸಂಸ್ಕೃತಿಗಿಂತ ಬೇರೆ ಮಾಡಲು ಅಸಾಧ್ಯ. ಈವತ್ತು ಈಗ ರಾಷ್ಟ್ರ ಮತ್ತು ಅದರ ಅಧಿಕಾರವು ಭಿನ್ನವಾದ ರೂಪವನ್ನು ಪಡೆದುಕೊಂಡಿದೆ. ಅದನ್ನು ಬಹಳ ದೊಡ್ಡದಾದ ಅಧಿಕಾರವೆಂದು ಭಾವಿಸುವುದು ಅಥವಾ ಅದು ಸ್ವಯಂ ತಂತ್ರವೆಂದು ಭಾವಿಸುವುದು ಸರಿಯಾದ ಕ್ರಮವಲ್ಲ. ಅಧಿಕಾರ ಮತ್ತು ಅದರ ಅಹಂಕಾರವು ವಿನಾಶಕಾರಿಯೂ ಆಗಬಹುದು. ಆದ್ದರಿಂದ ಅದರ ಸ್ವರೂಪವು ನಿಗದಿಯು ಆಗಬೇಕಾಗುತ್ತದೆ. ಸಾಹಿತ್ಯವು ಮುಖ್ಯವಾಗಿ ಒಂದು ರಾಷ್ಟ್ರ ಮತ್ತು ಅದರ ಅಧಿಕಾರ ಪ್ರಶ್ನೆಯು ಅಲ್ಲ. ಅದು ಜನರ ಪ್ರಶ್ನೆಯೂ ಆಗುತ್ತದೆ. ಸಾಹಿತ್ಯ ಮತ್ತು ಅದರ ಸ್ವರೂಪವು ಒಂದು ಇತಿಹಾಸವನ್ನು ನೋಡುತ್ತದೆ. ಅದರಲ್ಲಿ ಜನರ ಪ್ರಶ್ನೆ, ಸಮಾಜದ ಪ್ರಶ್ನೆಯು ಇರುತ್ತದೆ. ವಾಸ್ತವವಾಗಿ ಸಾಹಿತ್ಯವು ಒಂದು ಚರಿತ್ರೆ ಮತ್ತು ಸಮಾಜದ ದಾಖಲೆಯೂ ಆಗುತ್ತದೆ. ಸಾಹಿತ್ಯವು ನಿರ್ಣಾಯಕವೂ ಆಗುತ್ತೆ. ಅದರಲ್ಲಿ ಜನರು ಮತ್ತು ಅವರ ಜೀವನದ ಪ್ರಶ್ನೆಯು ಬಹಳ ಮುಖ್ಯ. ಆದ್ದರಿಂದ ನಾವು ಸಾಹಿತ್ಯ ಮತ್ತು ಅದರ ದಿಕ್ಕು ದೆಸೆಯನ್ನು ನೋಡುವಾಗ ಅದರ ಸಾಧ್ಯತೆಯು ಯಾವ ರೀತಿಯದ್ದು ಎಂದೂ ಗಮನಿಸಬೇಕಾಗುತ್ತದೆ. ಸಾಹಿತ್ಯ ಮತ್ತು ಅದರ ಆಶಯವು ಸಮಾಜದ ಆಂಶಿಕವಾದ ಅಗತ್ಯವೂ ಹೌದು. ಸಾಹಿತ್ಯ ಮತ್ತು ಅದರ ಸೌಂದರ್ಯವನ್ನು ನಾವು ಒಂದು ರೀತಿಯಲ್ಲಿ ಮಾತ್ರವೇ ನೋಡುವುದು ಸರಿಯಾದ ಕ್ರಮವಲ್ಲ. ಲೇಖಕನು ಸಮಾಜದ ಕೆಲವು ಅಂಶಗಳನ್ನು ಮಾತ್ರವೇ ಸ್ವೀಕರಿಸುತ್ತಾನೆ ಎನ್ನುವುದು ಅಷ್ಟೇ ಮುಖ್ಯ. ಸಮಾಜದಿಂದ ಯಾವುದನ್ನು ಲೇಖಕನು ಆಯ್ಕೆ ಮಾಡುತ್ತಾನೆಯೋ ಅದಕ್ಕೆ ರಾಚನಿಕವಾದ ಅಂಶವೂ ಇರುತ್ತದೆ. ಸಮಾಜ ಮತ್ತು ಅದರ ರಚನೆಗಳು ಕೆಲವು ಅಂಶಗಳನ್ನು ಹೊಂದಿರುತ್ತವೆ. ಅದರಲ್ಲಿಯೇ ಬೇರೆ ಬೇರೆ ಸಂವಹನವು ಇರುತ್ತದೆ. ಅದರಲ್ಲಿ ಸಾಹಿತ್ಯವು ಒಂದು ಮಾತ್ರವೇ ಆಗಿದೆ. ಅಂದರೆ ಸಮಾಜದಲ್ಲಿ ಇರುವ ಸಿನಿಮಾ, ಘೋಷಣೆಗಳು ಕೂಡಾ ಒಂದು ಮಾದರಿಯಲ್ಲಿ ನಿರ್ದಿಷ್ಟವಾದ ಸಂವಹನವನ್ನು ಹೊಂದಿರುತ್ತದೆ. ಆದರೆ ಸಾಹಿತ್ಯ ಮತ್ತು ಅದರ ನಿಲುವುಗಳು ಬಹಳ ಮುಖ್ಯವಾದ ಸಂಗತಿಯನ್ನು ಗಮನಿಸುತ್ತದೆ. ಸಾಹಿತ್ಯ ಮತ್ತು ಅದರ ರಚನೆಗೆ ನಾವು ಆಯ್ಕೆ ಮಾಡಿಕೊಳ್ಳುವ ವಸ್ತುವು ಈ ದೃಷ್ಟಿಯಲ್ಲಿ ಅತ್ಯಂತ ಮುಖ್ಯವಾದುದು. ಸಾಹಿತ್ಯ ಮತ್ತು ಅದರ ರಚನೆಯು ಈ ದೃಷ್ಟಿಯಲ್ಲಿ ವಸ್ತು,

ರಚನೆ ಎರಡನ್ನು ಹೊಂದಿರುತ್ತದೆ. ಸಾಹಿತ್ಯ ಮತ್ತೊಂದು ಬಗೆಯಲ್ಲಿ ಒಂದು ಬಗೆಯ ಚಿಹ್ನೆಯನ್ನು ಹೊಂದಿರುತ್ತದೆ. ಅದು ಮುಖ್ಯವಾದುದು. ಆದರೆ ಇಲ್ಲಿ ಕೆಲವು ಪ್ರಶ್ನೆಗಳು ಬರುತ್ತವೆ. ವಾಸ್ತವವಾಗಿ ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಸರಳವಾಗಿ ಹೇಳಲು ಬರುವುದಿಲ್ಲ. ಅದನ್ನು ಹೇಗೆ ಲೇಖಕ ಹೇಳುತ್ತಾನೆ ಮತ್ತು ಯಾಕೆ ಹೇಳುತ್ತಾನೆ ಎನ್ನುವುದೂ ಇಲ್ಲಿ ಅತ್ಯಂತ ಮುಖ್ಯವಾದ ಸಂಗತಿಯೂ ಹೌದು. ಒಂದು ರಚನೆಯು ನಿರ್ದಿಷ್ಟವಾದ ಸಂಬಂಧವನ್ನು ಹೇಳುತ್ತದೆ. ಮತ್ತು ಅದರ ಅಗತ್ಯವೂ ಬಹಳ ಇರುತ್ತದೆ. ರಚನೆಯು ಕೆಲವನ್ನು ವಿವರಿಸುತ್ತದೆ. ಅದರ ಅಗತ್ಯವೇ ಆ ವಿವರಣೆಗೆ ಕಾರಣವಾಗುತ್ತದೆ. ರಚನೆಯೊಳಗಿನ ಸಂಕೇತವು ಈ ದೃಷ್ಟಿಯಿಂದ ಚರಿತ್ರೆ ಮತ್ತು ಸಮಾಜವನ್ನು ವಿಶಿಷ್ಟವಾಗಿಯೇ ಹೇಳುತ್ತದೆ. ಸಂಕೇತ ಮತ್ತು ಅದರ ಸಾಮಾಜಿಕ ಅವಶ್ಯಕತೆಯು ಈ ದೃಷ್ಟಿಯಿಂದ ಭಿನ್ನವೂ ಹೌದು. ಸಂಕೇತವು ಸಮಾಜ ಮತ್ತು ಅದರ ಗ್ರಹಿಕೆಯನ್ನೂ ಹೇಳುತ್ತದೆ. ಸಂಕೇತಗಳ ಅಗತ್ಯವು ಈ ಕಾರಣದಿಂದ ಒಂದು ಸೂಚನೆಯೂ ಆಗುವುದು ಈ ಕಾರಣದಿಂದ. ಸಂಕೇತವು ಯಾವ ಬಗೆಯ ಸಮಾಜವನ್ನು ನಿರೂಪಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಸಂಕೇತ ಮತ್ತು ಅದರ ಅಗತ್ಯವನ್ನು ಬರೀ ಒಬ್ಬ ಲೇಖಕನ ಆವಶ್ಯಕತೆಯೆಂದು ಮಾತ್ರವೇ ಹೇಳಲಾಗುವುದೂ ಇಲ್ಲ. ಅದರಲ್ಲಿ ಚರಿತ್ರೆ ಮತ್ತು ಅದರ ಅಗತ್ಯವೂ ಇರುತ್ತದೆ. ಕೆಲವು ಸಂಕೇತವನ್ನು ಈ ದೃಷ್ಟಿಯಿಂದ ನಾವು ಭಿನ್ನವಾದ ಒಂದು ಸಂಗತಿಯೆಂದು ಹೇಳಬೇಕಾಗಿಲ್ಲ. ಅದು ಅದರದೇ ಆದ ಕೆಲಸವನ್ನು ಮಾಡುತ್ತದೆ. ಸಂಕೇತ ಮತ್ತು ಅದರ ಅಗತ್ಯದ ಹಿನ್ನೆಲೆಯಿಂದಲೂ ನೋಡಬೇಕಾಗುತ್ತದೆ. ಸಂಕೇತಶಾಸ್ತ್ರದ ಅಧ್ಯಯನವನ್ನು ನಾವು ಬರೀ ಒಂದು ಅಧ್ಯಯನವಾಗಿ ನೋಡುವುದು ಒಂದು ಶಿಸ್ತು ಎಂದು ಭಾವಿಸಬೇಕಾಗಿಯೂ ಇಲ್ಲ. ಮೌಲ್ಯರಹಿತವಾದ ಪ್ರಕ್ರಿಯೆ ಎಂದು ತಿಳಿಯಬೇಕಾಗಿಲ್ಲ. ಸಂಕೇತಶಾಸ್ತ್ರವನ್ನು ಒಂದು ಸಮಾಜದ ಅಧ್ಯಯನ ಕ್ರಮವಾಗಿ ನೋಡಿದರೆ ಆಗ ಅದರ ಅರ್ಥವು ಬೇರೆಯಾಗುತ್ತದೆ. ಸಮಾಜ ಮತ್ತು ಸಂಕೇತವು ದ್ವಂದ್ವಾತ್ಮಕವಾದ ಸಂಬಂಧವನ್ನು ಇಟ್ಟುಕೊಳ್ಳುತ್ತದೆ. ಸಂಕೇತ ಮತ್ತು ಅದರ ಸಾಧ್ಯತೆಯು ಬೇರೆಯಾಗುತ್ತದೆ. ಹೀಗಾಗಿ ಸಂಕೇತ ಮತ್ತು ಅದರ ರಚನೆಯು ನಿರ್ದಿಷ್ಟವಾದ ಕಾರಣಕ್ಕೆ ಬಂದಿರುತ್ತದೆ. ಸಂಕೇತವು ಕೆಲವನ್ನು ಸೂಚಿಸುತ್ತದೆ. ಅದು ಅರ್ಥ ರಹಿತವಲ್ಲ. ಅದರಲ್ಲಿ ಅನೇಕ ಸಾಧ್ಯತೆಯೂ ಇರುತ್ತದೆ. ಸಂಕೇತಕ್ಕೆ ಕೆಲವು ಪ್ರಸ್ತುತತೆಯು ಇರುತ್ತದೆ. ಅದು ಸಂವಹನವನ್ನು ಹೇಳುತ್ತದೆ. ಅದರ ಅಗತ್ಯವನ್ನು ಅದರ ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಸಂಕೇತ ಮತ್ತು ಅದರ ಅಗತ್ಯವನ್ನು ಒಂದು ರೂಪವು ಒಂದು ರೂಪದಲ್ಲಿ ಬಳಸಿದರೆ ಮತ್ತೊಂದು ರೂಪವು ಅದನ್ನು ಬೇರೆಯಾಗಿಯೂ ನೋಡುತ್ತದೆ. ಈ ಎಲ್ಲಾ ಕಾರಣಗಳಿಂದ ಅದಕ್ಕೂ ತಾತ್ವಿಕತೆಗೂ ನಿರ್ಣಾಯಕವಾದ ಸಂಬಂಧವಿದೆ. ಅದರ ಪಾತ್ರವೂ ಭಿನ್ನವಾಗುತ್ತದೆ. ಲೇಖಕರು ಮತ್ತು ಅವರ ತಾತ್ವಿಕತೆಯು ಸಂಕೇತವನ್ನು ಉದ್ದೇಶಕ್ಕೆ ಅನುಗುಣವಾಗಿ ಬೇರೆ ರೀತಿಯಲ್ಲಿ ಬಳಸುತ್ತಾರೆ. ಸಂಕೇತಕ್ಕೂ ಅದರ ಹಿಂದೆ ಇರುವ ಆಶಯಕ್ಕೂ ಒಂದು ಸಂಬಂಧವಿದೆ. ಸಂಕೇತಗಳು ನಮ್ಮ ಅವಶ್ಯಕತೆಯನ್ನು ಹೇಳುತ್ತದೆ. ಕೃತಿಯಲ್ಲಿ ಬರುವ ಸಂಕೇತವು ಬರಹವನ್ನು ಆಧರಿಸುತ್ತದೆ. ಆದರೆ ಆಚರಣೆ ಮತ್ತು ಅದರ ಸಂಕೇತಗಳು ಮತ್ತೊಂದು ರೀತಿಯಲ್ಲಿ ಇರುತ್ತದೆ. ಸಂಕೇತ

ಮತ್ತು ಅದರ ಸ್ವರೂಪವೂ ಈ ಕಾರಣಕ್ಕೆ ಬೇರೆಯಾಗುವ ಸಾಧ್ಯತೆಯು ಇರುವುದು ಗಮನಾರ್ಹ. ವಸ್ತು ಮತ್ತು ಆಶಯಕ್ಕೆ ಅನುಗುಣವಾಗಿ ಬೇರೆಯಾಗುತ್ತದೆ. ವಸ್ತು ಮತ್ತು ಶೈಲಿಯು ಬೇರೆ ನಿಲುವನ್ನು ಹೇಳುತ್ತದೆ. ಹಾಗೆ ನೋಡುವುದಿದ್ದರೆ ಸಾಹಿತ್ಯ ಮತ್ತು ಅದರ ಅಗತ್ಯವು ಸಮಾಜಕ್ಕೆ ಇರುವುದರಿಂದ ಅದರ ಅರ್ಥವು ಭಿನ್ನವಾಗುತ್ತದೆ. ಸಾಹಿತ್ಯವು ಸಾಂಸ್ಕೃತಿಕ ಅಗತ್ಯವನ್ನು ಹೇಳುತ್ತದೆ. ಅದು ಸಾಂಸ್ಕೃತಿಕ ಅಗತ್ಯವೂ ಆಗುತ್ತದೆ. ಆಧುನಿಕ ಕತೆಗಳು ಒಂದು ಅರ್ಥದಲ್ಲಿ ಮಾರುಕಟ್ಟೆಯಲ್ಲಿ ಮಾರುವ ವಸ್ತುವು ಆಗುತ್ತದೆ ಎಂದು ಅಲೆನ್ ಪೋ ಹೇಳುತ್ತಾನೆ. ಕತೆಗಳಿಗೆ ಉಪಯೋಗದ ಮೌಲ್ಯವೂ ಇದೆ. ಅದರಲ್ಲಿ ಆ ಗುಣವು ಇಲ್ಲದೆ ಹೋದಲ್ಲಿ ಅದರ ಅರ್ಥವು ಬೇರೆಯಾಗುತ್ತದೆ. ಕೆಲವು ಕತೆಗಳು ಮತ್ತು ಕಾದಂಬರಿಗಳು ಹೆಚ್ಚು ಮಾರಾಟವಾಗುತ್ತದೆ ಎಂದ ಕೂಡಲೇ ಅದರ ಚಿಂತನೆಯು ಎಡವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಹೆಚ್ಚು ಮಾರಾಟವಾಗುತ್ತದೆ ಎಂದರೆ ಅದರ ಮೌಲ್ಯವು ಒಂದು ರೂಪದಲ್ಲಿ ಇರುತ್ತದೆ ಎಂದು ಮಾತ್ರವೇ ಅರ್ಥವಾಗುತ್ತದೆ. ಕತೆಗಳು ಮಾರುಕಟ್ಟೆಯಲ್ಲಿ ಅತ್ಯಂತ ಹೆಚ್ಚು ಮಾರಾಟವಾಗುತ್ತದೆ ಎಂದರೆ ಅದು ಜನಪ್ರಿಯವಾಗಿದೆ ಎಂದು ಅರ್ಥ. ಆದರೆ ಅದರಿಂದಲೇ ಲೇಖಕನನ್ನು ನಾವು ಬಹಳ ದೊಡ್ಡವನು ಎಂದು ಭಾವಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ಜನರು ಯಾವುದನ್ನು ಇಷ್ಟ ಪಡುತ್ತಾರೆ ಎನ್ನುವುದರಿಂದ ಅವನನ್ನು ನಾವು ಅತ್ಯಂತ ಮಹತ್ವದ ಲೇಖಕ ಎಂದು ಹೇಳುವಂತೆ ಇಲ್ಲ. ಅವನು ಜನರಿಗೆ ಇಷ್ಟವಾಗುವ ರೀತಿಯಲ್ಲಿ ಬರೆದಿದ್ದಾನೆ ಎಂದು ಮಾತ್ರವೇ ಅರ್ಥ. ಸಮಾಜದಲ್ಲಿ ಅನೇಕರು ಕತೆಗಳನ್ನು ಮತ್ತು ಕಾದಂಬರಿಗಳನ್ನು ಯಾಕೆ ಇಷ್ಟಪಡುತ್ತಾರೆ ಎನ್ನುವುದಕ್ಕೆ ಸಮಾಜದ ಸ್ಥಿತಿಯನ್ನು ನೋಡಬೇಕಾಗುತ್ತದೆ. ಅದು ಸಾಮಾಜಿಕ ಜೀವನದ ಮನೋವಿಜ್ಞಾನವೂ ಆಗುತ್ತದೆ. ಸಮೂಹ ಮತ್ತು ಅದರ ಸ್ವಭಾವವನ್ನು ನೋಡುವಾಗ ಅದರ ಅರ್ಥವೂ ಬೇರೆಯಾಗುತ್ತದೆ. ಸಾಮಾಜಿಕ ಜೀವನ ಮತ್ತು ಅದರ ಆಸಕ್ತಿಯನ್ನು ಮಾತ್ರವೇ ನೋಡಿಕೊಂಡು ಬರೆಯುವವರು ಅನೇಕ ಇರುತ್ತಾರೆ. ಸಮಾಜ ಮತ್ತು ಅದರ ಆಸಕ್ತಿಯನ್ನು ಮಾತ್ರವೇ ನೋಡಲು ಬರುವುದಿಲ್ಲ. ಅದು ಅದರ ಅರ್ಥವನ್ನು ನೋಡುವಾಗ ಅದರ ಸಾಧ್ಯತೆಯು ಬರೀ ಕುತೂಹಲವನ್ನು ಮಾತ್ರವೇ ಅಂಗೀಕರಿಸುವುದು ಸಾಧ್ಯವಿಲ್ಲ. ಸಮಾಜ ಮತ್ತು ಅದರ ಕೇಡನ್ನು ತಕ್ಷಣವೇ ಬಗೆ ಹರಿಸುವುದು ಅಸಾಧ್ಯ. ಜನಪ್ರಿಯ ಸಾಹಿತ್ಯವು ನಿಜವಾದ ಸಮಸ್ಯೆಯನ್ನು ಮರೆಮಾಚುತ್ತದೆ. ಅದಕ್ಕೆ ಒಂದು ನಿರ್ದಿಷ್ಟವಾದ ಸಮಸ್ಯೆಯು ಮುಖ್ಯವಾಗುವುದೂ ಇಲ್ಲ. ಅದರಲ್ಲಿ ಯಾವುದು ಜನರನ್ನು ಹಿಂಸಿಸುತ್ತದೆಯೋ ಅದು ಮಾತ್ರವೇ ಮುಖ್ಯವಾಗುವುದೂ ಇಲ್ಲ. ರೊಮಾಂಟಿಕ್‌ಯುಗದ ಸಾಹಿತ್ಯವನ್ನು ನೋಡಿದರೆ ಅದರಲ್ಲಿ ವ್ಯಕ್ತಿ ಮತ್ತು ಅವರ ಅತಿಮಾನುಷತೆಯು ಕಾಣಿಸುತ್ತದೆ. ಅದನ್ನು ಅವರ ಬರಹಗಳಲ್ಲಿ ಕಾಣಬಹುದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದು ರೊಮಾಂಟಿಕರಲ್ಲಿ ಮುಖ್ಯವಾಯಿತೋ ಅದನ್ನು ಇಂದ್ರಿಯ ನಿಗ್ರಹ, ಆದರ್ಶ ಮುಂತಾದ ವಿವರಗಳಲ್ಲಿ ಕಾಣಬಹುದು. ಆದರ್ಶ ಮತ್ತು ಅದರ ನಿರೂಪಣೆಯು ರೊಮಾಂಟಿಕರಿಗೆ ಹೆಚ್ಚು ಮುಖ್ಯವಾಗುತ್ತದೆ. ಆದರೆ ಇಲ್ಲಿ ಬರುವ ಸಮಸ್ಯೆ ಎಂದರೆ ಅವರ ಕತೆ ಮತ್ತು ಕಾದಂಬರಿಗಳಲ್ಲಿ ಬರುವ ನಾಯಕರಿಗೆ ಹೆಚ್ಚು ಶಕ್ತಿಯು ಇದೆ. ಅದನ್ನು ಅವರು ಜೀವನದಲ್ಲಿ ಸಾಧಿಸುತ್ತಾರೆ. ಇದರ ಪ್ರಭಾವವು ಜನಪ್ರಿಯ

ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಧಾರಾವಾಹಿಗಳಿಗೆ ಕೆಲವು ಕನಸುಗಳನ್ನು ಬಿತ್ತುವ ಗುಣವೂ ಇರುತ್ತದೆ. ಅದರಲ್ಲಿ ಬರುವ ವ್ಯಕ್ತಿಗಳು ಮತ್ತು ಅವರ ಸಂವೇದನೆಯು ಬೇರೆಯಾಗುತ್ತದೆ. ಧಾರಾವಾಹಿಯು ಒಂದು ಉದ್ವೇಗವನ್ನು ಸೃಷ್ಟಿಸುತ್ತದೆ. ಹಾಗೆಯೇ ಅದರಲ್ಲಿ ವ್ಯಕ್ತಿ ಮತ್ತು ಅವನ ಸಾಹಸವು ಮುಖ್ಯವಾಗುತ್ತದೆ. ನೀತಿಯು ಅದರಲ್ಲಿ ಬರುವ ರೀತಿಗಳು ಭಿನ್ನವಾಗುತ್ತವೆ. ಅದು ಓದುಗರನ್ನು ಬೇರೆ ಕಡೆಗೆ ಕರೆದುಕೊಂಡು ಹೋಗುತ್ತದೆ. ಅವುಗಳಲ್ಲಿ ಬರುವ ಪಾತ್ರಗಳೂ ಒಂದು ಬಗೆಯವೂ ಹೌದು. ಓದುಗರು ಮತ್ತು ಅವರ ಆಸಕ್ತಿಯನ್ನು ಕೆರಳಿಸುವುದು ಮುಖ್ಯವಾಗುತ್ತದೆ. ಪಾತ್ರಗಳಲ್ಲಿ ಆಯ್ಕೆಗಳು ಇರುತ್ತವೆ. ಮಾರುಕಟ್ಟೆ ಮತ್ತು ಅದರ ವಿನಿಮಯದ ಮೌಲ್ಯವನ್ನು ನೋಡಿಕೊಂಡು ಕಾದಂಬರಿಕಾರರು ಜನಪ್ರಿಯರಾಗುತ್ತಾರೆ. ಅದರಲ್ಲಿ ಅವರ ಕುರಿತಾದ ಮಾನದಂಡವು ಭಿನ್ನವಾಗುತ್ತದೆ. ಕೆಲವು ನಿಯಮವನ್ನು ಹೇರಿಕೊಳ್ಳುತ್ತವೆ. ಅದರಲ್ಲಿ ಸರಳವಾದ ನಿಲುವು ಇರುತ್ತವೆ. ಓದುಗರ ಆಸಕ್ತಿಯನ್ನು ಕಾಪಾಡಿಕೊಳ್ಳುವುದು ಮಾತ್ರವೇ ಅವರಿಗೆ ಮುಖ್ಯವಾಗುತ್ತದೆ. ಅಲ್ಲಿ ಬರುವ ಅನೇಕ ಘಟನೆಗಳು ವಾಸ್ತವವಾದವನ್ನು ಬೆಂಬಲಿಸುವುದೂ ಇಲ್ಲ. ಅದರಲ್ಲಿ ಅನೇಕ ವೈರುಧ್ಯಗಳು ಇರುತ್ತವೆ. ಈ ದೃಷ್ಟಿಯಿಂದ ಮಾರುಕಟ್ಟೆ ಮತ್ತು ಅದು ಬೇಡುವ ವಸ್ತುವಿಗೂ ಒಂದು ಸಂಬಂಧವಿದೆ. ಅಂದರೆ ಯಾವುದನ್ನು ಮಾರುಕಟ್ಟೆಯು ಬೇಡುತ್ತದೆಯೋ ಅದನ್ನು ಪೂರೈಕೆ ಮಾಡಲಾಗುತ್ತದೆ. ಮತ್ತು ಅದು ಹೆಚ್ಚು ಓಡುತ್ತದೆ. ಕಾದಂಬರಿಯನ್ನು ಮಾರುಕಟ್ಟೆಯ ಸೂತ್ರಕ್ಕೆ ಸರಿಯಾಗಿ ಹೆಣೆಯುವುದು ಒಂದು ಕ್ರಮ. ಅದರಲ್ಲಿ ಬೇಡಿಕೆಯು ಮಾತ್ರವೇ ಮುಖ್ಯವಾಗುತ್ತದೆ. ಆದರೆ ವಾಸ್ತವವಾಗಿ ಇದರಲ್ಲಿ ಭ್ರಮೆಯೇ ಹೆಚ್ಚು ಮುಖ್ಯವಾಗುತ್ತದೆ. ಅದು ಕೆಲವು ನಿಯಮವನ್ನು ಮಾಡುತ್ತದೆ. ಮತ್ತು ಅದರ ನಿಯಮವು ಒಂದು ಬಗೆಯಲ್ಲಿ ಇರುತ್ತದೆ. ಆದರೆ ಅದನ್ನು ನೋಡಿದರೆ ಅದರ ಅರ್ಥವು ಭಿನ್ನವಾಗುತ್ತದೆ. ಅದು ಕೆಲವು ಸುಳ್ಳಾದ ಕೆಲವು ವಿಚಾರವನ್ನು ಬಣ್ಣಿಸುತ್ತದೆ. ತಪ್ಪು ಪರಿಹಾರವನ್ನು ಹೇಳುತ್ತದೆ. ಸಾಮಾನ್ಯವಾಗಿ ಕೆಲವು ತೃಪ್ತಿಯನ್ನು ಮಾತ್ರವೇ ನೀಡುತ್ತದೆ. ಅದರಲ್ಲಿ ಕ್ಷಣಿಕ ತೃಪ್ತಿಯು ಮಾತ್ರವೇ ಮುಖ್ಯವಾಗುತ್ತದೆ. ಜನಪ್ರಿಯವಾದ ಕಾದಂಬರಿಗಳಲ್ಲಿ ಮನುಷ್ಯ ಮತ್ತು ಅವನು ಓದುವಾಗ ತೃಪ್ತಿಯು ಒಂದು ಬಗೆಯಲ್ಲಿ ಇರುತ್ತದೆ. ಅದರ ಸ್ವರೂಪವನ್ನು ನೋಡಿದರೆ ಅದರಲ್ಲಿ ಕೆಲವು ಬಗೆಯ ಸೂತ್ರಗಳು ಇರುತ್ತವೆ. ಬಡವನು ಶ್ರೀಮಂತನಾಗುವುದು ಜನಪ್ರಿಯ ಕಾದಂಬರಿಗಳಲ್ಲಿ ಸುಲಭವಾಗುತ್ತದೆ. ಅದರಲ್ಲಿ ಕಾರ್ಮಿಕರೂ ಕೂಡಾ ಸರಳವಾದ ನಿಲುವನ್ನು ಮಾತ್ರವೇ ಹೊಂದಿರುತ್ತಾರೆ. ಕೆಲವು ಲಕ್ಷಣವು ಮಾತ್ರವೇ ಅದರಲ್ಲಿ ಮುಖ್ಯವಾಗುತ್ತದೆ. ಅದರ ರಚನೆಯು ಅತ್ಯಂತ ಸರಳವಾಗುತ್ತದೆ. ಸರಳವಾದ ನಿರೂಪಣೆಯು ಜನರನ್ನು ಬೇಗ ಆಕರ್ಷಿಸುತ್ತದೆ. ಅವುಗಳು ನೀಡುವ ಸೂಚನೆಗಳು ಕೂಡಾ ಸರಳವಾಗುತ್ತವೆ.

ಮತ್ತೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗುತ್ತದೆ. ಒಬ್ಬ ವ್ಯಕ್ತಿಯನ್ನು ನೋಡುವಾಗ ಅವನ ಗುಣ ಮತ್ತು ಅವನ ನಿಲುವನ್ನು ಅವನ ಅರಿವು ಮುಂತಾದವುಗಳಿಂದ ಅಳೆಯುತ್ತೇವೆ. ವ್ಯಕ್ತಿಯನ್ನು ಬಂಡವಾಳಶಾಹಿ ನೆಲೆಯಲ್ಲಿ ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಆದರೆ ವ್ಯಕ್ತಿಯು ಜಮೀನ್ದಾರಿ ಪದ್ಧತಿಯಲ್ಲಿ ಮತ್ತೊಂದು ರೀತಿಯಲ್ಲಿ ಬದುಕುತ್ತಾನೆ. ಅದು ಒಂದು ರೀತಿಯ ಒತ್ತಡವನ್ನು

ಹೇರುತ್ತದೆ. ವ್ಯಕ್ತಿ ಮತ್ತು ಅವನ ಬಯಕೆಯನ್ನು ನೋಡುವುದು ಮತ್ತು ಗ್ರಹಿಸುವುದು ಬಂಡವಾಳವಾದವು ನೋಡುವುದು ಒಂದು ರೀತಿಯಲ್ಲಿ. ಹೀಗೆ ವ್ಯಕ್ತಿ ಮತ್ತು ಅವನ ಹಿಂದುಳಿಯುವಿಕೆಯು ಬೇರೆ ಕಾರಣದಿಂದ ಆಗುತ್ತದೆ. ಸಮಾಜ ಮತ್ತು ಅದರ ಒತ್ತಡವು ವ್ಯಕ್ತಿಯನ್ನು ಬೇರೆ ಕಡೆಗೆ ಕರೆದೊಯ್ಯುತ್ತದೆ. ಅದರಲ್ಲಿ ಮನುಷ್ಯ ಮತ್ತು ಅವನ ಸಂಕಟವು ಒಂದು ರೀತಿಯಲ್ಲಿ ಇರುತ್ತದೆ. ರಾಜಕಾರಣವು ವ್ಯಕ್ತಿಯನ್ನು ಮಾತ್ರವೇ ನಿರ್ಧರಿಸುತ್ತದೆ ಎಂದು ಹೇಳಲು ಬರುವುದಿಲ್ಲ. ನೀತಿಯೂ ವ್ಯಕ್ತಿಯನ್ನು ನಿರ್ಧರಿಸುತ್ತದೆ. ಚರಿತ್ರೆಯು ವ್ಯಕ್ತಿ ಮತ್ತು ಅವನ ನಿರ್ಧಾರವನ್ನು ಹೇಳುತ್ತದೆ. ಉದಾಹರಣೆಗೆ ಕಾರಂತರ ಕಾದಂಬರಿಗಳಲ್ಲಿ ಬರುವ ನೀತಿ ಮತ್ತು ಅದರ ಸ್ವರೂಪವು ಒಂದು ಬಗೆಯಲ್ಲಿದ್ದರೆ, ಕುವೆಂಪು ಕಾದಂಬರಿಗಳಲ್ಲಿ ಬರುವ ನೀತಿ ಮತ್ತು ಅದರ ಪ್ರಶ್ನೆಯು ಮತ್ತೊಂದು ಬಗೆಯಲ್ಲಿ ಇರುತ್ತದೆ. ಅವುಗಳು ಕಾದಂಬರಿಯಲ್ಲಿ ಸಂಘರ್ಷಕ್ಕೆ ಕಾರಣವಾಗುತ್ತದೆ. ವಾಸ್ತವವಾಗಿ ಸಾಹಿತ್ಯವು ನಿಜವಾಗಿ ಬೇರೆ ಬೇರೆ ಸಂಘರ್ಷವನ್ನು ಹೇಳುತ್ತವೆ. ಕಾದಂಬರಿ ಮತ್ತು ಅದರ ಸ್ವರೂಪದಲ್ಲಿ ಬರುವ ಕೆಲವು ನೀತಿಗಳು ಒಂದು ಬಗೆಯಲ್ಲಿ ಇರುತ್ತವೆ. ಯಾವುದನ್ನು ನೀತಿ ಮತ್ತು ಅದರ ಆಯ್ಕೆಗಳು ಎಂದು ಹೇಳುತ್ತೇವೆಯೋ ಅದರಲ್ಲಿ ವ್ಯಕ್ತಿಯು ನಿಯಂತ್ರಣಕ್ಕೆ ಗುರಿಯಾಗುತ್ತಾನೆ. ಸಾಹಿತ್ಯ ಮತ್ತು ಅದರ ರೂಪವೂ ಒಂದು ಕಾರಣದಿಂದ ಸಂಘರ್ಷವನ್ನು ಹೇಳುತ್ತದೆ. ಕಾದಂಬರಿಗಳಲ್ಲಿ ಬರುವ ನೀತಿ ಮತ್ತು ಅದರ ಸ್ವರೂಪವನ್ನು ನಾವು ಇತ್ಯಾತ್ಮಕವಾಗಿಯೂ ನೋಡಬೇಕಾಗುತ್ತದೆ. ಸಮಾಜ ಮತ್ತು ಚರಿತ್ರೆಗಳು ನೀತಿಯನ್ನು ಮತ್ತು ಅದರ ಸಂಘರ್ಷವನ್ನು ಒಂದು ರೀತಿಯಲ್ಲಿ ಹೇಳುತ್ತವೆ. ಸೊಫೊಕ್ಲಿಸ್ ಮತ್ತು ಅವನಲ್ಲಿ ಬರುವ ನೀತಿಯ ಪ್ರಶ್ನೆಯು ಒಂದು ಬಗೆಯಲ್ಲಿ ಇದ್ದರೆ ಷೇಕ್ಸಪಿಯರ್ ತನ್ನ ಕಾಲದ ನೀತಿಯನ್ನು ಇನ್ನೊಂದು ಬಗೆಯಲ್ಲಿ ಹೇಳುತ್ತಿದ್ದಾನೆ. ಎರಡೂ ದುರಂತವೇ ಆದರೂ ಅದರ ಸ್ವರೂಪ ಮತ್ತು ಅದರ ವಿವರಣೆಗಳು ಬೇರೆಯಾಗುತ್ತವೆ. ಹಾಗೆ ನೋಡುವುದಿದ್ದರೆ ದುರಂತವು ವ್ಯಕ್ತಿ ಮತ್ತು ಅವನ ಮನೋಸ್ಥಿತಿಯನ್ನು ಹೇಳುತ್ತದೆ. ಆದರೆ ಹಾಸ್ಯ ನಾಟಕಗಳು ಮತ್ತೊಂದು ಬಗೆಯವು. ಅದರಲ್ಲಿ ನಗೆಯು ಮಾತ್ರವೇ ಮುಖ್ಯವಾಗುತ್ತದೆ. ನಗೆ ನಾಟಕವೂ ನಗೆಯನ್ನು ಮುಖ್ಯವಾದ ಬುನಾದಿಯನ್ನಾಗಿ ಮಾಡುತ್ತದೆ. ವ್ಯಕ್ತಿ ಮತ್ತು ಅವನ ನಡವಳಿಕೆಗಳು ನಗೆಗೆ ಕಾರಣವಾಗುತ್ತದೆ. ಹೆಗೆಲ್ ಮತ್ತು ಅರಿಸ್ಟಾಟಲ್ ಹೇಳಿದ್ದನ್ನು ನಾವು ಮತ್ತೆ ಅವಲೋಕಿಸಬೇಕಾಗುತ್ತದೆ. ಆದರೆ ಇಲ್ಲಿ ನೋಡಬೇಕಾದದು ಅವರು ಹೇಳಿದ ಕ್ರಿಯೆ ಮತ್ತು ಭಯವು ಹೇಗೆ ದುರಂತದಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂದು ಮಾತ್ರವೇ. ದುಃಖವು ನಮಗೆ ವಿಶಿಷ್ಟವಾದ ಅನುಭವವನ್ನು ಕೊಡುತ್ತದೆ. ಆದರೆ ಇಲ್ಲಿ ನೋವು ಮತ್ತು ಅದರ ಭಾವನೆಗಳು ಒಂದು ಅನುಭವವನ್ನು ಹೇಳುತ್ತದೆ. ಸಣ್ಣ ಮಗುವೊಂದು ಅತ್ಯಂತ ವಯೋವೃದ್ಧನಾದ ವ್ಯಕ್ತಿಯ ನೋವು ಮತ್ತು ಸಂಕಟವನ್ನು ನೋಡುತ್ತದೆ ಹಾಗೂ ಅದರ ಮೂಲಕವೇ ನೋವನ್ನು ಗ್ರಹಿಸುವ ಯತ್ನವನ್ನು ಮಾಡುತ್ತದೆ. ಪಾಪ ಮತ್ತು ಪ್ರಾಯಶ್ಚಿತ್ತ ಒಂದು ಮಗುವು ನೋಡುತ್ತದೆ ಮತ್ತು ಗ್ರಹಿಸುತ್ತದೆ ಎಂದು ಮಾತ್ರವೇ ಹೇಳಬೇಕಾಗಿಲ್ಲ. ಆದರೆ ಗ್ರೀಕಿನ ದುರಂತ ನಾಟಕವು ದುರಂತವನ್ನು ಹೇಳುವುದು ಗ್ರೀಸ್ ದೇಶದ ಹಿನ್ನೆಲೆಯಲ್ಲಿ ಎನ್ನುವುದು ಹೆಚ್ಚು ಸ್ಪಷ್ಟವಾಗುತ್ತದೆ. ಅದು ಗ್ರೀಕಿನ ಪ್ರಜ್ಞೆ ಎಂದು ಕಿರ್ಕೆಗಾರ್ಡ ಹೇಳುತ್ತಾನೆ. ಆದರೆ

ನೋವು ಮತ್ತು ಅದರ ಸ್ವರೂಪವನ್ನು ನಾವು ವಿಶ್ವಾತ್ಮಕವಾಗಿಯೂ ಗ್ರಹಿಸಬೇಕಾಗುತ್ತದೆ. ಆದರೆ ನೋವು ಅಭಿವ್ಯಕ್ತವಾದರೆ ಅದರ ಸೌಂದರ್ಯಾತ್ಮಕವಾದ ಅನುಭವವಾದಾಗ ಅದರ ಸ್ವರೂಪವು ಬೇರೆಯಾಗುತ್ತದೆ. ವಾಸ್ತವವಾಗಿ ಅನುಭವ ಎನ್ನುವುದು ಮನಸ್ಸನ್ನು ವ್ಯಾಪಿಸಿಕೊಳ್ಳುತ್ತದೆ. ರಂಗ ಮತ್ತು ಅದರ ಅನುಭವವು ನಮಗೆ ವಿಶಿಷ್ಟವೂ ಆಗಿರುತ್ತದೆ. ಆದ್ದರಿಂದ ನಾವು ರಂಗದ ಅನುಭವವನ್ನು ಕೇವಲ ನಮ್ಮ ಅನುಭವ ಎನ್ನುವ ಥರ ನೋಡುವುದೂ ಇಲ್ಲ. ನಾವು ಅದನ್ನು ಪರಿವರ್ತನೆ ಮಾಡಿಕೊಳ್ಳುತ್ತೇವೆ. ಆದರೆ ಅದೇ ಅನುಭವವು ಕಾದಂಬರಿಯಲ್ಲಿ ಬರುವಾಗ ಅದು ಕೊಡುವ ಅನುಭವಕ್ಕೆ ಬೇರೆ ಅರ್ಥವೂ ಇರುತ್ತದೆ. ಕಾದಂಬರಿಯಲ್ಲಿ ಓದುಗನು ಇರುತ್ತಾನೆ. ನೋಡುಗನು ಇರುವುದಿಲ್ಲ. ವಾಸ್ತವವಾಗಿ ದುರಂತ ಮತ್ತು ಅದರ ಅನುಭವವು ನಮಗೆ ರಂಗದ ಮೇಲೆ ಆಗುವಾಗ ಅದನ್ನು ಗ್ರಹಿಸಲು ನಮಗೆ ಮಾಧ್ಯಮವಾಗುವುದು ನಟ ಮತ್ತು ಅದನ್ನು ನಿರ್ದೇಶನ ಮಾಡಿದ ನಿರ್ದೇಶಕ. ಆದರೆ ಕಾದಂಬರಿ ಮತ್ತು ಅದರ ಅನುಭವವನ್ನು ರವಾನೆ ಮಾಡಲು ನಮಗೆ ನಟನು ಇಲ್ಲ. ನಿರ್ದೇಶಕನೂ ಇಲ್ಲ. ಮತ್ತೊಂದು ಅಂಶವನ್ನು ಕೂಡಾ ನಾವು ನೋಡಬೇಕು. ದುರಂತ ಮತ್ತು ಅದರ ಅನುಭವವು ನಾಟಕದಲ್ಲಿ ವ್ಯಕ್ತವಾಗುವ ಕ್ರಮವನ್ನು ನೋಟ ಮತ್ತು ಅದರ ಗ್ರಹಿಕೆಯ ಸಮಸನ್ವಯದಲ್ಲಿ ನೋಡುತ್ತೇವೆ. ಆದರೆ ಕಾದಂಬರಿಯಲ್ಲಿ ಓದು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ಗ್ರೀಕ್ ದುರಂತ ನಾಟಕದಲ್ಲಿ ನಮಗೆ ಆಗುವ ಅನುಭವ ಬೇರೆಯಾಗುವುದು ಅದರ ಆಳವಾದ ಪ್ರಶ್ನೆಯಿಂದ. ಇಲ್ಲಿ ಮತ್ತೊಂದು ಅಂಶವನ್ನು ನೋಡಬೇಕು: ದುರಂತ ನಾಟಕದಲ್ಲಿ ದುರಂತವನ್ನು ಅನುಭವಿಸುವ ವ್ಯಕ್ತಿಯು ಅತ್ಯಂತ ಮುಗ್ಧನೂ ಆಗಿದ್ದಾನೆ. ಆದರೆ ನಾವು ಈಗ ಅದನ್ನು ಅಷ್ಟು ಬೇಗನೆ ಅನುಭವಿಸಲು ಆಗುವುದೂ ಇಲ್ಲ. ಪಾಪ, ಅದರ ಪ್ರಜ್ಞೆ ಮತ್ತು ಅದಕ್ಕೆ ಪ್ರಾಯಶ್ಚಿತ್ತವನ್ನು ನಾವು ದುರಂತದಲ್ಲಿ ನೋಡುವಾಗ ಅದರ ಅನುಭವನ್ನು ಅತ್ಯಂತ ಅಥೆಂಟಿಕ್ ಎಂದು ತಿಳಿಯುತ್ತೇವೆ. ಆದರೆ ವಾಸ್ತವವಾಗಿ ಮತ್ತೆ ಬರುವ ಪ್ರಶ್ನೆಯೆಂದರೆ ದುರಂತದಲ್ಲಿ ಬರುವ ವಿಧಿಯು ನಮಗೆ ಬಹಳ ಸಜ್ಜನನಂತೆ ಕಾಣಿಸುವುದೂ ಇಲ್ಲ. ಅವನಿಗೆ ಒಂದು ಅರ್ಥದಲ್ಲಿ ಯಾವುದೇ ಕರುಣೆಯೂ ಇಲ್ಲ. ಅವನು ಕ್ಷಮಿಸುವುದೂ ಇಲ್ಲ. ಗ್ರೀಕ್ ದುರಂತ ನಾಟಕದ ನಾಯಕನು ಅವಲಂಬಿಸುವುದು ತನ್ನ ಅದೃಷ್ಟವನ್ನು ಮಾತ್ರವೇ. ಆದರೆ ಅದು ಅವನ ಜೀವನದ ಸತ್ಯವೇ ಅಲ್ಲವೇ ಎಂದು ನೋಡುವುದು ಅತ್ಯಂತ ಕಷ್ಟ. ಈಡಿಪಸ್ ನಾಟಕದಲ್ಲಿ ಸತ್ಯವು ಎದುರಾಗುವುದು ಕಡೆಗೆ ಮಾತ್ರವೇ. ಆ ಸತ್ಯವು ಅತ್ಯಂತ ಕಹಿಯಾದದ್ದು ಮತ್ತು ಅವನ ಜೀವನವನ್ನು ಪ್ರಾಯಶ್ಚಿತ್ತವಾಗಿ ಅನುಭವಿಸಲು ಕಾರಣವೂ ಆಗುವಂಥದ್ದು. ಆದರೆ ಅದರಲ್ಲಿ ಒಂದು ಪಾರದರ್ಶಕತೆಯು ಇದೆ. ಈ ವ್ಯಕ್ತಿ ಮತ್ತು ಅವನ ನೋವು ಅತ್ಯಂತ ಕಷ್ಟದಾಯಕವಾಗಿದೆ. ಅವನು ಅದೃಷ್ಟವನ್ನು ನಂಬಿದ್ದಾನೆ. ಉದಾತ್ತನೂ ಆಗಿದ್ದಾನೆ. ಯಾವುದೋ ಒಂದು ಕಾರಣಕ್ಕೆ ಅವನು ವಿಧಿಗೆ ಸಿಕ್ಕಿದ್ದಾನೆ. ವ್ಯಕ್ತಿ ಮತ್ತು ಅವನ ಮುಗ್ಧತೆಯ ಕಾರಣಕ್ಕೆ ಅವನು ಸಿಕ್ಕಿಹಾಕಿಕೊಂಡಿದ್ದಾನೆ. ಅವನು ತನ್ನ ಮುಗ್ಧತೆಯ ಕಾರಣಕ್ಕೆ ಮಾತ್ರವೇ ಪ್ರಾಯಶ್ಚಿತ್ತವನ್ನು ಅನುಭವಿಸುತ್ತಾನೆ. ಒಂದು ವೇಳೆ ಅವನು ಕೇಡಿಗನೂ ಆದರೆ ಅವನಿಗೆ ಈ ಸಮಸ್ಯೆಯು ಇಲ್ಲ. ಹಾಗಿದ್ದರೆ ನಾಟಕದ ಮೂಲಕವೇ ಗ್ರೀಕರು ಇದನ್ನು ಹೇಳಿದರು ಮತ್ತು ಅದರ ಮೂಲವೇ ಏನನ್ನು ಸಾಧಿಸಲು ಹೊರಟಿದ್ದಾರೆ ಎನ್ನುವುದೂ

ಮುಖ್ಯವಾದ ಪ್ರಶ್ನೆ. ಅದರ ಹಿಂದೆ ಸಾಮಾಜಿಕ ಮತ್ತು ಸಾಂಸ್ಕೃತಿಕವಾದ ಉದ್ದೇಶವಿದೆ. ದುರಂತದ ನಾಯಕರು ಕ್ರಾಂತಿಕಾರರು ಅಲ್ಲವೆಂದು ಗೊತ್ತಾಗುತ್ತದೆ. ಅವರು ಭಿನ್ನವಾಗಿದ್ದಾರೆ. ಅವರು ತಮ್ಮದಲ್ಲದ ಕಾರಣಕ್ಕೆ ನೋವನ್ನು ಅನುಭವಿಸುತ್ತಾರೆ. ಇಲ್ಲಿ ಮತ್ತೆ ಹೇಳಬೇಕಾದ ಪ್ರಶ್ನೆಯೂ ಇದೆ. ದುರಂತದ ಮೂಲಕ ಒಂದು ಖುಶಿಯೂ ಇವುಗಳಲ್ಲಿ ವ್ಯಕ್ತವಾಗುತ್ತದೆ. ಅದು ಮುಖ್ಯ. ಯಾವುದಕ್ಕೋ ಯಾವುದೋ ಒಂದು ಅದರಲ್ಲಿ ತುಂಬಿಕೊಳ್ಳುತ್ತದೆ. ಒಂದು ರೀತಿಯಲ್ಲಿ ದುರಂತ ನಾಟಕವು ಖಿನ್ನತೆಯನ್ನು, ಜೀವನದ ಸಹಾಯಕತೆಯನ್ನು ಹೇಳುತ್ತದೆ. ಆದರೆ ಇವುಗಳು ನಮಗೆ ಹೇಳುವುದು ಅಥವಾ ತೋರಿಸುವುದು ಅದು ಹೇಗೆ ದುಃಖವಾಗಿ ಪರಿವರ್ತನೆಯು ಆಗುತ್ತದೆ ಎಂದು ಮಾತ್ರವೇ. ಇವುಗಳು ಸಹಜವಾದ ಗುಣವೂ ಅಲ್ಲ. ಆದರೆ ಜೀವನ ಮತ್ತು ಅದರ ಪರಿಣಾಮವನ್ನು ತೋರಿಸುವವರು ದೇವತೆಗಳು ಅಥವಾ ವಿಧಿ. ದೈವೀವಾದಿಗೆ ಬರುವ ಅನುಭವಗಳೇ ಇಲ್ಲಿ ಮುಖ್ಯವಾಗುತ್ತದೆ. ದುರಂತದ ನಾಯಕನಿಗೆ ಪ್ರೀತಿಯನ್ನು ತೋರಿಸುವವರು ಕೂಡಾ ಅವನ ದುಃಖವನ್ನು ಪರಿಹರಿಸಲು ಸಾಧ್ಯವಾಗುವುದೂ ಇಲ್ಲ. ಆದರೆ ಈ ಎಲ್ಲಾ ಸಂಗತಿಗಳು ದ್ವಂದ್ವಾತ್ಮಕವಾಗಿರುತ್ತದೆ. ಜೀವನದಲ್ಲಿ ನಡೆದ ಒಂದು ತಪ್ಪು ಕೂಡಾ ವ್ಯಕ್ತಿಗೆ ದುರಂತವನ್ನು ತರುತ್ತದೆ. ಆದರೆ ಪಾಪ ಮತ್ತು ಅದರ ನಿವೇದನೆಯು ಇಲ್ಲಿ ಬರುವುದಿಲ್ಲ. ಅದಕ್ಕೆ ಯಾವುದೇ ಅವಕಾಶವೂ ಇಲ್ಲ. ಪ್ರಾಯಶ್ಚಿತ್ತವು ಒಂದೇ ದಾರಿಯಾಗುತ್ತದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ದುರಂತವನ್ನು ಅನುಭವಿಸುವವನು ಒಬ್ಬ ವ್ಯಕ್ತಿ ಎನ್ನುವುದನ್ನು ಮಾತ್ರ ನಾವು ಮರೆಯಬಾರದು.

ಬರಹದ ಸ್ವರೂಪ ಮತ್ತು ರಾಜಕಾರಣ

ಬರಹವು ಒಂದು ಬುದ್ಧಿಜೀವಿ ವರ್ಗದ ಪ್ರಕ್ರಿಯೆಯೂ ಆಗಿರುತ್ತದೆ. ಅದರಲ್ಲಿ ಅರ್ಥವಿದೆ. ನಮ್ಮ ಅಗತ್ಯವನ್ನು ಹೆಚ್ಚು ದೃಶ್ಯದ ಮೂಲಕವಾಗಿ ಹೇಳಲು ಸಾಧ್ಯವಾಗುವುದು ಅಕ್ಷರದ ಮಹತ್ವದ ಕೆಲಸವೂ ಹೌದು. ಅಕ್ಷರಗಳು ನಮ್ಮ ಕಣ್ಣಿಗೆ ಕಾಣಿಸುತ್ತದೆ. ಅದರ ಅಗತ್ಯವೇ ಅದು. ಅದು ನಿರ್ದಿಷ್ಟವಾದ ಸಂವಾದವನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿಯು ಸಂವಾದವನ್ನು ನಡೆಸುತ್ತಾನೆ. ಆದರೆ ಈ ಸಂವಾದವು ಮೌಖಿಕವಾದ ಸಂವಾದದ ರೀತಿಯಲ್ಲಿ ಇಲ್ಲವೆನ್ನುವುದು ಗಮನಾರ್ಹವಾಗಿದೆ. ನಾವು ಸಂವಾದವನ್ನು ನಮಗೆ ಅಗತ್ಯವಿಲ್ಲದವರೊಡನೆ ಮಾಡಲಾರೆವು. ಯಾರು ಓದುತ್ತಾರೆಯೋ ಅವರೊಂದಿಗೆ ಲೇಖಕನು ಸಂವಾದವನ್ನು ರೂಪಿಸುತ್ತಾನೆ. ಅದು ಅವನ ಅಗತ್ಯವೂ ಹೌದು. ಸಂವಾದವು ಏಕ ಮುಖವಾದ ಪ್ರಕ್ರಿಯೆಯು ಅಲ್ಲ. ಅದು ಉದ್ದೇಶಿತವಾಗಿದೆ. ಅದರಲ್ಲಿ ಕಾರ್ಯಕಾರಣ ಸಂಬಂಧವಿದೆ. ಹಾಗೆ ನೋಡುವುದಿದ್ದರೆ ಸಂವಾದ ಎನ್ನುವುದು ಪರಸ್ಪರವೂ ಹೌದು. ಅದು ಜೀವನದ ಅಗತ್ಯ. ಸಂವಾದವು ಮೂಲಭೂತವಾಗಿ ಸಹವರ್ತಿಗಳಲ್ಲಿ ಒಂದು ಆಸಕ್ತಿಯನ್ನು ಹುಟ್ಟಿಸುತ್ತದೆ. ವ್ಯಕ್ತಿ ಮತ್ತು ಅವನ ಸಹವರ್ತಿಯನ್ನು ಪ್ರಚೋದಿಸುತ್ತದೆ. ಅದರ ಜೊತೆಗೆ ಸಂವಾದವನ್ನು ನಡೆಸಲು ನಮಗೆ ಸ್ವಾತಂತ್ರ್ಯವಿದೆ. ಆದರೆ ಆ ಸ್ವಾತಂತ್ರ್ಯವು ಯಾವ ಬಗೆಯದು ಎನ್ನುವುದೂ ಬಹಳ ಮುಖ್ಯ. ವ್ಯಕ್ತಿಯನ್ನು ಮತ್ತು ಅವನ ಜೀವನವನ್ನು ರೂಪಿಸುವುದು ಆರ್ಥಿಕತೆ. ಅದು ಅವನ ಕಷ್ಟ ಮತ್ತು ಸುಖವನ್ನು ಹೇಳುತ್ತದೆ. ವ್ಯಕ್ತಿಯನ್ನು ನಿರೂಪಿಸುವುದು ಇದೆ. ಆದರೆ ಇದರಲ್ಲಿ ಭಿನ್ನತೆಯೂ ಇರುತ್ತದೆ. ವ್ಯಕ್ತಿಯನ್ನು ಮತ್ತು ಅವನ ಜೀವನದ ಕ್ರಮವನ್ನು ಅದು ಹೇಳುತ್ತದೆ. ಆದರೆ ಒಬ್ಬ ವ್ಯಕ್ತಿಯು ಬರೆಯುವುದಿಲ್ಲವೋ ಅವನು ತನ್ನ ದುಃಖವನ್ನು ಹೇಳುವುದು ಮಾತಿನಲ್ಲಿ. ಅವನ ಜೀವನದ ಕಷ್ಟ ಮತ್ತು ಸುಖವನ್ನು ಮಾತಿನಲ್ಲಿ; ತನ್ನ ನೆರೆಯವರಲ್ಲಿ ಸೂಚಿಸುತ್ತಾನೆ. ಅದು ಬೇರೆ ಬೇರೆ ಮಾದರಿಯಲ್ಲಿ ಇರುತ್ತದೆ. ನಾವು ಚಪ್ಪಲಿಯಂಗಡಿವನೊಂದಿಗೂ ಸಂವಾದವನ್ನು ಮಾಡುತ್ತೇವೆ. ಆದರೆ ಇದರಲ್ಲಿ ನಡೆಸುವ

ಸಂವಾದವು ಒಂದು ಬಗೆಯಲ್ಲಿ ಇರುತ್ತದೆ. ಆದರೆ ಮತ್ತೆ ಕೆಲವು ಬಾರಿ ಬಸ್ಸಿನಲ್ಲಿ ನಮ್ಮ ಪಕ್ಕ ಕುಳಿತವನೊಂದಿಗೆ ಕೂಡಾ ಸಂವಾದವನ್ನು ಮಾಡುತ್ತೇವೆ. ಆದರೆ ಈ ರೀತಿಯ ಸಂವಾದವೂ ಕೂಡಾ ಕಷ್ಟ ಮತ್ತು ಸುಖವನ್ನು ಹೇಳುತ್ತವೆ. ಆದರೆ ಇವುಗಳ ವಿನ್ಯಾಸವು ಬೇರೆಯಾಗಿರುತ್ತದೆ. ಮಾತು ಮತ್ತು ಅದರಲ್ಲಿ ಇರುವ ಕಾಳಜಿಗಳು ಬೇರೆ ಬೇರೆ ರೀತಿಯಲ್ಲಿ ವ್ಯಕ್ತ ಮಾಡುತ್ತೇವೆ. ವ್ಯಕ್ತಿಯನ್ನು ನೋಡಿಕೊಂಡು ನಾವು ಮಾತನ್ನಾಡುತ್ತೇವೆ. ಅವನೊಂದಿಗೆ ಸಂವಾದವನ್ನು ಮಾಡಲು ಸಾಧ್ಯವಾಗುತ್ತದೆಯಾದರೆ ಮಾತ್ರವೇ ನಾವು ಮಾತಾಡುತ್ತೇವೆ. ಇಲ್ಲವಾದರೆ ಸುಮ್ಮನೆ ಇರುತ್ತೇವೆ. ಮಾತು ಮಾತ್ರ ಬೇರೆ ಬೇರೆ ವಿಧವಾಗಿರುತ್ತದೆ. ಮಾತುಗಳಲ್ಲಿ ಏರಿಳಿತವೂ ಇರುತ್ತದೆ. ಅದರಲ್ಲಿ ಭಾವನೆಗಳು ಇರುತ್ತವೆ. ಸಿಟ್ಟು, ಆಕ್ರೋಶ, ನೋವು ಮತ್ತು ಸುಖಗಳು ನಮ್ಮ ಮಾತಿನಲ್ಲಿ ವ್ಯಕ್ತವಾಗುತ್ತವೆ. ಆದರೆ ವಾಸ್ತವವಾಗಿ ಮಾತು ಮತ್ತು ಬರಹಗಳ ನಡುವೆ ವ್ಯತ್ಯಾಸವಿದೆ. ಹಾಗಿದ್ದರೂ ಮಾತು ಮತ್ತು ಬರಹವೆರಡೂ ಸಂವಾದವನ್ನು ಮಾಡುತ್ತವೆ. ಸಂವಾದವು ಈ ದೃಷ್ಟಿಯಿಂದ ಮಹತ್ವದ್ದೂ ಆಗುತ್ತದೆ. ಸಮಾಜದಲ್ಲಿ ಸಂವಾದವು ವಹಿಸುವ ಪಾತ್ರವನ್ನು ನಾವು ನಿರಾಕರಿಸಲು ಬರುವುದೂ ಇಲ್ಲ. ಅದರಲ್ಲಿ ಭಿನ್ನತೆಗಳು ಇರುತ್ತವೆ. ಆದರೆ ಯಾವುದೇ ಸಂಕಥನವು ಇಲ್ಲವಾದರೆ ಒಂದು ಶೂನ್ಯತೆಯು ಆವರಿಸುತ್ತದೆ. ಆಂಗಿಕ ಸಂಜ್ಞೆಯಿಂದಲೇ ನಾವು ಏನನ್ನೂ ಮಾಡಲಾರೆವು. ಸಂವಾದವನ್ನು ನಾವು ಯಾವುದೇ ಜನರು ಇಲ್ಲದ ಕಡೆಗೆ ಮಾಡಲಾರೆವು. ಆದರೆ ಇದನ್ನು ನಾವು ನಮಗೆ ಬೇಕಾದ ರೀತಿಯಲ್ಲಿ ಜೋಡಿಸುತ್ತೇವೆ. ಭಾಷೆಯನ್ನು ನಾವು ಕಟ್ಟಿದ್ದೇವೆ. ಅದರೊಂದಿಗೆ ವ್ಯವಹಾರವನ್ನು ಮಾಡುತ್ತೇವೆ. ಅದು ಅಗತ್ಯವಾದ ಒಂದು ಕ್ರಿಯೆ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ನೋಡಬೇಕು. ರಂಗಭೂಮಿಯ ಕಲಾವಿದನು ಪ್ರೇಕ್ಷಕನೊಂದಿಗೆ ಮಾತಾಡುತ್ತಾನೆ. ಪ್ರೇಕ್ಷಕರು ಸುಮ್ಮನೆ ಕುಳಿತಿದ್ದರೂ ಅವರ ಮೌನಕ್ಕೆ ಅರ್ಥವಿದೆ. ಆದ್ದರಿಂದ ಅದು ಸಕ್ರಿಯವಾದ ಒಂದು ಚಟುವಟಿಕೆಯೂ ಆಗಿರುತ್ತದೆ. ಅದರಲ್ಲಿ ಅರ್ಥವಿದೆ. ಯಾವುದೇ ಉದ್ದೇಶವಿಲ್ಲದೆ ಯಾವುದೇ ಕ್ರಿಯೆಯು ಇರುವುದೂ ಇಲ್ಲ, ಅದರ ಸ್ವರೂಪವನ್ನು ನಾವು ಕಾಣದೇ ಹೋಗಬಹುದು. ಆದರೆ ಅರ್ಥಮಾಡಿಕೊಳ್ಳದೆ ಇರಲು ಸಾಧ್ಯವೇ ಇಲ್ಲ. ಮಾತು ಮತ್ತು ಬರಹವೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗುತ್ತದೆ. ಯಾವುದೇ ನಮ್ಮ ಚಟುವಟಿಕೆಗೂ ಅದರ ಅರ್ಥಕ್ಕೂ ಒಂದು ಸಂಬಂಧವಿದೆ. ಅರ್ಥವೇ ಇಲ್ಲದ ಕೆಲಸವು ಇದೆಯೇ ಎನ್ನುವುದು ಮುಖ್ಯವಾದ ಪ್ರಶ್ನೆಯಾಗಿದೆ. ಕ್ರಿಯೆ ಮತ್ತು ಅದರ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವು ಈ ದೃಷ್ಟಿಯಿಂದ ಮಹತ್ವದ್ದೂ ಆಗಿದೆ. ವಾಸ್ತವವಾಗಿ ಯಾವುದೇ ಕ್ರಿಯೆ ಮತ್ತು ಅದರ ಅರ್ಥವು ಬೇರೆಯಾಗುತ್ತದೆ. ಅದರಲ್ಲಿ ಕ್ರಿಯೆ ಮತ್ತು ಅದರ ಕಾರಣವು ಅತ್ಯಂತ ಮುಖ್ಯವಾದದ್ದೂ ನಿಜ. ಯಾವುದು ನಮ್ಮ ಕ್ರಿಯೆ ಮತ್ತು ಅದರ ಕಾರಣವು ಏನು ಮತ್ತು ಅದು ಹೇಗೆ ಅಗತ್ಯವಾಗಿದೆ ಹಾಗೂ ಅದರ ಜಾಗ ಯಾವುದು ಏಕೆ ಮಾಡುತ್ತಿದ್ದೇವೆ ಎನ್ನುವುದು ಮುಖ್ಯವಾದ ಪ್ರಶ್ನೆಯೂ ಹೌದು. ಅದುವೇ ನಿಜವಾದ ಸಂಗತಿಯು ಆಗಿದೆ. ಆಧುನಿಕ ಬರವಣಿಗೆಗಳು ನಿಜವಾದ ಅರ್ಥದಲ್ಲಿ ಒಂದು ಮಾನದಂಡವನ್ನು ರೂಪಿಸಿತು. ಅದು ಆಧುನಿಕ ನಾಗರಿಕತೆಯು ಹೇಗೆ ಪ್ರವೇಶ ಮಾಡಿದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದನ್ನು ಹೇಳುತ್ತದೆ. ಅದಕ್ಕೆ ಒಂದು ತಾತ್ವಿಕತೆಯು ಇದೆ.

ಅದು ಪ್ರಭುತ್ವ, ಜನಾಂಗ ಮತ್ತು ಸಾಮಾಜಿಕ ನಿಯಮವನ್ನು ಹೇಳುತ್ತವೆ. ಅದರಲ್ಲಿ ಬರುವ ಮೌಲ್ಯಗಳನ್ನು ನಾವು ಒಂದು ಮಾದರಿಯೆಂದು ವಿವರಿಸಲು ಬರುವುದೇ ಇಲ್ಲ. ಒಂದು ದೃಷ್ಟಿಯಿಂದ ಪ್ರಭುತ್ವದ ಆಗು ಮತ್ತು ಹೋಗುಗಳನ್ನು ಆಗಿನ ನಮ್ಮ ಬರಹಗಳು ನಿರೂಪಿಸಿವೆ. ಆದರೆ ಅದರಲ್ಲಿ ಹೆಬ್ಬೆಟ್ಟಿನ ಸಾಕ್ಷಿಗಳು ಇಲ್ಲವಾಗಿದೆ. ಅದು ಅನನ್ಯತೆಯನ್ನು, ಭಿನ್ನತೆಯನ್ನೂ ದಾಖಲಿಸಿವೆ. ಲೇಖಕರ ಹಕ್ಕು ಮತ್ತು ಅದರ ಸಾಮ್ಯಗಳ ಪ್ರಶ್ನೆಯು ಅತ್ಯಂತ ಮಹತ್ವದ್ದೂ ಆಗಿದೆ. ಆದರೆ ನಮ್ಮ ಜನಪದ ಹಾಡುಗಳಲ್ಲಿ ಹಕ್ಕು ಮತ್ತು ಸ್ವಾಮ್ಯದ ಪ್ರಶ್ನೆಯು ಬೇರೆಯಾಗುತ್ತದೆ. ಬರಹವು ಹೇಗೆ ಅನ್ಯತೆಯನ್ನು ನೋಡಬಹುದು ಮತ್ತು ಅದರ ಸ್ವರೂಪವನ್ನು ಹೇಗೆ ಗ್ರಹಿಸಬಹುದು ಎನ್ನುವುದನ್ನು ಹೇಳುತ್ತದೆ. ಅದರಲ್ಲಿಯೂ ಅನ್ಯತೆಯ ಪ್ರಶ್ನೆಯು ಅತ್ಯಂತ ಮಹತ್ವದ್ದೂ ಆಗುತ್ತದೆ. ಪ್ರಭುತ್ವ ಮತ್ತು ಅದರ ಶಕ್ತಿಯನ್ನು ವಿರೋಧಿಸಲು ಬರಹವೂ ಒಂದು ಮಾದರಿಯು ಆಯಿತು. ಇಲ್ಲಿ ಹೇಳಬೇಕಾದ ಮತ್ತೊಂದು ಪ್ರಶ್ನೆಯು ಇದೆ. ವಾಸ್ತವವಾಗಿ ಬರಹವು ಮುದ್ರಣವಾದಾಗ ಅದರಲ್ಲಿ ರುಜುವಿನ ಪ್ರಶ್ನೆಗಳು ಬರಲಿಲ್ಲ. ಆದರೆ ಸರಕಾರಿ ಕಡತಗಳಲ್ಲಿ ರುಜು ಮತ್ತು ಹೆಬ್ಬೆಟ್ಟಿನ ಪ್ರಶ್ನೆಗಳು ಬಂದಿವೆ. ದಸ್ತಾವೇಜುಗಳಲ್ಲಿ ಇದು ಅತ್ಯಂತ ಮಹತ್ವದ ಪ್ರಶ್ನೆಗಳು ಆದವು. ವಾಸ್ತವವಾಗಿ ಬಾಯಿ ಮಾತು ಅದರ ಸ್ವರೂಪವು ಒಂದು ವಿಷಯವನ್ನು ಹೇಳಿತು. ವಾಕ್ ಮತ್ತು ಅದರ ಸ್ವರೂಪವು ಅತ್ಯಂತ ಮುಖ್ಯವಾದದ್ದು ಬರಹವು ಅಲ್ಲವೆನ್ನುವುದನ್ನು ಆಗಿನ ನಿಲುವುಗಳು ನಮಗೆ ಹೇಳುತ್ತವೆ. ವಾಕ್ ಎನ್ನುವುದೂ ಇಲ್ಲಿ ಮುಖ್ಯವಾಗಿದೆ. ಇದನ್ನು ಜನಪದರು ಆಣೆ ಎಂದು ಹೇಳಿದರು. ಆಣೆ ಮತ್ತು ಅದರ ಅರ್ಥವು ಬೇರೆಯಾಗುತ್ತವೆ. ದೇವರ ಮೇಲೆ ಆಣೆ, ಮಕ್ಕಳ ಮೇಲೆ ಆಣೆ ಎನ್ನುವುದು ಮಾತಿನ ಪಾವಿತ್ರ್ಯವನ್ನು ಹೇಳುತ್ತದೆ. ಆಣೆಯು ಒಂದು ರೀತಿಯಲ್ಲಿ ಇದ್ದರೆ ದಾಖಲೆಗಳು ಮತ್ತು ಅದರ ಸ್ವರೂಪಗಳು ಮತ್ತೊಂದು ಮಾದರಿಯಲ್ಲಿ ಇವೆ. ಅದನ್ನು ಹೀಗೆ ಹೇಳಬಹುದು ಆಧುನಿಕ ಕೈಬರಹಗಳು ಮತ್ತು ಅದರ ಅಧಿಕೃತತೆಯು ಒಂದು ಮಾದರಿಯಲ್ಲಿ ಇವೆ. ಬರಹವನ್ನು ಆಧುನಿಕ ಮುದ್ರಣಗಳು ನೋಡಿದ ಮತ್ತು ಗ್ರಹಿಸಿದ ಕ್ರಮಗಳು ಬೇರೆ, ಅದರಲ್ಲಿ ಅಥೆಂಟಿಸಿಟಿಯ ಪ್ರಶ್ನೆಗಳು ಬಂದವು. ಅದರಲ್ಲಿಯೂ ಬರಹಗಾರನು ತನ್ನ ಅಧಿಕಾರವನ್ನು ಸ್ಥಾಪಿಸಿಕೊಳ್ಳಲು ಒಂದು ಯತ್ನವನ್ನು ಮಾಡಬೇಕಾಯಿತು. ಅದರ ಪರಿಣಾಮವೇ ಆಧುನಿಕವಾದ ಒಂದು ಅಧಿಕೃತತೆಯ ಪ್ರಶ್ನೆ. ಇಲ್ಲಿ ಇದು ಅತ್ಯಂತ ಮುಖ್ಯವಾದ ಚಹರೆಯನ್ನು ಹೇಳುತ್ತದೆ. ತಾನು ಮತ್ತು ತನ್ನ ಬರಹ ಎನ್ನುವುದು ನಿಜವಾಗಿಯೂ ಒಂದು ಮಹತ್ವದ ಪ್ರಶ್ನೆಯು ಆಗಿತ್ತು. ತಾಲೂಕು ಕಚೇರಿಗಳ ಎದುರು ಕೆಲವು ರೈಟರ್‌ಗಳು ಬಂದರು. ಅವರು ದಾಖಲೆಗಳನ್ನು ಬರೆದು ಕೊಡುತ್ತಾರೆ. ಅದರಲ್ಲಿ ಅವರು ಒಕ್ಕಣೆಗಳನ್ನು ಹೇಳುತ್ತಾರೆ. ಅದಾದ ಮೇಲೆ ನೋಂದಣಿ ಅಧಿಕಾರಗಳ ಎದುರು ಹೆಬ್ಬೆಟ್ಟು ಹಾಕಬೇಕು. ಇದು ಅತ್ಯಂತ ಮುಖ್ಯವಾದ ಒಂದು ದಾಖಲೆಯ ಆಗುತ್ತದೆ. ಆದರೆ ಇತರ ಬರಹಗಳು ಹಾಗೆ ಇಲ್ಲ. ಅದರಲ್ಲಿ ವಿಭಿನ್ನತೆಯು ಇದೆ. ಸ್ವಂತ ಮತ್ತು ಅನ್ಯವೆನ್ನುವುದನ್ನು ಹೀಗೆ ಬೇರೆ ಬೇರೆ ಮಾಡಲಾಯಿತು. ಅನ್ಯರಿಗೆ ಹೇಳುವ ಪಠ್ಯಗಳು ಮತ್ತು ಅದರ ದಾಖಲೆಗಳು ಒಂದು ಮಾದರಿಯವು. ಆದರೆ ಸ್ವಂತ ಅದರ ಅಧಿಕೃತತೆಯು ಮತ್ತೊಂದು ಮಾದರಿಯವೂ ಆಗಿವೆ. ಭೂಮಿ ಮತ್ತು ಅದರ ಕ್ರಯ ಪತ್ರಗಳ ದಾಖಲೆಯನ್ನು ನೋಡಿದರೆ ಗೊತ್ತಾಗುತ್ತದೆ. ಅದು

ಮಾತಿನ ಪ್ರಶ್ನೆಯು ಅಲ್ಲ. ಅದರಲ್ಲಿ ಬಾಯಿ ಮಾತು ಸಾಕಾಗುವುದೂ ಇಲ್ಲ. ಆದರೆ ದೈನಂದಿನ ಮಾತು ಮತ್ತೊಂದು ರೀತಿಯ ಪ್ರಮಾಣ. ಆದ್ದರಿಂದ ಇದರಲ್ಲಿ ತಾರತಮ್ಯವು ಉಂಟಾಗುತ್ತದೆ. ಯಾವಾಗ ಮುದ್ರಣವು ಬಂತೋ ಆಗ ಅದರ ಸ್ವರೂಪವನ್ನು ಬೇರೆ ಮಾಡಬೇಕಾಗಿ ಬಂತು. ಮುದ್ರಣ ಮತ್ತು ಅದರ ವ್ಯಾಖ್ಯೆಗಳು ಬೇರೆಯಾಗುತ್ತವೆ. ಬಾಯಿ ಮಾತು ಮತ್ತು ಅದರ ಸ್ವರೂಪವು ನಾಲಗೆಯನ್ನು ಆಧರಿಸಿಕೊಳ್ಳುತ್ತವೆ. ಆದರೆ ದಸ್ತಾವೇಜುಗಳಲ್ಲಿ ಇದು ಪ್ರಮಾಣವಲ್ಲ. ಅದಕ್ಕೆ ಸಾಕ್ಷಿಗಳೂ ಬೇಕಾಗುತ್ತವೆ. ಆಧುನಿಕ ಕೃತಿಗಳಲ್ಲಿ ಲೇಖಕರ ಸಹಿಯು ಇಲ್ಲವಾಗಿದೆ. ಆದರೆ ಅದರಲ್ಲಿ ಹಕ್ಕುಗಳು ಇವೆ. ಬರಹದ ಪಠ್ಯಗಳು ನಮ್ಮಲ್ಲಿ ಹೊಸದಾದ ಕೆಲವು ಮಾದರಿಗಳನ್ನು ಹೇಳಿತು. ಅದರಲ್ಲಿ ಬದಲಾದ ಕೆಲವು ಚಿತ್ರಗಳೂ ಇವೆ. ವಾಸ್ತವವಾಗಿ ಬರಹವ ಮುದ್ರಣವಾಗುತ್ತದೆ ಎಂದರೆ ಅದರ ಹಿಂದೆ ಬೇರೆ ಸಂಗತಿಗಳೂ ಇರುತ್ತವೆ. ಲೇಖಕನು ಒಂದು ಸರ್ತಿ ಬರೆಯುತ್ತಾನೆ. ಅವನ ಬರಹವೂ ಕೆಲವು ಪ್ರಾಥಮಿಕವಾದ ಕೆಲವು ರಚನೆಗಳನ್ನು ಮಾಡಿಕೊಂಡಿರುತ್ತವೆ. ಮತ್ತೆ ಪ್ರಜ್ಞಾಪೂರ್ವಕವಾಗಿಯೇ ಬರೆಯುತ್ತಾನೆ. ಅದರ ಅನಂತರ ಕರಡು ತಿದ್ದುಪಡಿಯು ನಡೆಯುತ್ತದೆ. ದಿನಂದಿನ ಮಾತು ಹಾಗೆ ಇಲ್ಲ. ಅದರಲ್ಲಿ ಈ ರೀತಿಯಲ್ಲಿ ಪೂರ್ವಪಠ್ಯವನ್ನು ರಚಿಸಬೇಕಾದ ಅಗತ್ಯವೇ ಇಲ್ಲ. ಮಾತು ಮತ್ತು ಅದರ ಹಿಂದೆ ಇರುವ ಆಲೋಚನೆಯು ಮಾತ್ರವೇ ಮುಖ್ಯವಾಗುತ್ತದೆ. ಬರಹ ಮತ್ತು ಅದರ ಹಿಂದೆ ಇರುವ ಕಲ್ಪನೆಗಳು ಬದಲಾದ ಸನ್ನಿವೇಶವನ್ನು ಹೇಳಿತು. ವಸಾಹುತು ಕಾಲದ ಕೃತಿಗಳು ಹೇಳಿದ್ದು ಮತ್ತು ಅದರ ಹಿಂದೆ ಇದ್ದ ಅನುಭವಗಳು ಒಂದು ರೂಪವನ್ನು ಹೊಂದಿರಲಿಲ್ಲ. ಅದರಲ್ಲಿ ವ್ಯತ್ಯಾಸಗಳು ಇದ್ದವು. ಆಗಿನ ಬರಹಗಳು ಬೇರೆ ಬೇರೆ ಮಾದರಿಯನ್ನು ಹೇಳುವುದು ಮಾತ್ರವೇ ಅಲ್ಲ. ಅದರಲ್ಲಿ ತಾರತಮ್ಯಗಳು ಇದ್ದವು. ಬ್ರಿಟೀಷ್ ಪ್ರತಿನಿಧಿಗಳು ಒಂದು ರೀತಿಯಲ್ಲಿ ಬರೆದರೆ ಇಲ್ಲಿಯವರ ಮಾತು ಮತ್ತು ಬರಹಗಳು ಬೇರೆ ಮಾದರಿಯಲ್ಲಿದ್ದವು. ಇದನ್ನು ಕೈಫಿಯತ್ತುಗಳೂ ಸೂಚಿಸುತ್ತವೆ. ಭೂಮಿ ಮತ್ತು ಅದರ ದಾಖಲೆಗಳೂ ಹೇಳುತ್ತವೆ. ಆದರೆ ಬ್ರಿಟೀಷರ ಪತ್ರಗಳು ನಮಗೆ ಒಂದು ಬಗೆಯ ಚಿತ್ರವನ್ನು ಕೊಟ್ಟರೆ ಸಾಹಿತ್ಯ ಮತ್ತು ಅದರ ಪರಿಣಾಮಗಳು ಬೇರೆ ಮಾದರಿಯಲ್ಲಿದ್ದವು. ಪಶ್ಚಿಮದ ವರ್ಗದ ವರ್ಗದ ಚರಿತ್ರೆಯು ಇಲ್ಲಿ ನೇರನಾಗಿ ಅನ್ವಯವಾಗುವುದೂ ಇಲ್ಲ ಎನ್ನುವುದು ಅನೇಕರಿಗೆ ತಿಳಿದಿದೆ. ಇಲ್ಲಿ ಬೇರೆ ಬೇರೆ ಸಮಸ್ಯೆಯು ಸೇರಿಕೊಂಡಿದೆ. ಅದನ್ನು ನಾವು ಮರೆಯಬಾರದು. ಇಲ್ಲಿ ಜಾತಿಗೆ ಒಂದು ಸ್ಥಾನವು ಇದೆ. ಮತ್ತು ಅದರ ಕಾರಣದಿಂದ ಇಲ್ಲಿಯ ಪ್ರಶ್ನೆಗಳೂ ಬೇರೆಯಾಗುತ್ತವೆ. ವಸಾಹತೋತ್ತರ ಕಾಲದಲ್ಲಿ ಅನೇಕವನ್ನು ನಾವು ಖಾಲಿಯಾದ ಜಾಗದಲ್ಲಿ ಇಡಬೇಕಾಯಿತು. ಪಶ್ಚಿಮ ಮತ್ತು ಅದರ ಚರಿತ್ರೆಯು ಬೇರೆಯಿದೆ. ಅದಕ್ಕೆ ಒಂದು ನಿಲುವು ಇದೆ. ಆದರೆ ವಸಾಹೋತ್ತರಕಾಲದಲ್ಲಿ ಅನೇಕವನ್ನು ಒಂದು ಖಾಲಿಯಾವ ಜಾಗದಲ್ಲಿ ಇಡಲಾಯಿತು. ಆಧುನಿಕ ಬುದ್ಧಿಜೀವಿಗಳು ಮತ್ತು ಅವರ ಬರಹಗಳು ಕೂಡಾ ಬೇರೆ ನಮಗೆ ವಿಚಾರಗಳನ್ನು ಹೇಳುತ್ತವೆ. ಅನೇಕವು ಖಾಲಿಯಾದ ಜಾಗವನ್ನು ಹೊಂದಿದ್ದವು. ಆಧುನಿಕ ಬುದ್ಧಿಜೀವಿಗಳ ಚರಿತ್ರೆಯು ಹಿಂದಿನ ಲೇಖಕರ ಮಾದರಿಯದು ಆಗಿರಲಿಲ್ಲ. ನಮಗೆ ಒಂದು ಮಾದರಿಯಿಂದ ಸಂಸ್ಥೆಗಳು ಅನೇಕವನ್ನು ಹೇಳಿದವು. ಬುದ್ಧಿಜೀವಿಗಳು ಮತ್ತು ಅವರ ಬರಹಗಳನ್ನು ನಾವು ಈ ದೃಷ್ಟಿಯಿಂದ ಬೇರೆಯಾಗಿ ನೋಡಬೇಕಾಗುತ್ತವೆ.

ಯಾವಾಗ ಸಾಂಸ್ಥಿಕರಣಗೊಂಡ ಬುದ್ಧಿಜೀವಿಗಳು ಬರೆಯಲು ಶುರು ಮಾಡಿದರೋ ಆಗ ಬರಹ ಮತ್ತು ಅದರ ಚಹರೆಗಳು ಬದಲಾದವು. ಆಧುನಿಕ ಬುದ್ಧಿಜೀವಿಗಳ ಚರಿತ್ರೆಯು ಹೊಸದಾದ ಬರಹ ಮತ್ತು ತಾತ್ವಿಕತೆಯನ್ನು ಹುಟ್ಟು ಹಾಕಲು ಕಾರಣವೂ ಆಯಿತು. ವಸಾಹತೀಕರಣ ಮತ್ತು ಅದರ ಪ್ರಭಾವವು ಸಾಮಾನ್ಯವಾಗಿರಲಿಲ್ಲ. ಕುಮಾರವ್ಯಾಸ ಮತ್ತು ಕಾರಂತರನ್ನು ಹಾಗೂ ಅನಂತಮೂರ್ತಿಯವರನ್ನು ನಾವು ಒಂದು ತಕ್ಕಡಿಯಲ್ಲಿ ಇಟ್ಟುಕೊಂಡು ನೋಡಲು ಬರುವುದೂ ಇಲ್ಲ. ಅನಂತಮೂರ್ತಿಯವರು ಹೇಳುವುದು ಮತ್ತು ಪ್ರತಿನಿಧಿಸುವುದು ಆಧುನಿಕವಾದ ಒಂದು ಸನ್ನಿವೇಶವನ್ನು. ಅವರಿಗೆ ಜಾತಿ ಮತ್ತು ಅದರ ತಲ್ಲಣಗಳು ಹಾಗೂ ವ್ಯಕ್ತಿತ್ವವು ಮುಖ್ಯವಾಗುತ್ತದೆ. ವಸಾಹತೀಕರಣ ಮತ್ತು ಅದರ ಪರಿಭಾಷೆಗಳು ಸಾಮಾನ್ಯವಾದ ಒಂದು ಪ್ರಕ್ರಿಯೆಯು ಅಲ್ಲ. ಆದರೆ ಅದರಲ್ಲಿ ಕಾರಂತರು ಬದಲಾಗುತ್ತಿರುವ ಸಮಾಜ ಮತ್ತು ಅದರ ಅರಿವನ್ನು ಹೇಳುವುದು ಮತ್ತು ಗ್ರಹಿಸುವುದು ಬೇರೆಯಾಗಿ. ತೇಜಸ್ವಿಯವರು ವಾಸ್ತವವಾಗಿ ಸಾಂಸ್ಥಿಕತೆ ಮತ್ತು ಅದರ ದುಷ್ಪರಿಣಾಮವನ್ನು ಮನಗಂಡಿದ್ದರು. ವಸಾಹತು ಕಾಲ ಮತ್ತು ಅದರ ಕಲಿಕೆಯನ್ನು ಕಾರಂತರು ನಿರಾಕರಿಸಿದ್ದರು. ಬರೆಯಬೇಕಾದ ಪ್ರಶ್ನೆಗಳು ಬೇರೆ ಇವೆ. ಅವನ್ನು ನಾವು ರೂಪಿಸಬೇಕಾಗಿದೆ ಹಾಗೂ ನಮಗೆ ಇರುವ ಪರಂಪರೆಯು ಅತ್ಯಂತ ದೊಡ್ಡದು ಎಂದು ಭಾವಿಸುವ ಕಾರಂತರು ಒಂದು ದೃಷ್ಟಿಯಲ್ಲಿ ವಸಾಹತು ಮತ್ತು ಅದರ ಪ್ರಭಾವವನ್ನು ಬಿಡಿಸಿಕೊಳ್ಳಲು ಯತ್ನವನ್ನು ಮಾಡಿದರು. ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ನಾವು ಬೇರೆ ರೀತಿಯಲ್ಲಿ ನೋಡಬೇಕೆಂದು ಕನ್ನಡದ ಅನೇಕ ಲೇಖಕರು ಭಾವಿಸಿದರು. ಸಾಂಸ್ಥಿಕ ಬುದ್ಧಿಜೀವಿಗಳು ಮತ್ತು ಅವರ ಸಮಸ್ಯೆಯು ಬೇರೆಯಿತ್ತು. ಅವರಲ್ಲಿ ಒಂದು ರೀತಿಯ ಸ್ಥಾನಮಾನದ ಆತಂಕಗಳೂ ಇವೆ. ವಸಾಹತೀಕರಣವು ನಮಗೆ ಹೊಸದಾದ ಮಾರುಕಟ್ಟೆಯನ್ನು ಕೊಟ್ಟಿತು. ಅದರ ಆರ್ಥಿಕ ಮತ್ತು ರಾಜಕೀಯವಾದ ಉದ್ದೇಶವು ಬೇರೆಯಿದೆ. ಸಂಸ್ಕೃತಿ ಮತ್ತು ಅದರ ಮುಖಾಮುಖಿಯು ಹೇಗೆ ನಮಗೆ ಭಿನ್ನವಾದುದನ್ನು ಕೊಡುತ್ತದೆ ಎಂದು ನಮ್ಮ ಬರಹಗಾರರು ಹೇಳುತ್ತಾರೆ. ವಸಾಹತು ಮತ್ತು ಅದರ ರಾಜಕಾರಣವು ಸುಲಭವಾದ ಒಂದು ಪ್ರಕ್ರಿಯೆಯು ಆಗಿರಲಿಲ್ಲ. ಅದರಲ್ಲಿ ಸಂಸ್ಕೃತಿಗಳು ಮತ್ತು ಅದರ ಪ್ರಶ್ನೆಗಳು ಅತ್ಯಂತ ಸಂಕೀರ್ಣವೂ ಆಗಿದ್ದವು. ವಸಾಹತು ಮತ್ತು ಅದರ ಪ್ರಶ್ನೆಗಳನ್ನು ನಮ್ಮ ಲೇಖಕರು ನೋಡಿದ ಕ್ರಮಗಳೂ ಬೇರೆಯಾಗಿವೆ. ಅದರಲ್ಲಿ ಆಕರ್ಷಣೆ ಮತ್ತು ವಿಕರ್ಷಣೆಗಳು ಇವೆ. ನಮ್ಮನ್ನು ಬ್ರಿಟೀಷರು ಆಳುತ್ತಿದ್ದಾರೆ ಮತ್ತು ಅವರು ಅವರಿಗೆ ಬೇಕಾದ ಜ್ಞಾನವನ್ನು ಮಾತ್ರವೇ ರೂಪಿಸುತ್ತಿದ್ದಾರೆ ಎನ್ನುವ ಅರಿವು ನಮ್ಮ ಲೇಖಕರನ್ನು ಬದಲಾಯಿಸಿತು. ವಸಾಹತು ಮತ್ತು ಅದರ ಸ್ವರೂಪವನ್ನು ಗೋವಿಂದ ಪೈಯವರು ನೋಡುವಾಗ ಅವರು ತಳೆಯುವ ನಿಲುವು ಬೇರೆಯಾಗುತ್ತದೆ. ವಸಾಹತು ಮತ್ತು ಅದರ ಪರಿಣಾಮವನ್ನು ನಾವು ಬೇರೆ ರೀತಿಯಲ್ಲಿ ನೋಡಿದ್ದರಿಂದಲೇ ನಮ್ಮ ಕಾವ್ಯಗಳು ಮತ್ತು ಬರಹಗಳು ಬೇರೆ ಮಾದರಿಯನ್ನು ಹುಟ್ಟುಹಾಕಿದವು. ಸರಳ ರಗಳೆ, ಮುಕ್ತ ಛಂದಸ್ಸು ಮುಂತಾದವು ಹೇಗೆ ಮುಖ್ಯವಾಯಿತೋ ಅದೇ ರೀತಿಯಲ್ಲಿ ಷೇಕ್ಸ್‌ಪಿಯರ್ ಮತ್ತು ಅವನ ಬರಹಗಳು ಮುಖ್ಯವಾದವು. ಪೈಯವರು ಬುದ್ಧನನ್ನು ಕುರಿತು ಬರೆದರು. ಗೊಲ್ಗಾಥವನ್ನು ನಿರೂಪಿಸಿದರು. ಭಾರತದಲ್ಲಿ ಅನೇಕ ಸಿದ್ಧಾಂತಗಳು ಹುಟ್ಟಿದವು.

ಅದು ಅನೇಕತೆಯನ್ನು ಹುಟ್ಟು ಹಾಕಿದ್ದು ಮಾತ್ರವೇ ಅಲ್ಲ ಅದರ ಮೂಲಕವೇ ಅನೇಕ ತಂತ್ರಗಾರಿಕೆಗಳು ರೂಪುಗೊಂಡವು. ವಸಾಹತು ಮತ್ತು ಅದರ ಅಧಿಕಾರವು ಬೇರೆ ಮಾದರಿಗಳನ್ನು ಇಟ್ಟುಕೊಂಡಿದ್ದರಿಂದ ಅದರ ಅರ್ಥಗಳೂ ಬೇರೆಯಾದವು. ಅವುಗಳು ಬೇರೆ ಮಾನದಂಡವನ್ನು ಹೊಂದಿದ್ದವು. ಬ್ರಿಟೀಷ್ ಅಧಿಕಾರವು ಬೇರೆ ಬೇರೆ ಸಂಸ್ಥೆಗಳನ್ನು ರೂಪಿಸಿದ್ದವು. ಮತ್ತು ಆ ಸಂಸ್ಥೆಗಳು ಅಧಿಕಾರವನ್ನು ವಿಸ್ತರಿಸುವುದಕ್ಕೆ ಸಹಾಯವನ್ನು ಮಾಡಿದವು. ನಿಲುವು ಮತ್ತು ಅದರ ಪ್ರಾತಿನಿಧಿಕತೆಗಳನ್ನು ಈ ದೃಷ್ಟಿಯಿಂದ ಬೇರೆ ಮಾಡಿಕೊಂಡು ನೋಡಲು ಸಾಧ್ಯ. ಕಾರಂತರು ಬರೆಯಲು ಉದ್ದೇಶವಿದೆ. ಅವರಿಗೆ ಇದ್ದ ಸಾಮಾಜಿಕ ಸನ್ನಿವೇಶವು ಅನಂತಮೂರ್ತಿಯವರ ಸಾಮಾಜಿಕ ಸನ್ನಿವೇಶವು ಆಗಿರಲಿಲ್ಲ. ದೇಸಾಯಿ ಮತ್ತು ಚಿತ್ತಾಲರು ಅನಂತಮೂರ್ತಿಯವರು ಬರೆಯುವ ಕಾಲದಲ್ಲಿಯೇ ಬರೆದರು. ಆದರೆ ಅವರ ಅವಕಾಶಗಳು ಬೇರೆಯಿದ್ದವು. ದೇಸಾಯಿಯರು ನೋಡಿದ ಮತ್ತು ಗ್ರಹಿಸಿದ ಜನರು ಬೇರೆ ಇದ್ದರು. ಮೇಲು ಮಧ್ಯಮವರ್ಗದ ಜನರು ಮತ್ತು ಅವರ ಅಂತರಂಗವು ದೇಸಾಯಿಯವರಿಗೆ ಹೆಚ್ಚು ಮುಖ್ಯವಾಯಿತು. ತರಗತಿಗಳು, ಗ್ರಂಥಾಲಯಗಳು, ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಮತ್ತು ಅವರಿಗೆ ಕಲಿಸುವ ವಿಷಯಗಳು ಮತ್ತು ಅವರ ಆಸಕ್ತಿಯು ಬಹಳ ಮುಖ್ಯವಾಯಿತು. ಆದರೆ ಬ್ರಿಟೀಷ್ ಅಧಿಕಾರವು ಅತ್ಯಂತ ಬ್ರೂಟಲ್ ಆದ ಗುಣವನ್ನು ಹೊಂದಿತ್ತು. ಅದರ ಕೌರ್ಯವು ಜನರನ್ನು ಹೆದರಿಸಿತ್ತು. ಅದರಲ್ಲಿ ಭಯವನ್ನು ಹುಟ್ಟು ಹಾಕುವ ತಂತ್ರಗಳು ಇದ್ದವು. ಜನರಲ್ಲಿ ಅದು ಹುಟ್ಟಿಸಿದ ಭಯವು ಜನರನ್ನು ಒಂದು ಒತ್ತಡಕ್ಕೆ ಗುರಿಮಾಡಿತ್ತು. ಅದರ ವಾಸ್ತವವೇ ಬೇರೆಯಾಗಿದೆ. ಅನೇಕರು ಲಾಠಿ ಮತ್ತು ಜೈಲು ಎನ್ನುವುದನ್ನು ಕೇಳಿ ಭಯಪಟ್ಟರು. ಅದು ರೂಪಿಸಿದ ಒತ್ತಡಗಳು ಜನರನ್ನು ಹತಾಶೆಯಲ್ಲಿ ಮುಳುಗುವಂತೆ ಮಾಡಿತು. ಇದನ್ನು ಕಾರಂತರು ಹೇಳುತ್ತಾರೆ. ಅದರಲ್ಲಿ ಇರುವ ಕೆಲವು ಸಮಸ್ಯೆಗಳನ್ನು ಇಲ್ಲಿ ಹೇಳಬೇಕು ಯಾರು ಪ್ರಭುತ್ವವನ್ನು ವಿರೋಧಿಸುವುದಿಲ್ಲವೋ ಅವರು ಸುರಕ್ಷಿತರು ಎನ್ನುವುದೇ ಮುಖ್ಯವಾಗಿತ್ತು. ಅದೇ ವೇಳೆಗೆ ಶಿಕ್ಷಣವು ವಸಾಹತು ಪ್ರಭುತ್ವಕ್ಕೆ ಒಂದು ಆಯುಧವೂ ಆಗಿತ್ತು. ಅದು ನಿರ್ದಿಷ್ಟವಾದ ಕೆಲವನ್ನು ರೂಪಿಸಿತು. ವಸಾಹತು ಮತ್ತು ಅದರ ಪ್ರಭುತ್ವಕ್ಕೆ ಇದ್ದ ಶಕ್ತಿಯು ಇಲ್ಲಿಯವರಿಗೆ ಇರುವುದು ಅಸಾಧ್ಯವಾಗಿತ್ತು. ಆದ್ದರಿಂದ ವಸಾಹತು ಮತ್ತು ಅದರ ಜೊತೆಗೆ ಇದ್ದ ಸಂಬಂಧವನ್ನು ಏಕೀಕೃತವೆಂದು ಹೇಳಲು ಸಾಧ್ಯವಾಗುವುದೂ ಇಲ್ಲ. ವಸಾಹತು ಮತ್ತು ಅದರ ಕತೆಗಳು ಒಂದು ಎರಡಲ್ಲ. ಬೈಬಲ್ ಹೇಳಿದ ಮಾನವೀಯತೆಗೂ ಅವರ ವರ್ತನೆಗೂ ನಿಜವಾದ ಅರ್ಥದಲ್ಲಿ ಸಂಬಂಧವು ಇದ್ದಿರಲಿಲ್ಲ. ತರಗತಿಗಳಲ್ಲಿ ಮನುಷ್ಯತ್ವ ಮತ್ತು ಅದರ ನಿರೂಪಣೆಯನ್ನು ಮಾಡಲಾಯಿತು. ಮತ್ತೊಂದು ಕಡೆಯಿಂದ ದೇಶವನ್ನು ಆಳಲು ಬೇರೆ ಬೇರೆ ನಿಯಮಾವಳಿಯನ್ನು ತರಲಾಯಿತು. ಪೋಲೀಸರು ಮತ್ತು ಅವರ ಶಕ್ತಿಯು ಹೆಚ್ಚಿತ್ತು. ವಸಾಹತು ಪ್ರಭುತ್ವವು ನಮಗೆ ಬೇರೆ ಪಾಠಗಳನ್ನು ಹೇಳಿವೆ. ಅದರಲ್ಲಿ ಸಂಘಟನೆ ಮತ್ತು ಅದರ ಸ್ವರೂಪಗಳೂ ಸೇರಿಕೊಂಡಿವೆ. ಸಂಘಟನೆಯು ಮುಖ್ಯವಾಗಿ ರಾಷ್ಟ್ರೀಯತೆಯ ಆಲೋಚನೆಯನ್ನು ಕಟ್ಟಿಕೊಟ್ಟಿತು. ಅಧಿಕಾರ ಮತ್ತು ಅದರ ರಚನೆಗಳು ಆಗ ಅನೇಕವನ್ನು ರೂಪಿಸಿತು. ಜ್ಞಾನವನ್ನು ಅದು ನೋಡಿದ ಮತ್ತು ಗ್ರಹಿಸದ ಕ್ರಮಗಳು ನಮಗೆ ನಮ್ಮದೇ ಕೆಲವು ಚರ್ಚೆಗಳನ್ನು ಹುಟ್ಟು ಹಾಕಿದವು. ಪ್ರಾತಿನಿಧಿಕತೆಯು

ಮೂಲಭೂತವಾಗಿ ಒಂದು ವರ್ಗಕ್ಕೆ ಮಾತ್ರವೇ ಸೀಮಿತವಾದ ಪ್ರಕ್ರಿಯೆಯು ಆಗಿರಲಿಲ್ಲ. ಅದಕ್ಕೆ ಒಂದು ನಿಲುವೂ ಇದೆ. ವಸಾಹತೋತ್ತರಕಾಲದಲ್ಲಿ ಅನೇಕವನ್ನು ಖಾಲಿಯಾದ ಜಾಗದಲ್ಲಿ ಇಡಲಾಯಿತು. ಸ್ವಯಂ ಪ್ರತಿನಿಧೀಕರಣವು ಅಷ್ಟು ಸುಲಭವಾದ ಒಂದು ಪ್ರಕ್ರಿಯೆಯು ಆಗಿಲಿಲ್ಲ. ವಾಸ್ತವವಾಗಿ ಆಧುನಿಕ ಬುದ್ಧಿಜೀವಿಗಳ ನಡವಳಿಕೆಗಳು ಭಿನ್ನವಾಗಿವೆ. ಅವರ ಚರಿತ್ರೆಯು ಬೇರೆಯಿದೆ. ಅವರಲ್ಲಿ ಅನೇಕರು ತಮ್ಮನ್ನು ತಾವು ಹೆಚ್ಚು ವೈಭವೀಕರಿಸುವುದರಲ್ಲಿ ಮಗ್ನರೂ ಆಗಿದ್ದಾರೆ. ತಾವು ಕಂಡುದನ್ನು ಮಾತ್ರವೇ ಸತ್ಯವೆಂಬ ನಿಲುವು ಅವರದು. ಯಾವುದನ್ನು ಯಾವ ರೂಪದಲ್ಲಿ ಹೇಳಬೇಕು ಎನ್ನುವುದಕ್ಕಿಂತ ಅವರಿಗೆ ತಾವು ಯಾವುದೇ ವಿಷಯಗಳಿಗೆ ಹೆಚ್ಚು ಬದ್ಧರಾಗಿಲ್ಲವೆಂದು ಹೇಳುವುದು ಅವರಿಗೆ ಮುಖ್ಯವಾಯಿತು. ಅವರ ಮಾತಿನ ರೂಪದೊಳಗೆ ಅವರು ಹೇಳ ಹೊರಟ ವಸ್ತುಗಳು ಇವೆ. ಆದ್ದರಿಂದ ವ್ಯವಸ್ಥೆಯನ್ನು ಅವರು ಹೇಗೆ ನೋಡಿದ್ದಾರೆ ಎನ್ನುವುದೂ ಅತ್ಯಂತ ಮುಖ್ಯವಾಯಿತು. ಕನ್ನಡದ ಅನೇಕ ಚಿಂತಕರ ಮಾತುಗಳು ಸಾಂಸ್ಥಿಕವಾದ ಚಹರೆಯನ್ನು ಮಾತ್ರವೇ ಹೊಂದಿವೆ. ಯಾವುದು ನಮಗೆ ವಸಾಹತು ಕಾಲದಲ್ಲಿ ಪ್ರಾತಿನಿಧಿಕವು ಆಯಿತೋ ಅವುಗಳು ಮಾತ್ರವೇ ಮುಖ್ಯವಾಗಿಲ್ಲ. ಅದರ ಆಚೆಗೆ ಕೆಲವು ಸಂಗತಿಗಳು ಇವೆ. ಆದರೆ ಸಾಂಸ್ಥಿಕ ರೂಪಗಳು ನಮ್ಮ ಬುದ್ಧಿಜೀವಿಗಳನ್ನು ಅನೇಕ ರೀತಿಯಲ್ಲಿ ನಿಯಂತ್ರಣವನ್ನು ಮಾಡಿತು. ಯಾರು ಬರೆಯಲು ತೊಡಗಿದರೋ ಅವರಿಗೆ ಸಂಸ್ಥೆ ಮತ್ತು ಅದರ ವ್ಯಾಪ್ತಿಯು ಮಾತ್ರವೇ ಹೆಚ್ಚು ಮುಖ್ಯವಾಯಿತು. ಅದರಲ್ಲಿಯೂ ಅನೇಕರು ಹೆಚ್ಚು ಸಜ್ಜನಿಕೆಯನ್ನು ಮತ್ತು ಹೆಚ್ಚು ನಾಗರಿಕವಾದ ಭಾಷೆಯನ್ನು ಬಳಸಿದರು. ಅದರ ಅಪಾಯವು ನಮಗೆ ಈಗ ಕಾಣಿಸುತ್ತದೆ. ಯಾವುದನ್ನು ಬರೆದರೆ ಹೆಚ್ಚು ನಾಗರಿಕರಾಗಿ ಕಾಣಲು ಸಾಧ್ಯ ಮತ್ತು ಹೇಗೆ ಬರೆದರೆ ಯಾರು ಮೆಚ್ಚುತ್ತಾರೆ ಹಾಗೂ ನಾವು ಅವರಿಗಿಂತ ಕಡಿಮೆಯಿಲ್ಲವೆಂದು ಭಾವಿಸಿದರು. ಸ್ಥಾನ ಮತ್ತು ಅದರ ಅದರ ಮೂಲಕ ನಾವು ಪಡೆದುಕೊಂಡ ಅರಿವು ನಮಗೆ ಮುಖ್ಯವಾಯಿತು. ವಸಾಹತು ಮತ್ತು ಅದರ ಪ್ರಭುತ್ವಕ್ಕೆ ಇರುವ ಆರ್ಥಿಕತೆ ಹಾಗೂ ಅದರ ರಾಜಕೀಯ ಮುಖಗಳಲ್ಲಿ ಅನೇಕ ಸಮಸ್ಯೆಗಳು ಇದ್ದವು. ಅದು ಸಂಕೀರ್ಣವಾಗಿತ್ತು. ಅದುವೇ ಸಾಂಸ್ಕೃತಿಕತೆಯನ್ನು ನಿರ್ವಚನ ಮಾಡಿತು. ವಸಾಹತು ಮತ್ತು ಅದರ ಆದರ ತಾತ್ವಿಕತೆಯನ್ನು ಹಾಗೂ ಅದರ ರೂಪುಗೊಂಡ ಬಗೆಯನ್ನು ನಾವು ಈವತ್ತು ನೋಡುವಾಗ ಅದರ ತಂತ್ರಗಾರಿಕೆಯು ಕೂಡಾ ಯಾವ ಬಗೆಯಲ್ಲಿ ಇತ್ತು ಎಂದು ಯೋಚಿಸಬೇಕಾಗುತ್ತದೆ. ಭಾರತದಲ್ಲಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡವು ಮತ್ತು ಅದರ ರೂಪವಾಗಿಯೇ ಅನೇಕ ರೀತಿಯ ತಾತ್ವಿಕತೆಗಳು ತಮ್ಮ ತಂತ್ರಗಳನ್ನು ಹಾಗೂ ನಿಲುವುಗಳನ್ನು ಹುಟ್ಟುಹಾಕಿದವು. ವಸಹತು ಕಾಲದಲ್ಲಿ ಅನೇಕ ರೀತಿಯು ಉದ್ಯೋಗಗಳು ಹುಟ್ಟಿದವು. ಅದರ ಪರಿಣಾಮವೂ ಸಾಮಾನ್ಯವಾಗಿ ಇರಲಿಲ್ಲ. ಕಂಪೆನಿಗಳು ಮತ್ತು ಅದರಲ್ಲಿ ಗುಮಾಸ್ತರಾಗುವುದು ಎಂದರೆ ಸಾಂಪ್ರಾದಾಯಿಕವಾದ ಉದ್ಯೋಗವನ್ನು ಬಿಡುವುದು ಎಂದೇ ಅರ್ಥ. ನವರತ್ನ ರಾಮರಾಯರ 'ಕೆಲವು ನೆನಪುಗಳು' ಕೃತಿಯನ್ನು ಈ ದೃಷ್ಟಿಯಿಂದ ನೋಡಬಹುದು. ಅಧಿಕಾರ ಮತ್ತು ಅದರ ರಚನೆಗಳು ಕೆಲವು ಬಗೆಯ ಜ್ಞಾನವನ್ನು ಹುಟ್ಟುಹಾಕುತ್ತವೆ. ಅದರಲ್ಲಿ ಕಡತದ ಜ್ಞಾನವೂ ಒಂದು ಬಗೆಯದು. ಕಡತವೂ ಒಂದು ಬಗೆಯ ಜ್ಞಾನವನ್ನು ಹುಟ್ಟುಹಾಕುತ್ತದೆ. ಅದರಲ್ಲಿ ನಿರ್ದಿಷ್ಟವಾದ ಕ್ರಿಯಾ ಯೋಜನೆ ಹಾಗೂ ಅದರ ಬಗೆಗೆ

ನಿಲುವುಗಳು ಇರುತ್ತವೆ. ಅನೇಕ ಕೈಫಿಯತ್ತುಗಳು ಮತ್ತು ಬ್ರಿಟೀಷ್ ಅಧಿಕಾರಿಗಳು ಇಂಗ್ಲೆಂಡಿನ ಸರಕಾರಕ್ಕೆ ಇಲ್ಲಿಯ ಕುರಿತು ಬರೆದ ಪತ್ರಗಳು ಸಾಕ್ಷಿಯಾಗಿವೆ. ಭಾರತದಲ್ಲಿ ಯಾವ ಬಗೆಯ ಕಾರ್ಯಕ್ರಮವನ್ನು ಯೋಜಿಸಬೇಕು ಮತ್ತು ಅದರ ಪರಿಣಾಮವು ಯಾವ ಬಗೆಯಲ್ಲಿ ಇದೆ ಎನ್ನುವುದನ್ನು ಅನೇಕ ಪತ್ರಗಳು ಹೇಳುತ್ತವೆ. ಆದರೆ ಅದರಲ್ಲಿ ಬರುವ ಪ್ರಾತಿನಿಧಿಕತೆಯನ್ನು ನಾವು ಬೇರೆ ರೀತಿಯಲ್ಲಿ ನೋಡಲು ಸಾಧ್ಯವಾಗುತ್ತದೆ. ಅದು ಮನಸ್ಸುಗಳ ಮೇಲೆ ಪ್ರಭಾವವನ್ನು ಬೀರಿದೆ. ಅದರ ದೆಸೆಯಿಂದ ಅದರ ಅರ್ಥವೂ ಬಿನ್ನವಾಯಿತು. ವಸಾಹತು ಸಂಕಥನಗಳಿಗೆ ಒಂದು ಚಾರಿತ್ರಿಕವಾದ ಚೌಕಟ್ಟು ಕೂಡಾ ಇದೆ. ಸಂಕಥನ ಮತ್ತು ಅದರ ಪರಿಣಾಮವನ್ನು ನೋಡುವಾಗ ಅದರ ಸಾಮಾಜಿಕ ಪರಿಣಾಮವನ್ನು ನೋಡಬೇಕಾದ ಅಗತ್ಯವೂ ಇದೆ. ವಸಾಹತು ಪ್ರಭುತ್ವದ ಜೊತೆಗೆ ಇದ್ದ ಮಾತುಕತೆ ಮತ್ತು ಸ್ಥಳೀಯರೊಂದಿಗೆ ಇದ್ದ ಮಾತುಕತೆಗೆ ಬೇರೆ ಬೇರೆ ಆಯಾಮವೂ ಇದೆ. ಈ ದೃಷ್ಟಿಯಿಂದ ಸಂಕಥನಗಳು ಸಮಾಜ ಮತ್ತು ಅದರ ಕಾರ್ಯವನ್ನು ಹೇಳುತ್ತವೆ. ಸಂಕಥನಗಳು ಮತ್ತು ಅದರ ಸಾಮಾಜಿಕ ಕಾರ್ಯಕ್ರಮಗಳು ಈ ದೃಷ್ಟಿಯಿಂದ ಬೇರೆಯಾಗುತ್ತವೆ. ಶಿಕ್ಷಣ ಮತ್ತು ಅದರ ಪರಿಣಾಮವು ಒಂದು ಬಗೆಯದು ಅಲ್ಲ. ಸ್ಥಳೀಯರು ಪಡೆದುಕೊಂಡ ಶಿಕ್ಷಣವನ್ನು ನಾವು ಈ ದೃಷ್ಟಿಯಲ್ಲಿಯೂ ನೋಡಬೇಕಾಗುತ್ತದೆ. ಸರಳವಾದ ಒಂದು ಉದಾಹರಣೆಯನ್ನು ಕೊಡುವುದಾದರೆ ಆಗ ನಮಗೆ ಬಂದ ಶಿಕ್ಷಣವನ್ನು ನಮ್ಮ ಅಗತ್ಯಕ್ಕಾಗಿಯೇ ಅನೇಕ ಲೇಖಕರು ಬಳಸಿಕೊಂಡರು. ಶಿಕ್ಷಣ ಮತ್ತು ಅದರ ಮೂಲಕವೇ ನಿಯಂತ್ರಣವು ಒಂದು ಬಗೆಯಲ್ಲಿ ವಿಶಿಷ್ಟವಾದ ಕಥನವೂ ಆಗಿದೆ. ಸ್ಥಳೀಯತೆ ಮತ್ತು ಅದರ ಸ್ವರೂಪದ ಮೇಲೆಯೂ ಆಧುನಿಕ ಶಿಕ್ಷಣವು ಪ್ರಭಾವವನ್ನು ಬೀರುತ್ತದೆ ಎನ್ನುವುದು ಮೆಕಾಲೆ ಮುಂತಾದವರಿಗೆ ಗೊತ್ತಿತ್ತು. ಆದರೆ ಕರ್ನಾಟಕದಲ್ಲಿ ಮುಷ್ಟಿಫಂಡಿನ ಶಾಲೆ, ಮೂಲ್ಕಿ ಪರೀಕ್ಷೆಗಳು ಬೇರೆ ಕಥನಗಳನ್ನು ಹೇಳುತ್ತವೆ. ಬರಹವು ಎಲ್ಲರ ಪ್ರತಿನಿಧಿಯು ಅಲ್ಲ. ಅದರಲ್ಲಿ ಬೇರೆ ಬೇರೆ ಆಯಾಮಗಳೂ ಇವೆ. ಕಾರಂತರು ಬರೆದದ್ದು ಎಲ್ಲರ ಪ್ರಾತಿನಿಧಿಕ ರೂಪವು ಆಗುವುದು ಸಾಧ್ಯವೇ ಇಲ್ಲ. ಅದೇ ರೀತಿಯಲ್ಲಿ ಮಲೆಯ ಮಾದೇಶ್ವರ ಎಲ್ಲರ ಪ್ರತಿನಿಧಿಯು ಆಗುವುದು ಸಾಧ್ಯವೇ ಇಲ್ಲ. ಅದರ ಪ್ರಾತಿನಿಧಿಕತೆಯನ್ನು ಒಟ್ಟು ಕರ್ನಾಟಕ ಪ್ರಾತಿನಿಧಿಕ ರೂಪವೆಂದು ಹೇಳವಂತೆ ಇಲ್ಲ. ಸಾಹಿತ್ಯ ಮತ್ತು ಅದರ ಪ್ರಕ್ರಿಯೆಗಳನ್ನು ನಾವು ಸಮಾಜ ಮತ್ತು ಅದರ ನಿಯಂತ್ರಣದ ಭಾಗ ಎಂದು ಭಾವಿಸಬೇಕಾಗಿಯೂ ಇಲ್ಲ. ಅದರಲ್ಲಿ ಬರುವುದು ಕೆಲವು ಅಂಶಗಳು ಮಾತ್ರವೇ. ಸಾಹಿತ್ಯವು ಎಲ್ಲರ ಜೊತೆಗೆ ಸಂವಾದವನ್ನು ಮಾಡುವುದೂ ಇಲ್ಲ. ಅದರಲ್ಲಿ ವಸಾಹತುಕಾಲದ ಶಿಕ್ಷಣ ಪದ್ಧತಿಯಿಂದ ಅದರ ಕಾರ್ಯವು ಮತ್ತು ಸೀಮಿತವಾಯಿತು. ಸಾಹಿತ್ಯ ಮತ್ತು ಅದರ ಪ್ರಾತಿನಿಧಿಕತೆಗೆ ಒಂದು ಚೌಕಟ್ಟು ವಸಾಹತುಕಾಲದಲ್ಲಿ ಆಯಿತು. ಆದರೆ ಅದೇ ವೇಳೆಗೆ ವಸಾಹತುಕಾಲದ ಕಾನೂನುಗಳು ಕೂಡಾ ಕೆಲವನ್ನು ಪ್ರತಿನಿಧಿಸಿದವು. ಆಗಿನ ಕಾನೂನುಗಳ ಪ್ರಾತಿನಿಧಿಕತೆಯು ಬೆಂಬಲಿಸಿದ್ದು ಪ್ರಭುತ್ವವನ್ನು ಮಾತ್ರವೇ. ಆಗ ಉತ್ಪಾದನೆ ಮತ್ತು ಅದರ ಪ್ರಭಾವವು ಬೇರೆ ರೀತಿಯದೂ ಹೌದು. ಅದರ ಪರಿಣಾಮವಾಗಿ ಕಾರ್ಮಿಕರು ಮತ್ತು ಅವರ ಸಮಸ್ಯೆಯು ಒಂದು ರೀತಿಯದೂ ಆಗಿತ್ತು. ಬ್ರಿಟೀಷ್ ಆರ್ಥಿಕ ನೀತಿಯಲ್ಲಿ ಇರುವ ಅಲಗು ಜನರನ್ನು ಮತ್ತಷ್ಟು ಹತಾಶೆಗೆ ಗುರಿಮಾಡಿತು. ಅದು ಒಂದು ತಾತ್ವಿಕತೆಯ

ಪ್ರಶ್ನೆಯೂ ಅಲ್ಲ. ಅದರಲ್ಲಿ ಭಿನ್ನವಾದ ಜ್ಞಾನ ಮತ್ತು ಅದರ ಅಧಿಕಾರದ ಸ್ವರೂಪವೂ ಇದೆ. ಜ್ಞಾನವನ್ನು ಉತ್ಪಾದಿಸುವುದು ಮತ್ತು ಅದಕ್ಕಾಗಿ ಅಧಿಕಾರವನ್ನು ಬಳಸುವುದು ಅವರ ನೀತಿಯೂ ಹೌದು. ಜ್ಞಾನ ಮಾದರಿಗಳ ಜೊತೆಗೆ ನಡೆಸಿದ ಸಂಕಥನವನ್ನು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಕಾಲ ಮತ್ತು ಅವಕಾಶಗಳ ಪ್ರಶ್ನೆಯು ಬೇರೆಯಾದ ದೆಸೆಯಿಂದ ಅದರ ಸ್ವರೂಪಗಳು ಬೇರೆಯಾದವು. ಒಂದು ಅರ್ಥದಲ್ಲಿ ಆಗ ಬಂದ ಪ್ರಾತಿನಿಧಿಕತೆಯ ಪ್ರಶ್ನೆಗೆ ಬಹು ಆಯಾಮಗಳೂ ಇವೆ. ಸಾಹಿತ್ಯ ಮತ್ತು ಅದರ ಉತ್ಪಾದನೆಗೆ ಹಲವು ಅಂಶಗಳು ಇವೆ. ಲೇಖಕರು ಮತ್ತು ಅವರ ಆಯ್ಕೆಗಳು ಒಂದು ಬಗೆಯವು. ಸಾಮಾನ್ಯ ಮನುಷ್ಯರು ಮತ್ತು ಅವರ ಆಯ್ಕೆಗಳು ಮತ್ತೊಂದು ಬಗೆಯವು. ಇದನ್ನು ಗೊರೂರು ಅವರು ಪ್ರಬಂಧದಲ್ಲಿ ಹೇಳಿದ್ದಾರೆ. ಹಾಗೂ ಇದನ್ನು ಅನೇಕ ದಾಖಲೆಗಳು ಹೇಳುತ್ತವೆ. ವಾಸ್ತವವಾಗಿ ಸಾಹಿತ್ಯ ಮತ್ತು ಅದರ ಸಾಧ್ಯತೆಗಳು ಬೇರೆಯಾಗುತ್ತವೆ. ಉದ್ಯೋಗ ಮತ್ತು ಅದರ ಸಾಧ್ಯತೆಗಳು ನಮಗೆ ಮತ್ತೆ ಮತ್ತೆ ಬೇರೆ ವಿಚಾರಗಳನ್ನು ಹೇಳಿಕೊಟ್ಟಿತು. ಅದರಲ್ಲಿ ಸಾಹಿತ್ಯವನ್ನು ಹೇಳಿಕೊಡುವುದೂ ಒಂದು. ಅಧಿಕಾರ ಮತ್ತು ರಚನೆಗಳು ಕೂಡಾ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಹಾಯವನ್ನು ಮಾಡಿವೆ. ಜ್ಞಾನವನ್ನು ಅದು ಉತ್ಪಾದಿಸಿದ್ದು ಬೇರೆ ಕಾರಣಕ್ಕೆ. ಆದರೆ ಅದರಲ್ಲಿ ವ್ಯತ್ಯಾಸಗಳೂ ಇದ್ದವು. ವಸಾಹತು ಮತ್ತು ಅದರ ಏಜೆಂಟ್ ರೂಪಗಳು ನಮಗೆ ಬೇರೆ ವಿಚಾರಗಳನ್ನು ಹೇಳಿಕೊಟ್ಟಿವೆ. ಅದರ ತಾತ್ವಿಕ ಕಾರಣಗಳು ಬೇರೆಯಾಗಿವೆ. ವಾಸ್ತವವಾಗಿ ಆಗ ಬಂದ ಎರಡು ಪ್ರಶ್ನೆಗಳು ಅತ್ಯಂತ ಮಹತ್ವದ್ದೂ ಆಗಿದೆ. ಒಂದು ಪಶ್ಚಿಮ ಮತ್ತು ಅದರ ರೂಪಿಸಿದ ಜ್ಞಾನದ ಮಾದರಿಗಳು. ಅದರಲ್ಲಿ ಒಂದು ದೃಷ್ಟಿಕೋನವೂ ಇತ್ತು. ಆದರೆ ಪೂರ್ವ ಮತ್ತು ಅದರ ರೂಪವು ಇಲ್ಲವೆಂದು ಭಾವಿಸಲಾಗಿತ್ತು. ಇಲ್ಲಿ ಇರುವ ಅನೇಕ ಪಠ್ಯಗಳು ಒಂದು ಮಾದರಿಯಲ್ಲಿ ಇದ್ದವು. ಚಾರಿತ್ರಿಕ ಕಾರಣಗಳೂ ಆಧುನಿಕ ಪಠ್ಯಗಳ ರಚನೆಗಳಿಗೆ ಇದ್ದ ರೂಪವು ಒಂದು ಬಗೆಯದಾದರೆ ಹಳೆಯ ಪಠ್ಯಗಳು ಮತ್ತೊಂದು ಬಗೆಯಲ್ಲಿ ಇದ್ದವು. ಅದರಲ್ಲಿಯೂ ಇಲ್ಲಿಯ ಹೇರಳವಾದ ಕೃತಿಗಳು ಮತ್ತು ಮೌಖಿಕವಾದ ಪಠ್ಯಗಳು ಭಿನ್ನವಾಗಿದ್ದವು. ಆದರೆ ವಸಹತು ಆಡಳಿತವು ತನ್ನ ಅಧಿಕಾರವನ್ನು ಮರುಜೋಡಣೆಯನ್ನು ಮಾಡಲು ಅದು ಇಂಗ್ಲಿಷನ್ನು ಜಾರಿಗೆ ತಂದಿತು. ಅದರ ಸ್ಥಳೀಯತೆಯು ಒಂದು ರೂಪದಲ್ಲಿದ್ದರೂ ಅದರ ಸ್ವರೂಪವನ್ನು ಇಲ್ಲಿಯ ಲೇಖಕರು ನೋಡಿದ ಮತ್ತು ಗ್ರಹಿಸಿದ ಕ್ರಮಗಳು ಭಿನ್ನವಾಗಿವೆ. ಅದರ ಹಿಂದೆ ಅಧಿಕಾರ ಮತ್ತು ಅದರ ತಂತ್ರಗಾರಿಕೆಯೂ ಇದೆ. ವಸಾಹತು ಮತ್ತು ಅದರ ಆಡಳಿತವು ನಮಗೆ ಒಂದು ನಿರ್ದಿಷ್ಟವಾದ ಸಂಕಥನವೂ ಆಗಿತ್ತು. ವಸಾಹತುಕಾಲದ ಸಂಕಥನಗಳಿಗೆ ಒಂದು ಚಾರಿತ್ರಿಕವಾದ ನಿರ್ದಿಷ್ಟತೆಯು ಇತ್ತು. ಅದರ ಸಂಕಥನವನ್ನು ನಾವು ಅಧಿಕಾರ ಮತ್ತು ಅದರ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಸಂಕಥನಗಳು ಮೂಲಭೂತವಾಗಿ ಸಮಾಜ ಮತ್ತು ಅದರ ಅವಶ್ಯಕತೆಗೆ ಅನುಸಾರವಾಗಿಯೂ ರೂಪುಗೊಂಡಿದೆ. ಯಾವುದೇ ಸಾಹಿತ್ಯ ಮತ್ತು ಸಂಸ್ಕೃತಿಯ ಸಂಕಥನಗಳಿಗೆ ಸಮಾಜ ಮತ್ತು ಅದರ ಕಾರಣಗಳು ಬೇರೆಯಿರುತ್ತವೆ. ಶಿಕ್ಷಣದ ಮೂಲಕ ಅಧಿಕಾರ ಮತ್ತು ನಿಯಂತ್ರಣವು ಸಾಧ್ಯ ಎಂದು ವಸಾಹತು ಆಡಳಿತವು ನಂಬಿತ್ತು. ಅದರಲ್ಲಿ ಅಧಿಕಾರ ಮತ್ತು ಅದರ

ಪರಿಕರವು ಇದೆ. ಅದರಲ್ಲಿ ತಂತ್ರಗಾರಿಕೆಯೂ ಇತ್ತು. ಇದನ್ನು ವಸಾಹತು ಮತ್ತು ಅದರ ತಂತ್ರಗಳ ಹಿನ್ನೆಲೆಯಿಂದ ನೋಡಬೇಕಾಗುತ್ತದೆ. ಇದನ್ನು ಗೌರಿವಿಶ್ವನಾಥನ್ ಅವರು ಸರಿಯಾಗಿಯೇ ವಿವರಿಸಿದ್ದಾರೆ. (ಮಾಸ್ಕ್ಸ ಆಫ್ ಕಾಂಕ್ವೆಸ್ಟ್) ವಸಾಹತು ಕಾಲವು ಒಂದು ದೃಷ್ಟಿಯಿಂದ ಭಿನ್ನವಾದ ಒಂದು ಚೌಕಟ್ಟು ಕೂಡಾ ಹೌದು. ಅದರ ಚರಿತ್ರೆ ಮತ್ತು ಅದರ ವಾದಗಳು ಭಿನ್ನವಾಗಿದ್ದವು. ಈ ಕರಿತು ಅನೇಕ ವಿವರಣೆಗಳು ನಮಗೆ ಸಿಗುತ್ತವೆ. ಇಂಗ್ಲಿಷ್ ಕಲಿಕೆ ಮತ್ತು ಅದರ ಸ್ವರೂಪವನ್ನು ನಾವು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಭಾರತದಲ್ಲಿ ಇಂಗ್ಲಿಷನ್ನು ಕಲಿಸಿದ್ದಕ್ಕೆ ಒಂದು ಇತಿಹಾಸವು ಇದೆ. ಶಿಕ್ಷಣ ಮತ್ತು ಅದರ ಉದ್ದೇಶಗಳನ್ನು ಬ್ರಿಟೀಷ್ ಅಧಿಕಾರಿಗಳು ವಿವರಿಸಿದ ಕ್ರಮಗಳು ಬೇರೆಯಾಗಿವೆ. ಶಿಕ್ಷಣ, ಚರಿತ್ರೆ, ಅಧಿಕಾರ ಮತ್ತು ಬಂಡವಾಳವಾದ ಹಾಗೂ ಕೆಲಸಗಾರರು ಎನ್ನುವ ಪರಿಕಲ್ಪನೆಗಳು ಇದರಲ್ಲಿ ಸೇರಿಕೊಂಡಿವೆ. ಅಧಿಕಾರ ಮತ್ತು ಅದರ ನಿಲುವುಗಳು ಅದರ ಜೊತೆಗೆ ಸೇರಿಕೊಂಡದ್ದರ ಪರಿಣಾಮವು ಮಾತ್ರವೇ ಇಲ್ಲಿ ಮುಖ್ಯವಾಗಿಲ್ಲ. ಅದರಲ್ಲಿ ಅಧಿಕಾರ ಮತ್ತು ಅದರ ರಾಚನಿಕವಾದ ಹೊಂದಾಣಿಕೆಯೂ ಇದೆ. ಅದರಲ್ಲಿ ಕಾಲದ ಪ್ರಶ್ನೆಯೂ ಇದೆ. ವಸಾಹತು ಮತ್ತು ಅದರ ಕಾಲವನ್ನು ನಾವು ನೋಡುವುದು ಅತ್ಯಂತ ಅಗತ್ಯವಾಗಿದೆ. ಯಾಕೆಂದರೆ ಅದರ ಪ್ರಭುತ್ವವು ಒಂದು ರೀತಿಯದು ಆಗಿರಲಿಲ್ಲ. ಸ್ಥಳೀಯವಾದ ರಾಜಕಾರಣವು ಒಂದು ಬಗೆಯದಾಗಿದ್ದರೆ ವಸಾಹತು ಪ್ರಭುತ್ವ ಮತ್ತು ಅದರ ರಾಜಕಾರಣವು ಮತ್ತೊಂದು ಬಗೆಯದು ಆಗಿತ್ತು ಅದರಲ್ಲಿ ಮತ್ತೆ ಬೇರೆ ಪ್ರಶ್ನೆಗಳು ಇದ್ದವು. ಜಾತಿ ಮತ್ತು ಅದರ ಯಜಮಾನಿಕೆಗಳು ಇದ್ದವು. ಮತ್ತೊಂದು ಕಡೆಗೆ ಜಮೀನ್ದಾರರು ಇದ್ದರು. ಆದ್ದರಿಂದ ರಾಜಕಾರಣ ಮತ್ತು ಅದರ ಕ್ರಿಯೆಗಳು ಒಂದು ಮಾದರಿಯನ್ನು ಮಾತ್ರವೇ ಹೇಳಿಲ್ಲ. ಆದರೂ ಅದರಲ್ಲಿ ಸಂಕೇತಗಳು ಇದ್ದವು. ವಸಾಹತುಕಾಲದ ಉತ್ಪಾದನೆಗಳು ಇಲ್ಲಿ ಅಧಿಕಾರದ ರಚನೆಗಳನ್ನು ಕೂಡಾ ಹೇಳಿದವು. ಸಾಹಿತ್ಯ ಮತ್ತು ಅದರ ಸಂಕಥನಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಸಾಹಿತ್ಯವು ನಮಗೆ ಬೇರೆ ಬೇರೆ ಆಯಾಮವನ್ನು ಕೊಟ್ಟಿದೆ. ಸಾಹಿತ್ಯವನ್ನು ಕಲಿಸುವುದು ಮಾತ್ರವೇ ಅವರ ಉದ್ದೇಶವು ಆಗಿರಲಿಲ್ಲ. ವಸಾಹತುಕಾಲದ ಅನೇಕ ಸಂಗತಿಗಳಿಗೆ ಕೆಲವು ಮಾದರಿಗಳು ಇದ್ದವು. ಸಾಹಿತ್ಯವನ್ನು ಮತ್ತು ಅದರ ಪ್ರಾತಿನಿಧೀಕರಣವನ್ನು ಹೇಗೆ ಮಾಡಬೇಕು ಎನ್ನುವುದು ಅದರ ಮುಖ್ಯವಾದ ಒಂದು ಗುರಿಯೂ ಆಗಿತ್ತು. ಸಮಾಜ ಮತ್ತು ಅದರ ಒತ್ತಡಗಳನ್ನು ಇಲ್ಲಿನ ಲೇಖಕರು ನೋಡಿದ ಕ್ರಮಗಳು ಬೇರೆಯಾಗಿವೆ. ಸಮಾಜವು ಬದಲಾಗುತ್ತಿದೆ ಮತ್ತು ಅದನ್ನು ನಾವು ನಮ್ಮ ಬರಹದಲ್ಲಿ ಹೇಳಬೇಕು ಎನ್ನುವುದು ಇಲ್ಲಿಯ ಮುಖ್ಯವಾದ ನಿಲುವೂ ಆಗಿತ್ತು. ಕಾರಂತರಲ್ಲಿ ಇದನ್ನು ನಾವು ಸ್ಪಷ್ಟವಾಗಿಯೇ ಗುರುತಿಸಲು ಸಾಧ್ಯವಾಗುತ್ತದೆ. ಅವರ ಬರಹಗಳು ಪಲ್ಲಟಗೊಳ್ಳುತ್ತಿರುವ ಚರಿತ್ರೆಯ ರೂಪಕಗಳೂ ಆಗಿವೆ. ಯಾವುದು ಉದ್ದೇಶ ಮತ್ತು ಯಾವುದು ನಿರುದ್ದೇಶ ಎಂದು ಹೇಳುವುದು ಆ ಕಾಲದ ದೃಷ್ಟಿಯಿಂದ ಕಷ್ಟವಾಗಿದೆ. ಒಂದು ಕಾಲವು ನಮಗೆ ಯಾವುದನ್ನು ಕೊಡುತ್ತದೆ ಮತ್ತು ಅದರ ಕಾರಣವು ಕೂಡಾ ಅತ್ಯಂತ ಮಹತ್ವದ್ದು. ವಸಾಹತು ಮತ್ತು ಅದರ ಚರಿತ್ರೆಯು ಅತ್ಯಂತ ಸಂಕೀರ್ಣವಾದ್ದರಿಂದಲೇ ಅದನ್ನು ಸಮಾಜ, ಆರ್ಥಿಕತೆ ಮತ್ತು ಬೇರೆ ವಿವರಗಳ ಮೂಲಕವೂ ನಾವು ನೋಡಬೇಕಾಗುತ್ತದೆ. ಇದರಲ್ಲಿ ಬೇರೆ ಪ್ರಶ್ನೆಗಳು

ಇರುತ್ತವೆ. ಶಿಕ್ಷಣವು ಬೇರೆ ಕೆಲವು ವಿಚಾರಗಳನ್ನು ಮಾತ್ರವೇ ಪ್ರಾತಿನಿಧಿಕ ಮಾಡಿತ್ತು. ಅದರ ಪ್ರಾತಿನಿಧಿಕತೆಯು ಒಂದು ಹಂತದಲ್ಲಿ ಅತ್ಯಂತ ಮುಖ್ಯವಾಗಿ ಒಂದು ವರ್ಗದ ಜನರಿಗೆ ಮಾತ್ರವೇ ಮುಖ್ಯವಾಗಿತ್ತು. ಇಂಗ್ಲಿಷನ್ನು ಕಲಿಯುವುದು ಮಾತ್ರವೇ ಮುಖ್ಯವೆಂದು ಅನೇಕರು ಭಾವಿಸಿಕೊಳ್ಳಲು ಇಲ್ಲ. ಆದ್ದರಿಂದ ಬರೆದವರು ಪ್ರಾತಿನಿಧಿಕ ಮಾಡಿದ ಸಂಗತಿಗಳಿಗೆ ಸೀಮಿತವಾಗಿರುವ ಒಂದು ಲೋಕವು ಮಾತ್ರವೇ ಇದೆ. ಕಲಿತವರು ಬರಹದಲ್ಲಿ ಯಾವುದನ್ನು ಹೇಳಿದರೋ ಅದು ಮಾತ್ರವೇ ನಿಜವಾಗಿರುವ ಒಂದು ಸತ್ಯವು ಆಗುವುದು ಅಸಾಧ್ಯ. ವಸಾಹತು ಮತ್ತು ಅದರ ಅಧಿಕಾರವನ್ನು ಈ ದೃಷ್ಟಿಯಿಂದ ಬೇರೆಯಾಗಿ ನೋಡಬೇಕಾಗುತ್ತದೆ. ಆದರೆ ವಸಾಹತು ಮತ್ತು ಅದರ ಪ್ರಭುತ್ವವು ಒಂದು ದೃಷ್ಟಿಯಿಂದ ಕೆಲವನ್ನು ಮಾತ್ರವೇ ಬದಲು ಮಾಡಿತ್ತು. ಅದು ರಾಚನಿಕವಾದ ಬದಲಾವಣೆ. ಸ್ಥಳೀಯವಾದ ರಾಜಕೀಯವಾದ ಅರ್ಥಶಾಸ್ತ್ರವು ಮತ್ತೊಂದು ಬಗೆಯದು. ಅದು ಮನುಷ್ಯರ ಜಗತ್ತನ್ನು ನೋಡಿದ್ದು ಮತ್ತು ಗ್ರಹಿಸಿದ್ದು ಭಿನ್ನವಾದ ರೀತಿಯಲ್ಲಿ. ಅದರ ಶೈಕ್ಷಣಿಕ ಆಸಕ್ತಿಯು ಒಂದು ಬಗೆಯದೂ ಆಗಿದೆ. ಅದು ಮನುಷ್ಯರ ಆಲೋಚನೆಯ ಕ್ರಮವನ್ನು ಬದಲು ಮಾಡಿದ್ದು ಸತ್ಯವೂ ಆಗಿದೆ. ಕಿರಿಸ್ತಾನರು ಮತ್ತು ಅವರ ಕಾರ್ಯ ವಿಧಾನವನ್ನು ಕನ್ನಡದ ಅನೇಕ ಕಾದಂಬರಿಗಳು ಹೇಳುತ್ತವೆ. ಅದು ಕೆಲವು ರೀತಿಯ ಚಲನೆಗೆ ಕಾರಣವೂ ಆಯಿತು, ಕಾರಂತರ ಕಾದಂಬರಿಯಲ್ಲಿ ಬರುವ ಮನ್ವೇಲನು ಒಂದು ವಿಚಾರವನ್ನು ಮಾತ್ರವೇ ಪ್ರತಿನಿಧಿಸುತ್ತಾನೆ. ಆದರೆ ಅವನ ದೃಷ್ಟಿಕೋನವು ಒಂದು ಪ್ರಾತಿನಿಧಿಕವಾದ ಮಾದರಿಯು ಮಾತ್ರವೇ ಆಗಿದೆ. ವಸಾಹತು ಕಾಲದ ಶಿಕ್ಷಣವು ನಮಗೆ ಒಂದು ಮಾದರಿಯು ಮಾತ್ರವೇ ಆಗಿದೆ. ಇಲ್ಲಿ ಮತ್ತೆ ನಾವು ನೋಡಬೇಕಾದ ಬೇರೆ ವಿಚಾರಗಳೂ ಇವೆ. ಕಿರಿಸ್ತಾನರು ಬರೀ ಪಶ್ಚಿಮದವರು ಮಾತ್ರವೇ ಆಗಿರಲಿಲ್ಲ. ಅವರು ಬೇರೆ ವಿಚಾರಗಳ ಪ್ರತಿನಿಧಿಗಳೂ ಆಗಿದ್ದರು. ಅವರು ವಸಾಹತು ಮತ್ತು ಅದರ ಪ್ರಭುತ್ವದ ಪ್ರತಿನಿಧಿಗಳೂ ಹೌದು. ಅವರ ಒಡನಾಟವು ಸ್ಥಳೀಯರನ್ನು ಕೂಡಾ ಅವಲಂಬಿಸಿತ್ತು. ಪ್ರಭುತ್ವ ಮತ್ತು ಅದರ ಪ್ರತಿನಿಧಿಗಳು ಒಂದು ಮಾದರಿಯಲ್ಲಿ ಇದ್ದರೆ ಸ್ಥಳೀಯ ಏಜೆಂಟರು ಮತ್ತೊಂದು ನಮೂನೆಯಲ್ಲಿ ಇದ್ದರು. ಇದರಿಂದ ಅಧಿಕಾರಿಗಳು ಮತ್ತು ಜನರ ಜೀವನ ಕ್ರಮಕ್ಕೆ ಬೇರೆ ಆಯಾಮವೂ ಇರುತ್ತದೆ. ಮನುಷ್ಯ ಮತ್ತು ಅವರ ಬಗೆಗೆ ವಸಾಹತು ಆಡಳಿತವು ಹೊಂದಿದ್ದ ನೋಟವನ್ನು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಮನುಷ್ಯ ಮತ್ತು ಅವನ ಜೀವನದ ಚಟುವಟಿಕೆಯನ್ನು ಪ್ರಭುತ್ವವು ನೋಡಿದ ಕ್ರಮವು ಭಿನ್ನವಾಗಿದೆ. ವಾಸ್ತವವಾಗಿ ಕೆಲವನ್ನು ಆಗ ಸಾಂಸ್ಥಿಕ ಮಾಡಲಾಗಿತ್ತು. ಪಶ್ಚಿಮ ಮತ್ತು ಅದರ ಸ್ವರೂಪವು ಆಗ ಬದಲಾಗತೊಡಗಿದ್ದು ವಸಾಹತು ಆಡಳಿತದ ಮೇಲೆ ಪ್ರಭಾವವನ್ನು ಬೀರಿದೆ. ಮನುಷ್ಯರನ್ನು ಬದಲು ಮಾಡಬೇಕು ಎನ್ನುವುದು ಅಲ್ಲಿಯ ಮುಖ್ಯವಾದ ಗುರಿಯೂ ಆಗಿತ್ತು. ವಸಹತು ಮತ್ತು ಅದರ ಆಡಳಿತವನ್ನು ನಾವು ಈ ದೃಷ್ಟಿಯಿಂದ ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಅಧಿಕಾರ ಮತ್ತು ಅದರ ನೋಟದಲ್ಲಿ ಕೆಲವು ಇರುವ ಪ್ರಾತಿನಿಧಿಕತೆಯು ಮತ್ತೆ ಕೆಲವರಲ್ಲಿ ಇಲ್ಲ. ವಸಾಹತು ಮತ್ತು ಅದರ ಪ್ರಭುತ್ವವು ಕೆಲವರನ್ನು ಏಜೆಂಟರನ್ನಾಗಿಯೂ ಮಾಡಿತ್ತು. ಕೆಲವರಿಗೆ ಇದು ಅರಿವಿಗೆ ಬರಲಿಲ್ಲ. ಮತ್ತೆ ಕೆಲವರಿಗೆ ಇದು ಅರಿವಿಗೆ ಬಂತು. ಇದರಿಂದ ಕೆಲವು ಮಾದರಿಯ ಪ್ರಕ್ರಿಯೆಗಳು

ನಡೆದವು. ಇದರಲ್ಲಿಯೂ ಸ್ಥಳೀಯರು ತಮಗೆ ಗೊತ್ತಿರುವ ಮಾಹಿತಿಯನ್ನು ಹೇಳಿದ ಮತ್ತು ಅದನ್ನು ಬ್ರಿಟೀಷರು ಗ್ರಹಿಸಿದ ಕ್ರಮಗಳು ಬೇರೆಯಾಗಿವೆ. ವಸಾಹತು ಮತ್ತು ಅದರ ಅಧಿಕಾರವು ಜನರನ್ನು ಕಂಪೆನಿಗೆ ಬೇಕಾದ ಮಾನವ ಸಂಪನ್ಮೂಲವನ್ನಾಗಿ ಮಾತ್ರವೇ ನೋಡಿತು. ಇದರ ಪ್ರಭುತ್ವವು ತನಗೆ ಬೇಕಾದ ಮನುಷ್ಯರ ಶಕ್ತಿಯನ್ನು ತನ್ನದೇ ಆದ ರೀತಿಯಲ್ಲಿ ರೂಪಿಸಿತು. ಮನುಷ್ಯರನ್ನು ತಿದ್ದುವ ಮತ್ತು ಅವರನ್ನು ಕಂಪೆನಿ ಕೆಲಸಕ್ಕೆ ಬೇಕಾದ ರೀತಿಯಲ್ಲಿ ಪರಿವರ್ತನೆ ಮಾಡುವ ಗುರಿಯನ್ನು ಅದು ಹೊಂದಿದ್ದರೆ ಅದರ ಪರಿಣಾಮವು ಬೇರೆ ಕೂಡಾ ಆಯಿತು. ಲೇಖಕರು ಮತ್ತು ಬುದ್ಧಿಜೀವಿಗಳು ಪ್ರಭುತ್ವವನ್ನು ವಿಮರ್ಶಾತ್ಮಕವಾಗಿಯೂ ನೋಡಿದರು. ವಿದ್ಯಾವಂತರು ಯಾವುದನ್ನು ಸ್ವೀಕರಿಸಬೇಕು ಮತ್ತು ಯಾವುದನ್ನು ಸ್ವೀಕರಿಸಬಾರದು ಎನ್ನುವ ದ್ವಂದ್ವದಲ್ಲಿ ಇದ್ದರು. ಇದು ವಿಮರ್ಶಾತ್ಮಕವಾದ ಅಂತರಕ್ಕೆ ಕಾರಣವೂ ಆಯಿತು. ಪಶ್ಚಿಮ ಮತ್ತು ಅದರ ಶೈಕಣಿಕ ಸ್ವರೂಪವನ್ನು ನೋಡಿದ ಮತ್ತು ಗ್ರಹಿಸದ ಕ್ರಮವೇ ಈ ದೃಷ್ಟಿಯಿಂದ ಬೇರೆಯಾಗಿದೆ ವಸಾಹತು ಆಡಳಿತವು ಕೆಲವನ್ನು ಸಾಂಸ್ಥಿಕ ಮಾಡಿತು. ಹೊಸದಾದ ಸಂಸ್ಥೆಗಳು ಮತ್ತು ಅವುಗಳ ವ್ಯವಸ್ಥೆಯು ಮೂಲಭೂತವಾಗಿ ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಇರಲಿಲ್ಲ. ಮ್ಯಾಜಿಸ್ಟ್ರೇಟ್ ಮುಂತಾದ ಹುದ್ದೆಗಳು ನಿಜವಾಗಿಯೂ ಅರ್ಥವಾಗುವ ಸ್ಥಿತಿಯಲ್ಲಿ ಇರಲಿಲ್ಲ. ಅದರ ಸ್ವರೂಪಕ್ಕೂ ಇಲ್ಲಿ ಜನರಿಗೂ ಅಲ್ಲಿಯ ಮಾದರಿಗಳಿಗೂ ಯಾವುದೇ ರೀತಿಯ ಸಂಬಂಧವು ಇದ್ದಿರಲಿಲ್ಲ. ಇದರ ಜೊತೆಗೆ ಅನುಸಂಧಾನವನ್ನು ಮಾಡುವುದು ಸಾಮಾನ್ಯ ಅರಿವಿಗೆ ದಕ್ಕುವಂತೆ ಇರಲಿಲ್ಲ. ಪಶ್ಚಿಮ ಮತ್ತು ಅದರ ಅರಿವು ಬೇರೆ ರೀತಿಯದು. ಅದರ ಕಾನೂನು ಮತ್ತು ಅದರ ರಾಜಕಾರಣವು ಒಂದು ಬಗೆಯದು ಎನ್ನುವುದನ್ನು ನಾವು ಮರೆಯುವಂತೆ ಇರಲಿಲ್ಲ. ವಸಾಹತು ಮತ್ತು ಅದರ ಅನಂತರದ ಸ್ಥಿತಿಯು ಭಿನ್ನವಾಗಿದೆ. ಇದನ್ನೇ ತೇಜಸ್ವಿಯವರ ತಬರನ ಕಥೆಯು ಹೇಳುತ್ತದೆ. ನಮ್ಮ ಚರಿತ್ರೆಯು ಅನೇಕವನ್ನು ಹೇಳಿದೆ. ಅದರಲ್ಲಿ ಕೆಲವು ನಮಗೆ ವ್ಯಕ್ತವಾಗಿದೆ. ಮತ್ತು ಕೆಲವು ವ್ಯಕ್ತವಾಗಿಲ್ಲ. ವಸಾಹತು ಲೋಕ ಮತ್ತು ಅದರ ಪರಿಣಾಮಗಳು ನಮಗೆ ಬೇರೆ ಸಂಗತಿಗಳನ್ನು ಹೇಳಿವೆ. ಆದರೆ ಬರಹವೂ ಇಲ್ಲಿ ರಾಜಕಾರಣವಾಗಿದೆ. ಕೆಲವರಿಗೆ ಬರೆಯಲು ಅವಕಾಶವು ಸಿಕ್ಕಿತು. ಕೆಲವರಿಗೆ ಓದಲು ಮತ್ತು ಬರೆಯಲು ಬೇಕಾದ ವಿರಾಮವು ದೊರೆಯಿತು. ಬರಹವು ನಮಗೆ ಸಿಕ್ಕಿದ ವಿಶಿಷ್ಟವಾದ ಒಂದು ಜ್ಞಾನ. ಅದರ ಬೆಳಕಿನಲ್ಲಿ ಕೆಲವನ್ನು ನಾವು ಪರೀಕ್ಷೆ ಮಾಡಿದೆವು. ಯಾವುದು ಸತ್ಯ? ಯಾವುದು ಸುಳ್ಳು? ಆಧುನಿಕ ಬರಹಗಾರರು ಇಂಗ್ಲಿಷ್ ಓದಿದರು. ನಮಗೆ ಇದ್ದ ಪ್ರಶ್ನೆ: ಪ್ರಗತಿ ಎಂದರೆ ಯಾವುದನ್ನು ಉಳಿಸಿಕೊಳ್ಳುವುದು ಮತ್ತು ಯಾವುದನ್ನು ನಾವು ಬಿಡುವುದು? ಬರಹ ಮತ್ತು ಅದರ ಚರಿತ್ರೆಯು ಅತ್ಯಂತ ಮುಖ್ಯವಾದ ಒಂದು ಸಂಕಥನವು ಆಗಿದೆ. ಅಧಿಕಾರವು ವ್ಯಕ್ತಿಗಳನ್ನು ಒಂದು ವಾಹಕವಾಗಿ ಮಾತ್ರವೇ ನೋಡುತ್ತದೆ. ಆದರೆ ಅದರ ಪರಿಣಾಮ ಮಾತ್ರವೇ ಬೇರೆಯಾಗಿರುತ್ತದೆ. ಚರಿತ್ರೆಯೆಂದರೆ ನಮ್ಮ ವರ್ತಮಾನವೂ ಹೌದು. ಮತ್ತು ಅದು ನಮ್ಮ ಭವಿಷ್ಯದ ಸೂಚನೆಯೂ ಹೌದು. ಯಾವುದನ್ನು ನಾವು ಕಳೆದುಕೊಂಡಿದ್ದೇವೆಯೋ ಅದು ಚರಿತ್ರೆಯಾಗುತ್ತದೆ. ಆದರೆ ಅದು ತನ್ನ ಎಲ್ಲಾ ಗುಟ್ಟುಗಳನ್ನು ಬಿಟ್ಟುಕೊಡುವುದೂ ಇಲ್ಲ. ಅದರಲ್ಲಿ ಅನೇಕವು ಮೌನವೂ ಆಗಿರುತ್ತವೆ. ಆದ್ದರಿಂದ ಈ ಮೌನಗಳನ್ನು

ನಮಗೆ ಅರ್ಥಮಾಡಿಕೊಳ್ಳಲು ಸಾಧ್ಯ ಮಾಡುವ ಪರಿಕರವೆಂದರೆ ಚಾರಿತ್ರಿಕ ಭೌತವಾದ. ಇದರಲ್ಲಿಯೂ ಅನೇಕರು ಯಾವುದು ಪ್ರಧಾನ ಮತ್ತು ಯಾವುದು ಅಪ್ರಧಾನವೆಂದು ಗುರುತಿಸಲು ಹೋಗುತ್ತಾರೆ. ಆದರೆ ಆ ಮಾದರಿಯ ವರ್ಗಗಳ ಅಗತ್ಯವು ಇಲ್ಲ. ಒಂದು ಸಂದರ್ಭದಲ್ಲಿ ಊಟ ಮತ್ತು ವಸತಿಯು ಮೊದಲು ಉಳಿದದ್ದು ಆ ಮೇಲೆ ಎಂದು ಮಾರ್ಕ್ಸ್ ಹೇಳುತ್ತಾನೆ. ಯಾವುದೇ ಒಂದು ಸಂಕೇತವೂ ಅನೇಕ ಸಂದರ್ಭದಲ್ಲಿ ಚರಿತ್ರೆಯ ಕೆಲಸವನ್ನು ಮಾಡುತ್ತದೆ. ಆದರೆ ಅವುಗಳು ಮಾತ್ರವೇ ಚರಿತ್ರೆಯು ಅಲ್ಲ. ಚರಿತ್ರೆಯಲ್ಲಿ ಅನೇಕ ಸಂಗತಿಗಳು ಆಗಿ ಹೋಗಿವೆ. ಆಗಿ ಹೋದ ಘಟನೆಗಳಲ್ಲಿ ಅನೇಕವು ಪ್ರಭುತ್ವಕ್ಕೆ ಅನುಸಾರವಾಗಿಯೂ ನಡೆದಿದೆ. ಚಾರಿತ್ರಿಕ ಭೌತವಾದವು ನಮಗೆ ಅನೇಕವನ್ನು ಹೇಳಿಕೊಡುತ್ತವೆ. ಅದರಲ್ಲಿ ತುಂಬಾ ವಿಷಯಗಳೂ ಸೇರಿಕೊಂಡಿರುತ್ತವೆ. ಮೌನದಲ್ಲಿ ಇರುವುದನ್ನು ಬರಹವು ಮಾತಿನ ರೂಪಕ್ಕೆ ತರುತ್ತದೆ. ಮತ್ತು ಅದ ಕಳೆದುದನ್ನು ಹೇಳುತ್ತದೆ. ಚರಿತ್ರೆಯನ್ನು ಬರಹವು ಪ್ರತಿನಿಧಿಸುತ್ತದೆ. ಮತ್ತು ಅದು ಒಂದು ಬಗೆಯ ದಾಖಲೆಯೇ ಆಗಿದೆ. ಬರಹ ಮತ್ತು ಅದರ ಸಾಕ್ಷ್ಯವೂ ಈ ದೃಷ್ಟಿಯಿಂದ ಮಹತ್ವದ್ದು. ಆದರೆ ಅದರ ಜೊತೆಗೆ ನಾವು ಮಾತು ಮತ್ತು ಅದರ ಸಾಧ್ಯತೆಯನ್ನು ಕುರಿತು ಯೋಚಿಸಬೇಕು. ಆಯಾ ಭಾಷೆಯಲ್ಲಿ ಮಾತಿಗೂ ಅದರದೇ ಆದ ಮಹತ್ವವು ಇದೆ. ನಮ್ಮ ಮಾತು ನಮ್ಮ ಆಲೋಚನೆಯ ಪ್ರತಿನಿಧಿ. ಅದರಲ್ಲಿಯೂ ಮಾತು ಪ್ರಾತಿನಿಧಿಕ. ಅಭಿಜಾತ ಪರಂಪರೆಯಲ್ಲಿ ಮಾತು ಮತ್ತು ಅದರ ಅಭಿವ್ಯಕ್ತಿಯು ಒಂದು ಬಗೆಯಲ್ಲಿ ಇತ್ತು. ಭಾಷೆ ಮತ್ತು ಅದರ ಪ್ರಾತಿನಿಧಿಕತೆಯು ಈ ದೃಷ್ಟಿಯಿಂದ ಭಿನ್ನವಾಗುತ್ತದೆ. ಯಾವುದನ್ನು ನಾವು ಪ್ರಾತಿನಿಧಿಕವೆಂದು ಹೇಳುತ್ತೇವೆಯೋ ಅದಕ್ಕೂ ನಮ್ಮ ಆಲೋಚನೆಗೂ ಸಂಬಂಧವಿದೆ. ಆಧುನಿಕ ಜಗತ್ತಿನಲ್ಲಿ ಬರಹವನ್ನು ನಾವು ಒಂದು ವಿಶಿಷ್ಟವಾದ ಒಂದು ಸಂಗತಿಯೆನ್ನುವಂತೆ ನೋಡಿದ್ದೇವೆ. ಅದರ ಪಾತ್ರವು ಸಣ್ಣದೂ ಅಲ್ಲ. ಹಾಗೆ ನೋಡುವುದಿದ್ದರೆ ಬರಹ ಮತ್ತು ಅದರ ಸಾಧ್ಯತೆಗಳು ಭಿನ್ನವಾದದ್ದೂ ಹೌದು. ಸಾಹಿತ್ಯ ಮತ್ತು ಅದರ ಕುರಿತಾದ ನಮ್ಮ ತಿಳಿವಳಿಕೆಗಳು ಇದನ್ನು ಹೇಳುತ್ತದೆ. ಒಂದು ನಿಜವಾದ ಮತ್ತು ಉಪಯುಕ್ತವಾದ ಕೃತಿಯು ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದನ್ನು ಹೇಳಲು ನಮಗೆ ವಿಮರ್ಶೆಯೂ ಬೇಕಾಗುತ್ತದೆ. ಆದ್ದರಿಂದ ವಿಮರ್ಶೆಯ ನಿರಾಕರಣೆಯು ಬೇಡ. ಚರಿತ್ರೆ ಎಂದರೆ ಅದು ಯಾರಿಗೂ ಉಪಯುಕ್ತವಲ್ಲವೆನ್ನುವ ತೀರ್ಮಾನವು ಬೇಕಾಗಿಲ್ಲ. ಸಂಸ್ಕೃತಿಯ ಚರಿತ್ರೆಯಲ್ಲಿ ಬರಹದ ಸಂಸ್ಕೃತಿಯು ಬಹಳ ಮಹತ್ವದ ಪಾತ್ರವನ್ನು ವಹಿಸಿದೆ. ಅವುಗಳನ್ನು ಚರಿತ್ರೆಯ ಹೊರಗಿನದು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಯಾವುದೇ ಸಂಸ್ಕೃತಿಯಲ್ಲಿ ಆಂತರಿಕ ಸಂಬಂಧವು ಇರುತ್ತದೆ. ಮತ್ತು ಅದು ಜೀವನವನ್ನು ಬೇರೆ ಬೇರೆ ರೀತಿಯಲ್ಲಿ ರೂಪಿಸುತ್ತದೆ. ಮತ್ತು ಸಾಹಿತ್ಯದಲ್ಲಿ ಅದರ ಅಧ್ಯಯನ ಎನ್ನುವುದಕ್ಕೆ ವಿಶಿಷ್ಟತೆಯು ಇರುತ್ತದೆ. ಅದನ್ನು ನಾವು ಅಧ್ಯಯನವನ್ನು ಮಾಡುತ್ತೇವೆ ಎಂದರೆ ಅದರ ಮೂಲಕ ಸಂಸ್ಕೃತಿಯನ್ನು ಗ್ರಹಿಸಲು ಯತ್ನವನ್ನು ಮಾಡುತ್ತೇವೆ ಎಂದು ಮಾತ್ರವೇ ಅರ್ಥ. ಎಷ್ಟೋ ಸರ್ತಿ ನಾವು ಓದುವಾಗ ಅದರ ಆಚೆಗೆ ಇರುವ ಮೌನವನ್ನು ಗಮನಿಸಬೇಕಾಗುತ್ತದೆ. ಒಂದು ಅರ್ಥದಲ್ಲಿ ಸಾಹಿತ್ಯವೂ ಕೂಡಾ ಚರಿತ್ರೆಯ ಅನನ್ಯವಾದ ಒಂದು ಜ್ಞಾನ ಶಿಸ್ತು. ಅನೇಕ ಮಹತ್ವದ ಸಂಗತಿಗಳನ್ನು ಸಾಹಿತ್ಯವೂ

ಹೇಳಬಹುದು. ಮಹತ್ವದ ಅನೇಕ ಸಂಗತಿಗಳನ್ನು ಸಾಹಿತ್ಯವು ಹೇಳಬಹುದು. ಮತ್ತು ಅದರ ಸಾಧ್ಯತೆಯೂ ಅನನ್ಯವೇ ಆಗಿರುತ್ತದೆ. ಅತ್ಯಂತ ಮಹತ್ವದ ಕೃತಿಗಳು ಯಾವಾಗಲೂ ಒಂದು ರೀತಿಯಿಂದ ನಮ್ಮ ಭೂತಕಾಲವನ್ನು ಹೇಳುತ್ತದೆ. ಮತ್ತು ಅವುಗಳಲ್ಲಿ ಭವಿಷ್ಯದ ಸಂಗತಿಯೂ ಇರುತ್ತದೆ. ಆದ್ದರಿಂದ ಚರಿತ್ರೆಯನ್ನೇ ಆಗಲೀ ಸಾಹಿತ್ಯದ ಕೃತಿಗಳಲ್ಲೇ ಆಗಲೀ ನಿರಾಕರಿಸುವುದರಲ್ಲಿ ಅರ್ಥವಿಲ್ಲ. ಚರಿತ್ರೆ ಮತ್ತು ಅದರ ಸೂಚನೆಗಳು ಭಿನ್ನವಾಗುತ್ತಲೇ ಇರುತ್ತದೆ. ಬೆಂಜಮಿನ್ ಹೇಳಿದ ರೂಪಕವನ್ನು ಇಲ್ಲಿ ನೆನಪು ಮಾಡಿಕೊಳ್ಳುವುದು ಸೂಕ್ತ. ಚೆಸ್ ನಡೆಯುತ್ತದೆ. ಅದರಲ್ಲಿ ಇಬ್ಬರು ಆಟಗಾರರು ಇದ್ದಾರೆ. ಹಾಸಿನಲ್ಲಿ ಗೊಂಬೆಗಳು ಇವೆ. ಆಟಗಾರರು ತಮಗೆ ಬೇಕಾದ್ದನ್ನು ಮಾತ್ರವೇ ಚಲಿಸುವಂತೆ ನೋಡುತ್ತಾರೆ. ಆಟಗಾರರು ಆಡುತ್ತಿದ್ದಾರೆ ಎಂದರೆ ಅವರ ಮನಸ್ಸು ಆಡುತ್ತಿದೆ. ಅದರ ಸಂಕೇತಗಳು ಅದರ ಗೊಂಬೆಗಳು. ಚರಿತ್ರೆಗೂ ಇದೇ ರೀತಿಯಲ್ಲಿ ಸ್ಪರ್ಧಿಗಳು ಇದ್ದಾರೆ. ಯಾರು ಆ ಗೊಂಬೆಯನ್ನು ಚಲಿಸುವಂತೆ ನೋಡುತ್ತಾರೆ ಮತ್ತು ಅದನ್ನು ಹೇಗೆ ಚಲಿಸುವಂತೆ ಮಾಡುತ್ತಾರೆ ಎನ್ನುವುದು ಮಾತ್ರವೇ ಮುಖ್ಯವಲ್ಲ. ಅದರಾಚೆಗೆ ಒಂದು ಮೌನವೂ ಇದೆ. ಚಲನೆ ಮತ್ತು ಪ್ರತಿಚಲನೆಯು ಬಹಳ ಮುಖ್ಯ. ಪ್ರಭುತ್ವವು ಒಂದು ಮಾದರಿಯಲ್ಲಿ ಕಾಲಾಳುಗಳನ್ನು ತನ್ನ ಗೆಲುವಿಗೆ ಬೇಕಾಗಿಯೂ ಚಲಿಸುವಂತೆ ಮಾಡುತ್ತದೆ. ಇದಕ್ಕೆ ಪ್ರತಿಯಾಗಿ ಮತ್ತೊಂದು ಸಂಗತಿಯೂ ನಡೆದಿರಬಹುದು. ಇದನ್ನು ಅನೇಕ ಕೃತಿಗಳು ನಮಗೆ ಹೇಳುತ್ತವೆ. ಲೇಖಕನಿಗೂ ಅವನ ಕಳೆದು ಹೋದ ಜಗತ್ತಿಗೂ ಒಂದು ಸಂಬಂಧವಿದೆ. ಒಂದು ದೊಡ್ಡ ಮಹತ್ವದ ಕೃತಿಗಳು ಬರುವುದಕ್ಕೆ ಕಾಲವೂ ಕಾರಣವಾಗುತ್ತದೆ. ಆದ್ದರಿಂದ ಕೃತಿಗಳಿಗೆ ಕಾಲವೂ ಒಂದು ರೀತಿಯಲ್ಲಿ ಸಹಾಯವನ್ನು ಮಾಡುತ್ತದೆ. ಮತ್ತು ಸಾಹಿತ್ಯ ಮತ್ತು ಅವುಗಳ ಪ್ರಕಾರಗಳಿಗೆ ಅನುಸಾರ ಅವುಗಳದೇ ಆದ ಸಂಕೇತವನ್ನೂ ಹೊಂದಿರುತ್ತವೆ. ಅವುಗಳಿಗೆ ವಿಶಿಷ್ಟತೆಯು ಇರುವುದೂ ಈ ಕಾರಣದಿಂದ. ಯಾವುದೇ ಸಾಹಿತ್ಯ ಕೃತಿಗಳು ಜಗತ್ತನ್ನು ಅರ್ಥ ಮಾಡಿಕೊಳ್ಳುವ ವಿಧಾನವೂ ಹೌದು. ನಾವು ಯಾವ ಪ್ರಕಾರದಲ್ಲಿ ಹೇಳುತ್ತೇವೆಯೋ ಅದಕ್ಕೂ ನಮ್ಮ ಅನುಭವಕ್ಕೂ ಸಂಬಂಧವಿದೆ ನಿಜ. ಆದರೆ ಅದು ಮಾತ್ರವೇ ಅಲ್ಲ. ಅವುಗಳು ಅವುಗಳದೇ ಆದ ಅರ್ಥವನ್ನೂ ಹೊಂದಿರುತ್ತವೆ. ಸಾಹಿತ್ಯ ಕೃತಿಗಳು ಸಂಸ್ಕೃತಿಯ ಒಂದು ಭಾಗ. ಆದರೆ ಅದುವೇ ಸಂಸ್ಕೃತಿಯು ಅಲ್ಲ. ಕಾಲ ಮತ್ತು ದೇಶವನ್ನು ಹೊರತು ಪಡಿಸಿಕೊಂಡು ಒಂದು ಕೃತಿಯು ಇರುವುದು ಸಾಧ್ಯವೂ ಇಲ್ಲ. ಸಾಹಿತ್ಯ ಮತ್ತು ಅದರ ಕಾಲವು ಅನೇಕ ಅಂಶಗಳನ್ನು ನಮಗೆ ಹೇಳುತ್ತವೆ. ಮತ್ತು ಯಾವುದೇ ಕೃತಿಯ ಏಕತೆಯು ಒಂದು ನಿರ್ದಿಷ್ಟತೆಯನ್ನು ನಮಗೆ ನೀಡುತ್ತವೆ. ಮಹಾಕಾವ್ಯಗಳು ಮೂಲಭೂತವಾಗಿ ಒಂದು ಸಮಾಜದ ವಿವರಣೆಯನ್ನು ನೀಡುವುದು ಮಾತ್ರವೇ ಅಲ್ಲ, ಅವುಗಳು ನಮಗೆ ಮಾನವ ಜೀವನದ ವಿಕಾಸವನ್ನೂ ಹೇಳುತ್ತವೆ. ಅವುಗಳಲ್ಲಿ ಪ್ರಾಕ್ತನದ ವಿವರಣೆಗಳು ಇರುತ್ತವೆ. ಅವುಗಳು ಸಮಾಜದ ಆಗು ಹೋಗುಗಳನ್ನು ಹೇಳುತ್ತವೆ. ಮತ್ತೊಂದು ರೀತಿಯಿಂದ ಅವುಗಳು ಸಮಾಜ ಮತ್ತು ಅದರ ಪುನರ್ ನಿರ್ಮಾಣವನ್ನು ಹೇಳುತ್ತವೆ. ಹೇಗೆ ಜೀವನ ಮತ್ತು ಅದರ ಸ್ವಭಾವಗಳು ಬದಲಾಗುತ್ತವೆ ಭೌತಿಕ ಅರ್ಥಗಳು ಯಾವ ರೀತಿಯ ಸಮಸ್ಯೆಯನ್ನು ಒಳಗೊಂಡಿರುತ್ತವೆ ಎನ್ನುವುದರ ವಿವರಣೆಗಳು ನಮಗೆ ದೊರೆಯುವುದು ಮಹಾಕಾವ್ಯಗಳಲ್ಲಿಯೇ. ಆದರೆ

ಅವುಗಳು ಬರೀ ಬಾಹ್ಯವನ್ನು ಮಾತ್ರವೇ ಹೇಳುವುದೂ ಇಲ್ಲ. ಯಾವುದೇ ಒಂದು ಸೃಜನಶೀಲತೆಯೆನ್ನುವುದು ಮೂಲಭೂತವಾಗಿ ಒಂದು ಕಾಲ, ಒಂದು ಪ್ರದೇಶ, ಒಂದು ಸಂಸ್ಕೃತಿಯನ್ನು ಹೇಳುತ್ತವೆ. ಲೇಖಕ ಅದನ್ನು ಗುರುತಿಸುತ್ತಾನೆ. ಲೇಖಕನು ಒಮ್ಮೊಮ್ಮೆ ಹೊರಗಿನಿಂದ ನಿಂತುಕೊಂಡು ಜಗತ್ತನ್ನು ವಿವರಿಸಬಹುದು. ಅದು ಅವನ ಶಕ್ತಿಯೂ ಆಗುತ್ತದೆ. ನಾವು ಸಮಗ್ರವನ್ನು ಅಥವಾ ಪೂರ್ಣಗೊಂಡದ್ದನ್ನು ಮಾತ್ರವೇ ಓದುತ್ತೇವೆ. ಕೆಲವು ಅಪೂರ್ಣವಾದರೆ ನಮಗೆ ಅದನ್ನು ಗ್ರಹಿಸಲು ಸಾಧ್ಯವಾಗುವುದೂ ಇಲ್ಲ. ಅಪೂರ್ಣ ರಚನೆಯು ಅಪೂರ್ಣವಾದ ಅರ್ಥವನ್ನು ಮಾತ್ರವೇ ಹೇಳುತ್ತದೆ. ಆದ್ದರಿಂದ ಅಂಥವುಗಳನ್ನು ನಾವು ಸ್ವೀಕರಿಸುವುದು ಸಾಧ್ಯವೇ ಇಲ್ಲ. ಲೇಖಕನು ಒಂದು ಸಂಸ್ಕೃತಿಯೊಂದಿಗೆ ಯಾವ ಅರ್ಥವನ್ನು ಸ್ಥಾಪಿಸಿಕೊಳ್ಳುತ್ತಾನೆ ಮತ್ತು ಅದರ ರಚನೆಯು ಯಾವ ಬಗೆಯದು ಎನ್ನುವುದೂ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ನಮಗೆ ಗೊತ್ತಿರಬೇಕಾದ ಮತ್ತೊಂದು ಅಂಶವೆಂದರೆ ನಮಗೆ ಸರಿಯಾದ ಜೀವನ ಮತ್ತು ಅದರ ದರ್ಶನವು ಇಲ್ಲದೇ ಹೋದರೆ ನಾವು ಕೃತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರೆವು. ವಾಸ್ತವವಾದಿ ಬರಹಗಳಲ್ಲಿ ಸಂಸ್ಕೃತಿ ಮತ್ತು ಅದರ ಅನನ್ಯತೆಯು ಭಿನ್ನವಾಗಿರುತ್ತದೆ. ಅವುಗಳು ಕೆಲವೊಮ್ಮೆ ಅತ್ಯಂತ ಗಂಭೀರವೂ ಆಗಿರುತ್ತದೆ. ಅದರಲ್ಲಿ ಲೇಖಕನು ತನ್ನ ಎದುರಿನ ಕಾಲವನ್ನು ಕಟ್ಟಿಕೊಳ್ಳುವ ಕ್ರಮಗಳು ಬೇರೆಯಾಗಿರುತ್ತದೆ. ಆದರೆ ನಮ್ಮ ಬರಹಗಳಿಗೆ ಕಾಲವು ಬಹಳ ಮುಖ್ಯವಾಗಿದೆ. ಬರಹ ಎನ್ನುವುದು ಮತ್ತೊಂದು ಅರ್ಥದಲ್ಲಿ ಅದರದೇ ಆದ ಕಾಲವನ್ನು ಕಟ್ಟಿಕೊಳ್ಳುತ್ತದೆ. ಆಧುನಿಕತೆ ಮತ್ತು ಅದರ ಕಾರಣಗಳು ಬೇರೆ, ವಾಸ್ತವತೆಯ ಕಾಲವು ಬೇರೆ. ಬಹಳ ಮಹತ್ವದ ಕೃತಿಗಳು ವಾಸ್ತವವಾಗಿ ಕಾಲವನ್ನು ಗ್ರಹಿಸಿಕೊಳ್ಳುವುದೇ ಭಿನ್ನವಾಗಿ. ಅವುಗಳು ಸಮಾಜ ಮತ್ತು ಅದರ ಸಂಕೀರ್ಣತೆಯನ್ನು ಹೇಳುತ್ತವೆ. ಸಂಸ್ಕೃತಿಯ ಅನೇಕ ಅಂಶಗಳನ್ನು ಕೃತಿಗಳು ಬಿಡಿಬಿಡಿಯಾಗಿ ಸೆರೆ ಹಿಡಿಯುತ್ತವೆ. ಅಂದರೆ ಲೇಖಕನು ಕಾಲವನ್ನು ನಿರ್ದಿಷ್ಟವಾಗಿಯೂ ಹೇಳ ಬಯಸುತ್ತಾನೆ. ಬರಹವೆನ್ನುವುದು ಬರೀ ವರ್ತಮಾನ ಅಥವಾ ಬರೀ ಭೂತಕಾಲವೂ ಅಲ್ಲ. ಯಾವುದೇ ಬರಹಗಳಿಗೆ ವಾಸ್ತವವಾಗಿ ಒಂದು ಕಳೆದದ್ದು ಮತ್ತು ವರ್ತಮಾನ ಎರಡೂ ಮುಖ್ಯ. ಬರೆಯುವಾಗ ಅದನ್ನು ಲೇಖಕನು ವರ್ತಮಾನಕ್ಕೆ ತರುತ್ತಾನೆ. ಕಾದಂಬರಿ ಪ್ರಕಾರಗಳಲ್ಲಿ ಬೇರೆ ಬೇರೆ ಸಂಗತಿಗಳೂ ಇರುತ್ತವೆ. ಈ ಪ್ರಕಾರಗಳು ಆಗಿವೆ. ಕೆಲವೊಮ್ಮೆ ಕಾದಂಬರಿಗಳಲ್ಲಿ ನಾಯಕರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣವನ್ನು ಬೆಳೆಸುತ್ತಾರೆ. ಅದು ಜೀವನದ ಭಿನ್ನ ಭಿನ್ನವಾದ ಘಟನೆಗಳನ್ನು ಹೇಳುತ್ತವೆ. ಜೀವನ ಮತ್ತು ಅದರ ಸ್ವರೂಪದ ಸಂಕೀರ್ಣತೆಯನ್ನು ಈ ಮಾದರಿಯ ಕಾದಂಬರಿಗಳು ಹೇಳುತ್ತವೆ. ಇವುಗಳು ಒಂದು ಬಗೆಯ ಕಾದಂಬರಿಗಳು. ಮತ್ತೊಂದು ಬಗೆಯ ಕಾದಂಬರಿಗಳು ಇರುತ್ತವೆ. ಅವುಗಳನ್ನು ನಾವು ಆಯಾ ನಾಯಕರನ್ನು ವಿವರಿಸುತ್ತವೆ. ತ್ಯಾಗ, ಶಕ್ತಿ, ಸಂಘರ್ಷಗಳು ಈ ಮಾದರಿಯ ಕಾದಂಬರಿಗಳಲ್ಲಿ ಬಹಳ ಮುಖ್ಯವಾಗಿದೆ. ಮನುಷ್ಯ ಮತ್ತು ಅವನ ಜೀವನದ ಅನೇಕ ಸಂಗತಿಗಳು ಇದರಲ್ಲಿ ಕಾಣಿಸುತ್ತವೆ. ನಾಯಕರ ಮನೋಸ್ಥಿತಿಯು ಇದರಲ್ಲಿ ಬದಲಾಗುತ್ತದೆ. ಅವನು ಅನೇಕವನ್ನು ಎದುರಿಸಿಕೊಳ್ಳುತ್ತಾನೆ. ಅವನಿಗೆ ಶಕ್ತಿಯು ಇರುತ್ತದೆ. ಮತ್ತು ಸಂಘರ್ಷವೇ ಅವನನ್ನು ಬೆಳೆಸುತ್ತದೆ. ಕಾದಂಬರಿಯ

ವಿನ್ಯಾಸವೂ ಇದರಲ್ಲಿ ಬೇರೆಯಾಗಿರುತ್ತದೆ. ಅಂದರೆ ನಾಯಕನು ತನ್ನ ಪರಿಸರ ಮತ್ತು ಅದರಿಂದ ಕಲಿಯುವುದು ಬಹಳ ಇದೆ. ಮನುಷ್ಯ ಮತ್ತು ಅವನ ಕ್ರಿಯಾಶೀಲತೆಯು ಇದರಲ್ಲಿ ವ್ಯಕ್ತವಾಗುತ್ತದೆ. ಮತ್ತು ನಾಯಕನು ವಿವರಿಸಿಕೊಳ್ಳುವ ಕ್ರಮಗಳು ಬೇರೆಯಾಗುತ್ತವೆ. ಆದರೆ ಕಾದಂಬರಿ ಮತ್ತು ಮಹಾಕಾವ್ಯದಲ್ಲಿ ವ್ಯತ್ಯಾಸವಿದೆ. ಕಾದಂಬರಿಗಳು ಹೇಳುವ ಸಂಗತಿಗಳು ಸಾಮಾನ್ಯವಾದದ್ದು. ಮತ್ತು ಅವುಗಳ ಸನ್ನಿವೇಶವೂ ಭಿನ್ನವಾಗಿಯೂ ಇರುತ್ತದೆ. ಮನುಷ್ಯ ಮತ್ತು ಅವನ ಜೀವನದ ಸಾಮಾನ್ಯವಾದ ಸಂಗತಿಗಳು ಕಾದಂಬರಿಯಲ್ಲಿ ಬರುತ್ತವೆ. ಅವುಗಳಿಗೆ ಅನನ್ಯತೆಯೂ ಇರುತ್ತದೆ. ಆದರೆ ಜೀವನದ ಯಾವುದೋ ಒಂದು ಸಂಗತಿಯು ಅವನಲ್ಲಿ ಬದಲಾವಣೆಯನ್ನು ತರಬಹುದು. ಅದು ಸಾಧ್ಯ. ಎಷ್ಟೋ ಸರ್ತಿ ಕಾದಂಬರಿಯ ನಾಯಕ ಜೀವನ ಮತ್ತು ಅದರ ಚರಿತ್ರೆಯು ಮುಖ್ಯವಾಗುವ ಸಾಧ್ಯತೆಯೂ ಇರುತ್ತದೆ. ಅದುವೇ ಕಾಲದ ದ್ಯೋತಕವೂ ಆಗಬಹುದು. ಆದರೆ ಅವುಗಳಿಗೆ ಸಾಮಾಜಿಕ ಅರ್ಥವಂತಿಕೆಯು ಇರುತ್ತದೆ. ನಿಸರ್ಗ ಮತ್ತು ಮನುಷ್ಯರ ನಡುವಣ ಸಂಗತಿಗಳನ್ನು ಅವುಗಳು ಹೇಳಬಹುದು. ಜೀವನದ ಯಾವುದೋ ಒಂದು ಭಾಗದಿಂದ ಪ್ರಾರಂಭವಾಗುವ ಕಾದಂಬರಿಗಳು ಮತ್ತೆ ಯಾವುದೋ ಒಂದು ಭಾಗದಲ್ಲಿ ಕೊನೆಯಾಗಬಹುದು. ಅದು ಸಾಧ್ಯ. ಆದರೆ ಅವುಗಳಿಗೂ ಆಯಾ ಸ್ಥಳ ಎನ್ನುವುದು ಬಹಳ ಮುಖ್ಯವಾಗಿರುತ್ತದೆ. ಜೀವನದ ಸಾಮಾನ್ಯ ಸಂಗತಿಗಳನ್ನು ನಾವು ಮಹಾಕಾವ್ಯದಲ್ಲಿ ಕಾಣಲಾರೆವು. ಕಾದಂಬರಿಯಲ್ಲಿ ಕೆಲವೊಮ್ಮೆ ನಾಯಕ ಮತ್ತು ಅವನ ಜೀವನದಲ್ಲಿ ಅನಿರೀಕ್ಷಿತ ಪರಿವರ್ತನೆಯು ಕಾಣಬಹುದು. ಅದೇ ಸಂಗತಿಯನ್ನು ಕಾದಂಬರಿಕಾರನು ವಿವರಿಸುವ ಉದ್ದೇಶವನ್ನು ಹೊಂದಿರುವ ಸಾಧ್ಯತೆಯು ಇರುತ್ತದೆ. ಕಾದಂಬರಿಯಲ್ಲಿ ವಸ್ತು ಮತ್ತು ಕಾಲಕ್ಕೆ ವಿಶಿಷ್ಟತೆಯು ಇರುತ್ತದೆ. ಯಾವುದೇ ಸಂಗತಿಯು ಘಟಿಸದೇ ಹೋದರೆ ಅದರಲ್ಲಿ ಸ್ವಾರಸ್ಯವೇ ಇರುವುದಿಲ್ಲ. ಅಂದರೆ ಲೇಖಕನು ಅದನ್ನು ತನ್ನ ಕೃತಿಯಲ್ಲಿ ಹೇಳಬೇಕಾಗುತ್ತದೆ. ಕಾದಂಬರಿಯಲ್ಲಿ ಜೀವನ ಮತ್ತು ಅದರ ಸಾಧ್ಯತೆಯನ್ನು ಲೇಖಕನು ನಿರ್ದಿಷ್ಟವಾದ ಹಿನ್ನೆಲೆಯಲ್ಲಿ ಹೇಳುತ್ತಾನೆ. ಈ ಅರ್ಥದಲ್ಲಿ ಯಾವುದೇ ಕಾದಂಬರಿಗಳಿಗೆ ಅದರದೇ ಆದ ಒಂದು ಸೀಮಾರೇಖೆಯು ಇರುತ್ತದೆ. ನಾಯಕನು ಬದಲಾಗುತ್ತಾನೆ. ಅದರಿಂದ ಕಲಿಯುತ್ತಾನೆ. ಕಾದಂಬರಿಗಳಲ್ಲಿ ಬರುವ ಕಾಲ ಮತ್ತು ಅದರ ಸಂಕೇತಗಳಿಗೆ ಮಹತ್ವವಿದೆ. ಕಾಲ ಮತ್ತು ಅದರ ಸಂಕೇತಗಳು ಕೃತಿಯಲ್ಲಿ ಬರುವಾಗ ಒಂದು ರೀತಿಯಲ್ಲಿ ಇರುತ್ತದೆ. ಅದನ್ನ ಲೇಖಕರು ನೇರವಾಗಿ ಹೇಳಬಹುದು ಅಥವಾ ಹೇಳದೆಯೂ ಇರಬಹುದು. ಆದರೆ ಕಾದಂಬರಿಯಲ್ಲಿ ಬರುವ ಕಾಲಕ್ಕೆ ಒಂದು ನಿರ್ದಿಷ್ಟತೆಯು ಇದೆ. ಅದನ್ನು ಬದಲು ಮಾಡಲು ಆಗುವುದೂ ಇಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾಲ ಮತ್ತು ಪ್ರದೇಶಗಳು ಸ್ಥಳೀಯತೆಯ ದೃಷ್ಟಿಯಿಂದ ಬಹಳ ಮಹತ್ವದ್ದೂ ಹೌದು. ಕಾಲ ಮತ್ತು ಅದರ ಅನೇಕ ಸಂಗತಿಗಳು ನಮಗೆ ಹೊಸದನ್ನು ಕಲಿಸುತ್ತವೆ. ಕಾಲ ಮತ್ತು ಅದರ ಸ್ವರೂಪವೂ ಕಾದಂಬರಿಯಲ್ಲಿ ಅತ್ಯಂತ ನಿರ್ದಿಷ್ಟವಾಗಿರುತ್ತದೆ. ಆದರೆ ಯಾವ ಆಗ ನಾವು ಯಾವುದನ್ನು ಗ್ರಹಿಸಬೇಕು ಎನ್ನುವುದು ಮಾತ್ರವೇ ಬಹಳ ಮುಖ್ಯವಾಗಿರುತ್ತದೆ. ಕಾದಂಬರಿಯಲ್ಲಿ ಬರುವ ಕಾಲಕ್ಕೆ ಕೆಲವು ನಿರ್ದಿಷ್ಟತೆಯೂ ಇರುತ್ತದೆ. ಮತ್ತು ಅದನ್ನು ನೋಡುವಾಗ ಅದರ ಸಾಧ್ಯತೆಯನ್ನು

ಬೇರೆ ರೀತಿಯಲ್ಲಿಯೂ ಗ್ರಹಿಸಬೇಕಾದ ಅಗತ್ಯವೂ ಇದೆ. ಕಾದಂಬರಿಯಲ್ಲಿ ಬರುವ ಕಾಲ ಮತ್ತು ಅದರ ಚರಿತ್ರೆಯು ಯಾವಾಗಲೂ ಭಿನ್ನವಾಗಿರುತ್ತದೆ. ಅದನ್ನು ಅರೆ ಚಾರಿತ್ರಿಕ ಎಂದೂ ಹೇಳಬಹುದು. ಕಾದಂಬರಿಯಲ್ಲಿ ಬರುವ ಕಾಲವು ಒಂದು ಅರ್ಥದಲ್ಲಿ ಮನೋವ್ಯಾಪಾರವನ್ನೂ ಹೇಳುತ್ತದೆ. ಅದು ಅವನ ಮಾನಸಿಕ ಕಾಲವೆಂದೂ ಹೇಳಬಹುದು. ವ್ಯಕ್ತಿ ಮತ್ತು ಅವನ ಚಲನೆಗೂ, ಅವನ ಜೀವನ ಕ್ರಮಕ್ಕೂ ಒಂದು ನಿಕಟವಾದ ಸಂಬಂಧವಿರುತ್ತದೆ. ಕಾದಂಬರಿಯು ಅದನ್ನು ಸೂಚಿಸುತ್ತದೆ. ಹಾಗೆಂದು ಬಾಹ್ಯದಲ್ಲಿ ಯಾವುದು ಆಗಿದೆಯೋ ಅದನ್ನು ಮಾತ್ರವೇ ಒಂದು ಕಾದಂಬರಿಯು ವಿವರಿಸಿಕೊಳ್ಳಲು ಹೋಗುವುದೂ ಇಲ್ಲ. ಅದರಲ್ಲಿ ಬೇರೆ ಬೇರೆ ಅಂಶಗಳೂ ಸೇರಿಕೊಂಡಿರುತ್ತವೆ. ಈ ಕಾರಣದಿಂದ ಕಾದಂಬರಿಯು ಮುಕ್ತವೂ ಹೌದು. ಅದಕ್ಕೆ ಬಂಧನವಿಲ್ಲ. ಬಾಹ್ಯ ಮತ್ತು ಅಂತರಂಗವು ಅದರ ಸ್ವರೂಪದೊಳಗೆ ಸೇರಿಕೊಂಡಿರುತ್ತದೆ. ಯಾವುದೇ ಒಂದು ಸಂಗತಿಯನ್ನು ಕಾದಂಬರಿಯಲ್ಲಿ ಲೇಖಕನು ಹೇಳುತ್ತಾನೆ ಎಂದರೆ ಅದನ್ನು ಅವನು ಹೇಗೆ ಗ್ರಹಿಸಿದ್ದಾನೆ ಎನ್ನುವುದೂ ಅಷ್ಟೇ ಮುಖ್ಯ. ಯಾವುದೇ ಕಾಲ ಮತ್ತು ಅದರ ಪ್ರಶ್ನೆಯನ್ನು ಲೇಖಕನು ತನ್ನ ಕಾಲವನ್ನೂ ಮೀರಿ ಅದರಾಚೆಗೆ ತೆಗೆದುಕೊಂಡು ಹೋಗಬಹುದು. ಸಾಹಿತ್ಯವು ಈ ದೃಷ್ಟಿಯಿಂದ ಬಹಳ ಮಹತ್ವದ ಕೆಲಸವನ್ನು ಮಾಡುತ್ತದೆ. ಅದು ಬರೀ ವರ್ತಮಾನದಲ್ಲಿ ಮಾತ್ರವೇ ನಿಲ್ಲುವುದೂ ಇಲ್ಲ. ಅದರಲ್ಲಿ ಬರುವ ಅನೇಕ ಸಂಗತಿಗಳು ಭೂತಕಾಲವನ್ನು ಹೇಳುತ್ತದೆ. ಬರೆಯುವಾಗ ಅದು ಅವನ ವರ್ತಮಾನವಾಗುತ್ತದೆ. ಓದುವವರು ಬರೀ ವರ್ತಮಾನಕ್ಕೆ ಸಂಬಂಧ ಪಟ್ಟವರು ಅಲ್ಲ. ಅದರ ಸ್ವರೂಪವನ್ನು ಹೀಗೆ ಹೇಳಬಹುದು: ಪಂಪನು ಬರೆಯುವಾಗ ಅವನು ಹೇಳಿದ್ದು ಅವನ ಕಾಲವನ್ನು. ಆದರೆ ಅದನ್ನು ಓದುತ್ತಿರುವ ನಾವು ಅವನನ್ನು ಕೇಂದ್ರವಾಗಿ ಇರಿಸಿಕೊಂಡರೆ ಭವಿಷ್ಯತ್ತೂ ಆಗುತ್ತವೆ. ಅಂದರೆ ಈ ಪ್ರಕ್ರಿಯೆಯು ಸಾಹಿತ್ಯದಲ್ಲಿ ನಡೆಯುತ್ತದೆ. ಕಾದಂಬರಿಗಳು ಕೆಲವು ಅರ್ಥಗಳಲ್ಲಿ ಸ್ವತಂತ್ರವೂ ಹೌದು. ಯಾವಾಗ ಬರೆಯುತ್ತೇವೆಯೋ ಅಗ ಅದು ನಮ್ಮ ಅಗತ್ಯವೂ ಆಗಿರುತ್ತದೆ. ಆದರೆ ಯಾವಾಗ ಅದನ್ನು ಬರೆದು ಮುಗಿಸಿ ಅದು ಮುದ್ರಣವೆಂಬ ಕೈಗಾರಿಕೆಯ ಮೂಲಕ ಹೊರಗೆ ಬಂತೋ ಆಗ ಅದರ ಅಸ್ತಿತ್ವವು ಬೇರೆಯಾಗುತ್ತದೆ. ಅದು ಬಾಹ್ಯವೂ ಆಯಿತು. ಕಾದಂಬರಿಗಳಲ್ಲಿ ಕಾಲದ ಪ್ರಶ್ನೆಯು ಬೇರೆಯಾಯಿತು. ಅದು ಒಂದು ಪ್ರತ್ಯೇಕವಾದ ಸಮಾಜವನ್ನು ಹೇಳುತ್ತದೆ. ಅಂದರೆ ಕಾದಂಬರಿಯಲ್ಲಿ ಬರುವ ಸಮಾಜ ಮತ್ತು ಅದರ ಅಸ್ತಿತ್ವವು ಭಿನ್ನವಾಯಿತು. ಜೀವನ ಚರಿತ್ರೆಯ ಮಾದರಿಯಲ್ಲಿ ಇರುವ ಕಾದಂಬರಿಗಳ ಸ್ವರೂಪವು ಭಿನ್ನ. ಅದು ತನ್ನನ್ನು ತಾನೇ ವಿವರಿಸಬೇಕಾಗುತ್ತದೆ. ಅದರಲ್ಲಿ ಬರುವ ಸಮಾಜ ಮತ್ತು ಜೀವನದ ಕ್ರಮಗಳು ಉಳಿದ ಕಾದಂಬರಿಗಳ ರೀತಿಯಲ್ಲಿ ಇರುವುದೂ ಇಲ್ಲ. ಆದರೆ ಇಲ್ಲಿ ಮತ್ತೊಂದು ಪ್ರಶ್ನೆಯು ಉದ್ಭವಿಸುತ್ತದೆ. ಜೀವನ ಚರಿತ್ರೆಯ ಮಾದರಿಯ ಕಾದಂಬರಿಗಳು ಉಳಿದ ಕಾದಂಬರಿಗಳಿಗಿಂತ ಹೇಗೆ ಭಿನ್ನ? ಜೀವನವನ್ನು ಉಳಿದ ಮಾದರಿಯ ಕಾದಂಬರಿಗಳು ನೋಡುವ ಕ್ರಮವನ್ನು ನಾವು ಸಾಂಕೇತಿಕ ಅಥವಾ ವಾಸ್ತವವಾದಿ ಎಂದು ಹೇಳಬಹುದು: ಆದರೆ ಜೀವನ ಚರಿತ್ರೆಯ ಕಾದಂಬರಿಗಳಲ್ಲಿ ಬರುವ ವಿವರಣೆಯಲ್ಲಿ ಒಂದು ಅನುಕ್ರಮತೆಯು ಇರುತ್ತದೆ. ಮತ್ತು ಅದನ್ನು ನಾವು ನಿರ್ದಿಷ್ಟವಾದ ಕ್ರಮವೆಂದು ಹೇಳಬಹುದು. ಬಾಲ್ಯ, ಯೌವನ,

ಶಾಲೆ, ಮದುವೆ ಇತ್ಯಾದಿಗಳಲ್ಲಿ ಇದನ್ನು ನಾವು ಗುರುತಿಸಬಹುದು. ನಾಯಕನ ಸುಖ ಮತ್ತು ದುಃಖವನ್ನು ನಿರ್ದಿಷ್ಟವಾಗಿಯೂ ಕಾಣಬಹುದು. ಜೀವನದ ಅನೇಕ ಸಂಗತಿಗಳು ಕಾಲಕ್ಕೆ ಅನುಸಾರವಾಗಿಯೂ ಇರುತ್ತದೆ. ಅಂದರೆ ಅದು ಅರ್ಧ ವಾಸ್ತವವಾಗಿರುತ್ತದೆ. ಅರೆ ಚಾರಿತ್ರಿಕವಾಗಿಯೂ ಇರುತ್ತದೆ. ಅದರ ಚಿತ್ರಣವು ಭಿನ್ನವಾಗಿರುತ್ತದೆ. ಅದು ಜೀವನವನ್ನು ಸಮಗ್ರವಾಗಿಯೂ ನೋಡಲು ಬಯಸುತ್ತದೆ. ಜೀವನ ಮತ್ತು ಪ್ರದೇಶಕ್ಕೆ ಅದರಲ್ಲಿ ಸಂಬಂಧವಿರುತ್ತದೆ. ಜೀವನವನ್ನು ಹೇಗೆ ಎದುರಿಸಬಹುದು ಎನ್ನುವುದನ್ನು ಅದು ಹೇಳುತ್ತದೆ. ನಿಜವಾದ ಜೀವನ ಮತ್ತು ಅದರ ಕಾಲವೇ ಕಾದಂಬರಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ. ಕಾಲ ಮತ್ತು ವ್ಯಕ್ತಿಯ ನಡುವಣ ಸಂಕೀರ್ಣವಾದ ಸಂಬಂಧವನ್ನು ಅದು ಹೇಳುತ್ತದೆ. ಜೀವನದಲ್ಲಿ ವ್ಯಕ್ತಿ ಮತ್ತು ಅವನ ಸಮಯಕ್ಕೆ ಇರುವ ಸಂಕೀರ್ಣವಾದ ಸಂಬಂಧವನ್ನು ಅದು ವಿವರಿಸುತ್ತದೆ. ಕಾಲ ಮತ್ತು ವ್ಯಕ್ತಿಯನ್ನು ನೋಡಿದರೆ ವ್ಯಕ್ತಿಯ ಸಮಯ ಹಾಗೂ ಅದರ ವಿವರಣೆಯು ಭಿನ್ನವಾಗಿರುತ್ತದೆ. ಕಾಲವನ್ನು ನಾವು ಇಲ್ಲಿ ಹೇಳುವಾಗ ಏಕ ಕೇಂದ್ರಿತ ಕಾಲವೆಂದು ಹೇಳಬೇಕಾಗುತ್ತದೆ. ಕಾಲ ಮತ್ತು ವ್ಯಕ್ತಿಯನ್ನು ಅದು ಆಧರಿಸಿಕೊಂಡು ಇರುತ್ತದೆ. ಆದರೆ ಇದನ್ನು ಸಮಷ್ಟಿ ಎಂದು ಹೇಳಲು ಬರುವುದಿಲ್ಲ. ನಾಯಕ ಮತ್ತು ಅವನ ಜೀವನ ಹಾಗೂ ಕಾಲಕ್ಕೆ ಇದರಲ್ಲಿ ನಿಕಟವಾದ ಒಂದು ಸಂಬಂಧವಿರುತ್ತದೆ. ಅದು ನಾಯಕನನ್ನು ಕೇಂದ್ರವಾಗಿರಿಸಿಕೊಂಡೇ ಇರುತ್ತದೆ. ಅದರ ಮೂಲವೇ ನಾಯಕನ್ನು ಮತ್ತು ಅವನ ನಿರ್ದಿಷ್ಟವಾದ ಸಂಗತಿಗಳನ್ನು ರೂಪಿಸಲು ಆಗುತ್ತದೆ. ಕಾಲ ಮತ್ತು ಅವಕಾಶ ಎರಡೂ ಇದರಲ್ಲಿ ಪರಸ್ಪರ ಸಂಬಂಧವನ್ನು ಪಡೆದಿರುತ್ತದೆ. ಕಾದಂಬರಿ ಮತ್ತು ಅದರ ಚಿತ್ರಣದಲ್ಲಿಯೇ ನಾವು ಈ ವ್ಯತ್ಯಾಸವನ್ನು ಕಾಣಬಹುದು. ವಾಸ್ತವತೆ ಮತ್ತು ಅದರ ಪರಿಣಾಮವೂ ಇದರಲ್ಲಿ ಬಹಳ ಮುಖ್ಯ. ಜೀವನವೇ ಕೇಂದ್ರವಾಗಿರುವ ಅಥವಾ ಜೀವನದ ಚಿತ್ರಣವನ್ನೇ ಪ್ರಧಾನವಾದ ಆಶಯವನ್ನು ಹೊಂದಿರುವ ಕಾದಂಬರಿಗಳಲ್ಲಿ ಬರುವ ಅನೇಕ ಸಂಗತಿಗಳು ಈ ದೃಷ್ಟಿಯಿಂದ ಬಹಳ ಮಹತ್ವದ್ದೂ ಆಗಿದೆ. ನಿಜವಾಗಿ ಯಾವುದೇ ಕಾದಂಬರಿಗಳು ನಿಜವಾದ ಚರಿತ್ರೆಯೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತವೆ. ಜೀವನ ಚರಿತ್ರೆಯ ಮಾದರಿಯಲ್ಲಿ ಇರುವ ಕಾದಂಬರಿಗಳಲ್ಲಿ ಬರುವ ವಿವರಣೆಯು ಬರೀ ಭ್ರಮೆ ಅಥವಾ ಐತಿಹಾಸಿಕವಾಗಲು ಸಾಧ್ಯವೇ ಇಲ್ಲ. ಅದರಲ್ಲಿ ಬರುವ ನಾಯಕನಿಗೆ ಅವನದೇ ಆದ ಒಂದು ವಿಶಿಷ್ಟತೆಯು ಇರುತ್ತದೆ. ಈ ಮಾದರಿಯ ಕಾದಂಬರಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಜೀವನ ಮತ್ತು ಸಮಾಜಕ್ಕೆ ಇರುವ ಸಂಕೀರ್ಣವಾದ ಸಂಬಂಧ. ಜೀವನವೂ ಸಮಾಜದಿಂದ ರೂಪುಗೊಂಡಿರುತ್ತವೆ ಎನ್ನುವ ಅರಿವು ಇದರಲ್ಲಿ ಇರುತ್ತದೆ. ನಾಯಕನ ಜೀವನವೂ ಇದರಲ್ಲಿ ಬೆಳೆಯುತ್ತದೆ. ಮತ್ತು ಅದು ಬದಲಾಗುತ್ತಾ ಹೋಗುತ್ತದೆ. ಜೀವನವೇ ಈ ಮಾದರಿಯ ಕಾದಂಬರಿಗಳಲ್ಲಿ ಕಾದಂಬರಿಯ ವಸ್ತು ಆಗುತ್ತದೆ. ಅಂದರೆ ಅದು 'ಆಗುತ್ತದೆ'. ಅದು ಪೂರ್ವ ನಿರ್ಧಾರಿತವಲ್ಲ. ಈ ಅಂದರೆ ಕಾದಂಬರಿಗಳಲ್ಲಿ ಜೀವನ ಮತ್ತು ಅದರ ಅಭಿವ್ಯಕ್ತಿಯನ್ನು ಅಂತರಂಗ ಮತ್ತು ಬಹಿರಂಗದ ಮೂಲಕವೇ ಗುರುತಿಸಬೇಕಾಗುತ್ತದೆ. ಆಗುವುದು ಎಂದರೆ ರೂಪಿಸಿಕೊಳ್ಳುವುದೂ ಹೌದು. ಇದರಲ್ಲಿ ಕಥನ ಮತ್ತು ಅದರ ವಸ್ತುವು ಭಿನ್ನವಾಗುತ್ತಾ ಹೋಗುತ್ತದೆ. ಆಶಯವೂ ಕೂಡಾ ಮೊದಲೇ ನಿರ್ಧಾರಕ್ಕೆ ಗುರಿಯಾಗುವುದೂ ಇಲ್ಲ. ಕಥನ ಮತ್ತು

ಅದರ ರಚನೆಗೆ ಕೂಡಾ ವಿಶಿಷ್ಟತೆಯು ಇದೆ. ಪ್ರತಿಯೊಬ್ಬ ವ್ಯಕ್ತಿಗೆ ಇರಬಹುದಾದ ವ್ಯಕ್ತಿತ್ವವು ಹೇಗೆ ಭಿನ್ನವಾಗುತ್ತಾ ಹೋಗುತ್ತದೆ ಎನ್ನುವುದನ್ನು ಇದು ಹೇಳುತ್ತದೆ. ಆದರೆ ಆದರ್ಶ ಮತ್ತು ಅದರ ಪ್ರಯೋಗಗಳೇ ಇದರಲ್ಲಿ ಬಹಳ ಮುಖ್ಯ. ನಾಯಕ ಮತ್ತು ಅವನ ಅನುಭವ ಇಲ್ಲಿ ಮುಖ್ಯವಾಗಿದೆ. ವ್ಯಕ್ತಿ ಮತ್ತು ಅವನ ಅನುಭವ, ಅವನ ಕಾಲ, ಅವನ ಜೀವನದ ನಿಗೂಢತೆಗಳೇ ಇದರಲ್ಲಿ ಬಹಳ ಮುಖ್ಯವಾಗುತ್ತದೆ. ಅದು ವಿಶಿಷ್ಟ ಹಾಗೂ ವ್ಯಕ್ತಿಯ ಅನನ್ಯತೆಯ ಭಾಗ. ಈ ಮಾದರಿಯ ಕಾದಂಬರಿಗಳಲ್ಲಿ ಬರುವ ಕ್ರಿಯೆ ಮತ್ತು ಅದರ ಸ್ಥಳವು ಭಿನ್ನವಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಕಾದಂಬರಿಗಳ ವಸ್ತು ಮತ್ತು ಅದರ ವಿನ್ಯಾಸಗಳನ್ನು ನಾವು ಆಯಾ ಕಾದಂಬರಿಗೆ ಅನುಸಾರವಾಗಿಯೂ ನೋಡಬೇಕಾಗುತ್ತದೆ. ಕಾಲ ಮತ್ತು ಅದರ ಲಕ್ಷಣಗಳು ಬರಹದಲ್ಲಿ ಬೇರೆ ಬೇರೆ ರೀತಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ. ಅಂದರೆ ಅದು ಕಾಲಾತೀತವಾಗುವುದೂ ಅಸಾಧ್ಯ. ಸಾಹಿತ್ಯ ಮತ್ತು ಅದರ ಅನೇಕ ಲಕ್ಷಣಗಳು ಬೇರೆ ಬೇರೆ ವಿಧದಲ್ಲಿ ಇರುತ್ತದೆ. ಅದು ವಸ್ತು ಆಗಬಹುದು, ಅಥವಾ ಅದರ ನಿರೂಪಣೆಯು ಆಗಬಹುದು, ಇಲ್ಲವೇ ಅದರ ಪಾತ್ರಗಳೇ ಆಗಬಹುದು. ಆದರೆ ಅದನ್ನು ನೋಡುವುದು ಎಂದರೆ ಅದರ ಕಾಲಕ್ಕೆ ನಾವು ಪ್ರವೇಶಿಸುವುದೂ ಹೌದು. ಕಾದಂಬರಿ ಮತ್ತು ಅದರ ಚಾರಿತ್ರಿಕ ಸಂಗತಿಗಳು ಯಾವಾಗಲೂ ಒಂದು ಬಗೆಯಲ್ಲಿ ಇರುತ್ತವೆ. ನಿಸರ್ಗವನ್ನು ವಾಸ್ತವವಾದಿಗಳು ಬೇರೆ ಬೇರೆ ರೀತಿಯಲ್ಲಿ ಅನುಕರಿಸಿದರು. ನಮಗೆ ಈಗ ಆಯ್ಕೆಯ ಪ್ರಶ್ನೆಯು ಬಹಳ ಮುಖ್ಯ. ಯಾವುದನ್ನು ನಾವು ಆಯ್ಕೆ ಮಾಡುತ್ತೇವೆ ಎನ್ನುವುದನ್ನು ಹೆಚ್ಚು ಸಷ್ಟಪಡಿಸಬೇಕಾದ ಅಗತ್ಯವಿದೆ. ಒಂದು ಸಿದ್ಧಾಂತ ಮತ್ತು ಅದರ ಆಯ್ಕೆಗಳು ನಮಗೆ ಯಾಕೆ ಮುಖ್ಯ ಎನ್ನುವುದನ್ನು ಹೆಚ್ಚು ಖಚಿತಪಡಿಸಬೇಕಾದ್ದು ಅಷ್ಟೇ ಮುಖ್ಯ. ಸಿದ್ಧಾಂತವು ನಮಗೆ ಜ್ಞಾನದ ಜೊತೆಗೆ ನಡೆಸುವ ಅನುಸಂಧಾನವೂ ಆಗುತ್ತದೆ. ಅವಕಾಶ ಮತ್ತು ಕಾಲ ಎರಡೂ ನಮಗೆ ಈಗ ಮುಖ್ಯವಾಗಿದೆ. ಅವಕಾಶ ಮತ್ತು ವಾಸ್ತವ ಎರಡೂ ನಮಗೆ ಬೇರೆ ವಿಷಯಗಳನ್ನು ಹೇಳುತ್ತವೆ. ಸಮಕಾಲೀನ ಸನ್ನಿವೇಶಗಳು ಬೇರೆಯಾಗುತ್ತವೆ, ಅವಕಾಶ ಮತ್ತು ಕಾಲವು ಕೂಡಾ ಭಿನ್ನವಾಗಿದೆ. ನಮ್ಮ ಎದುರು ಇರುವ ತಾತ್ವಿಕ ವಿಷಯಗಳು ಬದಲಾಗಿದೆ. ಅನೇಕ ತತ್ವಜ್ಞಾನಗಳು ಈಗ ಇರುವ ಸನ್ನಿವೇಶ ಮತ್ತು ಅದರ ತತ್ವಜ್ಞಾನದ ಸುಳಿಗೆ ಸಿಕ್ಕು ಹಾಕಿಕೊಂಡು ಬಿಟ್ಟಿವೆ. ತಾತ್ವಿಕತೆ ಮತ್ತು ಅದರ ಕುರಿತಾದ ನಮ್ಮ ನಿಲುವುಗಳನ್ನು ಮತ್ತೆ ಪರಿಶೀಲನೆಯನ್ನು ಮಾಡಬೇಕಾದ ಅಗತ್ಯವೂ ಬಂದಿದೆ. ಈಗ ನಮ್ಮ ಮನೋವಿಜ್ಞಾನ ಮತ್ತು ಅದರ ಅಭ್ಯಾಸಗಳು ಮತ್ತು ಅದು ತಳೆದ ಧೋರಣೆಗಳು ಬದಲಾಗಿವೆ. ಯಾವುದನ್ನು ಪ್ರಗತಿಯೆಂದು ಹೇಳುತ್ತೇವೆಯೋ ಅದರ ಸ್ವರೂಪವು ಕೂಡಾ ಹಿಂದೆ ಇದ್ದಂತೆ ಇಲ್ಲ. ಅದು ತನ್ನ ಚಹರೆಗಳನ್ನು ಬದಲು ಮಾಡಿದೆ. ಆಧುನಿಕ ಸಮಾಜಕ್ಕೆ ಅನೇಕ ರೀತಿಯ ಕಷ್ಟಗಳು ಎದುರಾಗಿವೆ. ಆದ್ದರಿಂದಲೇ ನಮಗೆ ಈಗ ತಾತ್ವಿಕ ಪ್ರಶ್ನೆಗಳು ಮತ್ತು ಹೆಚ್ಚು ಅಗತ್ಯವಾಗಿವೆ. ನಮಗೆ ಯಾವುದು ಹೆಚ್ಚು ಸ್ಪಷ್ಟ ಮತ್ತು ನಾವು ಯಾವುದಕ್ಕೆ ಹೆಚ್ಚು ಪ್ರತಿಕ್ರಿಯೆಯನ್ನು ಕೊಡಬೇಕಾಗಿದೆ ಎನ್ನುವುದೂ ಅಷ್ಟೇ ಮುಖ್ಯವಾಗಿದೆ. ನಾವು ಹೆಚ್ಚು ಗಂಭೀರವಾಗಿ ಯಾವುದನ್ನು ನೋಡಬೇಕಾಗುತ್ತದೆ ಮತ್ತು ನಾವು ಯಾವುದನ್ನು ಹೆಚ್ಚು ಆಯ್ಕೆ ಮಾಡಬೇಕಾಗುತ್ತದೆ ಎನ್ನುವುದೂ ಕೂಡಾ ಅತ್ಯಂತ ಮುಖ್ಯ ಆಯ್ಕೆ ಮತ್ತು ಅದರ

ಜೊತೆಗೆ ಇರಬೇಕಾದ ಖಚಿತತೆಯು ಇಲ್ಲಿ ಗಮನಾರ್ಹ. ಆಧುನಿಕ ಸಂದರ್ಭದಲ್ಲಿ ನಮಗೆ ಹೊಸ ರೀತಿಯ ಆಲೋಚನೆಗಳು ಹುಟ್ಟುತ್ತವೆ. ನಾವು ಊಹಿಸಿದ್ದಕ್ಕಿಂತ ಭಿನ್ನವಾದ ಸಂಗತಿಗಳು ಜಗತ್ತಿನಲ್ಲಿ ನಡೆಯುತ್ತಿವೆ. ನಮಗೆ ಯಾರಿಗೂ ಅರಿವಿಗೆ ಬಾರದ ಅಥವಾ ಗ್ರಹಿಸದೇ ಇದ್ದ ಸಂಗತಿಗಳು ರಾಜಕಾರಣದಲ್ಲಿ ನಡೆದಿವೆ. ಆದರೆ ಆದರ್ಶವಾದಿಗಳು ಆದರ್ಶವನ್ನು ಹೇಳುತ್ತಾ ಕೂತಿದ್ದಾರೆ ಮತ್ತೆ ಕೆಲವರು ಮತವನ್ನು ವೈಭವೀಕರಿಸಿದ್ದಾರೆ. ಅನೇಕರು ಭೌತಿಕವಾದ ಅಗತ್ಯವೇ ಇಲ್ಲವೆಂದು ಹೇಳುತ್ತಾರೆ ಆದರೆ ಅನೇಕ ಭೌತಿಕವಾದ ಸಂಪತ್ತು ಅವರಿಗೆ ಬೇಕಾಗುತ್ತದೆ. ಸಾಂಪ್ರಾದಾಯಿಕವಾದ ಮಾದರಿಗಳು ಬದಲಾಗಿವೆ. ಸಮಾಜವು ಬದಲಾದ್ದರಿಂದ ಅದರ ಮಾದರಿಗಳನ್ನು ಕೂಡಾ ನಾವು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಜಗತ್ತು ಬದಲಾಗಿದೆ. ಮತ್ತು ಅದು ಎಷ್ಟು ವೇಗವಾಗಿ ಬದಲಾಗಿದೆ ಎಂದರೆ ಈಗ ಕ್ಷಣಗಳು ಕೂಡಾ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ವಿಶ್ವಾತ್ಮಕತೆ ಮತ್ತು ಅದರ ಅರ್ಥವನ್ನು ನಾವು ಈಗ ಬೇರೆ ಸನ್ನಿವೇಶದಲ್ಲಿ ಇಟ್ಟುಕೊಂಡು ನೋಡಬೇಕಾಗುತ್ತದೆ. ಯಾವುದನ್ನು ಈವತ್ತು ವಿಶ್ವಾತ್ಮಕತೆ ಎಂದು ಹೇಳುತ್ತೇವೆಯೋ ಅದರ ಅರ್ಥಗಳು ಮತ್ತು ಅದರ ವ್ಯಾಪ್ತಿಯು ಕೂಡಾ ಭಿನ್ನವಾಗಿದೆ. ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸಲು ಹೊರಡಬಹುದು .ನಮ್ಮ ಬೌದ್ಧಿಕ ಚಟುವಟಿಕೆಗೂ ಮತ್ತು ಬಾಹ್ಯದ ಪರಿಕರಕ್ಕೂ ಒಂದು ಸಂಬಂಧವಿದೆ. ನಾವು ಹೋಗಿ ಗದ್ದೆಯಲ್ಲಿ ಬರೆಯುವುದಿಲ್ಲ. ಅದರ ಸ್ವರೂಪವು ಬೇರೆಯಾಗಿದೆ. ಅಂದರೆ ನಮಗೆ ಬರೆಯುವುದಕ್ಕೆ ಮತ್ತು ಓದುವುದಕ್ಕೆ ತಕ್ಕ ವ್ಯವಸ್ಥೆಗಳು ಬೇಕಾಗುತ್ತದೆ. ಮತ್ತು ಬರಹವನ್ನು ಮಾಡಬೇಕಾದರೆ ಅದಕ್ಕೆ ಒಂದು ವಾತಾವರಣವನ್ನು ರೂಪಿಸಬೇಕಾಗುತ್ತದೆ. ವಾಸ್ತವವಾಗಿ ಯಾವುದನ್ನು ಬರೆಯಲು ಹೊರಡುತ್ತೇವೆಯೋ ಅದಕ್ಕೆ ಪೂರ್ವಭಾವಿಯಾದ ಒಂದು ಸಿದ್ಧತೆಯನ್ನು ಮಾಡಬೇಕಾಗುತ್ತದೆ. ಯಾವುದೇ ನಮ್ಮ ಪರಂಪರೆಯನ್ನು ರೂಪಿಸಲೂ ಈ ಸಿದ್ಧತೆಯು ಬಹಳ ಮುಖ್ಯವಾಗಿದೆ. ಬರಹವನ್ನು ನಾವು ಪ್ರಕಟಿಸುವುದು ಎಂದರೆ ಅದರ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದು ಎಂದೂ ಅರ್ಥವಾಗುತ್ತದೆ. ಯಾವುದೇ ಪೂರ್ವ ಸಿದ್ಧತೆಯು ಇಲ್ಲದೆ ನಾವು ಬರೆಯಲಾರೆವು. ಮತ್ತು ಬರಹವೆಂದರೆ ಅದಕ್ಕೆ ಚಾರಿತ್ರಿಕ ಮಹತ್ವವೂ ಇದೆ. ಚರಿತ್ರೆಯಲ್ಲಿ ಅನೇಕ ಸಂಗತಿಗಳು ನಡೆಯುತ್ತವೆ. ಅದರಲ್ಲಿ ಬರಹವೂ ಇದೆ. ಬರಹವು ರೂಪಿಸುವ ಚಾರಿತ್ರಿಕತೆಯ ಸ್ವರೂಪವು ಮಾತ್ರವೇ ಭಿನ್ನ. ಬರಹದ ಚರಿತ್ರೆಯು ಯಾವಾಗಲೂ ವಿಸ್ತಾರವೂ ಆಗಿದೆ. ವಾಸ್ತವವಾಗಿ ಬರೆಯುವುದು ಎರಡೂ ಬುದ್ಧಿಜೀವಿಗಳ ಲಕ್ಷಣವೆಂದು ನಾವು ಹೇಳುತ್ತೇವೆ. ಬರಹ ಮತ್ತು ಅದರ ಸಾಧ್ಯತೆಯನ್ನು ಭಿನ್ನವಾಗಿಯೂ ಗ್ರಹಿಸುತ್ತೇವೆ. ವಾಸ್ತವವಾಗಿ ಒಂದು ಸಮಾಜದಲ್ಲಿ ಬುದ್ಧಿಜೀವಿಗಳದ್ದು ಒಂದು ವರ್ಗವಾಗಿದೆ. ಅದನ್ನು ಸಮಾಜವು ನಿರ್ಮಾಣ ಮಾಡುತ್ತದೆ. ಸಮಾಜ ಮತ್ತು ಅದರ ಚಟುವಟಿಕೆಗೂ ಮತ್ತು ಬುದ್ಧಿಜೀವಿಗಳಿಗೂ ನಿರ್ಣಾಯಕವಾದ ಒಂದು ಸಂಬಂಧವು ಇದೆ. ಸಮಾಜಕ್ಕೆ ಬೇಕಾದ ವರ್ಗವನ್ನು ಅದು ಸೃಷ್ಟಿಸಿಕೊಳ್ಳುತ್ತದೆ. ಯಾವುದೇ ಸಮಾಜವು ತನಗೆ ಯಾವುದು ಅಗತ್ಯವಿದೆಯೋ ಅದನ್ನು ಮಾತ್ರವೇ ಅಂಗೀಕರಿಸುತ್ತದೆ. ಬುದ್ಧಿಜೀವಿಗಳು ಸಮಾಜದಲ್ಲಿ ಒಂದು ವರ್ಗವಾಗಿದ್ದಾರೆ. ಅವರಿಗೂ ಸಮಾಜಕ್ಕೂ ಒಂದು ಸಂಬಂಧವಿದೆ. ಆದರೆ ಇದನ್ನು ಕೆಲವು ಅಂಶಗಳು ನಿಯಂತ್ರಿಸುತ್ತವೆ. ಬರಹ ಮತ್ತು ಮಾತಿನ ಅಗತ್ಯಗಳು

ಯಾವತ್ತೂ ಬೇರೆ ಬೇರೆಯಾಗಿರುತ್ತದೆ. ಮನಸ್ಸು ಮತ್ತು ಅದರ ಸಂಕಥನಗಳು ಯಾವತ್ತೂ ಬೇರೆ ಬೇರೆಯಾಗಿರುತ್ತದೆ. ಸೂಚನೆ ಮತ್ತು ಅದರ ಪರಿಣಾಮಗಳು ಆಯಾ ಕಾಲದಲ್ಲಿ ಬೇರೆಯಾಗುತ್ತವೆ. ಬುದ್ಧಿಜೀವಿಗಳು ಬರೆಯುತ್ತಾರೆ ಎಂದರೆ ಅದು ಅವರ ಅಗತ್ಯವಾಗಿದೆ ಎಂದು ಮಾತ್ರವೇ ನಾವು ಭಾವಿಸಬಾರದು. ಅದರ ಹಿಂದೆ ಒತ್ತಡಗಳೂ ಇರುತ್ತವೆ. ಬರಹ ಮತ್ತು ಅದರ ಹಿಂದೆ ಇರುವ ಶ್ರಮವು ಒಂದು ರೀತಿಯದು. ಆದರೆ ಮಾತು ಮತ್ತು ಅದರ ಹಿಂದೆ ಇರುವ ಶ್ರಮವು ಮತ್ತೊಂದು ಬಗೆಯದು. ನಮ್ಮ ಭಾವನೆಗಳು ಮತ್ತು ಅದರ ಪರಿಣಾಮಗಳನ್ನು ನಾವು ನೋಡುವಾಗ ಅದನ್ನು ಯಾವ ರೀತಿಯಲ್ಲಿ ಹೇಳುತ್ತೇವೆ ಮತ್ತು ಹೇಗೆ ಹೇಳುತ್ತೇವೆ ಎನ್ನುವುದೂ ಬಹಳ ಮುಖ್ಯವಾದ ಪ್ರಶ್ನೆಯೂ ಆಗುತ್ತದೆ. ನಮಗೆ ಸನ್ನಿವೇಶ ಮತ್ತು ಅದರ ಪ್ರಚೋದನೆಯೂ ಅತ್ಯಂತ ಮುಖ್ಯವಾಗುತ್ತದೆ. ವಾಸ್ತವವಾಗಿ ಯಾವ ಮಾದರಿಯನ್ನು ನಾವು ನೋಡುತ್ತೇವೆ ಮತ್ತು ಅದನ್ನು ಹೇಗೆ ಗ್ರಹಿಸುತ್ತೇವೆ ಎನ್ನುವುದರ ಮೇಲೆ ನಮ್ಮ ನಿರ್ಧಾರಗಳು ಇರುತ್ತವೆ. ಅಷ್ಟೇ ಅಲ್ಲ ನಾವು ಬರಹದಲ್ಲಿ ಯಾವ ಸಮೂಹವನ್ನು ಕುರಿತು ಹೇಳುತ್ತೇವೆ ಎನ್ನುವುದೂ ಬಹಳ ಮುಖ್ಯ. ಸಮೂಹ ಮತ್ತು ಅದರ ಜೊತೆಗೆ ನಾವು ಸಾಧಿಸಬೇಕಾದ ಪ್ರಶ್ನೆಗಳು ಬಹಳ ಮುಖ್ಯವಾಗುತ್ತದೆ. ಗ್ರಾಂಶಿ ಸಾವಯವ ಸಂಬಂಧವನ್ನು ಅತ್ಯಂತ ಖಚಿತವಾಗಿ ಹೇಳಿದ್ದಾನೆ. ಮೈಯು ಕಾವೇರುವುದು ಮತ್ತು ಚಳಿಯ ಅನುಭವ ಆಗುವುದು ಮೂಲಭೂತವಾಗಿ ನಾವು ಜ್ವರದಲ್ಲಿ ನರಳುತ್ತೇವೆ ಎನ್ನುವುದನ್ನು ಹೇಳುತ್ತದೆ. ವೈದ್ಯರು ಇದನ್ನು ಒಂದು ಚಿಹ್ನೆ ಎಂದು ಕರೆಯುತ್ತಾರೆ. ಆದರೆ ಚಿಹ್ನೆಯು ಮತ್ತೆ ಬೇರೆ ಯಾವುದನ್ನೋ ಸೂಚಿಸುತ್ತದೆ. ಅದೇ ರೀತಿಯಲ್ಲಿ ಬರಹವೂ ನಮಗೆ ಒಂದು ಚಿಹ್ನೆಯು ಆಗಿದೆ. ಈ ಚಿಹ್ನೆಯು ಬೇರೆ ಯಾವುದನ್ನೋ ಹೇಳುತ್ತದೆ. ಸಮಾಜ ಮತ್ತು ಅದರ ಜೊತೆಗೆ ಇರುವವರು ಮತ್ತು ಅದರ ಜೊತೆಗೆ ಇಲ್ಲದವರ ಲಕ್ಷಣವು ತಕ್ಷಣವೇ ನಮಗೆ ತಿಳಿಯುತ್ತದೆ. ಅದನ್ನು ಪತ್ತೆ ಮಾಡುವುದೂ ಅತ್ಯಂತ ಸುಲಭ. ಮಾತು ಕೂಡಾ ಅದೇ ರೀತಿ. ನಾವು ಯಾವುದನ್ನು ಹೇಳುತ್ತೇವೆ ಎನ್ನುವುದೂ ಬಹಳ ಮುಖ್ಯವಾದ ಪ್ರಶ್ನೆಯೂ ಆಗಿರುತ್ತದೆ. ಲೇಖಕರ ವರ್ಗಗಳು ಮತ್ತು ಮಾತುಗಾರರ ಗುಂಪುಗಳು ಯಾವುದನ್ನು ಹೆಚ್ಚು ಸಮರ್ಥಿಸುತ್ತದೆ ಎನ್ನುವುದೂ ಇಲ್ಲಿ ಮುಖ್ಯವಾಗುತ್ತದೆ. ಈಗಾಗಲೇ ವ್ಯವಸ್ಥೆಯು ತನ್ನ ಅಸ್ತಿತ್ವವನ್ನು ಸಾರುತ್ತದೆ. ಅದರ ರೂಪವನ್ನು ಇರುವ ಹಾಗೆ ಒಪ್ಪುವವನು ನಿಜವಾಗಿಯೂ ಪ್ರಭುತ್ವದ ಸಮರ್ಥಕನೂ ಆಗಿರುತ್ತಾನೆ. ಈಗಾಗಲೇ ಕೊಡಲ್ಪಟ್ಟ ಆಲೋಚನೆಯನ್ನು ಮತ್ತು ವ್ಯವಸ್ಥೆಯನ್ನು ಯಾವುದೇ ರೀತಿಯಲ್ಲಿ ಪ್ರಶ್ನೆ ಮಾಡದೆ ಒಪ್ಪುವುದು ಲೇಖಕನು ಯಾವುದನ್ನು ಹೇಳುತ್ತಾನೆ ಎನ್ನುವುದರ ಸೂಚನೆಯು ಆಗಿದೆ. ಒಂದು ಹಂತದಲ್ಲಿ ಎಲ್ಲಾ ಲೇಖಕರು ತತ್ವಜ್ಞಾನಿಗಳು ಎಂದು ಹೇಳುತ್ತಾನೆ. ನಮಗೆ ಈಗಾಗಲೇ ನಿರೂಪಣೆಗೆ ಒಳಪಟ್ಟ ಒಂದು ಆಲೋಚನೆಯು ಇದೆ. ಆ ಆಲೋಚನೆಯ ಜೊತೆಗೆ ನಾವು ಯಾವ ರೀತಿಯಲ್ಲಿ ಅನುಸಂಧಾನ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ವಾಸ್ತವವಾಗಿ ಒಂದು ಸಂಸ್ಕೃತಿಯು ನಮಗೆ ಕೆಲವನ್ನು ಹೇಳುತ್ತದೆ. ಅದಕ್ಕೆ ಅನುಸಾರವಾಗಿಯೇ ನಮ್ಮ ಅಭಿಪ್ರಾಯಗಳು ರೂಪಿತವಾಗುತ್ತವೆ. ಒಂದು ದೃಷ್ಟಿಯಿಂದ ಬುದ್ಧಿಜೀವಿಗಳ ಕೆಲಸವು ನಿರ್ದಿಷ್ಟವಾಗಿರುತ್ತದೆ. ಅದಕ್ಕೆ ಕೆಲವು ಕಾರ್ಯಗಳೂ ಇರುತ್ತವೆ. ಆ ಕೆಲಸಗಳನ್ನು ನಾವು ಸಿನಿಕತೆಯಿಂದ

ನೋಡಬೇಕಾದ ಅವಶ್ಯಕತೆಯು ಇಲ್ಲ. ಬುದ್ಧಿಜೀವಿಗಳು ಮತ್ತು ಅವರ ಕಾರ್ಯವನ್ನು ನಿರ್ದಿಷ್ಟವಾಗಿ ಶಿಕ್ಷಣವು ರೂಪಿಸುತ್ತದೆ. ಬುದ್ಧಿಜೀವಿಗಳು ಮತ್ತು ಅವರ ಬುದ್ಧಿವಂತಿಕೆಯನ್ನು ರೂಪಿಸುವುದು ಒಂದು ಸಮಾಜ ಮತ್ತೊಂದು ಶಿಕ್ಷಣ. ಆದ್ದರಿಂದ ಶಿಕ್ಷಣವನ್ನು ನಾವು ಈ ತಾತ್ವಿಕತೆಯಿಂದ ನೋಡಬೇಕಾಗುತ್ತದೆ. ಯಾವ ಅರ್ಥದಲ್ಲಿ ಶಿಕ್ಷಣವು ರೂಪುಗೊಂಡಿದೆ ಮತ್ತು ಹೇಗೆ ರೂಪುಗೊಂಡಿದೆ ಅದರ ಅರ್ಥವು ಯಾವ ಬಗೆಯದು ಮುಂತಾದ ಪ್ರಶ್ನೆಗಳು ನಮ್ಮ ಎದುರು ಇರುತ್ತವೆ. ಮತ್ತೊಂದು ದೃಷ್ಟಿಯಿಂದ ಬುದ್ಧಿಜೀವಿಗಳನ್ನು ಸಂಸ್ಥೆಗಳು ರೂಪಿಸುತ್ತವೆ. ಬೂರ್ಜ್ವಾ ವರ್ಗ ಮತ್ತು ಅದರ ಸಾಧ್ಯತೆಗಳು ಈ ದೃಷ್ಟಿಯಿಂದ ಯಾಕೆ ಬೇರೆಯಾಗುತ್ತದೆ ಎಂದರೆ ಅವರು ಜೀವನ ಮತ್ತು ಸಮಾಜವನ್ನು ನೋಡುವ ಕ್ರಮಗಳು ಬೇರೆಯಾಗುತ್ತವೆ. ಅದರಲ್ಲಿ ಇರುವ ಅರ್ಥಗಳನ್ನು ಒಂದು ಸಮಾಜವು ಹೇಳುತ್ತದೆ. ಎಷ್ಟೋ ಸರ್ತಿ ಬುದ್ಧಿಜೀವಿಗಳು ಮಾತನ್ನು ಹೇಳದ ಹಾಗೆ ಸಂಸ್ಥೆಗಳು ಮಾಡುತ್ತವೆ. ಈ ದೃಷ್ಟಿಯಿಂದ ಸಮೂಹ ಮತ್ತು ಜೀವನಕ್ಕೆ ಕೆಲವು ಸಂಬಂಧಗಳು ಇರುತ್ತವೆ. ಬುದ್ಧಿಜೀವಿಗಳು ಯಾವುದಕ್ಕೆ ನೆರವಾಗಬೇಕು ಮತ್ತು ಯಾವುದರ ಕುರಿತು ಹೇಳಬೇಕು ಎನ್ನುವುದು ಮೂಲಭೂತವಾದ ಪ್ರಶ್ನೆಗಳೂ ಆಗುತ್ತವೆ. ಬೂರ್ಜ್ವ ಸಂಸ್ಥೆಗಳು ಜೀವನ ಮತ್ತು ನಮ್ಮ ದೃಷ್ಟಿಕೋನವನ್ನು ಬದಲು ಮಾಡಲು ಯತ್ನವನ್ನು ಮಾಡುತ್ತವೆ. ಯಾವುದೇ ರೀತಿಯಲ್ಲಿ ನೋಡಿದರೂ ನಮಗೆ ಬುದ್ಧಿಜೀವಿಗಳು ಹೇಳುವ ಮಾತುಗಳು ಮತ್ತು ಅವರ ದೃಷ್ಟಿಕೋನವನ್ನು ಒಂದು ಕೋನದಲ್ಲಿ ಮಾತ್ರವೇ ಗ್ರಹಿಸಬೇಕಾಗುತ್ತದೆ. ಸಮೂಹ ಮತ್ತು ಬುದ್ಧಿಜೀವಿಗಳ ನಡುವೆ ಇರುವ ಸಂಬಂಧವು ಈ ದೃಷ್ಟಿಯಲ್ಲಿ ದ್ವಂದ್ವಾತ್ಮಕವಾಗಿದೆ. ಕೆಲವೊಮ್ಮೆ ಬುದ್ಧಿಜೀವಿಗಳು ಮತ್ತು ಲೇಖಕರು ರಾಜಕಾರಣ ಮತ್ತು ಅದರ ಸಂಬಂಧಿತವಾದ ಸಂಸ್ಥೆಗಳ ಪರವಾಗಿಯೂ ಮಾತಾಡುತ್ತಾರೆ. ಅದರ ಉದ್ದೇಶವು ಹೆಚ್ಚು ಸ್ಪಷ್ಟವಾಗುತ್ತದೆ. ಯಾವುದರ ಪರವಾಗಿ ಇವರು ಬ್ಯಾಟಿಂಗ್ ಮಾಡುತ್ತಾರೆ ಎನ್ನುವುದು ನಮಗೆ ತಿಳಿದೇ ತಿಳಿಯುತ್ತದೆ. ಕ್ರೀಡೆಯು ಹೆಚ್ಚು ಲಾಭದಾಯಕ ಎಂದರೆ ಅದರಲ್ಲಿ ಬಂಡವಾಳವಾದವು ತನ್ನ ಬಂಡವಾಳವನ್ನು ಹೂಡುತ್ತದೆ. ರಾಜಕಾರಣವು ತನ್ನ ಪ್ರವೇಶವನ್ನು ಕೊಡುತ್ತದೆ. ಕ್ರಿಕೆಟ್ ಈವತ್ತು ಆಗಿರುವುದು ಹೀಗೆ. ಅದನ್ನು ನಿಯಂತ್ರಣ ಮಾಡುವವರು ಬೇರೆ ಯಾರೋ. ಕ್ರಿಕೆಟ್ ಈಗ ಬರೀ ಆಟವಾಗಿ ಉಳಿದಿಲ್ಲ. ಅದರಲ್ಲಿ ರಾಜಕಾರಣವು ಇದೆ. ಬಂಡವಾಳವಾದವೂ ಇದೆ. ಅದರಲ್ಲಿ ಬೆಟ್ಟಿಂಗ್ ದಂಧೆಯೂ ಇದೆ. ಹೇಗೆ ಆಟಗಳಲ್ಲಿ ರಾಜಕಾರಣ ಮತ್ತು ಬಂಡವಾಳವಾದವು ಪ್ರವೇಶವನ್ನು ಪಡೆಯುತ್ತದೆ ಎನ್ನುವುದಕ್ಕೆ ಇದು ಒಂದು ಉದಾಹರಣೆಯೂ ಆಗಿದೆ. ಸಮಾಜವು ಯಾವುದರ ಕಡೆಗೆ ತನ್ನ ಗಮನವನ್ನು ಕೊಡಬೇಕು ಮತ್ತು ಅದನ್ನು ಹೇಗೆ ಕೊಡಬೇಕು ಎನ್ನುವುದನ್ನು ಬುದ್ಧಿಜೀವಿಗಳು ನಿರೂಪಿಸಬೇಕಾಗುತ್ತದೆ. ಸಮಾಜವಾದಿ ಪ್ರಜ್ಞೆಯನ್ನು ಹೇಳಲು ನಮಗೆ ಬರಹಗಾರರು ಬೇಕಾಗುತ್ತದೆ. ಅವರು ಮುಂಚೂಣಿಗೆ ಬರಬೇಕಾಗುತ್ತದೆ. ಒಂದು ಸಮಾಜವು ನಿರ್ದಿಷ್ಟವಾದ ಒಂದು ಸಂಪ್ರದಾಯವನ್ನು ಇಟ್ಟುಕೊಂಡಿದೆ ಮತ್ತು ಅದರ ಮೂಲಕವೇ ಅದು ಬೆಳೆಯುತ್ತದೆ. ಅದರಲ್ಲಿ ಇರುವುದು ಒಂದು ದೃಷ್ಟಿಕೋನವು ಮಾತ್ರವೇ. ಬೂರ್ಜ್ವವರ್ಗ ಕೂಡಾ ತನ್ನದೇ ಆದ ಒಂದು ವಾದವನ್ನು ಉತ್ಪಾದಿಸುತ್ತದೆ. ತನಗೆ ಬೇಕಾದ್ದನ್ನು ರೂಪಿಸುತ್ತದೆ. ಸಮಾಜವಾದಿ ಪ್ರಜ್ಞೆ ಮತ್ತು ಅದರ ಪರಿಣಾಮವನ್ನು ನಾವು ವಿವರಿಸಲು ಸೋತರೆ

ಅದರ ಅರ್ಥವು ಬೇರೆಯಾಗುತ್ತದೆ. ರಾಜಕಾರಣ ಮತ್ತು ಸಮೂಹದ ಸಂಬಂಧವು ಹೆಚ್ಚು ಸಂಕೀರ್ಣವೂ ಆಗುತ್ತದೆ. ಕಾರ್ಮಿಕರು ಮತ್ತು ಲೇಖಕರ ನಡುವೆ ಒಂದು ಹೊಂದಾಣಿಕೆಯು ಬೇಕಾಗುತ್ತದೆ. ಈ ದೃಷ್ಟಿಯಿಂದ ಲೇಖಕರು ಮತ್ತು ಭಾಷಣಗಾರರು ಕೆಲವು ಪಾತ್ರವನ್ನು ವಹಿಸಬೇಕಾಗುತ್ತದೆ. ಪ್ರಜ್ಞೆಯನ್ನು ನಿರ್ಮಾಣ ಮಾಡುವುದೂ ಒಂದು ಹೊಣೆಗಾರಿಕೆಯು ಆಗಿದೆ. ಕೆಲವು ಸಂದರ್ಭದಲ್ಲಿ ಲೇಖಕರು ಯಜಮಾನಿಕೆಯನ್ನು ವಹಿಸಬೇಕಾಗುತ್ತದೆ. ಅದು ಅಗತ್ಯವೂ ಆಗಿದೆ. ಸಾಮಾಜಿಕ ಗುಂಪುಗಳು ಮತ್ತು ಬುದ್ಧಿಜೀವಿಗಳ ನಿರ್ಮಾಣಕ್ಕೆ ಬೇರೆ ಬೇರೆ ಆಯಾಮಗಳೂ ಇವೆ. ಬುದ್ಧಿಜೀವಿಗಳು ಮತ್ತು ಅವರ ನಿರ್ಮಾಣಕ್ಕೂ ಒಂದು ನಿರ್ದಿಷ್ಟವಾದ ಚಲನೆಯು ಇದೆ. ಅದು ಚಾರಿತ್ರಿಕವಾಗಿದೆ. ಲೇಖಕರ ಗುಂಪುಗಳು ಯಾವುದರ ಪರವಾಗಿ ಕೆಲಸವನ್ನು ಮಾಡಬೇಕು ಮತ್ತು ಅದನ್ನು ಹೇಗೆ ಮಾಡಬೇಕು ಎನ್ನುವುದು ಬರೀ ಒಂದು ಬರಹ ಅಥವಾ ಮಾತಿನ ಪ್ರಶ್ನೆಗಳು ಅಲ್ಲ. ಲೇಖಕರು ಮತ್ತು ಭಾಷಣಗಾರರದು ಒಂದು ಗುಂಪು. ಅನೇಕ ಸಂದರ್ಭದಲ್ಲಿ ಈ ಗುಂಪನ್ನು ಯಾವುದೋ ನಿರ್ಮಾಣವನ್ನು ಮಾಡುತ್ತವೆ. ಲೇಖಕರು ಮತ್ತು ಅವರ ವರ್ಗವನ್ನು ಯಾವುದು ನಿರ್ಧರಿಸುತ್ತದೆ ಹಾಗೂ ಅದನ್ನು ಹೇಗೆ ನಿರ್ಧರಿಸುತ್ತದೆ ಎನ್ನುವುದು ತಾತ್ವಿಕವಾಗಿ ಬಹಳ ಮುಖ್ಯವಾಗಿದೆ. ಉದ್ಯೋಗಿ ಮಾತುಗಾರರು ಇದ್ದಾರೆ, ಉದ್ಯೋಗಿ ಲೇಖಕರು ಇದ್ದಾರೆ. ಅವರದು ಒಂದು ಉದ್ಯೋಗ ಎಂದು ಮಾತ್ರವೇ ನಾವು ಹೇಳುವಂತೆ ಇಲ್ಲ. ಬರಹವೂ ಈವತ್ತು ಒಂದು ದಂಧೆ. ಅದನ್ನು ಬಳಸಿಕೊಳ್ಳುವವರು ಬೇರೆ ಬೇರೆ ಜನರು ಎನ್ನುವುದನ್ನು ನಾವು ಮರೆಯಬಾರದು. ಈ ದಂಧೆಯನ್ನು ಯಾರು ರೂಪಿಸುತ್ತಾರೆ ಮತ್ತು ಹೇಗೆ ರೂಪಿಸುತ್ತಾರೆ ಎನ್ನುವುದೂ ಕೂಡಾ ಅತ್ಯಂತ ಮಹತ್ವದ ಪ್ರಶ್ನೆ. ಬರಹಗಾರರ ವರ್ಗ ಮತ್ತು ಅವರ ಬರಹಗಳು ಮಾರುಕಟ್ಟೆಯಲ್ಲಿ ಹೇಗೆ ಮಾರಾಟವಾಗುತ್ತದೆ ಎನ್ನುವುದನ್ನು ನೋಡುವ ಅಗತ್ಯವೂ ಇದೆ. ರಾಜಕೀಯ ಅರ್ಥಶಾಸ್ತ್ರವು ನಮಗೆ ನೆರವಿಗೆ ಬರುವುದು ಈ ಕಾರಣಕ್ಕೆ. ರಾಜಕೀಯ ಅರ್ಥಶಾಸ್ತ್ರವು ಹೊಸದಾದ ಕೆಲವನ್ನು ರೂಪಿಸುತ್ತದೆ. ಬರಹ ಮತ್ತು ಅದರ ಪರಿಣಾಮವನ್ನು ನಾವು ಈಗ ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗಬೇಕಾಗುತ್ತದೆ. ರಾಜಕೀಯ ಮತ್ತು ಅದರ ಅರ್ಥಶಾಸ್ತ್ರವು ನಮಗೆ ಬೇರೆ ಬೇರೆ ಆಯಾಮವನ್ನು ಕೊಡುತ್ತದೆ. ರಾಜಕೀಯ ಅರ್ಥಶಾಸ್ತ್ರವೇ ನಮಗೆ ಒಂದು ದೃಷ್ಟಿಕೋನದಲ್ಲಿ ಹೊಸದಾದ ಸಂಸ್ಕೃತಿಯ ನಿರ್ಮಾಣಕ್ಕೆ ಕಾರಣವೂ ಆಗುತ್ತದೆ. ಅದು ಅನೇಕವನ್ನು ನಿರೂಪಿಸುತ್ತದೆ ಹಾಗೂ ಅದನ್ನು ಹೇಳುತ್ತದೆ. ಬಂಡವಾಳ ಮತ್ತು ಅದರ ಪ್ರಶ್ನೆಗಳು ಈವತ್ತು ಸರಳವಾದ ಪ್ರಶ್ನೆಯಾಗಿ ಉಳಿದಿಲ್ಲ. ಒಬ್ಬ ಉದ್ಯಮಿಗೆ ಹೇಗೆ ಬೇರೆ ಬೇರೆ ಪ್ರಶ್ನೆಗಳು ಇರುತ್ತವೆಯೋ ಅದೇ ರೀತಿಯಲ್ಲಿ ಒಬ್ಬ ಲೇಖಕನಿಗೂ ಬೇರೆ ಬೇರೆ ಪ್ರಶ್ನೆಗಳು ಇರುತ್ತವೆ. ಬಂಡವಾಳವಾದಿಯು ಸುಮ್ಮನೆ ಯಾವುದಕ್ಕೂ ಬಂಡವಾಳವನ್ನು ಹಾಕುವುದೂ ಇಲ್ಲ. ಪತ್ರಿಕೆಗಳು ಮತ್ತು ಅದರ ಉದ್ಯಮಗಳು, ಪುಸ್ತಕಗಳು ಮತ್ತು ಅದರ ಉದ್ಯಮಗಳು ಈವತ್ತು ಹೇಗೆ ಬೇರೆ ಬೇರೆ ರೂಪೀಕರಣವನ್ನು ಮಾಡುತ್ತವೆ ಎನ್ನುವುದೂ ಇಲ್ಲಿ ಮುಖ್ಯವಾದ ಪ್ರಶ್ನೆಯು ಆಗುತ್ತದೆ. ಯಾವುದೇ ಉದ್ಯಮಿಯು ತನಗೆ ಲಾಭ ಬರುತ್ತದೆ ಎಂದಾದರೆ ಮಾತ್ರವೇ ಅದಕ್ಕೆ ಹಣವನ್ನು ಹೂಡುತ್ತಾನೆ. ಲೇಖಕರು ಈ ಸಂದರ್ಭದಲ್ಲಿ ಮಹತ್ವದ ಪ್ರಶ್ನೆಗಳನ್ನು ಎದುರು

ಹಾಕಿಕೊಳ್ಳಬೇಕಾಗುತ್ತದೆ. ಅದು ಸಾಮಾಜಿಕ ಆಯ್ಕೆಗಳ ಪ್ರಶ್ನೆ. ಸಮಾಜದಲ್ಲಿ ಬರೀ ನಾವು ಮಾತ್ರವೇ ಇಲ್ಲ ಸಾವಿರಾರು ಜನರು ಇದ್ದಾರೆ ಮತ್ತು ಅವರು ಬೇರೆ ಬೇರೆ ಸಮಸ್ಯೆಗಳ ಜೊತೆಗೆ ಬದುಕುತ್ತಿದ್ದಾರೆ ಎನ್ನುವುದು ಲೇಖಕನಿಗೆ ಅರಿವಿಗೆ ಬರಬೇಕಾಗುತ್ತದೆ. ಬರಹವೇ ಮೂಲಭೂತವಾಗಿ ಒಂದು ಸಮಾಜದಲ್ಲಿ ನಿರ್ದಿಷ್ಟವಾದ ಸಾಮಾಜಿಕ ಚಟುವಟಿಕೆಯೂ ಆಗುತ್ತದೆ. ಟೀಯ ಕಪ್ಪು ಕೂಡಾ ತನ್ನದೇ ಆದ ಬೆಲೆಯನ್ನು ಹೊಂದಿದೆ. ಅದೇ ರೀತಿಯಲ್ಲಿ ಅದಕ್ಕೆ ಅದರದೇ ಆದ ವಿನಿಯೋಗದ ಮೌಲ್ಯವೂ ಇದೆ. ಅದು ಸಮಾಜದಲ್ಲಿ ಅತ್ಯಂತ ಅನಿವಾರ್ಯವಾದ ಒಂದು ಭಾಗವೂ ಆಗಿದೆ. ಚಾ ಕುಡಿಯುವುದು ಇಲ್ಲದೆ ಹೋದರೆ ಚಾ ಪುಡಿಗೆ ಯಾವುದೇ ಬೆಲೆಯು ಇಲ್ಲ, ಓದುವವರು ಇಲ್ಲದೆ ಹೋದರೆ ಪುಸ್ತಕಕ್ಕೆ ಬೆಲೆಯು ಇಲ್ಲ. ಓದುವವರು ಇರುತ್ತಾರೆ. ಕೇಳುವವರು ಇರುತ್ತಾರೆ. ಓದುವವರು ಎಲ್ಲವನ್ನೂ ಓದುತ್ತಾರೆ ಮತ್ತು ಕೇಳುಗರು ಎಲ್ಲವನ್ನು ಕೇಳುತ್ತಾರೆ ಎಂದು ಅರ್ಥವಲ್ಲ. ಆದರೆ ಆ ಕ್ರಿಯೆಗಳು ನಡೆಯುತ್ತವೆ. ಅದು ಸಮಾಜದ ಸತ್ಯವೂ ಆಗಿದೆ. ಅದೇ ರೀತಿಯಲ್ಲಿ ಬರೆಯುವವರು ಕೆಲವನ್ನು ಮಾತ್ರವೇ ಬರೆಯಲು ಸಾಧ್ಯ. ಎಲ್ಲವನ್ನು ಎಲ್ಲರೂ ಬರೆಯಲಾರರು. ಎಲ್,ಎಸ್,ಭೈರಪ್ಪ ಬರೆಯುವುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಜಿ.ರಾಜಶೇಖರ್ ಬರೆಯುವುದು. ಭೈರಪ್ಪ ಬರೆಯುವುದು ಮತ್ತು ರಾಜಶೇಖರ್ ಬರೆಯುವುದು ಬೇರೆ ಬೇರೆ ವರ್ಗಕ್ಕೆ. ಭೈರಪ್ಪರಿಗೆ ಎಲ್ಲವೂ ಕಾಡುವುದೇ ಇಲ್ಲ. ಅವರಿಗೆ ಇರುವುದು ಅದರ ಅದರ ಮುಂದುವರಿಕೆಗಳು ಮಾತ್ರವೇ ಮುಖ್ಯವಾಗುತ್ತದೆ. ಆದರೆ ರಾಜಶೇಖರ್ ಬರೆಯುತ್ತಿರುವುದು ಇರುವುದನ್ನು ಹೇಗೆ ನೋಡಬೇಕು ಮತ್ತು ಅದರ ರಾಜಕೀಯವೇನು ಎನ್ನುವುದರ ಕುರಿತು. ಆದರೆ ನಮಗೆ ಈಗ ಯಾರು ಮುಖ್ಯವೆಂದು ಕೇಳಬಹುದು. ನಮಗೆ ಮುಖ್ಯವಾಗುವುದು ಭೈರಪ್ಪ ಅಲ್ಲ, ರಾಜಶೇಖರ್. ಅವರಿಗೆ ಜನರು ಮತ್ತು ಅವರ ಸಂಕಟಗಳು ಗೊತ್ತು. ಬಡವರು ಮತ್ತು ಅಲ್ಪಸಂಖ್ಯಾತರ ಸಮಸ್ಯೆಯು ಗೊತ್ತು. ಕೋಮುವಾದ ಮತ್ತು ಅದರ ಪರಿಣಾಮವು ಯಾರ ಮೇಲೆ ಆಗುತ್ತದೆ ಎನ್ನುವುದು ರಾಜಶೇಖರರಿಗೆ ಚೆನ್ನಾಗಿಯೇ ಗೊತ್ತು. ಆದರೆ ಅದರ ಕುರಿತು ಭೈರಪ್ಪ ಮಾತಾಡಿದ್ದರ ಕುರಹು ಕೂಡಾ ಇಲ್ಲವಾಗಿದೆ. ಕೋಮುವಾದ ಮತ್ತು ಪ್ಯಾಸಿಸಂ ಎನ್ನುವುದರ ರಾಜಕೀಯ ಚಿಹ್ನೆಗಳು ಯಾವುದು ಎನ್ನುವುದು ರಾಜಶೇಖರ್ ಅವರಿಗೆ ಹೆಚ್ಚು ಗೊತ್ತು. ಆದರೆ ಭೈರಪ್ಪ ಇದನ್ನು ನೋಡಲು ಹೋಗುವುದೇ ಇಲ್ಲ. ರಾಜಶೇಖರ್ ಬರೆಯದೇ ಹೋದರೆ ಮತ್ತು ಅವರು ಮಾತಾಡದೇ ಹೋಗಿದ್ದರೆ ಯಾರದೋ ಒಂದು ಅಭಿಪ್ರಾಯವು ಮಾತ್ರವೇ ಉಳಿಯುತ್ತಿತ್ತು. ಇದು ಕೇವಲ ರಾಜಶೇಖರ್ ಒಬ್ಬರಿಗೆ ಮಾತ್ರವೇ ಅನ್ವಯವಾಗುತ್ತದೆ ಎಂದು ಹೇಳುತ್ತಿಲ್ಲ. ಆದರೆ ಅವರು ಬರೆದದ್ದು ಮತ್ತೆ ಅನೇಕರು ಬರೆಯಲು ಕಾರಣವೂ ಆಯಿತು. ಬರೆದುದನ್ನು ಯಾರು ಓದುತ್ತಾರೆ ಎಂದು ಒಂದು ವೇಳೆ ಅವರು ಕೇಳಿದ್ದರೆ ಪ್ರಶ್ನೆಯು ಬೇರೆಯಾಗುತ್ತಿತ್ತು ಎನ್ನುವುದನ್ನು ಹೇಳುವುದು ಮಾತ್ರವೇ ಇಲ್ಲಿಯ ಉದ್ದೇಶವಾಗಿದೆ. ಬರಹ ಮತ್ತು ಅದರ ಕುರಿತಾಗಿ ನಾವು ಸಿನಿಕರಾದರೆ ಅದರ ಅಪಾಯವು ದೊಡ್ಡದು. ಈ ಮಾತು ನಾವು ಆಡುವ ಮಾತಿಗೂ ಅನ್ವಯವಾಗುತ್ತದೆ. ಅನಂತಮೂರ್ತಿಯವರು ಸತತ ಮಾತಾಡಿದರು. ಅವರ ಮಾತುಗಳು ಒಂದು ಬರಹಗಾರರ ಪಡೆಯನ್ನು ನಿರ್ಮಾಣ ಮಾಡಿತು. ಲಂಕೇಶ್ ಬರೆದರು ಮತ್ತು

ಅದರ ಮೂಲಕವೇ ಒಂದು ಬುದ್ಧಿಜೀವಿ ವರ್ಗವನ್ನು ಸೃಷ್ಟಿ ಮಾಡಿದರು. ಈ ಎಲ್ಲರ ಮೂಲಕವೇ ಒಂದು ಗುಂಪು ಪ್ರವರ್ಧಮಾನಕ್ಕೆ ಬಂತು. ಲೇಖಕರು ಮಾಡುವುದು ಅದನ್ನು. ಗುಂಪುಗಳ ಸ್ವರೂಪವೂ ಅದೇ ರೀತಿಯಲ್ಲಿ ಇರುತ್ತದೆ. ಅಂದರೆ ಲೇಖಕರು ಕೆಲವು ಜವಾಬ್ದಾರಿಯನ್ನು ವಹಿಸುತ್ತಾರೆ. ವಹಿಸಬೇಕಾಗುತ್ತದೆ. ಬುದ್ಧಿಜೀವಿಗಳು ಮತ್ತು ಅವರ ಹೊಣೆಗಾರಿಕೆಯನ್ನು ಗ್ರಾಂಶಿಯು ಅತ್ಯಂತ ಖಚಿತವಾಗಿ ಹೇಳಿದ್ದಾನೆ. ಆದರೆ ಇರುವುದು ಈಗ ನಮ್ಮ ಎದುರು ಆಯ್ಕೆಯ ಪ್ರಶ್ನೆ. ಸಮೂಹ ಮತ್ತು ಅದರ ಜೀವನದ ಕ್ರಮಗಳು ಈಗ ವಿವಿಧ ಕಾರಣಕ್ಕೆ ಬದಲಾಗಿದೆ. ಮಾತು ಮತ್ತು ಬರಹಗಳ ದಮನವು ಈಗ ನಮಗೆ ದೊಡ್ಡದಾದ ಪ್ರಶ್ನೆಯೂ ಆಗಿದೆ. ಈ ದೃಷ್ಟಿಯಿಂದ ನಾವು ಬೇರೆ ಸಮಸ್ಯೆಯನ್ನು ಗಮನಿಸಬೇಕು. ಜಗತ್ತಿನ ಅರ್ಧದಷ್ಟು ಜನರು ರೈತರು. ಅವರನ್ನು ಅಧಿಕಾರವು ನಿಯಂತ್ರಣ ಮಾಡುತ್ತದೆ. ರೈತರು ಮತ್ತು ಕಾರ್ಮಿಕರ ಪ್ರಶ್ನೆಯು ಅತ್ಯಂತ ಸಂಕೀರ್ಣವಾಗಿದೆ. ಇದರ ಜೊತೆಗೆ ನಮಗೆ ಬೇರೆ ಪ್ರಶ್ನೆಗಳು ಬಂದಿವೆ. ಇದನ್ನು ಹೀಗೆ ಹೇಳಬಹುದು– ಈವತ್ತು ಎಲ್ಲಾ ದೇಶಗಳು ಮಿಲಿಟರಿ ಶಕ್ತಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತವೆ. ಅವುಗಳೇ ನಮಗೆ ಭಯವನ್ನು ಹುಟ್ಟಿಸುತ್ತಿವೆ. ಎರಡು ಮಹಾಯುದ್ಧಗಳನ್ನು ಕಂಡ ಜಗತ್ತು ಇನ್ನೊಂದು ಮಹಾಯುದ್ಧವನ್ನು ಬಯಸುವುದಿಲ್ಲ. ಮಹಾಯುದ್ಧಗಳ ಕರಾಳ ನೆನಪುಗಳು ಭಯಾನಕವಾಗಿವೆ. ಬರಹವು ನಮಗೆ ಅನೇಕವನ್ನು ಹೇಳುತ್ತವೆ ಹಾಗೆಯೇ ಅನೇಕವನ್ನು ಮುಚ್ಚು ಮರೆ ಮಾಡುತ್ತವೆ. ವಾಸ್ತವವಾಗಿ ಯಾವುದನ್ನು ಮರೆ ಮಾಡಲಾಗಿದೆ ಮತ್ತು ಯಾಕೆ ಮರೆಮಾಡಲಾಗಿದೆ ಎಂದು ಕೇಳಿಕೊಳ್ಳಬೇಕಾದ ಅಗತ್ಯವೂ ಇದೆ. ಅನೇಕ ಬುದ್ಧಿಜೀವಿಗಳು ತಮಗೆ ಯಾವುದೇ ರೀತಿಯ ರಾಜಕಾರಣವು ಬೇಡವೆಂದು ಹೇಳುತ್ತಾರೆ. ಅದು ಮೇಲೆ ಮೇಲೆ ಹೇಳುವ ಮಾತುಗಳು ಮಾತ್ರವೇ ಆಗಿರುತ್ತವೆ. ಯಾಕೆಂದರೆ ಅವರು ಖಾಸಗಿಯಾಗಿ ತಳೆಯುವ ನಿಲುವುಗಳು ಕೂಡಾ ರಾಜಕಾರಣವನ್ನು ಪ್ರತಿನಿಧಿಸುತ್ತವೆ. ಯಾವುದೇ ನಿಲುವು ಅರಾಜಕವಾಗಿ ಇರಲು ಸಾಧ್ಯವೇ ಇಲ್ಲ. ಬೂರ್ಜ್ವಾ ವರ್ಗವೂ ಕೂಡಾ ತನಗೆ ಬೇಕಾದ ತಾತ್ವಿಕತೆಯನ್ನು ಉತ್ಪಾದಿಸುತ್ತದೆ. ಸಮಾಜ ಮತ್ತು ಅದರ ಜೀವನವು ಕೂಡಾ ಈ ದೃಷ್ಟಿಯಿಂದ ಅತ್ಯಂತ ಮುಖ್ಯವಾಗುತ್ತದೆ. ಸಮೂಹ ಮತ್ತು ಅದರ ಪ್ರಜ್ಞೆಯನ್ನು ರೂಪಿಸಲು ಲೇಖಕರು ಪ್ರಯತ್ನವನ್ನು ಮಾಡುತ್ತಾರೆ. ಸಮಾಜ ಮತ್ತು ಅದರ ಸಂಬಂಧವನ್ನು ಬಿಟ್ಟು ನಾವು ಬರೆಯಲಾರೆವು ಎನ್ನುವುದೂ ಅಷ್ಟೇ ನಿಜ. ಆದ್ದರಿಂದ ಲೇಖಕರು ಜನರ ನಡುವೆಯೇ ಇರಬೇಕಾಗುತ್ತದೆ ಹಾಗೂ ಒಂದು ಪ್ರಜ್ಞೆಯನ್ನು ರೂಪಿಸಬೇಕಾಗುತ್ತದೆ. ಪ್ರಜಾತಾಂತ್ರಿಕವಾದ ವ್ಯವಸ್ಥೆಯಲ್ಲಿ ವ್ಯಕ್ತಿ ಮತ್ತು ಅವನ ಹಕ್ಕುಗಳು ಬಹಳ ಮುಖ್ಯವಾಗುತ್ತದೆ. ಆದರೆ ನಾವು ಅದನ್ನು ಗಣನೆಗೆ ತೆಗೆದುಕೊಳ್ಳುವುದೂ ಇಲ್ಲ. ಸಮೂಹ ಮತ್ತು ಜನರ ಮನಸ್ಸುಗಳ ನಡುವೆಯೇ ಬುದ್ಧಿಜೀವಿಗಳು ಇರುತ್ತಾರೆ. ಒಂದು ಸಮಾಜ ಮತ್ತು ಅದರ ವ್ಯವಸ್ಥೆಯು ಹೇಗೆ ಇರುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದನ್ನು ನೋಡಿಕೊಂಡು ನಾವು ಮುಂದುವರಿಯುವುದು ಅತ್ಯಂತ ಅಗತ್ಯ. ಸಾಮಾನ್ಯರು ಮತ್ತು ರಾಜಕಾರಣ ಎನ್ನುವುದರ ನಡುವೆ ಬೇರೆ ಬೇರೆ ಸಂಬಂಧವೂ ಇರುತ್ತದೆ. ರಾಜಕಾರಣ ಮತ್ತು ವ್ಯಕ್ತಿಗಳನ್ನು ನಾವು ಈ ದೃಷ್ಟಿಯಿಂದ ವಿಶಿಷ್ಟವಾಗಿಯೂ ಗಮನಿಸುವುದು ಅಗತ್ಯ, ಅವರಿಗೆ ಅನೇಕ ಸಂದರ್ಭದಲ್ಲಿ ಮೇಲುನೋಟದ ತಿಳುವಳಿಕೆಯು

ಮಾತ್ರವೇ ಇದ್ದರೆ ಅವರನ್ನು ಲೇಖಕರು ಮನದಟ್ಟು ಮಾಡಬೇಕಾಗುತ್ತದೆ. ಬರೆಯುವುದು ಮತ್ತು ಮಾತಾಡುವುದು ಒಂದು ಅರ್ಥದಲ್ಲಿ ಅತ್ಯಂತ ವಿಶಿಷ್ಟವಾದ ಪ್ರಕ್ರಿಯೆಯೂ ಆಗುತ್ತದೆ. ರೈತರ ಅರಿವು ಮತ್ತು ಬುದ್ಧಿಜೀವಿಗಳ ಚಿಂತನೆಗಳ ನಡುವೆ ಒಂದು ಅಂತರವೂ ಇದೆ ಎನ್ನುವುದು ಅಂತರವೂ ಇದೆ, ಆದರೆ ಲೇಖಕರು ಯಾವ ಕೆಲಸವನ್ನು ಮಾಡುವುದು ಅಗುತ್ಯವಿದೆ ಮತ್ತು ಅದರ ಅಗತ್ಯವೇನು ಎನ್ನುವುದನ್ನು ಯೋಚಿಸಬೇಕಾದ ಅಗತ್ಯವಂತೂ ಇದ್ದೇ ಇದೆ. ಲೇಖಕರು ಕೆಲಸವನ್ನು ಮಾಡಬೇಕೆಂದು ಗ್ರಾಂಶಿಯು ಹೇಳುತ್ತಾನೆ. ಲೇಖಕರು ಮತು ಅವರ ಬರಹಗಳನ್ನು ನೋಡಬೇಕಾಗುತ್ತದೆ. ಮತ್ತು ಅವರು ಕೆಲವನ್ನು ಬರೆಯಬೇಕಾಗುತ್ತದೆ. ಅವರು ಅದನ್ನು ಮಾಡದೇ ಹೋದರೆ ಕೆಲವು ಸ್ಥಾಪಿತವಾದ ಹಿತಾಸಕ್ತಿಗಳು ತಮಗೆ ತೋಚಿದನ್ನು ಮಾತ್ರವೇ ಬರೆಯುವ ಪ್ರಸಂಗವು ಎದುರಾಗುತ್ತದೆ. ಬುದ್ಧಿಜೀವಿಗಳು ಮತ್ತು ಅವರ ಬರಹಗಳಿಗೆ ಮಾನ್ಯತೆಯು ಇದ್ದೇ ಇದೆ. ಸಮಾಜವೂ ಕೂಡಾ ಬುದ್ಧಿಜೀವಿಗಳನ್ನು ನಿರ್ಮಾಣ ಮಾಡುತ್ತದೆ. ಅದು ಒಂದು ಚಾರಿತ್ರಿಕವಾದ ಪ್ರಕ್ರಿಯೆ. ಚರಿತ್ರೆಯಲ್ಲಿ ಅನೇಕ ಲೇಖಕರು ಆಗಿದ್ದಾರೆ ಮತ್ತು ಅವರು ಅನೇಕವನ್ನು ಬರೆದಿದ್ದಾರೆ. ಬುದ್ಧಿಜೀವಿಗಳು ಮತ್ತು ಅವರ ವರ್ಗವು ಭಿನ್ನವಾದ ಒಂದು ಗುಂಪು. ಆ ಗುಂಪು ಕೆಲವನ್ನು ನಿರೂಪಿಸುತ್ತದೆ. ಹಾಗೆಂದು ಅದನ್ನು ಒಂದು ಪ್ರತ್ಯೇಕವಾದ ಒಂದು ವರ್ಗ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಕಾರ್ಮಿಕರು, ಕೂಲಿಗಳು, ಕೈಕಸುಬುದಾರರು ಇರುವ ಹಾಗೆ ಅವರೂ ಇದ್ದಾರೆ. ಆದರೆ ಬರಹಗಾರರನ್ನು ನಾವು ವಿಶಿಷ್ಟವಾದ ಒಂದು ಮಾನ್ಯತೆ ಎನ್ನುವ ರೀತಿಯಲ್ಲಿ ನೋಡುತ್ತೇವೆ. ಬ್ರಾಹ್ಮಣರ ಜಾತಿ, ಬುಟ್ಟಿ ಹೆಣೆಯುವವರ ಜಾತಿ, ಎನ್ನುವ ಹಾಗೆ ಅವರದೇ ಆದ ಒಂದು ಜಾತಿಯು ಇಲ್ಲವಾಗಿದೆ. ಆದರೆ ವಿಶೇಷವೆಂದರೆ ಲೇಖಕರು ತಮಗೆ ಬೇಕಾದ ಅಂಶಗಳನ್ನು ಬಳಸಿಕೊಳ್ಳುತ್ತಾರೆ. ರಾಜಕೀಯ ಅರ್ಥಶಾಸ್ತ್ರದಲ್ಲಿ ಉದಯವಾದ ಒಂದು ವರ್ಗಗಳಲ್ಲಿ ಬರಹಗಾರರೂ ಇದ್ದಾರೆ. ಬರಹ ಮತ್ತು ಅದರ ಸಾಧ್ಯತೆಯನ್ನು ಕೈಗಾರಿಕಾ ಬಂಡವಾಳವಾದವು ಬೇರೆ ಮಾಡಿದೆ ಎನ್ನುವುದೂ ಅಷ್ಟೇ ನಿಜ. ಆದರೆ ಸರಿಯಾದ ಲೇಖಕನು ಸಮಾಜ ಮತ್ತು ಅದರ ರೂಪಗಳನ್ನು ಹಾಗೂ ಆಗಲೇಬೇಕಾದ ಪರಿವರ್ತನೆಗಳನ್ನು ಹೇಳುತ್ತಾನೆ. ಆದರೆ ಇರುವ ಕಷ್ಟವೆಂದರೆ ಲೇಖಕರು ಧಾರ್ಮಿಕ ಮುಖಂಡರ ಥರ ಬರೆಯಲು ಹೊರಟರೆ ಅದು ಕಷ್ಟ. ಧರ್ಮ ಮತ್ತು ಅದರ ತಾತ್ವಿಕತೆಗಳು ಹಾಗೂ ಶಿಕ್ಷಣ ಸಂಸ್ಥೆಗಳು, ಶಾಲೆಗಳ ಪಠ್ಯ ಪುಸ್ತಕಗಳು, ನೈತಿಕತೆಗಳು ಹಾಗೂ ನ್ಯಾಯ ವಿಧಾನಗಳು ಜೊತೆಗೆ ಸೇರಿದರೆ ಅದರ ಸ್ವರೂಪವೇ ಬೇರೆಯಾಗುತ್ತದೆ. ಜಮೀನ್ದಾರರು ಮತ್ತು ಅವರು ಪಡೆಯುವ ಸವಲತ್ತುಗಳು, ಬಂಡವಾಳವಾದ ಮತ್ತು ಅದರ ಲಾಭವನ್ನು ಪಡೆಯುವವರು ಒಂದು ಕಡೆಗೆ ಸೇರಿದರೆ ಅದು ಕಷ್ಟ. ಧಾರ್ಮಿಕ ಸಂಸ್ಥೆಗಳು ಮತ್ತು ಆಸ್ಪತ್ರೆಗಳು ಯಾಕೆ ಧರ್ಮ ಮತ್ತು ಅದರ ಪರಿಭಾಷೆಗಳನ್ನು ಬಳಸುತ್ತವೆ ಎನ್ನುವುದೂ ಈಗ ಪ್ರಶ್ನೆಯಾಗಿವೆ. ವಾಸ್ತವವಾಗಿ ಬುದ್ಧಿಜೀವಿಗಳು ತಮಗೆ ಮತ್ತು ಉಳಿದ ಚರ್ಚೆಗಳಿಗೆ ಯಾವುದೇ ಸಂಬಂಧವು ಇಲ್ಲವೆಂದು ಹೇಳುವುದು ಒಂದು ತಾತ್ವಿಕವಾದ ಕಾರಣಕ್ಕೆ ಅಲ್ಲ ಎನ್ನುವುದು ಅತ್ಯಂತ ಸ್ಪಷ್ಟವಾಗಿದೆ. ಸಂಸ್ಥೆಗಳ ಹಿಡಿತ ಮತ್ತು ಧಾರ್ಮಿಕವಾದ ಸಂಸ್ಥೆಗಳ ಹಿಡಿತವನ್ನು ಸುಲಭವಾಗಿ ಬಿಡಿಸಿಕೊಳ್ಳಲು ಬರುವುದಿಲ್ಲ. ಆದರೆ ಅದನ್ನು ಬುದ್ಧಿಜೀವಿಗಳು ಅಂಗೀಕರಿಸಿದಲ್ಲಿ ಅದರ ಪರಿಣಾಮವು

ಅತ್ಯಂತ ಗಾಢವೂ ಆಗಿರುತ್ತದೆ. ಪವಾಡಪುರುಷರು ತಾವು ರೋಗವನ್ನು ವಾಸಿಮಾಡುತ್ತೇವೆ ಎಂದು ಹೇಳುತ್ತಾರೆ. ಅಂಸಂಖ್ಯಾತ ಜನರು ಇದನ್ನು ನಂಬುತ್ತಾರೆ. ಆಸ್ಪತ್ರೆ ಮತ್ತು ಅದರ ಉಪಯೋಗವನ್ನು ಪಡೆಯವ ಬದಲು ಜನರು ಪವಾಡವನ್ನು ನಂಬುವವರ ಬಳಿಗೆ ಹೋಗುತ್ತಾರೆ. ದೇವಸ್ಥಾನಗಳು, ಚರ್ಚ್‌ಗಳು, ಪವಾಡ ಮಾಡುತ್ತೇವೆ ಎಂದು ಹೇಳುವವರು ಹೆಚ್ಚು ರೊಮಾಂಟಿಕ್ ಆಗಿ ಮಾತಾಡುತ್ತಾರೆ. ಬರಹಗಳ ಮೂಲಕ ಭ್ರಮೆಯನ್ನು ಸೃಷ್ಟಿಮಾಡುವ ಅನೇಕ ಲೇಖಕರು ಇದ್ದಾರೆ. ಅವರು ಕಲ್ಪನೆಯನ್ನು ವೈಭವೀಕರಿಸುತ್ತಾರೆ. ಕಲ್ಪನೆಯನ್ನು ಅತ್ಯಂತ ಮಹತ್ವದ್ದು ಎಂದು ಹೇಳುತ್ತಾರೆ. ಅನೇಕ ಲೇಖಕರು ತಾವು ಸ್ವತಂತ್ರರು ಮತ್ತು ತಮಗೆ ವಿಶಿಷ್ಟವಾದ ಒಂದು ಜಾಗವು ಇದೆ ಎಂದೇ ಭಾವಿಸುತ್ತಾರೆ. ಹಾಗೆ ನೋಡುವುದಿದ್ದರೆ ಲೇಖಕರಿಗೆ ಯಾವುದೇ ಸಾಹಿತ್ಯದಲ್ಲಿ ಒಂದು ಪ್ರಭುತ್ವವನ್ನು ಸಾಧಿಸಲು ಆಗಿದೆಯೇ ಎನ್ನುವುದೂ ಕೇಳಿಕೊಳ್ಳಬೇಕಾದ ಪ್ರಶ್ನೆಯು ಆಗಿದೆ. ಸಾಮಾನ್ಯರು ಅನೇಕ ವಿಷಯಗಳನ್ನು ನಂಬುತ್ತಾರೆ. ಅವರಿಗೆ ಅದು ಹೆಚ್ಚು ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ದೇವರನ್ನು ಅವರು ನಂಬುತ್ತಾರೆ. ಟಕ್ಕು ಜ್ಯೋತಿಷಿಗಳ ಮಾತನ್ನು ಕೇಳುತ್ತಾರೆ. ಅಂದರೆ ಜ್ಯೋತಿಷ್ಯ ಹೇಳುವವರು ಕೆಲವನ್ನು ಕಲ್ಪಿಸಿಕೊಳ್ಳುತ್ತಾರೆ. ಅದರಂತೆ ಅವರು ವರ್ತಿಸುತ್ತಾರೆ. ಜನರು ದೇವರನ್ನು ಕಲ್ಪಿಸಿಕೊಳ್ಳುತ್ತಾರೆ. ಅವರಿಗೆ ಅದು ಮುಖ್ಯವಾಗುತ್ತದೆ. ಹಾಗಿದ್ದರೆ ಅವರು ಯಾಕೆ ಅದನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ ಎನ್ನುವುದೂ ನಮಗೆ ಒಂದು ಸವಾಲು. ಸ್ವಂತಕ್ಕೆ ಕಷ್ಟ ಇರುವ ರೈತನು ತನ್ನ ಮಾತನ್ನು ಯಾರೂ ಕೇಳಲು ಇಲ್ಲವಾದಾಗ ದೇವರನ್ನು ಕೇಳಬೇಕು. ಅವನಿಗೆ ಮಾತಾಡಲು ಬೇರೆ ಯಾರೂ ಇಲ್ಲ. ದೇವರನ್ನು ಅವರು ನಂಬುತ್ತಾರೆ ಎಂದು ರೈತರನ್ನು ಬೈಯ್ಯುವುದು ಪ್ರಯೋಜನವಾಗದು. ಆದರೆ ಅವರ ಮಾತನ್ನು ಕೇಳಿಸಿಕೊಂಡು ಅವರ ಸಮಸ್ಯೆಯ ಜೊತೆಗೆ ಸ್ಪಂದಿಸಿದರೆ ಮಾತ್ರವೇ ಉಪಯೋಗವಾಗಬಹುದು. ಬಸ್ಸಿನಲ್ಲಿ ನಾವು ಪ್ರಯಾಣ ಮಾಡುವಾಗ ನಾವು ಅವನ ಜೊತೆಗೆ ಹೇಗೆ ಮಾತಾಡುತ್ತೇವೆ ಎನ್ನುವುದೂ ಅತ್ಯಂತ ಮುಖ್ಯವಾಗುತ್ತದೆ. "ಏನೋಪ್ಪ ಈ ವರ್ಷ ಮಳೆಯೇ ಇಲ್ಲ ಏನಾಗುತ್ತದೋ ಏನೋ? ಅಡಿಕೆಗೆ ಯಾವುದನ್ನು ಕೊಟ್ಟರಿ? ಎಂದು ಕೇಳಿದರೆ ಅವನು ಮಾತಾಡುತ್ತಾನೆ. ಅದರ ಬದಲು ನಾವು ಈ ವರ್ಷ ನೊಬೆಲ್ ಪ್ರಶಸ್ತಿಯು ಯಾರಿಗೆ ಬಂತು ಯಾರು ಸಾಹಿತ್ಯ ಅಕಾಡೆಮಿಯ ಸದಸ್ಯರಾದರು ಯಾರಿಗೆ ಯಾವ ಪ್ರಶಸ್ತಿಯು ಬಂತು ಎಂದು ಕೇಳಿದರೆ ಯಾವ ಪ್ರಯೋಜನವೂ ಇಲ್ಲ. ಅವರಿಗೆ ಅದು ಸಂಬಂಧಪಟ್ಟಿಲ್ಲ. ಇದನ್ನು ನಾವು ಯಾವ ವಿಷಯಕ್ಕಾದರೂ ಅನ್ವಯ ಮಾಡಬಹುದು. ಮನೆಯಲ್ಲಿ ಅಥವಾ ರೈಲ್ವೆಸ್ಟೇಷನ್ ಪಕ್ಕದಲ್ಲಿ ಕುಳಿತುಕೊಂಡು ಜನರು ಮಾತಾಡುವುದನ್ನು ನಾವು ಕೇಳಿಸಿಕೊಂಡರೆ ಇದು ಅರ್ಥವಾಗುತ್ತದೆ. ಸಾಮಾನ್ಯ ಮನುಷ್ಯರ ಮಾತುಕತೆಗಳು ಬೇರೆಯಿರುತ್ತದೆ. ಅವರು ಅದನ್ನು ಮಾತಾಡುತ್ತಾರೆ, ಮಾತಿಗೊಮ್ಮೆ ದೇವರೇ ಕಾಪಾಡಪ್ಪ ಎಂದು ಹೇಳುತ್ತಾರೆ. ದೇವರು ಮತ್ತು ನಂಬಿಕೆಗಳು ಜೊತೆಗೆ ಹೋಗುತ್ತವೆ. ಅವರ ಕಷ್ಟವನ್ನು ಜ್ಯೋತಿಷಿಗಳು ನಗದು ಮಾಡಿಕೊಂಡು ಏನೋ ಹೇಳುತ್ತಾರೆ. ದೇವರಿಗೂ ಜ್ಯೋತಿಷಿಗೂ ಅವರು ಸಂಬಂಧವನ್ನು ರೂಪಿಸಿಕೊಂಡು ಅವರು ಹೇಳಿದ್ದನ್ನು ಕೇಳುತ್ತಾರೆ. ದೇವರು ಮತ್ತು ಅವನ ಪ್ರಶ್ನೆಯು ಅತ್ಯಂತ ಹೆಚ್ಚು ಜನಕ್ಕೆ ಕಷ್ಟಕೊಡುವವನು. ಅವನು ಕಷ್ಟಕೊಡುತ್ತಾನೆ ಅವನು ಪೀಡಿಸವವನು ಕೂಡಾ ಹೌದು. ಆದರೆ ಇಲ್ಲಿ ಬರುವ ಪ್ರಶ್ನೆಯೆಂದರೆ

ದೇವರನ್ನು ಯಾರದಾರೂ ನೋಡಿದ್ದಾರಾ ಯಾರೂ ಉತ್ತರವನ್ನು ಕೊಡುವುದೂ ಇಲ್ಲ. ದೇವರು ಮತ್ತು ಅವನ ಅಸ್ತಿತ್ವದ ಪ್ರಶ್ನೆಯು ಅತ್ಯಂತ ಸಂಕೀರ್ಣವಾಗಿದೆ. ಆದರೆ ಸಮಸ್ಯೆಯ ಸ್ವರೂಪವು ಮತ್ತೊಂದು ಇದೆ. ಆ ಮಾದರಿಯ ಮಾತುಗಳನ್ನು ನಾವು ಮಾತಾಡಲು ಆಗುವುದೇ ಇಲ್ಲ. ನಮಗೆ ಮಾತಾಡಲು ಬರುತ್ತದೆ ಮತ್ತು ಬರೆಯಲು ಬರುತ್ತದೆ. ಆದರೆ ಯಾರ ಜೊತೆಗೆ ಎನ್ನುವುದೇ ಅತ್ಯಂತ ಮುಖ್ಯವಾದ ಪ್ರಶ್ನೆ. ಬರಹ ಮತ್ತು ಅದರ ಕ್ರಿಯೆಗಳು ಒಂದು ಥರ. ಆದರೆ ಬೇರೆ ಕೆಲಸದ ಕ್ರಿಯೆಗಳು ಮತ್ತೊಂದು ಥರ. ಬರೆಯವುದು ಮತ್ತು ಮಾತಾಡುವುದು ಹಾಗೂ ನಮ್ಮ ಕ್ರಿಯೆಗಳು ಜೊತೆಗೆ ಹೇಗೆ ಇರುತ್ತವೆ. ಅದನ್ನು ಹೇಗೆ ಜೋಡಿಸಬೇಕು ಎನ್ನುವುದೂ ನಮಗೆ ಒಂದು ಪ್ರಶ್ನೆಯೇ ಆಗುತ್ತದೆ. ಒಬ್ಬ ಕ್ರಿಯಾಶೀಲನಾದ ವ್ಯಕ್ತಿ ಮತ್ತು ಅವನ ಚಟುವಟಿಕೆಗಳು ಹೇಗೆ ಇರುತ್ತವೆ. ಅದರ ಸ್ವರೂಪವು ಯಾವ ಬಗೆಯದು ಎನ್ನುವುದೂ ನಮಗೆ ಮಹತ್ವದ ಸಂಗತಿಯು ಆಗಿದೆ. ಬರಹವು ಕೂಡಾ ನಮಗೆ ಸಮಾಜ ಮತ್ತು ಅದರ ಜೊತೆಗೆ ನಾವು ಬೆಳೆಸಿಕೊಳ್ಳುವ ಸಂಬಂಧವೂ ಆಗುತ್ತದೆ. ಬರಹವು ಒಂದು ಕ್ರಿಯೆ ಅದೇ ರೀತಿಯಲ್ಲಿ ಅದರ ಚಟುವಟಿಕೆಗಳು ಕೂಡಾ ಬೇರೆ ಬೇರೆ ರೀತಿಯವು. ಒಂದು ಅರ್ಥದಲ್ಲಿ ಅದನ್ನು ನಾವು ಬರೆಯುತ್ತೇವೆ. ಬರಹದಲ್ಲಿ ವಿವಿಧತೆಯು ಇರುತ್ತದೆ ಮತ್ತು ಅದರ ಸಾಧ್ಯತೆಯೂ ಬೇರೆಯಾಗುತ್ತವೆ. ದೇಹ ಮತ್ತು ಬುದ್ಧಿ ಎರಡೂ ಇದರಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾಗುತ್ತದೆ. ರೈತರ ಪರಿಕರ ಮತ್ತು ಲೇಖಕರ ಪರಿಕರವು ಭಿನ್ನವಾಗುತ್ತವೆ. ಅದರಲ್ಲಿ ವ್ಯತ್ಯಾಸಗಳು ಇವೆ. ರೈತರು ಯಾವ ಪರಿಕರವನ್ನು ಬಳಸುತ್ತಾರೆ ಮತ್ತು ಅದರ ಸ್ವರೂಪವೇನು ಹಾಗೂ ಅವರು ಅದನ್ನು ಯಾವ ಸಂದರ್ಭದಲ್ಲೂ ಹೇಗೆ ಬಳಸುತ್ತಾರೆ ಎನ್ನುವುದು ಬೇರೆ ಪ್ರಶ್ನೆಗಳೂ ಆಗುತ್ತವೆ. ಕೆಲಸ ಮತ್ತು ಅದರ ಸ್ವರೂಪವೇ ನಮಗೆ ಪರಿಕರವನ್ನು ಬಳಸಲು ಸಾಧ್ಯ ಮಾಡುತ್ತವೆ. ಅವುಗಳು ನಮಗೆ ಸೂಚಿಸುತ್ತವೆ. ಭೌತಿಕ ಕೆಲಸ ಮತ್ತು ಅದರ ಸಾಧ್ಯತೆಗಳು ಹೇಗೆ ಇರುತ್ತವೆಯೋ ಅದರಂತೆ ನಮ್ಮ ಬರಹಗಳಿಗೂ ಅದರದೇ ಆದ ಸ್ವರೂಪವು ಇರುತ್ತದೆ. ಬುದ್ಧಿಜೀವಿಗಳು ಯಾವುದನ್ನು ಮಾಡುತ್ತಾರೆ ಮತ್ತು ಅದರ ಚಹರೆಗಳು ಯಾವ ಬಗೆಯದು ಎನ್ನುವುದೂ ಈಗ ಪ್ರಶ್ನೆಯಾಗಿದೆ. ಆಧುನಿಕ ತಂತ್ರಜ್ಞಾನಗಳು ನಮ್ಮ ಬರಹದ ಮಾದರಿಗಳನ್ನು ಬದಲಿಸಿವೆ. ಕೈಗಾರಿಕೆಗಳು ಮತ್ತು ಅದರ ಪರಿಣಾಮವೂ ನಮಗೆ ಆಗಿವೆ. ಕೈಗಾರಿಕೆಗಳು ಹೊಸ ರೀತಿಯ ಬುದ್ಧಿಜೀವಿಗಳನ್ನು ರೂಪಿಸಿವೆ. ಹೇಗೆ ಹಳೆಯ ಕಾರ್ಮಿಕರು ಹಳೆಯ ಪದ್ಧತಿಯನ್ನು ಬಿಟ್ಟು ಹೊಸದಾದ ಸನ್ನಿವೇಶಕ್ಕೆ ಒಗ್ಗಿಕೊಂಡರೋ ಅದೇ ರೀತಿಯಲ್ಲಿ ಹೊಸದಾದ ಸನ್ನಿವೇಶದಲ್ಲಿ ಹೊಸದಾದ ಸನ್ನಿವೇಶದಲ್ಲಿ ಹೊಸ ಲೇಖಕರು ಹೊಸ ವಿಷಯಗಳನ್ನು ಕುರಿತು ಬರೆಯಬೇಕಾಗಿಯೂ ಬಂತು. ಲೇಖಕರು ಮತ್ತು ಅವರ ಭಾಗವಹಿಸುವಿಕೆಯ ಕ್ರಮಗಳು ಬದಲಾದವು. ಕೆಲಸ ಮತ್ತು ಅದರ ಸ್ವರೂಪಗಳು ಬದಲಾಗುತ್ತಾ ಹೋದಂತೆ ಅವುಗಳ ನಡುವೆ ಬೇರೆ ಸನ್ನಿವೇಶಗಳು ಬಂದವು. ಕೆಲಸ ಮತ್ತು ಅದರ ಜೊತೆಗೆ ನಾವು ಭಾಗವಹಿಸುವ ಕ್ರಮಗಳಲ್ಲಿ ವ್ಯತ್ಯಾಸಗಳೂ ಇವೆ. ಬರಹ ಮತ್ತು ಅದರ ಮಾದರಿಗಳು ಸನ್ನಿವೇಶಕ್ಕೆ ಅನುಸಾರವಾಗಿ ಬೇರೆಯಾಗುತ್ತವೆ. ಭಾವನೆಗಳು ಬದಲಾದರೆ ಅದರ ಅರ್ಥವೂ ವ್ಯತ್ಯಾಸವಾಗುತ್ತವೆ. ನಮಗೆ ಆಗಿರುವುದು ಇದು. ಲೇಖಕರಿಗೆ ಮಾತ್ರವೇ ಒಂದು

ಸನ್ನಿವೇಶವು ಇದೆ ಉಳಿದವರಿಗೆ ಅದು ಇಲ್ಲವೆಂದು ಹೇಳಬೇಕಾದ ಯಾವ ಅಗತ್ಯವೂ ಇಲ್ಲ. ಕೆಲಸದ ಜೊತೆಗೆ ನಮಗೆ ಇರುವ ಸಂಬಂಧವನ್ನು ನಾವು ಈ ದೃಷ್ಟಿಯಿಂದ ಬೇರೆ ಥರ ನೋಡಬೇಕಾಗುತ್ತದೆ. ಕೆಲಸವನ್ನು ನಾವು ಸುಮ್ಮನೆ ಮಾಡಲು ಆಗುತ್ತದೆಯೇ ಎನ್ನುವುದೂ ಮುಖ್ಯವಾದ ಪ್ರಶ್ನೆ. ಕೆಲಸದ ತಂತ್ರ ಎನ್ನುವುದು ಕೆಲಸದ ವಿಜ್ಞಾನವೂ ಹೌದು. ಯಾವ ಕೆಲಸವನ್ನು ನಾವು ಹೇಗೆ ಮಾಡಬೇಕಿದೆ ಮತ್ತು ಅದರ ತಂತ್ರವು ಹೇಗೆ ಇರಬೇಕಾಗುತ್ತದೆ ಎನ್ನುವುದು ಆಯಾ ಸನ್ನಿವೇಶಕ್ಕೆ ಅನುಸಾರವಾಗಿ ಬೇರೆಯಾಗುತ್ತದೆ. ಕೆಲಸವು ನಮಗೆ ಅನಿವಾರ್ಯ. ಕೆಲಸ ಮತ್ತು ಅದರ ಸ್ವರೂಪವನ್ನು ರಾಜಕಾರಣ ಮತ್ತು ಇತರ ಸಂಗತಿಗಳು ನಿರ್ದೇಶನವನ್ನು ಮಾಡುತ್ತವೆ. ವಾಸ್ತವವಾಗಿ ಚರಿತ್ರೆಯೇ ನಮ್ಮನ್ನು ರೂಪಿಸುತ್ತದೆ. ಅದು ನಮಗೆ ಅನೇಕವನ್ನು ಕಲಿಸುತ್ತದೆ. ಅದು ಸಂಕೀರ್ಣವಾಗಿದೆ. ಕೆಲಸವನ್ನು ಯಾರೂ ಸುಮ್ಮನೆ ಮಾಡುವುದಿಲ್ಲ. ಅದರಲ್ಲಿ ತಾತ್ವಿಕತೆಯೂ ಇರುತ್ತದೆ. ಮಧ್ಯಯುಗೀನ ಸಂದರ್ಭದಲ್ಲಿ ಶಿಕ್ಷಣ ಮತ್ತು ಸಂಸ್ಥೆಗಳಿಗೆ ಕೆಲವು ಸಂಬಂಧಗಳು ಇದ್ದವು. ಆದರೆ ಆಧುನಿಕಯುಗದ ಸಂದರ್ಭವು ಬೇರೆ, ನಮ್ಮನ್ನು ಆಧುನಿಕಯುಗವು ಬೇರೆ ರೀತಿಯಲ್ಲಿ ಸಂಯೋಜನೆಯನ್ನು ಮಾಡಿದೆ. ಸಮಾಜ ಮತ್ತು ಚರಿತ್ರೆಯೆರಡೂ ಆಧುನಿಕ ಬುದ್ಧಿಜೀವಿಗಳನ್ನು ರೂಪಿಸಿದೆ. ವಿಶಿಷ್ಟತೆ ಮತ್ತು ತಜ್ಞತೆಯೇ ಆಧುನಿಕ ಬುದ್ಧಿಜೀವಿಗಳ ಪ್ರಮುಖ ಚಹರೆಗಳೂ ಹೌದು. ಬರಹ ಮತ್ತು ಅದರ ತಜ್ಞತೆಯ ಪ್ರಶ್ನೆಯು ಮುಂಚೂಣಿಗೆ ಬಂದವು. ಆಧುನಿಕ ಬುದ್ಧಿಜೀವಿಗಳನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವು ಈಗ ಬೆಳೆದಿದೆ. ಅದರ ಪರಿಣಾಮವಾಗಿ ನಮಗೆ ಹೊಸದಾದ ಜ್ಞಾನವು ಬಂದಿದೆ. ಹೊಸದಾದ ಸಂಸ್ಕೃತಿಯು ರೂಪುಗೊಂಡಿದ್ದರಿಂದ ನಮಗೆ ಹೊಸ ರೀತಿಯ ಗ್ರಹಿಕೆಗಳು ಬಂದವು. ಜಗತ್ತನ್ನು ನಾವು ಹೇಗೆ ಅರ್ಥ ಮಾಡಲು ಸಾಧ್ಯ ಎನ್ನುವ ತಿಳುವಳಿಕೆಗಳೂ ಬಂದವು. ಆಧುನಿಕ ಶಾಲೆಗಳು ನಮಗೆ ಹೊಸ ಅರಿವನ್ನು ಕೊಟ್ಟಿತು. ಶಾಲೆಗಳು ಜನರನ್ನು ಪರಿವರ್ತನೆ ಮಾಡುತ್ತದೆ ಎನ್ನುವುದು ಸ್ಪಷ್ಟ. ಶಾಲೆಯ ಕೆಲವನ್ನು ರೂಪಿಸುತ್ತದೆ ಮತ್ತು ತನಗೆ ಬೇಕಾದ ಜನರನ್ನು ರೂಪಿಸುತ್ತದೆ. ಶಾಲೆಗಳು ಅನೇಕವನ್ನು ಸಿದ್ಧಮಾಡುತ್ತವೆ. ಉನ್ನತ ಸಂಸ್ಕೃತಿ ಮತ್ತು ಕೆಳಸ್ತರದ ಸಂಸ್ಕೃತಿಯ ಪ್ರಶ್ನೆಗಳನ್ನು ಅದು ನೋಡುವುದೂ ಬೇರೆ ರೀತಿಯಲ್ಲಿ. ಉನ್ನತ ಸಂಸ್ಕೃತಿಯ ಪ್ರಶ್ನೆಗೂ ಉನ್ನತವಾದ ತಂತ್ರಜ್ಞಾನಕ್ಕೂ ಒಂದು ಸಂಬಂಧವಿದೆ. ವಾಸ್ತವವಾಗಿ ಯಾವುದೇ ಶಾಲೆಗಳಲ್ಲಿ ಚಾರಿತ್ರಿಕ ಮತ್ತು ಸಾಮಾಜಿಕವಾದ ಅನೇಕ ಸಂಗತಿಗಳನ್ನು ಮರೆಮಾಚಲಾಗುತ್ತದೆ. ಶಾಲೆಗಳು ಬುದ್ಧಿಜೀವಿಗಳನ್ನು ಉತ್ಪಾದಿಸುತ್ತವೆ. ಹೊಸವರ್ಗವು ಉದಯವಾಗುತ್ತದೆ. ಶಾಲೆಗಳು ಮತ್ತು ಬುದ್ಧಿಜೀವಿಗಳ ಚರಿತ್ರೆಗಳು ಈ ದೃಷ್ಟಿಯಿಂದ ಭಿನ್ನವಾದದ್ದೂ ಆಗಿರುತ್ತದೆ. ಆದರೆ ಕೆಲವು ಬುದ್ಧಿಜೀವಿಗಳಿಗೆ ಸೀಮಿತವಾದ ಒಂದು ಪರಿಧಿಯು ಇರುತ್ತದೆ. ಈ ತರಹದವರು ತಮ್ಮ ಜ್ಞಾನವನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳೇ ಬೇರೆಯಾಗಿರುತ್ತವೆ. ಬುದ್ಧಿಜೀವಿಗಳು ಒಂದು ಸಮಾಜದಲ್ಲಿ ವಾಸ ಮಾಡುವ ಕ್ರಮ ಮತ್ತು ಅವರ ಆಲೋಚನೆಗೆ ಇರುವ ಆಯಾಮಗಳನ್ನು ಈ ದೃಷ್ಟಿಯಿಂದ ಭಿನ್ನವಾಗಿಯೂ ನೋಡಬೇಕಾಗುತ್ತದೆ. ಹಾಗೆಂದು ಒಂದು ಸಮಾಜದಲ್ಲಿ ಲೇಖಕರಿಗೆ ಮತ್ತು ಬುದ್ಧಿಜೀವಿಗಳ ಕ್ರಿಯೆಗಳು ಶೂನ್ಯವಾದ ಪರಿಣಾಮವನ್ನು ಬೀರುತ್ತದೆ ಎಂದು

ಹೇಳುವುದಕ್ಕೆ ಆಗುವುದಿಲ್ಲ. ತಂತ್ರಜ್ಞಾನಗಳು ಬದಲಾದಂತೆ ಅದರ ಸ್ವರೂಪಕ್ಕೆ ಸರಿಯಾಗಿ ಬುದ್ಧಿಜೀವಿಗಳನ್ನು ನಿರ್ಮಾಣ ಮಾಡಲಾಗುತ್ತದೆ. ತಾಂತ್ರಿಕತೆ ಮತ್ತು ಅದರ ಜೊತೆಗೆ ಬುದ್ಧಿಜೀವಿಗಳಿಗೆ ಇರುವ ಒಡನಾಟವನ್ನು ಈ ದೃಷ್ಟಿಯಿಂದ ಭಿನ್ನವಾಗಿಯೂ ನೋಡಬೇಕಾಗುತ್ತದೆ. ನಾಗರಿಕ ಸಮಾಜವು ತನಗೆ ಬೇಕಾದ ಪ್ರಜೆಗಳನ್ನು ನಿರ್ಮಾಣ ಮಾಡಲು ಶಿಕ್ಷಣವನ್ನು ಒಂದು ಪರಿಕರವಾಗಿಯೂ ಬಳಸುತ್ತದೆ. ಆದರೆ ಶಿಕ್ಷಣವನ್ನು ಪ್ರಭುತ್ವವು ಯಾಕೆ ಮಹತ್ವದ್ದಾಗಿ ನೋಡುತ್ತದೆ ಎಂದರೆ ಅದರ ಆಸಕ್ತಿಗೆ ಅನುಗುಣವಾದ ಪ್ರಜೆಗಳನ್ನು ಅದು ಸೃಷ್ಟಿ ಮಾಡಬೇಕಾಗುತ್ತದೆ. ಅದು ರಾಜಕೀಯವಾದ ಸಮಾಜವನ್ನು ನಿರ್ಮಾಣ ಮಾಡಲು ಬೇಕಾದ ಸಿದ್ಧತೆಯನ್ನು ಶಿಕ್ಷಣದ ಮೂಲಕವೇ ಸಾಧಿಸುತ್ತದೆ. ರಾಜಕಾರಣವು ತನ್ನ ಹಿತಾಸಕ್ತಿಗೆ ಯಾವುದು ಬೇಕೋ ಅದನ್ನು ಮಾತ್ರವೇ ಹೇಳಿಕೊಡುತ್ತದೆ. ಯಜಮಾನಿಕೆಯನ್ನು ನೋಡುವಾಗ ಇದನ್ನೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದು ಅಗತ್ಯ. ಯಜಮಾನಿಕೆಯೇ ನಮಗೆ ಅನೇಕವನ್ನು ಕೊಡುತ್ತದೆ. ಅದರ ಸ್ವರೂಪವು ಕೂಡಾ ಅನೇಕ ಸಂದರ್ಭದಲ್ಲಿ ಭಿನ್ನವಾಗಿರುತ್ತದೆ. ಶಿಕ್ಷಣದ ಮೂಲಕವೇ ಅದು ಯಾವುದನ್ನು ಹೇಳುತ್ತದೆ. ಮತ್ತು ಅದನ್ನು ಹೇಗೆ ನವೀಕರಿಸುತ್ತದೆ ಎನ್ನುವುದೂ ಇಲ್ಲಿ ಬಹಳ ಮುಖ್ಯವಾಗಿದೆ. ಸರಕಾರವು ಕೊಡುವ ಶಿಕ್ಷಣಕ್ಕೆ ಒಂದು ಮಾನ್ಯತೆಯು ಇದೆ. ಪ್ರಭುತ್ವವು ಕೆಲವನ್ನು ಮಾತ್ರವೇ ನೋಡುತ್ತದೆ. ಅದು ಅದರ ಅಗತ್ಯವನ್ನು ಮಾತ್ರವೇ ಗ್ರಹಿಸುವ ಯತ್ನವನ್ನು ಸಲೀಸಾಗಿಯೂ ನೆರವೇರಿಸುತ್ತದೆ. ಅದು ಕೆಲವು ನಿರ್ದೇಶನವನ್ನು ಕೂಡಾ ಮಾಡುತ್ತದೆ. ಹಾಗೆ ನೋಡುವುದಿದ್ದರೆ ಬುದ್ಧಿಜೀವಿಗಳು ಮತ್ತು ಅವರ ನಿಲುವನ್ನು ಅದು ತನಗೆ ಬೇಕಾದಂತೆ ಪರಿವರ್ತನೆಯನ್ನು ಮಾಡುತ್ತದೆ. ಬುದ್ಧಿಜೀವಿಗಳು ಮತ್ತು ಅವರ ಚಟುವಟಿಕೆಗಳು ಮೂಲಭೂತವಾಗಿ ಹೆಚ್ಚು ನಿರ್ದಿಷ್ಟವಾಗಿರುತ್ತದೆ, ಅವರ ಚಟುವಟಿಕೆಯನ್ನು ನಾವು ಅವರ ಬರಹ ಮತ್ತು ಇತರ ಚಟುವಟಿಕೆಯಲ್ಲಿ ಕಾಣುತ್ತೇವೆ. ಸಮಾಜ ಮತ್ತು ರಾಜಕಾರಣವು ಮೂಲಭೂತವಾಗಿ ಕೆಲವು ರೀತಿಯ ಯಜಮಾನಿಕೆಯನ್ನು ಹುಟ್ಟುಹಾಕುತ್ತವೆ. ಅದರಲ್ಲಿ ಒಂದು ಶ್ರೇಣೀಕರಣವೂ ಇರುತ್ತದೆ. ಯಾವುದೇ ಶ್ರೇಣೀಕರಣದಲ್ಲಿ ತಾರತಮ್ಯವು ಇರುತ್ತದೆ. ಅದರಲ್ಲಿ ಈ ತಾರತಮ್ಯವು ಕೂಡಾ ಕೆಲವು ಪರಿಕರವನ್ನು ಹುಟ್ಟುಹಾಕುತ್ತವೆ. ಪರಿಕರಗಳು ನಮಗೆ ಅಗತ್ಯವಾಗುತ್ತವೆ. ಅದು ಪ್ರಭುತ್ವ ಮತ್ತು ಆಳಿಸಿಕೊಳ್ಳುವ ವರ್ಗಕ್ಕೆ ಎರಡಕ್ಕೂ ಸರಿಯಾಗುತ್ತದೆ. ಪ್ರಭುತ್ವವು ಒಂದು ದೃಷ್ಟಿಯಿಂದ ಕೆಲವು ಮಧ್ಯವರ್ತಿಗಳನ್ನು ಹುಟ್ಟುಹಾಕುತ್ತವೆ. ಆ ಮಧ್ಯವರ್ತಿಗಳೇ ವಾಸ್ತವವಾಗಿ ಆಡಳಿತ ವರ್ಗ. ಅದು ಅದಕ್ಕೆ ಬೇಕಾಗುತ್ತದೆ. ವಾಸ್ತವವಾಗಿ ಆಡಳಿತ ವರ್ಗವು ತನಗೆ ಬೇಕಾದ ನಿರ್ಧಾರವನ್ನು ಮಾಡುತ್ತದೆ. ಅದರಲ್ಲಿ ಎಲ್ಲರ ಕುರಿತಾದ ಆಸಕ್ತಿಯು ಇರುತ್ತದೆ ಎಂದು ಅಲ್ಲ. ಅದರ ಪರಿಣಾಮವಾಗಿ ಸಮಾಜದಲ್ಲಿ ಒಂದು ನಿರ್ದಿಷ್ಟವಾದ ಪ್ರಜ್ಞೆಯು ಕೆಲಸವನ್ನು ಮಾಡುತ್ತದೆ. ಸಮೂಹ ಮತ್ತು ಅದರ ರಚನೆಯು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆಡಳಿತಶಾಹಿಯು ಮೂಲಭೂತವಾಗಿ ಕೆಲವನ್ನು ಮಾತ್ರವೇ ರೂಪಿಸುತ್ತದೆ. ಅದರಲ್ಲಿ ಜನರಿಗೆ ಬೇಕಾದ ಪ್ರಜ್ಞೆಯೂ ಇರುತ್ತದೆ. ಕೈಗಾರಿಕೆಗಳು ಮತ್ತು ನಗರಗಳು ಮತ್ತು ಬುದ್ಧಿಜೀವಿಗಳಿಗೆ ಸಂಬಂಧವಿದೆ. ಅವರು ರಚನೆಯಾಗಿರುತ್ತಾರೆ. ಅವರು ಸಾಯತ್ತವಾದ ಸ್ವರೂಪವನ್ನು ಹೊಂದಿರುತ್ತಾರೆ ಎಂದು ಹೇಳಲು ಬರುವುದಿಲ್ಲ.

ಬುದ್ಧಿಜೀವಿಗಳು ಮತ್ತು ಅವರ ರಚನೆಗಳು ಒಂದು ರೀತಿಯಲ್ಲಿ ಇರುತ್ತದೆ. ಗ್ರಾಮದಲ್ಲಿ ವಾಸಿಸುವ ಬುದ್ಧಿಜೀವಿಗಳು ಸಂಪ್ರದಾಯವನ್ನು ಕೂಡಾ ಹೊಂದಿರುತ್ತಾರೆ, ಆದರೆ ಸಮಾಜದ ಜೊತೆಗೆ ಇರುತ್ತಾರೆ. ಒಂದು ಕೈಗಾರಿಕೆಯಲ್ಲಿ ಕೆಲಸವನ್ನು ಮಾಡುವ ವ್ಯಕ್ತಿಯು ಕೂಡಾ ನಿರ್ದಿಷ್ಟವಾದ ರಾಜಕೀಯವಾದ ಕಾರ್ಯವನ್ನು ನಿರ್ವಹಿಸುತ್ತಾನೆ. ಅವನಿಗೂ ರಾಜಕೀಯವಾದ ನಿಲುವು ಇರುತ್ತದೆ. ಒಂದು ಶಿಸ್ತು ಅತ್ಯಂತ ಉತ್ಕರ್ಷಕ್ಕೆ ಬಂದಾಗ ಅದರ ಮಿತಿಗಳೂ ನಮಗೆ ಬೇಗ ಅರ್ಥವಾಗುತ್ತದೆ. ಹೀಗಾಗಿ ಬರಹಗಾರನು ತನ್ನ ನಿಲುವನ್ನು ಪ್ರಭುತ್ವದ ಸಮರ್ಥನೆಗೆ ಬಳಸಿಕೊಂಡಾಗ ಅದರಲ್ಲಿ ಅನೇಕ ಮಿತಿಗಳು ಕಾಣಿಸುತ್ತವೆ. ಸಾಮಾಜಿಕ ಯಜಮಾನಿಕೆ ಮತ್ತು ರಾಜಕೀಯ ಯಜಮಾನಿಕೆ ಯಾವಾಗಲೂ ಭಿನ್ನವಾಗುತ್ತದೆ ಸಮಾಜದಲ್ಲಿ ಇರುವ ಯಜಮಾನಿಕೆಯು ವಾಸ್ತವವಾಗಿ ಕೆಲವು ನಿಯಮವನ್ನು ಹೊಂದಿರುತ್ತವೆ. ವ್ಯಕ್ತಿ ಮತ್ತು ಅವನ ಶಕ್ತಿಯು ಕೂಡಾ ಸಮಾಜದ ಉತ್ಪಾದನೆಯು ಆಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಇರುವ ವ್ಯಕ್ತಿತ್ವವನ್ನು ನಿರ್ಧರಿಸುವುದು ಸಮಾಜವೇ ಆಗಿರುತ್ತದೆ. ವ್ಯಕ್ತಿ ಮತ್ತು ಅವನ ಸಂಕಥನಗಳನ್ನು ನಿರ್ದಿಷ್ಟವಾದ ಸಮಾಜವು ರೂಪಿಸುತ್ತದೆ. ಯಾವುದೇ ರಾಜಕಾರಣ ಮತ್ತು ಅದರ ಸ್ವರೂಪವನ್ನು ಹೇಗೆ ಸಮಾಜವು ನಿರ್ಧರಿಸುತ್ತದೆಯೋ ಅದೇ ರೀತಿಯಲ್ಲಿ ವ್ಯಕ್ತಿ ಮತ್ತು ಅವನ ಕುರಿತಾದ ನಿಲುವನ್ನು ಕೂಡಾ ಸಮಾಜವು ನಿರ್ಧರಿಸುತ್ತದೆ. ಯಾವುದೇ ರಾಜಕಾರಣ ಮತ್ತು ಅದರ ಆಲೋಚನೆಯನ್ನು ರಾಜಕೀಯವಾದ ಕ್ರಿಯೆಗಳು ನಿರೂಪಿಸುತ್ತವೆ. ಅದರ ರೂಪಗಳೇ ನಮಗೆ ಭಿನ್ನವಾದ ಸಂಗತಿಯನ್ನು ಹೇಳುತ್ತವೆ. ಯಾವುದನ್ನು ಈವತ್ತು ಪ್ಯಾಸಿಸಂ ಎಂದು ಹೇಳುತ್ತೇವೆಯೋ ಅದರ ಶಕ್ತಿಯು ಕೂಡಾ ಹುಟ್ಟಿಕೊಂಡದ್ದು ಸಮಾಜದಿಂದ ಎನ್ನುವುದನ್ನು ಮರೆಯಲಾಗದು, ಅದು ಹಿಂಸೆಯ ಮೇಲೆ ನಿಂತಿದೆ. ಪ್ಯಾಸಿಸಂ ಅಹಂಕಾರದಿಂದ ಹುಟ್ಟಿದೆ. ಪ್ಯಾಸಿಸಂ ಮತ್ತು ಅದರ ಗುಣಗಳನ್ನು ನಾವು ಈ ದೃಷ್ಟಿಯಿಂದ ಬೇರೆಯಾಗಿ ನೋಡಬೇಕಾಗುತ್ತದೆ. ಅದಕ್ಕೆ ಬೇರೆ ಬೇರೆ ರೂಪಗಳೂ ಇವೆ. ಪ್ಯಾಸಿಸಂ ಯಾವುದೋ ಒಂದನ್ನು ಇಟ್ಟುಕೊಂಡು ಅದು ರೂಪವನ್ನು ತಳೆಯುವುದೂ ಇಲ್ಲ. ವ್ಯಕ್ತಿಯು ಪ್ಯಾಸಿಸ್ಟ್ ಆಗಲು ಅವನ ವ್ಯಕ್ತಿತ್ವದಲ್ಲಿ ಇರುವ ಅಹಂಕಾರವೂ ಕಾರಣವಾಗಿರುತ್ತದೆ. ವ್ಯಕ್ತಿಯು ಯಾವ ನಿರ್ಣಯವನ್ನು ತೆಗೆದುಕೊಳ್ಳುತ್ತಾನೆ ಮತ್ತು ಅದರ ಸ್ವರೂಪವು ಯಾವುದು ಹೇಗೆ ಆ ನಿರ್ಣಯಕ್ಕೆ ಬರುತ್ತದೆ ಎನ್ನುವುದನ್ನು ಗ್ರಹಿಸಿದರೆ ಮಾತ್ರವೇ ನಮಗೆ ಇದರ ಅರಿವು ಉಂಟಾಗುತ್ತದೆ. ನಮ್ಮ ನಂಬಿಕೆ ಮತ್ತು ಒಬ್ಬ ಪ್ಯಾಸಿಸ್ಟನ ನಂಬಿಕೆಗೆ ವ್ಯತ್ಯಾಸವಿದೆ. ಪ್ಯಾಸಿಸ್ಟ್ ಒಬ್ಬನ ಉದ್ದೇಶವು ಬೇರೆಯಾಗಿರುತ್ತದೆ. ಅವನು ಜನರನ್ನು ಒತ್ತಡಕ್ಕೆ ಸಿಕ್ಕುವಂತೆ ಮಾಡುತ್ತದೆ. ಆದರೆ ಫ್ಯಾಸಿಸಂ ಅನ್ನುವುದು ಒಂದು ರೀತಿಯಿಂದ ನಿರ್ದಿಷ್ಟವಾದ ಒಂದು ಗುರಿಯನ್ನು ಹೊಂದಿರುತ್ತದೆ. ಆದರೆ ಜನರು ಹಿಂಸೆಯನ್ನು ಅನುಭವಿಸುತ್ತಾರೆ. ಆದರೆ ಪ್ಯಾಸಿಸಂ ಅನೇಕವನ್ನು ಹಾಳು ಮಾಡಿತು. ಅದು ಜನರನ್ನು ನೋಡಿದ್ದು ಮತ್ತು ಹಿಂಸೆಯನ್ನು ಮಾಡಿದ್ದು ಈಗ ನಮಗೆ ಕತೆಯ ಹಾಗೆ ಕಾಣಿಸುತ್ತದೆ. ಆದರೆ ವಿಷಯವು ಆ ರೀತಿಯಲ್ಲಿ ಇಲ್ಲ. ಅದು ವ್ಯತ್ಯಾಸವಾಗಿದೆ. ಫ್ಯಾಸಿಸಂ ಕೆಲವನ್ನು ಮಾತ್ರವೇ ಅಂಗೀಕರಿಸುತ್ತದೆ.

ಆಧುನಿಕ ಸನ್ನಿವೇಶ ಮತ್ತು ಸಿದ್ಧಾಂತಗಳ ಅಗತ್ಯ

ಮಾರುಕಟ್ಟೆ ಮತ್ತು ಅದರ ಸಮಸ್ಯೆಯನ್ನು ಎತ್ತಿಕೊಂಡವರು ಮಾರ್ಕ್ಸ್‌ವಾದಿಗಳು. ಆದರೆ ಮಾರ್ಕ್ಸ್‌ವಾದವನ್ನು ಅಲ್ಲಗಳೆಯುವವರು ಅನೇಕ ಸಂದರ್ಭದಲ್ಲಿ ಅದನ್ನು ಹೇಳುವುದು ಅದು ಸದ್ಯಕ್ಕೆ ಉಪಯೋಗಕ್ಕೆ ಬರುವುದಿಲ್ಲ ಎಂದು ಮಾತ್ರವೇ. ಈ ದೃಷ್ಟಿಯಿಂದ ಇಲ್ಲಿ ಮತ್ತೆ ಮಾರುಕಟ್ಟೆ ಮತ್ತು ಮಾರ್ಕ್ಸ್‌ವಾದದ ಕುರಿತು ಕೆಲವು ಮಾತುಗಳನ್ನು ಹೇಳುವುದು ಸೂಕ್ತ. ಸಮಾಜವಾದ ಮತ್ತು ಅದರ ಪರಿಣಾಮಗಳನ್ನು ಅದರ ವಿರೋಧಿಗಳು ಉದ್ದೇಶಪೂರ್ವಕ ಅಪಚಾರ ಮಾಡುತ್ತಾರೆ. ಅದನ್ನು ಬೇಕಾಬಿಟ್ಟಿಯಾಗಿ ವಿವರಿಸಲು ಯತ್ನವನ್ನು ಮಾಡುತ್ತಾರೆ. ಆಧುನಿಕ ಮಾರುಕಟ್ಟೆ ಮತ್ತು ಅದರ ಸ್ವರೂಪವನ್ನು ನೋಡಿದರೆ ಸಮಾಜವಾದವು ಎಷ್ಟು ಅಗತ್ಯವಾಗುತ್ತದೆ ಎಂದು ತಿಳಿಯುತ್ತದೆ. ವಾಸ್ತವವಾಗಿ ಮಾರ್ಕ್ಸ್‌ವಾದವು ಕೆಲವು ಮಹತ್ವದ ವಿಷಯಗಳನ್ನು ಹೇಳಿದೆ. ಅದರಲ್ಲಿ ಎರಡು ಮಾತಿಲ್ಲ. ಅಂದರೆ ಯಾವುದನ್ನು ಈಗ ಮಾರುಕಟ್ಟೆ ಎಂದು ಹೇಳುತ್ತಿದ್ದೇವೆಯೋ ಅದರಲ್ಲಿ ಅನೇಕ ಸಂಗತಿಗಳು ಸೇರಿಕೊಂಡಿವೆ. ಮಾರುಕಟ್ಟೆಯು ಜನರನ್ನು ಕೇವಲ ಗಿರಾಕಿಗಳು ಎಂದು ಮಾತ್ರವೇ ಭಾವಿಸುತ್ತದೆ. ಆದರೆ ಮತ್ತೆ ಕೆಲವು ವಿಷಯಗಳನ್ನು ಇಲ್ಲಿ ಚರ್ಚಿಸಬೇಕಾದ ಅಗತ್ಯವಿದೆ. ಈವತ್ತಿನ ಮಾರುಕಟ್ಟೆಯು ಕೆಲವೇ ವ್ಯಕ್ತಿಗಳ ಹಿಡಿತದಲ್ಲಿದೆ. ವಾಸ್ತವವಾಗಿ ಮಾರುಕಟ್ಟೆಯು ಜನರ ಹಿಡಿತದಲ್ಲಿ ಇದ್ದಾಗ ಅದರ ಸ್ವರೂಪವು ಬೇರೆಯಾಗುತ್ತದೆ. ಆದರೆ ಯಾವಾಗ ನಮ್ಮ ತಿಳುವಳಿಕೆಗಳು ಸೀಮಿತವಾಗಿ ಇರುತ್ತದೆಯೋ ಆಗ ನಾವು ಮಾರುಕಟ್ಟೆಯು ಯಾವುದನ್ನು ಹೇಳುತ್ತದೆಯೋ ಅದನ್ನು ಮಾತ್ರವೇ ಸರಿಯೆಂದು ಒಪ್ಪಿಕೊಳ್ಳುತ್ತೇವೆ. ಮಾರುಕಟ್ಟೆಯನ್ನು ನಾವು ವ್ಯಕ್ತಿ ಮತ್ತು ಅವನ ಲಾಭದ ಮಾನದಂಡದಲ್ಲಿ ಮಾತ್ರವೇ ನೋಡುತ್ತೇವೆಯೋ ಆಗ ವ್ಯಕ್ತಿಗಳು ಮಾರುಕಟ್ಟೆಯನ್ನು ನಿಯಂತ್ರಿಸುತ್ತಾರೆ. ಇದು ಮಾರುಕಟ್ಟೆಯ ದೃಷ್ಟಿಯಿಂದ ಅಪಾಯಕಾರಿಯೂ ಹೌದು. ವಾಸ್ತವವಾಗಿ ಮಾರುಕಟ್ಟೆ ಮತ್ತು ಅದರ ಹಿಂದೆ ಇರುವ ಕೆಲವು ಸಮಸ್ಯೆಗಳನ್ನು ಮಾರ್ಕ್ಸ್ ಹೇಳಿದ್ದು ನಿಜ.

ಯಾವಾಗ ನಾವು ಮಾರುಕಟ್ಟೆಯನ್ನು ಪ್ರತ್ಯೇಕವಾದ ವ್ಯವಸ್ಥೆ ಎಂದು ಭಾವಿಸುತ್ತೇವೆಯೋ ಆಗ ಅದನ್ನು ಸಮಾಜವಾದದ ವ್ಯಾಪ್ತಿಯೊಳಗೆ ತರುವುದು ಇಲ್ಲ. ಇದು ಸಮಸ್ಯೆಯು ಆಗಿದೆ. ವಾಸ್ತವವಾಗಿ ಮಾರುಕಟ್ಟೆ ಮತ್ತು ಅದರ ಹಿಂದಿರುವ ಸಮಾಜದ ಸ್ವರೂಪವನ್ನು ನಾವು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು: ಸಾಮಾಜಿಕ ಜೀವನ ಮತ್ತು ಅದರ ಅಗತ್ಯಕ್ಕಾಗಿಯೇ ಮಾರುಕಟ್ಟೆಯು ಹುಟ್ಟಿಕೊಂಡಿದೆ. ಆದರೆ ವ್ಯಕ್ತಿ ಮತ್ತು ಅವನ ಲಾಭ ಮಾತ್ರವೇ ಮುಖ್ಯವಾಗಿರುವುದು ಇಲ್ಲ. ಮಾರ್ಕ್ಸ್‌ವಾದವು ಮಾರುಕಟ್ಟೆಯನ್ನು ವಿರೋಧಿಸುವುದಿಲ್ಲ. ಅದು ವಿರೋಧಿಸುವುದು ಅದರ ಹಿಂದೆ ಇರುವ ನಿಜವಾದ ವ್ಯಕ್ತಿ ಕೇಂದ್ರಿತ ಆಸಕ್ತಿ ಮಾತ್ರವೇ. ಮಾರುಕಟ್ಟೆಗೆ ಅದರದೇ ಆದ ಒಂದು ನಿಯಮವು ಇದೆ. ಅದು ಬೇಡಿಕೆ ಮತ್ತು ಪೂರೈಕೆಗೆ ಸಂಬಂಧಪಟ್ಟದ್ದೂ ಹೌದು. ಯಾವಾಗ ಒಂದು ವಸ್ತುವಿಗೆ ವಿಶಿಷ್ಟವಾದ ವಿನಿಮಯವು ಇರುತ್ತದೆಯೋ ಆಗ ಅದರ ಪೂರೈಕೆಯ ಪ್ರಶ್ನೆಯು ಬರುತ್ತದೆ. ಅನೇಕರು ಹೇಳುವಂತೆ ಮಾರುಕಟ್ಟೆಯ ಸ್ವರೂಪವು ಆಯಾಕಾಲಕ್ಕೆ ಸಂಬಂಧಪಟ್ಟಂತೆ ಬದಲಾಗುತ್ತದೆ. ಅದು ಒಂದೇ ರೂಪದಲ್ಲಿ ಇರುವುದು ಅಸಾಧ್ಯ. ಜನರಿಗೂ ಮಾರುಕಟ್ಟೆಯ ಅಗತ್ಯವೂ ಇರುತ್ತದೆ. ಆ ಅಗತ್ಯವನ್ನು ನಾವು ಪ್ರಶ್ನಿಸುವಂತೆ ಇಲ್ಲ. ಅದು ಒಂದು ಬಗೆಯ ಸಾಮಾಜಿಕ ಸಂಬಂಧವನ್ನು ನಿರೂಪಿಸುತ್ತದೆ. ಅದನ್ನು ನಾವು ಬೇರೆ ಬೇರೆ ಚಾರಿತ್ರಿಕ ಸಂಬಂಧದ ಹಿನ್ನೆಲೆಯಲ್ಲಿ ಗ್ರಹಿಸಬೇಕಾದ ಅಗತ್ಯವೂ ಇರುತ್ತದೆ. ಆಮದು ಮತ್ತು ರಫ್ತು ಎರಡೂ ನಿಜವಾದ ಅರ್ಥದಲ್ಲಿ ಒಂದು ಸಾಮಾಜಿಕ ಸಂಬಂಧ. ಆದರೆ ವಸ್ತು ಮತ್ತು ಅದರ ಪೂರೈಕೆ, ಅದರ ಸ್ವರೂಪ ಮತ್ತು ಅದರ ಬೇಡಿಕೆ, ಅದು ರೂಪಿಸುವ ಜನರ ಸಂಬಂಧವನ್ನು ನಾವು ನಿರ್ದಿಷ್ಟವಾಗಿಯೂ ಗಮನಿಸಬೇಕಾಗುತ್ತದೆ. ಸಮಾಜವಾದಿ ಮಾರುಕಟ್ಟೆಯು ಹೇಳುವ ಮತ್ತೊಂದು ಸಂಗತಿಯು ಬಂಡವಾಳವಾದಕ್ಕೆ ಸಂಬಂಧಪಟ್ಟಂತೆ ಇರುತ್ತದೆ. ಯಾವುದೇ ಒಂದು ಮಾರುಕಟ್ಟೆಯನ್ನು ಕೇವಲ ಒಬ್ಬ ಬಂಡವಾಳವಾದಿಯು ರೂಪಿಸಿಲ್ಲ. ಅದು ಹುಟ್ಟಿದ್ದು ಜನರ ಅಗತ್ಯಕ್ಕಾಗಿ. ಮತ್ತು ಇದರಲ್ಲಿ ಮೂಲತಃ ಒಂದು ಉದ್ದೇಶವಿರುತ್ತದೆ. ಅದು ಜನರಿಗೆ ಅಗತ್ಯವಾದ ವಸ್ತುಗಳನ್ನು ಪೂರೈಸುವ ಉದ್ದೇಶ. ಎಷ್ಟೋ ಸರ್ತಿ ನಾವು ನೋಡುವ ಮಾರುಕಟ್ಟೆಯಲ್ಲಿ ವಿಶಿಷ್ಟವಾದ ಮತ್ತು ತಾತ್ಕಾಲಿಕವಾದ ಸಂಬಂಧಗಳು ಇರುತ್ತವೆ. ಸಮಾಜವಾದಿ ದೃಷ್ಟಿಕೋನವನ್ನು ನಾವು ಮಾರುಕಟ್ಟೆಗೆ ಅನ್ವಯಿಸುವುದು ಎಂದರೆ ಬಂಡವಾಳವಾದವನ್ನು ನಿರಾಕರಿಸುವುದು ಹೌದು. ವ್ಯಕ್ತಿಯನ್ನು ಕೇಂದ್ರವಾಗಿ ಇರಿಸಿಕೊಂಡ ಯಾವುದೇ ಮಾರುಕಟ್ಟೆಯ ಸಮಾಜ ಮತ್ತು ಅದರ ಅಗತ್ಯಗಳನ್ನು ಪರಿಗಣಿಸುವುದು ಇಲ್ಲ. ಇದರ ಪರಿಣಾಮವಾಗಿ ಕೊಳ್ಳುವವರಿಗೆ ಸಮಸ್ಯೆಯು ಆಗುತ್ತದೆ. ಅದನ್ನು ಏಕಸ್ವಾಮ್ಯ ಎಂದು ಹೇಳುತ್ತೇವೆ. ಅದರ ಆರ್ಥಿಕ ಚಲಾವಣೆಯು ನಮ್ಮ ಗಮನಕ್ಕೆ ಬರುವುದು ಇಲ್ಲ. ಆದರೆ ಆರ್ಥಿಕ ನೀತಿಯು ನಮಗೆ ಬಹಳ ದೊಡ್ಡ ಸಮಸ್ಯೆಯನ್ನು ತಂದು ಹಾಕುತ್ತದೆ. ಮತ್ತು ಅದರಲ್ಲಿ ಬರುವ ಲಾಭವಾಗಲೀ ಮತ್ತಿತರ ಸಮಸ್ಯೆಯೇ ಆಗಲೀ ಮೂಲಭೂತವಾಗಿ ಒಂದು ಸ್ವಾತಂತ್ರ್ಯವನ್ನು ಮಾತ್ರವೇ ಹೇಳುತ್ತದೆ. ಮಾರುಕಟ್ಟೆ ಸಮಾಜವಾದವು ಈ ದೃಷ್ಟಿಯಿಂದ ಭಿನ್ನವಾಗಿದೆ. ಅದನ್ನೇ ಮಾರ್ಕ್ಸ್ ಹೇಳಿದ್ದು: ಸಮಾಜವಾದಿ ಮಾರುಕಟ್ಟೆ ಮೂರು ಅಂಶಗಳನ್ನು ನಿರಾಕರಿಸುತ್ತದೆ. ಮೊದಲನೆಯದಾಗಿ ಅದು ಖಾಸಗಿ ಒಡೆತನವನ್ನು ನಿರಾಕರಿಸುತ್ತದೆ. ಎರಡನೆಯದಾಗಿ

ಅದರಲ್ಲಿ ವರ್ಗೀಕರಣಗಳ ಸಮಸ್ಯೆಯು ಇಲ್ಲ. ಮೂರನೆಯದಾಗಿ ಅದರಲ್ಲಿ ಬರುವ ಶೋಷಣೆ ರಹಿತವಾದ ಒಂದು ಸ್ಥಿತಿಯು ಬಹಳ ಮುಖ್ಯ. ಲಾಭವೇ ಅದರ ಉದ್ದೇಶವಲ್ಲ. ಅದರ ಬದಲು ಅದರಲ್ಲಿ ಹಂಚಿಕೆಯು ಮಾತ್ರವೇ ಬಹಳ ಮುಖ್ಯ. ಯಾರು ಉತ್ಪಾದಿಸಿದ್ದಾರೆಯೋ ಅವರ ಮೇಲೆಯೇ ಈ ವ್ಯವಸ್ಥೆಯು ಗಮನವನ್ನು ನೀಡುತ್ತದೆ. ಅದರ ಅಗತ್ಯವಿದೆ. ಅತ್ಯಾಧುನಿಕವಾದ ಬಂಡವಾಳವಾದದ ಕುರಿತು ಬೇರೆ ಬೇರೆ ನಿಲುವುಗಳಿವೆ. ಕೆಲವರು ಇದರಿಂದಲೇ ಮತ್ತೆ ಹೊಸ ವ್ಯವಸ್ಥೆಯು ಹುಟ್ಟಬಲ್ಲದು ಎಂದು ಭಾವಿಸಿದ್ದಾರೆ. ಇದರಲ್ಲಿ ಅಂದರೆ ಅತ್ಯಾಧುನಿಕವಾದ ಈಗಿನ ಮಾರುಕಟ್ಟೆಯು ಒಂದು ದೃಷ್ಟಿಯಿಂದ ಕ್ರಾಂತಿಕಾರಕವೂ ಆಗಿದೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ಸಮಾಜವಾದಿ ಮಾರುಕಟ್ಟೆಯಲ್ಲಿಯೂ ಅನೇಕ ರೀತಿಯ ವೈರುಧ್ಯಗಳು ಇರುತ್ತವೆ ಎಂದು ಕೆಲವರು ಭಾವಿಸುತ್ತಾರೆ. ನಿರುದ್ಯೋಗ, ವ್ಯಕ್ತಿಯ ಶೋಷಣೆ, ವ್ಯಕ್ತಿಯ ದೌರ್ಬಲ್ಯಗಳು ಈ ವ್ಯವಸ್ಥೆಯಲ್ಲಿ ಇರುತ್ತದೆ. ಸಮಾಜವಾದಿ ಮಾರುಕಟ್ಟೆಯಲ್ಲಿಯೂ ಅಸಮತೆಯು ಇರುತ್ತದೆ ಎಂದು ಕೆಲವರು ವಾದಿಸುತ್ತಾರೆ. ಆದರೆ ಇದಕ್ಕೆ ಪೂರಕವಾಗಿ ನಾವು ಮತ್ತೊಂದು ವಿಷಯವನ್ನು ಇಲ್ಲಿ ಗಮನಿಸಬೇಕಾಗುತ್ತದೆ: ಸಮೂಹ ಕೇಂದ್ರಿತ ಬಂಡವಾಳವಾದದಲ್ಲಿ ಲಾಭವನ್ನು ಸರಳವಾಗಿ ಹಂಚುತ್ತಾರೆ ಎನ್ನುವುದು ಸರಿಯಾದ ಮಾತು ಅಲ್ಲ. ಅದರಲ್ಲಿಯೂ ಸಮಾಜದ ಅಗತ್ಯವನ್ನು ಅದು ನಿರಾಕರಿಸುವ ಸಾಧ್ಯತೆಯು ಇರುತ್ತದೆ ಮತ್ತು ಲಾಭವನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ ಅನ್ನುವುದಕ್ಕೆ ಯಾವುದೇ ಪುರಾವೆಗಳು ಇಲ್ಲ. ಅನೇಕ ಸಂದರ್ಭದಲ್ಲಿ ಇಂತಹ ವ್ಯವಸ್ಥೆಯು ವಸ್ತುವಿನ ಗುಣಮಟ್ಟವನ್ನು ಕಾಯ್ದಿಡುತ್ತದೆ ಎಂದು ಭಾವಿಸಿಕೊಳ್ಳುವುದು ಸಾಧ್ಯವಿಲ್ಲ. ಎಷ್ಟೋ ಸರ್ತಿ ಕಾಣಿಸಿಕೊಳ್ಳುವ ಮಾರುಕಟ್ಟೆಯ ಏರುಪೇರುಗಳು ಎಲ್ಲರನ್ನು ಬಾಧಿಸುವುದೂ ಅಷ್ಟೇ ನಿಜವಾಗಿದೆ. ಅನೇಕ ಸಂಗತಿಗಳಿಗೆ ಸ್ಥಿರವಾದ ಒಂದು ಮಾರುಕಟ್ಟೆ ಎನ್ನುವುದೇ ಇರುವುದಿಲ್ಲ. ಅದು ಬದಲಾಗುತ್ತದೆ. ಮತ್ತು ಅದರ ಬೆಲೆಯಲ್ಲಿ ಏರಿಳಿತಗಳೂ ಆಗುತ್ತವೆ. ಆದರೆ ಅದನ್ನೂ ಕೂಡಾ ನಾವು ಸಾಮಾಜಿಕ ರಚನೆ ಮತ್ತು ಅದರ ಬೇಡಿಕೆಯ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಯಾವುದೇ ಒಂದು ವಸ್ತುವಿನ ಬೆಲೆಯು ಕೂಡಾ ಖಚಿತವಾಗುವುದು ಅದರ ಮೌಲ್ಯದಿಂದ. ಆಯಾ ಮೌಲ್ಯಗಳಿಗೂ ಅದರ ಬೇಡಿಕೆಗೂ ಒಂದು ಸಂಬಂಧವಿರುತ್ತದೆ. ಯಾವುದೇ ಉತ್ಪಾದನೆಯು ಆಗಬೇಕು ಎಂದಾದರೆ ಅದರಲ್ಲಿ ಮೌಲ್ಯವು ಇರಬೇಕಾಗುತ್ತದೆ. ಆ ಮೌಲ್ಯವನ್ನು ಅದರ ಉಪಯೋಗದ ಹಿನ್ನೆಲೆಯಿಂದ ಮಾತ್ರವೇ ಗಳಿಸಬೇಕಾಗುತ್ತದೆ. ಅದಕ್ಕೆ ಒಂದು ನಿಜವಾದ ತಳಹದಿಯೂ ಬೇಕಾಗುತ್ತದೆ. ನಿಜವಾದ ತಳಹದಿಯೆಂದರೆ ಆಯಾ ವಸ್ತುವು ಮಾರುಕಟ್ಟೆಯಲ್ಲಿ ಅದು ಪಡೆಯುವ ಉಪಯೋಗ. ಅದಕ್ಕೆ ಮಾನದಂಡಗಳು ಇರುತ್ತವೆ. ಸಂಪತ್ತು ಮತ್ತು ಹಂಚಿಕೆಯೂ ಅದರ ಮಾನದಂಡವಾಗಿದೆ. ಸ್ಥಳೀಯ ಉತ್ಪಾದನೆ ಮತ್ತು ಅದರ ಬೇಡಿಕೆಯು ಒಂದು ರೂಪದಲ್ಲಿ ಇರುತ್ತದೆ. ಅದರ ಸ್ವರೂಪವೂ ಆಯಾ ಅಗತ್ಯಕ್ಕೆ ತಕ್ಕಂತೆ ರೂಪುಗೊಂಡಿರುತ್ತದೆ. ಅದರದೇ ಆದ ಒಂದು ಯೋಜನೆಯೂ ಅದಕ್ಕೆ ಇರುತ್ತದೆ. ಅದನ್ನು ನಾವು ಗಣನೆಗೆ ತಂದುಕೊಳ್ಳಬೇಕಾಗುತ್ತದೆ. ಯಾವುದೇ ಒಂದು ವಸ್ತುವು ಮಾರುಕಟ್ಟೆಯ ಚಲಾವಣೆಗೆ ಅಗತ್ಯವಿಲ್ಲ ಎಂದು ಹೇಳುತ್ತೇವೆಯೋ ಆಗ ಅದು ನಿರಾಕರಣೆಗೆ ಗುರಿಯಾಗುತ್ತದೆ. ಅಧಿಕಾರವು ಈ ದೃಷ್ಟಿಯಿಂದ ಅನೇಕವನ್ನು

ನಿಯಂತ್ರಿಸುತ್ತದೆ. ಖಾಸಗಿ ಲಾಭ ಮತ್ತು ಅದರ ಪರಿಣಾಮವು ಒಂದು ಬಗೆಯದಾದರೆ ಪ್ರಭುತ್ವವು ನಿರ್ಧರಿಸುವ ಮೌಲ್ಯವು ಮತ್ತೊಂದು ಬಗೆಯದು. ಇದರ ಜೊತೆಗೆ ನಾವು ಯೋಚನೆಯನ್ನು ಮಾಡಬೇಕಾದ ಮತ್ತೊಂದು ಅಂಶವಿದೆ. ಯಾವುದೇ ಒಂದು ವಸ್ತು ಸಮುದಾಯದ ಅಗತ್ಯಕ್ಕೆ ಬೇಕಾಗುತ್ತದೆ ಎಂದಾದರೆ ಅದರ ಸ್ವರೂಪವು ಮತ್ತೊಂದು ಬಗೆಯಲ್ಲಿ ಇರುತ್ತದೆ. ಔಷಧಿ, ಆಹಾರ, ಶಿಕ್ಷಣ, ಸಾರಿಗೆ ಮುಂತಾದವುಗಳು ಅಗತ್ಯವಾದ ಸಾಮಾಗ್ರಿಗಳು. ಇವುಗಳು ಸಮುದಾಯದ ಅಗತ್ಯಗಳು ಹೌದು. ಔಷಧಿಯನ್ನು ಯಾರೂ ಐಷಾರಾಮಿ ಎಂದು ಹೇಳುವುದಿಲ್ಲ. ಆದರೆ ಇದರಲ್ಲಿಯೂ ಆಗುವ ಅನೇಕ ಅನಾಹುತಗಳನ್ನು ನಾವು ಕಂಡಿದ್ದೇವೆ. ಇದೇ ರೀತಿಯಲ್ಲಿ ನಾವು ಕಲೆ ಮುಂತಾದವುಗಳನ್ನು ಯೋಚನೆ ಮಾಡಬೇಕು. ಅದು ಸಮಾಜಕ್ಕೆ ಅಗತ್ಯವಿದೆ. ಅದು ಬರೀ ಕನಸುಗಳಿಗೆ ಮಾತ್ರವೇ ಸಂಬಂಧಪಟ್ಟದ್ದು ಎಂದು ಹೇಳಬೇಕಾದ ಅಗತ್ಯವಿಲ್ಲ. ಕಲೆ ಮತ್ತು ಅನೇಕ ಸಂಗತಿಗಳನ್ನು ನೋಡುವಾಗ ನಾವು ಅದರ ಸ್ವರೂಪ ಮತ್ತು ಉಪಯೋಗವನ್ನು ನಾವು ಗಮನಕ್ಕೆ ತಂದುಕೊಳ್ಳುವುದು ಅಗತ್ಯವೂ ಆಗಿದೆ. ಅಂದರೆ ಅನೇಕ ಸಂದರ್ಭದಲ್ಲಿ ಪ್ರಭುತ್ವವು ತನ್ನ ನಿರ್ಣಯವನ್ನು ಕಲೆಯ ಮೇಲೆ ಹೇರುತ್ತದೆ. ಇದರಿಂದಾಗಿ ಅದರ ಸಾಮಾಜಿಕ ಆಶಯಗಳು ಗೈರುಹಾಜರಿಯಾಗುವ ಅಪಾಯಗಳೂ ಇರುತ್ತವೆ. ಸಮುದಾಯ ಮತ್ತು ಅದರ ಏಳಿಗೆಗೆ ದುಡಿಯುವ ಮಾಧ್ಯಮಗಳಿಗೆ ಒಂದು ಬಗೆಯ ಸ್ವಾಯತ್ತತೆಯೂ ಇರುತ್ತದೆ. ಅದು ಜನರ ಉಪಯೋಗಕ್ಕೆ ಬರುತ್ತದೆ. ಆದರೆ ಅದೇ ರೀತಿಯಲ್ಲಿ ಪತ್ರಿಕೆಗಳು, ಚಲನಚಿತ್ರಗಳು, ಇಂತವುಗಳಿಗೆ ಸಾಮೂಹಿಕ ಒಡೆತನವು ಬೇಕಾಗುತ್ತದೆ. ಅವುಗಳನ್ನು ಜನರು ಆರಿಸಿಕೊಂಡರೆ ಯಾವುದೇ ಅಪಾಯಗಳು ಬರುವುದು ಅಸಾಧ್ಯ. ಯಾವುದೇ ಮಾಧ್ಯಮಗಳು ಮೂಲಭೂತವಾಗಿ ಒಂದು ಖಚಿತತೆಯನ್ನು ಕಾಪಾಡಿಕೊಳ್ಳುವ ಅಗತ್ಯವಂತೂ ಇದ್ದೇ ಇದೆ. ಅದು ಅರಾಜಕವಾಗ ಕೂಡದು. ಮತ್ತು ಅದಕ್ಕೆ ಪ್ರೇರೆಪಣೆಯನ್ನೂ ನೀಡಬಾರದು. ಜನಪ್ರಿಯತೆ ಎನ್ನುವುದು ಒಂದೇ ಮಾನದಂಡವಾಗುವುದು ಅಗತ್ಯವಿಲ್ಲ. ಮತ್ತೆ ಹೇಳಬೇಕೆಂದರೆ ಯಾವುದೇ ಕಲೆಯು ಮನುಷ್ಯರನ್ನು ದಿಕ್ಕಾಪಾಲು ಮಾಡುವುದು ಸರಿಯಾದ ಕ್ರಮವಲ್ಲ. ಹಾಗೆಂದು ಇದನ್ನು ಹೇಳುವಾಗ ಯಾವುದೇ ಕಲಾವಿದನಿಗೆ ಕಮ್ಯುನಿಸಂ ಸ್ವಾತಂತ್ರ್ಯವನ್ನು ಕೊಡುವುದಿಲ್ಲ ಎನ್ನುವುದು ಕೇವಲ ಕಪೋಲಕಲ್ಪಿತವಾದ ಕತೆಯಾಗಿದೆ. ಕಲೆಗೆ ಜವಾಬ್ದಾರಿಯು ಇರಬೇಕೆಂದು ಹೇಳುವುದು ಮಾತ್ರವೇ ಇಲ್ಲಿಯ ಉದ್ದೇಶವಾಗಿದೆ. ಆದರೆ ಅನೇಕ ಕಲಾವಿದರು ಉತ್ಪಾದನೆಯ ಘಟಕವಾಗುವುದಂತೂ ನಮಗೆ ಕಾಣುತ್ತದೆ. ಯಾವುದೇ ಕಲಾವಿದನು ತನ್ನ ಕಲೆಯನ್ನು ಬಂಡವಾಳವಾದಕ್ಕೆ ಬಲಿಪಶುವಾದರೆ ಅದು ಏನು ಎಂದು ಯೋಚಿಸಬೇಕಾದ ಅಗತ್ಯವಾಗಿದೆ. ಜನಪ್ರಿಯವಾದ ಕಲೆಯು ಇತರ ಕಲೆಗಳಿಗಿಂತ ಕನಿಷ್ಟವಾದದ್ದು ಎಂದು ಹೇಳಬೇಕಾದ ಅಗತ್ಯವೂ ಇಲ್ಲ. ನಲ್ಸನ್ ಮಾಂಡೇಲ ಜನಪ್ರಿಯ. ಆದರೆ ಅವನು ಉಳಿದವರಿಗಿಂತ ಕೆಳಗಿನವನು ಎಂದು ಅರ್ಥವಲ್ಲ. ಅಸಂಖ್ಯಾತ ಜನರು ಅನೇಕವನ್ನು ಓದುತ್ತಾರೆ. ಆದರೆ ಅವರು ಓದುವುದು ವಿಶೇಷ ತಜ್ಞತೆಯನ್ನು ಹೇಳುವ ಕೃತಿಗಳನ್ನು ಅಲ್ಲವೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಇದರ ಅರ್ಥವೆಂದರೆ ಜನಪ್ರಿಯವಾದುದು ಕೀಳು ಎಂದಲ್ಲ. ಆದರೆ ಕಲಾವಿದನು ತಾನು ಯಾವುದಕ್ಕೆ ಬದ್ಧನಾಗಿದ್ದೇನೆ ಎಂದು ಹೇಳುವುದು ಅಗತ್ಯ. ಮತ್ತೆ ಹಳೆಯದಕ್ಕೆ

ಹೋಗುತ್ತೇವೆ ಅಥವಾ ವರ್ತಮಾನವನ್ನು ಬಿಡುತ್ತೇವೆ ಎಂದರೆ ಉಪಯೋಗವಿಲ್ಲ. ಅದರ ಅರಿವು ನಮಗೆ ಇರಬೇಕಾಗುತ್ತದೆ. ನಾವು ಬಂಡವಾಳವಾದದ ಪೂರ್ವ ಸ್ಥಿತಿಗೆ ನಾವು ಹೋಗುವಂತೆ ಇಲ್ಲ. ಕಲಾವಿದರು ಈ ದೃಷ್ಟಿಯಿಂದ ಗಮನವನ್ನು ನೀಡುವ ಅಗತ್ಯವಿದೆ. ಬಂಡವಾಳವಾದವನ್ನು ನೋಡುವುದು ಮತ್ತು ಅದರ ಸ್ವರೂಪವನ್ನು ಗ್ರಹಿಸುವುದು ಈಗ ಅಷ್ಟು ಸುಲಭವಾಗಿಲ್ಲ. ಬಂಡವಾಳವನ್ನು ಈಗ ನಾವು ನೋಡುವ ಕ್ರಮಗಳು ಬೇರೆಯಾಗುತ್ತಿವೆ. ಮತ್ತು ಅದರ ಸ್ವರೂಪವನ್ನೂ ಈಗ ಸುಲಭವಾಗಿ ಗ್ರಹಿಸುವುದು ಕಷ್ಟವಾಗಿದೆ. ಜಾಗತೀಕರಣವು ಈಗ ವಿಸ್ತಾರವಾಗುತ್ತಾ ಹೋಗಿದೆ. ಹೊಸ ರೀತಿಯ ಆರ್ಥಿಕತೆಯ ಚಟುವಟಿಕೆಯು ಬಂದಿದೆ. ಮತ್ತು ಅದರಲ್ಲಿ ಹಿಂದೆ ಆದ ಚರಿತ್ರೆಯ ಸ್ವರೂಪವೂ ಕಾಣಿಸುವುದು ಇಲ್ಲ. ಕಳೆದು ಹೋದ ಚಟುವಟಿಕೆಯು ಈಗ ಭಿನ್ನವಾಗಿದೆ. ಅಂದರೆ ಹಿಂದೆ ಇದ್ದ ಆರ್ಥಿಕತೆಗೆ ಇದ್ದ ಏಕತೆಯೂ ಕಾಣೆಯೂ ಆಗಿದೆ. ಆಧುನಿಕತೆಯು ಈಗ ಹೊಸ ರೀತಿಯ ಏಕಾಂತವಾದಕ್ಕೆ ಕಾರಣವಾಗಿದೆ. ಮತ್ತು ಇದರ ಪರಿಣಾಮವಾಗಿ ಯಾವುದೇ ಒಂದು ಚಟುವಟಿಕೆಯನ್ನು ಮಾತ್ರವೇ ನಾವು ನೋಡುವಂತೆ ಇಲ್ಲ. ಮತ್ತು ಅದು ಸರಿಯಾದ ವಿಕಾಸ ಕ್ರಮವಾಗದೇ ಹೋದದ್ದರಿಂದ ಅದರ ಸ್ವರೂಪದಲ್ಲಿಯೇ ಅನೇಕ ಸಮಸ್ಯೆಗಳು ಇವೆ. ಜಾಗತೀಕರಣವು ಒಂದು ಹೊಸದಾದ ಮಾರುಕಟ್ಟೆಯನ್ನು ಅವಲಂಬಿಸಿದ ವ್ಯವಸ್ಥೆ. ಜಾಗತೀಕರಣದ ರಚನೆಯು ಅತ್ಯಂತ ಭಿನ್ನವಾದ ಒಂದು ಚಟುವಟಿಕೆಯೂ ಆಗಿದೆ. ಅನೇಕ ಸಂದರ್ಭದಲ್ಲಿ ನಾವು ಎದುರು ಹಾಕಿಕೊಂಡ ಪ್ರಶ್ನೆಗಳನ್ನು ಅಷ್ಟು ಸುಲಭವೆಂದು ಹೇಳಬೇಕಾಗಿಯೂ ಇಲ್ಲ. ಈಗ ನಮ್ಮ ಪರಿಸ್ಥಿತಿಯು ಅತ್ಯಂತ ಸಂಕೀರ್ಣವಾಗಿದೆ. ಮತ್ತು ಅದರಿಂದ ನಾವು ಹೊರಗೆ ಬರುವ ಸ್ಥಿತಿಯಲ್ಲಿ ನಾವು ಇಲ್ಲವಾಗಿದ್ದೇವೆ. ಮತ್ತು ಅದನ್ನು ದಾಟುವುದು ಹೇಗೆ ಎನ್ನುವುದೇ ಈಗ ದೊಡ್ಡ ಪ್ರಶ್ನೆಯಾಗಿದೆ. ಜಾಗತೀಕರಣದಲ್ಲಿ ಇರುವ ವ್ಯವಸ್ಥೆಯು ಸರಳವಾಗಿಯೂ ಇಲ್ಲ. ಅದು ಸಂಕೀರ್ಣವಾಗಿದೆ. ಮತ್ತು ಅದರಲ್ಲಿ ಗುಪ್ತವಾದ ಅನೇಕ ಸಂಗತಿಗಳೂ ಇವೆ. ಇದರ ತಾತ್ವಿಕ ಸಂಗತಿಗಳು ಬೇರೆಯಾಗಿವೆ. ಅತ್ಯಂತ ಸಂಕೀರ್ಣವಾದ ಈ ಪರಿಸ್ಥಿತಿಯಲ್ಲಿ ನಾವು ಯಾವ ಕಡೆಗೆ ಹೋಗಬೇಕು ಎನ್ನುವುದೇ ಅನೇಕರಿಗೆ ತಿಳಿಯುತ್ತಿಲ್ಲ. ಅದು ನಿಧಾನವಾಗಿ ಮತ್ತು ಹಂತ ಹಂತವಾಗಿ ಬೆಳೆದ ಸಂಗತಿಯೂ ಆಗಿಲ್ಲ. ಹಾಗೆ ನೋಡುವುದಿದ್ದರೆ ಆಧುನಿಕವಾದ ಆರ್ಥಿಕತೆಯೇ ವಾಸ್ತವವಾಗಿ ದೊಡ್ಡದಾದ ದ್ವಂದ್ವದಲ್ಲಿ ಮುಳುಗಿದ ಹಾಗೆ ಕಾಣಿಸುತ್ತದೆ. ಜಾಗತೀಕರಣವನ್ನು ನಾವು ತಾತ್ವಿಕವಾಗಿಯೇ ಎದುರಿಸಬೇಕಾಗುತ್ತದೆ. ಅದರ ಅಗತ್ಯವೂ ಇದೆ. ಈಗ ನಮ್ಮ ಎದುರು ಅನೇಕ ಸಂಗತಿಗಳು ಇವೆ. ಮತ್ತು ಅದನ್ನು ಹೇಗೆ ನೋಡಬೇಕು ಮತ್ತು ಅದನ್ನು ತಾತ್ವಿಕವಾಗಿಯೇ ಹೇಗೆ ನಿವಾರಿಸಿಕೊಳ್ಳಬೇಕು ಎನ್ನುವುದು ಪ್ರಶ್ನೆ. ಮತ್ತು ಅದರಲ್ಲಿ ಯಾವುದೇ ಸಂಗತಿಯನ್ನು ನಾವು ತೆಗೆದುಕೊಂಡರು ಅದರ ಸಮಸ್ಯೆಯು ಅಷ್ಟು ಬೇಗನೆ ಬದಲಾಗುವುದು ಇಲ್ಲ. ಮಾರ್ಕ್ಸ್ ವಾಸ್ತವವಾಗಿ ಸಿದ್ಧಾಂತವನ್ನು ಒಂದು ನಿರ್ದಿಷ್ಟವಾದ ಸಂಗತಿಯಂತೆ ಕಟ್ಟಿದ್ದಾನೆ. ಜಾಗತೀಕರಣವು ನಿರ್ದಿಷ್ಟವಾಗಿ ಇಂತಹುದೇ ಎನ್ನುವ ವ್ಯಾಪ್ತಿಯನ್ನು ದಾಟಿದೆ. ಅದರ ಚಿಂತನೆಗಳನ್ನು ನಾವು ಒಂದು ದಿಕ್ಕಿನಿಂದ ಮಾತ್ರವೇ ನೋಡಲು ಬರುವುದಿಲ್ಲ. ಅದರ ವಿಷಯಗಳು ಹಲವು ಇದೆ. ವಾಸ್ತವವಾಗಿ ಅದಕ್ಕೆ ಬಹಳ ದೊಡ್ಡದಾದ ತಾತ್ವಿಕತೆಯ ಬೆನ್ನೆಲುಬು ಕೂಡಾ ಇಲ್ಲ.

ಆಧುನಿಕ ಆರ್ಥಿಕತೆಯ ಸಮಸ್ಯೆಯು ಕೂಡಾ ಬಹಳ ವಿಚಿತ್ರವಾಗಿದೆ. ಮತ್ತು ಅದನ್ನು ನೋಡುವಾಗ ಅದರ ಸಾಧ್ಯತೆಯನ್ನು ಭಿನ್ನವಾಗಿಯೂ ನೋಡಬೇಕಾಗುತ್ತದೆ. ಅದು ಬರೀ ಮಾರುಕಟ್ಟೆಯಾಗುವಂತೆ ನೋಡುವುದು ಅಸಾಧ್ಯವಾಗುತ್ತದೆ. ಮಾರ್ಕ್ಸ್ ಬಂಡವಾಳವಾದವನ್ನು ವಿವರಿಸುವಾಗ ಅದನ್ನು ಒಂದು ವ್ಯಕ್ತವಾದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡುತ್ತಾನೆ. ಆರ್ಥಿಕವಾದ ಪರಿಸ್ಥಿತಿಯು ಹೇಗೆ ಬದಲಾವಣೆಯನ್ನು ತರುತ್ತದೆ ಎನ್ನುವುದು ಅವನಿಗೆ ಬಹಳ ಮುಖ್ಯವಾಗಿತ್ತು. ಬಂಡವಾಳವಾದವನ್ನು ಅವನು ವಿವರಿಸಿದ್ದು ಶೈಕ್ಷಣಿಕವಾದ ಕಾರಣಕ್ಕೆ ಅಲ್ಲವೆನ್ನುವುದನ್ನು ಮನಗಾಣಬೇಕು. ಈಗ ಸಾಂಪ್ರದಾಯಿಕವಾದ ಪ್ರಶ್ನೆಗಳು ಬದಲಾಗಿವೆ. ಪ್ರಭುತ್ವದ ಚಹರೆಗಳೂ ಕೂಡಾ. ಬಂಡವಾಳವಾದ ಮತ್ತು ಅದರ ಸಾಧ್ಯತೆಯೂ ಹೀಗೆ ವ್ಯತ್ಯಾಸವಾಗಿದೆ. ಹಣ ಮತ್ತು ಅದರ ಚಲಾವಣೆಯ ಎದುರು ಈಗ ಯಾವುದೇ ಒಂದು ನೀತಿಯು ಇಲ್ಲವಾಗಿದೆ. ಒಂದು ಸ್ಥಿರವಾದ ಅರ್ಥಶಾಸ್ತ್ರವು ಗೈರು ಹಾಜರಿಯೂ ಆಗಿದೆ. ಆಧುನಿಕ ಚರಿತ್ರೆ ಮತ್ತು ಅದರ ಪ್ರಾತಿನಿಧಿಕತೆಯಲ್ಲಿ ಅನೇಕ ವ್ಯತ್ಯಾಸಗಳು ಕಾಣಿಸಿಕೊಂಡಿವೆ. ಅಂದರೆ ಅದರ ಜೊತೆಗೆ ಬರುವ ವಸ್ತುನಿಷ್ಠತೆ ಮತ್ತು ವಿಷಯನಿಷ್ಠತೆಯ ಸ್ವರೂಪವು ವ್ಯತ್ಯಾಸವಾಗಿದೆ. ಈಗಿನದು ಅತ್ಯಂತ ಭಿನ್ನವಾದ ಒಂದು ಬಂಡವಾಳವಾದ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಮತ್ತು ಅದರ ಅಧಿಕಾರ ಹಾಗೂ ಹಣದ ಪ್ರಶ್ನೆಯು ಈಗ ಅತ್ಯಂತ ನಿಗೂಢವಾದ ರೀತಿಯಲ್ಲಿ ಭಾಸವಾಗುತ್ತದೆ. ಅಧಿಕಾರ, ಮತ, ಧರ್ಮ ಹಾಗೂ ಸಾಮಾನ್ಯರಾದ ಮನುಷ್ಯರ ಸಮಸ್ಯೆಯು ಭಿನ್ನವಾಗುತ್ತದೆ. ನಮಗೀಗ ಬೇಕಾಗುವುದು ಯಾವುದು ಎನ್ನುವುದೇ ಸಮಸ್ಯೆ. ಆದ್ದರಿಂದ ಆಧುನಿಕ ಅರ್ಥಶಾಸ್ತ್ರವನ್ನು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಪ್ರಾತಿನಿಧಿಕತೆ ಮತ್ತು ಪ್ರಾತಿನಿಧಿಕವಾಗುವ ವಸ್ತುಗಳ ನಡುವೆ ಇರುವ ದ್ವಂದ್ವಾತ್ಮಕತೆಯನ್ನು ಫ್ರಾಯ್ಡ್ ಹೇಳಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಪ್ರಾತಿನಿಧಿಕತೆ ಮತ್ತು ಅದರ ಹಿಂದಣ ಸತ್ಯಗಳು ಬೇರೆಯಾಗಿರುತ್ತವೆ. ನಮಗೆ ಯಾವ ವಸ್ತು ಸಿಗುತ್ತದೆಯೋ ಅದನ್ನು ನಾವು ಬಳಸುವುದಕ್ಕೆ ಹೋಗುತ್ತೇವೆ. ಇದರ ಪರಿಣಾಮವಾಗಿಯೇ ವ್ಯತ್ಯಾಸವಾಗುತ್ತದೆ. ಕೆಲವು ವಿಷಯಗಳ ಬಯಕೆಯನ್ನು ನಾವು ಬೇರೆಯಾಗಿಯೂ ನೋಡಬೇಕಾದ ಅಗತ್ಯವಿರುವುದು ಈ ಕಾರಣಕ್ಕೆ. ಬಂಡವಾಳ ಮತ್ತು ಅದರ ಪ್ರಭಾವವು ಅತ್ಯಂತ ಸರಳವಾದ ಪ್ರಕ್ರಿಯೆ ಎಂದು ಹೇಳಬೇಕಾಗಿಯೂ ಇಲ್ಲ. ನಾವು ಮತ್ತೆ ಒಂದು ವಿಷಯವನ್ನು ನೋಡಬೇಕಾಗುತ್ತದೆ. ಯಾವುದು ನಮಗೆ ಲಭ್ಯವಿದೆಯೋ ಅದನ್ನು ಬಳಸುತ್ತೇವೆ. ಅದರ ಉಪಯೋಗ ಮುಗಿಯಿತು ಎಂದಾದರೆ ಮತ್ತೆ ಬೇರೆ ವಸ್ತುವನ್ನು ಬಳಸುತ್ತೇವೆ. ಹೀಗೆ ಉಪಯೋಗ ಮತ್ತು ಅದರ ಸಾಧ್ಯತೆಯೇ ಬೇರೆ. ನಮ್ಮ ಆಲೋಚನೆ, ನಮ್ಮ ಬಯಕೆ ಮತ್ತು ನಮ್ಮ ಆಸೆಗಳು ಹಾಗೂ ನಾವು ಉಪಯೋಗ ಮಾಡುವ ವಸ್ತುಗಳಿಗೆ ನೇರವಾದ ಸಂಬಂಧವಿದೆ. ಯಾವುದನ್ನು ಹೇಗೆ ಬಳಸುತ್ತೇವೆ ಮತ್ತು ಅದರ ಅಗತ್ಯವು ಯಾವ ಬಗೆಯದು ಮತ್ತು ಅದರ ಸ್ವರೂಪವು ಯಾವ ರೀತಿಯಲ್ಲಿ ಇದೆ ಎಂದು ಗುರುತಿಸುವುದು ಅಗತ್ಯ. ಅದರಲ್ಲಿಯೂ ನಮ್ಮ ವರ್ಗವು ಯಾವ ಬಗೆಯದು ಎಂದು ಹೇಳಲು ಸಾಧ್ಯ. ಆದರೆ ಅವುಗಳು ಅಸ್ಪಷ್ಟವಾದ ಸಂಗತಿಯಲ್ಲ. ಆರ್ಥಿಕತೆಯನ್ನು ನಾವು ಬೇರೆ ಬೇರೆ ರೀತಿಯಲ್ಲಿ ನೋಡಲು ಸಾಧ್ಯವಾಗುವುದು ಇದೇ ಕಾರಣದಿಂದ. ಬಂಡವಾಳವಾದವು ಒಂದು ನಿರ್ದಿಷ್ಟ ಬಗೆಯ

ಮನೋಭಾವವನ್ನು ಹುಟ್ಟುಹಾಕುತ್ತದೆ. ಅದರಲ್ಲಿ ಬೇರೆ ಬೇರೆ ನೆಲೆಗಳು ಇರುತ್ತವೆ. ಅದು ತನಗೆ ಬೇಕಾದ ಸಂಸ್ಕೃತಿಯನ್ನು ಹುಟ್ಟುಹಾಕುತ್ತದೆ. ಹೀಗಾಗಿ ಅದರಲ್ಲಿ ತಾಂತ್ರಿಕತೆಯು ಒಂದು ಸನ್ನಿವೇಶಕ್ಕೆ ತಕ್ಕಂತೆ ದುಡಿಯುತ್ತದೆ. ಅದುವೇ ವಿವಿಧ ಸನ್ನಿವೇಶವನ್ನು, ಅವಕಾಶವನ್ನು ಸೃಷ್ಟಿಸುತ್ತದೆ. ಬಂಡವಾಳವಾದ ಮತ್ತು ಅದರ ತಂತ್ರಗಳಲ್ಲಿ ವ್ಯತ್ಯಾಸವೂ ಇರುತ್ತದೆ. ಅದು ಸೃಷ್ಟಿ ಮಾಡುವ ವಸ್ತುವೂ ಬೇರೆಯಾಗಿರುತ್ತದೆ. ಮನುಷ್ಯರನ್ನು ಅದು ನೋಡುವ ಕ್ರಮಗಳೂ ಭಿನ್ನ. ಆಧುನಿಕ ವೈಜ್ಞಾನಿಕ ಅನ್ವೇಷಣೆಗಳನ್ನು ಬಂಡವಾಳವಾದವು ತನಗೆ ಬೇಕಾದಂತೆ ಬಳಸುತ್ತದೆ. ವೈಜ್ಞಾನಿಕ ಅನ್ವೇಷಣೆಗಳು ನಮಗೆ ಹೊಸತನ್ನು ಕಲಿಸಿದೆ ನಿಜ. ಅದನ್ನು ಬಳಸಿಕೊಂಡಿದ್ದೇವೆ. ಅದು ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಅದೂ ಸತ್ಯ. ಬಂಡವಾಳವಾದವನ್ನು ಸಾರಾಸಗಟು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ಕರೆಯಲು ಬರುವುದೇ ಇಲ್ಲ. ವಿಷಯವೆಂದರೆ ಹಣ ಮತ್ತು ಅದರ ಬಳಕೆ. ಹಣವು ತನ್ನನ್ನು ತಾನೇ ಪ್ರದರ್ಶನ ಮಾಡುತ್ತದೆ. ಅದು ಸಮಾಜದ ಚಟುವಟಿಕೆಯನ್ನು ಹೇಳುತ್ತದೆ.

ಲಾಭ, ವಿಸ್ತರಣೆ, ಶೋಷಣೆಗೂ ಹಣವೂ ಒಂದು ಮಧ್ಯವರ್ತಿಯಾಗಿದೆ. ಹಣವನ್ನು ಈಗ ನಾವು ನೋಡುವಾಗ ಅದರ ಮೌಲ್ಯವನ್ನು ಗ್ರಹಿಸುವುದು ಹೇಗೆ ಎನ್ನುವುದೂ ಅನೇಕರ ಸಮಸ್ಯೆ. ಹಣ ಮತ್ತು ಅದರ ಚಲಾವಣೆಗೆ ಈಗ ಬೇರೆ ಬೇರೆ ಸ್ವರೂಪವಿದೆ. ವಸ್ತು ಮತ್ತು ಅದರ ಕೊಂಡುಕೊಳ್ಳುವಿಕೆಗೆ ಹಣವು ವಿಶಿಷ್ಟವಾದ ಮೌಲ್ಯವನ್ನು ಕಟ್ಟುತ್ತದೆ. ಉಪಯೋಗ ಮತ್ತು ಅದರ ಮೌಲ್ಯಕ್ಕೂ ನಾವು ಕೊಡುವ ಹಣಕ್ಕೂ ಸಂಬಂಧವಿದೆ ನಿಜ. ಆದರೆ ವಿಷಯವೆಂದರೆ ಯಾವುದೇ ವಸ್ತುವನ್ನು ಕೊಂಡುಕೊಳ್ಳುವಾಗ ಮಾರುಕಟ್ಟೆ ಧಾರಣೆಗೂ ಅದರ ಹಿಂದೆ ಇರುವ ಶ್ರಮಕ್ಕೂ ಯಾವುದೇ ಒಂದು ಸಂಬಂಧವು ಇಲ್ಲದೇ ಹೋಗಬಹುದು. ಇದರ ಲಾಭವು ಬಂಡವಾಳಶಾಹಿಗೆ ಆಗುತ್ತದೆ. ಕೆಲಸ ಮತ್ತು ಅದರ ಪ್ರತ್ಯೇಕತೆಯು ಈಗ ಮತ್ತೆ ಚರ್ಚೆ ಮಾಡಬೇಕಾದ ವಿಷಯ. ವಸ್ತು ಮತ್ತು ಅದರ ಬೆಲೆಯನ್ನು ಈಗ ನಿರ್ಧರಿಸುವವರು ಕೈಗಾರಿಕೆಗೆ ದುಡ್ಡು ಹಾಕಿದವರು ಮಾತ್ರವೇ. ಆದರೆ ಬಂಡವಾಳವಾದದಲ್ಲಿ ಅನೇಕ ರೀತಿಯ ವೈರುಧ್ಯಗಳೂ ಇವೆ. ಹೀಗಾಗಿ ಈಗ ಹಣವು ನಿಗೂಢವಾದ ಅರ್ಥವನ್ನು ಹೊಂದಿದೆ. ಹಣ ಮತ್ತು ಅದರ ಸಿದ್ಧಾಂತಗಳು ಬೇರೆ ಬೇರೆ ರೂಪವನ್ನು ಧರಿಸುತ್ತದೆ. ಸಮಾಜದಲ್ಲಿ ಅದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹಣವು ಸ್ವಾಯತ್ತವೆಂದರೆ ಸ್ವಾಯತ್ತ. ಅಲ್ಲವೆಂದರೆ ಅಲ್ಲ. ಈಗ ಉತ್ಪಾದನೆ ಮತ್ತು ಅದರ ಸ್ವರೂಪವು ಬದಲಾಗಿರುವುದರಿಂದ ಅದರ ಪಾತ್ರವೂ ಬೇರೆಯಾಗಿದೆ. ಉತ್ಪಾದನೆ ಮತ್ತು ಅದರ ಸ್ವರೂಪವನ್ನು ಈಗ ಮೊದಲಿನಂತೆ ನೋಡುವುದೂ ಇಲ್ಲ. ಈಗಿನ ಉತ್ಪಾದನೆಯು ಭಿನ್ನವಾಗಿದೆ. ಅದರ ಚಹರೆಗಳು ಬೇರೆಯಾಗಿವೆ. ವಸ್ತು ಮತ್ತು ಅದರ ರಚನೆಯಲ್ಲಿ ವ್ಯತ್ಯಾಸವಿದೆ. ರಾಚನಿಕ ಯಜಮಾನಿಕೆ ಮತ್ತು ಅದರ ಹೊಂದಾಣಿಕೆಗಳು ಈಗ ವಿಭಿನ್ನವಾಗಿವೆ ಎಂದು ಅಲ್ತೂಸರ್ ಹೇಳುತ್ತಾನೆ. ಈಗ ಆರ್ಥಿಕ ರಚನೆ ಮತ್ತು ಅದರ ಹೊಂದಾಣಿಕೆಗೆ ಬೇರೆ ಆಯಾಮವು ಇದೆ. ಇದರ ಪರಿಣಾಮವಾಗಿ ಆಧುನಿಕ ಅಧಿಕಾರದ ಸ್ವರೂಪವೂ ಬದಲಾಗಿವೆ. ಹಿಂದೆ ರಾಜನಿದ್ದ, ಅವನು ಅನೇಕವನ್ನು ನೋಡುತ್ತಿದ್ದ, ಅದು ಈಗ ರಾಜನ ಅಸ್ತಿತ್ವವೂ ಬೇರೆಯಾಗಿದೆ. ಅವನಿಗೆ ಆರ್ಥಿಕತೆಯ ಮೇಲೆ ನಿಯಂತ್ರಣವೂ ಇಲ್ಲವಾಗಿದೆ. ರಾಜರು

ಹೆಸರಿಗೆ ಮಾತ್ರ ಇದ್ದಾರೆ. ಮೊದಲು ಇದ್ದ ವ್ಯವಸ್ಥೆಯು ಬದಲಾಗಿದೆ. ಹೊಸ ನೀತಿಯಲ್ಲಿ ಸೆಕ್ಯುಲರ್ ಎನ್ನುವುದೂ ಬಂದಿದೆ. ಹಳೆಯ ಕಾಲದ ಪ್ರತ್ಯೇಕತೆ ಮತ್ತು ಅದರ ಕ್ರಿಯೆಗಳು ಬದಲಾಗಿವೆ. ಜನಾಂಗ ಮತ್ತು ಅದರ ಕೆಲಸದ ಸ್ವರೂಪವೂ ಬೇರೆಯಾಗಿದೆ. ಸಮಾಜ ಮತ್ತು ಅದರ ಜ್ಞಾನದ ರೂಪಗಳೂ ವ್ಯತ್ಯಾಸವಾಗಿದೆ. ವರ್ಗಗಳ ಸ್ವರೂಪದಲ್ಲಿ ಭಿನ್ನತೆಯು ಇದೆ. ಕೂಲಿ ಮತ್ತು ಅದರ ಮೌಲ್ಯಗಳು ಭಿನ್ನವಾಗಿದೆ. ಮಾರುಕಟ್ಟೆ ಮತ್ತು ಅದರ ಆಶಯಗಳಲ್ಲಿ ಬೇರೆ ಬೇರೆ ನೆಲೆಗಳು ಬರುತ್ತವೆ. ಆಧುನಿಕ ಮಾರುಕಟ್ಟೆಯೇ ಮನೆಯ ಬಾಗಿಲಿಗೆ ಬಂದಿದೆ. ಪ್ರಜಾಪ್ರಭುತ್ವದ ಆಶಯವು ಸರಿ. ಆದರೆ ಅದು ನಮಗೆ ಅದನ್ನು ಕೊಟ್ಟಿದೆಯೇ ಎನ್ನುವುದೂ ಪ್ರಶ್ನೆಯಾಗಿದೆ. ಬೇರೆ ಮಾದರಿಯ ಉತ್ಪಾದನೆಯಲ್ಲಿ ಬೇರೆ ಬೇರೆ ಜನರು ಒಟ್ಟಿಗೆ ಸೇರುವ ಅವಕಾಶವು ಸಿಕ್ಕಿದೆ. ಅಧಿಕಾರ ಮತ್ತು ಅದರ ವ್ಯಾಖ್ಯೆಗಳ ಚಹರೆಗಳು ಬದಲಾಗಿದೆ. ಕಾರ್ಮಿಕರು ಮತ್ತು ಅವರ ವೇತನಕ್ಕೂ ಅವರ ಅನನ್ಯತೆಗೂ ಇರುವ ಸಂಬಂಧವು ಸುಲಭವಾದ ಪ್ರಕ್ರಿಯೆಗಳಾಗಿಯೂ ಇಲ್ಲ. ಕಾರ್ಮಿಕರ ಮೇಲೆ ಒಂದು ಮಾನಸಿಕವಾದ ಒತ್ತಡವು ಇದೆ. ಯಾವುದಕ್ಕೆ ಹೆಚ್ಚು ಉಪಯೋಗದ ಮೌಲ್ಯವು ಇದೆಯೋ ಅದನ್ನು ಮಾತ್ರವೇ ಈಗ ಗಮನಿಸಲಾಗುತ್ತದೆ. ಉದ್ದಿಮೆದಾರರು ಉಳಿದುದನ್ನು ನೋಡಲು ಹೋಗುವುದೂ ಇಲ್ಲ. ಅವರಿಗೆ ಕಾರ್ಮಿಕರ ಭಾವನೆಗಳು ಬೇಕಾಗಿಯೂ ಇಲ್ಲ. ಆದ್ದರಿಂದ ಉತ್ಪಾದನೆಯ ಹೆಚ್ಚಳ ಮತ್ತು ಅದರ ಗುಣಕ್ಕೆ ಯಾವ ಸಂಬಂಧವಿದೆ ಎಂದೂ ನಾವು ನೋಡಬೇಕಾಗುತ್ತದೆ. ಇಲ್ಲಿ ವಿವರಿಸಬೇಕಾದ ಮತ್ತೆ ಕೆಲವು ಅಂಶಗಳು ಇವೆ. ಅದನ್ನು ಹೀಗೆ ಹೇಳಬಹುದು: ಯಾವಾಗ ನಾವು ಉಪಯೋಗ ಮತ್ತು ಅದರ ಮೌಲ್ಯವೆಂದು ಹೇಳುತ್ತೇವೆಯೋ ಆಗ ಅದರ ಸ್ವರೂಪ ಮತ್ತು ವಸ್ತುವಿನ ಗುಣದ ಪ್ರಶ್ನೆಯು ಬರುತ್ತದೆ. ವಸ್ತುವಿಗೆ ಯಾವುದೇ ರೀತಿಯ ಗುಣಾತ್ಮಕವಾದ ಮೌಲ್ಯವು ಇಲ್ಲದೇ ಹೋದರೆ ಅದರ ಮೌಲ್ಯವು ಕಡಿಮೆಯಾಗುತ್ತದೆ. ಯಾವುದೇ ವಸ್ತುವು ನಮ್ಮ ದೇಹದ ಶಕ್ತಿಯಿಂದ ರಚಿತವಾಗಿದ್ದರೆ ಅದರ ಹಿಂದೆ ವ್ಯಕ್ತಿಯ ಶ್ರಮ ಮಾತ್ರವೇ ಅಲ್ಲ ಅವನ ಕಾಲದ ಬಳಕೆಯೂ ಇದೆ ಎಂದು ಗೊತ್ತು ಮಾಡುವುದು ಅತ್ಯಂತ ಅಗತ್ಯ. ನಮ್ಮ ದುಡಿಮೆ ಮತ್ತು ನಮ್ಮ ವೇತನವು ಯಾವ ಬಗೆಯಲ್ಲಿದೆ ಎಂದೂ ನೋಡಬೇಕಾದ ಜರೂರು ಇದೆ. ಆದರೆ ವಾಸ್ತವವಾಗಿ ಪರಿಸ್ಥಿತಿಯು ಬೇರೆಯೂ ಇದೆ. ಮೌಲ್ಯವನ್ನು ಕಟ್ಟುವಾಗ ಅದರ ಮಾರ್ಜಿನ್ ಲಾಭ ಎನ್ನುವುದಕ್ಕೆ ಯಾವ ಮಾನದಂಡವನ್ನು ಬಳಸಲಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಯಾವುದೇ ಮಾನದಂಡವು ಇಲ್ಲದೆ ನಾವು ದರವನ್ನು ನಿಗದಿ ಮಾಡಿದರೆ ಅದರ ಹೆಚ್ಚಿನ ಲಾಭವು ಉದ್ಯಮಿಗೆ ಮಾತ್ರವೇ ಆಗುತ್ತದೆ. ಈ ಕಾರಣದಿಂದ ನಮ್ಮಲ್ಲಿ ಮೌಲ್ಯ ಮತ್ತು ಅದರ ಸ್ವರೂಪವು ಸಂಕೀರ್ಣವಾಗಿದೆ. ನಿಜವಾದ ಉತ್ಪಾದನೆ ಮತ್ತು ಅದರ ವೆಚ್ಚಕ್ಕೂ ಅದರ ಬೆಲೆಗೂ ಎಷ್ಟೋ ಸರ್ತಿ ಯಾವುದೇ ಸಂಬಂಧವು ಇರುವುದೇ ಇಲ್ಲ. ಅವುಗಳ ನಡುವೆ ಯಾವುದೇ ಕಾನೂನು ಇಲ್ಲ. ದೇಹ ಮತ್ತು ಅದರ ದುಡಿಮೆಗೆ ನಾವು ಕೊಡುವ ಮೌಲ್ಯವು ಹೇಗಿದೆ ಎಂದು ನೋಡಬೇಕಾಗುತ್ತದೆ. ಅದಕ್ಕೆ ಒಂದು ಸ್ವರೂಪವೂ ಇರಬೇಕಾಗುತ್ತದೆ. ಬರೀ ಅಂಕಿ ಅಂಶಗಳ ವಿವರಣೆಗಳಿಂದ ಯಾವುದೇ ಪ್ರಯೋಜನವು ಇಲ್ಲ. ಉತ್ಪಾದನೆಯು ಮಾರುಕಟ್ಟೆಗೆ ಬರುವಾಗ ಅದರ ಅನನ್ಯತೆಯು ಇಲ್ಲವಾದರೆ ಮತ್ತೆ ಕಷ್ಟ. ವಸ್ತು ಮತ್ತು ಅದರ ಅನನ್ಯತೆಯು ಇಲ್ಲಿ ಬಹಳ ಮುಖ್ಯವಾಗುತ್ತದೆ.

ವಸ್ತು ಮತ್ತು ಅದರ ಸ್ವರೂಪವನ್ನು ನಾವು ನೋಡುವುದು ಈ ಕಾರಣದಿಂದ ಬೇರೆಯಾಗುತ್ತದೆ. ವಸ್ತುವು ತನ್ನ ಅನನ್ಯತೆಯನ್ನು ಮೂಲ ರೂಪಕ್ಕೆ ಹತ್ತಿರವಾಗಿ ಇಟ್ಟುಕೊಳ್ಳುತ್ತದೆ. ವಾಸ್ತವವಾಗಿ ಇವುಗಳ ರೂಪವೂ ಬೇರೆಯಾಗುತ್ತದೆ. ಉತ್ಪಾದನೆ ಮತ್ತು ಅದರ ಮೌಲ್ಯಕ್ಕೆ ಯಾವುದೇ ಸಂಬಂಧವು ಇಲ್ಲದೇ ಹೋದರೆ ಅದರ ಅರ್ಥವು ಬೇರೆಯಾಗುತ್ತದೆ. ಉತ್ಪಾದನೆ ಮತ್ತು ಅದರ ಸ್ವರೂಪವೇ ಬಹಳ ಮುಖ್ಯವಾಗುತ್ತದೆ. ಯಾವುದೇ ಒಂದು ವಸ್ತುವಿನ ಮೌಲ್ಯಕ್ಕೆ ಅದರದೇ ಆದ ಗುಣ ಮತ್ತು ವಿನಿಮಯದ ಮೌಲ್ಯ ಇರುತ್ತದೆ ಎನ್ನುತ್ತಾರೆ. ಆದರೆ ಆಧುನಿಕ ಬಂಡವಾಳವಾದವು ದುಡಿಮೆ ಮತ್ತು ಅದರ ರೂಪವನ್ನು ಬದಲಿಸಿದೆ. ಈಗ ದೇಹವು ಉತ್ಪಾದನೆಗೆ ಒಂದು ಪರಿಕರ ಮಾತ್ರವೇ ಆಗಿದೆ. ಆಧುನಿಕ ಉತ್ಪಾದನೆಯಲ್ಲಿ ಕಾರ್ಮಿಕನ ಶಕ್ತಿಯು ಕಡಿಮೆಯಾಗಿದೆ. ಇಲ್ಲಿ ನೋಡಬೇಕಾದ ಮತ್ತೊಂದು ಅಂಶವು ಇದೆ. ಯಾವುದೇ ಒಂದು ಉತ್ಪಾದನೆಯನ್ನು ನೋಡುವುದೆಂದರೆ ಅದರಲ್ಲಿ ಕಾರ್ಮಿಕನ ಶಕ್ತಿಯು ಎಷ್ಟು ಬಳಕೆಯಾಗಿದೆ ಎಂದೂ ನೋಡುವುದು. ಆದರೆ ಈಗಿನ ಪರಿಸ್ಥಿತಿಯಲ್ಲಿ ಕಾರ್ಮಿಕರನ್ನು ಕಡಿಮೆ ಮಾಡಲಾಗಿದೆ. ಅದರ ಪರಿಣಾಮವಾಗಿ ದೇಹದ ದುಡಿಮೆಯನ್ನು ನಂಬಿದ ವ್ಯಕ್ತಿಗಳು ಅತಂತ್ರರಾಗಿದ್ದಾರೆ. ಅವರಿಗೆ ವೇತನವಿಲ್ಲ. ದುಡಿಮೆಯೂ ಇಲ್ಲ. ನಮಗೆ ಗೊತ್ತಾಗದೇ ಇರುವ ಅಂದರೆ ನಮ್ಮ ಕಣ್ಣ ಅಳತೆಗೆ ಸಿಗದೇ ಇರುವ ಸಂಗತಿಗಳು ಇವು. ಕಾರ್ಮಿಕರು ಮತ್ತು ಅವರ ಹಕ್ಕುಗಳ ಪ್ರಶ್ನೆಯೂ ಈಗ ತೊಡಕಿನದು ಆಗಿದೆ. ಅಸಂಘಟಿತ ಕಾರ್ಮಿಕರು ಎಲ್ಲಿ ಹೋಗಬೇಕು ಮತ್ತು ಏನು ಮಾಡಬೇಕು ಎನ್ನುವುದೇ ಈಗ ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆ. ಅನೇಕ ದ್ವಂದ್ವಗಳು ಮತ್ತು ಘರ್ಷಣೆಗಳು ಈ ಕಾರಣದಿಂದ ಇದೆ. ಉಪಯೋಗದ ಮೌಲ್ಯ ಮತ್ತು ವಿನಿಮಯದ ಮೌಲ್ಯವನ್ನು ನಾವು ಈಗ ಸರಿಯಾದ ರೀತಿಯಲ್ಲಿಯೇ ನೋಡಬೇಕಾಗುತ್ತದೆ. ಯಾವುದನ್ನು ಈಗ ಮೌಲ್ಯವೆಂದು ಹೇಳುತ್ತೇವೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಇಲ್ಲಿ ಮುಖ್ಯ. ಮೌಲ್ಯವು ಯಾವತ್ತೂ ಸಂವಾದಿಯೂ ಆಗಿಲ್ಲ. ಅದು ಸಂಕೀರ್ಣ. ಇದ್ದಕ್ಕಿದ್ದಂತೆ ಶುರುವಾದ ಜಾಗತೀಕರಣದ ಲಾಭವನ್ನು ಯಾರೋ ಮಾಡುತ್ತಾರೆ. ಅದನ್ನು ಅನುಭವಿಸುತ್ತಾರೆ. ಆದರೆ ಕಾರ್ಮಿಕರು ಮತ್ತು ಬಡವರು ಬೀದಿಯಲ್ಲಿ ಮಲಗುವ ಪರಿಸ್ಥಿತಿಯು ಬಂದಿದೆ. ಬಡವರು ಮುಷ್ಕರವನ್ನು ಮಾಡದಿರಲಿ ಎಂದು ಅವರಿಗೆ ಗಂಗಾ ಜಲವನ್ನು ಕೊಟ್ಟರೆ, ಅವರಿಗೆ ಜಪಮಾಲೆಯನ್ನು ಕಟ್ಟಿದರೆ ಏನು ಉಪಯೋಗ? ಬೀದಿಯಲ್ಲಿ ನಡೆಯುತ್ತಿರುವ ನಿಜವಾದ ಹಿಂಸೆಯನ್ನು ಮತ್ತೆ ಮತ್ತೆ ಪ್ರಚೋದಿಸುವ ರಾಜಕೀಯವು ಯಾರ ಲಾಭಕ್ಕೆ? ಹೀಗಿದ್ದರೂ ಮಾರ್ಕ್ಸ್‌ವಾದವನ್ನು ಗ್ರಹಿಸುವಾಗ ಅನೇಕರು ಅದನ್ನು ಬರೀ ವರ್ಗ ಸಂಘರ್ಷದ ಕಥನವೆಂದು ಹೇಳುತ್ತಾರೆ. ಆದರೆ ವಿಷಯವು ಅಷ್ಟು ಸುಲಭವಲ್ಲ. ಅದು ರಾಜಕೀಯ ಸಿದ್ಧಾಂತವೂ ಹೌದು. ಮತ್ತೊಂದು ಕಡೆಯಿಂದ ಅದು ಚರಿತ್ರೆಯನ್ನು ವಿಶಿಷ್ಟವಾಗಿ ಗ್ರಹಿಸುವ ವಿಧಾನವೂ ಹೌದು. ಅದನ್ನು ನಾವು ಉದಾರವಾಗಿ ನೋಡಬೇಕು ಎಂದು ಅರ್ಥವಲ್ಲ. ಮಾರ್ಕ್ಸ್‌ವಾದವು ಹೇಳಿದ ಒಂದು ಮಾತು ನಿಜವಾಗಿದೆ. ಅದು ಆಧುನಿಕ ಕಾರ್ಮಿಕರ ಕುರಿತಾದ ನಿಲುವು. ಕಾರ್ಮಿಕ ಚಳುವಳಿಯು ಮೂಲಭೂತವಾಗಿ ಹುಟ್ಟುವುದು ಕಾರ್ಖಾನೆಗಳಲ್ಲಿ. ಕಾರ್ಮಿಕರ ಪ್ರಶ್ನೆಯು ವಾಸ್ತವವಾಗಿ ಹುಟ್ಟುವುದೇ ಒಂದು

ಸಾಮಾಜಿಕತೆಯ ಅರಿವಿನಿಂದ. ಅದನ್ನೂ ಕೈಗಾರಿಕೆಗಳು ಬದಲಾವಣೆಯನ್ನು ಮಾಡುತ್ತಲೇ ಬಂದಿದೆ. ಮತ್ತೊಂದು ವಿಷಯವನ್ನು ನಾವು ಇಲ್ಲಿ ಹೇಳುವುದು ಅತ್ಯಂತ ಸೂಕ್ತ. ಕಾರ್ಮಿಕರ ಚಳುವಳಿಗೆ ರಾಜಕೀಯವಾದ ಆಯಾಮಗಳೂ ಇವೆ. ಈ ವಿಷಯಗಳನ್ನು ನಮಗೆ ಚರಿತ್ರೆಯೇ ಹೇಳಿಕೊಟ್ಟಿದೆ. ಆದರೆ ಮಧ್ಯಮ ವರ್ಗದ ಜನರು ಈ ವಿಷಯಗಳನ್ನು ಗಮನಿಸಲು ಹೋಗುವುದೇ ಇಲ್ಲ. ಅದೇ ರೀತಿಯಲ್ಲಿ ಮತ್ತೆ ಸಾಮಾಜಿಕ ವರ್ಗಗಳು ಉಂಟಾಗುವುದು ಒಂದು ಸಾಮಾಜಿಕ ಪ್ರಕ್ರಿಯೆ. ವರ್ಗಗಳು ಎಂದು ಗುರುತಿಸಿದ್ದು ಮಾರ್ಕ್ಸ್ ಎನ್ನುವುದನ್ನು ನಾವು ಮರೆಯಬಾರದು. ವರ್ಗ ಮತ್ತು ಪರಕೀಯತೆಯ ಪ್ರಶ್ನೆಯನ್ನು ಮಾರ್ಕ್ಸ್ ವಿಚಾರವನ್ನು ಮಂಡಿಸಿದ್ದು ಅನಂತರದ ಅನೇಕ ತಿಳುವಳಿಕೆಗೆ ಕಾರಣವಾಗಿದೆ. ಆದರೆ ಪರಕೀಯತೆಯನ್ನು ಕುರಿತು ಹೆಗೆಲ್ ಹೇಳಿರುವುದು ಇಲ್ಲಿ ಗಮನಾರ್ಹ. ವರ್ಗ ವ್ಯವಸ್ಥೆ ಮತ್ತು ಅದರ ಪರಿಣಾಮಗಳನ್ನು ಮಾರ್ಕ್ಸ್‌ವಾದವು ಹೇಳಿರುವುದು ಮತ್ತೆ ಮತ್ತೆ ವಿಮರ್ಶೆಗೆ ಗುರಿಯಾಗಿದೆ. ಅವನಲ್ಲಿ ಸಹಕಾರ ಮತ್ತು ಸ್ಪರ್ಧೆಗೆ ಬೇರೆ ಬೇರೆ ಆಯಾಮಗಳಿವೆ. ಆದರೆ ಇದುವೇ ಮಾರ್ಕ್ಸ್‌ವಾದಕ್ಕೆ ಪರ್ಯಾಯವಾದ ಒಂದು ವಾದವೆಂದು ಹೇಳಬೇಕಾದ ಅಗತ್ಯವಿಲ್ಲ. ಅರ್ಥಶಾಸ್ತ್ರವನ್ನು ನೋಡುವಾಗ ಅನೇಕರು ಮತ್ತೆ ಮತ್ತೆ ಬೇರೆ ಪ್ರಶ್ನೆಗಳನ್ನು ಕೇಳಿದ್ದು ನಿಜ. ಆದರೆ ಮಾರ್ಕ್ಸ್‌ವಾದಕ್ಕೆ ಪರ್ಯಾಯವಾದ ಅನೇಕ ಅರ್ಥಶಾಸ್ತ್ರದ ಸಿದ್ಧಾಂತಗಳು ಮಾಡಿರುವ ಅವಾಂತರಗಳನ್ನು ಮತ್ತೆ ಬೇರೆ ವಿವರಿಸಬೇಕಾದ ಅಗತ್ಯವಂತೂ ಇಲ್ಲ. ಆರ್ಥಿಕವಾದ ಅರಾಜಕತೆಯನ್ನು ನಾವು ಟೀಕಿಸುವುದು ಅಗತ್ಯವಿದೆ. ಯಾಕೆಂದರೆ ಇಡೀ ಜಗತ್ತು ಈವತ್ತು ಒಂದು ಬಗೆಯಲ್ಲಿ ಸಂಕೀರ್ಣವಾದ ಸ್ಥಿತಿಯನ್ನು ತಲುಪಿಬಿಟ್ಟಿವೆ. ಆರ್ಥಿಕತೆ ಮತ್ತು ಅದರ ಸಾಮಾಜಿಕ ಚಟುವಟಿಕೆಯನ್ನು ವಿವರಿಸಿದ್ದು ಮಾರ್ಕ್ಸ್. ಮಾರ್ಕ್ಸ್‌ವಾದವು ಮೊದಲು ಹೇಳಿದ್ದು ಸಮಾಜ ಮತ್ತು ಅದರ ಆರ್ಥಿಕತೆಯನ್ನು. ಮತ್ತು ಅದರ ಅನಂತರ ಅದು ಪ್ರಸ್ತಾವಿಸಿದ್ದು ವರ್ಗದ ಮನೋಭಾವವನ್ನು. ಅದು ಬರೀ ಭಾವನೆಗಳ ಪ್ರಶ್ನೆಯಂತೂ ಅಲ್ಲ. ಎರಡನೆಯದಾಗಿ ಚರಿತ್ರೆ ಮತ್ತು ಅದರ ಪರಿಣಾಮಗಳನ್ನು. ಹಾಗೆ ನೋಡುವುದಿದ್ದರೆ ಯಾವುದನ್ನು ವರ್ಗಸಂಘರ್ಷ ಎಂದು ಹೇಳುತ್ತೇವೆಯೋ ಅದು ಮಾರ್ಕ್ಸ್‌ವಾದದ ಬಹಳ ದೊಡ್ಡ ಪ್ರಶ್ನೆಯೂ ಹೌದು. ಚರಿತ್ರೆಯನ್ನು ನೋಡುವುದು ಎಂದರೆ ಅದು ವರ್ಗಗಳ ಇತಿಹಾಸವನ್ನು ಅರ್ಥ ಮಾಡಿಕೊಳ್ಳುವುದು ಎಂದು ಮಾರ್ಕ್ಸ್ ಹೇಳುತ್ತಾನೆ. ಅದು ಅನೇಕ ವಿಷಯಗಳ ಜೊತೆಗೆ ಅನುಸಂಧಾನವನ್ನು ಮಾಡಿಕೊಂಡಿದೆ. ಚರಿತ್ರೆ ಎಂದರೆ ಅದು ಅನೇಕ ಸಂಗತಿಗಳ ಸಂಮಿಶ್ರಣ. ಸಾಮಾಜಿಕ ಸಂಗತಿಗಳು ಆಗಿರುತ್ತವೆ. ಇತಿಹಾಸದಲ್ಲಿ ಯಾವುದು ನಡೆಯುತ್ತದೆಯೋ ಅದರಲ್ಲಿ ರಾಜಕಾರಣವೂ ಇರುತ್ತದೆ. ಆದ್ದರಿಂದ ಇತಿಹಾಸವನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಮೂಲಭೂತವಾಗಿ ಸಮಾಜದ ಅನೇಕ ಸಂಘರ್ಷಗಳನ್ನು ಅರ್ಥಮಾಡಿಕೊಳ್ಳುವುದು. ವಾಸ್ತವವಾಗಿ ಮಾರ್ಕ್ಸ್‌ವಾದವೆಂದರೆ ಅದು ವಿಜ್ಞಾನ; ಅದರಲ್ಲಿ ಸಮಗ್ರವಾದ ಒಂದು ತಿಳುವಳಿಕೆಯು ಇದೆ ಎಂದು ಹೇಳುತ್ತಾರೆ. ಅದು ವಾಸ್ತವವಾಗಿ ತತ್ವಜ್ಞಾನದ ವಿಶಿಷ್ಟವಾದ ತಿಳುವಳಿಕೆಯೂ ಹೌದು. ಅದರಲ್ಲಿ ವೈಜ್ಞಾನಿಕತೆಯು ಇದೆ. ಚರಿತ್ರೆಯು ಇದೆ. ಅದರಲ್ಲಿ ಸಾಮಾಜಿಕ ಜೀವನದ ಒಳನೋಟಗಳು ಇವೆ. ಲೈಂಗಿಕ ರಾಜಕಾರಣದ ವಿವರಣೆಗಳು ಇವೆ. ಹಾಗೂ ಅದರಲ್ಲಿ ಮನಸ್ಸು ಮತ್ತು ಪ್ರಜ್ಞೆಗಳ ಸಂಘರ್ಷದ ಸ್ವರೂಪಗಳೂ ಇವೆ.

ನಾವು ಯೋಚನೆಯನ್ನು ಮಾಡಬೇಕಾದ್ದು ಈ ಸಂಗತಿಗಳನ್ನು. ನಾಗರಿಕತೆಯಲ್ಲಿ ಆಗಿ ಹೋಗಿವೆ. ಮತ್ತೆ ಈ ಸಂಗತಿಗಳು ವಾಸ್ತವವೂ ಹೌದು. ಚರಿತ್ರೆಯೆಂದರೆ ಅದು ವರ್ಗಗಳ ಕುರಿತಾದ ಒಂದು ವಿಶಿಷ್ಟವಾದ ಸಂಗತಿಯ ನಿರೂಪಣೆಯೂ ಹೌದು ಎಂದು ಮಾರ್ಕ್ಸ್ ಹೇಳುತ್ತಾನೆ. ಅದುವೇ ಒಂದು ಸಮಾಜದ ಬುನಾದಿಯೂ ಹೌದು. ಧರ್ಮಕ್ಕೆ ಇತಿಹಾಸವಿದೆ. ಲೈಂಗಿಕ ರಾಜಕಾರಣಕ್ಕೆ ನಿರ್ದಿಷ್ಟವಾದ ಸ್ವರೂಪವೂ ಇದೆ. ಆದ್ದರಿಂದ ಅದನ್ನು ಒಂದು ಸಣ್ಣದಾದ ನಿರೂಪಣೆಯೆಂದು ಭಾವಿಸಬೇಕಾದ ಅಗತ್ಯವಿಲ್ಲ. ವಾಸ್ತವವಾಗಿ ಮಹಾನ್ ನಿರೂಪಣೆ ಮತ್ತು ಸಣ್ಣ ನಿರೂಪಣೆಯೆಂಬ ಪ್ರಭೇದವನ್ನು ಮಾಡಿದ್ದು ಆಧುನಿಕೋತ್ತರವಾದಿಗಳು. ಅದನ್ನು ಇಲ್ಲಿ ದಾಖಲಿಸಬೇಕಾದ ಅಗತ್ಯವೂ ಇದೆ. ಅನೇಕ ಘಟನೆಗಳು, ನಮ್ಮ ಪ್ರಜ್ಞೆ, ಜನಾಂಗವಾದದ ಹುಟ್ಟು ಮತ್ತು ಲೈಂಗಿಕ ತಾರತಮ್ಯಗಳನ್ನು ಚರಿತ್ರೆಯನ್ನು ಹೇಳುತ್ತವೆ. ಅದು ಆಗಿದೆ ಎನ್ನುವುದರಲ್ಲಿ ಎರಡು ಮಾತು ಇಲ್ಲ. ಚರಿತ್ರೆಯೇ ವಾಸ್ತವವಾಗಿ ಸೂಚನೆಗಳು. ಅದರ ಸಾಂಕೇತಿಕ ಅರ್ಥವನ್ನು ನಾವು ಗ್ರಹಿಸಬೇಕಾಗುತ್ತದೆ. ಸಮಾನತೆ ಮತ್ತು ಅದರ ಪರಿಣಾಮಗಳನ್ನು ಹೇಳುವುದೂ ಮಾರ್ಕ್ಸ್‌ವಾದವೇ. ವರ್ಗವೇ ನಮಗೆ ಅನೇಕ ಚರಿತ್ರೆಯನ್ನು ಹುಟ್ಟುಹಾಕಿದೆ ಎಂದು ಅದು ಹೇಳುತ್ತದೆ. ಆದರೆ ಇದರಲ್ಲಿ ಇರುವ ಭೌತಿಕವಾದಿ ನಿಲುವನ್ನು ನಾವು ಗಮನಿಸಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಮಾರ್ಕ್ಸವಾದದ ಸಾಮಾಜಿಕ ಸಿದ್ಧಾಂತಗಳು ಬಹಳ ಮಹತ್ವ ಪೂರ್ಣವಾದುದು ಹೌದು. ಅದರ ಸಾಮಾಜಿಕ ಸಿದ್ಧಾಂತಗಳು ಹುಟ್ಟಿದ್ದೇ ಚಾರಿತ್ರಿಕ ಅರಿವಿನಿಂದ ಎನ್ನುವುದನ್ನು ಇಲ್ಲಿ ಪ್ರಸ್ತಾವಿಸಬೇಕು. ಮಾರ್ಕ್ಸ್‌ವಾದವು ಬರೀ ಒಂದು ಸಿದ್ಧಾಂತವಲ್ಲ. ಅದು ನಮ್ಮ ಚಟುವಟಿಕೆಯ ಭಾಗವೂ ಹೌದು. ಚಾರಿತ್ರಿಕ ಬದಲಾವಣೆಯಲ್ಲಿ ಇದರ ದೃಷ್ಟಿಕೋನವು ಬಹಳ ಮಹತ್ವದ್ದೂ ಹೌದು. ಅದು ಜಗತ್ತನ್ನು ಇರುವ ಹಾಗೆಯೇ ವ್ಯಾಖ್ಯಾನವನ್ನು ಮಾಡುತ್ತಿಲ್ಲ. ಅದರ ಬದಲು ಅದು ಜಗತ್ತನ್ನು ಹೇಗೆ ನೋಡಬೇಕು ಮತ್ತು ಹೇಗೆ ಬದಲಿಸಬೇಕು ಎನ್ನುವುದನ್ನು ಹೇಳುತ್ತದೆ. ಯಾವುದನ್ನು ಉತ್ಪಾದನೆಯ ಸಂಬಂಧವೆಂದು ಮಾರ್ಕ್ಸ್‌ವಾದವು ಹೇಳುತ್ತದೆಯೋ ಅದು ಉತ್ಪಾದನೆ ಮತ್ತು ಅದರ ಹಿಂದಣ ಚಾರಿತ್ರಿಕ ಒತ್ತಡವನ್ನೂ ಹೇಳುತ್ತದೆ. ಅದರಲ್ಲಿ ಬೇರೆ ಸಂಗತಿಗಳೂ ಇವೆ. ಮನುಷ್ಯನು ತನಗೆ ಬೇಕಾದ್ದನ್ನು ಉತ್ಪಾದಿಸಲು ಕಲಿತದ್ದೂ ಬಹಳ ಮಹತ್ವದ್ದೂ ಹೌದು. ಇದರ ಹಿಂದೆ ಮನುಷ್ಯನ ಶಕ್ತಿಯ ಕುರಿತ ನಿರ್ದಿಷ್ಟವಾದ ಚಿಂತನೆಗಳೂ ಇವೆ. ಉತ್ಪಾದನೆ ಮತ್ತು ಅದರ ಶಕ್ತಿಯೆನ್ನುವುದು ಚರಿತ್ರೆಯಲ್ಲಿ ಬಹಳ ಮುಖ್ಯವಾದದ್ದೂ ಹೌದು. ವಾಸ್ತವವಾಗಿ ಉತ್ಪಾದನೆಯಲ್ಲಿ ಬೇರೆ ಬೇರೆ ಪರಿಕರಗಳು ಕೆಲಸವನ್ನು ಮಾಡಿವೆ. ಅದರ ಸ್ವರೂಪದಲ್ಲಿ ಬೇರೆ ಬೇರೆ ಸಂಗತಿಗಳೂ ಸೇರಿಕೊಂಡಿವೆ. ಆಧುನಿಕ ಪಂಪ್ ಸೆಟ್‌ಗಳು ಬರುವ ಮೊದಲು ನಮ್ಮಲ್ಲಿ ಏತ ಪದ್ಧತಿಯು ಇತ್ತು. ಒಂದು ಕಾಲದಲ್ಲಿ ಅಂದರೆ ಸರಿಸುಮಾರು 19ನೆಯ ಶತಮಾನದ ಮೊದಲ ಭಾಗದಲ್ಲಿ ಐರ್ಲೆಂಡಿನಲ್ಲಿ ಕತ್ತೆಯೂ ಮುಖ್ಯವಾಗಿ ಉತ್ಪಾದನೆಯ ಭಾಗವೂ ಆಗಿತ್ತು. ಅಂದರೆ ವರ್ಗಗಳು ಮತ್ತು ಅದರ ಪರಿಣಾಮಗಳೂ ಮತ್ತು ಅದರ ಹಿಂದೆ ಇದ್ದ ಚಾಲಕಶಕ್ತಿಗಳು ಬಹಳ ವಿಶಿಷ್ಟವೂ ಆಗಿತ್ತು. ಯಾರು ಮಾರ್ಕ್ಸ್‌ವಾದವನ್ನು ವಿರೋಧಿಸುತ್ತಾರೆಯೋ ಅವರು ಇದನ್ನು ಅರ್ಥಮಾಡಿಕೊಳ್ಳುವ ಯತ್ನವನ್ನು ಮಾಡಿಲ್ಲ. ಆದರೆ ಯಾವಾಗ ನಾವು ಉತ್ಪಾದನೆ ಮತ್ತು ಅದರ

ಚಾಲಕಶಕ್ತಿಗಳನ್ನು ಅರ್ಥ ಮಾಡಿಕೊಳ್ಳಲು ಹೋಗುವುದಿಲ್ಲವೋ ಆಗ ಅದರ ಸ್ವರೂಪವು ಭಿನ್ನವಾಗುತ್ತದೆ. ಇಲ್ಲಿ ಮತ್ತೊಂದು ಸಮಸ್ಯೆಯು ಇದೆ. ಅದನ್ನು ಹೀಗೆ ಕ್ರೋಢೀಕರಿಸಿಬಹುದು: ಉತ್ಪಾದನೆಯು ಜನರ ಶಕ್ತಿಯೂ ಆಗಿದೆ. ಅದು ಮನುಷ್ಯ ಸಂಬಂಧಗಳ ವ್ಯಾಖ್ಯಾನವೂ ಹೌದು. ಮಾರ್ಕ್ಸ್‌ವಾದದಲ್ಲಿ ಯಾವುದೇ ಒಂದು ಉತ್ಪಾದನೆಯು ಚಾಲಕಶಕ್ತಿಯೂ ಆಗುತ್ತದೆ. ಅದರಿಂದ ಅದರ ಸ್ವರೂಪದಲ್ಲಿಯೇ ಚರಿತ್ರೆಯನ್ನು ಬದಲಿಸುವ ಶಕ್ತಿಯೂ ಇದೆ. ಮಾರ್ಕ್ಸ್‌ವಾದವು ಸಾಮಾಜಿಕ ವರ್ಗಗಳ ಕುರಿತು ಮಾತಾಡಿದ್ದು ಈ ಹಿನ್ನೆಲೆಯಲ್ಲಿಯೇ. ಉತ್ಪಾದನೆಯು ವಾಸ್ತವವಾಗಿ ಒಂದು ಚಾಲಕಶಕ್ತಿಯು ಆಗಿರುವುದರಿಂದ ಅದು ವರ್ಗಗಳನ್ನು ಸೃಷ್ಟಿಸುತ್ತದೆ. ಯಾವುದೇ ಚಾರಿತ್ರಿಕ ಶಕ್ತಿಗಳು ನಿಂತ ನೀರು ಅಲ್ಲ. ಅದು ಬದಲಾಗುತ್ತದೆ. ಅದರ ಹಿಂದೆ ಬೇರೆ ಬೇರೆ ಒತ್ತಡಗಳೂ ಕೆಲಸವನ್ನು ಮಾಡುತ್ತದೆ. ಯಾವಾಗ ಚರಿತ್ರೆಯು ನಿಲ್ಲುತ್ತದೆಯೋ ಆಗ ಅದು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಮತ್ತು ಚರಿತ್ರೆಗೆ ಯಾವಾಗಲೂ ಸರಿಯಾದ ಆಯ್ಕೆಗಳು ಇರುತ್ತವೆ. ವರ್ಗಗಳ ಚರಿತ್ರೆಯು ಯಾವಾಗಲೂ ತನ್ನ ಈ ಆಯ್ಕೆಗಳನ್ನು ಸೂಚಿಸುತ್ತದೆ. ಅದನ್ನು ವಿಸ್ತರಿಸುತ್ತದೆ. ಎಲ್ಲಿಯವರೆಗೆ ಕಾರ್ಮಿಕ ವರ್ಗವು ಹಿಡಿತವನ್ನು ಹೊಂದಿರುತ್ತದೆಯೋ ಅಲ್ಲಿಯವರೆಗೆ ಅದು ನಿಂತ ನೀರು ಆಗುವುದೇ ಇಲ್ಲ. ಸಾಮಾಜಿಕ ಸಂಬಂಧಗಳು ಬದಲಾಗುತ್ತವೆ. ಅದರ ಜೊತೆಗೆ ಅವುಗಳ ಸ್ವರೂಪವು ವ್ಯತ್ಯಾಸವಾಗುತ್ತಲೇ ಹೋಗುತ್ತವೆ. ಅನೇಕ ಸಂಘರ್ಷಗಳು ರೂಪುಗೊಳ್ಳುವುದು ಈ ಹಿನ್ನೆಲೆಯಲ್ಲಿ. ಯಾವಾಗ ಈ ಶಕ್ತಿಗಳು ಮತ್ತೆ ಮತ್ತೆ ಬೇರೆ ಬೇರೆ ರೂಪಗಳನ್ನು ಪಡೆಯುತ್ತವೆಯೋ ಆಗ ಅದರಲ್ಲಿ ಅನೇಕ ವೈರುಧ್ಯಗಳೂ ಕಾಣಿಸಿಕೊಳ್ಳುತ್ತವೆ. ಮನುಷ್ಯ ಮತ್ತು ಅವರು ರೂಪಿಸಿಕೊಳ್ಳುವ ಉತ್ಪಾದನೆಗಳಿಗೆ ಬೇರೆ ಆಯಾಮಗಳು ಇರುತ್ತವೆ. ಎನ್ನುವುದನ್ನು ಯಾವುದೇ ಅಭಿವೃದ್ಧಿಯನ್ನು ನಾವು ಈ ದೃಷ್ಟಿಯಿಂದ ಬಹಳ ಮಹತ್ವದ್ದು ಎಂದು ಹೇಳಬೇಕಾಗುತ್ತದೆ. ಆದರೆ ಅದರ ಹಿಂದೆ ಬೇರೆ ಬೇರೆ ಶಕ್ತಿಗಳು ಕೆಲಸವನ್ನು ಮಾಡುತ್ತವೆ. ಒಂದು ಹಂತದಲ್ಲಿ ಕ್ರಾಂತಿಕಾರಕ ಶಕ್ತಿಗಳು ನಮ್ಮನ್ನು ಬೇರೆ ದಡಕ್ಕೆ ಕರೆದುಕೊಂಡು ಹೋಗುತ್ತವೆ. ಅದರ ಪರಿಣಾಮಗಳಲ್ಲಿಯೂ ನಾವು ಇವುಗಳನ್ನು ಮನಗಾಣಬಹುದು. ಮಿಲಿಟರಿ ಶಕ್ತಿ ಮತ್ತು ಅದರ ಅಗತ್ಯಗಳನ್ನು ಅನೇಕ ದೇಶಗಳು ಹೆಚ್ಚು ಪ್ರಚಾರವನ್ನು ಮಾಡುತ್ತಿವೆ. ಕಂಪ್ಯೂಟರ್ ಮೊದಲು ಹೇಳಿಕೊಂಡದ್ದು ಕಾರ್ಮಿಕರು ಅಗತ್ಯವೇ ಇಲ್ಲವೆಂದು ಮಾತ್ರವೇ. ತಾಂತ್ರಿಕತೆ ಮತ್ತು ಅದರ ಪರಿಣಾಮಗಳು ಈ ದೃಷ್ಟಿಯಿಂದ ವಿಶಿಷ್ಟವೂ ಆಯಿತು. ನಾವು ಈಗ ಅನೇಕರನ್ನು ಸಂಪರ್ಕಿಸಲು ಸಾಧ್ಯವಾಗುವುದೇ ಈ ಮೇಲ್ ಮೂಲಕ. ಈ ದೃಷ್ಟಿಯಿಂದ ಇದು ಕ್ರಾಂತಿಕಾರಕವೂ ಆಯಿತು. ಆದರೆ ಈ ಸಾಧನವೂ ಒಂದು ರೀತಿಯಿಂದ ಉತ್ಪಾದನೆಯ ಸಂಬಂಧವೇ ಆಗಿದೆ. ಹಾಗಿದ್ದರೂ ಕೆಲವು ಮಾರ್ಕ್ಸ್‌ವಾದಿಗಳು ಉತ್ಪಾದನೆಯು ಮಾತ್ರವೇ ಚರಿತ್ರೆಯಲ್ಲಿ ಕ್ರಾಂತಿಕಾರಕವಾಗಿಲ್ಲವೆಂದು ಹೇಳುತ್ತಾರೆ. ಆದರೆ ಸ್ವತಃ ಮಾರ್ಕ್ಸ್ ಕೂಡಾ ಹೇಳಿದ ಮತ್ತೊಂದು ಪ್ರಮುಖವಾದ ವಿಷಯವೆಂದರೆ ಉತ್ಪಾದನೆಯ ಶಕ್ತಿಯೇ ಚರಿತ್ರೆಯ ಪಲ್ಲಟಕ್ಕೆ ಕಾರಣವಾಗುತ್ತದೆ. ಅದರ ಜೊತೆಗೆ ಸಾಮಾಜಿಕ ವರ್ಗಗಳು ಕೆಲವನ್ನು ಉತ್ಪಾದನೆಗಾಗಿ ಆಯ್ಕೆಯನ್ನು ಮಾಡುತ್ತವೆ. ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ. ಆದರೆ ಆಳುವ ಬಳಗಗಳು ಕೆಲವನ್ನು ಮಾತ್ರವೇ ಪ್ರೋತ್ಸಾಹಿಸುತ್ತವೆ. ಅವುಗಳು

ಯಾವಾಗಲೂ ಹಸಿವೆ, ಬಡತನ, ಮನೆ ಮುಂತಾದವುಗಳನ್ನು ಕುರಿತು ಮಾತಾಡುವುದೇ ಇಲ್ಲ. ಅದು ತನಗೆ ಬೇಡವಾದುದನ್ನು ಹೇಳಲು ಹೋಗುವುದೇ ಇಲ್ಲ. ಮನುಷ್ಯ ಮತ್ತು ಅವನ ಭೌತಿಕ ಅಗತ್ಯಗಳು ಮುಖ್ಯವಾಗಲೂ ಇಲ್ಲ. ಮನುಷ್ಯತ್ವವೆಂದರೆ ಅದು ಅವರ ಹಸಿವೆ ಮತ್ತು ಅವರ ಆರೋಗ್ಯ ಹಾಗೂ ಅವರ ವಸತಿಗಳ ಕುರಿತು ಹೇಳುವುದು. ಆದರೆ ಬಂಡವಾಳವಾದಕ್ಕೆ ಇದು ಮುಖ್ಯವಲ್ಲ. ಯಾವಾಗ ನಮ್ಮ ನಂಬಿಕೆಗಳು ನಿಜವಾಗಿಯೂ ಮನುಷ್ಯ ಮತ್ತು ಅವರ ಅಗತ್ಯಗಳನ್ನು ಕುರಿತು ಮಾತಾಡುತ್ತೇವೆಯೋ ಆಗ ನಿಜವಾದ ಸಮಾಜವಾದಿಗಳು ಆಗುತ್ತೇವೆ. ಒಂದು ಹಂತದಲ್ಲಿಯಾದರೂ ವ್ಯಕ್ತಿಯು ಸಮಾಜವಾದಿಯಾಗಬೇಕು. ಇಲ್ಲವಾದರೆ ಅವನು ಸಮಾಜದ ವಿರೋಧಿಯಾಗುತ್ತಾನೆ. ಯಾವುದನ್ನು ನಾವು ಸಮಾಜವಾದ ಎಂದು ಹೇಳುತ್ತೇವೆಯೋ ಅದರ ದೃಷ್ಟಿಕೋನವು ಈ ದೃಷ್ಟಿಯಿಂದ ಭಿನ್ನವಾಗುತ್ತದೆ. ಅದರ ಸ್ವರೂಪವೂ ಬೇರೆಯಾಗುತ್ತದೆ. ಇದರಲ್ಲಿ ವಾಸ್ತವವಾಗಿ ಜನರ ಹಿತರಕ್ಷಣೆಯೇ ಪ್ರಧಾನವಾಗಿದೆ. ವರ್ಗವೂ ಅನೇಕ ಸಂದರ್ಭದಲ್ಲಿ ಬದಲಾಗುತ್ತದೆ. ಅದು ಒಂದು ಸ್ಥಳದಲ್ಲಿ ಒಂದು ರೀತಿಯಲ್ಲಿ ಇರಬಹುದು. ಮತ್ತೊಂದು ಪ್ರದೇಶದಲ್ಲಿ ಮತ್ತೊಂದು ಬಗೆಯಲ್ಲಿಯೂ ಇರಬಹುದು. ವಾಸ್ತವವಾಗಿ ರಾಜಕಾರಣವು ಇದನ್ನು ಹೇಳುತ್ತದೆ. ಅದರಲ್ಲಿ ಅದರದೇ ಆದ ನಿಯಮವನ್ನು ಜಾರಿಗೆ ತರುತ್ತದೆ. ಸಾಮಾಜಿಕ ಸಂಬಂಧಗಳು ಕೂಡಾ ಒಂದು ಸರಳವಾದ ವ್ಯಾಖ್ಯೆಯು ಆಗುವುದೂ ಇಲ್ಲ. ಆಯಾ ಕಾಲಘಟ್ಟದಲ್ಲಿ ಸಾಮಾಜಿಕ ಸಂಬಂಧಗಳು ಮತ್ತು ಉತ್ಪಾದನೆಯ ಸಂಬಂಧಗಳು ಬದಲಾಗುತ್ತವೆ. ಬಂಡವಾಳವಾದ ಮತ್ತು ಅದರ ಪರಿಣಾಮಗಳು ಸ್ಥಳೀಯತೆ ಮತ್ತು ವಿಶ್ವಾತ್ಮಕತೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಬಂಡವಾಳವಾದಿ ಕೃಷಿ ಪದ್ಧತಿಯು ಒಂದು ಬಗೆಯಲ್ಲಿ ಇರುತ್ತದೆ. ಬಂಡವಾಳವಾದ ಮತ್ತು ಅದರ ಪರಿಣಾಮಗಳನ್ನು ನಾವು ಸಾಮಾಜಿಕ ಸಂಬಂಧದ ಮೇಲೆ ಬೀರುವ ಪ್ರಭಾವದ ಹಿನ್ನೆಲೆಯಲ್ಲಿ ಕಾಣುತ್ತೇವೆ. ಇಲ್ಲಿ ಮತ್ತೊಂದು ಪ್ರಶ್ನೆಯು ಇದೆ. ಉತ್ಪಾದನೆಯ ಹಿಂದೆ ಇರುವ ಸಾಮಾಜಿಕ ಒತ್ತಡಗಳು ಒಂದು ಬಗೆಯಲ್ಲಿ ಇರುತ್ತವೆ. ಗುಲಾಮಿ ಪದ್ಧತಿಯಿಂದ ಜಮೀನುದಾರಿ ಪದ್ಧತಿ, ಮತ್ತು ಜಮೀನ್ದಾರಿ ಪದ್ಧತಿಯಿಂದ ಬಂಡವಾಳ ಪದ್ಧತಿಯೆನ್ನುವುದು ಅತ್ಯಂತ ಸರಳವಾದ ಒಂದು ವಿವರಣೆಯು ಅಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕಾದ ಅಗತ್ಯವೂ ಇದೆ. ದೇವರು ನಮಗೆ ಮನಸ್ಸನ್ನು ಕೊಟ್ಟು ಆ ಮೂಲಕವೇ ಈ ಪದ್ಧತಿಗಳನ್ನು ಬದಲಿಸಿದ ಎಂದು ಹೇಳುವಂತೆಯೂ ಇಲ್ಲ. ಚಾರಿತ್ರಿಕ ದೃಷ್ಟಿಯಿಂದ ಹೇಳುವುದಿದ್ದರೆ ಅದರ ಸ್ವರೂಪಗಳು ಭಿನ್ನವಾಗುತ್ತವೆ. ಮತ್ತು ಅದರಿಂದಲೇ ಬಂಡವಾಳವಾದಕ್ಕೆ ಪರ್ಯಾಯವಾದುದು ಸಮಾಜವಾದ ಮಾತ್ರವೇ. ಫ್ಯಾಸಿಸಂ ನಂಬುವುದು ಬೇರೆಯದೇ ಆದ ವಿಚಾರವನ್ನು ಎನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ವಾಸ್ತವವಾಗಿ ವರ್ಗ ಮತ್ತು ಸಾಮಾಜಿಕ ಸಂಬಂಧಗಳನ್ನು ಹೇಳಲು ನಮಗೆ ಬೇರೆ ಪದಗಳು ಇಲ್ಲ. ಅದು ಚರಿತ್ರೆಯಲ್ಲಿ ಆಗಿ ಹೋಗಿರುವ ಅನೇಕ ಸಂಗತಿಗಳನ್ನು ನಿರ್ದಿಷ್ಟವಾಗಿಯೂ ವಿವರಿಸುತ್ತದೆ. ಹಾಗೆಂದು ಚರಿತ್ರೆಯೆಂದರೆ ಅದನ್ನು ಯಾವುದೇ ಒಂದು ಬಗೆಯ ಸಂಘರ್ಷವಿಲ್ಲದೆ ರೂಪುತಳೆದಿದೆ ಎಂದು ಭಾವಿಸಬಾರದು ಎಂದು ಮಾರ್ಕ್ಸ್ ಹೇಳುತ್ತಾನೆ. ಪ್ರಾಚೀನ, ಮಧ್ಯಯುಗೀನ ಮತ್ತು ಆಧುನಿಕ ಯುಗಗಳಲ್ಲಿ ಉತ್ಪಾದನೆಯ ಸ್ವರೂಪಗಳು ಬದಲಾಗಿವೆ. ಅದಕ್ಕೆ ಅನುಗುಣವಾಗಿಯೇ ಸಾಮಾಜಿಕ

ಸಂಬಂಧಗಳು ರೂಪುಗೊಂಡಿವೆ. ಯಾವುದೇ ಒಂದು ಸಾಮಾಜಿಕ ಸಂಬಂಧಗಳು ಬದಲಾಗುವುದು ನಿರ್ದಿಷ್ಟವಾದ ಕೆಲವು ನಿಯಮಗಳಿಂದ ಎಂದು ಮಾರ್ಕ್ಸ್ ಹೇಳುತ್ತಾನೆ. ಅವನ ಪ್ರಕಾರ ಚರಿತ್ರೆಗೆ ಅದರದೇ ಆದ ಒಂದು ವಿನ್ಯಾಸವೂ ಇದೆ. ತರ್ಕಗಳೂ ಇವೆ. ಚರಿತ್ರೆಯನ್ನು ಒಂದು ಸರಳರೇಖಾತ್ಮಕವಾದ ವಿಷಯವೆಂದು ನಾವು ಭಾವಿಸಬೇಕಾಗಿಲ್ಲ. ಅದು ವಿಕಾಸವಾಗುತ್ತದೆ. ಯಾವುದೇ ದೇಶದ ಚರಿತ್ರೆ ಮತ್ತು ಉತ್ಪಾದನೆಯ ಸಂಬಂಧಗಳ ನಡುವೆ ವಿಶಿಷ್ಟವಾದ ಒಂದು ಪ್ರಕ್ರಿಯೆಯು ನಡೆಯುತ್ತದೆ. ಆಯಾ ದೇಶಗಳಿಗೆ ಅವುಗಳದೇ ಆದ ಒಂದು ತಾತ್ವಿಕ ಮತ್ತು ಚಾರಿತ್ರಿಕ ಆಯಾಮಗಳೂ ಇರುತ್ತವೆ. ಅವುಗಳನ್ನು ಬರೀ ಒಂದು ಸಾಮಾನ್ಯವಾದ ದಾರಿಯೆಂದು ಹೇಳಲು ಆಗುವುದೂ ಇಲ್ಲ. ಲೆನಿನ್, ಮಾವೋ ಮುಂತಾದವರು ಮಾರ್ಕ್ಸ್‌ವಾದವನ್ನು ಅನ್ವಯ ಮಾಡಿದ್ದು ಈ ದೃಷ್ಟಿಯಿಂದ ವಿಶೇಷವಾಗಿದೆ. ಈ ದೃಷ್ಟಿಯಿಂದ ಮಾರ್ಕ್ಸ್‌ವಾದದ ನಿಲುವು ಖಚಿತವಾಗಿದೆ. ಅದನ್ನು ನೋಡುವಾಗ ನಾವು ಬಂಡವಾಳವಾದದ ಚರಿತ್ರೆಯನ್ನು ಗಮನಿಸಬೇಕಾಗುತ್ತದೆ. ಯಾವುದೇ ಒಂದು ಸಂಗತಿಯು ನಡೆಯುವುದೂ ಚರಿತ್ರೆಯ ದೃಷ್ಟಿಯಿಂದ ಬಹಳ ಮಹತ್ವದ್ದೂ ಹೌದು. ನಮ್ಮ ಆಯ್ಕೆ ಮತ್ತು ನಮ್ಮ ಚಟುವಟಿಕೆಗಳಿಗೆ ಚಾರಿತ್ರಿಕ ಗತಿಗಳು ಇರುತ್ತವೆ ಎನ್ನುವುದು ಈ ದೃಷ್ಟಿಯಿಂದ ಮುಖ್ಯವಾಗಿದೆ. ಮಾರ್ಕ್ಸ್‌ವಾದದಲ್ಲಿ ಬರುವ ಪರಕೀಯತೆಯ ಚರ್ಚೆಯನ್ನು ನಾವು ಚರಿತ್ರೆ ಮತ್ತು ಅದರ ಸ್ವರೂಪದ ಹಿನ್ನೆಲೆಯಲ್ಲಿಯೇ ಗ್ರಹಿಸಬೇಕಾಗುತ್ತದೆ. ಖಾಸಗಿ ಆಸ್ತಿ ಮತ್ತು ಅದರ ನಿರಾಕರಣೆಯನ್ನು ಮಾರ್ಕ್ಸ್ ಮಾಡಿದ್ದು ವಿಶೇಷವಾಗಿದೆ. ಖಾಸಗಿ ಆಸ್ತಿಯನ್ನು ನಿರ್ಮೂಲನೆ ಮಾಡದೆ ಯಾವುದೇ ಬದಲಾವಣೆಯು ಅಸಾಧ್ಯ. ಇದರರ್ಥ ಯಾವುದೇ ಸಾಮಾಜಿಕ ಬದಲಾವಣೆಯು ಸರಳವಾಗಿ ನಡೆಯುತ್ತದೆ ಎಂದಲ್ಲ. ಈ ಕುರಿತು ಮಾರ್ಕ್ಸ್‌ವಾದವು ಖಚಿತವಾದ ಒಂದು ನಿಲುವನ್ನು ತಳೆಯುತ್ತದೆ. ಯಾವುದನ್ನು ನಾವು ಈಗ ನಿರ್ದಿಷ್ಟ ಮತ್ತು ಅನಿರ್ದಿಷ್ಟವಾದ ನಿಲುವುಗಳು ಅಥವಾ ಅನಗತ್ಯವಾಗಿ ಬಳಕೆಯಾಗುವ ಬಹುತ್ವ ಪದಗಳನ್ನು ಈ ದೃಷ್ಟಿಯಿಂದ ಮರುಪರಿಶೀಲಿಸಬೇಕಾಗಿದೆ. ಇದರಲ್ಲಿ ಅನೇಕ ಸಮಸ್ಯೆಗಳು ಇವೆ. ಅನಗತ್ಯವಾಗಿ ಎಲ್ಲದಕ್ಕೂ ಬಹುತ್ವ ಎಂದು ಹೇಳುತ್ತೇವೆಯೋ ಅದು ಅನೇಕ ಸಂದರ್ಭದಲ್ಲಿ ಅಸ್ಪಷ್ಟತೆಯಿಂದ ಬಳಲುವ ಸಾಧ್ಯತೆಗಳೂ ಇವೆ. ಬಂಡವಾಳವಾದವು ಅತ್ಯಂತ ಸಂಕೀರ್ಣವಾದ ಆದರೆ ಅಸಮತೋಲನದಿಂದ ನರಳುವ ಸಂಗತಿಯೂ ಆಗಿರುತ್ತದೆ. ನಾವು ಅನೇಕ ವಿಷಯಗಳನ್ನು ಅತ್ಯಂತ ಸೂಕ್ಷ್ಮವಾಗಿಯೂ ಪರಿಶೀಲಿಸಬೇಕಾಗಿದೆ. ಅದರ ಅಗತ್ಯವೂ ಹೌದು. ಅದು ಸುಮ್ಮನೆ ರಚನೆಯಾಗಿಲ್ಲ. ಅದರಲ್ಲಿ ಅನೇಕ ಆಯಾಮಗಳೂ ಇವೆ ಎನ್ನುವುದು ಖಚಿತ. ವಾಸ್ತವವಾಗಿ ಈಗ ಮಾರ್ಕ್ಸ್‌ವಾದವನ್ನು ಯಾಕೆ ನಿರಾಕರಿಸುತ್ತಾರೆ ಎನ್ನುವುದಕ್ಕೂ ಸಮಕಾಲೀನ ಸ್ಥಿತಿಗೂ ಸಂಬಂಧವಿದೆ. ಅದನ್ನು ನೋಡುವಾಗ ನಮ್ಮ ಎದುರು ಇರುವ ಬಂಡವಾಳವಾದ ಮತ್ತು ಸಮಕಾಲೀನ ಸನ್ನಿವೇಶಗಳನ್ನು ಗ್ರಹಿಸುವ ವಿಧಾನವನ್ನು ನೋಡಬೇಕಾಗುತ್ತದೆ. ಅಂತರಾಷ್ಟ್ರೀಯ ಕಂಪೆನಿಗಳು ಮುಖ್ಯವಾಗಿ ಕೆಲವರಿಗಾಗಿ ಬಂಡವಾಳ ಎನ್ನುವುದನ್ನು ಹೇಳುತ್ತದೆ. ಅದರ ಕಾರಣದಿಂದ ಈಗಿನ ನಮ್ಮ ಸನ್ನಿವೇಶವು ಬಹಳ ಸಂಕಟವನ್ನು ಎದುರಿಸುತ್ತಿದೆ. ಆದರೆ ನಾವು ಈಗಿನ ಬಂಡವಾಳವಾದವು ಹೇಳುತ್ತಿರುವ ಆಕರ್ಷಕ ನುಡಿಗಟ್ಟಿನಿಂದ ಮರುಳಾಗಿದ್ದೇವೆ. ಅದನ್ನು ಒಂದು ಅರ್ಥದಲ್ಲಿ ಸ್ವೀಕರಿಸಿದ್ದೇವೆ. ಒಂದು

ವಿಷಯವನ್ನು ನಾವು ಇಲ್ಲಿ ಪ್ರಸ್ತಾವಿಸಬೇಕು. ಅತಿಯಾದ ಸ್ವಾತಂತ್ರ್ಯದ ಕಲ್ಪನೆಯು ಯಾರಿಗೆ ಇದೆಯೋ ಅವರು ಅದನ್ನು ದುರುಪಯೋಗ ಮಾಡುವುದಂತೂ ನಿಜ. ಮಾರ್ಕ್ಸ್‌ವಾದವು ಸುಮ್ಮನೆ ಏಕಾಂತವಾದ ಮತ್ತು ಪರಕೀಯತೆಯನ್ನು ಹೇಳಿಲ್ಲ. ಅದು ಆಧುನಿಕ ಜಗತ್ತಿನಲ್ಲಿ ಸೃಷ್ಟಿಯಾಗಿದೆ. ಅದರಲ್ಲಿ ಆಧುನಿಕ ಸಂಗತಿಗಳು ಸೇರಿಕೊಂಡಿವೆ. ಗೊತ್ತಿರುವ್ಯದು ಒಳ್ಳೆಯದು.

ಒಂದು ಮಾತು ಇದೆ. ಅಂದರೆ ಯಾವುದನ್ನು ನಾವು ಸಾವು ಎಂದು ಹೇಳುತ್ತೇವೆಯೋ ಅದು ಭೌತಿಕವಾದದ್ದು. ಅದು ವಿಧಿಗೆ ಸಂಬಂಧಪಟ್ಟದ್ದು ಅಲ್ಲ. ಅದನ್ನು ಅನೇಕರು ಸಮಾಜ ಮತ್ತು ಅದರ ನ್ಯಾಯ ವ್ಯವಸ್ಥೆ ಎಂದೂ ಹೇಳುತ್ತಾರೆ. ಆದರೆ ಅದನ್ನು ಅದೇ ರೀತಿಯಲ್ಲಿ ಎಲ್ಲವನ್ನೂ ಹೇಳಲು ಬರುವುದಿಲ್ಲ. ಅದರಲ್ಲಿ ಪರಿವರ್ತನೆಗಳು ಇರುತ್ತವೆ. ಅದು ಪರಿವರ್ತನೆಯು ಆಗುವಾಗ ಅದರ ಸ್ವರೂಪವೂ ಚರಿತ್ರೆಯಲ್ಲಿ ಸ್ಥಿರಿ ಹೋಗುತ್ತದೆ. ನಮ್ಮ ದೇಹ ಮತ್ತು ಅದರ ಚಟುವಟಿಕೆಗಳೂ ಹಾಗೆ ಚರಿತ್ರೆಗೆ ಸಂಬಂಧಪಟ್ಟಿವೆ. ಅದರಲ್ಲಿ ಪರಿವರ್ತನೆಗಳು ಆಗಿರುವುದೂ ಅದರದೇ ಆದ ಕಾರಣಗಳಿಗಾಗಿ ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಸಹಜ ಮತ್ತು ನಿಸರ್ಗದ ನ್ಯಾಯವನ್ನು ವಾಸ್ತವವಾಗಿ ಮಾರ್ಕ್ಸ್ ಬಹಳ ಮುಖ್ಯವೆಂದು ಹೇಳುವಾಗ ಅದರ ಸಾಧ್ಯತೆಯನ್ನು ಮನಗಂಡಿದ್ದಾನೆ. ಅದನ್ನು ವೈಜ್ಞಾನಿಕವಾಗಿಯೇ ಅರ್ಥ ಮಾಡಿಕೊಳ್ಳಬೇಕು ಎನ್ನುವುದು ಅವನ ವಾದವಾಗಿದೆ. ಯಾವುದೇ ಬದಲಾವಣೆಯನ್ನು ನಾವು ನೋಡಬೇಕಾದ ಅಗತ್ಯಗಳು ಭಿನ್ನವಿದೆ. ಚಾರಿತ್ರಿಕ ನ್ಯಾಯ ಎನ್ನುವುದು ಮೂಲಭೂತವಾಗಿ ವಿಶಿಷ್ಟವಾದ ಸಂಗತಿಯೂ ಹೌದು. ಮಾರ್ಕ್ಸ್‌ವಾದದ ಪ್ರಕಾರ ಚರಿತ್ರೆ ಮತ್ತು ಅದರ ನ್ಯಾಯವನ್ನು ನಾವು ನೋಡಬೇಕಾದ ಕ್ರಮವೇ ಬೇರೆ. ಅದನ್ನು ಅವನು ವೈಜ್ಞಾನಿಕ ಎಂದು ಹೇಳುತ್ತಾನೆ. ಮತ್ತು ಅದನ್ನು ಹೀಗೆಯೂ ಹೇಳಬಹುದು: ಯಾವುದೇ ಒಂದು ಚಾರಿತ್ರಿಕ ಸಂಗತಿಗಳು ನಡೆಯುವುದೇ ಚಾರಿತ್ರಿಕ ಅಗತ್ಯಕ್ಕೆ ಅನುಸಾರವಾಗಿ. ಚಾರಿತ್ರಿಕ ಸಂಗತಿಗಳು ಮೂಲಭೂತವಾಗಿ ಒಂದು ಚಿಹ್ನೆ ಮಾತ್ರವೇ ಆಗಿರುತ್ತದೆ. ಅದು ಯಾವುದನ್ನೋ ಸೂಚಿಸುತ್ತದೆ. ಆದರೆ ಅನೇಕರು ಚರಿತ್ರೆಯನ್ನು ನೋಡುವಾಗ ಅದರ ಸ್ವರೂಪವನ್ನು ಬರೀ ಉಂಡೆಯಂತೆ ನೋಡುತ್ತಾರೆ. ಅವರಿಗೆ ಅದರ ಹಿಂದೆ ಇರುವ ಗತತಾರ್ಕಿಕತೆಯು ಬೇಕಾಗಿಯೂ ಇರುವುದಿಲ್ಲ. ಪ್ರತಿಯೊಬ್ಬ ಮನುಷ್ಯನ ಚಟುವಟಿಕೆಗಳು ಸಹಜವಾಗಿ ಅನೇಕವನ್ನು ತೆರೆಯುತ್ತದೆ. ಅವನ ಜೀವನದ ಸಾಧ್ಯತೆಯೂ ಆಗಿರುತ್ತದೆ. ವ್ಯಕ್ತಿಯ ಚಟುವಟಿಕೆ ಎನ್ನುವುದು ಮೂಲಭೂತವಾಗಿ ಪ್ರಯೋಗಗಳು ಮಾತ್ರವೇ ಕೇಳಿದರೆ ಆ ರೀತಿಯಲ್ಲಿ ಉತ್ತರಿಸಲು ಸಾಧ್ಯವೇ ಇಲ್ಲ. ಚರಿತ್ರೆಯಲ್ಲಿ ಅನೇಕ ಕೆಲಸಗಳು ಹಾಗೆಯೇ ಉಳಿದುಕೊಂಡು ಬಂದಿವೆ. ಮತ್ತೆ ಕೆಲವು ಬದಲಾಗುತ್ತಾ ಬಂದಿವೆ. ಆದ್ದರಿಂದ ಅವುಗಳ ಕಾರ್ಯವನ್ನು ನಾವು ಒಂದು ಬರೀ ಹೇಳಿಕೆಯ ಥರ ನೋಡುವುದು ಅಸಾಧ್ಯ. ಚರಿತ್ರೆಯಲ್ಲಿ ಹಿಂಸೆಗಳು ಆಗುತ್ತಾ ಬಂದಿವೆ. ಅನೇಕವು ಘಟನೆಗಳಾಗಿವೆ. ಮತ್ತೆ ಕೆಲವು ಸಂಘರ್ಷಗಳನ್ನು ಹುಟ್ಟುಹಾಕಿವೆ. ಚಾರಿತ್ರಿಕ ಅಗತ್ಯವೆನ್ನುವುದು ಮೂಲಭೂತವಾಗಿ ಒಂದು ರಾಜಕಾರಣ ಮತ್ತು ಆರ್ಥಿಕ ಸಂಗತಿಗಳೂ ಹೌದು. ಜಮೀನ್ದಾರಿ ಮತ್ತು ಬಂಡವಾಳವಾದ ಎನ್ನುವುದು ಸರಳವಾದ ಒಂದು ವಿವರಣೆಯು ಆಗಿಲ್ಲ. ಅದರಲ್ಲಿ ಅನೇಕವು ನಡೆದಿದೆ. ಉತ್ಪಾದಕ ಶಕ್ತಿಯು ಬರವೇ

ಹೋಗಿದ್ದರೆ ಅದು ಬದಲಾಗುತ್ತಲೇ ಇರಲಿಲ್ಲ. ಯಾವುದನ್ನು ನಾವು ಹೆಚ್ಚುವರಿ ಉತ್ಪಾದನೆ ಎಂದು ಹೇಳುತ್ತೇವೆಯೋ ಅದು ಕೂಡಾ ಜನರ ಶ್ರಮದಿಂದ ಆಗಿದೆ. ಅದಕ್ಕೂ ವರ್ಗಕ್ಕೂ ಒಂದು ಸಂಬಂಧವಿದೆ. ಮತ್ತು ಉತ್ಫಾದನೆಯ ಮೇಲೆ ಅನೇಕ ಜನರ ಶ್ರಮವೂ ಇದೆ. ಅದು ಉತ್ಪತ್ತಿ ಆಗಿದೆ. ಅದರಲ್ಲಿಯೂ ಒಂದು ನಿಯಮವು ಇದೆ. ಆದ್ದರಿಂದಲೇ ಈಗಿನ ಉತ್ಫಾದನೆ ಮತ್ತು ಅದರ ಹಂಚುವಿಕೆಯ ಕುರಿತು ಹೆಚ್ಚು ಆಲೋಚನೆಯನ್ನು ಮಾಡಬೇಕಾಗಿದೆ. ಆಧುನಿಕ ಉತ್ಪಾದನೆ ಮತ್ತು ಅದರ ಪರಿಣಾಮಗಳನ್ನು ನಾವು ಒಂದು ಮುಗ್ಧವಾದ ಪ್ರತಿಕ್ರಿಯೆ ಎಂದು ಹೇಳುವ ಅಗತ್ಯವಿಲ್ಲ. ಅದರ ಹಿಂದೆ ಬೇರೆ ಬೇರೆ ಶಕ್ತಿಗಳು ಇವೆ. ಸಂಪತ್ತು ಮತ್ತು ಅದರ ಕ್ರೋಢೀಕರಣವನ್ನು ನಾವು ಗಂಭೀರವಾಗಿಯೂ ಗಮನಿಸಬೇಕಾದ ಅಗತ್ಯವಿಲ್ಲ. ಯಾಕೆಂದರೆ ಅದರಲ್ಲಿ ಸರಿಯಾದ ಹಂಚುವಿಕೆ ಎನ್ನುವುದಕ್ಕೆ ಯಾವುದೇ ಅರ್ಥವೇ ಇಲ್ಲ. ಬಂಡವಾಳವಾದವು ಈಗ ತಳೆದಿರುವ ರೂಪವೇ ಭಿನ್ನವಾದದ್ದು. ಯಾರಿಗೋ ಲಾಭ ಮತ್ತೆ ಯಾರಿಗೋ ಹಸಿವು. ಇದರ ಪರಿಣಾಮವೂ ಬೇರೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯಿದೆ. ಬಂಡವಾಳವಾದವು ಒಂದು ಅರ್ಥದಲ್ಲಿ ವಿಶಿಷ್ಟವಾಗಿಯೇ ರೂಪುತಳೆದಿರುತ್ತದೆ. ಅನೇಕ ಸಂದರ್ಭದಲ್ಲಿ ಇದೇ ನಮಗೆ ಬೇರೆ ದಾರಿಯನ್ನು ಹಾಕಿಕೊಡಬಹುದು. ಮತ್ತು ಅದರ ಗರ್ಭದಿಂದಲೇ ಸಮಾಜವಾದವೂ ಹುಟ್ಟಬಹುದು. ಆಧುನಿಕ ಬಂಡವಾಳವಾದವು ಅನೇಕ ರೀತಿಯ ಲಾಭವನ್ನು ತಂದುಕೊಟ್ಟಿದೆ. ಮತ್ತು ಅದರ ದೆಸೆಯಿಂದ ಅನೇಕ ಉತ್ಫಾದನೆಗಳೂ ನಡೆದಿವೆ. ಚರಿತ್ರೆ ಎಂದರೆ ಅದು ದುಃಖ ಮತ್ತು ಸುಖಗಳ ನಿರೂಪಣೆ. ಅದರಲ್ಲಿ ಅನೇಕ ಜನರು ಭಾಗವಹಿಸಿದ್ದಾರೆ. ಬಂಡವಾಳವಾದವು ಅದರಲ್ಲಿಯೂ ಈಗಿನ ಅಂತರ್‌ರಾಷ್ಟ್ರೀಯ ಕಂಪೆನಿಗಳು ಭೂಮಿ ಮತ್ತು ಅದರ ವಿಷಯವಾಗಿ ತಳೆದ ನಿಲುವುಗಳನ್ನು ನೋಡಿದರೆ ಅದರ ತಾತ್ವಿಕತೆಯು ನಮಗೆ ಸ್ಪಷ್ಟವಾಗುತ್ತದೆ. ಆಧುನಿಕ ಬಂಡವಾಳವಾದವು ಅತ್ಯಂತ ಹೆಚ್ಚು ಸ್ವಾತಂತ್ರ್ಯದ ಬಗ್ಗೆ ಮಾತಾಡುತ್ತವೆ. ಆದರೆ ಅಂತರಾಳದಲ್ಲಿ ಅವು ಸ್ವಾತಂತ್ರ್ಯ ವಿರೋಧಿಯೂ ಆಗಿದೆ. ಆದ್ದರಿಂದ ಯಾವುದನ್ನು ಈಗ ಬಂಡವಾಳವಾದವು ಆಧುನಿಕತೆ ಎಂದು ಹೇಳುತ್ತದೆಯೋ ಅದು ಎಷ್ಟರಮಟ್ಟಿಗೆ ಉಪಯುಕ್ತ ಎಂದು ನೋಡಬೇಕಾಗುತ್ತದೆ. ಯಾವುದು ಈಗ ಜನರಿಗೆ ಉಪಯುಕ್ತ ಎನ್ನುವ ಪ್ರಶ್ನೆಯು ಅತ್ಯಂತ ಗಂಭೀರವಾಗುತ್ತದೆ. ಯಾವುದು ನಿಜವಾದ ಸ್ವಾತಂತ್ರ್ಯ ಮತ್ತು ಯಾವುದು ನಮಗೆ ನಿಜವಾಗುತ್ತದೆ ಎಂದು ಹೇಳಬೇಕಾಗುತ್ತದೆ. ಆಧ್ಯಾತ್ಮಿಕವಾದ ವಿಚಾರಗಳ ವಿಷಯದಲ್ಲಿ ಮಾತ್ರವೇ ನಾವು ಸ್ವಾತಂತ್ರ್ಯವನ್ನು ಹೊಂದಿದ್ದೇವೆಯೇ? ಯಾವುದು ಈಗ ಪವಿತ್ರವಾಗಿದೆ? ಈ ಪ್ರಶ್ನೆಗಳು ಆಧುನಿಕತಾವಾದಿಗಳ ಪ್ರಕಾರ ಶೈಕ್ಷಣಿಕವಲ್ಲ. ಅಂದರೆ ಅವರು ಹೇಳುವುದು ಬಡವರ ಪ್ರಶ್ನೆ ಮತ್ತು ಹಸಿದವರ ಪ್ರಶ್ನೆಯು ಈ ಆವರಣದೊಳಗೆ ಬರಬಾರದು ಅಂತಲೇ. ಆದರೆ ಮಾರ್ಕ್ಸ್‌ವಾದವು ಒಂದು ಸಮಾಜದ ಬಗ್ಗೆ ವಿಶಿಷ್ಟವಾದ ನಿಲುವನ್ನು ತಳೆದಿದೆ. ಮತ್ತು ಅದರಲ್ಲಿ ಜೀವನದ ಬಗ್ಗೆಯೂ ನಿರ್ದಿಷ್ಟವಾದ ನಿಲುವು ಇದೆ. ಸಾಮಾಜಿಕ ಜೀವನದಲ್ಲಿ ಹಿಂಸೆಯು ಅಗತ್ಯವಿಲ್ಲ. ಅದರಲ್ಲಿ ಶೋಷಣೆಯು ಬೇಡ. ಮತ್ತು ಅದರಲ್ಲಿ ಮತ್ತೆ ಯಾವುದೇ ನೋವುಗಳು ಅಗತ್ಯವಲ್ಲ ಎನ್ನುವುದು ಅದರ ನಿಲುವು ಆಗಿದೆ. ಯಾರೋ ಕೆಲವರು ಮಾತ್ರವೇ ಶ್ರೇಷ್ಠರು ಮತ್ತು ಕೆಲವರು ಮಾತ್ರವೇ ಕನಿಷ್ಠರು

ಎಂಬ ವಾದವನ್ನು ಅದು ಒಪ್ಪಿಕೊಳ್ಳುವುದು ಇಲ್ಲ. ಮನುಷ್ಯನ ಸ್ವಾರ್ಥವು ಅಪಾಯಕಾರಿಯಾಗಿದೆ ಎನ್ನುವುದೇ ಅದರ ನಿಲುವಾಗಿದೆ. ನಾವು ಸೆಕ್ಯುಲರ್ ಆಗಬೇಕಾದ ಅಗತ್ಯವನ್ನು ಮಾರ್ಕ್ಸ್‌ವಾದವು ಹೇಳುತ್ತದೆ. ಇದನ್ನು ಹೇಳಲು ಯಾವುದೇ ಒಂದು ಪಂಚಾಂಗವನ್ನು ನಾವು ಬಿಡಿಸಬೇಕಾದ ಅಗತ್ಯವಿಲ್ಲ. ನಾವು ಸಾವನ್ನು ಧಿಕ್ಕರಿಸಲಾರೆವು. ಆದರೆ ಜನರಲ್ಲಿ ಸಮಾನತೆಯನ್ನು ತರಬಲ್ಲೆವು ಎನ್ನುವುದೇ ಮಾರ್ಕ್ಸ್‌ವಾದದ ನಿಲುವು ಆಗಿದೆ. ಕಳೆದ ಅನೇಕ ಹತ್ತು ಹದಿನೈದು ವರ್ಷಗಳಲ್ಲಿ ಆರ್ಥಿಕತೆಯಲ್ಲಿ ಅನೇಕ ಬಿಕ್ಕಟ್ಟುಗಳು ಕಾಣಿಸಿಕೊಂಡಿವೆ. ಅದರ ಪರಿಣಾಮವಾಗಿ ಬೇರೆ ಸಮಸ್ಯೆಗಳು ಉಂಟಾಗಿವೆ. ಅಂತರ್‌ರಾಷ್ಟ್ರೀಯ ಕಂಪೆನಿಗಳು ರಾಷ್ಟ್ರೀಯತೆಯನ್ನು ಪ್ರಶ್ನಿಸಿವೆ. ಯಾವುದೋ ಕೆಲವು ಕಂಪೆನಿಗಳು ಮಾತ್ರವೇ ಕೇಂದ್ರೀಕೃತವಾಗಿವೆ. ದುಡ್ಡು ಕೆಲವರ ಸೊತ್ತು ಮಾತ್ರವೇ ಆಗಿವೆ. ಇಲ್ಲಿ ಸ್ವಂತ ಸುಖ ಎನ್ನುವುದು ಮಾತ್ರವೇ ಮುಖ್ಯ. ಈ ವಾಸ್ತವವನ್ನು ನಾವು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಆದ್ದರಿಂದ ನಾವು ಮುಂದಿನ ಭವಿಷ್ಯದ ಕರಾಳತೆಯನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಅವಶ್ಯಕತೆಯು ಇದೆ. ಮಾರ್ಕ್ಸ್‌ವಾದ ಎನ್ನುವುದು ಬರೀ ಕನಸುಗಾರಿಕೆಯು ಅಲ್ಲ. ಅದರಲ್ಲಿ ಮತ್ತೆ ಕೆಲವು ಆದರ್ಶಗಳು ಮಾತ್ರವೇ ಇದೆ ಎಂದು ಹೇಳಬೇಕಾಗಿಯೂ ಇಲ್ಲ. ವರ್ತಮಾನ ಮತ್ತು ಭವಿಷ್ಯದ ಕುರಿತಾಗಿ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದು ನಮ್ಮ ಅಗತ್ಯ. ಯಾವುದೇ ಪರಿವರ್ತನೆಯು ಸಾಧ್ಯವಾಗುವುದೇ ಬಹಳ ಮುಖ್ಯವಾಗಿ ಅದರ ತಿಳುವಳಿಕೆಯಲ್ಲಿ ಎನ್ನುವುದನ್ನು ಇಲ್ಲಿ ಮರೆಯುವಂತಿಲ್ಲ. ಮುಂದಿನ ಜೀವನ ಮತ್ತು ಅದರ ಸಾಧ್ಯತೆಗಳ ಬಗ್ಗೆ ಒಂದು ಕನಸು ಬೇಕಾಗುತ್ತದೆ. ಯಾವುದನ್ನು ಈಗ ನಮ್ಮ ಅಗತ್ಯವೆಂದು ಹೇಳುತ್ತೇವೆಯೋ ಅದರ ಸ್ವರೂಪವೂ ಬೇರೆಯಾಗಿದೆ. ಆದ್ದರಿಂದ ನಮ್ಮ ವರ್ತಮಾನವನ್ನು ಈಗ ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ನಮ್ಮ ಭವಿಷ್ಯ ಮತ್ತು ಅದರ ಸಾಧ್ಯತೆಗಳಿಗೆ ಅನೇಕ ಮುಖಗಳಿವೆ ಎನ್ನುವುದು ಈಗ ಸ್ಪಷ್ಟವಾಗಿದೆ. ಅದು ವಿಕಾಸವಾಗುತ್ತದೆ. ಅದರ ಅಗತ್ಯವೂ ಇದೆ. ಈ ದೃಷ್ಟಿಯಿಂದಲೂ ಸಮಾಜವಾದ ಮತ್ತು ಅದರ ಕ್ರಿಯಾಶೀಲತೆಯು ಅಗತ್ಯವೂ ಆಗಿದೆ. ನಮ್ಮ ಈಗಿನ ನಡೆಯಲ್ಲಿ ಮುಂದಿನ ಭವಿಷ್ಯವೂ ಇದೆ. ಮತ್ತು ನಾವು ತಳೆಯುವ ನಿಲುವುಗಳು ನಮ್ಮ ಈಗಿನ ವರ್ತಮಾನವನ್ನು ಆಧರಿಸಿಕೊಂಡಿವೆ. ನಮ್ಮ ಸಾಂಸ್ಕೃತಿಕ ಚಿಂತನೆಗಳನ್ನೂ ಈ ದೃಷ್ಟಿಯಿಂದ ಕಟ್ಟಬೇಕಾಗಿದೆ. ಯಾವುದೇ ಸಂಗತಿಗಳಲ್ಲಿ ನಾವು ಕಾಣುವ ಪ್ರಮುಖವಾದ ಅಂಶವೆಂದರೆ ಅದರ ವಿಭಿನ್ನವಾದ ಸಾಧ್ಯತೆಗಳು. ಹಾಗೆ ನೋಡುವುದಿದ್ದರೆ ಯಾವುದೇ ಸಂಸ್ಕೃತಿಯಲ್ಲಿ ಆಗುವ ಬದಲಾವಣೆಗಳಲ್ಲಿ ವಿಶಿಷ್ಟವಾದ ಅನೇಕ ಸಂಗತಿಗಳಿಗೆ ವಿವಿಧ ಆಯಾಮಗಳೂ ಸೇರಿಕೊಂಡಿವೆ. ಆದರೆ ಯಾವಾಗ ಉತ್ಪಾದನೆ ಮತ್ತು ಅದರ ಸ್ವರೂಪಗಳು ಬದಲು ಆಗುತ್ತವೆಯೋ ಆಗ ಸಮಾಜವನ್ನು ನಾವು ಆಯಾ ಕಾಲದ ಚರಿತ್ರೆ ಮತ್ತು ವಿಕಾಸದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವುದೇ ಚರಿತ್ರೆಯು ಒಂದು ನಿಯಮವನ್ನು ಇಟ್ಟುಕೊಂಡಿರುತ್ತದೆ. ಆಯಾ ನಿಯಮಗಳು ನಿರ್ದಿಷ್ಟವಾದ ಹಾದಿಯನ್ನು ಹೊಂದಿರುತ್ತದೆ. ಮಾರ್ಕ್ಸ್‌ವಾದವು ಈ ಸಂಗತಿಗಳನ್ನು ಗಂಭೀರವಾಗಿಯೇ ಪರಿಗಣಿಸಿದೆ. ಯಾವುದೇ ದೇಶದಲ್ಲಿ ಚರಿತ್ರೆಯನ್ನು ಕಟ್ಟುವುದು ಉಳ್ಳವರು ಅಲ್ಲ. ಅವರ ಬದಲಿಗೆ ಅದನ್ನು ಕಟ್ಟುವುದು ಸಾಮಾನ್ಯವಾದ ಮನುಷ್ಯರು ಎನ್ನುವುದು ಅದರ ಮುಖ್ಯವಾದ

ತಿಳುವಳಿಕೆ. ಇವುಗಳಿಗೆ ವಾಸ್ತವದ ಅಡಿಗಟ್ಟು ಇರುತ್ತದೆ. ಅದು ಭ್ರಮೆಯಲ್ಲ. ವಾಸ್ತವದ ಅರಿವು ಮತ್ತು ಭವಿಷ್ಯದ ಕುರಿತಾಗಿ ದರ್ಶನ ಎರಡೂ ಅಗತ್ಯವಾಗಿರುತ್ತದೆ. ಮಾರ್ಕ್ಸ್‌ವಾದವು ಬಂಡವಾಳವಾದವನ್ನು ಹೇಳುವಾಗ ಅದರ ಕುರಿತಾಗಿ ಒಂದು ಭ್ರಮೆಯನ್ನು ಹೊಂದಿರುತ್ತದೆ ಎಂದು ಭಾವಿಸಬಾರದು. ಅದನ್ನು ನಿರ್ದಿಷ್ಟವಾದ ಗತತಾರ್ಕಿಕತೆಯಲ್ಲಿ ಅರ್ಥ ಮಾಡಿಕೊಳ್ಳುವುದೂ ಅಷ್ಟೇ ಅಗತ್ಯವೂ ಹೌದು. ಮನುಷ್ಯರ ಸ್ವಾತಂತ್ರ್ಯವನ್ನು ಮಾರ್ಕ್ಸ್‌ವಾದವು ಅಲ್ಲಗಳೆಯುವುದಿಲ್ಲ. ಆದರೆ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಸ್ವಾತಂತ್ರ್ಯ ಎನ್ನುವುದನ್ನು ಅದು ಒಪ್ಪುವುದಿಲ್ಲ. ಭೌತಿಕವಾದಿ ನೆಲೆಗಳು ಅದನ್ನು ವಾಸ್ತವದ ಹಿನ್ನೆಲೆಯಲ್ಲಿ ಗಮನಿಸುವುದು ಅತ್ಯಂತ ಅವಶ್ಯಕವೆಂದು ಅದು ಹೇಳುತ್ತದೆ. ಅದು ಚರಿತ್ರೆಯೊಂದಿಗೆ ಮಿಳಿತವಾಗಿದೆ. ಅಷ್ಟರ ಮಟ್ಟಿಗೆ ಅದು ನಿಜವಾದ ಸಂಗತಿಯನ್ನು ಹೇಳುತ್ತದೆ. "ವಾಸ್ತವವಾಗಿ ಇರಿ ಮತ್ತು ಯಾವುದು ಅಸಾಧ್ಯವೆಂದು ಅನಿಸುತ್ತದೆಯೋ ಅದನ್ನೇ ಪಡೆಯಲು ಪ್ರಯತ್ನಿಸಿ" ಎನ್ನುವುದೇ ಮಾರ್ಕ್ಸ್‌ವಾದದ ನಿಲುವು ಹೌದು. ಮನುಷ್ಯ ಮತ್ತು ಅವನ ಸಾಧ್ಯತೆಯನ್ನು ನಾವು ನಿರಾಕರಿಸಬೇಕಾಗಿಯೂ ಇಲ್ಲವೆಂದು ಮಾರ್ಕ್ಸ್‌ವಾದವು ಹೇಳುತ್ತದೆ. ಒಂದು ಅಂಶವನ್ನು ನಾವು ಗಮನಿಸುವುದು ಅವಶ್ಯಕ. ಯಾವುದನ್ನು ನಾವು ಜಮೀನ್ದಾರಿ ಪದ್ಧತಿಯೆಂದು ಹೇಳುತ್ತೇವೆಯೋ ಅದು ಮನುಷ್ಯರ ಸಮಾಜದಲ್ಲಿ ಅಸಹಜವೂ ಆಗಿದೆ. ಅದು ಕೃತಕ. ಅದರ ರಚನೆಯು ಆಗಿದೆ. ಬಂಡವಾಳವಾದವು ಕೂಡಾ ಮನುಷ್ಯರನ್ನು ನೋಡುವ ಕ್ರಮವೇ ಬೇರೆಯಾಗಿದೆ. ಅದು ತನ್ನ ಕಡೆಗೆ ಅನೇಕವು ಗಮನಿಸುವ ಹಾಗೆ ಮಾಡುತ್ತದೆ. ಈ ಮಾದರಿಯ ಸಾಮಾಜಿಕ ವ್ಯವಸ್ಥೆಯು ಬದಲಾಗಬೇಕು ಎನ್ನುವುದೇ ಇಲ್ಲಿ ಮುಖ್ಯವಾದ ತತ್ವ. ವರ್ತಮಾನದ ಮೇಲೆ ಭವಿಷ್ಯವನ್ನು ಕಟ್ಟುವುದು ಮಾರ್ಕ್ಸ್‌ವಾದದ ಗುರಿಯೂ ಹೌದು. ಮನುಷ್ಯನ ಘನತೆಯನ್ನು ಪ್ರಶ್ನಿಸುವ, ಮನುಷ್ಯರನ್ನು ಅಮಾನವೀಯವಾಗಿ ನೋಡುವ, ಅಸಮತೆಯು ಇರುವ, ಹಾಗೂ ಅಸಹಜವಾದ ಜೀವನ ಇರುವ ಸಂಗತಿಗಳು ಹೋಗಬೇಕು ಎನ್ನುವುದು ಮಾತ್ರವೇ ಮಾರ್ಕ್ಸ್‌ವಾದದ ನಿಲುವು. ಆದ್ದರಿಂದ ಅದು ಕೆಲವು ನಿಜವನ್ನು ಹೇಳುತ್ತದೆ. ಯಾರು ಈ ವಾಸ್ತವವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲವೋ ಅವರು ಸಿದ್ಧಾಂತವನ್ನು ಬೇಡವೆಂದು ಹೇಳುತ್ತಾರೆ. ನಾವು ಬಿಂದಾಸ್ ಆಗಿಯೇ ಬದುಕುತ್ತೇವೆ ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಇದು ಅಸಹಜವಾದ ಒಂದು ತಿಳುವಳಿಕೆಯು. ಆದರೆ ಯಾವುದನ್ನು ನಾವು ಈಗ ಮಧ್ಯಮ ವರ್ಗದ ಮನೋಭಾವ ಎಂದು ಹೇಳುತ್ತೇವೆಯೋ ಅದು ಅನೇಕವನ್ನು ಬಹಳ ಆತಂಕದಲ್ಲಿ ನೋಡುತ್ತದೆ. ಮಾರ್ಕ್ಸ್‌ವಾದವನ್ನು ಅನೇಕರು ಯಾಕೆ ಒಪ್ಪಿಕೊಳ್ಳುವುದಿಲ್ಲವೆಂದರೆ ಅದರಲ್ಲಿ ಬರೀ ಘರ್ಷಣೆ ಮತ್ತು ಹಿಂಸೆ ಮಾತ್ರವೇ ತುಂಬಿಕೊಂಡಿದೆ ಎಂದು ಅವರು ಭಾವಿಸಿದ್ದಾರೆ. ಆದರೆ ಅವರು ಜಮೀನ್ದಾರಿ ಪದ್ಧತಿಯ ರಾಕ್ಷಸನ ಸ್ವರೂಪವನ್ನು ಸರಿಯಾದ ಅರ್ಥ ಮಾಡಿಕೊಂಡ ಹಾಗೆ ಕಾಣುವುದಿಲ್ಲ. ಆದರೆ ಅಸಹಜತೆಯು ಅವರಿಗೆ ಕಾಣಿಸುವುದೂ ಇಲ್ಲ. ಆದರೆ ಈಗಿನ ಅನೇಕ ಉತ್ಪಾದನೆಯ ಕ್ರಮದಲ್ಲಿ ಒಂದಕ್ಕೆ ಮತ್ತೊಂದು ಪರ್ಯಾಯವಾದ ಉತ್ಪಾದನೆಯನ್ನು ನಾವು ಕಾಣುವುದೇ ಇಲ್ಲ. ನಾವು ಅನೇಕ ಸಂಗತಿಗಳಿಗೆ ಆಳುಗಳಾಗಿದ್ದೇವೆ. ಅದರ ಪರಿಣಾಮವನ್ನು ಅನುಭವಿಸುತ್ತಿದ್ದೇವೆ. ಮನುಷ್ಯನ ಚರಿತ್ರೆಗೆ ಇರುವ ಅನೇಕ ಸಾಧ್ಯತೆಯನ್ನು ಈಗ

ನಿರಾಕರಿಸಲಾಗುತ್ತದೆ ಎನ್ನುವುದೂ ಅಷ್ಟೇ ಸತ್ಯ. ಉದಾರವಾದಿಗಳು ಇದನ್ನು ಸಹಜ ಎಂದು ಹೇಳುತ್ತಾರೆ. ಅದರ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಯಾವುದನ್ನು ಆಧುನಿಕ ನಾಗರಿಕತೆ ಎಂದು ಹೇಳುತ್ತೇವೆಯೋ ಅದರ ಸ್ವರೂಪಗಳೂ ಬದಲಾಗಿವೆ. ಅದು ಮನಸ್ಸಿನ ಮೇಲೆ ಹಾಕುತ್ತಿರುವ ಒತ್ತಡವೂ ಬಹಳ ದೊಡ್ಡದು. ಅದು ಮಹತ್ವಾಕಾಂಕ್ಷೆಯನ್ನು ಹುಟ್ಟು ಹಾಕುತ್ತದೆ. ಸಮಾಜವಾದ ಮತ್ತು ಅದರ ಅಗತ್ಯವು ಈಗ ಬಹಳವಿದೆ. ಅದನ್ನು ನಿರಾಕರಿಸಲು ಬರುವುದಿಲ್ಲ. ಮನುಷ್ಯರ ಕುರಿತಂತೆ ಅದು ನಿರ್ದಿಷ್ಟವಾದ ನಿಲುವನ್ನು ತಳೆಯುತ್ತದೆ. ಉದಾರವಾದಿಗಳು ಮತ್ತು ಸಾಂಪ್ರದಾಯಿಕವಾದ ನಿಲುವು ಉಳ್ಳವರು ಚರಿತ್ರೆ ಮತ್ತು ಅದರ ಬೆಳವಣಿಗೆಯನ್ನು ಒಂದು ಗ್ರಹಿಕೆಯಲ್ಲಿ ಮಾತ್ರವೇ ಮಂಡಿಸುತ್ತಾರೆ. ಚಾರಿತ್ರಿಕ ಬದಲಾವಣೆಯನ್ನು ಅವರು ಗಂಭೀರವಾಗಿ ಗಮನಿಸಲು ಹೋಗುವುದು ಇಲ್ಲ. ಆದರೆ ಯಾವುದೇ ಉತ್ಪಾದನೆಯು ಇಲ್ಲದೆ ಯಾವುದೇ ಸಂಸ್ಕೃತಿಯು ಆಗಲಾರದು. ಮತ್ತು ಅದು ಭೌತಿಕ ಅಗತ್ಯವೂ ಹೌದು. ಆರ್ಥಿಕತೆಯ ಪ್ರಶ್ನೆಯನ್ನು ಎತ್ತಿದ ಕೂಡಲೇ ಅನೇಕರು ಅದನ್ನು ಅಸಂಗತವೆಂದು ಹೇಳುತ್ತಾರೆ. ಆದರೆ ಅದರ ಕುರಿತು ಹೇಳಿದ ಕೂಡಲೇ ಮೈಮೇಲೆ ಇರುವೆ ಬಿದ್ದಂತೆ ಯಾಕೆ ವರ್ತಿಸುತ್ತಾರೆ ಎನ್ನುವುದೇ ಮುಖ್ಯವಾಗಿದೆ. ಮಾರ್ಕ್ಸ್‌ವಾದವನ್ನು ವಿರೋಧಿಸುವವರು ಅದನ್ನು ಕಾಣುವ ಕ್ರಮಗಳು ಬೇರೆಯಾಗಿವೆ. ಅವರ ಪ್ರಕಾರ ಈಗ ಮಾರುಕಟ್ಟೆ ಕೇಂದ್ರಿತವಾದ ಸಮಾಜವಿದೆ. ಆದ್ದರಿಂದ ಉಳಿದ ಸಮಸ್ಯೆಗಳು ಅನಗತ್ಯವಾಗಿದೆ. ನಾವು ಮಾರುಕಟ್ಟೆಯನ್ನು ಬದಿಗಿರಿಸಿಕೊಂಡು ಮಾತಾಡುವುದೇ ಅಸಾಧ್ಯವೆಂದು ಅವರ ತಿಳುವಳಿಕೆ. ಮಾರುಕಟ್ಟೆ ಎನ್ನುವುದೂ ಒಂದು ಚಟುವಟಿಕೆ ಮಾತ್ರ. ಅದನ್ನು ನಿರಾಕರಿಸಲು ಸಾಧ್ಯವಿಲ್ಲ. ಅವರ ಪ್ರಕಾರ ಮಾರ್ಕ್ಸ್‌ವಾದವು ಕೆಲವನ್ನು ಸಾಮಾನ್ಯಗೊಳಿಸುತ್ತದೆ. ಆದರೆ ಈ ರೀತಿಯ ಕಮೆಂಟ್‌ಗಳು ಅರ್ಥಹೀನವಾದ ಒಂದು ವಿವರಣೆ ಮಾತ್ರವೇ ಆಗಿದೆ. ಅದರ ಸ್ವರೂಪವೇ ಅದರ ಸಮಸ್ಯೆಯಾಗಿದೆ. ಅದನ್ನು ಅನೇಕರು ಪ್ರತ್ಯೇಕವಾದ ಜೀವನದ ವಿವರಣೆ ಹಾಗೂ ಅದಕ್ಕೂ ನಮಗೂ ಯಾವುದೇ ಒಂದು ಸಂಬಂಧವಿಲ್ಲವೆಂದು ಅನೇಕರು ಭಾವಿಸಿದ್ದಾರೆ. ನಾವು ಮಾರ್ಕ್ಸ್‌ವಾದವನ್ನು ಬರೀ ಬೌದ್ಧಿಕವಾದ ಒಂದು ತಿಳುವಳಿಕೆ ಎಂದು ಭಾವಿಸಬೇಕಾದ ಅಗತ್ಯವಲ್ಲ. ಅದು ಅದನ್ನು ಹೇಳುತ್ತಲೂ ಇಲ್ಲ. ಕಾಲ ಮತ್ತು ಅದರ ತಿಳುವಳಿಕೆಯು ಬೇರೆ ಅಗತ್ಯವನ್ನು ಹೇಳುತ್ತದೆ. ಚರಿತ್ರೆಯನ್ನು ಅತ್ಯಂತ ಗಂಭೀರವಾಗಿಯೂ ನೋಡಬೇಕಾಗುತ್ತದೆ. ಯಾವುದೇ ಒಂದು ಸಂಗತಿಯು ನಡೆಯಬೇಕಾದರೆ ಅದಕ್ಕೆ ಚಾರಿತ್ರಿಕ ಕಾರಣವೂ ಇದೆ ಎನ್ನುವುದು ಅದರ ಅಭಿಪ್ರಾಯವೂ ಆಗಿದೆ. ಹಾಗೆಂದು ಚರಿತ್ರೆಗೆ ಒಂದು ವಿನ್ಯಾಸವೂ ಇದೆ. ಅದನ್ನು ನೋಡುವುದು ಎಂದರೆ ಅದರ ಭೌತಿಕವಾದಿ ನೆಲೆಯನ್ನು ಅರ್ಥ ಮಾಡಿಕೊಳ್ಳುವುದೂ ಹೌದು. ಚರಿತ್ರೆಗೆ ಅನೇಕ ರೂಪಗಳು ಮತ್ತು ವಿನ್ಯಾಸಗಳು ಇವೆ ಎನ್ನುವುದನ್ನು ಸ್ವತಃ ಮಾರ್ಕ್ಸ್ ಹೇಳುತ್ತಾನೆ. ಆದರೆ ಪ್ರಶ್ನೆಯು ಇರುವುದು ಮತ್ತೆ ಭಾವುಕತೆಗೆ ಸಂಬಂಧಪಟ್ಟಂತೆ. ಆದರೆ ಇದರಲ್ಲಿ ಭಾವುಕತೆಯ ಪ್ರಶ್ನೆಯೇ ಇಲ್ಲವೆಂದು ಮಾರ್ಕ್ಸ್ ಹೇಳುತ್ತಾನೆ. ಆದರೆ ಚರಿತ್ರೆಗೆ ಒಂದು ರೀತಿಯಲ್ಲಿ ಏಕತೆಯು ಇರುತ್ತದೆ. ಈ ಏಕತೆಯು ಹುಟ್ಟುವುದು ಅದರ ಆಂಶಿಕವಾದ ಸಂಗತಿಗಳಿಂದ. ಶ್ರಮಿಕರು ಮತ್ತು ಅವರ ಮನೋಭಾವವೇ ವಾಸ್ತವವಾಗಿ ಚರಿತ್ರೆಯನ್ನು ಕಟ್ಟುತ್ತದೆ.

ಚರಿತ್ರೆಯ ಮಹಾನ್ ನಿರೂಪಣೆಯು ಇದರಲ್ಲಿ ಮುಖ್ಯವಲ್ಲ. ಚರಿತ್ರೆ ಮತ್ತು ಅದರ ಸಣ್ಣ ಘಟನೆಗಳೇ ಚರಿತ್ರೆಯನ್ನು ನಿರ್ಧರಿಸುತ್ತದೆ. ಅದಕ್ಕೆ ಜೀವನ ಮತ್ತು ಅದರ ಕ್ರಮಗಳು ಬಹಳ ಮುಖ್ಯವಾಗಿದೆ. ಅಂದರೆ ಜೀವನದ ಕ್ರಮವನ್ನು ಹೊರತುಪಡಿಸಿದ ಯಾವುದೇ ಸಂಗತಿಗಳು ಚರಿತ್ರೆಯಲ್ಲಿ ಇರಲು ಸಾಧ್ಯವಿಲ್ಲ. ಚರಿತ್ರೆ ಮತ್ತು ಅದರ ಹಿಂದೆ ಇರುವ ಕಾರಣಗಳನ್ನು ನಾವು ಆರ್ಥಿಕತೆಯಲ್ಲಿಯೇ ಕಾಣಬೇಕಾಗುತ್ತದೆ. ಅರ್ಥಶಾಸ್ತ್ರವು ಬಹಳ ಮುಖ್ಯವಾಗಿದೆ. ಅದುವೇ ಸಮಾಜ ಮತ್ತು ಅದರ ರಚನೆಗೆ ಕಾರಣವಾಗಿದೆ. ರಾಜಕಾರಣ, ಇತಿಹಾಸ, ಸಾಮಾಜಿಕತೆಗಳು ಮೂಲಭೂತವಾಗಿ ಆರ್ಥಿಕ ಹಿನ್ನೆಲೆಯಿಂದಲೇ ಹುಟ್ಟಿದೆ. ರಾಜಕಾರಣವನ್ನು ನಾವು ಪ್ರತ್ಯೇಕವೆಂದು ಹೇಳಬೇಕಾಗಿಯೂ ಇಲ್ಲ. ಯಾವುದೇ ರಾಜಕಾರಣ ಎನ್ನುವುದು ಮೂಲಭೂತವಾಗಿ ಒಂದು ಸ್ವತಂತ್ರವಾದ ಘಟಕವಲ್ಲ. ಅನಿರ್ದಿಷ್ಟವಾದ ಒಂದು ಚಟುವಟಿಕೆ ಎಂದೂ ಹೇಳುವಂತೆ ಇಲ್ಲ. ಅದು ಅದರ ಪಾಡಿಗೆ ಅಧಿಕಾರದ ಸ್ವರೂಪವನ್ನು ಪಡೆದಿರುವುದೂ ಇಲ್ಲ. ಅದರ ಹಿಂದೆ ಕೆಲವು ಕ್ರಿಯಾತ್ಮಕವಾದ ಚಟುವಟಿಕೆಗಳು ಇರುತ್ತವೆ. ಸಮಾಜ ಮತ್ತು ಅದರ ರಚನೆಯೂ ಸ್ವತಂತ್ರವಲ್ಲ. ಅದು ಅನೇಕ ಸಂಗತಿಗಳನ್ನು ಒಳಗೊಂಡಿರುತ್ತದೆ. ಸಾಮಾಜಿಕ ಸಂಗತಿಗಳು ಅನೇಕವನ್ನು ರೂಪಿಸುತ್ತದೆ. ಅದರಲ್ಲಿಯೂ ಭಿನ್ನತೆಗಳು ಇರುತ್ತವೆ. ರಾಜಕಾರಣ ಮತ್ತು ಸಾಮಾಜಿಕ ವಿಷಯಗಳು ಮೂಲಭೂತವಾಗಿ ಅನೇಕ ವಿಷಯಗಳನ್ನು ಹೇಳುತ್ತವೆ. ಮತ್ತು ಅದರ ಪರಿಣಾಮಗಳನ್ನು ಆಯಾ ಕಾಲಘಟ್ಟದ ಹಿನ್ನೆಲೆಯಲ್ಲಿಯೇ ಗುರುತಿಸಬೇಕಾಗುತ್ತದೆ. ವಾಸ್ತವವೆಂದರೆ ನಾವು ಯಾವುದನ್ನು ಕಾಣುತ್ತೇವೆ ಅದು ಮಾತ್ರವೇ ಅಲ್ಲ. ಅದರ ಹಿನ್ನೆಲೆಯಲ್ಲಿ ಬೇರೆ ಬೇರೆ ಅಂಶಗಳು ಇರಬಹುದು. ಸಾಮಾಜಿಕ ಜೀವನ ಮತ್ತು ಅದರ ಹಿಂದೆ ಇರುವ ಒತ್ತಡಗಳನ್ನು ನಾವು ಗಮನಿಸಬೇಕಾಗುತ್ತದೆ. ಯಾವುದೇ ಒಂದು ಸಮಾಜವು ರಚನೆಯಾಗುತ್ತದೆ ಎಂದಾದರೆ ಅದರ ಹಿಂದೆ ಬೇರೆ ಬೇರೆ ಒತ್ತಡಗಳು ಕೆಲಸವನ್ನು ಮಾಡಿವೆ ಎಂದು ಅರ್ಥ. ಸಮಾಜದಲ್ಲಿ ಕಲೆ, ಸಾಹಿತ್ಯ, ಧರ್ಮ ಮುಂತಾದವುಗಳು ಅಸ್ತಿತ್ವದಲ್ಲಿ ಇರುತ್ತವೆ. ಯಾವುದೇ ಸಮಾಜಕ್ಕೆ ಇರುವ ಬೇರೆ ಬೇರೆ ನಿಯಮಗಳನ್ನು ಮತ್ತು ವಿಧಿನಿಷೇಧಗಳನ್ನು ಇವುಗಳು ಹೇಳುತ್ತವೆ. ಅದರ ಮೂಲಕವೇ ಚರಿತ್ರೆಯ ಆಗು ಹೋಗುಗಳು ನಡೆಯುತ್ತವೆ. ಆದ್ದರಿಂದ ಮನುಷ್ಯನ ಸಮಾಜಕ್ಕೆ ಬಹಳ ದೊಡ್ಡದಾದ ಚೌಕಟ್ಟು ದೊರೆಯುತ್ತದೆ. ಇದನ್ನು ಕಲಾವಿದರು ಮತ್ತು ಲೇಖಕರು ಹೇಗೆ ಗುರುತಿಸುತ್ತಾರೆ ಎನ್ನುವುದೂ ಬಹಳ ದೊಡ್ಡದಾದ ಪ್ರಶ್ನೆಯು ಆಗಿದೆ. ಯಾವುದೇ ಸಾಮಾಜಿಕ ಮತ್ತು ಅದರ ಆರ್ಥಿಕ ರಚನೆಗಳು ನಿರ್ದಿಷ್ಟವಾದ ಕಾರಣವನ್ನು ಹೊಂದಿರುತ್ತದೆ. ಆದರೆ ಬಂಡವಾಳವಾದವು ಮಾತ್ರವೇ ಇಡೀ ಜಗತ್ತನ್ನು ಒಂದು ಉತ್ಪಾದನೆ ಎಂದು ಭಾವಿಸುತ್ತದೆ. ಉತ್ಪಾದನೆಗೋಸ್ಕರ ಉತ್ಪಾದನೆ ಎನ್ನುವುದು ಅದರ ನೀತಿ ಆಗಿದೆ. ಆದರೆ ಮಾರ್ಕ್ಸ್ ಹೇಳಿದ ಒಂದು ಸಂಗತಿಯು ಗಮನಾರ್ಹ. ಅವನ ಪ್ರಕಾರ ಇಡೀ ಸಮಾಜಕ್ಕೆ ಆರ್ಥಿಕತೆಯೇ ಕೇಂದ್ರವಾಗಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕಾಗುತ್ತದೆ: ಹದಿನೆಂಟನೆಯ ಶತಮಾನದ ಅನಂತರ ಜೀವನ ಮತ್ತು ಅದರ ರೂಢಿಗಳು ಬದಲಾದವು. ಸಾಮಾಜಿಕ ತಾರತಮ್ಯಗಳು ಉಂಟಾದವು. ಖಾಸಗಿ ಆಸ್ತಿ ಮತ್ತು ಅದರ ಮೌಲ್ಯಗಳ ವಿಚಾರಗಳು ಬದಲಾದವು. ಆರ್ಥಿಕತೆ ಮತ್ತು ಅದರ ಬಳಕೆಯಲ್ಲಿ ಬೇರೆ ಬೇರೆ ಪರಿವರ್ತನೆಗಳು

ಕಾಣಿಸಿಕೊಂಡವು. ನಾವು ಈ ಅಂಶಗಳನ್ನು ಗುರುತಿಸಬೇಕಾದರೆ ನಾವು ಅರ್ಥಶಾಸ್ತ್ರದ ನಿಲುವನ್ನು ಹೊಂದಿರಬೇಕಾಗುತ್ತದೆ. ಉತ್ಪಾದನೆ ಮತ್ತು ಅದರ ಪರಿಣಾಮಗಳು ಯಾವ ರೀತಿಯಲ್ಲಿ ಪರಿಣಾಮವನ್ನು ಬೀರಬಹುದು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ನಾವು ಇದನ್ನು ಅರ್ಥವಿಸಿಕೊಳ್ಳಲೇಬೇಕು. ಯಾವುದೇ ಸಮಾಜ ಮತ್ತು ಅದರ ರೂಪೀಕರಣದಲ್ಲಿ ಸಹಕಾರ ಮತ್ತು ಸಂಘರ್ಷಗಳು ಇರುತ್ತವೆ ಎನ್ನುವುದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ವರ್ಗ, ಜಾತಿ, ಸಮಾಜ ಮುಂತಾದವುಗಳಲ್ಲಿ ಕಾಣುವುದು ನಿರ್ದಿಷ್ಟವಾದ ವರ್ಗಗಳನ್ನು. ಹಾಗೆಯೇ ಮಾರುಕಟ್ಟೆ ಮತ್ತು ಅದರ ಪರಿಣಾಮಗಳು ಈಗ ಜನರನ್ನು ಪ್ರಭಾವಿಸಿದೆ ಎನ್ನುವುದಕ್ಕೆ ಬೇರೆ ಸಾಕ್ಷ್ಯವು ಬೇಕಾಗಿಯೂ ಇಲ್ಲ. ಸಮಾಜ ಮತ್ತು ಅದರ ಏಕತೆಯು ಅನೇಕ ಸಂದರ್ಭದಲ್ಲಿ ರಾಜಕಾರಣವನ್ನು ನಿರ್ದೇಶಿಸುತ್ತದೆ. ಆದರೆ ರೊಮಾಂಟಿಕರು ಮಾತ್ರವೇ ಅಮೂರ್ತತೆಯನ್ನು ನಂಬಿದರು. ಅಮೂರ್ತ ಎನ್ನುವುದಕ್ಕೆ ಯಾವುದೇ ಒಂದು ಆಕಾರವೂ ಇಲ್ಲ. ಮಾರ್ಕ್ಸ್‌ವಾದವು ಈ ಜಗತ್ತು ಹೇಗೆ ನಿರ್ಮಾಣವಾಗಿದೆ ಎಂದು ಹೇಳುತ್ತದೆ. ಪುನರುಜ್ಜೀವನ ಕಾಲಘಟ್ಟದ ಅನಂತರ ಉಂಟಾದ ಸಾಮಾಜಿಕ ಸಂಬಂಧಗಳ ಸ್ವರೂಪವನ್ನು ಹೇಳಿದ್ದೂ ಮಾರ್ಕ್ಸ್‌ವಾದವೇ. ಮತ್ತು ಅದರ ಪ್ರಕಾರ ಆಲೋಚನೆಯು ತಾತ್ವಿಕವಾಗಿರುತ್ತದೆ. ಅದರಿಂದ ನಾವು ಆಲೋಚನೆಯನ್ನು ದೇವರ ಆಶೀರ್ವಾದ ಎಂದು ಹೇಳಲು ಬರುವುದು ಇಲ್ಲ. ಯಾವುದನ್ನು ನಾವು ತಿರಸ್ಕಾರ ಮಾಡುತ್ತಿದ್ದೇವೆಯೋ ಅದರ ಸ್ವರೂಪವನ್ನು ಸರಳವಾದ ಒಂದು ಚಿಂತನೆಯೆಂದು ಹೇಳಬೇಕಾಗಿಯೂ ಇಲ್ಲ. ಹದಿನೆಂಟನೆಯ ಕಾಲದ ಅನೇಕ ಬುದ್ಧಿಜೀವಿಗಳು ಮುಖಾಮುಖಿಯಾದುದು ಆ ಕಾಲದ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆಯನ್ನು ಎಂದು ಹೇಳಬೇಕಾದ್ದು ಅಗತ್ಯ. ಮನುಷ್ಯ ಮತ್ತು ಅವನ ಮನೋಸ್ಥಿತಿಯನ್ನು ಎಂದು ಗುರುತಿಸುವ ಅವಶ್ಯಕತೆಯೂ ಇದೆ. ತಂತ್ರಜ್ಞಾನಗಳು ಹೇಗೆ ನಮ್ಮ ಆಲೋಚನೆಯನ್ನು ವಿಸ್ತರಿಸುತ್ತವೆ ಎನ್ನುವುದನ್ನೂ ಇಲ್ಲಿ ಗಮನಿಸಬೇಕು. ಆಧುನಿಕಯುಗ ಕಂಪ್ಯೂಟರ್ ನಮ್ಮನ್ನು ಏಕಕಾಲಕ್ಕೆ ಅನೇಕರನ್ನು ಸಂಪರ್ಕಿಸಲು ಸಹಾಯ ಮಾಡುತ್ತದೆ. ಈ ಮೂಲಕ ನಾವು ದೇಶ ಮತ್ತು ಕಾಲವನ್ನು ಮೀರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ ಸೃಷ್ಟಿಯಾಗುತ್ತಿರುವ ಸಾಮಾಜಿಕ ಸಂಬಂಧಗಳು ಸಂಕೀರ್ಣವಾಗಿದೆ. ಉದ್ಯೋಗ ಮತ್ತು ಅದರಿಂದ ಉಂಟಾದ ವಲಸೆಗಳು ಭಿನ್ನವಾಗಿದೆ. ಈ ದೃಷ್ಟಿಯಿಂದ ನಾವು ನೋಡಬೇಕಾದ ಸಮಸ್ಯೆಗಳು ಬೇರೆಯಿವೆ. ಈಗ ಇರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಲ್ಲಿ ವಿಭಿನ್ನವಾದ ಧೋರಣೆಯೂ ಇದೆ. ಈ ರೀತಿಯ ಮಾನಸಿಕ ಸಾಂತ್ವನ ಇಲ್ಲದಿರುವ ಸಂಬಂಧಗಳೇ ಘರ್ಷಣೆಗೆ ಕಾರಣವಾಗಿದೆ. ಮಧ್ಯಮ ವರ್ಗದ ಜನರು ತಮ್ಮ ಜೀವನವು ಮಾತ್ರವೇ ಸುಖವಾಗಿ ಇದ್ದರೆ ಸಾಕು ಎಂದು ಭಾವಿಸುತ್ತಾರೆ. ಆದರೆ ಅದಕ್ಕೆ ಅವರದೇ ಆರ್ಥಿಕ ಸ್ಥಿತಿಯು ಕಾರಣವೆಂದು ಅವರು ಮರೆಯುತ್ತಾರೆ. ಭೌತಿಕವಾದಿ ನಿಲುವುಗಳು ನಮ್ಮನ್ನು ಹೆಚ್ಚು ಆತ್ಮೀಯವಾಗಿಯೇ ನೋಡುತ್ತದೆ. ಮತ್ತು ಅದು ಜೀವನ ಮತ್ತು ಅದರ ಸಾಧ್ಯತೆಯನ್ನು ವಾಸ್ತವಾದದ ನೆಲೆಯಲ್ಲಿಯೇ ನೋಡುತ್ತದೆ. ಭೌತವಾದ ಎನ್ನುವುದು ಒಂದು ಬಗೆಯಲ್ಲಿ ನಮಗೆ ಜೀವನ ಮತ್ತು ಅದರ ಕುರಿತಾದ ಸರಿಯಾದ ಚಿತ್ರಣವನ್ನು ಕೊಡುತ್ತದೆ. ಭೌತವಾದವು ನಿಜವಾಗಿಯೂ ನಿಜವನ್ನು ಅರ್ಥ ಮಾಡಿಕೊಳ್ಳಲು

ಹೇಳಿಕೊಡುತ್ತದೆ. ಅದು ಭೌತಿಕತೆ ಮತ್ತು ಅದರ ವಸ್ತು ವಿನ್ಯಾಸವನ್ನು ಹೇಳುತ್ತದೆ. ಹೇಗೆ ಜೀವನವು ಭೌತಿಕವಾಗಿ ರೂಪುಗೊಂಡಿದೆ ಎನ್ನುವುದನ್ನು ಹೇಳುತ್ತದೆ. ಪ್ರಜ್ಞೆ ಮತ್ತು ಅದರ ಲೋಕವನ್ನು ಅದು ಹೀಗಳೆಯುವುದೂ ಇಲ್ಲ. ಹಾಗೆ ನೋಡುವುದಿದ್ದರೆ ಮಾರ್ಕ್ಸ್‌ವಾದದಲ್ಲಿ ಬರುವ ಭೌತಿಕ ನಿಲುವು ಮೂಲಭೂತವಾಗಿ ಬರೀ ಬುದ್ಧಿಜೀವಿಗಳಿಗೆ ಮಾತ್ರವೇ ಅನ್ವಯವಾಗುವುದಿಲ್ಲ. ಈ ವಿಷಯವು ಮೂಲಭೂತವಾಗಿ ವ್ಯಕ್ತಿ ಮತ್ತು ಅವನ ಘನತೆಯನ್ನು ಹೇಳುತ್ತದೆ. ವಾಸ್ತವತೆಯು ಭಿನ್ನವೆಂದೂ ಅದನ್ನು ಗ್ರಹಿಸುವುದಕ್ಕೆ ನಮಗೆ ನಮ್ಮದೇ ಆದ ಸಾತಂತ್ರ್ಯವು ಇರುತ್ತದೆ ಎಂದೂ ಅದು ಹೇಳುತ್ತದೆ. ಅದು ನಿಜಗಳನ್ನು ಅವಲಂಬಿಸಿದೆ. ಮತ್ತು ಅದರಲ್ಲಿ ಅನೇಕ ಸಂಗತಿಗಳು ಅಡಕವಾಗಿದೆ ಎಂದು ಮಾರ್ಕ್ಸ್‌ವಾದವು ಹೇಳುತ್ತದೆ. ಆದರೆ ಅದನ್ನೇ ಅನೇಕರು ತಪ್ಪಾಗಿ ಗ್ರಹಿಸಿದ್ದಾರೆ. ಯಾವುದೇ ಸಂಗತಿಯು ಒಬ್ಬ ವ್ಯಕ್ತಿಯಿಂದ ರಚನೆಯು ಆಗಿಲ್ಲ. ಅದು ಸಮಾಜದ ನಿರ್ಮಾಣ. ಅದು ಮನುಷ್ಯನ ವ್ಯವಹಾರವನ್ನು ಸೂಚಿಸುತ್ತದೆ. ಅವನ ವರ್ತನೆಗೂ ಅವನು ಕಟ್ಟುವ ಚರಿತ್ರೆಗೂ ಸಂಬಂಧವಿದೆ. ಬುದ್ಧಿಜೀವಿ ಜನರ ನಿರ್ಮಾಣ ಮತ್ತು ಅವರ ಆಲೋಚನೆಗೂ ಅವರ ಗ್ರಹಿಕೆಯ ವಿನ್ಯಾಸಕ್ಕೂ ಒಂದು ಸಂಬಂಧವಿದೆ. ಪುನರುಜ್ಜೀವನ ಕಾಲದಲ್ಲಿ ಅನೇಕರು ಬುದ್ಧಿಜೀವಿಗಳು ಕಾಣಿಸಿಕೊಂಡದ್ದು ಆಕಸ್ಮಿಕವಲ್ಲ. ಆದರೆ ಯಾವುದನ್ನು ಈಗಿನ ಜಗತ್ತು ಇಷ್ಟಪಡುತ್ತದೆ ಎನ್ನುವುದೂ ಬಹಳ ಮುಖ್ಯವಾದ ಪ್ರಶ್ನೆಯೇ ಆಗಿದೆ. ಇದನ್ನು ಯಂತ್ರದ ಪರಿಭಾಷೆಗಳು ಎಂದು ಹೇಳಿಕೊಂಡು ನಾವು ಸುಮ್ಮನೆ ಇರುವ ಹಾಗೆ ಇಲ್ಲ. ಭೌತಿಕತೆಯನ್ನು ಕುರಿತು ಮಾತಾಡುವುದು ತತ್ವಜ್ಞಾನವೇ ಅಲ್ಲವೆಂದು ಅನೇಕರು ಭಾವಿಸಿದ್ದಾರೆ. ಆದ್ದರಿಂದ ಯಂತ್ರವೆಂದರೆ ಅದನ್ನು ನಾವು ವಿವರಿಸಬೇಕಾದ ಅಗತ್ಯವೇ ಇಲ್ಲವೆಂದು ಅವರು ತಿಳಿದುಕೊಂಡಂತೆ ಇದೆ. ಆದರೆ ವಾಸ್ತವವಾಗಿ ಯಂತ್ರಗಳೂ ಆಧುನಿಕ ಜೀವನವನ್ನು ಬೇರೆ ದೃಷ್ಟಿಯಿಂದ ನೋಡುವಂತೆ ಮಾಡಿದೆ. ಇದರಿಂದ ಜೀವನ ಮತ್ತು ಅದರ ದರ್ಶನವನ್ನು ಅದು ಗ್ರಹಿಸುವ ಕ್ರಮಗಳು ಬೇರೆಯಾಗಿದೆ. ಜೀವನ ಮತ್ತು ಅದರ ದರ್ಶನಗಳು ಬದಲಾಗಿದೆ. ಮತ್ತು ಅದರ ಸ್ವರೂಪವೂ ಭಿನ್ನವಾಗಿದೆ. ನನಗೆ ಇರುವ ತಿಳುವಳಿಕೆಯು ಹುಟ್ಟಿದ್ದು ಭೌತಿಕವಾದ ಸಂಗತಿಯಿಂದ ಎಂದು ಭಾವಿಸಿಕೊಂಡರೆ ಚಿಂತನೆಯ ಕ್ರಮಗಳು ಬದಲಾಗುತ್ತವೆ. ಯಾವುದೇ ವಿಷಯ ಮತ್ತು ಅದರ ಕುರಿತಾದ ನಮ್ಮ ಭಾವನೆಗಳು ಹುಟ್ಟುವುದು ಮನಸ್ಸಿನಿಂದ ಎಂದು ಭಾವಿಸಿಕೊಂಡರೆ ಅದರ ಕ್ರಮಗಳು ಬದಲಾಗುತ್ತವೆ. ಅವುಗಳು ಅರ್ಥಹೀನವಲ್ಲ. ಈ ದೃಷ್ಟಿಯಿಂದ ಭೌತಿಕತೆಯು ಅನೇಕವನ್ನು ಯೋಚಿಸುವಂತೆ ಮಾಡುತ್ತದೆ. ಆದ್ದರಿಂದಲೇ ಅದು ಸ್ವತಂತ್ರವಲ್ಲ. ಅದಕ್ಕೆ ಕಾರಣಗಳು ಇರುತ್ತವೆ. ಬುದ್ಧಿಜೀವಿಗಳು ಮತ್ತು ಅವರ ಆಲೋಚನೆಯು ಹುಟ್ಟಿದ್ದು ಕೂಡಾ ಸಾಮಾಜಿಕ ಅಸ್ತಿತ್ವದಿಂದ ಎನ್ನುವುದನ್ನು ಇಲ್ಲಿ ಗಮನಿಸುವುದು ಸೂಕ್ತವಾಗಿದೆ. ಅನೇಕರು ಮತ್ತೊಂದು ವಿಷಯವನ್ನು ಹೇಳುತ್ತಾರೆ. ಅದು ಮಾರ್ಕ್ಸ್‌ವಾದವನ್ನು ಟೀಕಿಸುವ ಕಾರಣಕ್ಕಾಗಿ. ಅವರ ಪ್ರಕಾರ ಭೌತಿಕವಾದ ಸಂಗತಿಗಳಿಗೆ ಸಿಗದ ಅನೇಕ ಸಂಗತಿಗಳು ನಡೆಯುತ್ತವೆ. ಆದ್ದರಿಂದ ಅದರಲ್ಲಿಯೇ ಎಲ್ಲವನ್ನು ಗುರುತಿಸಲು ಬರುವುದಿಲ್ಲ. ಮನುಷ್ಯರ ಅನೇಕ ಚಟುವಟಿಕೆಯಿಂದಲೇ ವಾಸ್ತವವಾಗಿ ನಮ್ಮ ಜಗತ್ತು ಹುಟ್ಟಿದೆ. ನಮ್ಮ ಅಗತ್ಯಗಳು ನಮಗೆ ಬೇಕಾದ್ದನ್ನು ರೂಪಿಸಲು ಅವಕಾಶವನ್ನು ಕಲ್ಪಿಸಿದೆ. ಅದು ಬರೀ ಭಾವುಕವಾದ

ಒಂದು ತೀರ್ಮಾನವಲ್ಲ. ಅದರಲ್ಲಿ ನಮ್ಮ ಸಂವೇದನೆಗಳು ಸೇರಿಕೊಂಡಿವೆ. ಆದ್ದರಿಂದ ನಮ್ಮ ಸಂವೇದನೆಯೇ ಅನೇಕವನ್ನು ರೂಪಿಸಲು ಕಾರಣವೂ ಆಗಿದೆ. ಅಂದರೆ ಸಂವೇದನೆ ಮತ್ತು ಅದರ ಸ್ವರೂಪವು ವಾಸ್ತವವನ್ನು ಕುರಿತಾದ ನಮ್ಮ ಪ್ರತಿಕ್ರಿಯೆ ಆಗಿದೆ. ಅದು ಸ್ವತಂತ್ರವಲ್ಲ ಎನ್ನುವುದು ಮಾರ್ಕ್ಸ್ ನಿಲುವು. ಅಂದರೆ ಮಾರ್ಕ್ಸ್‌ವಾದವು ಸಂವೇದನೆಗೆ ಕಾರಣವಿದೆ ಎಂದು ಹೇಳುತ್ತದೆ. ಈ ಸಂವೇದನೆಯು ಮೂಲಭೂತವಾಗಿ ದೇಹ ಮತ್ತು ಮನಸ್ಸುಗಳ ಅಗತ್ಯವೂ ಹೌದು. ಆದರೆ ಮಾರ್ಕ್ಸ್ ಸ್ವಾತಂತ್ರ್ಯವನ್ನು ನಂಬುವುದೇ ಇಲ್ಲವೆಂದು ಅರ್ಥವಲ್ಲ. ಮನುಷ್ಯ ಮತ್ತು ಅವನ ಘನತೆಯ ಅರಿವು ಮಾರ್ಕ್ಸ್‌ಗೆ ಗೊತ್ತಿದೆ. ಮಾರ್ಕ್ಸ್‌ವಾದವು ಬರೀ ದ್ವಂದ್ವವನ್ನು ಮಾತ್ರವೇ ಹೇಳುತ್ತದೆ. ಮತ್ತು ಅದಕ್ಕೆ ಬಹುತ್ವದ ಅರಿವು ಇಲ್ಲವೆಂದು ಹೇಳುತ್ತಾರೆ. ಆದರೆ ವಿಷಯವು ಭಿನ್ನವಾಗಿದೆ. ಸಂವೇದನೆ. ಮನುಷ್ಯರ ನಡುವಣ ಸಂಬಂಧ, ನಿರ್ದಿಷ್ಟವಾದ ಒಂದು ಸನ್ನಿವೇಶವೇ ಚಾರಿತ್ರಿಕ ನಿರ್ಮಾಣಕ್ಕೆ ಕಾರಣವಾಗಿದೆ. ಮನುಷ್ಯನ ಮನಸ್ಸು ಒಂದು ರೀತಿಯಿಂದ ನಿರ್ದಿಷ್ಟವಾದ ಒಂದು ಕೈಗಾರಿಕೆ. ಅದು ನಿರ್ಮಾಣವಾಗಿರುವುದು ಅವನ ಸಂವೇದನೆಯಿಂದ. ಮನುಷ್ಯನ ಸಂವೇದನೆ ಎನ್ನುವುದೇ ಮೂಲಭೂತವಾಗಿ ತೆರೆದಿಟ್ಟ ಒಂದು ಪುಸ್ತಕ. ಅದರಲ್ಲಿ ಮನುಷ್ಯನ ಮನಸ್ಸು ಮತ್ತು ಅದರ ಕಾಣ್ಕೆಗಳು ಇವೆ. ಅದು ಅವನ ಸಂವೇದನೆಯನ್ನು ಹೇಳುತ್ತದೆ. ಎಂದು ಮಾರ್ಕ್ಸ್ ಹೇಳುತ್ತಾನೆ. ಆದರೆ ಅದನ್ನು ಅವನು ಸಂಕೀರ್ಣವೆಂದು ಹೇಳುತ್ತಾನೆ. ಹಾಗಿದ್ದರೆ ಮನುಷ್ಯನು ಯಾಕೆ ಈ ಮಾದರಿಯ ಚರಿತ್ರೆಯನ್ನು ನಿರ್ಮಾಣ ಮಾಡುತ್ತಾನೆ ಎನ್ನುವ ಪ್ರಶ್ನೆಯು ಬರುತ್ತದೆ. ಮಾರ್ಕ್ಸ್‌ವಾದದ ಪ್ರಕಾರ ಮನುಷ್ಯನೇ ಉತ್ಪಾದಕ ಶಕ್ತಿಯು ಆಗಿದ್ದಾನೆ. ಹಾಗೆ ನೋಡುವುದಿದ್ದರೆ ಯಾವುದನ್ನು ಮನುಷ್ಯನು ಅಲೌಕಿಕ ಎಂದು ಹೇಳುತ್ತಾನೆಯೋ ಅದಕ್ಕೆ ಯಾವುದೇ ಅಸ್ತಿತ್ವವು ಇಲ್ಲ. ಅದನ್ನು ಹಾಗೆ ರೂಪಿಸಲಾಗಿದೆ. ಅದು ಮನುಷ್ಯನ ಕಲ್ಪನೆಯು ಮಾತ್ರವೇ ಆಗಿದೆ. ಅದು ಭೌತಿಕವಲ್ಲ. ಆದರೆ ನಮ್ಮ ಆಲೋಚನೆ ಮತ್ತು ಅದರ ಸ್ವರೂಪವನ್ನು ಹೇಳುವ ನಮ್ಮ ಭಾಷೆಗೆ ದೊಡ್ಡದಾದ ಒಂದು ಚರಿತ್ರೆಯು ಇದೆ. ಅದನ್ನು ಹೇಳುವಾಗ ಮಾರ್ಕ್ಸ್ ಮತ್ತೊಂದು ಮಾತನ್ನು ಹೇಳುತ್ತಾನೆ. ಭಾಷೆಯು ಎಷ್ಟು ಹಳೆಯದು ಎಂದರೆ ಅದು ನಮ್ಮ ಪ್ರಜ್ಞೆಗೆ ಇರುವ ಇತಿಹಾಸದಷ್ಟೇ ಹಳೆಯದು. ಆದ್ದರಿಂದ ನಮ್ಮ ಪ್ರಜ್ಞೆ ಮತ್ತು ಅದರ ಇತಿಹಾಸವನ್ನು ನಾವು ಚಾರಿತ್ರಿಕವಾಗಿಯೇ ಗ್ರಹಿಸಬೇಕಾಗುತ್ತದೆ. ಪ್ರಜ್ಞೆಯೇ ನಮ್ಮನ್ನು ರೂಪಿಸುತ್ತದೆ. ಆದರೆ ಸಾಂಪ್ರದಾಯಿಕ ತತ್ವಜ್ಞಾನವು ಇದನ್ನು ಹೇಳುವುದೇ ಇಲ್ಲ. ಆದರೆ ನಮ್ಮ ಸಾಮಾಜಿಕ ಜ್ಞಾನವು ಅನೇಕ ಚಟುವಟಿಕೆಗೆ ಕಾರಣವೂ ಆಗುತ್ತದೆ. ಅದರಿಂದ ನಾವು ಹೊಸತನ್ನು ರೂಪಿಸಲು ಯತ್ನವನ್ನು ಮಾಡುತ್ತೇವೆ. ಅದು ಅಗತ್ಯವೂ ಆಗಿದೆ. ವಾಸ್ತವದ ಪ್ರತಿನಿಧೀಕರಣವೂ ನಡೆಯುತ್ತದೆ. ನಮ್ಮ ಕೆಲಸಕ್ಕೂ ನಮ್ಮ ಕ್ರಿಯಾಶೀಲತೆಗೂ ಒಂದು ಸಂಬಂಧವಿದೆ. ಅಂದರೆ ಯಾವುದನ್ನೂ ನಾವು ಮಾಡುವುದು ನಮಗೆ ಅಗತ್ಯ ಕಂಡಾಗ ಮಾತ್ರವೇ. ಸಾಮಾಜಿಕ ಜೀವನವು ಬದಲಾಗಲೂ ನಿರ್ದಿಷ್ಟವಾದ ಕಾರಣವಿದೆ ಎಂದು ಮಾರ್ಕ್ಸ್‌ವಾದವು ಹೇಳುತ್ತದೆ. ಮನುಷ್ಯ ಮತ್ತು ಅವನ ದೃಷ್ಟಿಕೋನವನ್ನು ನಾವು ಈ ದೃಷ್ಟಿಯಿಂದ ಬಹಳ ಭೌತಿಕವಾಗಿಯೂ ನೋಡಬೇಕಾಗಿದೆ. ಅಂದರೆ ಅವನ ವಾಸ್ತವವನ್ನು ಪ್ರತಿನಿಧಿಸುತ್ತದೆ. ಯಾಕೆ ಅವನು ತನ್ನನ್ನು ಒಂದು ವ್ಯವಸ್ಥೆಯ ಭಾಗವೆಂದು ಭಾವಿಸಿಕೊಳ್ಳುತ್ತಾನೆ ಎಂದರೆ ಅವನು ಪ್ರಜ್ಞಾಪೂರ್ವಕವಾಗಿ

ಯೋಚಿಸದೆ ಅವನು ಹೊರಗೆ ಬರಲಾರ. ಜೀತದಾಳು ತಾನು ಜೀತದವನು ಎಂದು ಭಾವಿಸಿಕೊಳ್ಳುತ್ತಾನೆ. ಆದರೆ ತಾನು ಯಾಕೆ ಜೀತದವನು ಎಂದು ಕೇಳಲಾರ. ಅದುವೇ ಬಹಳ ಮುಖ್ಯವಾದ ಪ್ರಶ್ನೆಯು ಆಗಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು: ಕಾರ್ಯ ಮತ್ತು ಕಾರಣ ಹಾಗೂ ಸಾತಂತ್ರ್ಯ ಮತ್ತು ಜ್ಞಾನಕ್ಕೆ ನಿಕಟವಾದ ಸಂಬಂಧವೂ ಇದೆ. ಅದನ್ನು ಪ್ರಯೋಗ ಮತ್ತು ಅದರ ಸಂಘರ್ಷವೆಂದು ಮಾರ್ಕ್ಸ್ ಹೇಳುತ್ತಾನೆ. ನಮ್ಮ ಜ್ಞಾನವೂ ಪ್ರಯೋಗ ಮತ್ತು ಅದರ ಸಾಧ್ಯತೆಯನ್ನು ಹೇಳುತ್ತದೆ. ಕೆಲವು ಜ್ಞಾನಗಳು ತಕ್ಷಣ ಉಪಯೋಗಕ್ಕೆ ಬರದೇ ಹೋಗಬಹುದು. ಆದರೆ ಅದರ ಅಸ್ತಿತ್ವವು ಇರುತ್ತದೆ. ಈ ಕಾರಣದಿಂದಲೇ ನಮ್ಮ ಜ್ಞಾನ ಮತ್ತು ಅದರ ಪರಿಣಾಮಗಳು ಯಾವಾಗಲೂ ಭಿನ್ನವಾದ ಚಹರೆಯನ್ನು ಹೊಂದಿರುತ್ತದೆ. ಕೆಲವು ರಾಜಕಾರಣದ ಮೇಲೆ ಪ್ರಭಾವವನ್ನು ಬೀರುತ್ತದೆ. ಉತ್ಪಾದನೆ, ಅದರ ಕುರಿತು ನಾವು ಗ್ರಹಿಸುವ ಕ್ರಮ, ಮತ್ತು ಕ್ರಿಯಾಶೀಲತೆಗಳು ಮೂಲಭೂತವಾಗಿ ಜೀವನದಿಂದಲೇ ಹುಟ್ಟಿದೆ. ಅದರಲ್ಲಿ ಭೌತಿಕತೆಯೂ ಅಷ್ಟೇ ಮುಖ್ಯವಾದದ್ದೂ ಹೌದು. ಮತ್ತು ಇಲ್ಲಿ ಮತ್ತಿತರ ಅಂಶಗಳನ್ನು ನೋಡಬೇಕಾಗುತ್ತದೆ. ಯಾವುದೇ ಒಂದು ಸಂಗತಿಯನ್ನು ನಾವು ನೋಡುವುದು ತಾತ್ವಿಕ ಕಾರಣಕ್ಕಾಗಿ. ಆದರೆ ಅದು ನಮ್ಮ ಮನಸ್ಸನ್ನು ಹೇಳುತ್ತದೆ. ಅದೇ ರೀತಿಯಲ್ಲಿ ಅದರ ಸ್ವರೂಪದಲ್ಲಿಯೇ ಭೌತಿಕ ಅಗತ್ಯವೂ ಇರುತ್ತದೆ. ಆಲೋಚನೆ ಮತ್ತು ಅದರ ಪ್ರಭಾವಗಳನ್ನು ನಾವು ನಮ್ಮ ಕ್ರಿಯಾಶೀಲತೆಯಲ್ಲಿ ಸೂಚಿಸುತ್ತೇವೆ. ಅದು ನಮ್ಮ ಅಗತ್ಯವೂ ಆಗಿರುತ್ತದೆ. ನಮ್ಮ ಕ್ರಿಯೆಗಳು ವಾಸ್ತವದಿಂದ ಅನೇಕವನ್ನು ಪಡೆದಿರುತ್ತವೆ. ಆದ್ದರಿಂದ ನಮ್ಮ ಕ್ರಿಯಾಶೀಲತೆಗೆ ಒಂದು ನಿಜವಾದ ಅಸ್ತಿತ್ವವು ಇರುತ್ತದೆ. ಆದರೆ ಯಾವುದೇ ಓದು ಜ್ಞಾನವು ಇಲ್ಲದೇ ಹೋದರೆ ನಾವು ಯಾವುದೇ ಒಂದು ಕೆಲಸವನ್ನು ಮಾಡಲಾರೆವು. ನಾವು ಸಮಾಜದಲ್ಲಿ ಬದುಕುತ್ತಿರುವುದರಿಂದ ನಮ್ಮ ಜ್ಞಾನಕ್ಕೂ, ಸಮಾಜಕ್ಕೂ ಸಂಬಂಧವಿದೆ. ಅದನ್ನು ಅಲ್ಲಗಳೆಯಲು ಆಗುವುದಿಲ್ಲ. ಬಂಡವಾಳವಾದವು ಮಾರುಕಟ್ಟೆಗೆ ಪ್ರವೇಶವನ್ನು ಪಡೆದಿರುವಂತೆಯೇ ನಮ್ಮ ಹಳೆಯ ನಂಬಿಕೆಗಳ ಸ್ವರೂಪವೂ ಬದಲಾಯಿತು. ಧರ್ಮದ ಸ್ವರೂಪದಲ್ಲಿ ವ್ಯತ್ಯಾಸವು ಕಂಡು ಬಂತು. ನಮಗೆ ಹೊಸತು ಶುರುವಾಯಿತು. ಹೊಸ ಮಾಧ್ಯಮಗಳು ಬಂದವು. ಮತ್ತು ಇದರ ದೆಸೆಯಿಂದ ಜ್ಞಾನ ಮತ್ತು ಅದರ ಸ್ವೀಕರಣದಲ್ಲಿಯೂ ವ್ಯತ್ಯಾಸವು ಆಯಿತು. ಜೈಲುಗಳು ಹೊಸ ವ್ಯಾಖ್ಯಾನವನ್ನು ಮಾಡಿದವು. ವಾಸ್ತವವಾಗಿ ಜೈಲು ಕ್ರಿಮಿನಲ್ ಅಪರಾಧಿಗಳಿಗೆ ಎನ್ನುವ ವಾದವು ಬಂದಂತೆಯೇ ಕ್ರಿಮಿನಲ್ ಎನ್ನುವುದರ ಕಲ್ಪನೆಯು ಬದಲಾಯಿತು. ತಮಾಷೆಗೆ ಹೇಳಬೇಕೆಂದರೆ ಆಗ ಬಂದ ಚಾಕೋಲೆಟ್ ರುಚಿಯ ಮಟ್ಟಿಗೆ ಹೊಸತೇ ಆಗಿತ್ತು. ವ್ಯಾಪಾರವು ಕಾರ್ಮಿಕರಿಗೆ ಅಲ್ಲ. ಮತ್ತು ಅದು ರೈತರ ಅಭಿವೃದ್ಧಿಯನ್ನು ಗಮನಕ್ಕೆ ತಂದುಕೊಳ್ಳಲೂ ಇಲ್ಲ.

ಇಲ್ಲಿ ಆಲೋಚನೆ ಮತ್ತು ಅದರ ಗ್ರಹಿಕೆಯನ್ನು ಹೇಳಬೇಕು: ಆಲೋಚನೆಯು ತುಂಬಾ ಮಹತ್ವದ್ದೂ ಹೌದು. ಅದು ಅನೇಕವನ್ನು ರಚಿಸುತ್ತದೆ. ಅದಕ್ಕೆ ಪ್ರಭಾವಿಸುವ ಶಕ್ತಿಯೇ ಇಲ್ಲ. ಭೌತಿಕವಾದದ ನೆಲೆಯು ಸ್ಪಷ್ಟವಾಗಿದೆ. ಮತ್ತು ಅದು ಬೇರೆ ಲೋಕವನ್ನು ಹೇಳುತ್ತಾ ಇಲ್ಲ. ತಳದಿ ರಚನೆ ಮತ್ತು ಮೇಲ್‌ರಚನೆಯನ್ನು ಅದು ಉದ್ದೇಶಪೂರ್ವಕವಾಗಿಯೇ ಹೇಳಿದೆ. ಅದರಲ್ಲಿ ಸಂದೇಹವಿಲ್ಲ. ಯಾವುದು ಯಾವುದನ್ನು

ನಿಯಂತ್ರಿಸುತ್ತದೆ ಎನ್ನುವುದು ಮಾತ್ರವೇ ಅದಕ್ಕೆ ಮುಖ್ಯ. ಲೈಂಗಿಕ ಕಾಮನೆಯನ್ನು ಅದು ಹೇಳುವುದು ಮೂಲಭೂತವಾದ ಸಂಗತಿಯೆಂದು ಮಾತ್ರವೇ. ಅದೂ ಆಧ್ಯಾತ್ಮಿಕವಲ್ಲ. ಅದರಲ್ಲಿ ಭೌತಿಕವಾದ ಆಶೆಗಳು ಇರುತ್ತವೆ. ಲೈಂಗಿಕವಾದ ಆಶೆಗಳು ಇಲ್ಲದೇ ಅಥವಾ ಗಂಡು ಹೆಣ್ಣು ಜೊತೆ ಸೇರದೆ ಮಕ್ಕಳು ಹುಟ್ಟುವುದಿಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾಮನೆಗೆ ನಿರ್ದಿಷ್ಟತೆಯು ಇದೆ. ಅದು ಬಯಕೆ ಮತ್ತು ಅದರ ಉದ್ದೇಶವೂ ಅನ್ಯದ ಪ್ರೀತಿ. ಅದು ಮನಸ್ಸಿನ ಸ್ಥಿತಿಯೂ ಹೌದು. ಆದ್ದರಿಂದ ನಾವು ಭೌತಿಕವಾದ ಆಕಾಂಕ್ಷೆಯನ್ನು ಮೀರಲಾರೆವು. ಚರ್ಚುಗಳು, ಮಠಗಳು, ಪಾದ್ರಿಗಳು ಮತ್ತು ಮಠಾಧೀಶರು ನಿರ್ಮಿಸುವ ಆವರಣವು ಬೇರೆ ಬಗೆಯದ್ದೂ ಹೌದು. ಮತ್ತೆ ಆರ್ಥಿಕತೆ ಮತ್ತು ಅದರ ಪರಿಣಾಮಗಳನ್ನು ಇಲ್ಲಿ ಗಮನಿಸಿಕೊಳ್ಳುವುದು ಸೂಕ್ತವಾಗಿದೆ. ಆರ್ಥಿಕತೆಯನ್ನು ಮಾರ್ಕ್ಸ್‌ವಾದವು ತಳಹದಿಯೆಂದು ಹೇಳುತ್ತದೆ ಎಂದ ಕೂಡಲೇ ಅದನ್ನು ಒರಟು ಮಾರ್ಕ್ಸ್‌ವಾದ ಎಂದು ಹೇಳುವವರ ಸಂಖ್ಯೆಯು ಕಡಿಮೆಯಿಲ್ಲ. ಆದರೆ ಸಾಮಾಜಿಕ ಸಂಸ್ಥೆಗಳು ಅದನ್ನು ಹೊರತಾಗಿಯೂ ಇರುವುದಿಲ್ಲ. ಸುಮ್ಮನೆ ಹೇಳುವುದಿದ್ದರೆ ಸಮಾಜದಲ್ಲಿ ಅಸಂಖ್ಯಾತವಾದ ಕೆಲಸಗಳು ನಡೆಯುತ್ತವೆ. ಅದು ವರ್ಗೀಕರಣದ ಮೇಲೆ ನಿಂತಿದೆ. ಮತ್ತು ಅವುಗಳಿಗೆ ಮೌಲ್ಯಗಳಿವೆ. ಅವುಗಳು ಒಂದು ನಿಯಮವನ್ನು ಹೊಂದಿರುತ್ತವೆ. ಯಾವಾಗ ಹೆಚ್ಚು ಉತ್ಪಾದನೆಯು ಜರುಗುತ್ತದೆಯೋ ಆಗ ಅದರಲ್ಲಿ ವ್ಯತ್ಯಾಸವೂ ಕಾಣಿಸುತ್ತದೆ. ಮೌಲ್ಯಗಳಲ್ಲಿ ಬದಲಾವಣೆಯು ಕಾಣಿಸುತ್ತದೆ. ಕಲೆ, ಕಾನೂನು, ರಾಜಕಾರಣ ಮುಂತಾದವುಗಳಿಗೆ ಅರ್ಥವಿರುವುದು ಈ ಕಾರಣದಿಂದ. ನಾವು ಯಾವುದನ್ನು ಹೇಳಬೇಕಾಗಿದೆ ಎಂದರೆ ಮಾರ್ಕ್ಸ್ ಹೇಳಿದ. ಮೇಲು ರಚನೆಯನ್ನು ಕೂಡಾ ನಾವು ನಿರಾಕರಿಸಲು ಬರುವುದಿಲ್ಲ ಎಂದು ಮಾತ್ರವೇ. ಸಾಹಿತ್ಯವೂ ಒಂದು ಮಾದರಿಯಲ್ಲಿ ಮೇಲು ರಚನೆ. ಆದರೆ ಇದು ಅಗತ್ಯವಾಗಿದೆ. ಹಾಗೆಂದು ಭೌತಿಕವಾದಿಗಳು ಎಂದರೆ ಅವರು ಯಾವುದೇ ಆತ್ಮ ಇಲ್ಲದವರು ಎಂದು ಹೇಳಬೇಕಾಗಿಲ್ಲ. ಅದೇ ರೀತಿ ಮಾರ್ಕ್ಸ್‌ವಾದವು ಒಂದು ವಿಚಾರದ ಒಂದೇ ಗೊಂಚಲು ಎಂದು ತಿಳಿಯಬೇಕಾಗಿಯೂ ಇಲ್ಲ. ನೈತಿಕ ದೃಷ್ಟಿಕೋನವನ್ನು ಅದು ಇಟ್ಟುಕೊಂಡಿದೆ. ಅದರ ಆಲೋಚನೆಗಳು ಚರಿತ್ರೆ ಮತ್ತು ಸಮಾಜದ ವಿಶಿಷ್ಟವಾದ ಕೆಲವು ಒತ್ತಡಗಳನ್ನು ಹೇಳುತ್ತದೆ. ಮಾರ್ಕ್ಸ್‌ವಾದವು ಸಮಾಜ, ಚರಿತ್ರೆ, ಬಡವರು, ಮೂಲಭೂತವಾದ, ಧಾರ್ಮಿಕ ಅಂಧಃಶ್ರದ್ಧೆಗಳ ಸಮಸ್ಯೆಗಳನ್ನು ಕುರಿತು ಹೇಳುತ್ತದೆ. ಈಗ ಜಗತ್ತಿನ ಸವಾಲುಗಳು ಕೂಡಾ ಇವುಗಳೇ ಆಗಿವೆ. ಅಂದರೆ ಮಾರ್ಕ್ಸ್‌ವಾದವನ್ನು ಸರಿಯಾದ ರೀತಿಯಲ್ಲಿ ಗ್ರಹಿಸದೇ ನಾವು ಅದರ ವಿರುದ್ಧ ಮಾತಾಡುತ್ತೇವೆ. ಆದರೆ ವಾಸ್ತವವಾಗಿ ಮಾರ್ಕ್ಸ್‌ವಾದವು ಒಂದು ಯುಟೋಪಿಯಾ ಅಲ್ಲ. ವರ್ಗವೆಂದರೆ ಅದು ಒಂದು ಶೈಲಿಯಲ್ಲ. ಅದರಲ್ಲಿ ಕಪಟವಿಲ್ಲ. ಅದನ್ನು ಹೇಳುವಾಗ ಬರೀ ಒಂದು ಉದ್ಯೋಗವನ್ನು ಮಾತ್ರವೇ ಹೇಳಿಯೂ ಇಲ್ಲ. ಮಾರ್ಕ್ಸ್‌ವಾದಕ್ಕಾಗಿಯೇ ಸತ್ತವರು ಅನೇಕ ಜನರಿದ್ದಾರೆ. ಅನೇಕರು ಜೈಲನ್ನು ಸೇರಿದ್ದಾರೆ. ಅನೇಕರು ದೇಶವನ್ನು ಬಿಟ್ಟು ಹೋಗಿದ್ದಾರೆ. ಅನೇಕರಿಗೆ ಬಹಿಷ್ಕಾರವೂ ಆಗಿದೆ. ಇವುಗಳು ಸುಮ್ಮನೆ ನಡೆದಿಲ್ಲ. ನ್ಯಾಯವನ್ನು ಹೇಳಿದರೆ ಅವರನ್ನು ದೇಶದ್ರೋಹಿ ಎಂದು ಹೇಳುತ್ತೇವೆ. ಈಗಿನ ವ್ಯವಸ್ಥೆಯು ಹೇಗೆ ಇದೆ ಎಂದರೆ ಯಾರು ನಿಜವಾಗಿಯೂ ಬಡವರು ಮತ್ತು ಸಣ್ಣ ವರ್ಗದ ರೈತರು ಇದ್ದಾರೆಯೋ ಅವರ ಪರವಾಗಿ ಮಾತಾಡಿದರೆ

ಅವರನ್ನು ಅನುಮಾನದಿಂದ ನೋಡಲಾಗುತ್ತದೆ. ಮಾನವ ಹಕ್ಕುಗಳು ದಮನಕ್ಕೆ ಒಳಗಾಗಿವೆ. ಮಾರ್ಕ್ಸ್‌ವಾದವು ಹೇಳುವುದು ಜನರಿಗೆ ನಿಜವಾದ ರಕ್ಷಣೆಯು ಸಿಗಲಿ ಎಂದು ಮಾತ್ರವೇ. ಮತ್ತು ಅನೇಕರನ್ನು ನೀವು ಯಾಕೆ ಗುಲಾಮರನ್ನಾಗಿ ನೋಡಿದ್ದೀರಿ ಎಂದು ಮಾತ್ರವೇ. ಒಂದು ವ್ಯವಸ್ಥೆಯು ಹೇಗೆ ಮನುಷ್ಯರನ್ನು ಆಳುಗಳನ್ನಾಗಿ ನೋಡುತ್ತದೆ. ಕೆಲವರು ಮಾತ್ರವೇ ಯಾಕೆ ಹೀಗೆ ಲೇವಾದೇವಿಗಾರರು ಆಗಿದ್ದಾರೆ. ತಾರತಮ್ಯವನ್ನು ಉಂಟು ಮಾಡಿದವರು ಯಾರು? ಅನೇಕರು ಮಾರ್ಕ್ಸ್‌ವಾದವು ಮಧ್ಯಮ ವರ್ಗವನ್ನು ನಿರಾಕರಿಸುತ್ತದೆ ಎಂದು ಅಪವಾದವನ್ನು ಹೊರಿಸುತ್ತಾರೆ. ಆದರೆ ವಿಷಯವು ಆ ರೀತಿಯಲ್ಲಿ ಇಲ್ಲ. ಅದು ಅದನ್ನು ನಿರಾಕರಿಸುವುದೂ ಇಲ್ಲ. ಆದರೆ ಈ ಮಾದರಿಗಳು ಯಾಕೆ ಉಂಟಾಗಿವೆ ಎನ್ನುವುದು ಮಾತ್ರವೇ ಅದರ ಪ್ರಶ್ನೆ. ವಿಶ್ವಾತ್ಮಕವಾದ ಒಂದು ತಾತ್ವಿಕತೆಯನ್ನು ಅದು ಮಂಡಿಸುತ್ತದೆ. ಅದರ ಪ್ರಕಾರ ಜನರನ್ನು ಈ ಮಾದರಿಯ ವರ್ಗ ಮಾಡಬಾರದು. ಯಾವಾಗಲೂ ಒಂದು ಸಮಾಜದಲ್ಲಿ ಕೆಲಸಗಾರರು ಅನೇಕವನ್ನು ರೂಪಿಸಿಕೊಡುತ್ತಾರೆ. ಆದರೆ ಅವರ ಶಕ್ತಿಯನ್ನು ಮರೆಯಲಾಗಿದೆ. ಇದರ ಪರಿಣಾಮವೂ ಬೇರೆಯಾಗುತ್ತದೆ. ಕೆಲವರು ಕೂತು ಉಣ್ಣುತ್ತಾರೆ. ಕೆಲವರು ಬಡವರ ಬಡ್ಡಿ ದುಡ್ಡಿನಲ್ಲಿ ಬದುಕುತ್ತಾರೆ. ಇದನ್ನು ಮಾರ್ಕ್ಸ್ ಹೇಳುವಾಗ ಅವನು ಚರಿತ್ರೆಯನ್ನು ನಿರಾಕರಿಸಿಲ್ಲ. ಅವನು ಹೆಚ್ಚು ಲಕ್ಷ್ಯವನ್ನು ಕೊಡುವುದು ಕಾರ್ಮಿಕರ ಘನತೆಯನ್ನು ಮಾತ್ರವೇ. ಇಲ್ಲಿ ನಾವು ಮತ್ತೆ ಕೆಲವು ಅಂಶಗಳನ್ನು ಮಾತ್ರವೇ ಪ್ರಸ್ತಾವಿಸಬೇಕಾಗಿದೆ. ಕಾರ್ಮಿಕರಿಗೂ ನಿಜವಾದ ರಾಜಕೀಯ ಶಕ್ತಿಯು ಇದೆ ಎನ್ನುವುದನ್ನು ಮಾರ್ಕ್ಸ್ ಹೇಳುತ್ತಾನೆ. ಈ ದೃಷ್ಟಿಯಿಂದ ಕಾರ್ಮಿಕರದು ಸಾಮಾಜಿಕವಾದ ಒಂದು ಶಕ್ತಿ. ದುಡಿಯವ ವರ್ಗ ಜನರೇ ಸಮಾಜಕ್ಕೆ ನಿಜವಾದ ಶಕ್ತಿಯು ಆಗುತ್ತಾರೆ ಎನ್ನುವುದು ಮಾರ್ಕ್ಸ್‌ವಾದದ ನಿಲುವೂ ಆಗಿದೆ. ಅಸಂಖ್ಯಾತ ಜನರು ಈ ಜಗತ್ತನ್ನು ರೂಪಿಸಿದ್ದಾರೆ. ಅವರ ಶಕ್ತಿಯೇ ನಿಜವಾದ ಅರ್ಥದ ಕಟ್ಟುವಿಕೆ. ಒಂದು ಚಾರಿತ್ರಿಕ ವ್ಯಂಗ್ಯವೆಂದರೆ ನಾವು ಅವರ ಕುರಿತು ಮಾತಾಡುವುದೇ ಇಲ್ಲ. ನಾಗರಿಕರು ಅವರನ್ನು ಜನರೆಂದೇ ಪರಿಗಣಿಸುವುದೇ ಇಲ್ಲ. ವಾಸ್ತವವಾಗಿ ಒಂದು ಸಮಾಜದಲ್ಲಿ ಅನೇಕ ರೀತಿಯ ಸಂಘರ್ಷಗಳು ಇರುತ್ತವೆ. ವೈರುಧ್ಯಗಳೂ ಇರುತ್ತವೆ. ಯಾರು ಈ ಚರಿತ್ರೆಯನ್ನು ಕಟ್ಟಿದ್ದಾರೆಯೋ ಅವರನ್ನು ಮೂಲಭೂತವಾಗಿ ದೂರ ಇಡಲಾಗಿದೆ. ಬಂಡವಾಳವಾದಿಗಳನ್ನು ಗೌರವದಿಂದ ನೋಡಲಾಗುತ್ತದೆ. ಆದರೆ ಕಾರ್ಮಿಕರನ್ನು ಮೂಲೆಗೆ ತಳ್ಳಲಾಗುತ್ತದೆ. ಬಂಡವಾಳವಾದಿಗಳು, ಉದಾರವಾದಿಗಳು, ಅರಾಜಕವಾದಿಗಳನ್ನು ನೋಡಿದರೆ ವಾಸ್ತವವಾಗಿ ಕಾರ್ಮಿಕರು ಅಲ್ಪ ಸಂಖ್ಯಾತರಾಗಿದ್ದಾರೆ. ಇದರೊಂದಿಗೆ ಬೇರೆ ಬೇರೆ ವರ್ಗೀಕರಣಗಳೂ ಸೇರಿಕೊಂಡಿವೆ. ಸಮಾಜದಲ್ಲಿ ಸೈನಿಕರು, ಪೋಲಿಸರು, ಬುದ್ಧಿಜೀವಿಗಳು ಹೀಗೆ ವರ್ಗೀಕರಣಗಳು ಮುಂದುವರಿಯುತ್ತವೆ. ರೈತರನ್ನು ಪುನರುತ್ಪಾದಿಸಿ ಅಥವಾ ಹೆಚ್ಚು ಬೆಳೆಯನ್ನು ತೆಗೆಯಿರಿ ಎಂದು ಒತ್ತಾಯಿಸಲಾಗುತ್ತದೆ. ಕೂಲಿ ಮಾಡುವ ಮಹಿಳೆಯರಿಗೆ ವಾಸ್ತವವಾಗಿ ಯಾವುದೇ ಮನ್ನಣೆಯು ದೊರೆತಿಲ್ಲ. ಈ ಮಾತು ಇಡೀ ಜಗತ್ತಿಗೆ ಸಂಬಂಧಪಡುತ್ತದೆ. ಇಡೀ ಜಗತ್ತನ್ನು ನೋಡಿದರೂ ಅವರ ಸಂಖ್ಯೆಯು ಹೆಚ್ಚು ಇದೆ. ಕಡಿಮೆಯಾದ ಕೂಲಿ, ಅನಾರೋಗ್ಯ, ಹಸಿವೆ ಮುಂತಾದವುಗಳನ್ನು ಅವರು ಪಡೆದಿರುವುದು ದೇವರ ಶಾಪದಿಂದ ಅಲ್ಲ ಎನ್ನುವುದು

ನಮಗೆ ಗೊತ್ತಿರಬೇಕು. ಕಚೇರಿಯಲ್ಲಿ ದುಡಿಯುವ ಅನೇಕರು ಮಾತ್ರವೇ ಬೇರೆಯಾಗಿದ್ದಾರೆ. ಹಾಗೆಂದು ಅವರು ಆಯಾ ವ್ಯವಸ್ಥೆಯ ಯಜಮಾನರೂ ಅಲ್ಲ. ಕಚೇರಿಯಲ್ಲಿ ದುಡಿಯುವ ಬಿಳಿಕಾಲರ್ ಜನರನ್ನು ಸೇವೆ ಮಾಡಲು ಅನೇಕರ ದೇಹಶಕ್ತಿಯನ್ನು ಬಳಸಲಾಗುತ್ತದೆ. ಆದ್ದರಿಂದ ಸಾಮಾಜಿಕ ಜೀವನವನ್ನು ನೋಡುವಾಗ ಈ ಅಂಶಗಳನ್ನು ಕಾಣಬೇಕು ಎನ್ನುವುದು ಮಾರ್ಕ್ಸ್‌ವಾದದ ನಿಲುವು. ಅನೇಕವನ್ನು ಹತ್ತಿಕ್ಕುವುದು ಬಂಡವಾಳವಾದವೇ ಎಂದು ಹೇಳಲು ನಾವು ಹೆಚ್ಚು ಸಂಕೋಚ ಪಡಬೇಕಾಗಿಲ್ಲ. ಅದು ಜನರನ್ನು ನಿಯಂತ್ರಿಸುತ್ತದೆ ಎಂದು ಹೇಳಿದ ಕೂಡಲೇ ಇದು ಪಶ್ಚಿಮದ ವಾದ ಎಂದೂ ಭಾವಿಸುವುದು ಸರಿಯಾದ ನಿಲುವು ಅಲ್ಲ, ಯಾವ ದೇಶಕ್ಕೆ ಹೋದರೂ ಬಂಡವಾಳವಾದವು ಶೋಷಣೆಯನ್ನು ಮಾಡುತ್ತದೆ. ಈಗ ಈ ವರ್ಗದ ಸ್ವರೂಪವೂ ಬದಲಾಗಿದೆ. ಈಗ ಇದರ ಜೊತೆಗೆ ಹೊಸ ಮಾಧ್ಯಮಗಳು ಹೊಸ ಕೆಲಸದ ಮಾದರಿಯನ್ನು ಹುಟ್ಟು ಹಾಕುತ್ತದೆ. ಕೆಲವು ರಚನೆಗಳು ಬದಲಾಗಿವೆ. ಸಣ್ಣ ಕೆಲಸದ ಕ್ಲಾರ್ಕ್ ಕೂಡಾ ಅತಂತ್ರವಾಗಿದ್ದಾನೆ. ಅವನ ಸ್ಥಿತಿಯು ಸಣ್ಣ ರೈತರಷ್ಟೇ ಕಷ್ಟದಾಯಕವಾಗಿದೆ. ಸನ್ನಿವೇಶಗಳು ಬದಲಾಗಿವೆ. ಮೇಲು ಮಧ್ಯಮವರ್ಗ, ಕೆಳಮಧ್ಯಮವರ್ಗ, ಕಾರ್ಮಿಕರು, ಸಣ್ಣ ರೈತರು ಈಗ ಸಂಕಷ್ಟವನ್ನು ಎದುರಿಸುತ್ತಾರೆ. ಮಾರ್ಕ್ಸ್‌ವಾದವು ಇದನ್ನು ಗಮನಿಸುತ್ತದೆ. ಅದರ ಚರ್ಚೆಯೂ ಇದೇ ರೀತಿಯಲ್ಲಿದೆ. ಯಾವುದೇ ಕಾರ್ಮಿಕರು ಮತ್ತು ರೈತರು ಇಲ್ಲದೇ ಬಂಡವಾಳವಾದವು ಉಳಿಯುತ್ತದೆಯೇ ಎನ್ನುವುದು ಮೂಲಭೂತವಾದ ಪ್ರಶ್ನೆಯೂ ಆಗಿದೆ. ಆದ್ದರಿಂದ ಈಗ ಯಾವ ಮಾರ್ಕ್ಸ್‌ವಾದಿಯೂ ಕೇವಲ ಕೈಗಾರಿಕೆ ಮತ್ತು ಅದರ ಕಾರ್ಮಿಕರು ಎಂದು ಮಾತ್ರವೇ ಹೇಳುತ್ತಾ ಇಲ್ಲ. ಬದಲಾದ ಪರಿಸರದ ಅರಿವು ಇದೆ. ಈಗ ಇರುವ ಪ್ರಶ್ನೆಯೆಂದರೆ ಹಿಂಸೆ ಮತ್ತು ಅದರ ಉಂಟು ಮಾಡುವ ಪರಿಣಾಮಗಳ ಬಗ್ಗೆ ನಾವು ಹೇಗೆ ಗಮನಿಸಬೇಕು ಎನ್ನುವುದು. ಆದರೆ ಈ ಪ್ರಶ್ನೆಗಳನ್ನು ನಾವು ಸಾಮಾಜಿಕ ಆಯಾಮಗಳ ಹಿನ್ನೆಲೆಯಲ್ಲಿ ಗಮನಿಸುವುದು ಅತ್ಯಂತ ಅವಶ್ಯಕ. ಆಧುನಿಕ ನಾಗರಿಕ ಹಿಂಸೆಗಳನ್ನು ಅದು ನಿರಾಕರಿಸುತ್ತದೆ. ಒಂದು ದಿನ ಬೆಳಿಗ್ಗೆ ಎದ್ದಾಗ ರಷ್ಯಾವು ಕ್ರಾಂತಿಯನ್ನು ಮಾಡಿತು. ಮತ್ತು ಅದರ ಪರಿಣಾಮವಾಗಿಯೇ ಅದು ಹಿಂಸೆಯ ಹೆಜ್ಜೆಯನ್ನು ಇಟ್ಟಿತು ಎಂದು ಹೇಳುವುದಕ್ಕಿಂತ ಅದರ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕು. ಅಂದರೆ ಅದರ ಚರಿತ್ರೆಯನ್ನು ನಾವು ನೋಡಬೇಕು. ಅಂದರೆ ಯಾವುದೇ ಒಂದು ಹೆಜ್ಜೆಯಲ್ಲಿ ಅಲ್ಲಿ ಬದಲಾವಣೆಯು ಆಗಲಿಲ್ಲ. ಅದರ ಹಿಂದೆ ಸಮಾಜದ ಅನೇಕ ಸಂಗತಿಗಳು ಸೇರಿಕೊಂಡಿವೆ. ಸಾಮಾನ್ಯರ ಮೇಲೆ ನಡೆಯುತ್ತಿದ್ದ ಅನೇಕ ಹಿಂಸೆಗಳೇ ಅಲ್ಲಿ ಬದಲಾವಣೆಗೆ ಕಾರಣವಾಯಿತು. ಅದೇ ರೀತಿಯಲ್ಲಿ ಚೀನಾ ಕೂಡಾ. ವಸಾಹತು ದೇಶಗಳಲ್ಲಿ ನಡೆಯುತ್ತಿದ್ದ ದಮನಗಳು ಹಿಂಸೆಗಳೇ ಆಗಿದ್ದವು. ಇದಕ್ಕೆ ಪ್ರತಿರೋಧವನ್ನು ವ್ಯಕ್ತ ಮಾಡಿದ್ದು ತಪ್ಪು ಅಲ್ಲವೆಂಬ ಅರಿವು ಇರಬೇಕಾಗುತ್ತದೆ. ವಸಾಹತು ದೇಶಗಳಲ್ಲಿ ನಡೆಯುತ್ತಿದ್ದ ಹಿಂಸೆಯನ್ನು ಹಿಂಸೆಯೇ ಅಲ್ಲವೆಂಬ ತೀರ್ಮಾನಕ್ಕೆ ನಾವು ಬರುವಂತೆ ಇಲ್ಲ. ಅದರ ಸ್ವರೂಪಕ್ಕೂ ಅನೇಕ ಆಯಾಮಗಳು ಇವೆ. ನಾಗಾಸಾಕಿ ಮತ್ತು ಹಿರೋಷಿಮಾದಲ್ಲಿ ಆಗಿರುವ ಹಿಂಸೆಗಳನ್ನು ನಾವು ಯಾವ ರೀತಿಯಲ್ಲಿ ಕರೆಯಬೇಕು? ಇದು ನಮ್ಮ ಮುಂದೆ ಇರುವ ಪ್ರಶ್ನೆ. ಆದ್ದರಿಂದ ಇಂತಹ ಸಂಗತಿಗಳನ್ನು ನಾವು

ನೋಡುವಾಗ ಬಹಳ ಸೂಕ್ಷ್ಮ ಮತಿಗಳೂ ಆಗಬೇಕಾಗುತ್ತದೆ. ಯಾವುದೇ ಒಂದು ವಿಷಯನ್ನು ಸಾರಾ ಸಗಟು ಹೇಳಬೇಕಾಗಿಯೂ ಇಲ್ಲ. ವಾಸ್ತವವಾಗಿ ಇಂತಹ ವಿಷಯಗಳು ಬಂದಾಗ ಅಂತರ್‌ರಾಷ್ಟ್ರೀಯ ಸಮಾಜವಾದವು ನಿರ್ದಿಷ್ಟವಾದ ನಿಲುವನ್ನು ತಳೆಯಿತು. ಇಲ್ಲಿ ಬಲಪಂಥವು ಹೇಳುವ ಹಿಂಸೆಗಳು ಸಾಮಾನ್ಯವಾದ ಒಂದು ರೂಪವನ್ನು ಹೊಂದಿರಲಿಲ್ಲ. ಅದು ಮಿಲಿಟರಿಯನ್ನು ಬಳಸಿತು. ಪೋಲಿಸರನ್ನು ಹಿಂಸೆಗೆ ಪ್ರಚೋದಿಸಿತು. ಅದನ್ನು ನಾವು ಏನು ಅಂತ ಹೇಳುವುದು? ಮಾರ್ಕ್ಸ್‌ವಾದವು ಹೇಳುವುದು ಸಾಮಾಜಿಕ ಬದಲಾವಣೆಯನ್ನು. ಆದ್ದರಿಂದ ಅದನ್ನು ನಾವು ಸುಲಭವಾಗಿ ಹಿಂಸೆಯ ಕುರಿತಾದ ಒಂದು ಪ್ರಚೋದನೆ ಎಂದು ಹೇಳಬಹುದೆ? ಮಾರ್ಕ್ಸ್‌ವಾದವು ಹೇಳುವುದು ಹಿಂಸೆಯೇ ಇಲ್ಲದ ಸಮಾಜವನ್ನು. ಅದಕ್ಕೆ ಹಿಂಸೆಯೇ ಇಲ್ಲದ ಕ್ರಾಂತಿಯು ಬೇಕು. ಅನೇಕರು ಇದನ್ನು ಅರ್ಥಮಾಡಿಕೊಂಡಿಲ್ಲ. ಇರುವ ದಮನಕಾರಿಯಾದ ಸಮಾಜವನ್ನು ಬದಲು ಮಾಡಬೇಕು ಎನ್ನುವುದು ಅದರ ಮುಖ್ಯವಾದ ನಿಲುವು ಆಗಿದೆ. ಅದಕ್ಕೆ ಯಾವುದೇ ಸ್ವಾರ್ಥವಿಲ್ಲ. ಸಮಾನವಾದ ಒಂದು ಚಿಂತನೆಯ ಕ್ರಮವು ಹುಟ್ಟಬೇಕು ಎನ್ನುವುದು ಅದರ ನಿಲುವು ಆಗಿದೆ. ವಾಸ್ತವವಾಗಿ ಉದಾರವಾದದ ಪ್ರಭುತ್ವವು ಇಂಥಾ ವಿಷಯಗಳು ಬಂದಾಗ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದು ಇಲ್ಲ. ಮುಷ್ಕರವು ನಡೆದರೆ ಅದು ಹಿಂಸೆಗೆ ತೊಡಗುತ್ತದೆ. ಆದರೆ ಹೇಳುವುದು ಮಾತ್ರ ಬೇರೆ. ಮಹಿಳೆಯ ಮೇಲೆ ನಡೆಯುವ ಅತ್ಯಾಚಾರವನ್ನು ಸಾಮಾಜಿಕ ಒತ್ತಡದ ಹಿನ್ನೆಲೆಯಲ್ಲಿಯೂ ಗಮನಿಸಬೇಕು. ಎಳೆಯ ಮಕ್ಕಳಿಗೆ ಈಗ ದೊರೆಯುತ್ತಿರುವ ಅಶ್ಲೀಲವಾದ ಸೈಟುಗಳು ಏನು ಮಾಡುತ್ತಿವೆ ಎಂದು ಯೋಚಿಸಬೇಕಾದ ಅಗತ್ಯವೂ ಇದೆ. ಈಗ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ನಮ್ಮ ಮನಸ್ಸನ್ನು ನಿಯಂತ್ರಿಸುತ್ತವೆ. ಸಾಮಾನ್ಯರ ಮಕ್ಕಳನ್ನು ಶಿಕ್ಷಣದಿಂದ ದೂರವಿರುವಂತೆ ನೋಡಲಾಗುತ್ತದೆ. ಆದ್ದರಿಂದ ಈಗ ರಾಜಕಾರಣವು ಬದಲಾಗಬೇಕಾಗಿದೆ. ಈ ದೃಷ್ಟಿಯಿಂದ ಪ್ರಭುತ್ವ ಮತ್ತು ಅದರ ನಿಯಮಾವಳಿಯನ್ನು ಮತ್ತೆ ಮೌಲ್ಯ ಮಾಪನಕ್ಕೆ ಗುರಿ ಮಾಡಬೇಕಾದ ಅಗತ್ಯವೂ ಇದೆ. ಮಹಿಳೆಯ ವಿಮೋಚನೆಯನ್ನು ಕೂಡಾ ಈ ದೃಷ್ಟಿಯಿಂದಲೇ ನೋಡಬೇಕು. ಈಗ ಗಂಡು ಮತ್ತು ಹೆಣ್ಣಿನ ಸಂಬಂಧವು ಹಿಂದಿನ ಕಾಲದಂತೆ ಇಲ್ಲ. ಆದರೆ ಹೆಣ್ಣು ಮತ್ತು ಗಂಡಿನ ಸಂಬಂಧವೇ ಆರ್ಥಿಕ ಕೇಂದ್ರದ ಮೇಲೆ ನಿಂತಿದೆ. ಲೈಂಗಿಕ ಮತ್ತು ಅದರ ಸ್ವರೂಪವೂ ಕೂಡಾ ಒಂದು ಮಾದರಿಯ ಪುನರುತ್ಪಾದನೆಯನ್ನೇ ಹೋಲುತ್ತದೆ. ಒಟ್ಟಾರೆಯಾದ ಸಾಮಾಜಿಕವಾದ ವ್ಯವಸ್ಥೆಯಲ್ಲಿ ಗಂಡು ಮತ್ತು ಹೆಣ್ಣು ಇದ್ದಾರೆ. ಇವರನ್ನು ನಾವು ಪ್ರತ್ಯೇಕ ಮಾಡುವಂತೆ ಇಲ್ಲ. ಸ್ವಾತಂತ್ರವೆಂದರೆ ಅದು ಅರಾಜಕತೆಯು ಅಲ್ಲವೆಂದು ಹೇಳಬೇಕಾದ ಅಗತ್ಯವೂ ಇದೆ. ಪ್ರತ್ಯೇಕತೆ ಮತ್ತು ಅದರ ಪರಿಣಾಮಗಳನ್ನು ಮಾರ್ಕ್ಸ್ ಹೇಳಿದ್ದು ಸಕಾಲವಾಗಿದೆ. ಮನುಷ್ಯ ಮತ್ತು ಅವನ ಘನತೆಯನ್ನು ಹೇಳುವುದು ಮಾರ್ಕ್ಸ್. ಮನುಷ್ಯರ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವುದು ಎಂದರೆ ಸಹಜವಾದ ಒಂದು ಚರಿತ್ರೆಯನ್ನು ಅಧ್ಯಯನ ಮಾಡುವುದು. ಸಮಾಜ ಮತ್ತು ಅದರಲ್ಲಿರುವ ವ್ಯಕ್ತಿಗಳ ನಡುವಣ ಸಹಕಾರವನ್ನು ಅದು ಎತ್ತಿಹಿಡಿಯುತ್ತದೆ, ಮನುಷ್ಯರು ಪ್ರಾಣಿಗಳು ಅಲ್ಲವೆನ್ನುವುದು ಅವನ ನಿಲುವಾಗಿದೆ. ಸಾಮಾಜಿಕ ಸಹಕಾರವು ಇಲ್ಲದೇ ಹೋದರೆ ಮನುಷ್ಯರ ಅಸ್ತಿತ್ವವೇ ಕಷ್ಟವಾಗುತ್ತದೆ ಎನ್ನುವುದೂ ಪ್ರಧಾನವಾದ ನಿಲುವಾಗಿದೆ.

ನಾವು ಈಗ ಬಂಡವಾಳವಾದದ ಅತ್ಯಂತ ದೊಡ್ಡದಾದ ಪಲ್ಲಟದ ಕಾಲದಲ್ಲಿ ಇದ್ದೇವೆ. ಜಾಗತೀಕರಣ ಮತ್ತು ಅದರ ಕ್ಷಣಗಳು ಮತ್ತು ಅದರ ಚಲನೆಯ ಭಾಗವಾಗಿಯೇ ಇದ್ದೇವೆ. ಏನು ಹೇಳಿದರೂ ಜಾಗತೀಕರಣವೇ ನಮ್ಮನ್ನು ಅತ್ಯಂತ ಆಕರ್ಷಕವಾಗಿ ಸೆಳೆಯುತ್ತಿದೆ. ಅದರ ಆಕರ್ಷಣೆಯಿಂದ ನಾವು ತಪ್ಪಿಸಿಕೊಳ್ಳಲಾರೆವು. ದಿನಂದಿನದ ವರ್ತಮಾನವನ್ನು ನೋಡಿದರೂ ಅದರ ಸೆಳೆತವು ವಿಸ್ತಾರವಾಗುತ್ತಾ ಹೋಗುತ್ತದೆ. ಬಂಡವಾಳವಾದದ ಅತ್ಯಂತ ದೊಡ್ಡ ಮತ್ತು ಅತ್ಯಂತ ಸಂಕೀರ್ಣವಾದ ಸ್ಥಿತಿಯಲ್ಲಿ ನಾವು ಇದ್ದೇವೆ. ಇಲ್ಲಿ ಮತ್ತೆ ಇದಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಹೇಳುವುದು ಉಚಿತ. ಆದರೆ ಇದರಲ್ಲಿ ಯೋಚಿಸಬೇಕಾದ ಕೆಲವು ಅಂಶಗಳೂ ಇವೆ. ಅದನ್ನು ಇಲ್ಲಿ ಗಮನಿಸುವುದು ಅತ್ಯಂತ ಸೂಕ್ತವಾಗಿದೆ. ಬಂಡವಾಳವಾದವು ಕೆಲವು ನಿಯಮವನ್ನು ಜಾರಿಗೆ ತರುತ್ತದೆ. ಅದು ಮೂಲತಃ ಅನೇಕ ವಿಷಯಗಳಲ್ಲಿ ಮುಂದುವರಿದಿದೆ ಎನ್ನುವುದೂ ಅಷ್ಟೇ ಸತ್ಯ. ತನಗೆ ಬೇಕಾದ ಮಾರುಕಟ್ಟೆಯನ್ನು ಅದು ಅಭಿವೃದ್ಧಿಪಡಿಸುತ್ತದೆ. ಈಗ ನಮಗೆ ಇರುವ ಅತ್ಯಂತ ಮುಖ್ಯವಾದ ಸಮಸ್ಯೆಯೂ ಇದುವೇ ಆಗಿದೆ. ಈ ಜಗತ್ತಿನಲ್ಲಿ ಅನೇಕರು ತಮಗೆ ಬೇಕಾದ್ದನ್ನು ಇಟ್ಟುಕೊಂಡಿದ್ದಾರೆ. ಕೆಲವನ್ನು ನಿರಾಕರಿಸಿದ್ದಾರೆ. ಇಷ್ಟೇ ಆದರೂ ಪರವಾಗಿಲ್ಲ. ಮತ್ತೆ ಅನೇಕ ಘಟನೆಗಳು ನಡೆದಿವೆ. ಇಲ್ಲಿ ನೋಡಬೇಕಾದ ಅಂಶವೆಂದರೆ ಮಾರ್ಕ್ಸ್‌ವಾದವು ತನ್ನ ಅನನ್ಯತೆಯನ್ನು ಕಳೆದುಕೊಂಡಿಲ್ಲ. ಬಂಡವಾಳವಾದವು ಅನೇಕವನ್ನು ಬದಲಿಸಿರುವುದೂ ನಿಜವಾದರೂ ಅದನ್ನು ಹೇಗೆ ನೋಡಬೇಕು ಅದರ ಯಾವ ಸಮಸ್ಯೆಯು ಇದೆ ಎಂದು ಹೇಳುವುದು ಮಾರ್ಕ್ಸ್‌ವಾದವೇ. ವಾಸ್ತವವಾಗಿ ಯಾವುದೇ ರಾಜಕಾರಣವು ಯಾವ ನಿಲುವನ್ನು ತಳೆಯುತ್ತದೆ ಮತ್ತು ಅದರ ನಿಜವಾದ ಹಿತಾಸಕ್ತಿಯು ಯಾವುದು ಎನ್ನುವುದೇ ಈವತ್ತು ನಮ್ಮ ಜಗತ್ತಿನ ಬಹಳ ದೊಡ್ಡ ಪ್ರಶ್ನೆ. ಆದರೆ ಮಾರ್ಕ್ಸ್‌ವಾದದ ಅನನತ್ಯೆಯು ಬೇರೆಯಿದೆ. ಅದು ಜನರ ಪರವಾಗಿ ಇದೆ. ಮತ್ತು ಸಾಮಾನ್ಯ ಜನರ ಹಿತಾಸಕ್ತಿಯು ಅದಕ್ಕೆ ಬಹಳ ಮುಖ್ಯವಾಗಿದೆ. ಬಂಡವಾಳವಾದ ಮತ್ತು ಅದರ ಸಾಧ್ಯತೆಯು ಈಗ ಮತ್ತು ವಿಶಾಲವೂ ಆಗಿದೆ. ವಿಶ್ವಾತ್ಮಕವಾದ ಒಂದು ವ್ಯಾಪಾರಿ ಮನೋಭಾವವು ಕಾಣಿಸುತ್ತಿದೆ. ಆಧುನಿಕ ಕಾರ್ಪೋರೇಟ್ ಜಗತ್ತು ಬಂಡವಾಳವಾದ ಮತ್ತು ಅದರ ಸಂಘಟನೆಯೂ ಆಗಿರುವುದರಿಂದ ಅದರ ಸ್ವರೂಪವೂ ಬದಲಾಗಿದೆ. ಈಗ ಜಗತ್ತು ಬದಲಾಗಿದೆ. ಈಗಿನ ಸನ್ನಿವೇಶವು ವ್ಯತ್ಯಾಸವಾಗಿದೆ. ಅದರಲ್ಲಿ ಜೀವನ ಮತ್ತು ಅದರ ಸಂಘರ್ಷಗಳ ಕಾರಣ ಇದೆ. ಜೀವನ ಮತ್ತು ಅದರ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಕ್ರಮವೂ ಇದೆ. ಆದ್ದರಿಂದಲೇ ನಾವು ಸಮಾಜ ಮತ್ತು ಅದರ ಸಾಧ್ಯತೆಯು ಹೇಗಿದ್ದವು ಮತ್ತು ಹೇಗಾದವು ಎಂದು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ರಾಜಕೀಯ ಅರ್ಥಶಾಸ್ತ್ರವು ಒಂದು ದೃಷ್ಟಿಯಿಂದ ನಿಜವಾದ ಒಂದು ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಲು ಯತ್ನವನ್ನು ಮಾಡುತ್ತದೆ. ಆದರೆ ಇಲ್ಲಿ ಮತ್ತೆ ಕೆಲವು ಅಂಶಗಳನ್ನು ನಾವು ಯೋಚಿಸಬೇಕಾಗುತ್ತದೆ. ಅದು ವ್ಯಕ್ತಿ ಮತ್ತು ಅವನ ಜೀವನವು ಯಾವುದರಿಂದ ನಿಯಂತ್ರಿತವಾಗುತ್ತದೆ ಎನ್ನುವುದನ್ನು ನೋಡಿಕೊಂಡು ನಾವು ತಳೆಯಬೇಕಾದ ಅಂಶಗಳು ಮುಖ್ಯ. ಆದರೆ ಇಲ್ಲಿ ಬರುವ ಅನೇಕ ಸಮಸ್ಯೆಗಳು ಭಿನ್ನವಾದದೂ ಹೌದು. ಯಾಕೆಂದರೆ ಈವತ್ತು ನಾವು ಯಾವುದನ್ನು ನೋಡುತ್ತೇವೆ ಅದು ಮಾತ್ರವೇ ಮುಖ್ಯವಲ್ಲ. ನಮ್ಮ

ಎದುರು ಇರುವ ವಾಸ್ತವವನ್ನು ಮಾತ್ರವೇ ನೋಡಿಕೊಂಡು ನಾವು ಇತ್ಯಾತ್ಮಕವಾದ ತೀರ್ಮಾನವನ್ನು ಮಾಡಲು ಬರುವುದೇ ಇಲ್ಲ. ವಾಸ್ತವವಾಗಿ ಯಾವುದನ್ನು ನಾವು ಈವತ್ತು ಜನರ ಮಾತು ಹಾಗೂ ಅದರ ಸಾಧ್ಯತೆಯೆಂದು ಹೇಳುತ್ತೇವೆಯೋ ಅದು ಬದಲಾಗುತ್ತದೆ. ವಾಸ್ತವತೆ ಮತ್ತು ಜೀವನವು ಬದಲಾಗುತ್ತದೆ. ಅದು ಬದಲಾಗುವಾಗ ವ್ಯವಸ್ಥೆಯನ್ನು ನೋಡಬೇಕಾಗುತ್ತದೆ. ಅದು ಅಗತ್ಯವಾದ ಕ್ರಮವೂ ಹೌದು. ಮತ್ತು ಇದರ ಮೂಲಕವೇ ನಾವು ರಾಜಕೀಯ ಅರ್ಥ ಶಾಸ್ತ್ರವನ್ನು ನೋಡಬೇಕಾಗುತ್ತದೆ. ಅದರಲ್ಲಿ ಬರಿ ಒಂದು ಸಂಗತಿಯು ಮಾತ್ರವೇ ಇದೆ ಎಂದು ಭಾವಿಸುವುದು ಕ್ರಮವೂ ಅಲ್ಲ.

ವಸಾಹೋತ್ತರ ಕಾಲದಲ್ಲಿ ದುರಂತ ನಾಟಕಗಳು: ನಿಜ ಜೀವನ ಮತ್ತು ನಾಟಕದ ಜೀವನ

ಅನುಕರಣೆಯೆನ್ನುವ ಪರಿಕಲ್ಪನೆಗೆ ಅತ್ಯಂತ ವ್ಯಾಪಕವಾದ ಅರ್ಥವು ದೊರಕಿರುವುದು ಗ್ರೀಕ್ ನಾಟಕ ಹಾಗೂ ಸೌಂದರ್ಯಶಾಸ್ತ್ರದ ಪರಂಪರೆಯಿಂದ. ಇದು ಸೌಂದರ್ಯಶಾಸ್ತ್ರ ಮತ್ತು ನಾಟಕಕ್ಕೆ ಅತ್ಯಂತ ಭದ್ರವಾದ ಬುನಾದಿಯನ್ನು ಹಾಕಿತು. ಅನುಸರಿಸು, ಸಾಮ್ಯತೆ, ಹೋಲಿಕೆ, ಅನುಕೃತಿ, ಪ್ರಕೃತಿಯನ್ನು ಅಭಿನಯಿಸಿ ತೋರಿಸು; ಹೊರಜಗತ್ತಿನ ಯಾವುದಾದರೂ ಸಂಗತಿಗಳನ್ನು ಪದಗಳ ಮೂಲಕ ಅಥವಾ ಧ್ವನಿಯ ಮೂಲಕ ಅನುಕರಿಸು ಎನ್ನುವ ಅರ್ಥವಿದೆ. ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಹೇಳುವುದಿದ್ದರೆ ಅನುಕರಣೆ ಎನ್ನುವುದಕ್ಕೆ ಬೇರೆ ಬೇರೆ ರೀತಿಯ ಅನ್ವಯಿಕತೆಯು ಸಾಧ್ಯ. ಒಂದು ಸಾಹಿತ್ಯ ಮತ್ತು ಇತರ ಕಲೆಗಳಿಗೆ ಇರುವ ಸಂಬಂಧದ ವ್ಯಾಖ್ಯೆ. ಎರಡನೆಯದಾಗಿ, ಒಂದು ಸಾಹಿತ್ಯ ಕೃತಿಗೆ ಮತ್ತು ಮತ್ತೊಂದು ಸಾಹಿತ್ಯ ಕೃತಿಗೆ ಇರುವ ಸಂಬಂಧ. ಗ್ರೀಕ್ ದುರಂತ ನಾಟಕವನ್ನು ಕುರಿತು ಆಡುವ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು ಗ್ರೀಕ್ ದುರಂತ ನಾಟಕವು ಚರಿತ್ರೆಯಿಂದ ಹೊರತಲ್ಲ. ಅದಕ್ಕೂ ಅಲ್ಲಿಯ ಸಾಮಾಜಿಕ ಬೆಳವಣಿಗೆಗೂ ಸಂಬಂಧವಿದೆ. ಅದು ಬರಿಯ ಸೌಂದರ್ಯದ ಆರಾಧನೆಯಿಂದ ಹುಟ್ಟಿಲ್ಲ. ಅದಕ್ಕೂ ಸಾಮಾಜಿಕವಾದ ಬದ್ಧತೆಯಿದೆ. ಗ್ರೀಕ್ ದುರಂತ ನಾಟಕಗಳ ಅಭಿವ್ಯಕ್ತಿಯು ಕೇವಲ ಭಾವುಕ ಪ್ರತಿಕ್ರಿಯೆ ಅಲ್ಲ. ಅದು ಕೇವಲ ಓದಿಗೆ ಸಂಬಂಧಪಟ್ಟಿರುವುದೂ ಅಲ್ಲ. ಗ್ರೀಕ್ ದುರಂತ ನಾಟಕಗಳಿಗೆ ಅನೇಕ ಪ್ರೇಕ್ಷಕರೂ ಇದ್ದರು.

ದುರಂತ ನಾಟಕದಲ್ಲಿ ದುರಂತವು ಒಂದು ಸಂಗತಿ ಮಾತ್ರ. ಅದನ್ನು ನಾವು ನಾಟಕವಾಗಿ ನೋಡುತ್ತೇವೆ. ಯಾವುದನ್ನು ಕೇಳಿದರೆ ನಮಗೆ ದುರಂತವೆಂದು

ಅನಿಸುತ್ತದೆಯೋ ಅದನ್ನು ನಾವು ದುರಂತವೆಂದು ಹೇಳುತ್ತೇವೆ. ದುರಂತವು ವ್ಯಕ್ತಿಯದು ಆಗಬಹುದು ಅಥವಾ ಸಮಾಜದ್ದೂ ಆಗಬಹುದು. ಆದರೆ ಯಾವುದೇ ದುರಂತವನ್ನು ನಾವು ನೋಡುವ ಕ್ರಮವು ಮಾತ್ರವೇ ಭಿನ್ನವಾಗಿದೆ. ಅದರ ಸ್ವರೂಪವೂ ಬೇರೆಯಾಗಿದೆ. ಹಾಗೆಂದು ಯಾವುದನ್ನು ನಾವು ದುಃಖವೆಂದು ಹೇಳುತ್ತೇವೆಯೋ ಅವುಗಳು ಮಾತ್ರ ದುರಂತವಾಗುವುದೂ ಇಲ್ಲ. ವಾಸ್ತವವಾಗಿ ದುರಂತ ಎನ್ನುವುದು ಮುಖ್ಯವಾಗಿ ತಾಂತ್ರಿಕ ಪದ ಮಾತ್ರ. ಅದು ದುಃಖದ ಒಂದು ರೂಪ ಮಾತ್ರವೇ ಆಗಿದೆ. ದುರಂತದ ಪ್ರಶ್ನೆಯ ಸಂಕೀರ್ಣವಾದುದು ಕೂಡಾ. ಯಾವುದು ದುರಂತವಾಗಿದೆ ಯಾವುದು ದುರಂತವಾಗಿಲ್ಲ ಎಂದು ಹೇಳುವುದಕ್ಕಿಂತ ದುರಂತ ಮತ್ತು ಅದರ ಛಾಯೆಯ ಹಿಂದಣ ಸ್ವರೂಪವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾವು ಯಾವುದನ್ನು ದುರಂತವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಅತ್ಯಂತ ಸಂಕೀರ್ಣವಾದದು. ಅದು ಜೀವನ ಮತ್ತು ನಾಟಕ ಎರಡಕ್ಕೂ ಅನ್ವಯವಾಗುತ್ತದೆ. ಜೀವನ ಮತ್ತು ಅದರಲ್ಲಿ ನಡೆಯುವ ದುರಂತವು ಒಂದು ಬಗೆಯಲ್ಲಿ ಇರುತ್ತದೆ. ಆದರೆ ರಂಗದ ದುರಂತವು ಮತ್ತೊಂದು ಬಗೆಯದು. ಎರಡಕ್ಕೂ ವ್ಯತ್ಯಾಸವಿದೆ. ಜೀವನದಲ್ಲಿ ದುರಂತವು ಉಂಟಾದರೆ ಅದನ್ನು ನಾವು ನಿಭಾಯಿಸುವ ಕ್ರಮಕ್ಕೂ ರಂಗದ ದುರಂತದ ಕ್ರಮಕ್ಕೂ ವ್ಯತ್ಯಾಸವಿದೆ. ಜೀವನದ ದುರಂತವನ್ನು ನಾವು ಕಟುವಾದುದು ಎಂದು ಹೇಳುತ್ತೇವೆ. ಆದರೆ ರಂಗದ ದುರಂತವು ನಮ್ಮ ಭಾವನೆಗಳನ್ನು ಮಾತ್ರ ಸೂಚಿಸುತ್ತದೆ. ನಾವು ಅದರಲ್ಲಿ ಕಾಣುವುದು ಭಿನ್ನವಾದುದನ್ನು. ಅದರಲ್ಲಿ ಬರುವ ಸಂಗತಿಗಳು ರಂಗದ ಪ್ರಯೋಗಗಳಿಗೆ ಅನ್ವಯವಾಗುತ್ತದೆ. ಅದನ್ನು ನೋಡುವುದು ನಾವು ಒಂದು ರಂಗದ ಮೇಲಿನ ಕ್ರಿಯೆಯಾಗಿ ಮಾತ್ರವೇ. ಇದರಲ್ಲಿ ಅನುಭವ ಎನ್ನುವುದು ನಿಜವಾದುದಲ್ಲ. ಅನುಕರಣೆಯೇ ಬಹಳ ಮುಖ್ಯ. ರಂಗದ ಅನುಭವ ಎಂದರೆ ಅದು ವಿಶಿಷ್ಟವಾದುದು. ಅನುಕರಣೆಯ ಕಾರಣವೇ ಅದರಲ್ಲಿ ಬಹಳ ಮುಖ್ಯ. ದುರಂತವು ನಮ್ಮ ಜೀವನದಲ್ಲಿ ನಡೆದು ಹೋಯಿತು ಎಂದರೆ ಅದನ್ನು ನಾವು ಬಹಳ ದುಃಖಕರವಾದುದು ಎಂದು ಹೇಳುತ್ತೇವೆ. ಅದಕ್ಕಾಗಿ ನಾವು ಬಹಳ ವ್ಯಥೆ ಪಡುತ್ತೇವೆ. ಆದರೆ ಸಾಂಪ್ರದಾಯಿಕರು ದುರಂತವನ್ನು ಹೇಳಿದ ಕ್ರಮಗಳು ಬೇರೆ. ಅವರ ಪ್ರಕಾರ ಯಾವುದು ಅಸಂತೋಷವನ್ನು ಉಂಟು ಮಾಡುತ್ತದೆಯೋ ಅದನ್ನು ಮಾತ್ರವೇ ಅವರು ದುರಂತವೆಂದು ಕರೆದರು. ಅದರ ಕುರಿತಾಗಿ ಅವರ ದೃಷ್ಟಿಕೋನವು ಬೇರೆ. ಹಾಗೆ ನೋಡುವುದಿದ್ದರೆ ಸುಖ ಮತ್ತು ದುಃಖ ಎನ್ನುವುದನ್ನು ಯಾವ ರೀತಿಯಲ್ಲಿ ನೋಡಬೇಕು ಎನ್ನುವುದು ನಮ್ಮೆದುರಿನ ಪ್ರಶ್ನೆ. ದುಃಖ ಮತ್ತು ಸುಖ ಎನ್ನುವುದು ಯಾವಾಗಲೂ ಒಂದು ಸಂವಾದಿಯಾದ ಪದ. ಅದರ ಸ್ವರೂಪವನ್ನು ನಾವು ಆನ್ವಯಿಕವಾಗಿ ಮಾತ್ರವೇ ಬಳಸಿಕೊಳ್ಳುತ್ತೇವೆ. ದುರಂತವೆಂದರೆ ಅದು ನಾವು ಅನುಭವಿಸುವ ಅನುಭವ ಮಾತ್ರವೇ ಅಥವಾ ಅದರ ಆಚೆಗೂ ಬೇರೆ ಅಸ್ತಿತ್ವವು ಅದಕ್ಕೆ ಇದೆಯೇ ಎನ್ನುವುದು ಅರಿಸ್ಟಾಟಲನ ನಿಲುವು ಆಗಿತ್ತು. ಅಂದರೆ ಈ ದೃಷ್ಟಿಯಲ್ಲಿ ಅವನ ರಂಗ ವ್ಯಾಖ್ಯೆಯು ಬೇರೆಯಾಗಿದೆ. ಅದನ್ನೇ ಅವನು ಕೆಥಾರ್ಸಿಸ್ ಸಿದ್ಧಾಂತದಲ್ಲಿ

ವಿವರಿಸಿದ್ದು. ಯಾವುದು ದುರಂತ ಮತ್ತು ಯಾವುದು ಸುಖಾಂತ? ಇದನ್ನು ಹೀಗೆಯೂ ಹೇಳಬಹುದು- ಯಾವುದನ್ನು ನಾವು ಆಧುನಿಕ ಅರ್ಥದಲ್ಲಿ ದುರಂತವೆಂದು ಹೇಳುತ್ತೇವೆಯೋ ಅದನ್ನು ಮಾತ್ರವೇ ಅವನು ಉದ್ದೇಶವಾಗಿ ಇಟ್ಟುಕೊಂಡಿರಲಿಲ್ಲ. ರುದ್ರವೆಂದರೆ ಅದು ಭಯಾನಕ ಮತ್ತು ಭೀತಿಯನ್ನು ಉಂಟು ಮಾಡುವ ಪ್ರಕ್ರಿಯೆ. ದುರಂತವನ್ನು ನಾವು ಸ್ವೀಕರಿಸುವ ಕ್ರಮದಲ್ಲಿಯೇ ವ್ಯತ್ಯಾಸವಿದೆ. ಅದನ್ನು ನೋಡುವಾಗ ಅದು ನಮಗೆ ಭಿನ್ನವಾದ ಈ ಹಿನ್ನೆಲೆಯಿಂದ ಅನುಭವವಾಗುತ್ತದೆ. ಅದರಿಂದ ಹುಟ್ಟುವ ಅನುಭವ ಕೂಡಾ ಬೇರೆಯಾದುದು. ಆದರೆ ಯಾವಾಗ ಅದನ್ನು ಹೇಗೆ ನೋಡುತ್ತೇವೆ ಮತ್ತು ಅದರ ಪರಿಣಾಮವು ಯಾವ ಬಗೆಯದು ಎನ್ನುವುದೇ ಮುಖ್ಯವಾದ ಸಮಸ್ಯೆ. ದುರಂತವು ಸುಮ್ಮನೆ ಆಗುವುದು ಇಲ್ಲ. ಅದಕ್ಕೆ ಕಾರಣವಿದೆ ಮತ್ತು ಅದನ್ನು ಅರಿಸ್ಟಾಟಲ್ ನಿರ್ದಿಷ್ಟವಾದ ಅರ್ಥದಲ್ಲಿಯೇ ಹೇಳಿದ್ದಾನೆ. ಜೀವನ ಮತ್ತು ಅದರ ಅನ್ವೇಷಣೆ ಹಾಗೂ ಅದನ್ನು ನಾವು ಮುಖಾಮುಖಿಯಾಗುವ ಕ್ರಮವು ಬೇರೆಯಾಗುತ್ತದೆ. ಜೀವನವೆಂದರೆ ಅದು ಆಯಾ ಸನ್ನಿವೇಶದ ಅದೃಷ್ಟ ಮತ್ತು ಅದರ ವ್ಯಾಖ್ಯಾನವನ್ನು ಅನುಸರಿಸಿ ಬೇರೆಯಾಗುತ್ತದೆ. ನಮಗೆ ಅರಿವಿಲ್ಲದೆ ಉಂಟಾಗುವ ತಪ್ಪು ಮತ್ತು ಅದರ ಪರಿಣಾಮ. ನಮ್ಮ ಅಹಂಕಾರ ಹಾಗೂ ಅದರ ಪರಿಣಾಮಗಳೇ ಇಲ್ಲಿ ಬಹು ಮುಖ್ಯವಾದ ಸಂಗತಿ. ಆದ್ದರಿಂದ ಅದನ್ನು ಹೇಳುವಾಗ ಅದರ ಸ್ವರೂಪವನ್ನು ಒಂದು ಕಾಲದ ಗ್ರೀಕ್ ನಂಬಿಕೆಯನ್ನು ಅರಿಸ್ಟಾಟಲ್ ಗಮನಕ್ಕೆ ತಂದುಕೊಳ್ಳುತ್ತಾನೆ. ಆದರೆ ಅದುವೇ ಅನಂತರ ಮುಂದುವರಿಯಲಿಲ್ಲ. ಗ್ರೀಕ್ ರಂಗಭೂಮಿಯನ್ನು ನೋಡಿದರೆ ಅದು ಆ ಕಾಲದ ಅವಶ್ಯಕತೆಯೂ ಆಗಿತ್ತು. ಜೀವನವನ್ನು ಅದು ಆಗ ಭಿನ್ನವಾಗಿ ನೋಡಲೂ ಯತ್ನವನ್ನು ಮಾಡಿತ್ತು. ಜೀವನದಲ್ಲಿ ಅರ್ಥವಾಗದ ಸಂಗತಿಗೆ ಕಾರಣ ವಿಧಿಯೆಂದು ಆಗಿನ ನಾಟಕಕಾರರು ಹೇಳುವ ಯತ್ನವನ್ನು ಮಾಡಿದ್ದರು. ಜೀವನವು ಯಾವುದೋ ಒಂದರ ನಿಯಂತ್ರಣಕ್ಕೆ ಒಳಗಾಗಿದೆ ಎಂದು ಭಾವಿಸಿದ್ದ ಪರಿಣಾಮವು ಆಗಿನ ನಾಟಕಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಜೀವನ ಮತ್ತು ಅದರ ಸಾಧ್ಯತೆಯೇ ಬೇರೆ. ಆದರೆ ಅದನ್ನು ನೋಡುವಾಗ ನಮಗೆ ಯಾವ ಅನುಭವ ಆಗುತ್ತದೆ ಎನ್ನುವುದನ್ನು ವಿವರಿಸಿಕೊಳ್ಳುವುದೇ ದುರಂತ ನಾಟಕವೆಂದು ಅರಿಸ್ಟಾಟಲ್ ಹೇಳುತ್ತಾನೆ. ದುರಂತವೂ ಒಂದು ರೀತಿಯ ಅನುಭವವಾಗಿದೆ. ಅದು ನಮ್ಮ ಭಾವನೆಗಳನ್ನು ಹೊರಹಾಕಲು ಕಾರಣವಾಗುತ್ತದೆ. ಅದಕ್ಕೆ ಔಷಧಿಯ ಗುಣವಿದೆ ಎಂದು ಅರಿಸ್ಟಾಟಲ್ ಹೇಳುತ್ತಾನೆ. ಭಾವನೆಗಳೇ ವಿರೇಚನೆಯಾಗಬೇಕು. ಅದು ಮಾನಸಿಕ ಒತ್ತಡಕ್ಕೆ ಕಾರಣವಾಗಬಾರದು. ಭಾವನೆಗಳು ಮತ್ತು ಅದರ ಒತ್ತಡದ ನಿವಾರಣೆಯೇ ಬಹಳ ಮುಖ್ಯವಾಗಿದೆ. ಜೀವನವನ್ನು ನೋಡಲು ಮತ್ತು ಅದರ ಮೂಲಕ ಅನೇಕವನ್ನು ನಿವಾರಿಸಿಕೊಳ್ಳಲು ಈ ದುರಂತ ನಾಟಕವು ಕಾರಣವಾಗುತ್ತದೆ ಎಂದು ಅರಿಸ್ಟಾಟಲ್ ಭಾವಿಸುತ್ತಾನೆ. ಅದೃಷ್ಟ ಮತ್ತು ಅದರ ಅನ್ವೇಷಣೆಯನ್ನು ದುರಂತ ನಾಟಕಗಳು ನೋಡುವ ಕ್ರಮವೇ ಬೇರೆ. ದುರಾದೃಷ್ಟ ಎನ್ನುವುದನ್ನು ವಿವರಿಸಿಕೊಳ್ಳುವುದೇ ಭಿನ್ನವಾದ ಕ್ರಮದಲ್ಲಿ. ಅದು ಅಲಂಕಾರ ಶಾಸ್ತ್ರದ

ನಿಲುವೂ ಹೌದು. ಅದನ್ನು ಅದೇ ಅರ್ಥದಲ್ಲಿ ನಾವು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅದರಲ್ಲಿ ಬರುವ ವಿಷಯಗಳು ಬೇರೆ. ದುರಂತ ನಾಟಕವೆನ್ನುವುದೇ ಮೂಲಭೂತವಾಗಿ ರಂಗ ಮತ್ತು ಅದರ ತಂತ್ರವನ್ನು ಸೂಚಿಸುತ್ತದೆ. ಕ್ರಿಯೆ, ಘಟನೆ, ವಸ್ತು, ಕಾಲ ಅವುಗಳ ಐಕ್ಯವೇ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ನೋವು ಮತ್ತು ವಿಘಟನೆಯು ಬಹಳ ಮುಖ್ಯವಾದ ಸಂಗತಿ. ಯಾವುದನ್ನು ನೋಡಿ ನಾವು ನಗಾಡುವುದಿಲ್ಲವೋ ಅದನ್ನು ನಾವು ದುರಂತವೆಂದು ಹೇಳುತ್ತೇವೆ. ದುರಂತವೆಂದರೆ ಅದು ದುರಾದೃಷ್ಟವನ್ನು ಸೂಚಿಸುತ್ತದೆ ಎಂದು ಶೊಪೆನ್‌ಹಾರರ್ ಹೇಳುತ್ತಾನೆ. ಅದು ಜೀವನದ ಅಪಹಾಸ್ಯವು ಅಲ್ಲ. ಅದರಲ್ಲಿ ಅದಕ್ಕಿಂತ ಭಿನ್ನವಾದ ದೃಷ್ಟಿಕೋನವಿರುತ್ತದೆ. ಗಂಭೀರತೆಯೇ ದುರಂತ ನಾಟಕದ ಕೇಂದ್ರ. ದುರಂತ ಮತ್ತು ಅದರ ಸ್ವರೂಪಗಳೂ ಕಾಲ ಕಾಲಕ್ಕೆ ಬೇರೆಯಾಗುತ್ತಾ ಬಂದಿದೆ. ಪ್ರಾಚೀನವಾದ ವ್ಯಾಖ್ಯೆಯ ದೃಷ್ಟಿಯಿಂದ ದುರಂತವೆಂದರೆ ಅದು ವಿಧಿ ಮತ್ತು ಅದರ ಜೊತೆಗಿನ ಜಗಳ. ಅದರಲ್ಲಿ ಗಂಭೀರತೆಯು ಇದೆ. ಈ ಕುರಿತು ಗದಾಯುದ್ಧದಲ್ಲಿ ಬರುವ ಎರಡು ಸನ್ನಿವೇಶಗಳು ಹೀಗಿವೆ:

ಪ್ರತಿಕೂಲದೈವನ್ನೆ ನೀಂ
ಪ್ರತಿನೃಪರನುಕೂಲದೈವರಸಹಾಯನೆ ನೀಂ
ಪ್ರತಿನೃಪರಸಹಾಯರ್ ನೀಂ
ಪ್ರತಿಬಲನದರಿಂದನರ್ಥಕಂ ವಾಕ್ಯಾರ್ಥ.

ನೀನು ಅಸಹಾಯ ಶೂರನೇ. ಆದರೆ ದೈವಾನುಕೂಲವಿಲ್ಲದವನು. ನಿನ್ನ ವಿರೋಧಿಗಳಾದ ಪಾಂಡವರು ಅಸಹಾಯಶೂರರು, ಜತೆಗೆ ದೈವಾನುಕೂಲವುಳ್ಳವರು. ಅಂಥವರಿಗೆ ನೀನು ಪ್ರತಿಸ್ಪರ್ಧಿಎಂದ ಮೇಲೆ ನಾನೆಂದ ಮಾತಿನ ರಹಸ್ಯಾರ್ಥವನ್ನು ತರ್ಕಿಸಿ ಏನು ಪ್ರಯೋಜನ? (ದೈವದ್ರೋಹಿಗಾಗುವ ದುರ್ಗತಿ ನಿನಗೂ ತಪ್ಪಿದ್ದಲ್ಲವೆಂಬ ಆಶಯ)

ಎನಗೆ ಮನಮಿಂದು ಶೂನ್ಯಂ
ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾ
ವನಿ ಶೂನ್ಯಮಾಯ್ತು ದುಶ್ಯಾ
ಸನನಿಲ್ಲದೆ ಕರ್ಣನಿಲ್ಲದಾನೆಂತಿರ್ಪೆಂ

ದುಶ್ಯಾಸನಕರ್ಣರಿಲ್ಲದೆ ಇಂದು ನನ್ನ ಮನಸ್ಸು ಬರಿದಾಗಿದೆ, ಮನೆ ಖಾಲಿಯಾಗಿದೆ. ಸೇನಾನಿವೇಶ ನಿರ್ಜೀವವಾಗಿದೆ. ಹೆಚ್ಚೇಕೆ ಸಮಸ್ತ ಭೂಮಂಡಲವೇ ಇಲ್ಲದಾಗಿದೆ, ಎಂದ ಬಳಿಕ ನಾನು ಹೇಗೆ ಜೀವಧಾರಣೆ ಮಾಡಲಿ?

ಕರ್ಣದುಶ್ಯಾಸನರು ಜೊತೆಯಲ್ಲಿದ್ದಾಗ ಧುರ್ಯೋಧನನಿಗೆ ಮನವೂ ಮನೆಯೂ ಬೀಡೂ ನಾಡೂ ಎಲ್ಲವೂ ಪೂರ್ಣವಾಗಿತ್ತು, ಸಚೇತನವಾಗಿತ್ತು. ಅವರಿಲ್ಲದೆ

ಇಂದು ಇವೆಲ್ಲ ಶೂನ್ಯವಾಗಿಬಿಟ್ಟಿವೆ. ಇದ್ದೂ ಇಲ್ಲಂತಾಗಿವೆ. ಇಲ್ಲಿ ಧುರ್ಯೋಧನನು ನಿಜಕ್ಕೂ ಭ್ರಾಂತನಾಗಿದ್ದಾನೆ. ಅವನಿಗೆ ಯಾವುದೂ ಬೇಡವಾಗಿದೆ.

ನೆಲಕ್ಕಿರಿವೆನೆಂದು ಬಗೆದಿರೆ
ಛಲಕಿರಿವೆಂ ಪಾಂಡುಸುತರೊಳೀನೆಲನಿದು ಪಾ
ಳ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಿಪೆನೇ

ಅಜ್ಜಾ ನಾನು ಪಾಂಡವರೊಡನೆ ರಾಜ್ಯಕ್ಕಾಗಿ ಯುದ್ಧ ಮಾಡುತ್ತೇನೆಂದು ಭಾವಿಸಿದಿರಾ? ನಾನು ಕಾದಾಡುವುದು ಛಲಕ್ಕೋಸ್ಕರ, ನೆಲಕ್ಕೋಸ್ಕರ ಅಲ್ಲ. ನನ್ನ ಪಾಲಿಗೆ ಈ ಭೂಮಿ ಹಾಳು ಭೂಮಿ. ಯಾಕೆಂದರೆ ಪ್ರಿಯ ಮಿತ್ರನಾದ ಕರ್ಣನ ಕೊಲೆಗೆ ಈಕೆಯೂ ಕಾರಣಳು. ಆದುದರಿಂದ ದ್ರೋಹಿಯಾದ ಈ ಭೂರಮೆಯೊಂದಿಗೆ ಇನ್ನು ನಾನು ಬಾಳುವುದು ಹೇಗೆ ಸಾಧ್ಯ? ಸಾಧ್ಯವಿಲ್ಲ.

ಭೂಪತಿಯಾಗಿ ಮೆರೆಯಬೇಕೆಂಬ ಆಗ್ರಹದಿಂದ ಹೋರಾಡುವುದಿಲ್ಲ. ಕೇವಲ ಛಲಕ್ಕಾಗಿ ಹೋರಾಡುತ್ತೇನೆ ಎಂಬುದು ದುರ್ಯೋಧನನ ಧೃಢನಿರ್ಧಾರ.

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ

ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತುಮಿರ್ದು ಚ

ಕ್ರಾಂಕಮಗಲ್ವಿನಂ ಕ್ರಮದಿನಂಬರಮಂ ಬಿಸುಟುರ್ವಿಗಂಧಕಾ

ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್

ಕಮಲಗಳು ದಃಖದಿಂದ ಮುದುಡಿಕೊಳ್ಳುತ್ತಿರಲು, ತನ್ನ ತೀಕ್ಷ್ಣ ಪ್ರಭೆಯು ಕುಂದುತ್ತಿರಲು, ಕಿರಣಗಳು ಮರೆಯಾಗುತ್ತಿರಲು, ಚಕ್ರವಾಕ ದಂಪತಿಗಳು ವಿರಹ ದುಃಖವನ್ನು ಅನುಭವಿಸುತ್ತಿರಲು, ಆಕಾಶದಲ್ಲಿ ಸಂಚರಿಸುವುದನ್ನು ಬಿಟ್ಟು ಲೋಕಕ್ಕೆ ಕತ್ತಲು ಆವರಿಸುತ್ತಾ ಬರುತ್ತಿರಲು ಸೂರ್ಯನು ಮುಳುಗಿದನು. (ಸೂರ್ಯನ ಪರವಾಗಿ)

ಮಿತ್ರರ ಮುಖ ಕಮಲಗಳು ಬಾಡುತ್ತಿರಲು, ತನ್ನ ಬಾಹು ಶಕ್ತಿಯು ಕ್ಷಯಿಸುತ್ತಿರಲು, ಚಕ್ರಾಧಿಪತ್ಯವು ಕೈಬಿಟ್ಟು ಹೋಗುತ್ತಿರಲು ಅಥವಾ ಚಕ್ರೇಶ್ವರತ್ವವು ಮರೆಯಾಗುತ್ತಿರಲು, ಇಹಲೋಕವನ್ನೂ ವಸ್ತ್ರವನ್ನೂ ತ್ಯಜಿಸಿ, ಲೋಕದಲ್ಲಿ ಶೋಕಾಂಧಕಾರವು ಮುಸುಕುತ್ತಿರಲು ಕುರುವಂಶ ಭಾಸ್ಕರನಾದ ದುರ್ಯೋಧನನು ಸ್ವರ್ಗಸ್ಥನಾದನು. (ದುರ್ಯೋಧನನ ಪರವಾಗಿ)

ದುರಂತಕ್ಕೆ ಕಾರಣವು ವ್ಯಕ್ತಿಯೇ ಆಗಬೇಕಾಗಿಯೂ ಇಲ್ಲ. ಆದರೆ ಮಧ್ಯಕಾಲೀನ ದುರಂತ ನಾಟಕಗಳಲ್ಲಿ ದುರಂತವು ಒಂದು ನಿರ್ದಿಷ್ಟವಾದ ಕತೆ. ಹಾಗೂ ಅದು ಮುಕ್ತಾಯದಲ್ಲಿ ಅಸಂತೋಷವನ್ನು ಮಾತ್ರವೇ ಹೇಳುತ್ತದೆ. ಆಧುನಿಕ ದುರಂತ

ನಾಟಕಗಳಲ್ಲಿ ಇದನ್ನು ಕಾಣುವುದಿಲ್ಲ. ದುರಂತವೆಂದರೆ ಅದು ಕೇವಲ ಸುಖಾಂತವಾಗದೇ ಇರುವುದು ಮಾತ್ರವೇ. ಪ್ರಾಚೀನ ದುರಂತ ನಾಟಕಗಳು ಕೊಡುವ ದುರಂತದ ಅನುಭವವು ಹುಟ್ಟಿಕೊಳ್ಳುವುದೇ ಒಂದು ದುರಂತದ ಅನುಭವದಲ್ಲಿ. ಅದರಲ್ಲಿ ಅನ್ಯತೆಯೂ ಇರುತ್ತದೆ. ಅದರಲ್ಲಿ ಬರುವ ದುರಂತದ ಅನುಭವವು ವಾಸ್ತವವಾಗಿ ಭಿನ್ನವಾದ ಬಗೆಯದೂ ಹೌದು. ಅದರಲ್ಲಿ ದುರಂತ ಮನಸ್ಸು ಮತ್ತು ಅದರ ಸ್ಥಿತಿಯೂ ಇರುತ್ತದೆ. ಮತ್ತೊಂದು ಕಡೆಯಿಂದ ಅದು ಲೈಂಗಿಕ ಕಾಮನೆ ಮತ್ತು ಅದರ ವಿಧಿ ನಿಷೇಧಗಳನ್ನು ಹೇಳುತ್ತದೆ. ಅದರಲ್ಲಿ ಅನೇಕ ಸಂಘರ್ಷಗಳೂ ಇರುತ್ತದೆ. ಇನ್ನೊಂದು ಕಡೆಯಿಂದ ಅದು ಸಾಮಾಜಿಕ ಮತ್ತು ಸಾರ್ವಜನಿಕವಾದ ಸಂಗತಿಗಳನ್ನು ಹೇಳುತ್ತದೆ. ಅದು ರಾಜಕೀಯವೂ ಹೌದು. ಅದರಲ್ಲಿ ತಲ್ಲಣವೂ ಇರುತ್ತದೆ. ಸಾಂಪ್ರದಾಯಿಕ ದೃಷ್ಟಿಯಿಂದ ಹೇಳುವುದಿದ್ದರೆ ಅದು ಅದರಲ್ಲಿ ಬರುವ ದುರಂತವು ಕೇವಲ ಆಕಸ್ಮಿಕವೂ ಅಲ್ಲ. ಅದರಲ್ಲಿ ತಲ್ಲಣಗಳು ಇವೆ. ಕರುಣೆ ಮತ್ತು ದುಃಖಗಳನ್ನು ಅದು ನಿರೂಪಿಸುವ ಕ್ರಮಗಳು ಕೂಡಾ ಬೇರೆ. ಕರುಣೆ ಮತ್ತು ದುಃಖ ಎರಡೂ ದುರಂತದ ಅಭಿಪ್ರಾಯವನ್ನು ಮಂಡಿಸುತ್ತವೆ. ಜೀವನ ಕಷ್ಟಗಳು ಯಾವ ಬಗೆಯಲ್ಲಿ ಇರಬಹುದು ಎನ್ನುವುದನ್ನು ಅದು ವಿವರಿಸುತ್ತದೆ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದರಲ್ಲಿ ಒಡಕು ಮತ್ತು ಸಂಘರ್ಷಗಳಿವೆ. ದುರಂತವು ಕೇವಲ ಮನಸ್ಸು ಮತ್ತು ಅದರ ವ್ಯಾಪಾರಕ್ಕೆ ಸಂಬಂಧಪಟ್ಟದ್ದು ಎಂದು ಭಾವಿಸುವಂತೆ ಇಲ್ಲ. ಅದರಲ್ಲಿ ದುಃಖಗಳಿರುವುದು ಜೀವನದ ಕಾರಣಕ್ಕಾಗಿ. ಅದು ಅನಿವಾರ್ಯವಾಗಿ ಬಂದಿದೆ. ಅದರಿಂದ ತಪ್ಪಿಸಿಕೊಳ್ಳಲಾಗದ ವ್ಯಕ್ತಿಯು ಯಾವ ರೀತಿಯಲ್ಲಿ ಬಳಲುತ್ತಾನೆ ಎನ್ನುವುದೇ ದುರಂತ ನಾಟಕದ ತಿರುಳು. ದುರಂತವು ಜರುಗುವುದು ಭಿನ್ನವಾದ ಕಾರಣಕ್ಕಾಗಿಯೂ ಹೌದು. ಕರುಣೆ ಮತ್ತು ಅದರ ಹಿನ್ನೆಲೆಯು ಈ ಕಾರಣದಿಂದ ಭಿನ್ನವಾಗಿದೆ. ದುರಂತವು ದೈಹಿಕವಾದುದು ಮತ್ತು ಅದರಲ್ಲಿ ಆಧ್ಯಾತ್ಮಿಕವಾದ ಅರ್ಥವೂ ಇದೆ. ಕೇವಲ ಲೌಕಿಕವಲ್ಲ. ಆದರೆ ದುರಂತವನ್ನು ನೋಡುವಾಗ ನಮಗೆ ಆಗುವ ಅನುಭವವು ಸಂಕೀರ್ಣವಾಗಿದೆ. ಅದರ ಅಸ್ತಿತ್ವ ಇರುವುದೇ ಅದರ ದುರಂತದ ಸ್ವರೂಪದಲ್ಲಿ. ನಾಟಕದಲ್ಲಿ ದುರಂತಕ್ಕೆ ಒಂದು ಉದ್ದೇಶವಿದೆ. ಅದನ್ನು ನಿರೂಪಿಸಲು ಕ್ರಿಯೆ ಇರುತ್ತದೆ. ಆ ಕ್ರಿಯೆಯೇ ಬಹಳ ಮುಖ್ಯವಾಗಿದೆ. ರಂಗದ ಮೇಲೆ ಉಂಟಾಗುವ ಕ್ರಿಯೆಗಳು ಅದರ ದುರಂತವನ್ನು ನಿರೂಪಿಸಲು ಕಾರಣವಾಗುತ್ತದೆ. ಯಾವುದೇ ದುರಂತಕ್ಕೆ ಅದರದೇ ಆದ ಕಾರಣವಿದೆ ಮತ್ತು ಅದಕ್ಕೂ ಜೀವನ ವಿಧಾನಕ್ಕೂ ಒಂದು ಸಂಬಂಧವಿದೆ. ಯಾವಾಗ ನಾವು ದುರಂತವನ್ನು ಒಂದು ನಾಟಕದ ಪ್ರಯೋಗ ಮಾತ್ರವೇ ಎಂದು ಭಾವಿಸುತ್ತೇವೆಯೋ ಆಗ ಅದು ಕೇವಲ ಪ್ರಯೋಗ ಮಾತ್ರವೇ ಆಗಿರುತ್ತದೆ. ಅದರ ಜೊತೆಗೆ ರಂಗಪ್ರಯೋಗ ಮತ್ತು ಅದರ ಸಾಧ್ಯತೆಯನ್ನು ಕೇವಲ ತಂತ್ರವೆಂದು ಭಾವಿಸಿಕೊಳ್ಳುವ ಅಪಾಯವೂ ಇರುತ್ತದೆ. ಹಾಗೆ ನೋಡಿದರೆ ರಂಗ ಮತ್ತು ಅದರ ಪ್ರಯೋಗಗಳಿಗೆ ಅವುಗಳದೇ ಆದ ಸಾಧ್ಯತೆಯು ಇರುತ್ತದೆ. ಅದು ರಂಗ ಪ್ರದರ್ಶನವೂ ಹೌದು. ಯಾವಾಗ ಇದು ಪ್ರದರ್ಶನ ಎಂದು

ಮಾತ್ರವೇ ಭಾವಿಸುತ್ತೇವೆಯೋ ಆಗ ಅರ್ಥವು ಬೇರೆಯಾಗುತ್ತದೆ. ರಂಗ ಮತ್ತು ಅದರ ಪ್ರದರ್ಶನವು ಯಾವಾಗಲೂ ಒಂದು ಅನ್ಯವೆಂದು ಭಾವಿಸಿಕೊಳ್ಳುವ ಚಟುವಟಿಕೆಯು ಮಾತ್ರವೇ. ಆದ್ದರಿಂದ ದುರಂತವೆನ್ನುವುದು ಯಾವುದೇ ಉದ್ದೇಶವಿಲ್ಲದೆ ನಡೆಯುವ ಚಟುವಟಿಕೆ ಎಂದು ಭಾವಿಸಬಾರದು. ಅದಕ್ಕೆ ಅದರದೇ ಆದ ವಿನ್ಯಾಸವೂ ಇರುತ್ತದೆ. ಆದ್ದರಿಂದ ಅದನ್ನು ನೋಡುವಾಗ ಅದರ ಹಿನ್ನೆಲೆಯು ಯಾವ ಬಗೆಯದು ಎಂದೂ ನೋಡಬೇಕಾಗುತ್ತದೆ. ನಾಟಕದಲ್ಲಿ ನಡೆಯುವ ದುರಂತವು ಮನುಷ್ಯರನ್ನು ಕಲಕುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ದುರಂತವೆಂದರೆ ಅದನ್ನು ನಾವು ಹಾಸ್ಯಾಸ್ಪದವೆಂದು ಭಾವಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಅದನ್ನು ನೋಡುವ ಸಂಗತಿಯು ಬೇರೆಯಾಗಿರುತ್ತದೆ. ನಾವು ಮತ್ತೊಂದು ಅಂಶವನ್ನು ಇಲ್ಲಿ ಗಮನಿಸಬೇಕಾದ ಅಗತ್ಯವೂ ಇದೆ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದು ಕೆಲವರಿಗೆ ಒದಗುವ ಪರಿಸ್ಥಿತಿಯೂ ಹೌದು. ದಿನವೂ ಒಂದೇ ರೀತಿಯಲ್ಲಿ ನಾವು ಜೀವನವನ್ನು ನಡೆಸುತ್ತೇವೆ ಎಂದರೆ ಅದರಲ್ಲಿ ಯಾವುದೇ ದುರಂತವನ್ನು ನಾವು ಕಾಣುವ ಸಾಧ್ಯತೆಯು ಇಲ್ಲ. ದುರಂತ ಎನ್ನುವುದು ಮೂಲಭೂತವಾಗಿ ಕೇವಲ ಮೌಲ್ಯದ ಪ್ರಶ್ನೆಯೆಂದು ಭಾವಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಅದರ ಸಾಧ್ಯತೆಯು ಬೇರೆಯಾಗಿರುತ್ತದೆ. ನೈಸರ್ಗಿಕ ದುರಂತ ಮತ್ತು ನಾಟಕದ ದುರಂತವು ಬೇರೆಯಾಗಿರುತ್ತದೆ. ನಾಟಕದ ದುರಂತವನ್ನು ನೋಡುವುದು ಎಂದರೆ ರಂಗದ ಅನುಭವವನ್ನು ನಾವು ಗ್ರಹಿಸಿಕೊಳ್ಳುವುದು ಎಂದು ಅರ್ಥ. ಹಾಗೆ ನೋಡುವುದಿದ್ದರೆ ನೈಸರ್ಗಿಕ ದುರಂತ, ಸಾಂಸ್ಕೃತಿಕ ದುರಂತ ಮತ್ತು ನಾಟಕದಲ್ಲಿ ನಡೆಯುವ ದುರಂತಗಳಿಗೆ ವ್ಯತ್ಯಾಸವೂ ಇದೆ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದು ಯಾವ ಕಾರಣಕ್ಕೆ ಆಗಿದೆ ಎನ್ನುವುದೂ ಅಷ್ಟೇ ಮುಖ್ಯ. ಯಾವುದೇ ದುರಂತವು ವಿನಾ ಕಾರಣ ನಡೆಯುವುದೂ ಇಲ್ಲ. ಅದರಲ್ಲಿ ವ್ಯತ್ಯಾಸವೂ ಇದೆ. ಅದನ್ನು ನಾವು ಒಂದು ಪರಿಧಿಯ ಒಳಗೆ ಮಾತ್ರವೇ ಗುರುತಿಸಲು ಬರುವುದೂ ಇಲ್ಲ. ಯಾವುದು ಯಾವ ನೈತಿಕ ಕಾರಣಕ್ಕೆ ಹುಟ್ಟಿಕೊಂಡಿದೆ ಮತ್ತು ಅದನ್ನು ನಾವು ಹೇಗೆ ನೋಡಬೇಕು ಎನ್ನುವುದು ಬಹಳ ಮುಖ್ಯವಾದ ಸಂಗತಿಯೂ ಹೌದು. ದುರಂತವೆಂದರೆ ಅದಕ್ಕೆ ಅದರದೇ ಆದ ಗುಣವೂ ಒಂದು ಇರುತ್ತದೆ. ಆದರೆ ಅದನ್ನು ನಾವು ಕೇವಲ ನೈತಿಕ ಬಗೆಯದು ಮಾತ್ರವೇ ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಎಂದು ಮಾತ್ರ ಅರ್ಥ. ದುರಂತ ನಾಟಕದಲ್ಲಿ ಬರುವ ಅನೇಕ ಸಂಗತಿಗಳು ನೈತಿಕವೇ ಅಥವಾ ಅನೈತಿಕವೇ ಎನ್ನುವ ಪ್ರಶ್ನೆಯೂ ಇರುತ್ತದೆ. ಅದನ್ನು ನೋಡುವಾಗ ನಾವು ಅದೇ ರೀತಿಯಲ್ಲಿ ಗಮನಿಸಬೇಕಾದ ಅಗತ್ಯವೂ ಇದೆ. ಯಾವುದೋ ಒಂದು ಕೌರ್ಯವೂ ನಮಗೆ ದುರಂತದ ಭಾವನೆಯನ್ನು ಒಡಮೂಡಿಸುವ ಸಾಧ್ಯತೆಯೂ ಇರುತ್ತದೆ. ಒಂದರ ಕೌರ್ಯವು ಮತ್ತೊಂದರ ದುರಂತಕ್ಕೆ ಕಾರಣವಾಗಲೂಬಹುದು. ದುರಂತವೆನ್ನುವುದು ಬಹಳ ಮುಖ್ಯವಾಗಿ ಒಂದು ವಿವರಣೆ ಮಾತ್ರ. ಅರಿಸ್ಟಾಟಲನ ಪ್ರಕಾರ ಖಳನಾಯಕ ಸಾಯುವುದು ದುರಂತವೂ ಅಲ್ಲ.

ದುರಂತ ಎನ್ನುವುದು ನಮ್ಮ ಭಾವನೆಗೆ ಸಂಬಂಧಪಟ್ಟಿದ್ದೂ ಹೌದು. ಅದು ಕೇವಲ ಹಾಸ್ಯವಲ್ಲ. ಅದರಲ್ಲಿ ನಗು ಸಾಧ್ಯವಿಲ್ಲ. ಅದರ ಸ್ವರೂಪವೇ ಬೇರೆ. ದುರಂತವನ್ನು ನೋಡುವಾಗ ನಾವು ಒಂದೇ ಅರ್ಥದಲ್ಲಿ ನೋಡಬೇಕು ಎನ್ನುವುದೂ ಇದರ ಅರ್ಥವಲ್ಲ. ದುರಂತವೆನ್ನುವುದನ್ನು ನೋಡುವಾಗ ಅದರ ಅರ್ಥವನ್ನು ನಾವು ವಿಸ್ತರಿಸಲೂಬಹುದು. ಯಾವುದೇ ದುರಂತವು ಆಶಾವಾದದಲ್ಲಿ ಮುಗಿಯುವುದೂ ಇಲ್ಲ. ಅದರ ಸಾಮಾಜಿಕ ಆಯಾಮವೂ ಭಿನ್ನವಾಗಿದೆ. ಅದರಲ್ಲಿ ಬರುವ ಲೋಕದೃಷ್ಟಿಯೂ ಬೇರೆ. ಅದರ ತಾತ್ವಿಕ ಕಾಳಜಿಯೂ ವಿಶಿಷ್ಟ. ಅದು ನಾಟಕದಲ್ಲಿ ಬರುವಾಗ ಅದನ್ನು ಕೇವಲ ಒಂದು ಕ್ರಿಯೆ ಎಂದು ಮಾತ್ರವೇ ಭಾವಿಸಬೇಕಾದ ಅಗತ್ಯವೂ ಇಲ್ಲ. ನಾಟಕದ ನಾಯಕನಿಗೆ ಇರುವ ಅರ್ಥವು ಬೇರೆಯಾಗುತ್ತದೆ. ಅದನ್ನು ನಾವು ಒಂದೇ ಕೋನದಲ್ಲಿ ನೋಡುವುದು ಅಸಾಧ್ಯ. ಯಾವುದನ್ನು ನಾವು ಆಧುನಿಕ ಅಸ್ತಿತ್ವವಾದ ಎಂದು ಹೇಳುತ್ತೇವೆಯೋ ಅದರ ಸ್ವರೂಪದಲ್ಲಿ ಮತ್ತು ಗುಣದಲ್ಲಿಯೇ ದುರಂತದ ಲಕ್ಷಣವು ಇದೆ. ಮಾರ್ಕ್ಸ್‌ವಾದ ಮತ್ತು ಫ್ರಾಯ್ಡ್ ವಾದ ಎರಡೂ ಇದನ್ನೇ ಹೇಳುತ್ತದೆ. ದುರಂತವನ್ನು ನೋಡುವಾಗ ನಾವು ಇದೇ ಅರ್ಥದಲ್ಲಿ ಗ್ರಹಿಸಬೇಕು ಎಂದು ಹೇಳುತ್ತಿಲ್ಲ. ದುರಂತವನ್ನು ನಾಟಕವು ವಿವರಿಸುವ ಕ್ರಮವೇ ಬೇರೆ. ದುರಂತವನ್ನು ನಾವು ನಮ್ಮ ಸಂವೇದನೆಯ ಭಾಗವಾಗಿಯೇ ನೋಡಬೇಕಾದ ಅಗತ್ಯವೂ ಇದೆ. ಯಾಕೆಂದರೆ ಅದನ್ನು ನೋಡುವಾಗ ಅದು ನಮ್ಮ ಸಂವೇದನೆಯನ್ನು ಸ್ಪರ್ಶಿಸುತ್ತದೆ. ಆದರೆ ಆಧುನಿಕ ದುರಂತಕ್ಕೆ ಒಂದು ಕೇಡಿನ ದರ್ಶನವೂ ಇದೆ. ದುರಂತವು ಕೇಡಿನ ಸ್ವರೂಪವನ್ನು ಪಡೆಯುತ್ತದೆ. ಅದರ ಅರ್ಥ ವ್ಯಾಪಾರವೂ ಬೇರೆ. ಅದು ರಾಜಕೀಯ ದರ್ಶನವೂ ಹೌದು. ಅದರಲ್ಲಿ ಬೇರೆ ಬೇರೆ ಸಂಗತಿಯೂ ನಡೆಯುತ್ತದೆ. ಆಧುನಿಕ ಕೇಡು ಮತ್ತು ಅದರ ಸ್ವರೂಪವನ್ನು ನಾವು ನೋಡುವಾಗ ಮತ್ತೊಂದು ಅರ್ಥದಲ್ಲಿಯೂ ನೋಡಬೇಕಾದ ಅಗತ್ಯವೂ ಇದೆ. ಯಾವುದನ್ನು ನಾವು ಕೇಡು ಎಂದು ಹೇಳುತ್ತೇವೆಯೋ ಅದರಲ್ಲಿ ಬರುವ ಅನೇಕ ಸಂಗತಿಗಳನ್ನು ನಾವು ಮರೆಯುವುದು ಅಸಾಧ್ಯವಲ್ಲ. ಜೀವನದಲ್ಲಿ ನಡೆಯುವ ದುರಾದೃಷ್ಟ ಮತ್ತು ಅದರ ಪರಿಣಾಮಗಳೂ ಒಂದು ಅರ್ಥದಲ್ಲಿ ದುರಂತವೇ ಆಗಿದೆ. ಹಸಿವಿನಿಂದ ಸಾಯುವುದು, ಅಣುಬಾಂಬಿನ ದುರಂತ, ಮತ್ತು ಹಸಿವೆ ಹಾಗೂ ಆರ್ಥಿಕ ತಲ್ಲಣಗಳು ಒಂದು ಅರ್ಥದಲ್ಲಿ ದುರಂತವೇ ಆಗಿರುತ್ತದೆ. ಜಗತ್ತಿನ ಆರ್ಥಿಕ ಕುಸಿತ ಮತ್ತು ಅದರ ಪರಿಣಾಮಗಳು ಒಂದು ಅರ್ಥದಲ್ಲಿ ದುರಂತ. ಪ್ರೀತಿಸದೇ ಇರುವ ಹೆಂಡತಿ ಅಥವಾ ಪ್ರೀತಿಸದೇ ಇರುವ ಗಂಡನನ್ನು ಹೊಂದುವುದು ಕೂಡಾ ದುರಂತವೇ ಆಗಿದೆ. ಖಾಸಗಿ ಜೀವನ ಮತ್ತು ಅದರ ನಡೆಯಲ್ಲಿ ಆಗುವ ಅನೇಕ ಸಂಗತಿಗಳನ್ನು ಕೂಡಾ ನಾವು ದುರಂತವೆಂದು ಹೇಳಬೇಕಾಗುತ್ತದೆ. ದುರಂತವೆಂದರೆ ಅದು ದೇಹದ್ದೂ ಹೌದು. ಮತ್ತು ಅದು ಮನಸ್ಸಿನದೂ ಹೌದು.

"1983, ಫೆಬ್ರುವರಿ 18. ಗೌಹಾತಿಯಿಂದ ಕೇವಲ 40 ಕಿಮೀ ದೂರದಲ್ಲಿರುವ

ನೆಲ್ಲಿಯಲ್ಲಿ ನಡೆದ ಜನಾಂಗೀಯ ಹತ್ಯೆಯಲ್ಲಿ ಬಾಂಗ್ಲಾ ಮೂಲದ 2191 ಮುಸ್ಲಿಂ ವಲಸೆಗಾರರನ್ನು ಸಂಘಟಿತವಾಗಿ ಕೊಲ್ಲಲಾಯ್ತು. 16 ಹಳ್ಳಿಗಳಲ್ಲಿದ್ದ ಅವರ ಮನೆಗಳು ಸುಟ್ಟು ಧ್ವಂಸವಾದವು. 370 ಮಕ್ಕಳು ಅನಾಥರಾದರು. 25 ವರ್ಷಗಳ ನಂತರ, ಆ ಘಟನೆಯಲ್ಲಿ ಬದುಕುಳಿದವರು ಒಬ್ಬರಾದ ಮೇಲೊಬ್ಬರಂತೆ ನಮ್ಮೆದುರು ತಮ್ಮ ಅನುಭವ ತೆರೆದಿಡುವಾಗ ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು, ಅಕ್ಯಾಡೆಮಿಕ್ ಜನರು ಎಲ್ಲ ಮೂಕರಾಗಿ ಹೋದರು. ಅವರ ದುಃಖದ ಅಗಾಧತೆ ಇಂದಿಗೂ ಅದು ಜೀವಂತ ಇರುವುದನ್ನು ನೋಡಿ ನಾಚಿಕೆಯಾಯಿತು. ಅವರ ದುಃಖ ಎಷ್ಟು ಹಸಿಹಸಿಯಾಗಿದೆಯೆಂದರೆ 25 ವರ್ಷದ ಕೆಳಗೆ ನಡೆದಿದ್ದಕ್ಕೆ ಅವರು ಇಂದು ಪದ ರೂಪ ಕೊಟ್ಟು ಹೇಳುತ್ತಿದ್ದಾರೆಂದೆನಿಸದೇ, ಇಂದಷ್ಟೆ ನಡೆದ ದುರ್ಘಟನೆಯೊಂದನ್ನು ವರ್ಣಿಸುತ್ತಿರುವಂತೆ ಕಂಡರು.

ಮಚ್ಚುಗತ್ತಿ ಮತ್ತು ಚೂರಿಯಿಂದಾಗಿದ್ದ, ಅರೆಬರೆ ಚಿಕಿತ್ಸೆ ಪಡೆದುಕೊಂಡು ವಿಕಾರವಾಗಿದ್ದ ಗಾಯಗಳು ಅವರಲ್ಲಿ ಹಲವರ ದೇಹವನ್ನು ತಿರುಚಿ ವಿರೂಪಗೊಳಿಸಿದ್ದವು; ಕೆಲವರು ಒಂದು ತಲೆಮಾರಿನಷ್ಟು ಹಿಂದೆ ಆದ ಗಾಯವನ್ನು ತಮ್ಮ ಬಟ್ಟೆಯೆಳೆದು ಮೇಲೆತ್ತಿ ತೋರಿಸುತ್ತಿದ್ದರು. 1983ರ ಹತ್ಯಾಕಾಂಡದಲ್ಲಿ ಬದುಕುಳಿದ ಹೈರ್ಝಾರಾ ಖಾತೂಂ ತನ್ನ ಮುಖದ ಮೇಲೆ ಚೂರಿಯಿಂದಾದ ಗಾಯ ತೋರಿಸುತ್ತ ಖಾಲಿಯಾದ ತನ್ನ ಮಡಿಲು ಮುಟ್ಟಿಕೊಳ್ಳುತ್ತ, 'ನನ್ನ ಮಗುವನ್ನು ಇಲ್ಲಿ ಮಲಗಿಸಿಕೊಂಡಿದ್ದೆ' ಎಂದು ಮೇಲುದನಿಯಲ್ಲಿ ಶುರುಮಾಡಿ 'ದೇಹದ ನಡುವಿಗೇ ಚೂರಿ ಹಾಕಿ ಅದನ್ನು ಅಡ್ಡಡ್ಡ ಸೀಳಿಬಿಟ್ಟರು' ಎಂದಳು. ಮತ್ತೊಬ್ಬ ಅಲೆಕ್ ಜಾನ್ ಬೀವಿ ಸ್ವಲ್ಪ ಶಾಂತವಾಗಿದ್ದಳು. ಅವಳ ದೇಹವನ್ನು ತಿರುಚಲಾಗಿತ್ತು. ಅವಳು ಮಾನಸಿಕ ಸಿಮಿತ ಕಳೆದುಕೊಂಡಿದ್ದಳು. ಅವಳ ಕುಟುಂಬದ ಹನ್ನೊಂದು ಜನರನ್ನು ಹತ್ಯೆ ಗೈಯಲಾಗಿತ್ತು. ಸನ್ನೆಯಲ್ಲೇ ಆಕೆ ಅವರನ್ನು ಹೇಗೆ ಹತ್ಯೆ ಗೈಯಲಾಯ್ತು, ಜನ ಮುತ್ತಿಗೆ ಹಾಕಿದಾಗ ಅವಳು ಹೇಗೆ ಅಡಗಿ ಕುಳಿತಳು, ಅವಳನ್ನು ಹುಡುಕಿ ಪತ್ತೆಹಚ್ಚಿ ಹೇಗೆ ಇರಿಯಲಾಯ್ತು, ಆದರೂ ಅವಳು ಹೇಗೆ ಬದುಕಿಕೊಂಡಳು ಎಂದೆಲ್ಲ ಅಭಿನಯಿಸಿ ತೋರಿಸಿದಳು. 'ನನಗೆ ಈ ಜಗತ್ತಿನಲ್ಲಿ ಯಾರೂ ಇಲ್ಲ' ಎಂದು ಕೊನೆಯಲ್ಲಿ ತಣ್ಣಗೆ ಹೇಳಿದಳು. (ಜಿ.ರಾಜಶೇಖರ, ಕೆ.ಫಣಿರಾಜ, ಹರ್ಷ ಮಂದರ್, ಅಸಮಾನತೆಯ ಬಣ್ಣಗಳು, 2013, ಪುಟ. 61.'ಅಹರ್ನಿಶಿ' ಪ್ರಕಾಶನ, ಶಿವಮೊಗ್ಗ) ಇದೇ ಸಾಮಾಜಿಕ ದುರಂತ.

ಮಾನಸಿಕ ದುರಂತವನ್ನು ನಾವು ದುರಂತವೆನ್ನದೇ ಹೋಗಬಹುದು. ಆದರೆ ಅದು ಆಗಿರುತ್ತದೆ. ನಾವು ಈಗ ನೋಡಬೇಕಾದ ಮತ್ತೊಂದು ಅಂಶವೂ ಇದೆ. ಯಾವುದೇ ದುರಂತವು ವಿನಾಕಾರಣ ಆಗುವುದೂ ಇಲ್ಲ. ಅದರ ಅರ್ಥವು ಬೇರೆ. ಎಲ್ಲಿ ದುರಂತದ ನಿಜವಾದ ತುರಿಯಾವಸ್ಥೆ ಎನ್ನುವುದು ಇದೆಯೋ ಅದರ ಅರ್ಥ ಮತ್ತು ಅದರ ಸ್ವರೂಪವನ್ನು ಯಾವ ವ್ಯಕ್ತಿಯು ಅನುಭವಿಸುತ್ತಾನೆಯೋ ಅವನ

ವ್ಯಕ್ತಿತ್ವದ ಹಿನ್ನೆಲೆಯಲ್ಲಿಯೇ ಗುರುತಿಸಬೇಕಾಗುತ್ತದೆ. ಒಮ್ಮೊಮ್ಮೆ ದುರಂತವು ಜೀವನದಲ್ಲಿ ತಕ್ಷಣವೇ ಆಗಬಹುದು. ಅದನ್ನು ನಾವು ಅನ್ಯವೆಂದು ಹೇಳಲು ಬರುವುದೂ ಇಲ್ಲ. ಈ ಕಾರಣಕ್ಕೆ ಯಾವಾಗಲೂ ದುರಂತವೆಂದರೆ ಅದು ಹಸಿಯಾದ ಒಂದು ಭಾವನೆ ಎಂದು ಯೋಚಿಸಬೇಕಾದ ಅಗತ್ಯವಿಲ್ಲ. ದುರಂತ ಮತ್ತು ಅದರ ಹಿಂದೆ ಇರುವ ಅನೇಕ ಸ್ಥಿತಿಗಳು ನಮ್ಮ ಕಣ್ಣಿಗೆ ಕಾಣಿಸದೇ ಹೋಗಬಹುದು. ದುರಂತವೆಂದರೆ ಅದನ್ನು ಆಯಾ ಸನ್ನಿವೇಶಕ್ಕೆ ಅಥವಾ ಆಯಾ ಸಂದರ್ಭಕ್ಕೆ ಅನುಸಾರವಾಗಿಯೇ ನೋಡಬೇಕಾಗುತ್ತದೆ. ಯಾವುದೇ ಒಂದು ದುರಂತವನ್ನು ನೋಡುವಾಗ ಅದರ ಹಿಂದೆ ಯಾವ ಅಂಶವಿದೆ ಮತ್ತು ಯಾಕೆ ಆ ದುರಂತವು ನಡೆದಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ನಾಟಕದಲ್ಲಿ ಅದು ಪ್ರಾರಂಭವಾಗುವ ಮೊದಲೇ ಆಡನ್ನು ಬಲಿಕೊಡಬೇಕಾಗುತ್ತದೆ. ಅದು ಸಾಂಕೇತಿಕವೂ ಆಗಬಹುದು. ಆದರೆ ಬಲಿಯೇ ದುರಂತದ ಬಹಳ ಮುಖ್ಯವಾದ ಸಂಗತಿ. ಅದು ಒಂದು ವಿಶಿಷ್ಟ ಅರ್ಥವನ್ನು ಪಡೆಯುತ್ತದೆ.

ದುರಂತವೆಂದರೆ ಅದು ನೈತಿಕ ಸಂಗತಿಯೂ ಹೌದು. ಯಾವಾಗ ಅದು ನಡೆಯುತ್ತದೆ ಮತ್ತು ಅದು ಯಾಕಾಗಿ ನಡೆಯುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಸಂತೋಷದಿಂದ ಪ್ರಾರಂಭವಾಗುವ ಯಾವುದೇ ಘಟನೆಯನ್ನು ನೋಡಿದರೆ ಅದನ್ನು ನಾವು ಸುಖಾಂತವೆಂದೇ ಪರಿಗಣಿಸುತ್ತೇವೆ. ಆದರೆ ಸಂತೋಷದಿಂದ ಪ್ರಾರಂಭವಾದುದು ಅನಂತರದಲ್ಲಿ ದುಃಖದಲ್ಲಿ ಕೊನೆಗೊಂಡರೆ ಅದನ್ನು ನಾವು ದುರಂತವೆಂದು ಹೇಳುತ್ತೇವೆ. ದುರಂತ ಮತ್ತು ಅದರ ಸಮಸ್ಯೆಯು ಸಂಕೀರ್ಣ. ದೇಹ ಮತ್ತು ಅದರ ದುರಂತವನ್ನು ನಾವು ಒಂದು ಬಗೆಯಲ್ಲಿ ನೋಡಬಹುದು. ಅದು ನಮ್ಮ ಕಣ್ಣಿಗೆ ಕಾಣಿಸುತ್ತದೆ. ಆದರೆ ಮನಸ್ಸು ಅನುಭವಿಸುವ ದುರಂತ ಮತ್ತು ಅದರ ಸ್ವರೂಪವು ಬೇರೆ ಬಗೆಯದೂ ಹೌದು. ಅದರಲ್ಲಿ ಭಿನ್ನತೆಯು ಇದೆ. ಅದು ಸಮಸ್ಯೆ. ನಮ್ಮ ಜೀವನದ ಕಷ್ಟಗಳು ಸಾಹಿತ್ಯಕ್ಕೆ ಬರುವಾಗ ಅದರ ಸ್ವರೂಪವು ಬೇರೆಯಾಗುವುದರಿಂದ ಅದನ್ನು ನಾವು ದುರಂತವೆಂದು ಹೇಳುತ್ತೇವೆ. ಖಾಸಗಿ ಜೀವನದಲ್ಲಿ ಬರುವ ಅನೇಕ ಸಂಗತಿಗಳಿಗೆ ದುರಂತ ನಾಟಕದ ರೀತಿಯ ಸ್ವರೂಪವು ಇರುವುದು ಇಲ್ಲ. ಅದರ ಸ್ವರೂಪವನ್ನು ನಾವು ಸ್ವರೂಪವಿಲ್ಲದ ಸಂಗತಿಯೆಂದು ಹೇಳಬೇಕಾಗುತ್ತದೆ. ಕಷ್ಟಗಳು ಬಂದಾಗ ನಾವು ಖಿನ್ನರಾಗುತ್ತೇವೆ. ಹಾಗೆ ಖಿನ್ನರಾದಾಗ ಅದನ್ನು ದುರಂತವೆಂದು ಹೇಳುವುದು ಇಲ್ಲ. ಅದರ ಕಾರಣವೇ ಬೇರೆ ಎಂದು ಭಾವಿಸಿಕೊಳ್ಳುತ್ತೇವೆ. ಖಿನ್ನರಾದರೆ ನಮ್ಮ ಮನೋಸ್ಥಿತಿಯು ಭಿನ್ನ. ಅದು ರೂಪಿಸಿಕೊಳ್ಳುವ ನಮ್ಮ ವ್ಯಕ್ತಿತ್ವವು ಬೇರೆ. ಖಿನ್ನತೆಯು ಮನೋವ್ಯಾಧಿಯೂ ಇರಬಹುದು. ಆದರೆ ಅದನ್ನು ನಾವು ಸಾಹಿತ್ಯದಲ್ಲಿ ಹೇಗೆ ವ್ಯಾಖ್ಯಾನಿಸಿದ್ದೇವೆ ಎನ್ನುವುದೂ ಬಹಳ ದೊಡ್ಡ ಪ್ರಶ್ನೆ. ಅದು ನಮ್ಮನ್ನು ಹಿಂಡುತ್ತದೆ. ಮತ್ತು ಅದರಿಂದಲೇ ನಾವು ನಿರಾಶೆ, ದುಃಖ ಮತ್ತು ಏಕಾಂತವನ್ನು ಬಯಸುತ್ತೇವೆ.

ಹೀಗೆ ಆಗಲು ಕಾರಣವು ಯಾವುದು ಮತ್ತು ನಾವು ಖಿನ್ನರಾದರೆ ಅದರ ಸ್ವರೂಪವು ಯಾವ ಬಗೆಯದು ಹಾಗೂ ಅದರ ಪರಿಣಾಮವು ಯಾವುದು ಮುಂತಾದ ಪ್ರಶ್ನೆಗಳು ನಮ್ಮ ಮುಂದೆ ಇದೆ. ಖಿನ್ನರಾದರೆ ತುಂಬಾ ನೀರಸವಾಗಿಯೂ ಇರುತ್ತೇವೆ. ಇದು ಒಂದು ಬಗೆಯ ದುರಂತ. ಆದರೆ ದುರಂತವನ್ನು ನೋಡುವುದು ಅದನ್ನು ಅನುಭವಿಸುವುದು ಬೇರೆ. ಆದರೆ ಅದನ್ನು ಗ್ರಹಿಸುವಾಗ ಅದರ ಅದರ ಅನುಭವ ಆಗಿರಲೇಬೇಕಾಗಿಯೂ ಇಲ್ಲ. ದುರಂತವನ್ನು ನೋಡುವುದು ಅದನ್ನು ಸವಿಯುವುದು ಮಾತ್ರವೇ ಎಂದು ಭಾವಿಸಬೇಕಾಗಿಯೂ ಇಲ್ಲ. ಅದರ ಅರ್ಥಗಳು ಬೇರೆಯಾಗುತ್ತವೆ. ಅದರ ಸ್ವರೂಪವನ್ನೂ ಕೂಡಾ ಭಿನ್ನವಾಗಿ ನೋಡುವ ಅಗತ್ಯವೂ ಇದೆ. ಜೀವನ ಮತ್ತು ಅದರ ಅನೇಕ ಸಂದರ್ಭಗಳು ನಮ್ಮನ್ನು ತಲ್ಲಣಗೊಳಿಸುತ್ತದೆ. ಅದರ ಪರಿಣಾಮವೂ ಒಂದೇ ರೀತಿಯಲ್ಲಿಯೂ ಇರುವುದಿಲ್ಲ. ಅದರ ಸ್ವರೂಪಗಳು ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದರ ಪ್ರಮಾಣಗಳೂ ಬೇರೆಯಾಗಿಯೂ ಇರುತ್ತದೆ. ರೋಗಗಳು, ಬಡತನ, ಅವಮಾನ, ನಿರ್ಲಕ್ಷ್ಯ, ಹಸಿವೆ ಮುಂತಾದವೂ ನಮ್ಮನ್ನು ತಲ್ಲಣಗೊಳಿಸುತ್ತದೆ. ನಮಗೆ ದುರಂತದ ಅನುಭವವನ್ನು ಕೊಡುತ್ತದೆ. ಅದನ್ನು ನಾವು ಒಂದೇ ರೀತಿಯಲ್ಲಿ ಸ್ವೀಕರಿಸಿಕೊಳ್ಳುವುದು ಇಲ್ಲ. ಅದರ ಸ್ವರೂಪಗಳಿಗೆ ಅನುಸಾರವಾಗಿಯೇ ಅದರ ಅನುಭವ ಮತ್ತು ಅದರ ಪರಿಣಾಮವನ್ನು ನಾವು ಸ್ವೀಕರಿಸುತ್ತೇವೆ.

ಪಾಪ ಮತ್ತು ಪುಣ್ಯವನ್ನು ನೋಡಿದರೆ ಯಾವುದು ಪುಣ್ಯವೆನ್ನುವ ಪ್ರಶ್ನೆಯು ಬರುತ್ತದೆ. ಪಾಪ ಮತ್ತು ಅದರ ಪಶ್ಚಾತ್ತಾಪವನ್ನು ನಾವು ದುರಂತವೆಂದೇ ಪರಿಗಣಿಸುತ್ತೇವೆ. ಪಾಪವನ್ನು ದುರಂತ ಮತ್ತು ಅದರ ಪರಿಹಾರವು ಬಹಳ ಮುಖ್ಯವೆಂದು ಹೇಳುತ್ತೇವೆ. ಈಡಿಪಸ್ ನಾಟಕದಲ್ಲಿ ಅವನು ತಾನು ಮಾಡಿದ ಪಾಪಕ್ಕೆ ತನ್ನನ್ನು ತಾನೇ ಶಿಕ್ಷಿಸಿಕೊಳ್ಳುತ್ತಾನೆ. ಆದರೆ ಪುಣ್ಯವೆನ್ನುವುದು ಹಾಗೆ ಇಲ್ಲ. ಅದನ್ನು ನಾವು ಸಂತೋಷ ಮತ್ತು ಸುಖವೆಂದು ಹೇಳಿಕೊಳ್ಳುವುದು ಅಸಾಧ್ಯ. ಸುಖವನ್ನು ನೋಡಿದರೆ ಅದರ ಸ್ವರೂಪವು ದುಃಖಕ್ಕಿಂತ ಭಿನ್ನವಾಗಿದೆ. ಆದರೆ ಯಾವುದನ್ನು ಪಾಪವೆಂದು ಹೇಳುತ್ತೇವೆಯೋ ಅದರ ಪರಿಹಾರವು ಸಾಧ್ಯವೆಂದು; ಅದರ ಪರಿಹಾರಕ್ಕೆ ಪಶ್ಚಾತ್ತಾಪವೂ ಒಂದು ಸಾಧ್ಯತೆಯೆಂದು ಕ್ರಿಶ್ಚಿಯಾನಿಟಿಯು ಹೇಳುತ್ತದೆ. ಇಲ್ಲಿ ಬರುವ ಮುಖ್ಯವಾದ ಪ್ರಶ್ನೆಯೆಂದರೆ ಬಡತನವನ್ನು ನೋಡಿದರೆ ಅದರ ಪರಿಹಾರವು ಇರುವುದೇ ಆರ್ಥಿಕತೆಯ ನೋಟದಲ್ಲಿ. ಆರ್ಥಿಕತೆ ಮತ್ತು ಅದರ ಸರಿಯಾದ ನೀತಿಯು ಇಲ್ಲದೇ ಹೋದಲ್ಲಿ ಯಾವುದೇ ಪರಿಹಾರವು ಅಸಾಧ್ಯ. ಆದ್ದರಿಂದ ಬಡತನವೆನ್ನುವುದನ್ನು ನೋಡಿದರೆ ಅದರ ನಿವಾರಣೆಯನ್ನು ನಾವು ಬರೀ ನಿವೇದನೆಯಿಂದ ಮಾಡಲು ಸಾಧ್ಯವೇ ಇಲ್ಲ. ನಮಗೆ ಬೇಕಾದುದು ನಿಜವಾಗಿಯೂ ಸರಿಯಾದ ಒಂದು ನಿಲುವು ಮಾತ್ರವೇ. ಪಾಪ ಮತ್ತು ಅದರ ನಿವೇದನೆಯು ಕ್ರಿಶ್ಚಿಯಾನಿಟಿಯಲ್ಲಿ ಸಾಧ್ಯ. ಪಾಪ ಮತ್ತು ಬಡತನಕ್ಕೆ ಪರಸ್ಪರ ನಂಟನ್ನು

ಕಲ್ಪಿಸಲಾಗಿದೆ. ಹಾಗಾಗಿ ಬಡವರನ್ನು ಪಾಪಿಗಳು ಎಂದು ಹೇಳಿ ಅವರು ಪ್ರತಿಭಟಿಸಲಾಗದಂತೆ ನೋಡಿಕೊಳ್ಳಲಾಗಿದೆ. ಇದನ್ನು ನಾವು ಸಾಮಾಜಿಕ ಜೀವನದ ಒಂದು ವ್ಯಂಗ್ಯವೆಂದು ಹೇಳಬಹುದು. ಬಡತನವು ನಿಜವಾದ ಅರ್ಥದಲ್ಲಿ ದುರಂತವಲ್ಲ. ಅದನ್ನು ದುರಂತವಾಗುವಂತೆ ಮಾಡಲಾಗಿದೆ. ಇರಲಿ. ಅದು ಬೇರೆ ಪ್ರಶ್ನೆ. ದುರಂತ ನಾಟಕವು ಬರೀ ಜೀವನ ಮತ್ತು ಅದರ ಸಂಕೀರ್ಣತೆಯನ್ನು ಹೇಳುತ್ತದೆ ಎಂದು ಭಾವಿಸಿಕೊಳ್ಳಬಾರದು. ಅದರಲ್ಲಿ ಅನೇಕ ಸಮಸ್ಯೆಗಳು ಸೇರಿಕೊಂಡಿವೆ. ದುರಂತ ನಾಟಕವು ನಮ್ಮ ಜೀವನವನ್ನು ಮತ್ತೊಂದು ರೀತಿಯಲ್ಲಿ ನೋಡಲು ಅವಕಾಶವನ್ನು ಕಲ್ಪಿಸುತ್ತದೆ. ರಂಗದಲ್ಲಿ ನಡೆಯುವ ದುರಂತದ ಅನುಭವವನ್ನು ನಾವು ನೋಡುವಾಗ ಅದರ ಅರ್ಥವನ್ನು ಮತ್ತು ವಿವರವಾಗಿ ನೋಡಬೇಕಾಗುತ್ತದೆ. ಅದು ಜೀವನ ಮತ್ತು ಅದರ ಅಸಾಂಗತ್ಯವನ್ನು ಹೇಳುತ್ತದೆ. ಅದರಲ್ಲೂ ಆ ನಾಟಕದ ನಾಯಕನು ದುರಂತವನ್ನು ಸಹಜವಾಗಿ ಅನುಭವಿಸುವುದು ಇಲ್ಲ. ಅವನ ದುರಂತಕ್ಕೆ ಪರಿಸರವೂ ಕಾರಣವಾಗುತ್ತದೆ. ಅವನ ಅನುಭವವನ್ನು ನಾವು ಹೀಗೆಯೂ ನೋಡಬಹುದು: ದುರಂತವೆನ್ನುವುದು ಅನುಭವವಾದರೂ ಅದು ರಂಗದ ಮೇಲೆ ವ್ಯಕ್ತವಾಗುವುದು ನಾಯಕನ ಕ್ರಿಯೆ ಮತ್ತು ನಾಟಕದ ವಸ್ತುವಿನಿಂದ. ಅದು ವಿಶ್ವಾತ್ಮಕವೂ ಹೌದು. ಈ ದೃಷ್ಟಿಯಿಂದಲೇ ಅದು ನೀಡುವ ಅನುಭವವು ಬೇರೆ ರೀತಿಯದು ಆಗುತ್ತದೆ. ಜೀವನದಲ್ಲಿ ಆಗುವ ದುರಂತ ಮತ್ತು ನಾಟಕದ ದುರಂತವು ಬೇರೆಯಾಗಿದೆ. ಜೀವನದ ದುರಂತವನ್ನು ನೋಡಿದರೆ ಮನಸ್ಸಿನಲ್ಲಿ ತಲ್ಲಣವಾಗುತ್ತದೆ. ಜೀವನ ಮತ್ತು ನಾಟಕದ ನಡುವೆ ವ್ಯತ್ಯಾಸವಂತೂ ಇದ್ದೇ ಇದೆ. ನಾಟಕದ ದುರಂತವು ಒಂದು ಸೌಂದರ್ಯದ ಅನುಭವವೂ ಹೌದು. ಆದರೆ ಜೀವನದ ದುರಂತವನ್ನು ನಾವು ಆ ರೀತಿಯಲ್ಲಿ ಹೇಳಲು ಬರುವುದಿಲ್ಲ. ಅದರಲ್ಲಿ ವ್ಯತ್ಯಾಸವಿದೆ. ದುರಂತ ನಾಟಕದಲ್ಲಿ ತಾತ್ವಿಕತೆಯು ಇರುತ್ತದೆ. ಆದರೆ ನಿಜವಾಗಿಯೂ ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದರ ಪರಿಣಾಮವು ನಮ್ಮ ಮನಸ್ಸಿನ ಮೇಲೆ ಆಗುತ್ತದೆ. ಮೇಲುನೋಟಕ್ಕೆ ದುರಂತವೆನ್ನುವುದು ಮುಖ್ಯವಾಗಿ ತತ್ವಜ್ಞಾನವನ್ನು ಕೇಂದ್ರವಾಗಿ ಇರಿಸಿಕೊಂಡಿದೆ. ಈ ಅರ್ಥದಲ್ಲಿ ದುರಂತ ನಾಟಕವು ನಮ್ಮ ಭಾವನೆಗಳನ್ನು ಸೂಚಿಸುತ್ತದೆ. ಅದು ವಾಸ್ತವವನ್ನು ಬಿಟ್ಟು ಬಿಡುತ್ತದೆ ಎಂದು ಅರ್ಥವಲ್ಲ. ಆದರೆ ಯಾವಾಗ ಇದು ಅನುಕರಣೆಯಾಗುತ್ತದೆಯೋ ಆಗ ಅದರ ಸ್ವರೂಪವನ್ನು ನಾವು ರಂಗದ ಹಿನ್ನೆಲೆಯಿಂದಲೇ ನೋಡಬೇಕಾಗುತ್ತದೆ. ದುರಂತ ನಾಟಕವು ಆಶಾವಾದದಲ್ಲಿ ಮುಕ್ತಾಯವಾದರೆ ಅದು ದುರಂತವೆಂದು ಅನಿಸುವುದೇ ಇಲ್ಲ. ದುರಂತ ಮತ್ತು ಅದರ ವಿನ್ಯಾಸಗಳೇ ಬೇರೆಯಾಗುತ್ತದೆ. ಅದರ ನಿರೂಪಣೆಯು ಭಿನ್ನ ಮಾತ್ರವೇ ಅಲ್ಲ, ಅದರ ನಡೆಯು ರಂಗದಲ್ಲಿ ಭಿನ್ನವಾಗಿದೆ. ಅದು ನಿರೂಪಿಸುವ ಸಾಮಾಜಿಕ ನಿಯಮವೂ ಭಿನ್ನವಾಗಿದೆ. ದುರಂತದ ಸಾಮಾಜಿಕ ಕಥನವನ್ನು ನಾವು ಇದೇ ರೀತಿಯೆಂದು ಹೇಳುವುದು ಇಲ್ಲಿಯ ಉದ್ದೇಶವಲ್ಲ. ದುರಂತ ಮತ್ತು ಅದರ ಹಿನ್ನೆಲೆಯನ್ನು ನೋಡುವಾಗ ಅದರ ಲೋಕದೃಷ್ಟಿಯನ್ನು ಕೂಡಾ ಗಂಭೀರವಾಗಿ

ಪರಿಗಣಿಸಬೇಕಾಗುತ್ತದೆ. ಅದರ ನಾಯಕನು ವರ್ತಿಸುವ ಕ್ರಮವು ಬೇರೆ ಭಿನ್ನವಾಗಿದೆ. ಯಾವುದೇ ನಾಟಕಗಳು ಈ ದೃಷ್ಟಿಯಿಂದ ಬೇರೆ ಬೇರೆ ಚಹರೆಗಳನ್ನು ಒಳಗೊಂಡಿರುತ್ತವೆ. ನಾಯಕನಿಗೆ ಜೀವನವನ್ನು ಎದುರಿಸುವುದೇ ಒಂದು ಸಮಸ್ಯೆಯೂ ಆಗುತ್ತದೆ. ಅವನಿಗೆ ಜೀವನವೇ ಒಂದು ಸಮಸ್ಯೆಯೂ ಆಗುತ್ತದೆ. ಆದರೆ ಇದರ ಹಿನ್ನೆಲೆಯಲ್ಲಿಯೇ ಅನೇಕ ಅಂಶಗಳು ಇರುತ್ತದೆ. ಅವನ ಜೀವನ ಮತ್ತು ಅವನ ಚಟುವಟಿಕೆಗಳಿಗೆ ವಿಶೇಷವಾದ ಅರ್ಥವೂ ಇರುತ್ತದೆ. ಜೀವನ ಮತ್ತು ಅದರ ಸಾಧ್ಯತೆಗಳೇ ಅವನಿಗೆ ಒಂದು ಸವಾಲೂ ಆಗಿರುತ್ತದೆ. ಹೀಗೆ ಹೇಳುವಾಗ ಅವನ ಸಮಸ್ಯೆಯು ಯಾವ ಕಾರಣಕ್ಕೆ ಆಗುತ್ತದೆ ಎನ್ನುವುದು ಗಮನಾರ್ಹವಾಗಿದೆ. ಆಧುನಿಕ ಅಸ್ತಿತ್ವವಾದದ ಮತ್ತೊಂದು ಆದಿಮ ರೂಪವೇ ದುರಂತ ನಾಯಕ ಜೀವನ ಎನ್ನುವುದು ಫ್ರಾಯ್ಡನ ವಾದವಾಗಿದೆ. ಯಾವುದನ್ನು ನಾವು ಆಧುನಿಕ ಅಸ್ತಿತ್ವವಾದ ಎಂದು ಹೇಳುತ್ತೇವೆಯೋ ಅದು ಕೂಡಾ ಒಂದು ಬಗೆಯ ದುರಂತವೇ ಆಗಿರುತ್ತದೆ ಎಂದು ಮಾರ್ಕ್ಸ್‌ವಾದ ಮತ್ತು ಫ್ರಾಯ್ಡ್‌ವಾದವು ಹೇಳುತ್ತದೆ. ಇಲ್ಲಿ ನಾವು ಮತ್ತೊಂದು ಅಂಶವನ್ನು ನಮ್ಮ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ದುರಂತವನ್ನು ಒಂದು ನಾಟಕ ಮಾಧ್ಯಮವಾಗಿ ನೋಡುವುದೇ ಬೇರೆ. ಅದು ಅನುಭವವನ್ನು ಕೊಡುವುದು ಅದು ಹೇಳುವ ಭಾವನೆಗೆ ಸಂಬಂಧಪಟ್ಟದ್ದೂ ಕೂಡಾ ಹೌದು. ಅದರಲ್ಲಿ ನಿರ್ದಿಷ್ಟವಾದ ಸಂವೇದನೆಯೂ ಇದೆ. ಅದರ ಭಾವನೆಯಲ್ಲಿ ಕೇಡು ಮತ್ತು ಅದರ ಪರಿಣಾಮಗಳ ವಿವರಣೆಯೂ ಇದೆ. ಆಧುನಿಕ ಅಸ್ತಿತ್ವವಾದವು ಕೇಡು ಮತ್ತು ಅದರ ಪರಿಣಾಮಗಳನ್ನು ಹೇಳುತ್ತದೆ. ಆದರೆ ಫ್ರಾಯ್ಡ್ ಅದನ್ನು ಹೇಳಲು ಕಾರಣವೂ ಇದೆ. ದುರಂತ ಮತ್ತು ಅದರ ಹಿಂದೆ ಇರುವ ರಾಜಕಾರಣವನ್ನು ಈ ದೃಷ್ಟಿಯಿಂದ ಗಮನಾರ್ಹ ಸಂಗತಿಯೆಂದು ಪರಿಗಣಿಸಬೇಕಾಗುತ್ತದೆ. ನೀಶೆಯು ದುರಂತವನ್ನು ನೋಡುವುದು ಭಿನ್ನ ಕ್ರಮದಿಂದ. ಅದರಲ್ಲಿ ತತ್ವಜ್ಞಾನದ ಸಂಹಿತೆಯು ಮಾತ್ರವೇ ಇದೆ ಎಂದು ಪರಿಗಣಿಸುವುದು ಸರಿಯಲ್ಲವೆಂದು ಅವನು ಹೇಳುತ್ತಾನೆ. ಅದು ಬರೀ ಐತಿಹ್ಯವೆಂದು ತಿಳಿಯಬಾರದು ಎಂದು ಅವನು ಪ್ರತಿಪಾದಿಸುತ್ತಾನೆ. ದುರಂತವೆಂದರೆ ಅದು ಕೇವಲ ವ್ಯಕ್ತಿಯ ಅವನತಿಯನ್ನು ಮಾತ್ರವೇ ಹೇಳುವುದು ಇಲ್ಲ. ಅದರಲ್ಲಿ ಬೇರೆ ಅಂಶಗಳೂ ಸೇರಿಕೊಂಡಿರುತ್ತವೆ. ಅದು ಸಾಮಾಜಿಕ ನೀತಿಯನ್ನು ಮತ್ತು ಅದರ ಸಮಸ್ಯೆಯನ್ನು ಹೇಳುತ್ತದೆ. ಅದರಲ್ಲಿ ಜೀವನದ ಸಂಕೀರ್ಣವಾದ ಸಮಸ್ಯೆಯೂ ಇದೆ. ಜೀವನವೆಂದರೆ ಅದು ಸುಂದರವಾದದು ಅಲ್ಲ, ಅದರಲ್ಲಿ ನೋವಿದೆ ಮತ್ತು ಜೀವನದ ತಲ್ಲಣಗಳೂ ಇವೆ. ಅದನ್ನು ವ್ಯಕ್ತಿಯು ಹೇಗೆ ಎದುರಿಸುತ್ತಾನೆ ಮತ್ತು ಅದರ ಸ್ವರೂಪವೇನು ಹಾಗೂ ಅದು ಯಾಕೆ ಹಾಗಾಗಿದೆ ಎನ್ನುವ ಮೂಲಭೂತವಾದ ಸಮಸ್ಯೆಯನ್ನು ಅದು ಹೇಳುತ್ತದೆ. ಆದ್ದರಿಂದಲೇ ಅದು ದುರಂತವೆಂದು ಅನಿಸುತ್ತದೆ. ಇಡೀ ಜಗತ್ತಿನ ಅರ್ಥಹೀನತೆಯನ್ನು ಕೂಡಾ ಅದು ಹೇಳುತ್ತದೆ. ಪುನರುಜ್ಜೀವನ ತಾತ್ವಿಕತೆಯನ್ನು ಮಾತ್ರವೇ ಇಟ್ಟುಕೊಂಡು ದುರಂತ

ನಾಟಕವನ್ನು ನಾವು ನೋಡಲು ಬರುವುದು ಇಲ್ಲ. ಅದು ಜೀವನ ಮತ್ತು ಅದರ ಸಾಧ್ಯತೆಯನ್ನು ಹೇಳುತ್ತದೆ. ಅದನ್ನು ಈಗ ನಾವು ವೈಜ್ಞಾನಿಕವಲ್ಲ ಎಂದು ತಳ್ಳಿಹಾಕಬಹುದು. ಆದರೆ ದುರಂತ ನಾಟಕವು ಮತ್ತು ನಿಯಮವನ್ನು ಮೀರುವಿಕೆಯನ್ನು ಹೇಳುತ್ತದೆ. ಅದುವೇ ನಿಜವಾದ ಜೀವನವೂ ಆಗಬಹುದು. ಅದರಲ್ಲಿ ಅನೇಕ ವೈರುಧ್ಯಗಳೂ ಇರಬಹುದು. ಆದರೆ ಯಾವುದೇ ಕಲಾತ್ಮಕ ತಾತ್ವಿಕತೆಗೆ ಅದರದೇ ಆದ ಪ್ರಣಾಳಿಕೆಯಂತೂ ಇದ್ದೇ ಇದೆ. ಅದನ್ನು ಮರೆಯಬಾರದು. ಅದೃಷ್ಟ, ನಂಬಿಕೆ, ಸ್ವಾತಂತ್ರ್ಯ ಮತ್ತು ಅದರ ಪರಿಣಾಮ, ಸನ್ನಿವೇಶ, ಒಳನೋಟ ಕುರುಡುತನ, ಚರಿತ್ರೆ ಮತ್ತು ಅದರ ಪರಿಣಾಮಗಳನ್ನು ದುರಂತ ನಾಟಕವು ಹೇಳುತ್ತದೆ. ಅದೇ ಕಾರಣದಿಂದ ಅದು ವಿಶ್ವಾತ್ಮಕವೂ ಆಗುತ್ತದೆ. ಚರಿತ್ರೆ ಅದರ ಅರ್ಥವಂತಿಕೆಯನ್ನು ನಾವು ಪ್ರಜ್ಞಾಪೂರ್ವಕವಾಗಿಯೇ ಗಮನಿಸಬೇಕಾಗುತ್ತದೆ. ಅದು ಅನಿವಾರ್ಯವೂ ಕೂಡಾ. ಜೀವನ ಅದರ ಸಮಸ್ಯೆಗಳನ್ನು ನಾವು ನೋಡುವಾಗ ಯಾವ ರೀತಿಯಲ್ಲಿ ನೋಡಬೇಕು ಮತ್ತು ಯಾವುದನ್ನು ಹೇಳುತ್ತದೆ ಎನ್ನುವುದೂ ಬಹಳ ಮುಖ್ಯವಾದ ಸಂಗತಿಯೇ ಆಗಿದೆ. ಆದರೆ ನಮಗೆ ಇರುವ ಸಮಸ್ಯೆಗಳನ್ನು ನಾವು ಏಕಮುಖವಾಗಿ ನೋಡಬಾರದು ಎನ್ನುವುದನ್ನು ದುರಂತ ನಾಟಕವು ಹೇಳುತ್ತದೆ. ಅದರ ಅಗತ್ಯವೂ ಅದೇ ಆಗಿತ್ತು. ವಾಸ್ತವವಾಗಿ ಯಾವಾಗಲೂ ನಾವು ಅನೇಕ ವಿಷಯಗಳನ್ನು ಗ್ರಹಿಸಬೇಕು ಎನ್ನುವುದನ್ನು ದುರಂತ ನಾಟಕವು ತಿಳಿಸುತ್ತದೆ. ಆದ್ದರಿಂದಲೇ ರಂಗಭೂಮಿಯ ಮೇಲೆ ದುರಂತ ನಾಟಕದ ಪ್ರಭಾವವು ಹೆಚ್ಚಿದೆ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದನ್ನು ನೋಡುವಾಗ ಅದರ ಮಿತಿಗಳನ್ನೂ ನಾವು ಅರ್ಥ ಮಾಡಿಕೊಳ್ಳಬೇಕು. ಆದರೆ ಯಾವಾಗ ಅದು ಸಾಧ್ಯವಾಗುತ್ತದೆ ಎನ್ನುವುದೂ ಬಹಳ ಮುಖ್ಯ. ದುರಂತ ನಾಟಕವು ಒಂದು ಹಂತದಲ್ಲಿ ನೈತಿಕತೆಯನ್ನು ಮಾತ್ರವೇ ಆಧಾರವಾಗಿ ಇರಿಸಿಕೊಂಡಿತು. ಆದರೆ ಅದರಿಂದ ಅದರ ಸ್ವರೂಪವೂ ಭಿನ್ನವಾಯಿತು. ಹದಿನೈದು ಮತ್ತು ಹದಿನಾರನೆಯ ಶತಮಾನದಲ್ಲಿ ಜಮೀನುದಾರಿ ಪದ್ಧತಿಯ ಮೌಲ್ಯ ಮತ್ತು ಮಧ್ಯಯುಗೀನ ಕಾಲದ ನೀತಿಶಾಸ್ತ್ರವನ್ನು ಇದು ವಿರೋಧಿಸಿತು. ನೀತಿಯೆನ್ನುವುದು ಒಂದ ಸಂಕೀರ್ಣವಾದ ಪ್ರಶ್ನೆಯೂ ಹೌದು. ಅದನ್ನು ನಾವು ಹೇಗೆ ನೋಡಬೇಕು ಎಂದರೆ ವಸ್ತುನಿಷ್ಠವಾಗಿಯೇ ಅಥವಾ ಬೇರೆ ರೀತಿಯೇ ಎನ್ನುವುದು ಬಹಳ ದೊಡ್ಡ ಸಮಸ್ಯೆ. ನೈತಿಕತೆಯನ್ನು ನೋಡುವಾಗ ಅದರ ಸಾಧ್ಯತೆಯನ್ನು ಬೇಡವೇ ಬೇಡವೆಂದು ಹೇಳಲು ಬರುವುದು ಇಲ್ಲ. ನೀತಿ ಮತ್ತು ಅದರ ಸಾಧ್ಯತೆಗಳನ್ನು ನೋಡುವಾಗ ನಮಗೆ ಅವಶ್ಯಕವಾಗುವುದು ಮತ್ತೊಂದು ಅಂಶವಾಗಿದೆ. ನೀತಿಯು ನಿಜವಾಗಿಯೂ ಏನನ್ನು ಮಾಡುತ್ತದೆ ಎನ್ನುವುದೇ ಬಹಳ ಮುಖ್ಯ. ನೀತಿಯನ್ನು ಅನೇಕರು ಯಾವುದೇ ಒಂದು ಮಾನದಂಡವಿಲ್ಲದೆ ಎಲ್ಲವನ್ನು ಸಾಮಾಜಿಕ ಅಗತ್ಯವೆಂದು ಹೇಳುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಅದನ್ನು ಮತ್ತೆ ಮತ್ತೆ ಬದಲಿಸಲಾಗುತ್ತದೆ. ಮೇಲು ನೋಟಕ್ಕೆ ಅದನ್ನು ಒಂದು ವಿವರಣೆ ಎಂದು ಮಾತ್ರವೇ ಭಾವಿಸಿಕೊಳ್ಳುತ್ತಾರೆ. ನೀತಿ ಮತ್ತು ಅನೀತಿಯನ್ನು ಕೇವಲ

ಒಂದು ಚೌಕಟ್ಟಿನಲ್ಲಿ ಇಟ್ಟುಕೊಂಡು ನೋಡುವುದು ಸಾಧುವಾದ ವಿಷಯವೂ ಅಲ್ಲ. ಅದರ ಸ್ವರೂಪಗಳನ್ನೂ ನಿರ್ದಿಷ್ಟವಾದ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ನೀತಿ ಮತ್ತು ಅದರ ಪರಿಣಾಮಗಳು ಸಣ್ಣವು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಅದರ ಪರಿಣಾಮವು ಸಮಾಜದ ಮೇಲೆ ಗಾಢವಾದುದೂ ಹೌದು. ಅದನ್ನು ನಾವು ಮರೆಯಬಾರದು. ನೀತಿ ಕೆಲವು ನಿಯಮಾವಳಿಯನ್ನು ಹೇರುತ್ತದೆ. ಮತ್ತು ಅದರಿಂದ ಅದರ ಸ್ವರೂಪವು ಸಂಕೀರ್ಣವೂ ಆಗಿರುತ್ತದೆ. ನೀತಿಯನ್ನು ತಪ್ಪಿದವನು, ವಿಧಿಯನ್ನು ಎದುರು ಹಾಕಿಕೊಂಡವನು ಜೀವನದಲ್ಲಿ ಎದುರಿಸುವ ಸಮಸ್ಯೆಯೇ ದುರಂತಕ್ಕೆ ಕಾರಣವಾಗುತ್ತದೆ. ದುರಂತವು ನಡೆಯಲು ಕಾರಣವೂ ಇದೆ. ಅದರಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುವುದು ಮನುಷ್ಯನ ಹತಾಶೆ ಮತ್ತು ಅವನ ಕುರಿತಾದ ವಿಷಾದ. ವಿಷಾದವು ಹೇಗೆ ವ್ಯಕ್ತಿಯಲ್ಲಿ ಬದಲಾವಣೆಯನ್ನು ತರುತ್ತದೆ ಎನ್ನುವುದೇ ಇದರಲ್ಲಿ ಮುಖ್ಯವಾಗುತ್ತದೆ. ದುರಂತ ನಾಟಕವನ್ನು ಅರಿಸ್ಟಾಟಲ್ ಬಹಳ ಮುಖ್ಯವಾಗಿ ಒಂದು ಕಲಾರೂಪವೆಂದು ಹೇಳುತ್ತಾನೆ. ಆದರೆ ದುರಂತವು ಮೂಲಭೂತವಾಗಿ ನೈತಿಕವಾದ ಕಾರಣಕ್ಕೆ ನಡೆಯುತ್ತದೆ. ಅದನ್ನು ಅತ್ಯಂತ ಗಂಭೀರವಾದ ಮತ್ತು ವ್ಯಕ್ತಿಯ ಉದಾತ್ತತೆ ಮತ್ತು ನೈತಿಕವಾದ ಬಿಕ್ಕಟ್ಟು ಎಂದು ಹೇಳಬಹುದು. ಇದರಲ್ಲಿ ಗಂಭೀರತೆಯು ಇದೆ. ದುರಂತದಲ್ಲಿ ಉದಾತ್ತತೆಯು ಇದೆ. ವ್ಯಕ್ತಿಯ ಚಹರೆಗಳು ಇವೆ. ವಾಸ್ತವವಾಗಿ ಎರಡನೆಯ ದರ್ಜೆಯ ದುರಂತ ನಾಟಕಗಳು ಮಾತ್ರವೇ ಬೇರೆ ರೀತಿಯಲ್ಲಿ ಇರುತ್ತವೆ. ಅದರಲ್ಲಿ ವ್ಯಕ್ತಿಯ ಅಧಃಪತನದ ಸರಿಯಾದ ಚಿತ್ರಣಗಳು ಇರುವುದೇ ಇಲ್ಲ. ವ್ಯಕ್ತಿ ಮತ್ತು ಅವನ ನಡವಳಿಕೆಗಳು ಬೇರೆ ಬೇರೆ ಕಾರಣಗಳಿಂದ ಬದಲಾಗುವುದು ಮತ್ತು ಅದರ ಮೂಲಕವೇ ವ್ಯಕ್ತಿಯು ಅಧಃಪತನಕ್ಕೆ ಗುರಿಯಾಗುವುದು ದುರಂತದಲ್ಲಿ ಬಹಳ ಮುಖ್ಯವಾಗುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ಸಂವೇದನೆಯ ಪ್ರಶ್ನೆಯೂ ಇರುತ್ತದೆ. ಹಾಗೆ ನೋಡುವುದಿದ್ದರೆ ದುರಂತ ನಾಟಕದಲ್ಲಿ ವ್ಯಕ್ತಿಯು ಅನುಭವಿಸುವ ಯಾತನೆಯು ಒಂದು ಮಾನದಂಡವೂ ಹೌದು. ನಿಸರ್ಗ ಮತ್ತು ಮನುಷ್ಯರ ನಡುವಣ ಸಂಬಂಧವು ಅತ್ಯಂತ ಸಂಕೀರ್ಣವಾಗುತ್ತದೆ. ಜೀವನದಲ್ಲಿ ಕೆಲವು ಘಟಿಸುತ್ತದೆ ಮತ್ತು ಅದರಲ್ಲಿ ನಿಸರ್ಗವು ಅರಿವು ಇಲ್ಲದೆಯೇ ಪರಿಣಾಮವನ್ನು ಬೀರುತ್ತದೆ. ಮತ್ತು ಅದರಲ್ಲಿಯೇ ವ್ಯಕ್ತಿಯು ಹತಾಶವಾಗುತ್ತಾನೆ. ವಾಸ್ತವವಾಗಿ ದುರಂತ ನಾಟಕವು ಒಂದು ದೃಷ್ಟಿಯಿಂದ ಸಾಹಿತ್ಯದ ಚರ್ಚೆಗೆ ಅತ್ಯಂತ ಮಹತ್ವದ ಪರಿಣಾಮವನ್ನು ಬೀರಿದೆ. ಅದರದ್ದೇ ಆದ ವಿಶಿಷ್ಟವಾದ ಸಂವೇದನೆಯನ್ನು ರೂಪಿಸಿದೆ. ಆದರೆ ಇಲ್ಲಿ ದುರಂತವನ್ನು ನೋಡಿದ ಕ್ರಮಗಳು ಮತ್ತೆ ಮತ್ತೆ ಜೀವನದ ಅನೇಕ ಅಧ್ಯಾಯದ ಸ್ವರೂಪವನ್ನು ಹೇಳುತ್ತದೆ. ಅಂದರೆ ದುರಂತವು ವಾಸ್ತವವಾಗಿ ಬೇರೆ ಬೇರೆ ಅರ್ಥಗಳಲ್ಲಿಯೂ ಕೆಲಸವನ್ನು ಮಾಡಿದೆ. ದುರಂತ ಮತ್ತು ಅದರಿಂದ ಉಂಟಾಗುವ ದುಃಖವು ಸಾಮಾನ್ಯವಲ್ಲ. ಅದರಲ್ಲಿ ಜೀವನದ ಸಂಕೀರ್ಣವಾದ ಸ್ವರೂಪವೂ ಇದೆ.

ದುಃಖವು ವ್ಯಕ್ತಿಯನ್ನು ಹೇಗೆ ಕಾಡುತ್ತದೆ ಮತ್ತು ಅದರ ಪರಿಣಾಮವು ಯಾವ ಬಗೆಯದು ಎನ್ನುವುದನ್ನು ಅವುಗಳು ಹೇಳುತ್ತವೆ. ಆದರೆ ನಾಟಕವನ್ನು ನೋಡಿದ ಮೇಲೆ ದೊರೆಯುವುದು ನಮಗೆ ಸಂತೋಷವೇ. ಅದು ನಮಗೆ ಅನುಭವಕ್ಕೆ ಬರುತ್ತದೆ. ದುರಂತವನ್ನು ನೋಡುವುದು ಮತ್ತು ಅನುಭವಿಸುವುದು ಬೇರೆ. ದುರಂತ ನಾಟಕವು ದುರಂತವನ್ನು ನಮ್ಮ ಎದುರು ತರುತ್ತದೆ. ಮತ್ತು ಅದರ ಮೂಲಕವೇ ನಮಗೆ ಒಂದು ವಿಶಿಷ್ಟವಾದ ಸಂತೋಷವನ್ನು ಕೊಡುತ್ತದೆ. ವ್ಯಕ್ತಿಯು ಬಲಿಯಾಗುತ್ತಾನೆ. ಕಾರಣವು ಇದರಲ್ಲಿ ಬಹಳ ಮುಖ್ಯ. ಹಾಗೆ ನೋಡುವುದಿದ್ದರೆ ಆಧುನಿಕ ಕೆಲವು ಕಾದಂಬರಿಗಳು ಕೂಡಾ ದುರಂತವನ್ನು ಹೇಳುತ್ತವೆ. ವ್ಯಕ್ತಿ ಮತ್ತು ಅವನ ದುರಂತವನ್ನು ಆಧುನಿಕ ಕಾದಂಬರಿಗಳು ನೋಡುವ ಕ್ರಮಗಳು ಬೇರೆಯಾಗುತ್ತವೆ. ಅದರಲ್ಲಿ ವ್ಯತ್ಯಾಸವಿದೆ. ಆಧುನಿಕ ಸಮಾಜ ಮತ್ತು ಅದರ ಜೀವನದ ಸ್ಥಿತಿಗಳು ವ್ಯಕ್ತಿಯನ್ನು ದುರ್ಬಲ ಮಾಡುತ್ತದೆ. ಆ ಕಾರಣದಿಂದಲೇ ವ್ಯಕ್ತಿಯು ಬಲಿಯಾಗುತ್ತಾನೆ. ಆಧುನಿಕ ರಾಜಕಾರಣ ಮತ್ತು ಸಮಾಜ ಹಾಗೂ ಅವನ ಪರಿಸರವು ಅವನ ದುರಂತಕ್ಕೆ ಕಾರಣವಾಗುತ್ತವೆ. ವ್ಯಕ್ತಿ ಮತ್ತು ಅವನ ಸಮಸ್ಯೆಯೇ ವಾಸ್ತವವಾಗಿ ಈಗಿನ ಕಾದಂಬರಿಗಳ ಮುಖ್ಯವಾದ ಸಮಸ್ಯೆಯು ಹೌದು. ಕಾದಂಬರಿಗಳು ಹೇಳುವ ಅನೇಕ ಸಂಗತಿಗಳು ಮುಖ್ಯವಾಗಿ ಪ್ರಜ್ಞೆಯನ್ನು ಸೂಚಿಸುತ್ತವೆ. ಅದರಲ್ಲಿ ವ್ಯಕ್ತವಾಗುವ ಸಂಗತಿಗಳು ಸೀಮಿತವಾಗಿರುವುದೂ ಇಲ್ಲ. ಕಾದಂಬರಿಗಳಲ್ಲಿ ವ್ಯಕ್ತಿಗಳು ಮತ್ತು ಅವರ ಸಂಬಂಧವು ಮಾತ್ರವೇ ಮುಖ್ಯವಾಗುತ್ತವೆ. ಕಾದಂಬರಿ ಮತ್ತು ಅದರ ಸ್ವರೂಪವನ್ನು ನೋಡುವಾಗ ಅದನ್ನು ಬರೀ ಓದುವ ಕೃತಿಯಾಗಿ ಮಾತ್ರವೇ ನೋಡಬೇಕಾಗಿಲ್ಲ. ಅದು ಬರೀ ಮನೋರಂಜನೆಯನ್ನು ಮಾತ್ರವೇ ಹೇಳುತ್ತಿಲ್ಲ. ಅದರ ಬದಲು ಅದು ನಿರ್ದಿಷ್ಟವಾದ ಸಮಾಜವನ್ನು ನಿರ್ದಿಷ್ಟವಾಗಿ ಹೇಳುತ್ತದೆ. ಈ ಮಾತುಗಳು ವಾಸ್ತವತಾವಾದಕ್ಕೆ ಮಾತ್ರವೇ ಲಗತ್ತಾಗುತ್ತದೆ. ಅದನ್ನು ಅಂದರೆ ಕಾದಂಬರಿಯನ್ನು ಸ್ವಂತಿಕೆ ಮತ್ತು ಸಮಾಜದ ನಡುವಣ ಸಂಬಂಧದಲ್ಲಿ ಹುಟ್ಟುತ್ತದೆ ಎಂದು ಲುಕಾಕ್ಸ್ ಹೇಳುತ್ತಾನೆ. ಕಾದಂಬರಿಯಲ್ಲಿ ಎಲ್ಲಾ ರೀತಿಯ ಮನುಷ್ಯರು ಇರುತ್ತಾರೆ. ಅವರನ್ನು ಲೇಖಕನು ತನ್ನ ಪ್ರಜ್ಞೆಗೆ ಅನುಸಾರವಾಗಿಯೂ ಹೇಳುತ್ತಾನೆ. ಅದು ನಿರ್ದಿಷ್ಟವಾದ ಕಾಲವನ್ನು ಹೇಳುತ್ತದೆ. ಅನೇಕ ವಾಸ್ತವವು ವಿವರಣಾತ್ಮಕವೂ ಆಗಿರುತ್ತದೆ. ಅದು ಕಾದಂಬರಿಗೆ ಬೇಕಾದ ಅಗತ್ಯವನ್ನು ಪೂರೈಸುತ್ತದೆ. ಕಾದಂಬರಿಯಲ್ಲಿಯೂ ಬಯಕೆ ಮತ್ತು ನಿಜಗಳು ಇರುತ್ತವೆ. ಅವುಗಳು ವಾಸ್ತವವನ್ನು ಅನುಕರಿಸುತ್ತದೆ. ವ್ಯಂಗ್ಯ ಮತ್ತು ನಿಜಗಳು ಒಂದಕ್ಕೊಂದು ಮಿಳಿತವಾಗುತ್ತವೆ. ಆದ್ದರಿಂದ ಕಾದಂಬರಿಯಲ್ಲಿ ನಿಜವಾದ ಅನುಭವ ಯಾವುದು ಎನ್ನುವುದು ಮುಖ್ಯವಾದ ಪ್ರಶ್ನೆ. ಕಾದಂಬರಿಯು ವಾಸ್ತವವಾಗಿ ಅತ್ಯಂತ ದೊಡ್ಡ ಪ್ರಕಾರವೂ ನಿಜ. ಅದು ತಾರ್ಕಿಕವಾದ ಕಾಲವನ್ನು ಹೇಳುತ್ತದೆ. ಅದರಲ್ಲಿ ಚಾರಿತ್ರಿಕ ಅಸ್ತಿತ್ವದ ಪ್ರಶ್ನೆಯೂ ಬಹಳ ಮುಖ್ಯ. ಆದರೆ ದುರಂತ ನಾಯಕನು ವ್ಯವಸ್ಥೆ

ಮತ್ತು ಅದರ ಪ್ರಭಾವವನ್ನು ಎದುರು ಹಾಕಿಕೊಳ್ಳಲಾಗದೆ ದುರಂತವನ್ನು ಅಪ್ಪುತ್ತಾನೆ. ಇದರಲ್ಲಿ ಅವನ ವ್ಯಕ್ತಿತ್ವದ ದೋಷವೂ ಸೇರಿಕೊಂಡಿದೆ. ಆದರೆ ದುರಂತ ನಾಟಕದಲ್ಲಿ ದುರಂತವು ತಾತ್ವಿಕವಾದ ಸಂಘರ್ಷವನ್ನು ಹೇಳುತ್ತದೆ. ಅದರಲ್ಲಿ ಅವನ ನಿಲುವು ಮತ್ತು ಅದರ ಜೊತೆಗೆ ಪರಿಸ್ಥಿತಿಯೆರಡೂ ಕಾರಣವಾಗುತ್ತದೆ. ಅದು ತಾತ್ವಿಕವಾದ ಗ್ರಹಿಕೆಯೂ ಹೌದು. ದುರಂತ ಮತ್ತು ಅದರ ವಿನ್ಯಾಸದಲ್ಲಿಯೇ ಬೇರೆ ಬೇರೆ ಸ್ವರೂಪವನ್ನು ನಾವು ಕಾಣುತ್ತೇವೆ. ಅದು ಭ್ರಮೆ, ಉನ್ಮಾದ, ಆವೇಶ, ಆಕ್ರೋಶ ಪರಿಸ್ಥಿತಿಯನ್ನು ಹೇಳುತ್ತವೆ. ದುರಂತದಲ್ಲಿಯೇ ಒಂದು ರೆಬೆಲ್ ಎನ್ನಬಹುದಾದ ಗುಣವು ಇದೆ. ಹಾಗಾಗಿ ಅದರಲ್ಲಿ ಆತಂಕವೂ ಇರುತ್ತದೆ. ಈ ಆತಂಕವು ವ್ಯಕ್ತಿಯನ್ನು ನೋಡುವ ಕ್ರಮವು ಬೇರೆಯಾಗುತ್ತದೆ. ವ್ಯಕ್ತಿಯನ್ನು ಯಾವುದು ದುರಂತಕ್ಕೆ ಎಡೆ ಮಾಡುತ್ತದೆಯೋ ಅದು ಸಂಘರ್ಷತ್ಮಾಕವೂ ಹೌದು. ದುರಂತದ ಕಾರಣವು ಸಣ್ಣದಲ್ಲ. ಅದರ ಅರಿವು ಯಾವಾಗ ಬರುತ್ತದೆಯೋ ಆಗ ದುರಂತವು ಸಂಭವಿಸುತ್ತದೆ. ದುರಂತದ ಅನುಭವವನ್ನು ನೋಡುವಾಗ ನಮಗೆ ಇದರ ಅರಿವು ಆಗುತ್ತದೆ. ದುರಂತವು ಯಾವುದೇ ಕಾರಣಕ್ಕೆ ನಡೆಯಬಹುದು– ಆದರೆ ಅದು ಆಗುವುದೂ ಅಷ್ಟೇ ನಿಜ. ಆದರೆ ವಾಸ್ತವವಾಗಿ ದುರಂತವು ವಿಶಿಷ್ಟವೂ ಆಗಿರುತ್ತದೆ. ಅದು ಪತನವನ್ನು ಹೇಳುತ್ತದೆ. ಏರಿದವನು ಬೀಳುವುದು ಇದರ ಮುಖ್ಯವಾದ ಸತ್ವವೂ ಹೌದು. ಈ ಕಾರಣದಿಂದ ದುಃಖವೂ ಅತ್ಯಂತ ಪರಿಣಾಮವನ್ನು ಬೀರುತ್ತದೆ. ಅದರಲ್ಲಿ ವ್ಯಕ್ತಿತ್ವ ಪಡೆಯುವ ನಿಲುವು ಬಹಳ ಮುಖ್ಯ. ಅದರಲ್ಲಿ ಬರುವ ದುಃಖವೂ ಅಂತಿಮವಾಗಿ ಒಂದು ಸಂತೋಷಕ್ಕೆ ಕಾರಣವಾಗುತ್ತದೆ. ಅದು ವಿರೇಚನವೂ ಹೌದು. ವ್ಯಕ್ತಿಯೂ ಬಲಿಪಶುವಾಗುತ್ತಾನೆ. ಆಧುನಿಕ ಕಾದಂಬರಿಗಳೂ ಕೂಡಾ ವ್ಯಕ್ತಿಯಾಗುವುದನ್ನು, ಹೀಗಾಗುವುದನ್ನು ಹೇಳುತ್ತದೆ. ಕಾರಂತರ ಚೋಮನದುಡಿಯು ಬಲಿಪಶುವಾಗುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಆದ್ದರಿಂದ ದುರಂತವು ತಾತ್ವಿಕವೂ ಆಗುತ್ತದೆ. ಅದು ಸಾಂಸ್ಕೃತಿಕ ಸಂಘರ್ಷವೂ ಆಗುತ್ತದೆ. ಅದರಲ್ಲಿ ತಾತ್ವಿಕ ಖಿನ್ನತೆಯು ಇದೆ. ಅದರ ಪರಿಣಾಮವಾಗಿಯೇ ವ್ಯಕ್ತಿಯು ಅವನತಿಯತ್ತ ಚಲಿಸುತ್ತಾನೆ. ವ್ಯಕ್ತಿ ಮತ್ತು ಅವನ ದುರಂತವನ್ನು ನೋಡುವುದು ಎಂದರೆ ಅವನು ಯಾಕೆ ಹಾಗಾಗಿದ್ದಾನೆ ಎಂದೂ ನೋಡುವುದೂ ಹೌದು. ಅವನು ರೆಬೆಲ್ ಆಗದೇ ಹೋದರೆ ವ್ಯಕ್ತಿಯು ಬಲಿಯಾಗುತ್ತಾನೆ ಎಂದು ಹೇಳಲು ಬರುವುದು ಇಲ್ಲ. ಅದರ ಸ್ವರೂಪವೂ ಭಿನ್ನವಾಗುತ್ತದೆ. ಯಾರು ವ್ಯವಸ್ಥೆಯನ್ನು ಒಪ್ಪುತ್ತಾನೆಯೋ ಅವನು ಅದರೊಂದಿಗೆ ಒಂದು ಮೈತ್ರಿಯನ್ನು ಹೊಂದುತ್ತಾನೆ. ಆದ್ದರಿಂದ ಅವನು ತನ್ನ ಚಹರೆಗಳನ್ನು ಆಗಾಗ ಬದಲು ಮಾಡುತ್ತಾನೆ. ಅದು ಅವನಿಗೆ ಯಾವುದೇ ರೀತಿಯ ಮುಜುಗರವನ್ನು ತರುವುದೂ ಇಲ್ಲ. ದುರಂತದ ನಾಯಕನು ಕ್ಲೈಬ್ಯತೆಯನ್ನು ಅನುಭವಿಸುತ್ತಾನೆ. ಅವನಿಗೆ ಅದು ಅನಿವಾರ್ಯವೂ ಹೌದು. ಅದರಲ್ಲಿ ಅವನ ವ್ಯಕ್ತಿತ್ವದ ಅಂಶವೂ ಇದೆ. ಅವನು ಎಲ್ಲಾ ರೀತಿಯ ಆಶಾವಾದವನ್ನು ಕಳೆದುಕೊಂಡಿದ್ದಾನೆ. ಅವನಿಗೆ ತನ್ನದೇ ಆದ ಭವಿಷ್ಯವು ಇಲ್ಲ ಎನ್ನುವ ಭಾವನೆಯು ಬಂದಾಗ ದುರಂತವನ್ನು

ಅಪ್ಪಿಕೊಳ್ಳುತ್ತಾನೆ. ಆದರೆ ದುರಂತವು ಮತ್ತೊಂದು ಕಡೆಯಿಂದ ಅವನ ಶಕ್ತಿಯನ್ನು ಅದು ಹೇಳುತ್ತದೆ. ಅವನಿಗೆ ಶಕ್ತಿಯು ಇಲ್ಲವಾದರೆ ಅವನು ಆ ಸ್ಥಿತಿಯನ್ನು ತಲುಪುವುದೂ ಇಲ್ಲ. ಆದರೆ ದುರಂತವು ಒಂದು ರೀತಿಯಿಂದ ಜೀವನ ಮತ್ತು ಅದರ ಸಮಸ್ಯೆಯನ್ನು ಹೇಳುತ್ತದೆ. ದುರಂತ ನಾಯಕರುಗಳಿಗೆ ಗಳಿಗೆಗೆ ಬಣ್ಣ ಬದಲಿಸುವ ವ್ಯಕ್ತಿತ್ವವಲ್ಲ. ಆದರೆ ಅದರಲ್ಲಿ ಒಂದು ಬಗೆಯ ಬೇಸರವೂ ಇದೆ. ಪ್ಲೇಟೋ ಇದನ್ನು ಒಪ್ಪುವುದಿಲ್ಲ. ಅವನು ಹೇಳುವುದು ಬೇರೆ. ಅವನ ಪ್ರಕಾರ ಅದರ ಬೇಸರ ಮತ್ತು ಅದರ ಗ್ಲೂಮಿಯಾದ ನೆಲೆಯು ಸರಿಯಾದದ್ದು ಎಂದು ಕಾಣಿಸುವುದಿಲ್ಲವೆಂದು ಹೇಳುತ್ತಾನೆ. ವ್ಯಕ್ತಿಯು ವಿಧಿಯೊಂದಿಗೆ ಆಡುವ ಜಗಳವನ್ನು ಸತ್ಯವಲ್ಲ. ಅದು ನಾಟಕದಲ್ಲಿ ಸರಿಯೆಂದು ಅನಿಸುವುದಿಲ್ಲ ಎಂದು ಹೇಳುತ್ತಾನೆ. ಆದರೆ ದುರಂತವನ್ನು ನೋಡಲು ಜನರು ಹೆಚ್ಚು ಆಸಕ್ತರಾಗುತ್ತಾರೆ ಎಂದು ಅರ್ನಾಲ್ಡ್ ಭಾವಿಸುತ್ತಾನೆ. ಸಾವು ಅಥವಾ ದುರಂತವು ಒಂದು ಕೋರಸ್ ನಡುವೆಯೇ ನಡೆಯುತ್ತದೆ, ಜೀವನ ಮತ್ತು ಅದರಿಂದ ಬರುವ ಬೇಸರವನ್ನು ನಾವು ಸರಳವೆಂದು ಹೇಳಲು ಬರುವುದೂ ಇಲ್ಲ. ಜೀವನ ಮತ್ತು ಅದರಲ್ಲಿ ಬರುವ ನಿರಾಶೆಯನ್ನು ಮತ್ತು ಅದರಿಂದ ಬರುವ ಅನೇಕ ಸಂಕಷ್ಟಗಳು ಅದರಲ್ಲಿ ಪ್ರಧಾನವೂ ಆಗಿದೆ. ವ್ಯಕ್ತಿ ಮತ್ತು ಅವನ ಕುರಿತಾದ ಕರುಣೆಯು ಬಹಳ ಮುಖ್ಯವಾಗುತ್ತದೆ. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಬರುತ್ತವೆ. ಬೇಸರವನ್ನು ಅನುಭವಿಸುವುದು ಮೂಲಭೂತವಾಗಿ ವ್ಯಕ್ತಿ. ಅವನು ಜೀವನದಲ್ಲಿ ನೊಂದುಕೊಂಡಿದ್ದಾನೆ. ರೊಮ್ಯಾಂಟಿಕ್ ಪರಂಪರೆಯು ವಾಸ್ತವವಾಗಿ ವ್ಯಕ್ತಿ ಮತ್ತು ಅವನ ನಿಲುವುಗಳನ್ನು ನೋಡುವುದು ಭಿನ್ನವಾಗಿ. ಅದರಲ್ಲಿ ಸಂತೋಷ ಮತ್ತು ಅದರ ನಡುವಣ ನೋವುಗಳೂ ಇರುತ್ತವೆ. ನಿಸರ್ಗದ ಕುರಿತಾದ ಭಯ ಮತ್ತು ಆತಂಕವು ಇರುತ್ತದೆ. ಮತ್ತು ಅದರಲ್ಲಿ ವ್ಯಕ್ತಿ ಮತ್ತು ಅವನ ಕುರಿತಾದ ಆತಂಕವೂ ಇರುತ್ತದೆ. ರೊಮ್ಯಾಂಟಿಕ್ ಕಾವ್ಯವು ವಾಸ್ತವವಾಗಿ ನೋಡುವುದು ಒಂದು ಭಿನ್ನವಾದ ಜಗತ್ತನ್ನು. ಅದನ್ನು ಕನ್ನಡದ ಸಾಕ್ಷ್ಯದಲ್ಲಿ ನೋಡಬಹುದು. ಕಾರಂತ ಮತ್ತು ಬೇಂದ್ರೆಯವರು ಹೇಳುವ ಜಗತ್ತನ್ನು ಒಂದು ಉದಾಹರಣೆಯಾಗಿದೆ. ಕುವೆಂಪು ಕಾರಂತ, ಬೇಂದ್ರೆ ಮೊದಲಾದವರು ರೂಪಿಸಿದ ವೈಚಾರಿಕತೆಯು ಭಿನ್ನವಾಗಿದೆ. ಅವರು ಸಮಕಾಲೀನವಾದ ಸಮಾಜವನ್ನು ನೋಡಿದ ಕ್ರಮಗಳು ಭಿನ್ನವಾಗಿದೆ. ಸಾಮಾನ್ಯವಾದ ಅರ್ಥದಲ್ಲಿ ನಾವು ಅವರನ್ನು ರೊಮ್ಯಾಂಟಿಕರು ಎಂದು ಹೇಳಿದೆವು. ಆದರೆ ಸಾಮಾಜಿಕ ಹಿಂದೆ ಇದ್ದ ಸಮಾಜ ಮತ್ತು ಅದರ ದೃಷ್ಟಿಕೋನವು ಬೇರೆಯಿತ್ತು. ನಿಸರ್ಗ ಮತ್ತು ಮನುಷ್ಯರ ನಡುವಣ ಸಂಬಂಧವು ಭಿನ್ನವಾಗಿತ್ತು. ಕುವೆಂಪು ಹೇಳುವ ಮಲೆನಾಡಿನ ಕಾಡು ಮತ್ತು ಅದರ ಚಹರೆಗಳು ಬೇರೆಯಾಗಿದ್ದವು. ಈಗ ಅದು ಬದಲಾಗಿದೆ. ಅದು ಬದಲಾಗಬೇಕಿತ್ತು. ಸಹಜತೆ ಮತ್ತು ಅದರ ಸೌಂದರ್ಯವೇ ಕುವೆಂಪು ಅವರಿಗೆ ಹೆಚ್ಚು ಮುಖ್ಯ. ಅದರಿಂದ ಉಂಟಾದ ವೈಯಕ್ತಿಕ ಭಾವನೆಗಳು ಮಾತ್ರವೇ ಅಗತ್ಯವಾಗುತ್ತದೆ. ಸರಕಾರ, ಸುಂದರವಾದ ನಿಸರ್ಗ, ವೈಯಕ್ತಿಕ ಭಾವನೆಗಳು ಜೊತೆಗೆ ಹೋಗುತ್ತವೆ.

ರೊಮಾಂಟಿಕರಿಗೆ ಕನ್ನಡ ಮತ್ತು ಅದರ ಬೆಳವಣಿಗೆಗಳು ತುಂಬಾ ಮುಖ್ಯವಾಗಿದ್ದವು. ಅವರ ಆಯ್ಕೆಗಳು ಕೂಡಾ ವಿಶೇಷವಾಗಿದ್ದವು. ಹಾಗೆ ನೋಡುವುದಿದ್ದರೆ ಯಾವುದೇ ಸಮಾಜವು ಈ ರೀತಿಯ ಬೆಳವಣಿಗೆಯನ್ನು ಸಹಜವಾಗಿಯೇ ಆಯ್ಕೆ ಮಾಡುತ್ತದೆ. 1920 ರ ಅನಂತರದ ಅನೇಕ ವಿಶಿಷ್ಟತೆಯನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. 1922ರಲ್ಲಿ ಬೇಂದ್ರೆಯವರ ಕೃಷ್ಣ ಕುಮಾರಿಯು ಬಂತು. 1930ರಲ್ಲಿ ಕುವೆಂಪು ಅವರ ಕೊಳಲು ಬಂತು. 1900ರಲ್ಲಿ ಪಂಜೆಯವರ ನನ್ನ ಚಿಕ್ಕತಾಯಿ ಬಂತು. 1920ರಲ್ಲಿ ಮಾಸ್ತಿಯವರ ಕೆಲವು ಸಣ್ಣ ಕತೆಗಳು ಬಂತು. ಇವುಗಳು ಸಾಂಸ್ಕೃತಿಕವಾಗಿ ಮಹತ್ವದ್ದೂ ಆಗಿತ್ತು.

ನೋಡದೋ ಭಾರತವರ್ಷಂ, ಉಪನಿಷದಾರಾಮುಂ. . .
ಗೌತಮ ಬುದ್ಧನವನ್, ಮೌಢ್ಯನಿವಾರಕನ್!. . .
ಅಶೋಕನ್, ಚಕ್ರವರ್ತಿಶ್ರೇಷ್ಠನ್!. . .
ಏಷ್ಯಾಖಂಡಂ!. . . ಕ್ರಿಸ್ತನ್! ದೀನರಕ್ಷ ಕನ್. . . .
ಯವನದೇಶಂ!. . . ಜ್ಞಾನಿಗಳವರ್!. . .
ರೋಮನ್ ಚಕ್ರಾಧಿಪತ್ಯಂ. . . ಐರೋಪ್ಯ ಖಂಡಂ. . .
ಆಂಗ್ಲೇಯ ದೇಶಂ!. . . ಯಂತ್ರಕೌಶಲಂ!. . . ಇದೋ,
ಅರಬ್ಬೀಸ್ಥಾನಂ. . . ಮಹಮ್ಮದನ್. . . ಸಿದ್ಧನ್!. . . .
ಆಚಾರ್ಯ ಶಂಕರನ್. . . ಮೇಧಾವಿ, ಸಿದ್ಧನ್! . . . .
ಮೊಗಲ ಸಾಮ್ರಾಜ್ಯಂ. . . . ಮಹಾರಾಷ್ಟ್ರಂ. . . .
ಕನ್ನಡದೇಶಂ. . . ಕವಿರನ್ನನ್ . . . ವಿಜಯನಗರಂ. . .
ಪಾಶ್ಚಾತ್ಯ ಘೋರ ಯುದ್ಧಂ!. . . ರಷ್ಯಾದೇಶಂ!. . .
ವಿಪ್ಲವಂ. . . ಪ್ರಜಾಧಿಪತ್ಯಂ. . ಚಕ್ರವತಿವಿನಾಶಂ. .
ವಿಪ್ಲವಮತ ಪ್ರಚಾರಂ. . . . ಚೀನಾದೇಶಂ. . . .
ರಕ್ತ ಪ್ರವಾಹಂ.... ಸಿಡಿಗುಂಡುಗಳಾಟಂ.... ರೌದ್ರಂ!
ಪಿಶಿತಾಶಾಕ್ರಾಂತ ಭಾರತವರ್ಷಂ.... ದಾರಿದ್ರ್ಯಂ....

ದೌರ್ಬಲ್ಯಂ.... ಶ್ರೀರಾಮಕೃಷ್ಣ ಪರಮಹಂಸನ್! (ಕುವೆಂಪು, ಶ್ಮಶಾನ ಕುರುಕ್ಷೇತ್ರಂ ಮತ್ತು ಮಹಾರಾತ್ರಿ, 1930, ಪುಟ. 40–41. ಸ್ಕಂದ ಆಫ್‌ಸೆಟ್ ಮುದ್ರಣಾಲಯ, ಮೈಸೂರು) ಇದು ಕುವೆಂಪು ನಾಟಕದಲ್ಲಿ ಬರುವ ಮಾತುಗಳು. ಇದು ಭಿನ್ನವಾದ ಒಂದು ಪ್ರಶ್ನೆಯನ್ನು ಎತ್ತುತ್ತದೆ. ಆದರೆ ಅದೇ ಕಾಲಕ್ಕೆ ಅವರು ಆಯ್ಕೆ ಮಾಡಿಕೊಂಡ ವಿಚಾರಗಳು ಆಗಿನ ಬದಲಾವಣೆಯನ್ನು ಹೇಳುತ್ತದೆ. ಅವುಗಳು ವ್ಯಕ್ತಿ ಮತ್ತು ಸಮಾಜದ ನಡುವಣ ಸಂಬಂಧವನ್ನು ಹೇಳುತ್ತವೆ. ಅವರು ಕವಿಗಳಾಗಿ ಮತ್ತು ಸಮಾಜಶಾಸ್ತ್ರಜ್ಞರಾಗಿಯೂ ಪರಿಸರವನ್ನು ನೋಡಿದರು. ಅವರಿಗೆ ಇದ್ದ ಲೋಕದ

ಗ್ರಹಿಕೆಯನ್ನು ಅವರ ಬರಹಗಳು ಹೇಳುತ್ತವೆ. ಅದರಲ್ಲಿ ಬರುವ ಸಮಾಜವು ಬದಲಾಗುತ್ತಿರುವ ಸಂಗತಿಯನ್ನು ಹೇಳುತ್ತದೆ. ಸಹಜತೆ ಮತ್ತು ಸೌಂದರ್ಯವು ಕುವೆಂಪುಗೆ ಬಹಳ ಮಹತ್ವದ್ದು. ಯಾವುದನ್ನು ಸಹಜವಾದ ಸೌಂದರ್ಯವೆಂದು ಹೇಳುತ್ತೇವೆಯೋ ಅದರಲ್ಲಿ ಅನೇಕ ಸತ್ಯಗಳು ಇವೆ ಎಂದು ಕುವೆಂಪು ಹೇಳುತ್ತಾರೆ. ಅದು ನೈತಿಕವಾದ ನಿರೂಪಣೆಯೂ ಹೌದು. ಅದರಲ್ಲಿ ಕುಬ್ಜತೆಯು ಇಲ್ಲವಾಗಿದೆ. ವ್ಯಕ್ತಿಗೆ ಇರಬೇಕಾದ ಆದರ್ಶ ಮತ್ತು ನೈತಿಕತೆಯನ್ನು ಕುವೆಂಪು ಬಹಳ ವಿವರಿಸುತ್ತಾರೆ. ಅದರಲ್ಲಿ ಒಂದು ಮಹತ್ವದ ವಿಷಯವಿದೆ. ಮಲೆನಾಡಿನ ದೊಡ್ಡದಾದ ಕಾಡು ಮತ್ತು ಅದರ ಅರ್ಥವನ್ನು ಕುವೆಂಪು ವಿಶಿಷ್ಟವಾಗಿಯೂ ನೋಡುತ್ತಾರೆ. ಅದು ನೀಡುವ ಆಹ್ಲಾದವು ಅವರಿಗೆ ಬಹಳ ಮುಖ್ಯ. ಅದೇ ಸಂದರ್ಭದಲ್ಲಿ ಕುವೆಂಪು ಕಾರಂತ ಬೇಂದ್ರೆ ಮುಂತಾದವರು ರಾಜಕೀಯವಾದ ಪದ್ಯಗಳನ್ನು ಬರೆದರು. ಕಾರಂತರಲ್ಲಿ ಬರುವ ಸಮಾಜವೂ ಅತ್ಯಂತ ಮಹತ್ವ. ಪಂಜೆಯವರಲ್ಲಿ ಬರುವ ಹೋಟೇಲು ಉದ್ಯಮವೂ ಅಷ್ಟೇ ಮುಖ್ಯ. ಮಾಸ್ತಿಯವರ ಬರಹಗಳಲ್ಲಿ ಬರುವ ರಾಜಕಾರಣವೂ ಅಷ್ಟೇ ಮುಖ್ಯ. 1900ರ ಅನಂತರದ ಕಾಲವು ಈ ದೃಷ್ಟಿಯಿಂದ ಬಹಳ ಮುಖ್ಯ. ಅವರ ಬರಹಗಳಲ್ಲಿ ಬರುವ ರಾಜಕಾರಣಕ್ಕೂ ಈ ದೃಷ್ಟಿಯಿಂದ ಬಹಳ ಮಹತ್ವವು ಇದೆ. ಅವರ ಬರಹಗಳಲ್ಲಿ ಬರುವ ಸಂಸ್ಕೃತಿಯು ಬರೀ ಒಂದು ಸಣ್ಣದಾದ ವಿವರಣೆಯು ಅಲ್ಲವೆನ್ನುವುದನ್ನು ಇಲ್ಲಿ ಉಲ್ಲೇಖಿಸಬೇಕು. ಆಗ ಅವರು ಬರೆಯುವಾಗ ರಾಜಕಾರಣ, ಸಮಾಜ, ಆರ್ಥಿಕತೆಯು ಬದಲಾಗುತ್ತಿತ್ತು. ಇದರಿಂದ ಅವರ ಸಂಸ್ಕೃತಿ ಮತ್ತು ಅದರ ಆಲೋಚನೆಗೆ ವಿಶಿಷ್ಟತೆಯು ಇದೆ. ಅದು ಅತ್ಯಂತ ವಿಶಿಷ್ಟವಾದ ಆಲೋಚನೆಯನ್ನು ಹೇಳುತ್ತದೆ. ಆಗಿನ ಓದುಗರು ಮತ್ತು ಲೇಖಕರ ನಡುವಣ ಸಂಬಂಧವನ್ನು ಅದು ಹೇಳುತ್ತದೆ. ಅದು ಭಿನ್ನವಾದ ನಿರ್ವಚನವೂ ಹೌದು. ಸಾಹಿತ್ಯ ಮತ್ತು ಅದರ ಸತ್ಯಗಳು ಉನ್ನತವಾಗಿದ್ದವು. ಸತ್ಯ ಮತ್ತು ಅದರ ನಿರ್ವಚನವು ಆಗ ಬೇರೆಯಾಗಿತ್ತು. ಸತ್ಯಕ್ಕೆ ಇರುವ ಆಧ್ಯಾತ್ಮಿಕತೆಯು ಅವರಿಗೆ ಬಹಳ ಮುಖ್ಯವಾಗುತ್ತದೆ. ಕನ್ನಡದ ನವೋದಯವು ಈ ದೃಷ್ಟಿಯಿಂದ ಬಹಳ ಮಹತ್ವದನ್ನು ಸಾಧಿಸಿದೆ. ಸತ್ಯವು ಲೋಕದ ಅಂತಿಮವಾದ ಮತ್ತು ಮಹತ್ವದ ಸ್ವರೂಪವೆನ್ನುವುದನ್ನು ಅವರು ಸಾಬೀತು ಮಾಡಿದರು. ನವೋದಯವು ಅತ್ಯಂತ ಮಹತ್ವದ್ದನ್ನು ಸಾಧಿಸಿದೆ. ನವೋದಯವು ನಿಸರ್ಗ ಮತ್ತು ಅದರ ಗ್ರಹಿಕೆಯನ್ನೂ ಮಂಡಿಸಿದ ಕ್ರಮವೂ ಬೇರೆಯಾಗಿದೆ. ಸುಶಿಕ್ಷಿತ ಮಧ್ಯಮ ವರ್ಗದ ಭಾವನೆಗಳನ್ನೂ ಅದು ಸಂಕೇತಿಸುತ್ತದೆ. ಕಾರಂತರು ಹರ್ಷ ಮುದ್ರಣಾಲಯವನ್ನು ಪ್ರಾರಂಭಿಸಿದರು. ಅದರಲ್ಲಿಯೇ ತಮ್ಮ ಕಾದಂಬರಿಗಳನ್ನು ಪ್ರಕಟಿಸಿದರು. ಮಾಸ್ತಿಯವರ ಜೀವನ ಮತ್ತು ಅದರ ಪ್ರಕಟಣೆಯು ಹೊಸ ಕೆಲಸವೂ ಆಗಿತ್ತು. ಅದು ಹೊಸ ರೀತಿಯ ಸಂಬಂಧಗಳನ್ನು ಹೇಳುತ್ತವೆ. ಹರ್ಷ ಮುದ್ರಣಾಲಯದಲ್ಲಿ ಬಂದ ಕಾದಂಬರಿಗಳು ಮಾರುಕಟ್ಟೆಗೆ ಬಂದವು. ಈ ಮೂಲಕ ಲೇಖಕನು ಓದುಗನ ವಲಯದೊಳಗೆ ಬರುವಂತೆ ಆಯಿತು. ಅದು ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಅದರಲ್ಲಿ ವ್ಯಕ್ತಿ ಮತ್ತು ಸಮಾಜದ

ಸಂಬಂಧವನ್ನು ನಾವು ಬೇರೆ ರೀತಿಯಲ್ಲಿ ನೋಡುವಂತೆ ಆಯಿತು. ಸಹೃದಯ ಮತ್ತು ಅವನ ಕಲ್ಪನೆಯು ಬೇರೆಯಾಯಿತು. ಲೇಖಕನು ಕಾವ್ಯದಲ್ಲಿ ವಿಹರಿಸುವವನ್ನು ಬಯಸಿದ. ಬರಹ ಮತ್ತು ಅದರ ಸಂಸ್ಕೃತಿಯಲ್ಲಿ ಬೇರೆ ಸ್ವರೂಪವು ಬಂದದ್ದು ಮಾತ್ರವೇ ಅಲ್ಲ; ಅದರ ಮೂಲಕ ಮಾರುಕಟ್ಟೆಗೆ ಬೇರೆ ಅರ್ಥವೂ ಬಂತು. ಗಳಗನಾಥರ ಕಾದಂಬರಿಗಳು ಒಂದು ವಿಶಿಷ್ಟವಾದ ಚಹರೆಗಳನ್ನು ರೂಪಿಸಿದವು. ಕಾದಂಬರಿ ಮತ್ತು ಅದರ ಸ್ವರೂಪವೇ ಆಗ ವಿಶಿಷ್ಟವಾದ ಕಲಾಪ್ರಕಾರವೂ ಆಗಿತ್ತು. ಇಲ್ಲಿ ಹೇಳಬೇಕಾದ ಅಂಶವೆಂದರೆ ಬದಲಾದ ಆಲೋಚನೆ ಮತ್ತು ಅದರ ಪ್ರಕಟಣೆಗೆ ದೊರೆತ ಮಹತ್ವ. ಕಾದಂಬರಿಗಳು ವಾಸ್ತವವಾಗಿ ಆಗ ನಿರ್ದಿಷ್ಟವಾದ ಕಾರಣಕ್ಕೆ ಹುಟ್ಟಿಕೊಂಡವು. ಅವುಗಳ ಕಾರ್ಯ ವಿಧಾನವೂ ಬೇರೆಯಾಗಿತ್ತು. ಪ್ರಕಟವಾದ ಕಾದಂಬರಿಗಳು ಮತ್ತು ಅವುಗಳ ಸ್ವರೂಪವೂ ಈ ದೃಷ್ಟಿಯಿಂದ ಭಿನ್ನವಾಗಿತ್ತು. ಅವು ವಿಶಿಷ್ಟವಾದ ಕೆಲಸವನ್ನು ಹೇಳುತ್ತವೆ. ಮುದ್ರಣಗಳು ಮತ್ತು ಅದರ ಸ್ವರೂಪವು ವ್ಯಾಪಾರದ ಹೊಸ ಲಕ್ಷಣವನ್ನೂ ಹೇಳಿದವು. ಕಾದಂಬರಿಗಳು ಮತ್ತು ಅದರ ವ್ಯಾಪಾರಕ್ಕೆ ಹೊಸದಾದ ಅರ್ಥವೂ ಬಂತು. ಜನಪ್ರಿಯತೆ ಮತ್ತು ಪ್ರಕಟಣೆ ಹಾಗೂ ಕಾದಂಬರಿಕಾರರು ಹೊಸತಾದ ನಿರೂಪಣೆಯನ್ನು ಹೇಳಿದವು. ಆದರೆ ಕಾದಂಬರಿಯು ಜನಪ್ರಿಯವಾದ ಒಂದು ಚಟುವಟಿಕೆ ಎಂದೇ ಭಾವಿಸಲಾಯಿತು. ಜನಪ್ರಿಯವಾದುದು ಮೌಲಿಕವಾದದ್ದೂ ಅಲ್ಲವೆನ್ನುವ ರೀತಿಯಲ್ಲಿ ಪ್ರಚಾರ ಮಾಡಲಾಯಿತು. ಜನಪ್ರಿಯವಾದದ್ದು ಬುದ್ಧಿಜೀವಿಗಳಿಗೆ ಅಲ್ಲವೆನ್ನುವ ಕಲ್ಪನೆಯು ಬಂದಿತು. ಲೇಖಕನು ಅತ್ಯಂತ ವಿಶಿಷ್ಟವಾದ ಸತ್ಯವನ್ನು ನೋಡುತ್ತಾನೆ ಎಂದು ಭಾವಿಸಿದರು. ಅದು ಸಾಮಾಜಿಕರಿಗೆ ಸಾಧ್ಯವಾಗದ ಸಂಗತಿಯೆಂದು ಭಾವಿಸಿದರು. ಲೇಖಕ ಮತ್ತು ಅವನ ಕಾರ್ಯ ಭಿನ್ನವಾದ ಒಂದು ಚಟುವಟಿಕೆಯೆಂದು ಅನೇಕರು ತಿಳಿದರು. ನಿರ್ದಿಷ್ಟವಾದ ಮಾನವೀಯವಾದ ಮೌಲ್ಯವು ಕೆಲಸವನ್ನು ಮಾಡುತ್ತದೆ ಎಂದು ಭಾವಿಸಲಾಯಿತು. ಲೇಖಕ ಮತ್ತು ಅವನ ನಿರ್ವಚನವು ಬೇರೆಯಾಯಿತು. ರೊಮಾಂಟಿಸಿಸಂ ಅನ್ನುವುದು ಪಶ್ಚಿಮದಲ್ಲಿ ಒಂದು ಬಗೆಯಿಂದ ಒಂದು ಮಹತ್ವದ ಪಾತ್ರವನ್ನು ವಹಿಸಿತ್ತು. ಸಮೂಹ ಮತ್ತು ಅದರ ಅರ್ಥಗಳು ಬದಲಾದವು. ಸಮೂಹಕ್ಕೂ ಹೊಸ ಸಾಧ್ಯತೆಯು ಇತ್ತು. ರೊಮಾಂಟಿಕ್ ಎನ್ನುವುದು ಮೂಲಭೂತವಾಗಿ ವ್ಯಕ್ತಿಯ ಹೊಸ ಸಾಧ್ಯತೆಯೂ ಹೌದು. ಹೊಸ ಆಲೋಚನೆಯನ್ನು ಅದು ಸಂಕೇತಿಸುತ್ತದೆ. ಅದು ಸಮಾಜದಲ್ಲಿ ತನ್ನದೇ ಆದ ಛಾಪನ್ನು ಒತ್ತಿದೆ. ಅದು ಹೊಸದಾದ ಆಲೋಚನೆಯ ಪ್ರತೀಕ. ಅದು ಆದರ್ಶವನ್ನು ಹೇಳುತ್ತದೆ. ಅದರಲ್ಲಿ ಬರುವ ಆದರ್ಶವೂ ವಿಶಿಷ್ಟ. ನಿರ್ದಿಷ್ಟವಾದ ಒಂದು ಮನೋಭಾವ ಮತ್ತು ಅದರ ಸ್ವಭಾವನ್ನು ಅದು ಹೇಳುತ್ತದೆ. ಅದರಲ್ಲಿ ನಿರ್ದಿಷ್ಟವಾದ ಸನ್ನಿವೇಶವೂ ಇದೆ. ಆಗ ಯಾರನ್ನು ಹೆಚ್ಚು ಜೀನಿಯಸ್ ಎಂದು ಕರೆದರೋ ಅವರ ಕಾರ್ಯ ಮತ್ತು ಅವರ ದೃಷ್ಟಿಕೋನವೂ ಬೇರೆಯಾಗಿತ್ತು. ಜೀನಿಯಸ್ ಆದವನು ಹೊರಗಿನ ಸತ್ಯವನ್ನು ಅತ್ಯಂತ ಭಿನ್ನವಾಗಿ ನೋಡುತ್ತಾನೆ ಎನ್ನುವ ಕಲ್ಪನೆಯು ಇತ್ತು. ಹಾಗೆ ನೋಡುವುದಿದ್ದರೆ ಆಧುನಿಕ ಲೇಖಕರು ಆಯ್ಕೆಯ

ಮೂಲಕವೇ ಹೊರ ಜಗತ್ತನ್ನು ಅನುಕರಣೆ ಮಾಡುತ್ತಾರೆ. ಇಲ್ಲಿ ರಚನೆಯು ಇದೆ. ಈ ರಚನೆಯು ಭಿನ್ನವಾದ ಸಂಗತಿಯನ್ನು ಹೇಳುತ್ತದೆ. ಮೊದಲು ಇದ್ದುದನ್ನು ಹೊಸತು ಪುನರ್ ರೂಪಿಸಿಕೊಳ್ಳುತ್ತದೆ. ನವೋದಯವು ಹೀಗೆ ಆದರ್ಶವನ್ನು ರಚಿಸಿಕೊಳ್ಳುತ್ತದೆ. ಅದಕ್ಕೆ ಕೆಲವು ಮೌಲ್ಯವನ್ನು ಹೇಳುತ್ತದೆ. ಹೊರಗಿನ ಜಗತ್ತಿಗೆ ಇರುವ ಸೌಂದರ್ಯವನ್ನು ಮತ್ತು ಅದರ ಕೊಳಕನ್ನು ಹೇಳುವುದು ನೋಟದಿಂದ ಸಾಧ್ಯ. ರೊಮಾಂಟಿಕ್ ಪಂಥದಲ್ಲಿ ಅನುಕರಣೆಯೆನ್ನುವುದು ಮೂಲಭೂತವಾಗಿ ಒಂದು ವಿಶಿಷ್ಟವಾದ ನಡೆಯೂ ಹೌದು. ಅದಕ್ಕೂ ಲೋಕದೃಷ್ಟಿಗೂ ಸಂಬಂಧವಿದೆ. ವಾಸ್ತವವಾಗಿ ಅಭಿಜಾತ ಪರಂಪರೆ ಮತ್ತು ನವೋದಯ ಪರಂಪರೆಯು ಆದರ್ಶವನ್ನು ಹೇಳಿದವು. ಆದರೆ ಅವುಗಳು ಮಾನವೀಯವಾದ ಚಟುವಟಿಕೆಯ ಭಾಗವೂ ಆಗಿದ್ದವು. ಅದರಲ್ಲಿ ಉದ್ದೇಶವೂ ಇತ್ತು. ರೊಮಾಂಟಿಕ್ ಪರಂಪರೆಯಲ್ಲಿ ಅಭಿರುಚಿ ಎನ್ನುವುದಕ್ಕೆ ವಿಶೇಷವಾದ ಅರ್ಥವೂ ಇದೆ. ಸಾಹಿತ್ಯ ಮತ್ತು ಅದರ ಅಭಿರುಚಿಗೆ ಹೆಚ್ಚಿನ ಮಹತ್ವವಿದೆ. ಅದು ಓದುಗರು ಮತ್ತು ಲೇಖಕರ ನಡುವಣ ಸಂಬಂಧವನ್ನು ಹೇಳುತ್ತದೆ. ತಂತಿಯ ಮೇಲೆ ನಡೆಯುವವರನ್ನು ನೋಡಿ ಸಂತೋಷ ಪಡೆಯುವುಕ್ಕೂ; ಕಾವ್ಯವನ್ನು ಓದಿ ಸಂತೋಷ ಪಡೆಯವುದಕ್ಕೂ ವ್ಯತ್ಯಾಸವಿದೆ ಎಂದು ಆಗ ಭಾವಿಸಲಾಗಿತ್ತು. ಆಧುನಿಕ ಸಮಾಜ, ಸಂಸ್ಕೃತಿ, ಕೈಗಾರಿಕೀಕರಣ, ಅಭಿರುಚಿಯ ಪ್ರಶ್ನೆಗಳು ಸಂಕೀರ್ಣವಾಗಿದೆ. ಪುನರುಜ್ಜೀವನದ ಅನಂತರದ ಜ್ಞಾನಮಾದರಿಗಳ ಬದಲಾವಣೆಯು ವಿಶ್ವಾತ್ಮಕತೆಯನ್ನು ಎತ್ತಿಹಿಡಿದವು. ಅನೇಕ ದೃಷ್ಟಿಕೋನಗಳಿಗೆ ಸಾಂಸ್ಥಿಕವಾದ ರೂಪವೂ ಬಂದವು. ಮನುಷ್ಯನ ಸುಖ ಮತ್ತು ಅವನ ದೃಷ್ಟಿಕೋನಕ್ಕೆ ಆಧುನಿಕ ಸಂದರ್ಭದಲ್ಲಿ ಹೆಚ್ಚಿನ ಮಹತ್ವವು ಇದೆ ಎಂದೇ ಅನೇಕರು ಹೇಳಿದರು. ಆದರೆ ದುರಂತದ ಪ್ರಶ್ನೆಯು ಈ ದೃಷ್ಟಿಯಿಂದ ಬಹಳ ಮಟ್ಟಿಗೆ ಭಿನ್ನವಾಗಿದೆ.

ದುರಂತವು ಒಂದು ದೃಷ್ಟಿಯಿಂದ ನಾಟಕದ ದೃಷ್ಟಿಯಿಂದ ಮಹತ್ವದ್ದಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ದುಃಖ ಮತ್ತು ವಿಷಾದಗಳು ವ್ಯಕ್ತವಾದ ಕ್ರಮಗಳು ಬೇರೆಯಾಗಿವೆ. ಆಧುನಿಕಯುಗದ ದುರಂತಗಳು ಬೇರೆ ಬೇರೆ ವಿನ್ಯಾಸವನ್ನು ಪಡೆದುಕೊಂಡಿದೆ. ಆದರೆ ಯಾವುದೇ ಸಂದರ್ಭದಲ್ಲಿಯೂ ದುರಂತವನ್ನು ನೋಡುವುದು ಮತ್ತು ಅನುಭವಿಸುವುದು ಎಂದರೆ ಅದರ ಅರ್ಥವು ಬೇರೆಯಾಗುತ್ತದೆ. ಅದು ಭಾವನೆಯನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿಯ ಜೀವನದ ದೃಷ್ಟಿಕೋನವಿದೆ. ದುರಂತವು ಹೇಳುವ ಕ್ರಮಗಳನ್ನು ಪರಿಶೀಲಿಸುವ ಅಗತ್ಯವಿದೆ. ಅದು ಒಂದು ಗ್ರಹಿಕೆ. ದುರಂತ ನಾಟಕಗಳು ಒಂದು ಕಾಲಕ್ಕೆ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತ್ತು. ಅದರಲ್ಲಿ ವ್ಯಕ್ತಿ ಮತ್ತು ಅವನ ಜೀವನವಿದೆ. ಅದು ಲೋಕವನ್ನು ಹೇಳುತ್ತದೆ. ಆಧ್ಯಾತ್ಮಿಕವಾದ ಜಗತ್ತನ್ನು ಹೇಳುತ್ತದೆ. ಅದು ಭಯಾನಕ ಮತ್ತು ಜೀವನವನ್ನು ಎದುರಿಸುವ ಸಂಗತಿಯೂ ಹೌದು. ಕಷ್ಟವಿದೆ. ಮನುಷ್ಯನು ಅದನ್ನು ಎದುರಿಸಲೇಬೇಕಾಗುತ್ತದೆ. ಅದರಲ್ಲಿ ಅದು

ಅವನಿಗೆ ಅತ್ಯಂತ ಅನಿವಾರ್ಯವಾದ ಪರಿಸ್ಥಿತಿಯೂ ಹೌದು. ಆಧುನಿಕ ಕಾದಂಬರಿಗಳು ದುರಂತವನ್ನು ಹೇಳುವ ಕ್ರಮಗಳು ಬೇರೆಯಾಗಿವೆ. ಅದರಲ್ಲಿ ದುರಂತವು ಸಮಸ್ಯೆಯು ವ್ಯಕ್ತಿ ಮತ್ತು ಸಮಾಜದ ನಡುವಣ ಸಂಘರ್ಷದಲ್ಲಿ ಹುಟ್ಟುತ್ತದೆ. ಆಧುನಿಕ ಜಗತ್ತಿನಲ್ಲಿ ದಿವಾಳಿಯಾಗುವುದೂ ಒಂದು ದುರಂತವೇ ಆಗಿದೆ. ವ್ಯಕ್ತಿ ಮತ್ತು ಅವನ ದುರಂತವನ್ನು ನಾವು ಬೇರೆ ಬೇರೆ ನೆಲೆಯಲ್ಲಿಯೂ ನೋಡಬಹುದು. ವ್ಯಕ್ತಿ ಅವನ ಪರಿಸರವು ಅವನನ್ನು ದುರಂತದ ನಾಯಕನನ್ನಾಗಿ ಮಾಡುತ್ತದೆ. ಅದರ ಪರಿಣಾಮವನ್ನು ಅವನು ಮಾತ್ರವೇ ವ್ಯಕ್ತಪಡಿಸುತ್ತಾನೆ. ಎರಡನೆಯದು ವ್ಯಕ್ತಿ ಮಾತ್ರವೇ ಅಲ್ಲ ಅವನ ಸಮಾಜವೇ ದುರಂತವನ್ನು ಅಪ್ಪಿಕೊಳ್ಳಬಹುದು. ಅದು ಮತ್ತೊಂದು ಬಗೆ. ಅನೇಕ ಸಂದರ್ಭದಲ್ಲಿ ನಿಸರ್ಗವೂ ದುರಂತವನ್ನು ಹೇಳುತ್ತಿರಬಹುದು. ಅದು ಸಾಧ್ಯ. ಪ್ರಾಚೀನವಾದ ದುರಂತ ನಾಟಕಗಳು ಒಂದು ಬಗೆಯ ದುರಂತವನ್ನು ಹೇಳುತ್ತವೆ. ಆದರೆ ಆಧುನಿಕ ಕಾದಂಬರಿಗಳು ಹೇಳುವ ದುರಂತಗಳು ಮತ್ತೊಂದು ರೀತಿಯಲ್ಲಿ ಇರುತ್ತವೆ. ಕಾರಂತರ ಕುಡಿಯರಕೂಸು ಕಾದಂಬರಿಯಲ್ಲಿ ಬರುವ ಕೆಲವು ಸಾವುಗಳೂ ದುರಂತವೇ. ಸಂಸ್ಕಾರ ಕಾದಂಬರಿಯಲ್ಲಿ ಬರುವ ನಾರಣಪ್ಪನ ಸಾವು ದುರಂತ ಮಾತ್ರವೇ ಅಲ್ಲ; ಅವನ ಹೆಣವನ್ನು ಶವಸಂಸ್ಕಾರವಾಗದ ರೀತಿಯು ಸೃಷ್ಟಿಯಾಗುವುದೂ ಒಂದು ಬಗೆಯಲ್ಲಿ ದುರಂತವೇ ಆಗುತ್ತದೆ. ಯಾವುದೇ ಅಪೇಕ್ಷೆ, ಬಯಕೆ ಅಥವಾ ಎತ್ತರಕ್ಕೆ ಏರಬೇಕೆಂಬ ಅರಿವು ಇಲ್ಲದೆ ಹೋದರೆ ಯಾವುದೇ ದುರಂತವು ಆಗಲಾರದು ಎಂದು ನೀಶೆಯು ಹೇಳುತ್ತಾನೆ. ಆದರೆ ಉದಾರವಾದವು ಮತ್ತೆ ಕೆಲವನ್ನು ಹೇಳುತ್ತದೆ. ವ್ಯಕ್ತಿಯು ತಳಮಟ್ಟವನ್ನು ಹೊಂದಿದ್ದರೆ ಅವನನ್ನು ಕರುಣೆಯಿಂದ ಮೇಲೆ ಎತ್ತಬಹುದು ಎಂದು ಅದು ನಂಬುತ್ತದೆ. ದುರಂತವು ವ್ಯಕ್ತಿಯು ಸಾಧ್ಯತೆಯ ಲೋಪವನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿಯು ಚೇತರಿಸಿಕೊಳ್ಳದ ಸ್ಥಿತಿಯು ನಿರ್ಮಾಣವಾಗುತ್ತದೆ. ಆದರೆ ಒಂದು ಹಂತದಲ್ಲಿ ವ್ಯಕ್ತಿ ಮತ್ತು ಅವನ ನಿಲುವು ಮಾತ್ರ ಮುಖ್ಯವಾಗುತ್ತದೆ. ಅವನು ತನಗೆ ಸಾಧ್ಯವಾದಷ್ಟು ಎತ್ತರಕ್ಕೆ ಏರುತ್ತಾನೆ. ಆದರೆ ಅದರ ನಡುವೆಯೇ ಅವನು ಸೋಲುತ್ತಾನೆ. ವ್ಯಕ್ತಿ ಮತ್ತು ಅವನ ಎತ್ತರವೇ ಇಲ್ಲಿ ಬಹಳ ಮುಖ್ಯ. ಯಾವುದೇ ನೆರವು ಇಲ್ಲದೆ ವ್ಯಕ್ತಿಯು ಏರಲು ಸಾಧ್ಯ ಎನ್ನುವುದನ್ನು ಅದು ಹೇಳುತ್ತದೆ. ವ್ಯಕ್ತಿ ಮತ್ತು ಅವನ ಘನತೆಯನ್ನು ಅದು ಹೇಳುವುದೇ ವಿಭಿನ್ನವಾಗಿ. ಅದರಲ್ಲಿ ಘನತೆ ಮತ್ತು ಅದರ ಸಾರ ರೂಪವೂ ಇರುತ್ತದೆ. ಮತ್ತು ಅದರಲ್ಲಿ ಅವನು ಮೇಲೆ ಏರುವುದು ನಿಜವಾದ ತನ್ನ ಸಾಮರ್ಥ್ಯದಿಂದ. ಗ್ರೀಕ್ ದುರಂತ ನಾಟಕವು ಹೇಳುವುದು ಒಂದು ರಾಷ್ಟ್ರದ ಇತಿಹಾಸವನ್ನೂ ಹೌದು. ಆದ್ದರಿಂದ ಅದರಲ್ಲಿ ಬರುವ ದುರಂತವು ಒಂದು ರೀತಿಯಲ್ಲಿ ಇರುತ್ತದೆ. ಮತ್ತು ಅದನ್ನು ಜನಾಂಗ ಮತ್ತು ಅದರ ಸ್ವರೂಪದ ಹಿನ್ನೆಲೆಯಲ್ಲಿಯೂ ಕಾಣಬಹುದು. ಅದರಲ್ಲಿ ಅದರದೇ ಆದ ಅವಕಾಶದ ಕಲ್ಪನೆಯೂ ಇದೆ. ಕಾಲವನ್ನು ಅದು ನಿರ್ದಿಷ್ಟವಾಗಿಯೂ ಹೇಳುತ್ತದೆ. ದುರಂತ ನಾಟಕವು ನಿರ್ದಿಷ್ಟವಾದ ಮೌಲ್ಯವನ್ನು ಹೇಳುತ್ತದೆ. ಆದರೆ ದುರಂತವನ್ನು

ನೋಡುವಾಗ ಅದರ ಸ್ವರೂಪವನ್ನು ಗಮನಿಸಿದರೆ ಅದರಲ್ಲಿ ಬರುವ ನಾಯಕನು ನಿಜವಾದ ಸುಖವನ್ನು ಅನುಭವಿಸುವುದೇ ಇಲ್ಲ. ಅವನದು ಸಂಘರ್ಷಮಯವಾದ ಜೀವನವೂ ಹೌದು. ಅದರಲ್ಲಿ ಭ್ರಮೆಯು ಕೂಡಾ ಅಷ್ಟೇ ಮುಖ್ಯ. ಆದರೂ ಅವನು ಒಂಟಿಯಾಗುತ್ತಾನೆ. ವ್ಯವಸ್ಥೆಯೇ ಅವನನ್ನು ಬಲಿಪಶು ಮಾಡುತ್ತದೆ. ಹೀಗಾಗಿ ಅದರ ಪಾತ್ರವೇ ಅತ್ಯಂತ ಭಿನ್ನವಾಗುತ್ತದೆ. ಅಧಿಕಾರದ ಸ್ವರೂಪವೂ ಅದರಲ್ಲಿ ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ಪರಿಸ್ಥಿತಿಯೂ ಕೂಡಾ ದುರಂತಕ್ಕೆ ಕಾರಣವಾಗುತ್ತದೆ. ನಾಯಕ ಮತ್ತು ಅವನ ಜೀವನ ಕ್ರಮವೂ ಇಲ್ಲಿ ಪ್ರಧಾನವಾಗುತ್ತದೆ. ಯಾವುದೋ ಒಂದು ಗಳಿಗೆಯ ಕಾರಣಕ್ಕೆ ದುರಂತವಾಗುತ್ತದೆ. ಮತ್ತು ಅದು ಅವನ ದೌರ್ಬಲ್ಯ. ಅದು ಕೆಟ್ಟ ಗಳಿಗೆ. ದುರಂತ ನಾಯಕನು ಆಗುವುದಕ್ಕೆ ಯಾವುದೇ ಒಂದು ಕಾರಣವು ಸಾಕಾಗುತ್ತದೆ. ಅದು ಅವನ ಜೀವನದ ತಿರುವಿಗೆ ಕಾರಣವಾಗುತ್ತದೆ. ಅರಿಸ್ಟಾಟಲನ ಕೆಥಾರ್ಸಿಸ್ ಸಿದ್ಧಾಂತವನ್ನು ಅನ್ವಯಿಸಿದರೆ ನಿಜವಾಗಿಯೂ ಒಂದು ರೀತಿಯ ಸಂತೋಷವನ್ನು ದುರಂತ ನಾಟಕವು ಕೊಡುತ್ತದೆ ಎಂದು ಕಾಲ್ಡ್‌ವೆಲ್ ಹೇಳುತ್ತಾನೆ. ನಿಜವಾಗಿಯೂ ಅದರ ನಾಡಿಮಿಡಿತವೇ ಬೇರೆಯಾಗುತ್ತದೆ. ಅದರಲ್ಲಿ ದುರಂತದಿಂದ ವ್ಯಕ್ತಿಯು ಹೇಗೆ ಮೇಲೆ ಬರಬೇಕೆಂಬ ಸೂಚನೆಯೂ ಇದೆ. ಅದರಲ್ಲಿ ಬರುವ ನೈತಿಕ ಪ್ರಶ್ನೆಯು ನೈತಿಕವಾದದ್ದೂ ಹೌದು. ಒಂದು ಅರ್ಥದಲ್ಲಿ ಅದು ಜೀವನ ಮತ್ತು ಅದರ ಕೆಲವು ನಿಯಮಗಳನ್ನು ಮುರಿಯುತ್ತದೆ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದು ತಿಳಿಯುವುದು ನಾಯಕನಿಂದಲೇ ಹೊರತು ಬೇರೆಯವರಿಂದ ಅಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಅದರಲ್ಲಿ ಬರುವ ಸಂವೇದನೆಯು ಆಧುನಿಕವಾದದ್ದೂ ಅಲ್ಲ. ಜೀವನ ಮತ್ತು ಅದರಲ್ಲಿ ಉಂಟಾಗುವ ಬಿರುಕು ದುರಂತದ ನಿಜವಾದ ಸ್ವರೂಪವನ್ನು ಹೇಳುತ್ತದೆ. ವ್ಯಕ್ತಿ ಮತ್ತು ಅವನ ದುರಂತವು ಬರೀ ದೇಹಕ್ಕೆ ಸಂಬಂಧಪಟ್ಟಿಲ್ಲ. ದುರಂತದ ನಾಯಕನು ಬರೀ ಸಾಮಾನ್ಯನಾದ ವ್ಯಕ್ತಿಯೂ ಅಲ್ಲ. ಅವನು ಮನುಷ್ಯನಾಗಿದ್ದಾನೆ ಮತ್ತು ಅದರಲ್ಲಿ ಅವನು ಸೋತಿದ್ದಾನೆ. ಆದರೆ ಒಂದು ಕೇಂದ್ರದ ಸುತ್ತ ಅವನ ಜೀವನವೂ ಇದೆ. ವಾಸ್ತವವಾಗಿ ವ್ಯಕ್ತಿ ಮತ್ತು ಅವನ ನಿಲುವುಗಳೇ ದುರಂತವನ್ನು ಹೇಳುತ್ತದೆ. ವ್ಯಕ್ತಿಯ ಜೀವನದ ಸುತ್ತವೇ ನಾಟಕವು ನಡೆಯತ್ತದೆ. ಜೀವನವು ಹೇಗೆ ಅವನತಿಮುಖಿಯಾಗುತ್ತದೆ ಎನ್ನುವುದೇ ಇಲ್ಲಿ ಮುಖ್ಯ. ಆದರೆ ಹೇಗೆ ಅವಮಾನ ಮತ್ತು ದುರಂತವು ಸಂಭವಿಸಿಕೊಳ್ಳುತ್ತದೆ ಎನ್ನುವುದಕ್ಕಿಂತ ದುರಂತದಲ್ಲಿ ಔನ್ನತ್ಯದ ಪ್ರಶ್ನೆಯೂ ಬರುತ್ತದೆ. ಜೀವನ ಮತ್ತು ಅದರ ಘಟನಾವಳಿಗಳ ಚಿತ್ರಣವೂ ಹೌದು. ಜೀವನ ಮತ್ತು ಅದರ ಘನಘೋರವಾದ ಸತ್ಯವನ್ನು ಅದು ಹೇಳುತ್ತದೆ. ಒಂದು ಅರ್ಥದಲ್ಲಿ ಅದು ಮನಸ್ಸು ಮತ್ತು ಅದರ ತಲ್ಲಣಗಳನ್ನು ಹೇಳುತ್ತದೆ. ಅದು ಚಾರಿತ್ರಿಕವಾಗಿಯೂ ಮಹತ್ವದ್ದು. ಜೀವನ ಮತ್ತು ಅದರ ಅರ್ಥಹೀನತೆಯನ್ನು ಅದು ವಿವರಿಸುತ್ತದೆ. ಜೀವನದಲ್ಲಿ ಕೆಲವು ಸಂಗತಿಗಳನ್ನು ನಾವು ವಿವರಿಸಲು ಸಾಧ್ಯ. ಆದರೆ ಮತ್ತೆ ಕೆಲವನ್ನು ನಾವು

ವಿವರಿಸಿಕೊಳ್ಳುವುದು ಅತ್ಯಂತ ಕಷ್ಟವೆಂದು ಅದು ಹೇಳುತ್ತದೆ. ಜೀವನದ ಸತ್ಯವನ್ನು ಅದು ತೋರಿಸುವುದು ಒಂದು ಸುಖದ ರೂಪಕವಾಗಿ ಅಲ್ಲವೆನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಯಾವುದಕ್ಕೆ ವ್ಯಕ್ತಿಯು ಕಷ್ಟಪಡುತ್ತಾನೆ ಮತ್ತು ಅದರ ಪರಿಣಾಮವು ಯಾವ ಬಗೆಯದು ಎನ್ನುವುದೇ ಇದರಲ್ಲಿ ಮುಖ್ಯವಾಗುತ್ತದೆ. ವಾಸ್ತವವಾಗಿ ದುರಂತ ನಾಟಕವು ವ್ಯಕ್ಯಿಯ ಹೃದಯ ಮತ್ತು ಅದರ ಭಾಷೆಯನ್ನು ಹೇಳುತ್ತದೆ. ನಾಟಕದ ಕೊನೆಗೆ ಬರುವ ಸಾವು ಅಥವಾ ಪಶ್ಚಾತಾಪಕ್ಕೂ ಒಂದು ನೆಲೆಯು ಇರುತ್ತದೆ. ಕಾರಣ ರಹಿತವಾಗಿ ಅದು ನಡೆಯುವುದೂ ಇಲ್ಲ. ಅದಕ್ಕೆ ಉದ್ದೇಶವಿದೆ. ಅದೇ ನಮಗೆ ಕೆಲವು ಪ್ರಶ್ನೆಗಳನ್ನು ಎತ್ತುತ್ತದೆ. ವ್ಯಕ್ತಿಯು ಖಿನ್ನತೆಗೆ ಗುರಿಯಾಗುತ್ತಾನೆ. ಇದಕ್ಕೆ ಒಂದು ಉದಾಹರಣೆಯನ್ನು ಅನಂತಮೂರ್ತಿಯವರ ಬರಹದಿಂದ ಕೊಡಬಹುದು. "ನಾಯಿ ಬೊಗಳಿದ ಶಬ್ದ ಕೇಳಿ ಎಲ್ಲ ರಾತ್ರೆಯ ಹಾಗೆ ಇದೂ ಒಂದು ರಾತ್ರೆ ಎನ್ನಿಸಿ ಚಾವಡಿಯ ಮೆಟ್ಟಿಲನ್ನು ಹತ್ತಿದ್ದಳು. ಚಾಚಿದ ಕೈಗೆ ಬಾಗಿಲು ತೆರೆದದ್ದು ತಿಳಿದು : 'ಅಯ್ಯೋ ಪರಮಾತ್ಮ, ನರಿ ನಾಯಿಯೇನಾದರೂ ನುಗ್ಗಿ ಅವನ ಶವವನ್ನು...' ಎಂದು ತಾಪವಾಗಿ ಭಯವನ್ನೆಲ್ಲ ಮರೆತು, ಕ್ಷಣದಲ್ಲಿ ಒಳನುಗ್ಗಿ, ಅಭ್ಯಾಸಬಲದಿಂದ ಗೂಡಿನಲ್ಲಿದ್ದ ಬೆಂಕಿಪೊಟ್ಟಣ ತೆರೆದು ಲಾಟೀನು ಹತ್ತಿಸಿದಳು. ದುರ್ವಾಸನೆ, ಸತ್ತು ಕೊಳೆಯುತ್ತಿದ್ದ ಇಲಿ. ತನಗಾಗಿ ಅಗ್ರಹಾರದಲ್ಲೆಲ್ಲ ನಿಷ್ಠುರ ಕಟ್ಟಿಕೊಂಡ ನಾರಣಪ್ಪನ ಶವವನ್ನ ಅನಾಥವಾಗಿಬಿಟ್ಟೆನಲ್ಲ ಎಂದು ದುಃಖವಾಗಿ ಮಹಡಿ ಹತ್ತಿ ಹೋದಳು. ಲೋಭಾನದ ಹೊಗೆ ಹಾಕಬೇಕೆಂದುಕೊಂಡಳು. ಹೆಣ ನಾರುತ್ತಿತ್ತು. ಬಾತುಕೊಂಡು ವಿಕಾರವಾಗಿ ವಿರೂಪವಾದ ಶವದ ಮುಖ ಕಂಡು ಹೊಟ್ಟೆಯೆಲ್ಲ ಕಲಸಿ, ಕಿಟಾರನೆ ಕಿರುಚಿ ಹೊರಕ್ಕೋಡಿದಳು. ಅಲ್ಲಿ ಮೇಲಿರುವುದಕ್ಕೂ, ತನ್ನನ್ನು ಒಲಿದಿದ್ದವನಿಗೂ ಯಾವ ಸಂಬಂಧವೂ ಇಲ್ಲ, ಇಲ್ಲ ಎಂದು ಅವಳ ಜೀವ ಕೂಗಿತು." (ಯು.ಆರ್.ಅನಂತಮೂರ್ತಿ, ಸಂಸ್ಕಾರ, 2002, ಪುಟ. 56. ಅಕ್ಷರ ಪ್ರಕಾಶನ, ಸಾಗರ) ಚಂದ್ರಿಗೆ ಕೆಲವು ರೀತಿಯ ಮಂಪರು ಆವರಿಸುತ್ತದೆ. ಈ ದುರಂತದ ಹಿಂದಿನ ತತ್ವಜ್ಞಾನವೂ ಸಂಕೀರ್ಣವಾಗಿದೆ. ವ್ಯಕ್ತಿಯು ವಾಸ್ತವವಾಗಿ ನಿಜ ಜೀವನದ ಬಲಿಪಶು. ಅವನಿಗೆ ಜೀವನ ಮತ್ತು ಅದರ ಸಂತೋಷವೇ ಇಲ್ಲವಾಗಿದೆ. ಅದು ಕರಗಿಹೋಗಿದೆ. ಅರಿವು ಇದ್ದೋ ಅಥವಾ ಇಲ್ಲದೆಯೋ ವ್ಯಕ್ತಿಯು ದುರಂತವನ್ನು ಅನುಭವಿಸುತ್ತಾನೆ. ವಿಷಾದ ಮತ್ತು ಕರುಣೆಗೆ ಬಹಳ ದೊಡ್ಡದಾದ ಚೌಕಟ್ಟೂ ಇದೆ. ದುರಂತವನ್ನು ನಾವು ಗುರುತಿಸಬಲ್ಲೆವು. ಜೀವನವೇ ಅರ್ಥಹೀನವೆಂದು ನಮಗೆ ಆಧುನಿಕ ಬರಹಗಳು ಹೇಳುತ್ತವೆ. ಇವೂ ದುರಂತದ ಸ್ವರೂಪವನ್ನು ಹೇಳುತ್ತವೆ. ಅಣುಬಾಂಬಿನಿಂದ ಜನರು ಸತ್ತರು. ಅದು ದುರಂತ, ಕಮುವಿನಲ್ಲಿ ಯಾವುದೇ ಅರ್ಥವಿಲ್ಲದೇ ಇರುವ ಜಗತ್ತು ಇದೆ. ಶಿಕಾರಿ ಕಾದಂಬರಿಯಲ್ಲಿ ಒಂದು ಭಯವೂ ಇದೆ. ಇವೆಲ್ಲಾ ದುರಂತಗಳೇ. ವಿಯಾಟ್ನಾಂ ಯುದ್ಧವು ಜೀವನದ ನಂಬಿಕೆಯನ್ನೇ ಅಲುಗಾಡಿಸಿತ್ತು. ಅಂದರೆ ದುರಂತವು ಎಲ್ಲೋ ಒಂದು ಕಡೆಗೆ ನಡೆಗೆ ನಡೆಯತ್ತದೆ ಎಂದು ಹೇಳುವಂತಿಲ್ಲ. ಮಹಾಯುದ್ಧದ ಪರಿಣಾಮ ಮತ್ತು ಅದರ

ಅನುಭವಗಳು ಸುಖವನ್ನು ಹೇಳಿಲ್ಲ. ಜೀವನವು ಹೀಗಿದೆಯೇ ಎಂದು ಕೇಳುವಂತೆ ಅದು ಮಾಡಿತು. ಜೀವನದ ಅನೇಕ ಸಂಗತಿಗಳು ತರ್ಕ ಬದ್ಧವಲ್ಲವೆಂದು ಕಮೂ ಹೇಳುತ್ತಾನೆ. ಅಸಾಂಗತ್ಯವು ಹೇಗೆ ಇರುತ್ತದೆ ಎಂದು ಅವನು ವಿವರಿಸುತ್ತಾನೆ. ಜಗತ್ತಿಗೆ ಯಾವುದೇ ಒಂದು ನಿಯಮವು ಇಲ್ಲವೆನ್ನುವುದು ಅವನ ಅಭಿಪ್ರಾಯವಾಗಿದೆ. ಸಾಂಪ್ರದಾಯಿಕವಾದ ದುರಂತವು ಅವನಿಗೆ ಮುಖ್ಯವಲ್ಲ. ವಾಸ್ತವವಾಗಿ ಅನೇಕ ದುರಂತ ನಾಟಕಗಳು ನಮಗೆ ಬೇರೆ ಬೇರೆ ಪಾಠವನ್ನು ಹೇಳಿವೆ. ಜೀವನ ಮತ್ತು ಅದರ ಸ್ವರೂಪವನ್ನು ಅವುಗಳು ನಿರೂಪಿಸಿವೆ. ಅದು ತಾನು ಬರುತ್ತೇನೆ ಎಂದು ಮೊದಲೇ ಹೇಳುವುದು ಇಲ್ಲ. ಸಾಮೂಹಿಕ ದುರಂತಗಳು ಮತ್ತೊಂದು ಬಗೆಯವು. ಅದರಲ್ಲಿಯೂ ಒಂದು ಸೂತ್ರವು ಮಾತ್ರವೇ ಕೆಲಸವನ್ನು ಮಾಡಿಲ್ಲ. ಎಷ್ಟೋ ಸರ್ತಿ ವ್ಯಕ್ತಿಯ ದುರಂತವು ಹೊಂದಾಣಿಕೆಯು ಇಲ್ಲದೆ ನಡೆದು ಹೋಗುತ್ತದೆ. ಅಸಹಕಾರ, ಅಹಂಕಾರದಿಂದ ಆ ರೀತಿಯಾಗುತ್ತದೆ. ಇಡೀ ಸಮಾಜದ ಬಗ್ಗೆ ಅಸಹನೆಯು ಇರುವವನು ಆತ್ಮಹತ್ಯೆಯನ್ನು ಮಾಡಿಕೊಂಡರೆ ಅದು ಅವನ ದುರಂತವೂ ಆಗುತ್ತದೆ. ದುರಂತಕ್ಕೆ ಕೆಲವು ಸಂದರ್ಭದಲ್ಲಿ ನಂಬಿಕೆಗಳ ಕುಸಿತವೂ ಕಾರಣವಾಗುತ್ತದೆ. ಅನೇಕ ದುರಂತ ನಾಟಕಗಳಲ್ಲಿ ವಿಧಿಯು ಕೈಕೊಟ್ಟ ಅನುಭವ ಇರುತ್ತದೆ. ಯಾವುದೋ ಒಂದು ಹಿಂಸೆಯಿಂದ ವ್ಯಕ್ತಿಯು ಅದನ್ನು ಎದುರಿಸಲಾಗದೇ ದುರಂತವನ್ನು ಅಪ್ಪಿಕೊಳ್ಳುತ್ತಾನೆ. ಸಂಸ್ಥೆಗಳು ಹೇಳುವ ಅರ್ಥಪೂರ್ಣತೆಯು ಇಲ್ಲದೇ ಹೋದರೂ ಅಲ್ಲಿ ದುರಂತವಾಗುತ್ತದೆ. ಅದರ ಹಿಂದೆ ಕಾರಣವಂತೂ ಇದ್ದೇ ಇರುತ್ತದೆ. ವ್ಯಕ್ತಿ ಮತ್ತು ಅವನ ನೋವಿನ ಅನೇಕ ರೂಪಗಳು ಅದರಲ್ಲಿ ವ್ಯಕ್ತವಾಗುತ್ತವೆ. ನೋವಿನ ವಿರಾಟ ದರ್ಶನವೂ ಹೌದು. ಅದರೆ ಅದರಲ್ಲಿ ಬರುವ ಸಮಸ್ಯೆಯು ವ್ಯಕ್ತಿಯದೇ ಅಥವಾ ದೇವರದ್ದೇ ಎಂದು ಹೇಳುವುದು ಅತ್ಯಂತ ಕಷ್ಟ. ಮುಗ್ದತೆಯಿಂದ ವ್ಯಕ್ತಿಯು ದುರಂತವನ್ನು ಅನುಭವಿಸುವುದೇ ಇಲ್ಲ. ವ್ಯಕ್ತಿ ಮತ್ತು ಅವನ ದುರಂತವು ಒಂದು ಮೌಲ್ಯವನ್ನು ಹೇಳುತ್ತದೆ. ಮತ್ತು ಅದರಲ್ಲಿ ವ್ಯಕ್ತಿ ಮತ್ತು ಅವನ ಅಸ್ತಿತ್ವದ ಪ್ರಶ್ನೆಯೂ ಇರುತ್ತದೆ. ಸ್ವಾತಂತ್ರ್ಯ, ಘನತೆ, ಧೈರ್ಯ, ವಾಸ್ತವ, ಔನ್ನತ್ಯ ಮುಂತಾದವುಗಳ ಪ್ರಶ್ನೆಗಳನ್ನು ದುರಂತ ನಾಟಕವು ಎತ್ತುತ್ತದೆ. ಅವುಗಳ ಸಂವೇದನಾಶೀಲತೆಯು ಬೇರೆ. ಘನತೆಯು ಇರುವ ವ್ಯಕ್ತಿಯು ಹೇಗೆ ವರ್ತಿಸುತ್ತಾನೆಯೋ ಅದಕ್ಕೆ ಸರಿಯಾಗಿಯೇ ಅವನು ಇರುತ್ತಾನೆ. ಅಂದರೆ ದುರಂತದ ನಾಯಕನು ಗುಮಾಸ್ತನಲ್ಲ. ದುರಂತದಲ್ಲಿ ಬರುವ ಪರಿಸರದ ಪ್ರಶ್ನೆಯೂ ಅತ್ಯಂತ ಸರಳವಾದ ಪ್ರಶ್ನೆಯೂ ಅಲ್ಲ. ಅದು ಪೂರಕವಾಗಿಯೂ ಕೆಲಸವನ್ನು ಮಾಡುತ್ತದೆ. ನಾಟಕದಲ್ಲಿ ಬರುವ ದುರಂತವು ಘಟಿಸುತ್ತದೆ. ಮತ್ತು ಅದನ್ನು ನಿರಾಕರಿಸಲು ಬರುವುದೇ ಇಲ್ಲ. ಅದು ವ್ಯಕ್ತಿಯ ಅನುಭವವೂ ಹೌದು. ದುರಂತ ಮತ್ತು ಅದರ ಅನುಭವವನ್ನು ನೋಡುವಾಗ ಅದರ ಸ್ವರೂಪದಲ್ಲಿಯೇ ಬೇರೆ ಸಂಗತಿಗಳು ಅಡಕವಾಗಿ ಇರುವುದನ್ನು ನಾವು ಕಾಣುತ್ತೇವೆ. ನಾಯಕನಿಗೆ ಒಂದು ಶಕ್ತಿಯೂ ಇದೆ. ಅದನ್ನು ನಾವು ತಳ್ಳಿ

ಹಾಕುವುದೂ ಇಲ್ಲ. ವ್ಯಕ್ತಿಯ ಘನತೆ ಮತ್ತು ದೈವ ಅಥವಾ ವಿಧಿಯ ಪ್ರಶ್ನೆಯು ಸಂಕೀರ್ಣವೂ ಆಗುತ್ತದೆ. ವಾಸ್ತವವಾಗಿ ದುರಂತವನ್ನು ನಾವು ಬೇರೆ ಬೇರೆ ರೀತಿಯಲ್ಲಿ ನೋಡಬಹುದು. ಅದು ವ್ಯಕ್ತಿ ಮತ್ತು ಅವನ ಪರಿಣಾಮವೂ ಇರಬಹುದು. ಆದರೆ ಅದರಲ್ಲಿ ಬದುಕಿನ ಕ್ರೂರವಾದ ವ್ಯಂಗ್ಯವು ಇರುತ್ತದೆ. ವ್ಯಕ್ತಿ ಮತ್ತು ಅವನ ದುರಂತವನ್ನು ನಾವು ಬರೀ ನಾಟಕಕ್ಕೆ ಮಾತ್ರವೇ ಅನ್ವಯವಾಗುತ್ತದೆ ಎಂದು ಭಾವಿಸಬೇಕಾಗಿಯೂ ಇಲ್ಲ. ವಾಸ್ತವವಾಗಿ ದುರಂತ ನಾಯಕನು ತನಗೆ ಬೇಕಾದ ಆಯ್ಕೆಯನ್ನು ಇಟ್ಟುಕೊಂಡಿರುತ್ತಾನೆ. ಅದು ಅವನಿಗೆ ಅತ್ಯಂತ ಅಗತ್ಯವೂ ಹೌದು. ಅವನ ಆಯ್ಕೆಯೇ ಅವನಿಗೆ ಮುಳುವಾಗುತ್ತದೆ. ಅವನು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಈಡಿಪಸ್ ನಾಟಕದಲ್ಲಿ ವ್ಯಕ್ತಿಯು ಸೋಲುತ್ತಾನೆ ಮತ್ತು ವಿಧಿಯು ಗೆಲ್ಲುತ್ತದೆ. ಆದರೆ ಅವನು ಸ್ವರ್ಗದ ದೇವತೆಗಳಿಂದ ನಿರಾಕರಣೆಗೆ ಗುರಿಯೂ ಆಗಿದ್ದಾನೆ. ಅವನು ಮುಗ್ಧನೂ ಆಗಿದ್ದಾನೆ. ಮತ್ತು ಅವನಿಗೆ ಅನೇಕ ವಿಷಯಗಳು ಕೊನೆಯತನಕ ತಿಳಿದಿಲ್ಲ. ಆದ್ದರಿಂದ ಅವನದು ಪ್ರಜ್ಞಾಪೂರ್ವಕವಾದ ಚಟುವಟಿಕೆಯೂ ಆಗಿಲ್ಲ. ಹಾಗೆಂದು ಅವನ ದುರಂತವು ಸಾಮಾನ್ಯವಾದದ್ದು ಅಲ್ಲ. ಅದು ಗಂಭೀರವಾದದ್ದು. ಪ್ರಾಯಶ್ಚಿತ್ತ ಮತ್ತು ಪಾಪವು ದೊರೆ ಈಡಿಪಸ್ ನಾಟಕದಲ್ಲಿ ಅತ್ಯಂತ ಸಂಕೀರ್ಣವಾಗಿದೆ. ಯಾವುದು ತಪ್ಪು ಮತ್ತು ಯಾಕೆ ತಪ್ಪು ಎನ್ನುವುದೇ ಇಲ್ಲಿ ಅತ್ಯಂತ ಗಂಭೀರವಾಗುತ್ತದೆ. ತಪ್ಪು ಮತ್ತು ಅದರ ಅರಿವು ಅವನಿಗೆ ಇದೆ. ಆ ಅರಿವು ಬರುವುದು ಕೊನೆಯಲ್ಲಿ. ಇಲ್ಲಿ ಗಮನಿಸಬೇಕಾದ ಮುಖ್ಯವಾದ ಸಂಗತಿಯೆಂದರೆ ಅವನು ಮೂಲತಃ ವ್ಯಕ್ತಿಯಾಗಿ ಒಳ್ಳೆಯವನೇ ಆಗಿರುತ್ತಾನೆ. ದುರಂತ ನಾಟಕದಲ್ಲಿ ಬರುವ ದುರಂತವು ಒಂದು ಕಾರಣಕ್ಕೆ ಆಗುವುದೇ ಇಲ್ಲವೆಂದು ಬಾರ್ತ್ ಹೇಳುತ್ತಾನೆ. ಈ ಅರ್ಥದಲ್ಲಿ ಈಡಿಪಸ್ ನಾಟಕದ ಸಂಗತಿಯು ಕೇವಲ ಏಕ ಕೇಂದ್ರಿತವಾಗಿಯೂ ಇಲ್ಲ. ಅವನಿಗೆ ವಾಸ್ತವವಾಗಿ ಯಾವುದೇ ಒಂದು ಸ್ವಾತಂತ್ರ್ಯವೇ ಇಲ್ಲ. ವಾಸ್ತವವಾಗಿ ಅವನ ಜೀವನವು ತಿರುಗುತ್ತಾ ಬಂದಿದೆ. ವಾಸ್ತವದ ಕಠೋರತೆಯೇ ಅವನನ್ನು ದುರಂತಕ್ಕೆ ಕಾರಣ ಮಾಡಿದೆ. ಒಂದು ನೋವನ್ನು ಎದುರು ಹಾಕಿಕೊಳ್ಳಲು ಸಾಧ್ಯವಾಗದೇ ಹೋಗಿದ್ದಾನೆ. ಅವನು ಪರಿವರ್ತನೆಗೆ ಕಾರಣವೂ ಆಗುತ್ತಾನೆ. ಒಂದು ನಿರ್ದಿಷ್ಟವಾದ ಮೌಲ್ಯಕ್ಕಾಗಿಯೇ ಅವನು ಕೊನೆಯತನಕ ಹೋರಾಟವನ್ನು ಮಾಡುತ್ತಾನೆ. ಆದ್ದರಿಂದ ಈ ನಾಟಕದಲ್ಲಿ ಕೇಡು ಯಾವುದು ಎನ್ನುವ ಪ್ರಶ್ನೆಯು ಬರುತ್ತದೆ. ಪಂಥಾಹ್ವಾನವೇ ಇಲ್ಲಿ ಮುಖ್ಯವಾಗುತ್ತದೆ. ಒಂದು ಆಹ್ವಾನ ಮತ್ತು ಒಂದು ದುರಂತವು ಇಲ್ಲಿ ಪ್ರಮುಖವಾದ ಆಶಯವೂ ಆಗಿದೆ. ಅಂದರೆ ಇಲ್ಲಿ ಪಂಥ ಮತ್ತು ಅದರ ಪರಿಣಾಮವು ಕಣ್ಣಿಗೆ ಕಟ್ಟುತ್ತದೆ. ವಾಸ್ತವವಾಗಿ ಅನೇಕ ದುರಂತ ನಾಟಕಗಳಲ್ಲಿ ಪಂಥ ಮತ್ತು ಅವಕಾಶವೆರಡೂ ಜೊತೆಗೆ ಇರುತ್ತವೆ. ವ್ಯಕ್ತಿಯು ಅನುಭವಿಸುವ ಯಾತನೆಗೆ ಇದರಲ್ಲಿ ಬೇರೆ ಬೇರೆ ಮುಖಗಳೂ ಇರುತ್ತವೆ. ದೇವತೆಗಳೇ ವ್ಯಕ್ತಿಯನ್ನು ಅನೇಕ ರೀತಿಯ ಹಿಂಸೆಗೆ ಗುರಿಪಡಿಸುವುದೇ ಇಲ್ಲಿ ಮುಖ್ಯವಾಗಿದೆ. ಜೀವನ ಮತ್ತು ಅದರ

ಕಠೋರತೆಯೆ ಇಲ್ಲಿ ಮುಖ್ಯವಾಗುತ್ತದೆ. ವ್ಯಕ್ತಿಯು ತ್ಯಾಗವನ್ನು ಮಾಡುತ್ತಾನೆ. ಓಡಿ ಹೋಗುತ್ತಾನೆ. ಆದರೆ ಅವನು ಯಾವ ಕಾರಣಕ್ಕೆ ಹೋಗಿದ್ದಾನೆಯೋ ಅದರ ಉದ್ದೇಶವೇ ಇಲ್ಲವಾಗುತ್ತದೆ. ದೊರೆ ಈಡಿಪಸ್ ನಾಟಕದಲ್ಲಿ ಬರುವ ಅತ್ಯಂತ ಮುಖ್ಯವಾದ ಪ್ರಶ್ನೆಯೆಂದರೆ ವ್ಯಕ್ತಿಯು ತಾಯಿಯನ್ನು ಮದುವೆ ಆಗಬಹುದೇ ಅಥವಾ ಅದು ಸರಿಯೇ? ಅನೇಕ ದುರಂತ ನಾಟಕಗಳಲ್ಲಿ ಜೀವನದ ಕೆಲವು ಸೋಲುಗಳೇ ದುರಂತಕ್ಕೆ ಕಾರಣವಾಗುತ್ತದೆ. ಕೇಡು ಮತ್ತು ದುಃಖವೆರಡೂ ಜೊತೆಯಲ್ಲಿ ಹೋಗುತ್ತವೆ. ಅನೇಕ ದುರಂತ ನಾಟಕಗಳಲ್ಲಿ ಜೀವನದ ಕೆಲವು ಸೋಲುಗಳೇ ದುರಂತಕ್ಕೆ ಕಾರಣವಾಗುತ್ತದೆ. ಕೇಡು ಮತ್ತು ದುಃಖವೆರಡೂ ಜೊತೆಯಲ್ಲಿ ಹೋಗುತ್ತವೆ. ವ್ಯಕ್ತಿಯು ಅವನಾಗಿಯೇ ಕೆಲವನ್ನು ಆರಿಸಿಕೊಳ್ಳಲಾರ. ಆಗುವುದನ್ನು ಅವನು ತಡೆಹಿಡಿಯಲಾರ. ನಂಬಿಕೆಗಳು ನಿಜವಾಗಿಯೂ ಬೇರೆಯಾಗುತ್ತವೆ. ಅದು ಅರ್ಥವನ್ನು ಕಳೆದುಕೊಳ್ಳುತ್ತವೆ. ಅದರಿಂದ ಅಂತಿಮವಾಗಿ ವ್ಯಕ್ತಿಯು ಜೀವನ್ಮುಕ್ತವಾದ ಸ್ಥಿತಿಯನ್ನು ತಲುಪುತ್ತಾನೆ. ದುರಂತ ನಾಟಕವು ಮೂಲಭೂತವಾಗಿ ದೇವತೆಗಳು ಮತ್ತು ಅವರ ಪರಾಕ್ರಮವನ್ನು ಹೇಳುತ್ತವೆ. ಅದೂ ಒಂದು ಬಗೆಯ ರಾಜಕಾರಣವೇ ಆಗಿದೆ. ಅನೇಕ ಸಂದರ್ಭದಲ್ಲಿ ದುರಂತವು ನಿರೂಪಣೆಯಲ್ಲಿ ವ್ಯಕ್ತವಾಗುತ್ತವೆ. ಮತ್ತೆ ಗಮನಿಸಬೇಕಾದ ಅಂಶವೆಂದರೆ ಅದರಲ್ಲಿ ಮನಸ್ಸು ಮತ್ತು ಅದರ ತಾಕಲಾಟವೂ ಇರುತ್ತದೆ. ವ್ಯಕ್ತಿಯು ಬಲಿಪಶುವಾಗುತ್ತಾನೆ. ಬಲಿಪಶುವಾಗುವ ವ್ಯಕ್ತಿ ಮತ್ತು ಅವನನ್ನು ಬಲಿಪಶು ಮಾಡುವ ದೇವತೆಗಳು ಅಥವಾ ವಿಧಿಯ ಗೆಲ್ಗೆಯೇ ಮುಖ್ಯವಾದ ಆಶಯವೂ ಆಗುತ್ತದೆ. ಇಡೀ ದುರಂತವು ಹೇಳುವುದೂ ಇದನ್ನು. ಯಾವುದು ಮನುಷ್ಯತ್ವ ಮತ್ತು ಸರಿಯಾದ ದಾರಿಯೇ? ಇದನ್ನು ಬಹುತೇಕ ನಾಟಕಗಳು ಕೇಳುತ್ತವೆ. ಗಂಡು ಮತ್ತು ಹೆಣ್ಣುಗಳ ನಡುವೆ ನಡೆಯುವ ತಾಕಲಾಟಗಳ ಸ್ವರೂಪವೇ ಬಹಳ ಮುಖ್ಯವಾಗುತ್ತವೆ. ಈಡಿಪಸ್ ನಾಟಕದಲ್ಲಿ ಬರುವ ಮಹತ್ವದ ಸಮಸ್ಯೆಯೇ ಇದು. ಅದು ಜೀವನದ ಘನಘೋರವಾದ ಸಮಸ್ಯೆಯನ್ನು ಹೇಳುತ್ತದೆ. ಪಾಪವೇ ವ್ಯಕ್ತಿಯನ್ನು ದುರಂತಕ್ಕೆ ಗುರಿ ಮಾಡುತ್ತದೆ. ವಾಸ್ತವವಾಗಿ ಪಾಪವನ್ನು ಮಾಡಲು ಅದರಲ್ಲಿ ಪ್ರಚೋದನೆಯೂ ಇದೆ. ಪಾಪ ಎನ್ನುವುದೇ ಅತ್ಯಂತ ಅಮಾನವೀಯ ಎನ್ನುವುದನ್ನು ಹೇಳಲು ಈ ನಾಟಕಗಳು ಪ್ರಯತ್ನವನ್ನು ಮಾಡುತ್ತವೆ. ಜೀವನದ ಮತ್ತೊಂದು ಮುಖವನ್ನು ಈ ಮೂಲಕವೇ ಪರಿಚಯಿಸುತ್ತವೆ. ಯಾವುದು ಸರಿಯಾಗಿದೆ ಮತ್ತು ಯಾವುದು ತಪ್ಪು ಎನ್ನುವುದನ್ನು ಇವುಗಳಿಗೆ ಮುಖ್ಯ. ತುಂಬಾ ಸಂವೇದನೆಯನ್ನು ಈ ನಾಟಕಗಳು ಉಂಟು ಮಾಡುವುದೂ ಅಷ್ಟೇ ನಿಜ. ಕೆಲವು ದುರಂತ ನಾಟಕಗಳು ಸಾವು ಮತ್ತು ಅದರ ಸತ್ಯವನ್ನು ನಮಗೆ ಹೇಳುತ್ತವೆ. ವ್ಯಕ್ತಿಯು ದುರಂತಕ್ಕೆ ಗುರಿಯಾಗುವುದು ಮತ್ತು ಅದರ ಪರಿಣಾಮಗಳನ್ನು ಹೇಳುವುದೇ ಈ ನಾಟಕಗಳ ಮುಖ್ಯವಾದ ಆಶಯವೂ ಹೌದು. ವ್ಯಕ್ತಿ ಮತ್ತು ಅವನ ಸನ್ನಿವೇಶ ಹಾಗೂ ಅವನ ದುರಂತಗಳಿಗೆ ಇದರಲ್ಲಿ ಬೇರೆ ಆಯಾಮಗಳೂ ಇರುತ್ತವೆ. ಮನುಷ್ಯ ಸಮಾಜದ ಅತ್ಯಂತ ದೊಡ್ಡ ನಿರೂಪಣೆಯನ್ನು ಇವುಗಳು ಮಾಡುತ್ತವೆ. ಮನುಷ್ಯ ಮತ್ತು ಅವನ

ದಾರಿಗಳು ಹಾಗೂ ಅದರಲ್ಲಿ ಅವನು ಎದುರಾಗುವ ಸಂಕಟಗಳು ಇದರಲ್ಲಿ ವ್ಯಕ್ತವಾಗುತ್ತವೆ. ದುರಂತ ನಾಟಕಗಳು ಮೂಲಭೂತವಾಗಿ ಚರಿತ್ರೆಯ ಅನೇಕ ಸಂಗತಿಗಳನ್ನು ಹೇಳುತ್ತವೆ. ವಾಸ್ತವವಾಗಿ ದುರಂತವೇ ನೋಡುಗರನ್ನು ಆವರಿಸಿಕೊಳ್ಳುತ್ತವೆ. ಅದರ ಅನುಭವವು ಅವರಿಗೆ ಆಗುತ್ತದೆ. ಅದನ್ನೇ ನಾವು ದುರಂತದ ಭಾವ (ಟ್ರಾಜಿಕ್ ಫೀಲಿಂಗ್) ಎಂದು ಹೇಳುತ್ತೇವೆ. ಇಲ್ಲಿ ಮತ್ತೆ ಕನ್ನಡದ್ದೇ ಆದ ಒಂದು ಉದಾಹರಣೆಯನ್ನು ಹೇಳುವುದಿದ್ದರೆ ಅಡಿಗರ ಭೂಮಿಗೀತವೂ ಒಂದು ಬಗೆಯಲ್ಲಿ ದುರಂತದ ಭಾವ ಇರುವ ಪದ್ಯವಾಗಿದೆ. ಅಡಿಗರ ಭೂಮಿಗೀತದಲ್ಲಿ ಬರುವ ನಾಯಕನೂ ಎದುರಿಸುವ ಸಮಸ್ಯೆಗಳು ಅವನನ್ನು ದುರಂತಕ್ಕೆ ಕಾರಣ ಮಾಡುತ್ತದೆ. ನೆಲತಾಯಿ ಮಲತಾಯಿ ಎನ್ನುವುದು ಅದರಲ್ಲಿ ಬರುವ ರೂಪಕಗಳು ಕೂಡಾ ಮಹತ್ವದ್ದೇ ಆಗಿದೆ. ಅದರಲ್ಲಿ ಬರುವ ಟ್ರಾಜಿಡಿ ದೃಶ್ಯಗಳು ಕೂಡಾ ಅದನ್ನೇ ಹೇಳುತ್ತದೆ. ಯಾವುದನ್ನು ನಾವು ಈಗ ದುರಂತದ ಭಾವನೆಗಳು ಮತ್ತು ಅದರ ದೃಶ್ಯಗಳು ಎಂದು ಹೇಳುತ್ತೇವೆಯೋ ಅದು ಬದಲಾಗುತ್ತಾ ಹೋಗುತ್ತದೆ. ಅದರಲ್ಲಿ ತಾರತಮ್ಯಗಳೂ ಇರುತ್ತವೆ. ಎರಡನೆಯ ಮಹಾಯುದ್ಧದ ತರುವಾಯ ಈ ಜಗತ್ತು ಅನೇಕವನ್ನು ಕಂಡಿದೆ. ಅದರ ಪ್ರತಿಫಲನವು ಒಂದು ರೀತಿಯದು ಅಲ್ಲ. ಆಗಿನ ನಮ್ಮ ನೈತಿಕ ಕಾಳಜಿಗಳು ಯಾವ ಬಗೆಯದು ಎಂದೂ ಯೋಚಿಸಬೇಕಾಗುತ್ತದೆ. ಅದರ ಅನಂತರ ನಿರುದ್ಯೋಗವು ನಮ್ಮನ್ನು ಮತ್ತೆ ಮತ್ತೆ ಚಿಂತಿಸುವಂತೆ ಮಾಡಿತು. ಅನೇಕ ಮೌಲ್ಯಗಳು ಕುಸಿತವಾದವು. ಮನುಷ್ಯರ ನಡವಳಿಕೆಗಳಲ್ಲಿ ಬದಲಾವಣೆಯು ಕಾಣಿಸಿಕೊಂಡವು. ಜೀವನ ಮತ್ತು ಅದರ ಕಾಳಜಿಗಳಲ್ಲಿ ವ್ಯತ್ಯಾಸವು ಕಾಣಿಸಿತು. ವಾಸ್ತವವಾಗಿ ಕ್ರಿಶ್ಚಿಯಾನಿಟಿಯು ಹೇಳುವ ಸ್ವರ್ಗ ಸಮಾನತೆಯ ಆಶಯವನ್ನು ಕಾಣುವ ಮಾರ್ಕ್ಸ್‌ವಾದದಲ್ಲಿ ಅನೇಕ ವ್ಯತ್ಯಾಸವಿದೆ. ಆದರೆ ಕಾರ್ಮಿಕರ ರಾಜ್ಯವು ಬಂದರೆ ಎಲ್ಲಿ ದುರಂತವಾಗುತ್ತದೆಯೋ ಎಂದು ಹೇಳುವವರಿಗೆ ಯಾವ ಕೊರತೆಯೂ ಇಲ್ಲ. ಮಾರ್ಕ್ಸ್‌ವಾದವು ಜನರ ರಾಜ್ಯವನ್ನು ಹೇಳುತ್ತದೆ. ಅದರಲ್ಲಿ ಸ್ಪಷ್ಟವಾದ ಒಂದು ಆಶಯವೂ ಇದೆ. ಅದಕ್ಕೆ ರೈತರು ಮುಖ್ಯ. ದುರಂತ ನಾಟಕವು ಧಾರ್ಮಿಕ ಮತ್ತು ಅಧಾರ್ಮಿಕವಾದ ವಿಷಯಗಳನ್ನು ಹೇಳುವುದು ಬೇರೆ ಕಾರಣಕ್ಕೆ. ಇಲ್ಲಿ ಮತ್ತೆ ದುರಂತ ನಾಟಕದ ಕುರಿತು ಹೇಳುವುದೂ ಉಚಿತ. ಅದರ ನಾಯಕನು ಕೆಲವು ವಿಷಯಗಳಲ್ಲಿಯಾದರೂ ತನ್ನದೇ ಆದ ಶಕ್ತಿಯನ್ನು ಹೊಂದಿದ್ದಾನೆ. ಅವನಿಗೆ ತನ್ನದೇ ಆದ ಗುಣಗಳೂ ಇವೆ. ಯಾವುದನ್ನು ನಾವು ದುರಂತ ಮತ್ತು ಅದರ ಛಾಯೆ ಎಂದು ಹೇಳುತ್ತೇವೆಯೋ ಅದರಲ್ಲಿಯೂ ನಿರ್ದಿಷ್ಟವಾದ ಮೌಲ್ಯಗಳು ಇರುತ್ತವೆ. ಯಾವುದನ್ನು ಈಗ ದುರಂತವೆಂದು ಹೇಳುತ್ತೇವೆಯೋ ಅದನ್ನು ಅತ್ಯಂತ ಕೂಲಂಕುಷವಾಗಿ ಪರಿಶೀಲಿಸಬೇಕಾಗುತ್ತದೆ ಎಂದು ಮಾರ್ಕ್ಸ್‌ವಾದವು ಹೇಳುತ್ತದೆ. ಯಾವುದೇ ದುರಂತವು ಅಂತಿಮವಾದ ಸತ್ಯವಲ್ಲ ಎಂದು ಮಾರ್ಕ್ಸ್‌ವಾದವು ಹೇಳುತ್ತದೆ. ಮನುಷ್ಯನ ಸಾಧ್ಯತೆಯನ್ನು ನಾವು ಅತ್ಯಂತ ಗಂಭೀರವಾಗಿಯೂ ನೋಡಬೇಕಾಗುತ್ತದೆ ಎನ್ನುವುದು ಅದರ ನಿಲುವು

ಆಗಿದೆ. ಮನುಷ್ಯ ಮತ್ತು ಅವನ ನಿಲುವನ್ನು ನಾವು ಅತ್ಯಂತ ಗಂಭೀರವಾಗಿ ನೋಡುವುದರಿಂದ ಅದನ್ನು ದುರಂತವೆಂದು ಹೇಳುವ ಅಗತ್ಯವೇ ಇಲ್ಲವೆಂದು ಅದರ ಅಭಿಪ್ರಾಯವಾಗಿದೆ. ಆದರೆ ಈ ವಿಷಯದಲ್ಲಿ ಅದು ಉದಾರವಾದ ನಿಲುವನ್ನು ತಳೆಯುವುದೂ ಇಲ್ಲ. ಶೋಷಣೆಯ ಪಾಪವನ್ನು ದಾಟಲು ಅದು ಹೇಳಿಕೊಡುತ್ತದೆ. ಮಾರ್ಕ್ಸ್‌ವಾದವು ವ್ಯಕ್ತಿಯಲ್ಲಿ ಆತ್ಮ ವಿಶ್ವಾಸವನ್ನು ತುಂಬುತ್ತದೆ. ಮತ್ತು ಅವನಿಗೆ ಧೈರ್ಯವನ್ನು ಕೊಡುತ್ತದೆ. ಅದಕ್ಕೆ ನಿರ್ದಿಷ್ಟವಾದ ನೈತಿಕವಾದ ನಿಲುವೂ ಇದೆ. ಚರಿತ್ರೆಯನ್ನು ಅದು ಖಾಲಿಯಾದ ಅವಕಾಶದಲ್ಲಿ ಇಡುವುದೂ ಇಲ್ಲ. ಅದರಲ್ಲಿ ಖಚಿತತೆಯೂ ಇದೆ. ಅದು ವ್ಯಕ್ತಿ ಮತ್ತು ಅವನ ದುಃಖವನ್ನು ನೋಡುವುದು ಭಿನ್ನವಾದ ಹಾದಿಯಲ್ಲಿ. ಆದರೆ ಉದಾರವಾದಿಗಳು ಮತ್ತು ರಿಫಾರ್ಮಿಸ್ಟರು ದುಃಖಿಗಳನ್ನು ನೋಡುವುದು ಬೇರೆ ರೀತಿಯಲ್ಲಿ. ಅವರು ದುರಂತವನ್ನು ಕರುಣೆಯಿಂದ ನೋಡುತ್ತಾರೆ. ಮಾರ್ಕ್ಸ್‌ವಾದವು ದುರಂತವನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ರೀತಿಯಲ್ಲಿ. ಅದು ಅದರ ವಿಶಿಷ್ಟತೆಯೂ ಹೌದು. ದುರಂತವೆನ್ನುವುದು ಮೂಲಭೂತವಾಗಿ ಒಂದು ನೈತಿಕತೆಯ ಪ್ರಶ್ನೆಯಾಗಿಯೂ ನೋಡಿದವು. ಅದರಲ್ಲಿ ವ್ಯತ್ಯಾಸಗಳೂ ಇದ್ದವು. ದುರಂತನಾಟಕದ ಅರ್ಥ ವಾಸ್ತವವಾಗಿ ಜೀವನದ ಋಣಾತ್ಮಕವಾದ ಮುಖವನ್ನು ನೋಡು ಎಂದೇ ಆಗುತ್ತದೆ. ಮತ್ತು ಅದರಲ್ಲಿ ನಿಷೇದಾತ್ಮಕವಾದದ್ದು ಎನ್ನುವುದಕ್ಕೆ ಹೆಚ್ಚಿನ ಮಹತ್ವವೂ ಇದೆ. ಯಾವುದನ್ನು ನಿಷೇಧಿತವೆಂದು ಹೇಳುತ್ತವೆಯೋ ಅದರ ಸ್ವರೂಪವು ಅತ್ಯಂತ ಸಂಕೀರ್ಣವೆಂದು ದುರಂತನಾಟಕಗಳು ತೋರಿಸುತ್ತವೆ. ನೆಗೆಟಿವ್ ಅಂದರೆ ಅದರಲ್ಲಿ ತ್ಯಾಗವೂ ಸೇರಿಕೊಂಡಿದೆ. ಸ್ವಂತವು ಇದರಲ್ಲಿ ತ್ಯಾಗಕ್ಕೆ ಗುರಿಯಾಗುತ್ತದೆ. ಅದರಲ್ಲಿ ಮನುಷ್ಯನ ದುರಂತವು ನಿರ್ದಿಷ್ಟವಾದ ಕ್ರಿಯೆಯೊಂದಿಗೆ ವ್ಯಕ್ತವಾಗುತ್ತದೆ. ಇದರಲ್ಲಿಯೂ ಯಜಮಾನ ಮತ್ತು ಆಳು ಎನ್ನುವ ಕಲ್ಪನೆಯೂ ಬರುತ್ತದೆ. ಆಳು ಎಂದರೆ ಮನುಷ್ಯನೇ. ಅವನು ಯಾತನೆಯನ್ನು ಅನುಭವಿಸುತ್ತಾನೆ. ಮತ್ತು ಅದರಲ್ಲಿ ಅವನು ಪಡುವ ಯಾತನೆಗೆ ಕಾರಣವೇ ವಿಧಿ. ಆದರೆ ಇಲ್ಲಿ ಯಾತನೆಯನ್ನು ನೋಡುವುದು ನಾಯಕನ ಮೂಲಕವೇ ಆಗಿದೆ. ವ್ಯಕ್ತಿ ಮತ್ತು ಅವನಿಗೆ ಬರುವ ಯಾತನೆಯನ್ನು ನಿರ್ನಾಮ ಮಾಡಲು ಸಾಧ್ಯವಾಗುವುದೂ ಇಲ್ಲ. ದುರಂತ ನಾಯಕನು ಪ್ರಜ್ಞಾಪೂರ್ವಕವಾಗಿಯೇ ಹೋರಾಟವನ್ನು ಮಾಡುತ್ತಾನೆ. ವ್ಯಕ್ತಿಯ ಹೋರಾಟವನ್ನು ನಾವು ಭಿನ್ನವಾದ ಹಿನ್ನೆಲೆಯಿಂದಲೂ ನೋಡಬೇಕಾಗುತ್ತದೆ. ದುರಂತದ ನಾಯಕನದು ವಾಸ್ತವವಾಗಿ ಶುದ್ಧವಾದ ಸ್ಥಾನಮಾನ ಎಂದು ಹೆಗೆಲ್ ಹೇಳುತ್ತಾನೆ. ವ್ಯಕ್ತಿ ಮತ್ತು ಅವನ ಹೋರಾಟವನ್ನು ನಾವು ಅರ್ಥಹೀನವಾದ ಒಂದು ಚಟುವಟಿಕೆಯೆಂದು ಹೇಳಲು ಸಾಧ್ಯವಾಗುವುದೂ ಇಲ್ಲ. ದುರಂತದ ಸ್ವರೂಪವನ್ನು ನಾವು ಇಲ್ಲಿ ಬೇರೆ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅದು ಸತ್ಯದ ಹಾದಿಯಲ್ಲಿ ಬರುವ ತಪ್ಪುಗಳೂ ಹೌದು. ಅಂದರೆ ವ್ಯಕ್ತಿಯು ಅನುಭವಿಸುವುದು ಭಿನ್ನವಾದ ಸಮಸ್ಯೆಯನ್ನೂ ಹೌದು. ಈಡಿಪಸ್ ನಾಟಕದಲ್ಲಿ ಬರುವ ಸ್ವಂತಿಕೆಯ ಪ್ರಶ್ನೆಯು ಸುಲಭವಾದದ್ದು ಅಲ್ಲ. ಸ್ವಂತಿಕೆಯನ್ನು

ಉಳಿಸಿಕೊಳ್ಳಲು ಅವನು ಓಡುತ್ತಾನೆ ಅದರ ಪರಿಣಾಮವನ್ನು ಅವನು ಎದುರಿಸುತ್ತಾನೆ. ಹಾಗೆ ನೋಡುವುದಿದ್ದರೆ ಯಾವುದೇ ದುರಂತ ನಾಟಕಗಳಿಗೆ ಅವುಗಳದೇ ಆದ ಒಂದು ಶಾಸ್ತ್ರೀಯತೆಯೂ ಇದೇ. ಅದರ ರೇಖೆಯು ಸ್ಪಷ್ಟ. ಅದರಲ್ಲಿ ಯಾವುದೇ ಒಂದು ರೀತಿಯ ಗೊಂದಲವು ಇಲ್ಲ. ಅದು ಸಂಕೀರ್ಣವಾದ ಜಗತ್ತಿನ ಪ್ರಾತಿನಿಧಿಕವಾದ ಸಂಗತಿಯೂ ಹೌದು. ಸತ್ಯ ಮತ್ತು ಅದರ ಕಾರಣಗಳನ್ನು ನಾವು ಅದರ ಪ್ರಾತಿನಿಧಿಕತೆಯಲ್ಲಿ ನೋಡಬೇಕಾಗುತ್ತದೆ. ಅದರ ಅರ್ಥವು ಸ್ಪಷ್ಟವಾಗುತ್ತದೆ. ದುರಂತ ನಾಟಕದಲ್ಲಿ ಬರುವ ಧಾರ್ಮಿಕವಾದ ಸಂಗತಿಗಳನ್ನು ನಾವು ನಿರ್ದಿಷ್ಟವಾಗಿಯೂ ಹೇಳಬೇಕಾಗುತ್ತದೆ. ಹೆಗೆಲ್ ಅದರಲ್ಲಿನ ಧಾರ್ಮಿಕವಾದ ಸಂಕೇತಗಳನ್ನು ಗುರುತಿಸುತ್ತಾನೆ. ಅದು ತತ್ವಜ್ಞಾನ ಮತ್ತು ಅದರ ಪರಿಕಲ್ಪನಾತ್ಮಕವಾದ ಸಂಗತಿಯನ್ನು ಹೇಳುತ್ತದೆ. ಅದರಲ್ಲಿ ಎಥಿಕಲ್ ಎನ್ನಬಹುದಾದ ಗುಣವೂ ಇರುತ್ತದೆ. ಒಬ್ಬ ವ್ಯಕ್ತಿಯು ನೈತಿಕವಾದ ಕಾರಣಕ್ಕೆ ಸಮಸ್ಯೆಯನ್ನು ಎದುರಿಸುತ್ತಾನೆ. ಅವನು ಎದುರು ಹಾಕಿಕೊಂಡ ಸಮಸ್ಯೆಯೇ ಭಿನ್ನವಾದದ್ದೂ ಹೌದು. ಅವನು ಕೊಂಚ ಖಿನ್ನನಾಗುತ್ತಾನೆ. ಅದರ ಕಾರಣದಿಂದ ಸಮಸ್ಯೆಯನ್ನು ಎದುರು ಹಾಕಿಕೊಳ್ಳುತ್ತಾನೆ. ತಪ್ಪು ಮತ್ತು ಅದರ ಮೂಲಕವೇ ಅವನು ಕರುಣೆಗೆ ಅರ್ಹನಾದ ವ್ಯಕ್ತಿಯನ್ನು ನಾವು ನೋಡುತ್ತೇವೆ ಎಂದು ಹೆಗೆಲ್ ಹೇಳುತ್ತಾನೆ. ಅದರಲ್ಲಿ ಒಂದು ಬಗೆಯ ಸಿಟ್ಟು ಮತ್ತು ಆಕ್ರೋಶವೂ ಇರುತ್ತದೆ. ಹೆಗೆಲ್ ಅದಕ್ಕೆ ಕಾರಣಗಳೂ ಇವೆ ಎಂದು ಭಾವಿಸುತ್ತಾನೆ. ದುರಂತವು ಒತ್ತಡದಿಂದಲೂ ಆಗುತ್ತದೆ ಎಂದು ಹೆಗೆಲ್ ನಿರೂಪಿಸುತ್ತಾನೆ. ಅವನ ಪ್ರಕಾರ ಅದು ವ್ಯಕ್ತಿಯನ್ನು ನಿರ್ದೇಶಿಸುತ್ತದೆ. ಆದರೆ ಪ್ರಾಯ್ಡ್ ಕೂಡಾ ದುರಂತವು ಕಾರಣದಿಂದ ಆಗುತ್ತದೆ ಎಂದು ಹೇಳುತ್ತಾನೆ. ಅವನ ಪ್ರಕಾರ ಅದು ವ್ಯಕ್ತಿಯ ಅಹಮಿಕೆಯನ್ನು ಸೂಚಿಸುತ್ತದೆ. ಅಹಮಿಕೆಗೆ ಆದ ಪೆಟ್ಟು ಸಾಮಾನ್ಯವಾದದ್ದು ಅಲ್ಲ. ಅಹಮಿಕೆಯೇ ವ್ಯಕ್ತಿಯನ್ನು ದುರಂತದ ಕಡೆಗೆ ಕರೆದೊಯ್ಯುತ್ತದೆ. ವ್ಯಕ್ತಿ ಮತ್ತು ಅವನ ತಲ್ಲಣಗಳನ್ನು ನೋಡುವಾಗ ಅವನ ವ್ಯಕ್ತಿತ್ವದಲ್ಲಿ ಇರುವ ಅಹಮಿಕೆಗೆ ಇರುವ ಪ್ರಮಾಣದ ಅರಿವು ನಮಗೆ ಆಗುತ್ತದೆ. ಯಾವುದು ಜೀವನದಲ್ಲಿ ಗೆಲ್ಲುತ್ತದೆ ಮತ್ತು ಯಾವುದು ಜೀವನದಲ್ಲಿ ಸೋಲುತ್ತದೆ ಎನ್ನುವುದಕ್ಕೆ ದುರಂತ ನಾಟಕದಲ್ಲಿ ಕಾರಣವು ಇದೆ. ಆದರೆ ಇದನ್ನು ಹೆಗೆಲ್ ವ್ಯಕ್ತಿ ಮತ್ತು ಅವನ ಅನುಭವದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ ಎಂದು ವಿವರಿಸುತ್ತಾನೆ. ಅವನಲ್ಲಿ ವ್ಯಕ್ತಿಯ ನೈತಿಕತೆಯೇ ಹೆಚ್ಚು ಮುಖ್ಯವಾಗುತ್ತದೆ. ನೀತಿಯು ಯಾಕೆ ಮುಖ್ಯವಾಗುತ್ತದೆ ಎನ್ನುವುದನ್ನು ಇವುಗಳು ಹೇಳುತ್ತವೆ. ಈಡಿಪಸ್ ನಾಟಕದಲ್ಲಿ ಸ್ವಂತಿಕೆಯೇ ಬಹಳ ಮುಖ್ಯವಾಗುತ್ತದೆ. ಅವನ ಸ್ವಂತಿಕೆಯು ಅವನ ನಡವಳಿಕೆಯಲ್ಲಿ ಸ್ಪಷ್ಟವಾಗಿಯೂ ಗೊತ್ತಾಗುತ್ತದೆ. ಅದು ಗಂಭೀರವಾದದ್ದೂ ಹೌದು. ದುರಂತದ ನಾಯಕನ ವರ್ತನೆಯೇ ಗಮನವನ್ನು ಸೆಳೆಯುತ್ತದೆ. ಮತ್ತು ಅವನ ಕ್ರಿಯೆಯೇ ಹೆಚ್ಚು ಮಹತ್ವದ್ದೂ ಹೌದು. ಅದರಲ್ಲಿ ತಾರ್ಕಿಕತೆಯು ಇರುತ್ತದೆ. ಆ ತಾರ್ಕಿಕತೆಯೇ ಅವನ ಜೀವನದ ಮಹತ್ವದ ಅಂಶ. ರಚನೆಯಲ್ಲಿ ಬರುವ ಕೆಲವು ಸಂಗತಿಗಳು ಈ ದೃಷ್ಟಿಯಿಂದ ಬಹಳ ಮುಖ್ಯ

ಅದರಲ್ಲಿ ನಿರ್ದಿಷ್ಟವಾದ ಒಂದು ಕ್ರಿಯೆಯೂ ಇರುತ್ತದೆ. ಮತ್ತೊಂದು ದೃಷ್ಟಿಯಿಂದ ಅವನ ಅಸ್ತಿತ್ವಕ್ಕೆ ಹೆಚ್ಚಿನ ಮಹತ್ವವೂ ಇದೆ. ಅವನ ಕ್ರಿಯಾಶೀಲತೆಯನ್ನು ಸಾಹಿತ್ಯದ ಕಾರಣಕ್ಕೂ ನೋಡಬೇಕಾಗುತ್ತದೆ. ಅದರಲ್ಲಿ ಕಾವ್ಯದ ಅಂಶವೂ ಇದೆ. ದುರಂತದಲ್ಲಿ ಬರುವ ನೈತಿಕ ನಿಲುವುಗಳು ಮೂಲಭೂತವಾಗಿ ವಿಶ್ವಾತ್ಮಕತೆಯನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ಹೋರಾಟವು ನಡೆಯವುದು ಮತ್ತು ಅದರಲ್ಲಿ ಅವನು ವಿಫಲನಾಗುವುದೂ ಎರಡೂ ಇದೆ. ವ್ಯಕ್ತಿ ಮತ್ತು ಅವನ ಬಯಕೆಗಳು ಇದರಲ್ಲಿ ಬಹಳ ಮುಖ್ಯವೆಂದು ಹೆಗೆಲ್ ಎಂದು ಹೇಳುವುದು ಗಮನಾರ್ಹ. ವ್ಯಕ್ತಿಯ ಬಯಕೆ ಮತ್ತು ಅದರ ಸ್ವರೂಪವೇ ಬಹಳ ಮುಖ್ಯ. ಆದರೆ ಅದಕ್ಕೂ ನೀತಿಗೂ ಒಂದು ಸಂಬಂಧವಿದೆ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದಕ್ಕೂ ನಾಯಕನಿಗೂ ಸಂಬಂಧವಿದೆ. ದುರಂತ ನಾಟಕದಲ್ಲಿ ವಿಧಿಯ ಕೈವಾಡಕ್ಕೆ ಹೆಚ್ಚಿನ ಮಹತ್ವ ಇದೆ. ಅದರಲ್ಲಿ ನಂಬಿಕೆಯು ಬಹಳ ಮುಖ್ಯ. ರಾಜಕೀಯವಾದ ನ್ಯಾಯದ ಪ್ರಶ್ನೆಯು ಒಂದು ಕಡೆಗೆ ಇರುತ್ತದೆ. ಆದರೆ ಅದರಲ್ಲಿ ಬರುವ ಧರ್ಮದ ಪ್ರಶ್ನೆಯು ಜಾತ್ಯಾತೀತವಾದ ಸಂಗತಿಯನ್ನು ಹೇಳುತ್ತದೆ. ಮತ್ತೊಂದು ರೀತಿಯಿಂದ ಅದು ಆಧ್ಯಾತ್ಮಿಕತೆಯನ್ನು ಹೇಳುತ್ತದೆ. ಮನಸ್ಸಿನಲ್ಲಿ ವ್ಯಕ್ತವಾಗುವ ತಲ್ಲಣವು ಮೂಲಭೂತವಾಗಿ ನೀತಿಯನ್ನು ಸಂಕೇತಿಸುತ್ತದೆ. ಆಧುನಿಕ ದುರಂತ ನಾಟಕಗಳು ಹೇಳುವುದು ಬೇರೆ ಸಂಗತಿಗಳನ್ನು. ಒಳಿತು ಮತ್ತು ಕೆಡುಕುಗಳ ನಡುವೆಯೇ ಯುದ್ಧವಿದೆ. ನೀತಿ ಮತ್ತು ಅನೀತಿಗಳ ನಡುವೆಯೇ ಸಂಘರ್ಷವೂ ಇದೆ. ಯಾವುದು ಕೇಡು ಮತ್ತು ಯಾವುದು ಸಮಾಜಕ್ಕೆ ಒಳ್ಳೆಯದು ಎನ್ನುವುದೂ ಮುಖ್ಯವಾದ ಪ್ರಶ್ನೆಯೂ ಆಗಿದೆ. ಒಳಿತು ಮತ್ತು ಕೆಡುಕುಗಳ ಪ್ರಶ್ನೆಯು ಧಾರ್ಮಿಕವಾದ ನೆಲೆಯನ್ನು ಹೇಳುತ್ತದೆ. ಪ್ರಾಚೀನ ಮತ್ತು ಮಧ್ಯಕಾಲೀನವಾದ ನಂಬಿಕೆಗಳು ಈ ದೃಷ್ಟಿಯಿಂದ ಭಿನ್ನವಾಗಿತ್ತು ಪಾಪ ಮತ್ತು ಪಾಪದ ನಿವೇದನೆಯು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದುಕೊಂಡಿದ್ದವು. ಕಾಮ ಎನ್ನುವುದಕ್ಕೆ ಬೇರೆ ವ್ಯಾಖ್ಯೆಗಳೂ ಇದ್ದವು. ಮನಸ್ಸು ಮತ್ತು ದೇಹಗಳ ನಡುವೆಯೇ ಇರುವ ದ್ವಂದ್ವವನ್ನು ಅದು ಹೇಳುತ್ತದೆ. ತಿಳಿದಿರುವ ಸಂಗತಿಗಳನ್ನು ನಾವು ನಂಬಬೇಕೇ ಅಥವಾ ತಿಳಿಯದಿರುವ ಅಥವಾ ಕಣ್ಣು ಎದುರು ಇಲ್ಲದ ದೇವನನ್ನು ಪ್ರಾರ್ಥಿಸಬೇಕೇ ಎನ್ನುವುದೂ ಮುಖ್ಯವಾದ ಪ್ರಶ್ನೆಯೂ ಆಗಿತ್ತು. ಯಾವುದು ಕೇಡು ಆಗಿದೆಯೋ ಅದನ್ನು ದುರಂತವೆಂದು ಹೇಳಲಾಯಿತು. ಅಲೌಕಿಕವಾದದ್ದು ಒಳ್ಳೆಯದು ಮತ್ತು ಲೌಕಿಕವಾದದ್ದು ಕೇಡು ಎಂದೂ ಭಾವಿಸಲಾಯಿತು. ಯಾವುದು ಕೇಡು ಮತ್ತು ಕೇಡಿನಿಂದ ಯಾವುದು ಆಗುತ್ತದೆ ಎನ್ನುವುದೇ ಮುಖ್ಯ, ವಾಸ್ತವವಾಗಿ ಕೇಡನ್ನು ಅಡಿಗರ ಭೂಮಿಗೀತವು ನೋಡುವುದೇ ಭಿನ್ನವಾದ ನೆಲೆಗಳಲ್ಲಿ. ಭೂಮಿಯು ಅದರಲ್ಲಿ ಬರೀ ಲೌಕಿಕದ ಸಂಕೇತವೂ ಅಲ್ಲ. ವ್ಯಕ್ತಿಯು ದಬ್ಬಲ್ಪಟ್ಟಿದ್ದಾನೆ. ಒಂದು ತ್ರಿಶಂಕು ಸ್ಥಿತಿಯು ನಿರ್ಮಾಣವಾಗಿದೆ. ಪಾಪದ ಲೇಪನ ಮತ್ತು ಪ್ರಾಯಶ್ಚಿತ್ತವು ಇದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಕಳೆದುಹೋದದ್ದು, ಬರಲಿರುವುದು ಮತ್ತು ವರ್ತಮಾನಗಳ

ವಿಶಿಷ್ಟವಾದ ಸಂಯೋಜನೆಯೇ ಮುಖ್ಯವಾಗುತ್ತದೆ. ಇದನ್ನು ಕ್ರಿಯೆ ಮತ್ತು ಅದರ ಪರಿಣಾಮದ ಹಿನ್ನೆಲೆಯಲ್ಲಿ ನಾವು ನೋಡುತ್ತೇವೆ. ಕ್ರಿಯೆಗೆ ಅರ್ಥವಿದೆಯೇ ಇಲ್ಲವೇ ಎನ್ನುವುದೂ ಪ್ರಶ್ನೆಯಾಗುತ್ತದೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ದುರಂತವನ್ನು ನೋಡಿದರೆ ಅದರಲ್ಲಿ ವ್ಯಕ್ತಿಯೇ ಒಂದು ಹುಳದ ಥರ ಆಗುತ್ತಾನೆ. ಆದರೆ ದುರಂತ ನಾಟಕದಲ್ಲಿ ಬರುವ ನಿಜದ ಅರಿವು ವಿಶ್ವಾತ್ಮಕವೂ ಆಗುತ್ತದೆ. ಬೂರ್ಜ್ವಾಗಳ ನೀತಿ ಮತ್ತು ಅದರ ನಿಲುವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಮನುಷ್ಯ ಮತ್ತು ಅವನ ಸಮಸ್ಯೆಯು ಸಂಕೀರ್ಣ. ಅವನು ಯಾವುದನ್ನು ನೋಡಬೇಕಾಗುತ್ತದೆ ಎನ್ನುವುದನ್ನು ದುರಂತ ನಾಟಕಗಳು ಎತ್ತಿಕೊಳ್ಳುತ್ತವೆ. ಬೂರ್ಜ್ವಾಗಳ ನೀತಿಯನ್ನು ದುರಂತ ನಾಟಕಗಳು ಎತ್ತಿಕೊಳ್ಳುವುದೇ ಇಲ್ಲ. ಆದರೆ ಇದರಲ್ಲಿ ಬರುವ ನಾಯಕನದು ಆತಂಕಕ್ಕೆ ಒಳಗಾದ ವ್ಯಕ್ತಿತ್ವ. ಅವನಿಗೆ ಭಾವನೆಗಳು ಇವೆ, ಅದುವೇ ಘಾಸಿಯಾಗುತ್ತವೆ. ಅದರಿಂದ ಅವನು ದುರಂತವನ್ನು ಅನುಭವಿಸುತ್ತಾನೆ. ದುರಂತವನ್ನು ನೋಡುವಾಗ ಅದರ ಹಿನ್ನಲೆಯಲ್ಲಿ ಇರುವ ಸಮಸ್ಯೆಗಳನ್ನೂ ನೋಡಬೇಕಾಗುತ್ತದೆ. ಅದು ತಲ್ಲಣವನ್ನೂ ಸೂಚಿಸುತ್ತದೆ. ದುರಂತವು ಹೇಳುವುದು ವ್ಯಕ್ತಿ ಮತ್ತು ಅವನ ತಲ್ಲಣಗಳನ್ನು. ಆದರೆ ಈ ಮಾದರಿಯ ತಲ್ಲಣಗಳನ್ನು ನಂಬಿಕೆಯಲ್ಲಿನ ಪಲ್ಲಟ, ಅಸ್ತಿತ್ವ, ಜೀವನದ ಹೋರಾಟ ಮತ್ತು ಅದರ ಸಮಸ್ಯೆಯನ್ನು ಹೇಳುತ್ತದೆ ಎಂದು ಕಿರ್ಕೆಗಾರ್ಡನು ಹೇಳುತ್ತಾನೆ. ಮನಸ್ಸು ಮತ್ತು ಅದರ ಸ್ವರೂಪದಲ್ಲಿ ಉಂಟಾಗುವ ಆತಂಕಗಳೂ ಕೂಡಾ ಅನೇಕ ದುರಂತಗಳಿಗೆ ಅವಕಾಶವನ್ನು ಕಲ್ಪಿಸುತ್ತದೆ. ಯಾವುದೇ ಅನಿಶ್ಚಿತತೆಯು ಅದರ ಹೋರಾಟಗಳು ಕೂಡಾ ಅದಕ್ಕೆ ಕಾರಣವಾಗುತ್ತದೆ. ಜೀವನ ಮತ್ತು ಅದರ ತಲ್ಲಣಗಳೇ ಮೂಲಭೂತವಾಗಿ ಕೆಲವು ದುರಂತಗಳನ್ನು ತರುತ್ತದೆ. ದುರಂತ ಮತ್ತು ಅದರ ಸ್ವರೂಪವು ಅನೇಕ ಸಂದರ್ಭದಲ್ಲಿ ನಿರ್ಣಯವಾಗುವುದು ಅದರ ಹಿಂದೆ ಇರುವ ನೀತಿಯಲ್ಲಿಯೂ ಹೌದು. ಇದನ್ನೇ ದೊರೆ ಈಡಿಪಸ್ ನಾಟಕವು ಹೇಳುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳು ಇವೆ. ದುರಂತವು ವಾಸ್ತವವಾಗಿ ಮನುಷ್ಯ ಮತ್ತು ಅವನ ನಡವಳಿಕೆಯನ್ನು ಬೇರೆ ಕ್ರಮದಲ್ಲಿ ನೋಡುತ್ತದೆ. ಅದರಲ್ಲಿ ವ್ಯಕ್ತಿಯು ಯಾವ ಕಡೆಗೆ ಹೋಗುತ್ತಾನೆ ಎನ್ನುವುದರ ವಿವರಣೆಯು ಇರುತ್ತದೆ. ಇಲ್ಲಿ ಮತ್ತೆ ನೋಡಬೇಕಾದ್ದು ಯಾಕೆ ಈ ಥರ ಆಗುತ್ತದೆ ಎಂದು ಮಾತ್ರವೇ. ಅದರಲ್ಲಿ ಬರುವ ವ್ಯಕ್ತಿ ಮತ್ತು ಅವನ ಪ್ರಶ್ನೆಯು ಸಂಕೀರ್ಣವೂ ಆಗಿರುತ್ತದೆ. ಯಾಕೆಂದರೆ ವ್ಯಕ್ತಿಯ ದುರಂತವನ್ನು ನಾವು ನೋಡುವುದು ಬರೀ ಅವನ ಒಂದು ವ್ಯಕ್ತಿತ್ವದಿಂದ ಮಾತ್ರವೇ ಅಲ್ಲ. ಅದರಲ್ಲಿ ನೀತಿ ಮತ್ತು ಅದರ ಪರಿಣಾಮವೂ ಇರುತ್ತದೆ. ಅದು ಸಮಾಜ ಮತ್ತು ರಾಜಕಾರಣವನ್ನು ಹೇಳುತ್ತದೆ. ಮತ್ತು ಆಧುನಿಕವಾದ ಸಮಾಜವನ್ನು ಗುರುತಿಸಿಕೊಂಡು ಹೇಳಿದರೆ ಅದರಲ್ಲಿ ನಾಗರಿಕ ಮತ್ತು ಸಾಂಸ್ಕೃತಿಕ ಅಂಶಗಳೂ ಇರುತ್ತದೆ. ಆದರೆ ದುರಂತವನ್ನು ಮತ್ತೆ ಭಿನ್ನವಾಗಿಯೂ ನೋಡಬಹುದು: ವ್ಯಕ್ತಿ ಮತ್ತು ಅವನ ನಿಲುವುಗಳು ನಾಗರಿಕ ಮತ್ತು ಆಧುನಿಕ ಸಂಗತಿಗಳಲ್ಲಿ ಬೇರೆಯಾಗುತ್ತವೆ. ಆದರೆ ದುರಂತವು ಆಧುನಿಕ

ಸಮಾಜದಲ್ಲಿ ಬೇರೆಯಾಗಬಹುದು. ದುರಂತ ಮತ್ತು ಆಧುನಿಕತೆಯ ಪ್ರಶ್ನೆಯು ಬೇರೆಯಾಗುತ್ತದೆ. ದುರಂತ ಮತ್ತು ಮಾನವೀಯತೆ ಹಾಗೂ ಅದರ ನಾಯಕನ ಪ್ರಶ್ನೆಯು ಭಿನ್ನವಾದದ್ದೂ ಹೌದು. ಆದರಲ್ಲಿ ಸೃಜನಶೀಲತೆಯ ಪ್ರಶ್ನೆಯು ಬೇರೆಯಾಗಿದೆ. ಅದನ್ನು ಸೃಜನಶೀಲವಾದ ನೆಲೆಯೆಂದು ಹೇಳಬಹುದು. ಅದರಲ್ಲಿ ಭಯ, ಆತಂಕ, ನೋವು ಮತ್ತು ಮರೆವು ಮುಂತಾದವು ಇರುತ್ತದೆ. ಸ್ವ ಹಿಂಸೆ, ಮರೆವು, ಸ್ವಯಂಘಾತಕತನ ಅಥವಾ ಹಿಂಸೆ ದುರಂತದಲ್ಲಿ ಬಹಳ ಮುಖ್ಯವಾಗುತ್ತದೆ. ಹಶ್ಮಿಯವರ ನಾಟಕದ ಒಂದು ಮಾತು ಇಲ್ಲಿ ಉಲ್ಲೇಖನೀಯ

"ಮಂತ್ರಿ : ಯಾರು ಯುದ್ಧ ವಿರೋಧಿಗಳಾಗಿರ್ತಾರೋ ಅವರು ರಾಷ್ಟ್ರದ ಶತ್ರುಗಳು. ಪೋಕರಣದ ವಿರುದ್ಧ ಮಾತಾಡೋರು ರಾಷ್ಟ್ರ ವಿರೋಧಿಗಳು. ರೊಟ್ಟಿ ಬಗ್ಗೆ ಮಾತಾಡೋರು ರಾಷ್ಟ್ರ ವಿರೋಧಿಗಳು. ಹರತಾಳ ಮಾಡಿಸೋರು ರಾಷ್ಟ್ರ ವಿರೋಧಿಗಳು. ಕೆಲಸ ಕೇಳುವವರು ರಾಷ್ಟ್ರ ವಿರೋಧಿಗಳು. ಮುಸಲ್ಮಾನರೆಲ್ಲರೂ ರಾಷ್ಟ್ರವಿರೋಧಿಗಳು. ಕ್ರಿಶ್ಚಿಯನ್ ರಾಷ್ಟ್ರವಿರೋಧಿಗಳು. ಯಾರು ದಂಗೆಯನ್ನ ವಿರೋಧಿಸ್ತಾರೋ ಅವರು ರಾಷ್ಟ್ರವಿರೋಧಿಗಳು. ಎವರಿ ಎಕ್ಯನ್ ಹ್ಯಾಸ್ ಇನ್ ಈಕ್ವಲ್ ಆ್ಯಂಡ್ ಅಪೋಜಿಟ್ ರಿಯೆಕ್ಯನ್. ಹಾಗಾಗಿ ಜೀವಂತವಾಗಿ ಸುಡೋದು ಸಹಜಕ್ರಿಯೆ, ಮಗುವನ್ನು ಬಸಿರಿಯಿಂದ ಹೊರತೆಗೆದು ಸಾಯಿಸೋದು ಸಹಜಕ್ರಿಯೆ. ಲೂಟಿ ಮಾಡೋದು, ಕೊಳ್ಳೆ ಹೊಡೆಯೋದು, ರಕ್ತಪಾತ ಆಗೋದಾದ್ರೆ ಆಗಲಿ ಬಿಡಿ. ಇದೆಲ್ಲ ಪ್ರೆಸ್ಟಿಜ್‌ನ ಪ್ರಶ್ನೆ. ಈ ದೇಶದಲ್ಲಿ ಇರಬೇಕು ಅಂತಂದ್ರೆ ನಾವು ಹೇಳದ ಹಾಗೆ ಕೇಳಕೊಂಡು ಬಿದ್ದಿರಬೇಕು. (ಡಾ.ಮಾಧವಿ ಎಸ್. ಭಂಡಾರಿ, ಸಫ್ದರ್ ಹಶ್ಮಿಯವರ ಯೇ ದಿಲ್ ಮಾಂಗೇ, ಮತ್ತಿತರ ಬೀದಿ ನಾಟಕಗಳು, 2014, ಪುಟ. 70. ಬಂಡಾಯ ಪ್ರಕಾಶನ, ಉತ್ತರ ಕನ್ನಡ)

ಆದರೆ ದೇಶ ಮತ್ತು ಅದರ ಹಿಂದಣ ಛಾಯೆಯು ಭಿನ್ನವಾಗಿದೆ. ಮತ್ತೊಂದು ವಿಚಾರವನ್ನು ಇಲ್ಲಿ ಹೇಳಬೇಕು. ದುರಂತದಲ್ಲಿ ಒಂದು ಭ್ರಮೆಯು ಇರುತ್ತದೆ. ಹಾಗೂ ಇದರಲ್ಲಿ ವ್ಯಕ್ತಿಯ ಬರುವ ನೋವು ಬೇರೆಯದನ್ನು ಹೇಳುತ್ತದೆ. ರಕ್ತ ಮತ್ತು ಭಯವು ದುರಂತದಲ್ಲಿ ಬಹಳ ಮುಖ್ಯ. ಚರಿತ್ರೆಯಲ್ಲಿ ರಕ್ತವು ಇಲ್ಲವೆಂದು ಹೇಳಲಾಗುವುದಿಲ್ಲ ಎಂದು ನೀಶೆಯು ಹೇಳುತ್ತಾನೆ. ಕಳೆದು ಹೋದದ್ದು ಮತ್ತು ಅದರ ಮಿಥ್ ನೀಶೆಯಲ್ಲಿ ಮುಖ್ಯವಾಗುತ್ತದೆ. ದುರಂತ ನಾಟಕಗಳಲ್ಲಿ ದುರಂತವೂ ಒಂದು ಬಗೆಯಲ್ಲಿ ಒಂದು ಸಂಭ್ರಮ ಮತ್ತು ಅದರಲ್ಲಿ ಆಚರಣೆಯ ರೂಪವನ್ನು ಹೊಂದುತ್ತದೆ. ಅದರಲ್ಲಿ ದುರಂತವು ಅತ್ಯಂತ ಭಯಾನಕವೂ ಆಗಿರುತ್ತದೆ. ನಾಗರಿಕತೆಯಲ್ಲಿ ವ್ಯಕ್ತಿ ಮತ್ತು ಅವನ ಸ್ವಭಾವವು ಕ್ರಿಮಿ ಸದೃಶವೂ ಆಗಿರುತ್ತದೆ. ಅದರಲ್ಲಿ ಸುಖವನ್ನು ನಿರಾಕರಿಸಲಾಗುತ್ತದೆ. ಆಧುನಿಕ ಯುಗದಲ್ಲಿ ನಡೆಯುವ ಅನೇಕ ಹಿಂಸೆಗಳು ಕೂಡಾ ಭಯಾನಕವೂ ಆಗಿರುತ್ತದೆ. ಸುಖ ಮತ್ತು ನೋವುಗಳು ಇದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಆದರೆ ಅತ್ಯಂತ

ಕ್ರೂರವಾದ ಸಂಗತಿಯನ್ನು ಹೇಳುತ್ತದೆ ಎಂದು ರೇಮಾಂಡ್ ವಿಲಿಯಂಸ್ ಹೇಳುತ್ತಾನೆ. ಅದರಲ್ಲಿ ಸಾವು ಮತ್ತು ನೋವುಗಳು ಒಂದು ಸೌಂದರ್ಯಾತ್ಮಕವಾದ ಅಂಶವಾಗುತ್ತದೆ. ದುರಂತವೂ ಮತ್ತೊಂದು ದೃಷ್ಟಿಯಿಂದ ವಿಶಿಷ್ಟವಾದ ಅನುಭವಕ್ಕೆ ಕಾರಣವಾಗುತ್ತದೆ. ದುರಂತ ಮತ್ತು ಅದರ ಸುಖಾಂತವೂ ಕೂಡಾ ಮಹತ್ವದ್ದೂ ಹೌದು. ಅದು ಅನೇಕವನ್ನು ಹೇಳುತ್ತದೆ. ಅದರಲ್ಲಿ ಬರುವ ವಿಷಯವನ್ನು ನೋಡಿದರೆ ಬರೀ ಸರಳವೆಂದು ಹೇಳಲಾಗುವುದಿಲ್ಲವೆಂದು ನೀಶೆಯು ಹೇಳುತ್ತಾನೆ. ಯಾವುದನ್ನು ನಾವು ಭಯಾನಕವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಪಲಾಯನ ಮತ್ತು ಅದರ ಅಭಿವ್ಯಕ್ತಿಯಲ್ಲಿ ಕಾಣಿಸುತ್ತದೆ. ಪಲಾಯನ ಮತ್ತು ಅದರ ಪರಿಣಾಮವೂ ಭಿನ್ನವಾಗುತ್ತದೆ. ಮತ್ತು ಅದನ್ನು ನೋಡುವುದು ಮತ್ತು ಗ್ರಹಿಸುವುದೂ ಬೇರೆಯಾಗಬೇಕಾಗುತ್ತದೆ. ಪಲಾಯನದ ಕ್ರಿಯೆಯು ಇದರಲ್ಲಿ ಮುಖ್ಯವಾಗುತ್ತದೆ. ಅದರಲ್ಲಿ ಏಕತೆಯು ಇರುತ್ತದೆ. ಅದಕ್ಕೆ ಸೀಮಾರೇಖೆಗಳೂ ಇರುತ್ತವೆ. ದುರಂತದ ಜಗತ್ತು ಮತ್ತು ಅದು ಹೇಳುವ ಜಗತ್ತು ಈ ದೃಷ್ಟಿಯಿಂದ ಭಿನ್ನವಾಗುತ್ತದೆ. ಅದು ಹೇಳುವ ಕನಸು ಕೂಡಾ ಬೇರೆಯಾಗುತ್ತದೆ. ಜೀವನ ಮತ್ತು ಜೈವಿಕ ಅಂಶಗಳು ನಾಟಕಗಳಲ್ಲಿ ಬೇರೆಯಾಗುತ್ತದೆ. ಸಾವು ಮತ್ತು ಅದರ ಹಿಂದೆ ಇರುವ ಅಂಶಗಳು ಕೂಡಾ ವ್ಯತ್ಯಾಸವಾಗುತ್ತದೆ. ನೈತಿಕತೆಯ ಪ್ರಶ್ನೆಯು ಕೂಡಾ ಅತ್ಯಂತ ಮಹತ್ವದ್ದೂ ಹೌದು. ಆದರೆ ಅದು ಬರೀ ಸೋಲನ್ನು ಮಾತ್ರವೇ ಹೇಳುವುದಿಲ್ಲ. ಅದು ಜೀವನ ಮತ್ತು ಅದರ ಸಾಧನೆಯನ್ನು ಹೇಳುತ್ತದೆ. ಹಾಗೂ ಅದರಲ್ಲಿ ಬೇರೆ ಅಂಶಗಳು ಇರುತ್ತವೆ. ಅದು ಇಗೋವೊಂದರ ಸೋಲು ಕೂಡಾ ಹೌದು. ಜಗತ್ತಿನಲ್ಲಿ ಯಾವುದು ಉಳಿಯುತ್ತದೆ ಮತ್ತು ಯಾವುದು ಯಾಕೆ ನಾಶ ಹೊಂದುತ್ತದೆ ಎಂದೂ ಹೇಳುತ್ತದೆ. ಸೌಂದರ್ಯ ಮತ್ತು ಅದರ ಪರಿಣಾಮವನ್ನು ನೋಡುವಾಗ ಕೂಡಾ ಈ ಅಂಶಗಳು ಅತ್ಯಂತ ಮಹತ್ವದ್ದೂ ಹೌದು. ಮತ್ತೊಂದು ಕಡೆಯಿಂದ ವ್ಯಕ್ತಿ ಮತ್ತು ದೇವರ ಪ್ರಶ್ನೆಯನ್ನು ಎತ್ತಿಕೊಳ್ಳುತ್ತದೆ. ಅದರಲ್ಲಿ ತ್ಯಾಗಕ್ಕೆ ಅರ್ಥವಿದೆ. ಮನುಷ್ಯ ಮತ್ತು ಅದರ ಮೌಲ್ಯವನ್ನು ಹೇಳುತ್ತದೆ. ಆಧುನಿಕ ನಿರಾಶೆಯೂ ಒಂದು ದುರಂತವಾಗುತ್ತದೆ. ಜೀವನ ಮತ್ತು ಅದರ ಅತ್ಯುನ್ನತವಾದ ಆದರ್ಶವು ಮತ್ತು ಅದರ ಸಂಕಲ್ಪವು ಹಾಳಾಗುತ್ತದೆ. ಮನುಷ್ಯ ಮತ್ತು ಅವನ ವ್ಯಕ್ತಿತ್ವವು ಬೇರೆಯಾಗುತ್ತದೆ. ಮನುಷ್ಯ ಮತ್ತು ಅವನ ಸಮಸ್ಯೆಯನ್ನು ಕೂಡಾ ದುರಂತವು ಹೇಳುತ್ತದೆ. ಸಂಸ್ಕೃತಿ ಮತ್ತು ಅದರ ದೋಷಗಳನ್ನೂ ಕೂಡಾ ಅದು ವಿವರಿಸುತ್ತದೆ. ಹುಟ್ಟು ಮತ್ತು ಅದರೊಂದಿಗೆ ಬರುವ ನಾಶವನ್ನು ಹೇಳುತ್ತದೆ. ಜೀವನವು ಹೇಗಿದೆ ಮತ್ತು ಹೇಗಿರುತ್ತದೆ ಎಂದೂ ವಿವರಿಸಿಕೊಳ್ಳುತ್ತದೆ. ಜೀವನವನ್ನು ನೋಡಿದರೆ ಅದರಲ್ಲಿ ಬೇರೆ ಅಂಶಗಳೂ ಇರುತ್ತದೆ ಮತ್ತು ಅನೇಕ ಸಂದರ್ಭದಲ್ಲಿ ವ್ಯಕ್ತಿಯನ್ನು ನೋಡಿದರೆ ಅವನು ಕೆಲವು ಸನ್ನಿವೇಶಗಳಲ್ಲಿ ಕರುಣೆಗೂ ಅರ್ಹನಾಗುತ್ತದೆ. ಅವನ ಬಗ್ಗೆ ಕರುಣೆಯು ಬರುವುದು ಕೂಡಾ ಅವನು ವ್ಯಕ್ತಪಡಿಸುವ ಪಾಪದ ಭೀತಿಯಿಂದ ಎನ್ನುವುದೂ

ಅಷ್ಟೇ ಗಮನಾರ್ಹ. ದುರಂತವು ಬರೀ ದುಃಖದಿಂದ ಮಾತ್ರವೇ ಕೂಡಿರುತ್ತದೆ ಎಂದು ಅರ್ಥವಲ್ಲ. ಅದರಲ್ಲಿ ನ್ಯಾಯವನ್ನು ಮತ್ತೊಂದು ದಿಕ್ಕಿನಲ್ಲಿಯೂ ನೋಡಲಾಗುತ್ತದೆ. ಸತ್ಯ ಮತ್ತು ನ್ಯಾಯವನ್ನು ಅದು ಬೇರೆಯಾಗಿ ನೋಡುತ್ತದೆ. ಸತ್ಯ ಮತ್ತು ನ್ಯಾಯವನ್ನು ಅತ್ಯಂತ ನಿಜವಾದ ಹಾಗೂ ಗಂಭೀರವಾದ ಭಾವನೆಯ ರೀತಿಯಲ್ಲಿ ನೋಡುತ್ತದೆ ಎಂದು ಲಕಾನ್ ಹೇಳುತ್ತಾನೆ. ಆದರೆ ಆಧುನಿಕಯುಗದ ದುರಂತವು ನಾಗರಿಕ ಸಮಾಜವನ್ನು ಹೇಳುತ್ತದೆ. ವಾಸ್ತವವಾಗಿ ದುರಂತವು ಪ್ರಜ್ಞೆಯನ್ನು ಹೇಳುತ್ತದೆ. ಆದರೆ ಸುಖ ಮತ್ತು ಸಂತೋಷವು ಅದರಲ್ಲಿ ಇರುವುದು ಇಲ್ಲ. ಅದರಲ್ಲಿ ಸುಖವನ್ನು ಪರೋಕ್ಷವಾಗಿಯೂ ಹೇಳಲಾಗುತ್ತದೆ. ವಾಸ್ತವ ಮತ್ತು ಅದರ ಹಿಂದೆ ಇರುವ ನೋವಿನ ದುರಂತವನ್ನು ನಾಟಕಗಳು ಹೇಳುವ ಕ್ರಮವು ಭಿನ್ನವಾಗಿದೆ. ಲಂಕೇಶರ ಗುಣಮುಖದಲ್ಲಿ ಇದು ಬರುತ್ತದೆ. "ತನ್ನೀರ್ ವಿಚಾರ ಕೇಳಿದಂತೆಲ್ಲ ನಮಗೆ ಇಲ್ಲಿಯ ಬದುಕಿನ ನಿಗೂಢ ಅಚ್ಚರಿ ಹುಟ್ಟಿಸುತ್ತೆ, ಮೊನ್ನೆ ನಮಗೆ ಬೆಕ್ಕು ನೋಡಬೇಕಂತ ಆಶೆಯಾಯಿತು. ನಾವು ಬೆಕ್ಕು ಕಳಿಸಲು ಹೇಳಿಕಳಿಸಿದೆವು. ರಾಜ ಕಳಿಸಿದ್ದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಬೆಕ್ಕಿಗೆ ಬದಲು ಹುಡುಗಿ ಕಳಿಸಿದ್ದ. ನಾವು ಅದರಿಂದ ಅವಮಾನಿತರಾಗಲಿಲ್ಲ. ಯಾಕೆಂದರೆ ನಾದಿರ್ ಶಾನಂಥ ಮಹಾನ್ ಚಕ್ರವರ್ತಿ ಕೇವಲ ಬೆಕ್ಕಿಗಾಗಿ ಹೇಳಿಕಳಿಸಲಾರರು ಎಂಬುದು ಅವನ ಕಲ್ಪನೆ. ಈ ದೇಶದಲ್ಲಿ ಬೆಕ್ಕು ಬೇಕೆಂದರೆ ಹುಡುಗಿ ಕಳಿಸುತ್ತಾರೆ. ತೈಲ ಬೇಕೆಂದರೆ ಬೆಲೆಬಾಳುವ ಮದ್ಯ ಕಳಿಸುತ್ತಾರೆ." (ಪಿ.ಲಂಕೇಶ್, ಗುಣಮುಖ, 1993, ಪುಟ. 6. ಪತ್ರಿಕೆ ಪ್ರಕಾಶನ, ಬೆಂಗಳೂರು.) ನಾಟಕ ಮತ್ತು ಅದರಲ್ಲಿ ವ್ಯಕ್ತವಾಗುವ ದುರಂತವು ಒಂದು ಬಗೆಯಲ್ಲಿ ಇರುತ್ತದೆ. ಆದರೆ ದುರಂತವು ನಾಟಕದಲ್ಲಿ ಬರುವಾಗ ಅದರ ಸ್ವರೂಪವೂ ಭಿನ್ನವಾಗಿದೆ. ವಾಸ್ತವವಾಗಿ ಆಧುನಿಕಯುಗದಲ್ಲಿ ವ್ಯಕ್ತವಾಗುವ ದುರಂತವು ಹೆಚ್ಚು ಸಂಕ್ಷಿಪ್ತವಾಗಿಯೂ ಇರುತ್ತದೆ. ಕ್ರಿಶ್ಚಿಯನ್ ಮತದಲ್ಲಿ ದುರಂತ ಮತ್ತು ನೀತಿಯ ಪ್ರಶ್ನೆಯು ಸಂಕೀರ್ಣವಾಗಿರುತ್ತದೆ. ಸಾವನ್ನು ಅದು ನೋಡುವ ಕ್ರಮವೂ ಬೇರೆಯಾಗಿದೆ. ಸಾವಿಗೆ ಒಂದು ಸಾಂಕೇತಿಕವಾದ ಅರ್ಥವೂ ಇರುತ್ತದೆ. ಅದು ವಿಧಿಯನ್ನು ದೇವರು ಎಂದು ಹೇಳುತ್ತದೆ. ಅದು ದೇವರನ್ನು ಪ್ರಭುವಾಗಿಯೂ ನೋಡುತ್ತದೆ. ಅದರಲ್ಲಿ ಜೀವನವು ಬರೀ ಸಂತೋಷವಲ್ಲ. ಆದರೆ ದುರಂತ ಮತ್ತು ಅದರ ಪರಿಣಾಮವನ್ನು ಆಧುನಿಕ ಜಗತ್ತಿನಲ್ಲಿ ಗ್ರಹಿಸುವ ಕ್ರಮವು ಭಿನ್ನವಾಗುತ್ತದೆ. ಅದು ಈಗ ಬರೀ ಅಶಿಸ್ತನ್ನು ಮಾತ್ರವೇ ಹೇಳುವುದಿಲ್ಲ. ಅದು ಅನುಭವದ ಭಾಗವೂ ಆಗಿದೆ. ವಿಧಿಯನ್ನು ಆಧುನಿಕ ಜಗತ್ತು ಬೇರೆ ಮಾಡಿನೋಡುತ್ತದೆ. ಮತ್ತು ಹಿಂಸೆಯ ವಿರುದ್ಧ ಮತ್ತು ಸರಕಾರದ ವಿರುದ್ಧ ಬಂಡಾಯವೆದ್ದಾಗಲೂ ದುರಂತವು ನಡೆಯುತ್ತದೆ. ಇದರ ಜೊತೆಗೆ ಆಧುನಿಕ ಜಗತ್ತನ್ನು ನೋಡುವಾಗ ದುರಂತವು ಪರಕೀಯತೆಯೊಂದಿಗೆ ಬರುತ್ತದೆ ಎಂದೂ ಹೇಳಬಹುದು. ಪರಕೀಯತೆಯು ಮೂಲಭೂತವಾಗಿ ಕೆಲವು ರೀತಿಯ ಹೋರಾಟವನ್ನು ಹೇಳುತ್ತದೆ. ನ್ಯಾಯಕ್ಕಾಗಿಯೂ ಹೋರಾಟವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ನಡೆಯುವ ಹೋರಾಟಕ್ಕೂ

ಬೇರೆ ಅರ್ಥವೂ ಇರುತ್ತದೆ. ಹಾಗೆ ನೋಡುವುದಿದ್ದರೆ ದುರಂತ ಮತ್ತು ಕ್ರಾಂತಿಯು ಬೇರೆ ಬೇರೆ ನೆಲೆಗಳನ್ನು ಹೇಳುತ್ತದೆ. ಆದ್ದರಿಂದ ಆಧುನಿಕ ಜಗತ್ತಿನಲ್ಲಿ ಸಾಮಾಜಿಕ ನ್ಯಾಯ ಮತ್ತು ಕ್ರಾಂತಿಯ ಪ್ರಶ್ನೆಗಳಲ್ಲಿ ಅನೇಕ ಅಂಶಗಳೂ ಸೇರಿಕೊಳ್ಳುತ್ತವೆ. ಆದರೆ ಸಮಾಜ ಮತ್ತು ಅದರಲ್ಲಿ ಬರುವ ನ್ಯಾಯದ ಪ್ರಶ್ನೆಯು ಸಂಕೀರ್ಣವಾಗಿದೆ. ಆದರೆ ಕ್ರಾಂತಿ ಮತ್ತು ಆತಂಕಗಳು ಹುಟ್ಟುವುದೇ ನಿರ್ದಿಷ್ಟವಾದ ಕಾರಣದಿಂದ. ಕ್ರಾಂತಿಯೂ ಕೂಡಾ ಕರುಣೆ ಮತ್ತು ಆತಂಕದಿಂದ ಹುಟ್ಟುತ್ತದೆ. ಅದು ಕೂಡಾ ಅಸಮತೆಯಿಂದ ಹುಟ್ಟಿದೆ. ಅದಕ್ಕೆ ಕಾರಣವೂ ಇದೆ. ನಿಯಮವು ಮಾತ್ರವೇ ನಮಗೆ ಮುಖ್ಯವಲ್ಲ. ಮತ್ತು ಅದರದೇ ತರ್ಕವೂ ಇರುತ್ತದೆ. ಯಾವುದೇ ಸಂಗತಿಯು ನಡೆಯುವುದು ಮನುಷ್ಯನ ಅಗತ್ಯಕ್ಕಾಗಿ. ಕ್ರಾಂತಿ ಮತ್ತು ಅದರ ಅಗತ್ಯವೂ ಬಹಳ ಇರುತ್ತದೆ. ಜನರು ಸುಮ್ಮನೇ ಕ್ರಾಂತಿಯನ್ನು ಮಾಡುವುದೂ ಇಲ್ಲ. ಯಾವುದೇ ಅಸಮತೆಯು ಹುಟ್ಟಿದ್ದೂ ಕೂಡಾ ಸಮಾಜದಲ್ಲಿ. ಜನರನ್ನು ಹಿಂಸೆ ಮಾಡಲಾಗುತ್ತದೆ. ಬಂಡವಾಳವಾದವೂ ಒಂದು ರೀತಿಯಿಂದ ಬಡವರನ್ನು ಹಿಂಸೆಯನ್ನು ಮಾಡುತ್ತದೆ. ಅದರಲ್ಲಿ ಹಿಂಸೆಯು ನುಣುಪಾದ ಮಾತುಗಳನ್ನು ಹೊಂದಿರುತ್ತದೆ. ಅದು ಬಾಕನ್ನು ಹೊಂದಿರುತ್ತದೆ. ಆದರೆ ಅದರಲ್ಲಿ ಉದ್ದೇಶವೂ ಭಿನ್ನವಾಗುತ್ತದೆ. ಕ್ರಾಂತಿಗೆ ನಿಜವಾದ ಅಗತ್ಯವಿದೆ. ಅದು ಜನರನ್ನು ನೋಡುತ್ತದೆ. ಅದರ ಕಾರಣವೂ ಭಿನ್ನವಾಗುತ್ತದೆ. ವಾಸ್ತವವಾಗಿ ಯಾವುದೇ ದೇಶದಲ್ಲಿ ಸಮಾಜವಾದಿ ಚಿಂತನೆಯ ಅಗತ್ಯವನ್ನು ಮಾರ್ಕ್ಸ್‌ವಾದವು ಒತ್ತಿ ಹೇಳುತ್ತದೆ. ಅದರ ದೃಷ್ಟಿಯಲ್ಲಿ ಬದಲಾವಣೆಯು ದುರಂತವಲ್ಲ. ಸಾಂಸ್ಥಿಕವಾದ ಅವ್ಯವಸ್ಥೆಯೂ ಬದಲಾಗುವುದು ಕ್ರಾಂತಿಯಿಂದ. ಮತ್ತು ಸಮಾಜವಾದದ ದೃಷ್ಟಿಯಲ್ಲಿ ಕ್ರಾಂತಿಯು ಅಗತ್ಯವಾದ ಪ್ರಕ್ರಿಯೆಯೂ ಹೌದು. ಸಾಂಸ್ಥಿಕವಾದ ಸಂಗತಿಗಳು ನಡೆಯುವುದು ನಿರ್ದಿಷ್ಟವಾದ ನಿಯಮದಿಂದ ಮಾತ್ರವೇ ಎಂದು ಹೇಳಲಾಗುವುದೂ ಇಲ್ಲ. ಕ್ರಾಂತಿಯ ಉದ್ದೇಶವು ಜೀವನದಲ್ಲಿ ಹೊಸತನ್ನು ತರುತ್ತದೆ. ಆದ್ದರಿಂದ ಅದಕ್ಕೂ ನಿಜಕ್ಕೂ ಒಂದು ಸಂಬಂಧವಿದೆ. ಸಮಾಜ ಮತ್ತು ಅದರ ಕ್ರಾಂತಿಯು ನಡೆಯುವುದು ರಾಜಕೀಯವಾದ ಅಗತ್ಯವೂ ಹೌದು. ಯಾವಾಗ ಸಮಾಜವು ಬದಲಾಗುತ್ತದೆಯೋ ಆಗ ಅದರಲ್ಲಿ ದುರಂತದ ಕಲ್ಪನೆಯೂ ಬದಲಾಗುತ್ತದೆ. ಆದರೆ ಸಾವು ಮತ್ತು ದುಃಖವು ಬದಲಾಗುತ್ತದೆ ಎಂದು ಅಲ್ಲ. ಆದರೆ ದುಃಖವನ್ನು ಈಗ ಬರೀ ವಿಧಿಯು ಉಂಟು ಮಾಡುತ್ತಿಲ್ಲ. ಅದರ ಬದಲು ಈಗ ನಮಗೆ ದುಃಖವನ್ನು ತರುವುದೂ ಕೂಡಾ ಬೇರೆ ಬೇರೆ ವಿಷಯಗಳು. ಈಗ ದುಃಖವು ಕೇವಲ ಧೀರ ಮತ್ತು ಉದಾತ್ತ ನಾಯಕರಿಗೆ ಮಾತ್ರವೇ ಆಗುತ್ತಿಲ್ಲ. ಅದರ ಬದಲು ಸಾವು ಮತ್ತು ನೋವುಗಳು ಅನೇಕರಿಗೆ ಆಗುತ್ತಿದೆ. ಅನೇಕ ರೀತಿಯ ಸಾವುಗಳನ್ನು ಈಗ ನಾವು ನೋಡುತ್ತಿದ್ದೇವೆ. ಸಾವು ಮತ್ತು ದುಃಖಗಳನ್ನು ಅನೇಕವು ಹೇಳುತ್ತವೆ. ಸಮಾಜವೂ ಅದೇ ರೀತಿಯಲ್ಲಿ ವಿವಿಧ ರೀತಿಯ ದುರಂತವನ್ನು ಹೇಳುತ್ತದೆ. ಆದ್ದರಿಂದ ನಮ್ಮ ನಡುವೆ ದುರಂತವನ್ನು ನೋಡುವ ಮತ್ತು ಅದನ್ನು ಗ್ರಹಿಸುವ ವಿಧಾನವೂ ಬೇರೆಯಾಗಬೇಕಾಗುತ್ತದೆ. ವಾಸ್ತವದ ಜಗತ್ತು ಅತ್ಯಂತ ಸಂಕೀರ್ಣ.

ಅದರ ಪರಿಣಾಮವನ್ನು ನಾವು ನೋಡಬೇಕಾದ ವಿಧಾನವೂ ಭಿನ್ನ. ನಮ್ಮ ಆಧುನಿಕ ಜಗತ್ತು ಮತ್ತು ಆಧುನಿಕ ರಾಜಕಾರಣವನ್ನು ಈಗ ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಗೋಧ್ರಾ ದುರಂತವನ್ನು ನಾವು ಬರೀ ಒಂದು ಹಿಂಸೆ ಎಂದು ಹೇಳುವುದರ ಬದಲು ಮನುಷ್ಯರ ಹತ್ಯೆ ಮತ್ತು ಅದರ ಹಿಂದೆ ಇದ್ದ ರಾಜಕೀಯ ಉದ್ದೇಶವನ್ನೂ ಗಮನಿಸುವುದು ಅತ್ಯಂತ ಅಗತ್ಯವಾಗಿದೆ. ಅಧಿಕಾರವು ಮನುಷ್ಯರ ಹತ್ಯೆಯ ಮೇಲೆ ನಿಂತರೆ ಅದರ ಅರ್ಥ ಬೇರೆಯಾಗುತ್ತದೆ. ಗೋಧ್ರಾದ ಹತ್ಯೆಗಳು, ಮತೀಯ ಗಲಭೆಗಳು, ಗೋವಿನ ರಕ್ಷೆ ಎನ್ನುವುದರ ಮೇಲೆ ನಿರ್ದಿಷ್ಟವಾದ ಹಿಂಸೆಗಳು ನಡೆಯುವುದು ಮಾತ್ರವೇ ಅಲ್ಲ ಅದರ ಬದಲು ಅದರಲ್ಲಿ ರಾಜಕೀಯದ ಕಟುವಾಸ್ತವವು ಇದೆ. ಇದರ ಹಿಂದೆ ರಾಜಕಾರಣವೂ ಇದೆ. ಆದರೆ "ಚರಿತ್ರೆಯ ಬಲಿಪಶುಗಳಲ್ಲಿಯೂ ಅಸ್ಪೃಶ್ಯರಿರುತ್ತಾರೆ. ಸೋತವರ ದನಿಗಳು ಅಲ್ಲಲ್ಲಿ ಕೇಳಬಹುದು. ಆದರೆ ಈ ಅಸ್ಪೃಶ್ಯರ ದನಿಗಳನ್ನು ಯಾರೂ ಕೇಳುವುದಿಲ್ಲ, ವಿಭಜನೆಯ ಸಂದರ್ಭದಲ್ಲಿ ಈ ಅಸ್ಪೃಶ್ಯರೆಂದರೆ ಅತ್ಯಾಚಾರಕ್ಕೆ ಒಳಗಾದ ಎರಡೂ ಜನಾಂಗದ ಮಹಿಳೆಯರು, ಬಲವಂತದಿಂದ ಸೆಳೆದುಕೊಂಡು ಹೋದ ಮಹಿಳೆಯರು, ಒಬ್ಬ ಬ್ರಿಟಿಷ್ ಅಧಿಕಾರಿ ಹೇಳಿದ ಹಾಗೆ ವಿಭಜನೆಯು ಎಲ್ಲಕ್ಕಿಂತ ಹೆಚ್ಚಾಗಿ 'ಮಹಿಳೆಯರ ದೇಹಗಳ ಮೇಲೆ ನಡೆದ ಯುದ್ಧ'ವಾಗಿತ್ತು. ಇನ್ನೊಂದು ಸಮುದಾಯ ಮಾಡಬಹುದಾದ ಆತ್ಯಂತಿಕ ಅವಮಾನವೆಂದರೆ ಆ ಸಮುದಾಯದ ಹೆಂಗಸರ ದೇಹಗಳ ಮೇಲೆ ಅತ್ಯಾಚಾರ ಮಾಡುವುದು ಎನ್ನುವ ನಂಬಿಕೆಯ ಜೊತೆಗೆ ಮಹಿಳೆಯರ ಅಸಹಾಯಕತೆಯನ್ನು ಸನ್ನಿವೇಶದ ಅರಾಜಕತೆಯನ್ನು ಉಪಯೋಗಿಸಿಕೊಂಡು ಕಾಮತೃಷೆಯನ್ನು ತೀರಿಸಿಕೊಳ್ಳುವ ತೆವಲಿನಿಂದಾಗಿ ವಿಭಜನೆಯ ಕಾಲದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಕಲ್ಪನೆಯ ಸಾಧ್ಯತೆಯನ್ನು ಮೀರಿದ್ದು, ಸಿಕ್ಕ ಹೆಂಗಸರನ್ನು ಹಂಚಿಕೊಂಡು ಭೋಗಿಸುವುದು ಎಲ್ಲಾ ವರ್ಗಗಳ ಗಂಡಸರ ಉದ್ಯೋಗವಾಗಿತ್ತು. ಮ್ಯಾಜಿಸ್ಟ್ರೇಟರೂ ಸೇರಿದಂತೆ ಉನ್ನತ ಪೋಲೀಸ್ ಅಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದರು. ಹಲವಾರು ಗಂಡಸರು ಬಳಸಿಕೊಂಡ ಮೇಲೆ ಕೆಲವೊಮ್ಮೆ ಒಬ್ಬ ಅಂಥ ಹೆಂಗಸನ್ನು ಅಧಿಕೃತವಾಗಿ ಇಟ್ಟುಕೊಳ್ಳುತ್ತಿದ್ದ ಅಥವಾ ಮದುವೆಯಾಗುತ್ತಿದ್ದ. ಇನ್ನು ಕೆಲವರು ಸಂತ್ರಸ್ತರ ಕ್ಯಾಂಪುಗಳನ್ನು ಸೇರಿ ಅಲ್ಲಿ ಎರಡೂ ಜನಾಂಗದ ಗಂಡಸರಿಂದ ಅತ್ಯಾಚಾರಕ್ಕೆ ಈಡಾಗುತ್ತಿದ್ದರು. ಕೆಲವರು ಗರ್ಭಿಣಿಯರಾಗುತ್ತಿದ್ದರು. ಎರಡೂ ದೇಶದ ರಾಜಕೀಯ ವ್ಯಕ್ತಿಗಳು ಹಾಗೂ ಸರಕಾರಗಳಿಗೆ ಇದು ಬಹು ದೊಡ್ಡ ಸವಾಲಾಗಿತ್ತು. ದೇಶದ ಘನತೆಗೆ ಕಳಂಕ ತರುವ ವಿಷಯವಾಗಿತ್ತು." (ನ.ರವಿಕುಮಾರ (ಸಂ). ಅಭಿನವ ಚಾತುರ್ಮಾಸಿಕ 'ಹೇ ರಾಮ್' ಭಾರತದ ಆತ್ಮಚ್ಛೇದ ಕಥನ, 2003, ಪುಟ. 14. ಅಭಿನವ, ಬೆಂಗಳೂರು) ಅದನ್ನು ನೋಡಲು ನಾವು ಬೇರೆ ವಿಷಯಗಳನ್ನು ನಮ್ಮ ಗಮನಕ್ಕೆ ತರಬೇಕಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ಬದಲಾವಣೆಯನ್ನು ತರದೇ ಇರುವ ದುರಂತಗಳು ಇಲ್ಲ. ಅದು ಅನೇಕ ಪಲ್ಲಟಗಳನ್ನು ತರುತ್ತದೆ. ದುರಂತವು ಈಗ ನಡೆಯುತ್ತಿರುವುದು

ಹಿಂದೆ ನಡೆಯುತ್ತಿದ್ದ ಕಾರಣಕ್ಕೆ ಅಲ್ಲ. ಅದರ ಬದಲು ಈಗ ಇದರ ಸ್ವರೂಪಗಳು ಬದಲಾಗಿದೆ. ದುರಂತ ಮತ್ತು ಅದರ ಸ್ವರೂಪವೂ ಕಾಲಕ್ಕೆ ಮಾತ್ರವೇ ಸೀಮಿತವಾಗಿಲ್ಲ. ದುರಂತವು ದಿನಾ ನಡೆಯುವುದಿಲ್ಲ. ಅದರ ಸ್ವರೂಪವೂ ವ್ಯತ್ಯಾಸವಾಗಿದೆ. ದುರಂತದ ನಿಯಮಗಳು ಕಾಮಿಡಿಯ ನಿಯಮಗಳು ಅಲ್ಲ. ಆದರೆ ಮನುಷ್ಯ ಮತ್ತು ಅವನ ಅಸ್ತಿತ್ವವು ಈಗ ಕಾಮಿಡಿಯ ರೀತಿಯಲ್ಲಿ ಇರುವುದೂ ಇಲ್ಲ. ದುರಂತ ನಾಟಕವು ಒಂದು ಕಾಲದಲ್ಲಿ ಜೀವನ ಮತ್ತು ರಾಜಕಾರಣದ ಯಜಮಾನಿಕೆಯನ್ನು ವಿರೋಧಿಸಿತ್ತು. ಅದರ ಆಂತರಿಕವಾದ ಸ್ವರೂಪವೂ ಬೇರೆಯಾಗಿತ್ತು. ದುರಂತವು ವಾಸ್ತವವಾಗಿ ಅನೇಕ ರೀತಿಯ ಪಂಥಾಹ್ವಾನವನ್ನು ಒಡ್ಡುತ್ತದೆ. ದುರಂತವು ಜೀವನದ ಬಗ್ಗೆ ನಿಜವಾದ ಅಭಿಪ್ರಾಯವನ್ನು ತಳೆಯುತ್ತದೆ. ಅದರಲ್ಲಿ ಜೀವನವು ಹೇಗೆ ಇರುತ್ತದೆ ಎನ್ನುವುದರ ವಿವರಣೆಯು ಇರುತ್ತದೆ. ಅದರಲ್ಲಿ ಜೀವನದ ಚೀತ್ಕಾರವು ಮಾತ್ರವೇ ಇರುವುದೂ ಇಲ್ಲ. ಅದರಲ್ಲಿ ಜೀವನದ ಬಗ್ಗೆ ನಿರ್ಣಾಯಕವಾದ ವಿವರಣೆಯೂ ಇರುತ್ತದೆ. ಅದರಲ್ಲಿ ಜೀವನದ ಸಂದಿಗ್ಧತೆಯು ಮಾತ್ರವೇ ಇರುವುದು ಇಲ್ಲ. ಅದರಲ್ಲಿ ಜೀವನ ಮತ್ತು ಅದರ ಅರ್ಥಗಳ ವ್ಯಾಪಾರವೂ ಭಿನ್ನವಾಗಿರುತ್ತದೆ. ನೀತಿಯನ್ನು ಅದು ತನ್ನದೇ ಆದ ಶೈಲಿಯಲ್ಲಿ ವಿವರಿಸುತ್ತದೆ. ಸಮಾಜ ಮತ್ತು ಅದರ ಹಿಂದೆ ಇರುವ ಸಂಸ್ಕೃತಿಯನ್ನು ಅದು ಹೇಳುತ್ತದೆ. ಅದಕ್ಕೂ ಸಮಾಜದ ಸಂದರ್ಭ ಎನ್ನುವುದೂ ಅಷ್ಟೇ ಮುಖ್ಯವಾಗುತ್ತದೆ. ಅಂತಿಗೊನೆಯಲ್ಲಿ ಬರುವ ಭ್ರಮೆ ಮತ್ತು ಜೀವನದ ಆಸೆಗಳನ್ನೂ ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಈಡಿಪಸ್ ವಿಧಿಯಿಂದ ತಪ್ಪಿಸಿಕೊಂಡೂ ಅನೇಕವನ್ನು ಸಾಧಿಸುತ್ತಾನೆ. ಅವನಿಗೆ ಕೆಲವು ವಿಜಯವು ಸಾಧ್ಯವಾಗುತ್ತದೆ. ಅವನಿಗೆ ಅದೃಷ್ಟವು ಕೈಕೊಡುತ್ತದೆ. ಅದು ಅವನಿಗೆ ಹೆಚ್ಚು ಶಕ್ತಿಯನ್ನೂ ಕೊಟ್ಟಿದೆ. ಅದೃಷ್ಟವೇ ಅವನ ಸಾಧನೆಗೆ ಕಾರಣವಾಗಿದೆ. ಸ್ವಯಂ ಸಾಧನೆಯು ಅವನಿಗೆ ಸಾಧ್ಯವಾಗಿದೆ. ಅವನಿಗೆ ಶಕ್ತಿಯು ಇದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೂ ಇದೆ. ಒಂದು ದೇಶದಲ್ಲಿ ಯಾವಾಗ ಭಿಕ್ಷುಕರ ಸಂಖ್ಯೆಯು ಹೆಚ್ಚಿದೆಯೋ ಅಥವಾ ಆಸ್ತಿ ಹೀನರ ಸಂಖ್ಯೆಯು ಮಿತಿ ಮೀರಿದೆಯೋ ಅದು ಸಮಾಜ ಮತ್ತು ಸರಕಾರದ ನೀತಿಯು ಭಿನ್ನವಾಗಿದೆ ಎಂದೇ ಅರ್ಥ. ಅದರಲ್ಲಿ ಸಮಾಜದ ತಾರತಮ್ಯವನ್ನು ಹೇಳುತ್ತದೆ. ಅದು ಕೂಡಾ ಸಮಾಜದ ದುರಂತವಾಗಿರುತ್ತದೆ. ಕೆಲವು ದುರಂತಗಳು ಸಮಾಜದಲ್ಲಿ ಪರಿವರ್ತನೆಯನ್ನು ತಂದಿತು. ಅನೇಕ ಸಂದರ್ಭದಲ್ಲಿ ದುರಂತವು ಸಹಜವೆನ್ನುವಂತೆ ಘಟಿಸುತ್ತದೆ. ವಾಸ್ತವವಾದದಲ್ಲಿ ದುರಂತವು ಅನೇಕ ಪರಿಹಾರಕ್ಕೆ ಕಾರಣವಾಗುತ್ತದೆ. ದುರಂತವು ಮೂಲಭೂತವಾಗಿ ನಿರ್ದಿಷ್ಟವಾದ ಅರ್ಥವನ್ನು ಹೇಳುತ್ತದೆ. ಕೇಡು ಮತ್ತು ಅದರ ಮೌಲ್ಯವೂ ಬದಲಾಗುತ್ತದೆ. ಇಲ್ಲಿ ಅಸ್ತಿತ್ವವಾದವನ್ನು ಹೇಳಬೇಕಾಗುತ್ತದೆ. ಅಸ್ತಿತ್ವವಾದವು ಜೀವನ ಮತ್ತು ಅದರ ಅರ್ಥಹೀನತೆಯನ್ನು ಹೇಳುತ್ತದೆ. ಅದರಲ್ಲಿಯೂ ನಿರ್ದಿಷ್ಟವಾದ ಉದ್ದೇಶವೂ ಇರುತ್ತದೆ. ಅದರ ಉದ್ದೇಶ ಮತ್ತು ಅದರ ವ್ಯಾಪ್ತಿಯು ಬೇರೆಯಾಗಿದೆ. ಅದರ ನಿಲುವೂ ಬೇರೆಯಾಗಿದೆ. ಮೂಲತಃ ಅದು ಸಂಘರ್ಷವನ್ನು ಹೇಳುತ್ತದೆ. ವಿಧಿಯನ್ನು ನಿರ್ದಿಷ್ಟವಾದ ಅರ್ಥದಲ್ಲಿ ಬಳಸುತ್ತದೆ.

ಸಮಾಜ ಮತ್ತು ಅದರ ಅರ್ಥವ್ಯಾಪ್ತಿಯು ಅದರಲ್ಲಿ ಬೇರೆಯಾಗಿದೆ. ಆದರೆ ಅಸ್ತಿತ್ವವಾದವೂ ಅನೇಕವನ್ನು ಹೇಳುತ್ತದೆ ಎನ್ನುವುದೂ ನಿಜ. ಅಸ್ತಿತ್ವವಾದವೂ ಸಂಘರ್ಷವನ್ನು ಹೇಳುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಅದರಲ್ಲಿ ನಿರ್ದಿಷ್ಟವಾದ ಮೌಲ್ಯವು ಇರುತ್ತದೆ. ಅದರಲ್ಲಿ ಜೀವನ ಮತ್ತು ಅದರ ಸ್ವರೂಪದ ಕುರಿತು ಭಿನ್ನವಾದ ನಿಲುವೂ ಇರುತ್ತದೆ. ಅದನ್ನು ಅದು ನೋಡುವುದೂ ಬೇರೆ ರೀತಿಯಲ್ಲಿ. ಅಸ್ತಿತ್ವವು ಬರೀ ದೇಹ ಮತ್ತು ಅದರ ಆಘಾತದ ಸಂಗತಿಯೂ ಅಲ್ಲ. ಅದು ಮನುಷ್ಯನ ಜೀವನ ಮತ್ತು ಅದರ ಸ್ಥಿತಿಯನ್ನು ಹೇಳುತ್ತದೆ. ಅಸ್ತಿತ್ವವಾದವು ಮನುಷ್ಯ ಮತ್ತು ಅವನ ಜೀವನದ ಕ್ರಮವನ್ನು ಹೇಳುವುದೂ ಬೇರೆ ಕಾರಣಕ್ಕೆ. ಅದು ಮನುಷ್ಯನ ಅಸ್ತಿತ್ವವನ್ನು ವಿಮರ್ಶಾತ್ಮಕವಾಗಿಯೂ ನೋಡುತ್ತದೆ. ಅದು ಸಾಹಿತ್ಯದಲ್ಲಿ ಬರುವಾಗ ಅದರ ಸ್ವರೂಪವೂ ಬೇರೆಯಾಯಿತು. ಅದರ ತಾತ್ವಿಕ ಭಿತ್ತಿಯೂ ಬೇರೆಯಾಗಿದೆ. ಅದು ಆದರ್ಶ ಕೇಂದ್ರಿತವೂ ಅಲ್ಲ. ಆದರೆ ಮತ್ತೊಂದು ಅಂಶವನ್ನು ಇಲ್ಲಿ ಹೇಳಬೇಕಾಗುತ್ತದೆ. ಅಸ್ತಿತ್ವವಾದವು ಮೂಲಭೂತವಾಗಿ ಆದರ್ಶ ಕೇಂದ್ರಿತವಾದ ನೆಲೆಯನ್ನು ಮಾತ್ರವೇ ಸೂಚಿಸುವುದೂ ಇಲ್ಲ. ಅದು ಉದ್ದೇಶಿತವಾದ ಒಂದು ನಿರ್ದಿಷ್ಟವಾದ ನಿಲುವನ್ನು ಮಾತ್ರವೇ ಹೇಳುವುದೂ ಇಲ್ಲ. ವ್ಯಕ್ತಿತ್ವ ಮತ್ತು ಅದರ ನಡುವೆ ಇರುವ ಅಂತರಗಳು ಮುಖ್ಯವಾಗುತ್ತವೆ. ಅದರ ಹಿಂದೆ ಇರುವ ಕಾಳಜಿಗಳು ಮುಖ್ಯವಾಗುತ್ತವೆ. ವ್ಯಕ್ತಿ ಮತ್ತು ಅವನ ಮನೋಭಾವವು ಬದಲಾಗುತ್ತದೆ. ಅದರಲ್ಲಿ ವ್ಯಕ್ತಿತ್ವದ ದೋಷವೂ ಇರಬಹುದು. ದೋಷವನ್ನು ಅಸ್ತಿತ್ವವು ಹೇಳುವುದೇ ಬೇರೆ ರೀತಿಯಲ್ಲಿ. ಬೆಕೆಟ್‌ನಲ್ಲಿ ವ್ಯಕ್ತಿತ್ವ ಮತ್ತು ಅದರ ಪರಿಣಾಮವು ಬೇರೆಯಾಗುತ್ತದೆ. ಅವನಲ್ಲಿ ಅರ್ಥಹೀನವಾದ ಮೌಲ್ಯವು ದುರಂತವಲ್ಲ. ಅಸ್ತಿತ್ವ ಮತ್ತು ಅದರ ಅರ್ಥವನ್ನು ಬೆಕೆಟ್ ಹೇಳುವ ಕ್ರಮವು ಘನತೆಗೂ ಸಂಬಂಧಪಟ್ಟಿದೆ. ಅಂದರೆ ಅರ್ಥ ಇರುವುದೂ ಬಿಡುವುದೂ ಅದರದೇ ಆದ ಕಾರಣಕ್ಕಾಗಿ. ನಮಗೆ ಅರ್ಥ ಪೂರ್ಣವಾದುದು ಇನ್ನೊಬ್ಬರಿಗೆ ಅರ್ಥಹೀನವಾದರೆ ಅದರ ಸ್ವರೂಪವು ಬೇರೆಯಾಗುತ್ತದೆ. ನಾವು ಯಾವುದನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ ಎನ್ನುವುದರ ಮೇಲೆ ಇದು ನಿರ್ಣಯವಾಗುತ್ತದೆ. ಆದರೆ ಅಸ್ತಿತ್ವ ಮತ್ತು ಅದರ ಅರ್ಥವು ವಾಸ್ತವವಾಗಿ ಬೆಕೆಟ್‌ನಲ್ಲಿ ಬೇರೆಯಾಗುತ್ತದೆ. ಅವನ ವೇಯಿಟಿಂಗ್ ಫಾರ್ ಗಾಡೋದಲ್ಲಿ ಇದರ ನಿರೂಪಣೆಯು ಬೇರೆಯಾಗುತ್ತದೆ. ಅವನು ನಿರೂಪಣೆಯನ್ನು ಮಾಡುವುದು ಬೇರೆಯದನ್ನು. ಅವನ ಅರ್ಥದಲ್ಲಿ ಅನೇಕವನ್ನು ಇತ್ಯಾತ್ಮಕವಾಗಿ ನಿರ್ಧರಿಸಲು ಬರುವುದೂ ಇಲ್ಲ. ಅವನಲ್ಲಿ ಜಗತ್ತು ಅತ್ಯಂತ ಮಹತ್ವದ ತೀರ್ಮಾನವನ್ನು ಈಗಾಗಲೇ ಮಾಡಿ ಮುಗಿಸಿಲ್ಲ. ಅದುವೇ ಅಂತಿಮವೂ ಅಲ್ಲ. ಅದರಲ್ಲಿ ಈಗಾಗಲೇ ಸಿದ್ಧವಾದ ಉತ್ತರವು ಇಲ್ಲ. ಅದನ್ನು ನೋಡುವುದೂ ಅಂದರೆ ಅದರ ಅರ್ಥವು ಬೇರೆಯಾಗುತ್ತದೆ. ಜಗತ್ತು ಎಲ್ಲಾ ಸಮಸ್ಯೆಯನ್ನು ಬಗೆಹರಿಸಲಾರದು. ಅವನ ಪ್ರಕಾರ ಜಗತ್ತು ಎನ್ನುವುದೂ ಕೂಡಾ ಎಲ್ಲಾ ಸಮಸ್ಯೆಯನ್ನು ಬಗೆಹರಿಸುವುದು ಅಸಾಧ್ಯ. ದುರಂತವು ಅವನಲ್ಲಿ ಆಂಶಿಕ ಮಾತ್ರವೇ ಆಗಿರುತ್ತದೆ. ಅದರಲ್ಲಿ ದುರಂತದ ಬೇರೆ ಭಾವನೆಗಳು ಇವೆ. ಅದು

ಆಧುನಿಕತೆಯಿಂದ ಹುಟ್ಟಿದೆ. ಆಧುನಿಕತಾವಾದ ಮೌಲ್ಯವೂ ಬೇರೆಯಾಗಿರುತ್ತದೆ. ಅರಿಸ್ಟಾಟಲ್‌ನಲ್ಲಿ ಉದಾತ್ತತೆಯ ಕುರಿತ ವಿವರಣೆಯು ಇದೆ. ಅವನಲ್ಲಿ ರಾಜ ಅಥವಾ ಅಸಾಮಾನ್ಯವಾದ ವ್ಯಕ್ತಿಯು ಮಾತ್ರವೇ ದುರಂತವನ್ನು ಅನುಭವಿಸುತ್ತಾನೆ. ಮನುಷ್ಯನ ದುರ್ವಿಧಿಯನ್ನು ದುರಂತವನ್ನು ಸೂಚಿಸುತ್ತದೆ ಎಂದು ಬಾರ್ತ್ ಹೇಳುತ್ತಾನೆ. ಆದ್ದರಿಂದ ಪಾವಿತ್ರ್ಯವು ಅದರಲ್ಲಿ ಅತ್ಯಂತ ಮುಖ್ಯವಾದ ವಿಷಯವೂ ಆಗಿದೆ. ದುರಂತವು ಅನೇಕ ರೀತಿಯ ಹಿಂಸೆಯನ್ನು ಹೇಳುತ್ತದೆ. ಅದರಲ್ಲಿ ಹೇಳಲಾಗದ ನೋವು ಇದೆ. ಅದೃಷ್ಟದ ಕುರಿತಾದ ವಿಚಾರವೂ ಇದೆ. ಕ್ರೌರ್ಯವೂ ಇದೆ. ಹಾಗೂ ಇದರಲ್ಲಿ ಅದೃಷ್ಟ ಮತ್ತು ಅದರ ಯಜಮಾನಿಕೆಯ ಕುರಿತಾದ ಸಂಗತಿಯೂ ಇದೆ. ವಾಸ್ತವವಾಗಿ ದುರಂತವು ಉನ್ನತವಾದ ಸಂಸ್ಕೃತಿಯನ್ನು ಹೇಳುತ್ತದೆ. ಅದರಲ್ಲಿ ಉಂಟಾಗುವ ತಲ್ಲಣವು ಮತ್ತೊಂದು ಬಗೆಯದೂ ಹೌದು. ಚರಿತ್ರೆಯೂ ಅದರಲ್ಲಿ ಬೇರೆಯಾಗುತ್ತದೆ. ಒಬ್ಬ ವ್ಯಕ್ತಿ ಮತ್ತು ಅವನ ಅಸ್ತಿತ್ವವು ಭಿನ್ನವಾಗುತ್ತದೆ. ದುರಂತ ಮತ್ತು ಅದರ ಮೌಲ್ಯಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ದುರಂತದ ನಿಯಮವೂ ಬೇರೆಯಾಗುತ್ತದೆ. ಸೂಸಾನ್ ಲಾಂಗರ್ ವ್ಯಕ್ತಿ ಮತ್ತು ಅವನ ಮಿತಿಯನ್ನು ಹೇಳುವುದು ಮಾತ್ರವೇ ಅಲ್ಲ; ಅದರಲ್ಲಿ ವ್ಯಕ್ತಿ ಮತ್ತು ಅವನ ಗುಣ ನಡತೆಯ ಪ್ರಶ್ನೆಯೂ ಬರುತ್ತದೆ ಎಂದು ಹೇಳುತ್ತಾನೆ. ಹಾಗೆಂದು ದುರಂತದ ನಾಯಕನು ಒಂದು ರೀತಿಯಿಂದ ಸ್ವತಂತ್ರನೂ ಅಲ್ಲ. ಅದರಲ್ಲಿ ವ್ಯಕ್ತಿ ಅವನ ಸಮಸ್ಯೆಯೂ ಇರುತ್ತದೆ. ಅವನ ಸಮಸ್ಯೆಯು ಸಂಕೀರ್ಣವೂ ಆಗುತ್ತದೆ. ಗ್ರೀಕ್ ದುರಂತ ನಾಟಕಕ್ಕೂ ಸಂಸ್ಕೃತಿಗೂ ಸಂಬಂಧವಿದೆ. ಆಧುನಿಕ ಪೂರ್ವದ ಸಮಸ್ಯೆಯನ್ನು ಅದು ಹೇಳುತ್ತದೆ. ಸಂಸ್ಕೃತಿ, ಆಚರಣೆ ಮತ್ತು ಧರ್ಮವು ಅದರಲ್ಲಿ ಬಹಳ ಮುಖ್ಯವಾಗುತ್ತದೆ. ಆದರೆ ಅದರಲ್ಲಿ ಜೀವನದ ಮೌಲ್ಯವೂ ಇತ್ತು. ಜೀವನದ ಅತ್ಯಂತ ಮಹತ್ವದ ಮೌಲ್ಯವು ಯಾವ ಬಗೆಯದು ಎಂದು ಹೇಳುವುದು ಅದರ ಗುರಿಯೂ ಆಗಿದೆ. ಜೀವನ ಮತ್ತು ಅದರ ಉನ್ನತವಾದ ಮೌಲ್ಯವನ್ನು ಅದು ವಿವರಿಸುತ್ತದೆ. ಜೀವನ ಮತ್ತು ಅದರ ಮೌಲ್ಯವು ಅದರಲ್ಲಿ ಅತ್ಯಂತ ಮಹತ್ವದ್ದೂ ಹೌದು. ಮನುಷ್ಯ ಮತ್ತು ಅವನು ಪ್ರತಿನಿಧಿಸುವ ಮೌಲ್ಯವು ಸಾಂಸ್ಕೃತಿಕವೂ ಆಗಿದೆ. ತೀವ್ರತೆ, ಸಹನೆ, ಸ್ವೀಕಾರ, ವಿಷಾದ ಮುಂತಾದವುಗಳು ಅದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ನಾಯಕ ಮತ್ತು ಅವನ ವ್ಯಕ್ತಿತ್ವವನ್ನು ಅದು ಹೇಳುತ್ತದೆ. ಆದರೆ ಅವನಿಗೆ ಸಾಮಾನ್ಯವಲ್ಲದ ವ್ಯಕ್ತಿತ್ವವೂ ಇದೆ. ವ್ಯಕ್ತಿ ಮತ್ತು ಅವನ ಘನತೆಯನ್ನು ಅದು ಹೇಳುತ್ತದೆ. ದುರಂತ ಮತ್ತು ಅದರ ಸೂಚನೆಯು ಭಿನ್ನವಾಗುತ್ತದೆ. ಕೆಲವು ದುರಂತ ನಾಟಕಗಳಲ್ಲಿ ಪ್ರತಿನಾಯಕನೂ ಇರುವುದೂ ಇಲ್ಲ. ದುರಂತ ಮತ್ತು ಅದರ ಸೂಚನೆಗಳು ಬೇರೆಯಾಗುತ್ತದೆ. ಅತ್ಯಂತ ಆಳದಲ್ಲಿ ದುರಂತವು ಬೀರುವ ಪರಿಣಾಮವೂ ಬೇರೆಯಾಗುತ್ತದೆ. ಅದರಲ್ಲಿ ಬೇರೆ ಬೇರೆ ಸಂಘರ್ಷವೂ ಇರುತ್ತದೆ. ಆದರೆ ಹೊಸ ಸಮಾಜ ಮತ್ತು ಅದರ ದುರಂತದ ಕಲ್ಪನೆಯು ಬೇರೆಯಾಗುತ್ತದೆ. ಅಸ್ತಿತ್ವವು ಬೇರೆಯಾಗುತ್ತದೆ. ಅದರ ಸತ್ಯವೂ ಬೇರೆಯಾಗುತ್ತದೆ. ದಿನನಿತ್ಯದ ಸಮಸ್ಯೆಯು ಬೇರೆಯಾಗುತ್ತದೆ. ಈಗ ಮಹತ್ವದ

ಸಮಸ್ಯೆಯೆಂದರೆ ಜೀವನ ಮತ್ತು ಅದರ ಸ್ಥಿರತೆಯ ಪ್ರಶ್ನೆ. ಜೀವನವು ಸಂಕೀರ್ಣವಾದರೆ ಅದರ ಹಿಂದೆ ಇರುವ ದುರಂತವೂ ಬೇರೆಯಾಗುತ್ತದೆ. ದುರಂತವು ನೈತಿಕವಾದ ಪ್ರಶ್ನೆಯನ್ನು ಒಳಗೊಂಡಿದೆ. ನಾಯಕನು ಮೂಲತಃ ನೀತಿಯನ್ನು ಪ್ರತಿನಿಧಿಸುತ್ತಾನೆ. ಅವನು ವಿಶ್ವಾತ್ಮಕತೆಯನ್ನು ಸೂಚಿಸುತ್ತಾನೆ. ಅವನು ಶಕ್ತಿಶಾಲಿಯೂ ಹೌದು. ಅವನಿಗೆ ನಿಜವಾದ ಒಂದು ದೃಷ್ಟಿಕೋನವೂ ಇದೆ. ಮನುಷ್ಯ ಮತ್ತು ಅವನ ಸ್ಥಿತಿಯು ಹೇಗಿದೆ ಎಂದು ಅವನು ಸೂಚಿಸುತ್ತಾನೆ. ಅವನ ದುಃಖವೂ ಅತ್ಯಂತ ವಿಶಿಷ್ಟವಾಗಿದೆ. ಅವನಿಗೆ ನೋವು ಇದೆ. ಅದರಿಂದ ಅವನು ವಿಚಲಿತನಾಗಿದ್ದಾನೆ. ಅವನಿಗೆ ಒಂದು ಬಗೆಯ ಜ್ಞಾನವೂ ಇದೆ. ಅವನು ಪುರುಷ. ಅವನ ಅಸ್ತಿತ್ವವೇ ಬೇರೆ ಮಾದರಿಯದೂ ಹೌದು. ಅವನು ಶಿಕ್ಷೆಯನ್ನು ಅನುಭವಿಸುತ್ತಾನೆ. ಅವನ ಜೊತೆಗೆ ಅದೃಷ್ಟ ಮತ್ತು ದುರಾದೃಷ್ಟ ಎರಡೂ ಇದೆ. ಅವನು ಜೀವನವನ್ನು ನೋಡುವುದೂ ಭಿನ್ನವಾಗಿ. ದುರಂತದ ನಾಯಕನು ಪ್ರತ್ಯೇಕವಾಗಿಯೇ ಇದ್ದಾನೆ ಎಂದು ನಾಥ್ರಪ್ಫ್ರೈ ಹೇಳುತ್ತಾನೆ. ಆದರೆ ಇಲ್ಲಿ ಮತ್ತೆ ಕೆಲವು ಮಾತುಗಳನ್ನು ಯೋಚಿಸಬೇಕಾಗುತ್ತದೆ. ಮೂಲತಃ ದುರಂತವನ್ನು ಆಧುನಿಕ ಜಗತ್ತಿನಲ್ಲಿ ವ್ಯಾಖ್ಯಾನಿಸುವ ಕ್ರಮವು ಬೇರೆಯಾಗಬೇಕಾಗುತ್ತದೆ. ದುರಂತ ನಾಯಕನೂ ಒಂದು ದೃಷ್ಟಿಯಿಂದ ವಿಶಿಷ್ಟನೂ ಹೌದು. ಅವನಿಗೆ ಅವನದೇ ಆದ ಸಮಸ್ಯೆಯೂ ಇದೆ. ಅವನು ಪ್ರತಿನಿಧಿಸುವ ಮೌಲ್ಯವು ಭಿನ್ನ. ಒಂದು ದೃಷ್ಟಿಯಿಂದ ಅವನು ಹೇಳುವುದೂ ಭಿನ್ನವಾದ ಸಂಗತಿಯನ್ನು. ಅವನಿಗೆ ಅವನದೇ ಸ್ಥಾನವೂ ಇದೆ. ಅವನು ಬದುಕುವುದು ಮತ್ತು ಜೀವಿಸುವುದು ದುರಂತದಲ್ಲಿಯೇ. ಆದರೆ ಅವನು ತನ್ನ ಕಾರ್ಯಕ್ಕೆ ತಾನೇ ವಾರಸುದಾರನೂ ಆಗಿರುವುದೂ ಇಲ್ಲ. ಆದರೆ ದುರಂತವನ್ನು ಈಗ ನಾವು ಬೇರೆ ಅರ್ಥದಲ್ಲಿಯೂ ಬಳಸುತ್ತೇವೆ. ಅದನ್ನು ನೋಡುವ ಕ್ರಮಗಳು ಬದಲಾಗಿದೆ. ಮನುಷ್ಯ ಮತ್ತು ಅವನ ಸಮಸ್ಯೆಗಳು ಬದಲಾಗುತ್ತವೆ. ದುರಂತ ಮತ್ತು ಅದರ ಚಹರೆಗಳು ಬದಲಾಗುತ್ತವೆ. ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ದುರಂತದ ನಾಯಕನು ಒಂದು ಅರ್ಥದಲ್ಲಿ ನೈತಿಕವಾದ ನಿಲುವಿನಲ್ಲಿ ಬದುಕುತ್ತಾನೆ. ಅವನ ನಿಲುವು ವಿಶ್ವಾತ್ಮಕವೂ ಹೌದು. ಅವನದು ನಿರ್ದಿಷ್ಟವಾದ ನಿಲುವೂ ಹೌದು. ಅವನ ದುಃಖವು ಅತ್ಯಂತ ವಿಚಿತ್ರವೂ ಹೌದು. ಆ ಬಗೆಯ ದುಃಖವನ್ನು ತೀರಾ ಸಾಮಾನ್ಯರಲ್ಲಿ ಕಾಣುವುದೂ ಅಸಾಧ್ಯ. ಅವನಿಗೆ ನಿರ್ದಿಷ್ಟವಾದ ಸಮಸ್ಯೆಯೂ ಇದೆ. ಅದರಲ್ಲಿ ವಿಭಿನ್ನವಾದ ನೆಲೆಯೂ ಇದೆ. ಅವನ ಅರಿವು ಬೇರೆಯಾಗಿದೆ. ಅದರಲ್ಲಿ ತಾರತಮ್ಯವೂ ಇದೆ. ಮನುಷ್ಯ ಮತ್ತು ಅವನ ಸಮಸ್ಯೆಯನ್ನು ದುರಂತ ನಾಟಕವು ಹೇಳುವ ಕ್ರಮವು ಬೇರೆಯಾಗಿದೆ. ಅದರ ನಾಯಕನು ಬೇರೆ ಬೇರೆ ಶಿಕ್ಷೆಯನ್ನು ಅನುಭವಿಸುತ್ತಾನೆ. ಅವನಿಗೆ ಅವನದೇ ಆದ ನೆಲೆಯೂ ಇದೆ. ಅದರಲ್ಲಿ ಅವನ ವ್ಯಕ್ತಿತ್ವ ಸಾರರೂಪವೂ ಇದೆ. ಒಂದು ಅರ್ಥದಲ್ಲಿ ಮನುಷ್ಯ ಮತ್ತು ಅವನ ಶಕ್ತಿ ಹಾಗೂ ಅವನ ನೋವು ಬೇರೆಯಾಗುತ್ತದೆ. ಅವನು ಗಂಡು ಎನ್ನುವುದನ್ನು ಇಲ್ಲಿ

ದಾಖಲಿಸಬೇಕಾಗುತ್ತದೆ. ನಾಯಕ ಮತ್ತು ಅವನ ಅದೃಷ್ಟ ಹಾಗೂ ಅವನ ದುರಾದೃಷ್ಟವೇ ಮುಖ್ಯವಾಗುತ್ತದೆ. ಅದರಲ್ಲಿ ಈ ಬಗೆಯನ್ನು ನಾವು ಕಾಣಬಹುದು. ನಾಯಕನಿಗೆ ಕೆಲವು ರೀತಿಯ ನೀತಿಗಳೂ ಇವೆ. ಅವನು ಅದನ್ನು ದಾಟಲಾರ. ಅದರೆ ಅದರ ಸಮಸ್ಯೆಯನ್ನು ಮಾತ್ರವೇ ಅನುಭವಿಸಬಲ್ಲ. ಅದರಲ್ಲಿ ಯಾತನೆಗಳೂ ಇವೆ. ನಾಯಕನು ಒಂದು ದೃಷ್ಟಿಯಿಂದ ಪ್ರತ್ಯೇಕವಾಗಿದ್ದಾನೆ. ಉಳಿದವರಿಗಿಂತ ಅವನು ಭಿನ್ನವಾಗಿದ್ದಾನೆ, ಅವನಿಗೆ ಅವನದೇ ಆದ ಒಂದು ಸಮಸ್ಯೆಯು ಇದ್ದು ಅವನು ಅದರ ಮೂಲಕವೇ ಬೇರೆಯದನ್ನು ಸಾಧಿಸುತ್ತಾನೆ. ಅವನತಿಯನ್ನೂ ಹೊಂದುತ್ತಾನೆ. ಅದು ಮೌಲ್ಯವನ್ನು ಹೇಳುತ್ತದೆ. ಅದರಲ್ಲಿ ಬಿಕ್ಕಟ್ಟುಗಳು ಇವೆ. ಆದರೆ ಯಾವುದೇ ಸಂಗತಿಯನ್ನು ನೋಡುವುದು ಮತ್ತು ಅದನ್ನು ಗ್ರಹಿಸುವುದು ನಿಜವಾಗಿಯೂ ಭಿನ್ನವಾದ ಪ್ರಕ್ರಿಯೆಯೂ ಆಗಿದೆ. ದುರಂತವನ್ನು ನಾವು ಬರೀ ಒಬ್ಬನ ವ್ಯಕ್ತಿತ್ವದಲ್ಲಿ ನಡೆಯುವ ಪ್ರಕ್ರಿಯೆ ಎಂದು ಭಾವಿಸಬೇಕಾಗಿಯೂ ಇಲ್ಲ. ಅದರ ಹಿಂದೆ ಬೇರೆ ಬೇರೆ ಒತ್ತಡಗಳೂ ಇರುತ್ತವೆ. ಅದನ್ನು ನೈತಿಕ ಸಮಾಜದ ಸಮಸ್ಯೆ ಎಂದೂ ಹೇಳಬಹುದು. ಅದನ್ನು ಮತ್ತೆ ಬೇರೆ ರೀತಿಯಲ್ಲಿಯೂ ವಿವರಿಸಬಹುದು. ಅದು ದುರಂತವಾಗುವುದು ನಿರ್ದಿಷ್ಟವಾದ ಒಂದು ಕಾರಣಕ್ಕಾಗಿ. ಅದನ್ನು ಆಧುನಿಕೋತ್ತರ ನಿಲುವು ಹೇಳುವುದು ಬೇರೆ ರೀತಿಯಲ್ಲಿ. ಅದರ ಪ್ರಕಾರ ಅದು ಭಾವನೆಯನ್ನು ಹೇಳುತ್ತದೆ. ಅದರ ಹಿಂದೆ ಭಿನ್ನವಾದ ನಿಲುವು ಇರುವುದು ಸತ್ಯ. ದುರಂತ ನಾಟಕಗಳು ಮಾನವೀಯತೆ ಮತ್ತು ಅದರ ಸ್ವರೂಪವನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿತ್ವ ಮತ್ತು ಅದರ ಸಮಸ್ಯೆಗಳೂ ಬರುತ್ತವೆ. ಅದನ್ನು ಒಂದು ಸೃಜನಶೀಲವಾದ ವಿಸ್ಮೃತಿ ಎಂದೂ ಹೇಳಬಹುದು. ಅದರಲ್ಲಿ ನೋವು ಭಯ ಮತ್ತು ಮರೆವುಗಳೂ ಇವೆ. ಸ್ವ ಹಿಂಸೆಯನ್ನು ಅದು ಹೇಳುತ್ತದೆ. ಅದರಲ್ಲಿ ಸ್ವಯಂಘಾತಕತನವು ಇರುತ್ತದೆ. ಆದರೆ ಇದನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ನೆಲೆಯಲ್ಲಿಯೂ ಆಗಬೇಕಾಗುತ್ತದೆ. ಸ್ವ ಮತ್ತು ಅದರ ಹಿಂಸೆಗಳು ಒಂದು ರೀತಿಯಲ್ಲಿ ಇರುತ್ತದೆ ಎನ್ನುವುದಕ್ಕೆ ದುರಂತ ನಾಟಕಗಳೇ ಸಾಕ್ಷಿಯಾಗಿವೆ. ಅದನ್ನು ಒಂದು ಭ್ರಮೆ ಎಂದೂ ಹೇಳಬಹುದು. ಸ್ವ ಮತ್ತು ಅದರ ಹಿಂಸೆಯನ್ನು ದುರಂತಗಳು ಹೇಳುವುದೇ ಬೇರೆ ರೀತಿಯಲ್ಲಿ, ಇದರಲ್ಲಿ ಭಿನ್ನತೆಯೂ ಇದೆ. ಮತ್ತು ಯಾವುದನ್ನು ದುರಂತವೆಂದು ಹೇಳುತ್ತೇವೆಯೋ ಅದರಲ್ಲಿ ವ್ಯತ್ಯಾಸಗಳು ಇರುತ್ತವೆ. ದುರಂತದಲ್ಲಿ ಒಂದು ಬಗೆಯ ನೋವು ಇರುತ್ತದೆ. ಮತ್ತು ಅದನ್ನು ಗ್ರಹಿಸುವಾಗ ನಾವು ದುರಂತವನ್ನು ನೋಡುವುದು ಮತ್ತು ಗ್ರಹಿಸುವುದೂ ಬೇರೆ ಕ್ರಮದಲ್ಲಿಯೇ ಎನ್ನುವುದೂ ಅಷ್ಟೇ ಮುಖ್ಯ. ರಕ್ತ ಮತ್ತು ಭಯವೇ ಅದರಲ್ಲಿ ಬಹಳ ಮುಖ್ಯವಾಗಿದೆ. ಚರಿತ್ರೆಯಲ್ಲಿ ರಕ್ತವು ಇಲ್ಲವೆಂದು ಹೇಳುವುದೂ ಅಸಾಧ್ಯವೆಂದು ನೀಶೆಯು ಹೇಳುತ್ತಾನೆ. ವಾಸ್ತವವಾಗಿ ಯಾವುದೇ ಒಂದು ಘಟನೆಯನ್ನು ದುರಂತ ಅಥವಾ ಸುಖಾಂತವೆನ್ನುವುದು ಅದರ ಪರಿಣಾಮವನ್ನು ನೋಡಿಕೊಂಡು. ನಾಗರಿಕ ಸಮಾಜವು ಸುಖ ಮತ್ತು ದುಃಖವೆನ್ನುವುದನ್ನು ನೋಡುವುದೂ ಭಿನ್ನವಾಗಿಯೇ

ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ನಾಟಕದಲ್ಲಿ ಬರುವ ದುರಂತವು ವ್ಯಕ್ತವಾಗುವುದು ಅದರ ನಾಯಕನ ಮೂಲಕವೇ. ದುರಂತವೆನ್ನುವುದು ಅರಿವಿಗೆ ಬರುವುದೂ ಅದರ ಸಾಧ್ಯತೆಯೂ ಹೌದು. ದುರಂತವೆನ್ನುವುದು ಮೂಲಭೂತವಾಗಿ ಅನುಭವನ್ನೂ ಹೇಳುತ್ತದೆ. ಅದರಲ್ಲಿ ಬರುವ ಅನೇಕ ಘಟನೆಗಳಲ್ಲಿ ಜೀವನದ ತಲ್ಲಣಗಳ ಸ್ವರೂಪವೂ ಇದೆ. ನಾಟಕ ಮತ್ತು ಅದರ ನಿರೂಪಣೆಯಲ್ಲಿಯೇ ಅದರ ಸ್ವರೂಪವು ನಿಗದಿಯಾಗುತ್ತದೆ. ಅದರಲ್ಲಿ ಜೀವನದ ಬಗ್ಗೆ ಭಿನ್ನವಾದ ಒಂದು ಗ್ರಹಿಕೆಯು ಇದೆ. ಡ್ರಾಮ ಎಂದರೆ ವಸ್ತುವನ್ನು ರಚಿಸು ಎನ್ನುವ ಅರ್ಥವೂ ಇದೆ. ನಾಟಕದಲ್ಲಿ ದುರಂತವನ್ನು ನಾವು ನೋಡುವುದು ಅದರ ನಾಯಕನ ಮೂಲಕವೇ. ಅವನ ಅನುಭವವು ಸಾಮಾನ್ಯವಾದದ್ದೂ ಅಲ್ಲ. ದುರಂತ ಮತ್ತು ಅದರ ತತ್ವಜ್ಞಾನವೂ ಬೇರೆಯಾಗುತ್ತದೆ. ಅದರ ನಾಯಕನಿಗೆ ಯಾವುದೇ ಒಂದು ಬಗೆಯ ನೆಮ್ಮದಿಯು ಇಲ್ಲವಾಗಿದೆ. ಅವನು ಓಡುತ್ತಾನೆ. ಅನುಭವಿಸುತ್ತಾನೆ. ಅಳುತ್ತಾನೆ. ಮತ್ತು ಪಶ್ಚಾತ್ತಾಪವನ್ನು ಅನುಭವಿಸುತ್ತಾನೆ. ಅವನ ಸಾಮಾಜಿಕ ಜೀವನವು ಬೇರೆಯಾಗಿದೆ. ಅವನಿಗೆ ಯಾವುದೇ ಒಂದು ಅದೃಷ್ಟವು ಇಲ್ಲವಾಗಿದೆ. ಅವನದು ಖೊಟ್ಟಿಯಾದ ಅದೃಷ್ಟ. ಸರಿಯಾದ ಕಾಲಕ್ಕೆ ಅವನ ಅದೃಷ್ಟವು ಕೈಕೊಟ್ಟಿದೆ. ಭ್ರಮೆಗೆ ಗುರಿಯಾಗುತ್ತಾನೆ. ಅದರ ಸ್ವರೂಪವೇ ಬೇರೆ. ಅವನಿಗೆ ಸಂತೋಷವೇ ಕಾಣೆಯಾಗಿದೆ. ಅವನ ಉದ್ದೇಶವು ಒಂದು ಇದೆ. ಅದರ ಅನುಭವವೇ ಆಗುವುದೇ ಇಲ್ಲ. ಅವನ ಕ್ರಿಯೆಯೂ ಬೇರೆ ಬಗೆಯದು. ಆದರೆ ಅವನ ಅನುಭವನ್ನು ನೋಡಿದರೆ ದುರಂತವು ಒಂದು ಕಾರಣಕ್ಕೆ ಆಗುವುದೂ ಅಸಾಧ್ಯ. ಅದು ಅವನತಿಯನ್ನು ಮಾತ್ರವೇ ಹೇಳುವುದೂ ಇಲ್ಲ. ಈ ಕಾರಣದಿಂದ ಅವನ ಅನುಭವವೇ ಸಂಕೀರ್ಣವಾಗಿದೆ. ಅವನ ಕ್ರಿಯೆ ಅವನಿಗೆ ಗೊತ್ತಾಗದ ತೆರದಲ್ಲಿ ಒಂದು ದುರಂತವನ್ನು ಹೇಳುತ್ತದೆ. ವಾಸ್ತವವಾಗಿ ಅದೇ ಒಂದು ವ್ಯಂಗ್ಯ. ನಾವು ನಾಯಕನ ಮೂಲಕವೇ ದುರಂತವನ್ನು ಗುರುತಿಸುವುದು ಅಂದರೆ ನಾಟಕದ ಬಹಳ ಮುಖ್ಯವಾದ ಕೇಂದ್ರವನ್ನು ಗ್ರಹಿಸುವುದೂ ಹೌದು. ಅದರ ನಿರೂಪಣೆಯೇ ವಿಷಾದವನ್ನು ಹೇಳುತ್ತದೆ. ಅದರ ನಿರೂಪಣೆಯಲ್ಲಿ ಒಂದು ರೀತಿಯಲ್ಲಿ ಕರುಣೆಯ ಭಾವವೂ ಇದೆ. ವ್ಯಕ್ತಿ ಮತ್ತು ಅವನ ಸನ್ನಿವೇಶವೇ ಬೇರೆಯದನ್ನು ಹೇಳುತ್ತದೆ. ಆದರೆ ನೋಡುತ್ತಾ ನಾವು ನಮ್ಮ ದುಃಖವನ್ನು ಮರೆಯುತ್ತೇವೆ. ನಮ್ಮ ಕಷ್ಟಕ್ಕಿಂತ ಹೆಚ್ಚಿನದನ್ನು ಅವನು ಅನುಭವಿಸುತ್ತಾನೆ. ನಾವು ಭಾವ ವಿಮೋಚನೆಯನ್ನು ಅನುಭವಿಸುತ್ತೇವೆ. ಭಾವದ ವಿರೇಚನೆ ಎನ್ನುವುದು ಮೂಲಭೂತವಾಗಿ ಅತ್ಯಂತ ದೊಡ್ಡದಾದ ಕ್ರೌರ್ಯ ಅಥವಾ ಕ್ರೌರ್ಯ ಅಲ್ಲ. ಹಾಗೆ ನೋಡುವುದಿದ್ದರೆ ಅರಿಸ್ಟಾಟಲ್ ಕೆಥಾರ್ಸಿಸನ್ನು ಕ್ರೌರ್ಯ ಎಂದು ಭಾವಿಸುವುದೂ ಇಲ್ಲ. ಅದು ಮನೋವ್ಯಾಪಾರವೂ ಹೌದು. ಅದರಲ್ಲಿ ನಮಗೆ ಬಿಡುಗಡೆಯು ಇದೆ. ಆದರೆ ಅರಿಸ್ಟಾಟಲ್ ಅದನ್ನು ಅಸಂತೋಷವೆಂದು ಹೇಳುತ್ತಾನೆ. ಕೆಥಾರ್ಸಿಸ್ ಒಂದು ಬಗೆಯಿಂದ ನಮ್ಮ ಮನಸ್ಸನ್ನು ಹೇಳುತ್ತದೆ. ಅದು ಮನೋಸ್ಥಿತಿಯೂ ಹೌದು. ಮನುಷ್ಯನು ಹೊರಗೆ ಹೇಗಿರುತ್ತಾನೆಯೋ

ಆ ರೀತಿಯಲ್ಲಿ ಅಂತರಂಗದಲ್ಲಿ ಇರುವುದೂ ಇಲ್ಲವೆನ್ನುವುದು ಅವನ ಅಭಿಪ್ರಾಯವಾಗಿದೆ. ಹಾಗೆ ನೋಡುವುದಿದ್ದರೆ ಈಡಿಪಸ್ ನಾಟಕದಲ್ಲಿ ಅಂತ್ಯವು ಹೃದಯ ವಿದ್ರಾವಕವೂ ಆಗಿದೆ. ಅದು ಮನುಷ್ಯ ಅನುಭವಿಸುವ ವಿಕಾರವಾದ ಅನುಭವನ್ನು ಹೇಳುತ್ತದೆ. ಅವನ ಕಣ್ಣುಗಳನ್ನು ಅವನೇ ಕಿತ್ತು ಹಾಕುತ್ತಾನೆ. ಅದು ಅಸಂತೋಷವನ್ನು ನಿರೂಪಿಸುತ್ತದೆ. ಈಡಿಪಸ್ ಸಾಯುವುದೇ ಇಲ್ಲ. ಆದರೆ ಅದರಲ್ಲಿ ಬರುವ ಯಾತನೆಯು ಮಾತ್ರವನ್ನು ನೋಡಿದರೆ ಅದರಲ್ಲಿ ಜೀವನವೇ ಒಂದು ನರಕವಾಗುತ್ತದೆ. ಹಾಗೆ ನೋಡುವುದಿದ್ದರೆ ಯಾವುದೇ ದುರಂತವು ಕ್ರಿಯೆಯನ್ನು ಹೇಳುತ್ತದೆ. ಅದು ಒಳ್ಳೆಯದೂ ಆಗಿರಬಹುದು ಅಥವಾ ಕೆಟ್ಟದ್ದೂ ಆಗಿರಬಹುದು. ಅದರಲ್ಲಿ ವ್ಯಕ್ತವಾಗುವ ಅಧಿಕಾರದ ಸ್ವರೂಪವೂ ಭಿನ್ನವಾಗುತ್ತದೆ. ಸ್ವಾತಂತ್ರ್ಯ ಮತ್ತು ನ್ಯಾಯದ ಕಲ್ಪನೆಯೂ ಬೇರೆಯಾಗಿದೆ. ಅದರಲ್ಲಿ ನ್ಯಾಯವನ್ನು ನೀಡುವುದು ವಿಧಿ. ಅದರ ನೈತಿಕ ಮತ್ತು ಸಮಾಜದ ದೃಷ್ಟಿಕೋನವೂ ಬೇರೆಯಾಗುತ್ತದೆ. ಅದು ಹೇಳುವ ನೀತಿಯು ಈಗಿನ ಕಾಲದ್ದು ಅಲ್ಲ. ಅಂದರೆ ಅದಕ್ಕೆ ಒಂದು ಚಾರಿತ್ರಿಕವಾದ ಸನ್ನಿವೇಶವು ಇರುತ್ತದೆ. ಈಡಿಪಸ್ ನಾಟಕವು ಆಡಳಿತಶಾಹಿ ಅದರ ಸ್ವರೂಪವನ್ನು ಹೇಳುತ್ತದೆ. ಇದರಲ್ಲಿ ಬರುವ ಕಾನೂನುಗಳು ಬೇರೆಯಾಗಿವೆ. ಅರಸನೂ ಇದರಲ್ಲಿ ಸಾಮಾನ್ಯವಾದ ರೀತಿಯಲ್ಲಿ ವರ್ತಿಸುತ್ತಾನೆ. ದೊರೆ ಈಡಿಪಸ್ ವರ್ತಿಸುವುದೂ ಬೇರೆ ರೀತಿಯಲ್ಲಿ. ಈಡಿಪಸ್ ಸಾಮಾನ್ಯವಾದ ಒಂದು ಸನ್ನಿವೇಶವನ್ನು ಎದುರಿಸುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಸಾಮಾಜಿಕ ಸಮಸ್ಯೆಯು ಬೇರೆ ಇರುತ್ತದೆ ಎಂದು ನಾಟಕವು ಹೇಳುತ್ತದೆ. ಯಾವುದು ಬಹಳ ಮುಖ್ಯವಾದದ್ದು ಮತ್ತು ಯಾವುದು ಜೀವನದ ನಿಜವಾದ ಉನ್ನತವಾದ ಮೌಲ್ಯಗಳೆಂದು ಅದು ಹೇಳುತ್ತದೆ. ಈಡಿಪಸ್ ಮುಖಾಮುಖಿಯಾಗುವುದು ಅತ್ಯಂತ ಅಲ್ಪವಾದ ಸನ್ನಿವೇಶವನ್ನು ಅಲ್ಲ. ಅದರಲ್ಲಿ ಅನೇಕ ವೈರುಧ್ಯಗಳು ಇವೆ. ಉತ್ತಮವಾದದ್ದು ಯಾವುದು ಕೀಳಾದುದು ಎನ್ನುವುದರ ವಿವರಣೆಯೂ ಇದೆ. ಅಲ್ಪವಾಗುವಂತೆ ನಡೆದರೆ ನಾವು ಅವನತಿಯನ್ನು ಹೊಂದುತ್ತೇವೆ ಎನ್ನುವುದನ್ನು ಅದು ಹೇಳುತ್ತದೆ. ಆದರೆ ಹದಿನೆಂಟನೆಯ ಶತಮಾನದ ಅನಂತರ ನಡೆದ ಅನೇಕ ದುರಂತಗಳು ಸಾಮಾನ್ಯವಾದದ್ದು ಅಲ್ಲ. ಭೋಪಾಲ್ ಅನಿಲ ದುರಂತ, ಕೋಮು ಹಿಂಸೆಗಳು, ಕೌಟುಂಬಿಕ ಹಿಂಸೆಗಳು ಒಂದು ರೂಪದಲ್ಲಿ ಇಲ್ಲ. ಅವುಗಳಲ್ಲಿ ವಿವಿಧತೆಯು ಇದೆ. ವಾಸ್ತವವಾಗಿ ಯಾವುದೇ ದುರಂತದಲ್ಲಿ ನಷ್ಟ ಮತ್ತು ಲಾಭಗಳೂ ಇರುತ್ತವೆ. ಅವುಗಳು ನಿರ್ದಿಷ್ಟವಾದ ಸೂಚನೆಯನ್ನು ಕೊಡುತ್ತವೆ. ಅದರ ಸೂಚನೆಗಳು ಏಕಮುಖವಾದದ್ದು ಅಲ್ಲ ಎನ್ನುವುದು ರೇಮಾಂಡ್ ವಿಲಿಯಂಸ್‌ನ ಅಭಿಪ್ರಾಯವಾಗಿದೆ. ಅದರಲ್ಲಿ ಸಾಮಾಜಿಕ ಅರ್ಥಗಳು ಇರುತ್ತವೆ. ಜೀವನವನ್ನು ಅದು ನೋಡುವುದು ನಿರ್ದಿಷ್ಟವಾದ ತಾತ್ವಿಕತೆಯ ಹಿನ್ನಲೆಯಿಂದ ಎಂದೂ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ದುರಂತ ನಾಟಕಗಳಲ್ಲಿ ಸಾರ್ವಜನಿಕವಾದ ಒಂದು ಮೌಲ್ಯವು ಇರುತ್ತದೆ. ಅದನ್ನು ಅಲ್ಲಗಳೆಯಲು ಆಗುವುದೂ ಇಲ್ಲ. ಯಾವುದೇ ದುರಂತವನ್ನು

ಒಂದು ರಾಜಕಾರಣವು ನೀಡುವುದೂ ಇಲ್ಲ. ರಾಜಕಾರಣ ಮತ್ತು ಅದರ ಮೌಲ್ಯಗಳು ಬೇರೆಯಿರುತ್ತದೆ. ರಾಜಕಾರಣವು ಹೇಳುವ ಧರ್ಮವೂ ಮಾತ್ರ ಬೇರೆ. ಯಾವುದೇ ಸಮಾಜವು ದುರಂತವನ್ನು ಎದುರಿಸುವುದು ಸಾಧುವಲ್ಲ ಎನ್ನುವುದು ಸರಕಾರಗಳ ನಿಲುವು ಆಗಿರುತ್ತದೆ. ನೆರೆ ಹಾವಳಿ, ಅಯ್ಯಪ್ಪ ಭಕ್ತರು ಕಾಲು ತುಳಿತಕ್ಕೆ ಸಿಕ್ಕು ಸಾವನ್ನು ಅಪ್ಪಿದರೆ ಅದರ ಹೊಣೆಯನ್ನು ಭಕ್ತರು ಹೊರುವುದೂ ಇಲ್ಲ. ದಿ.ಇಂದಿರಾಗಾಂಧಿಯವರನ್ನು ಕೊಂದದ್ದು ಮತ್ತು ರಾಜೀವ ಗಾಂಧಿಯವರ ಸಾವು ಕೂಡಾ ಬಹಳ ದೊಡ್ಡ ಹಿಂಸೆಗಳೇ ಆದವು. ಆ ದುರಂತವನ್ನು ನಾವು ಮಾನವೀಯವಾದ ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ತಾಯಿ ಮತ್ತು ಮಗ ಭಾರತದಲ್ಲಿ ಸಾವು ಅಪ್ಪಿದ್ದು ಒಂದು ದೊಡ್ಡದಾದ ದುರಂತವೇ ಆಗಿದೆ. ಅದರ ತಾತ್ವಿಕ ಕಾರಣವೂ ಬೇರೆಯಾಗಿದೆ. ಬಿಂದ್ರನ್‌ವಾಲೆಯ ನೆನಪಾಗುತ್ತದೆ. ಎಲ್ಟಿಟಿ ಉಗ್ರರ ನೆನಪು ಬೇರೆ ಸಂಗತಿಗಳನ್ನು ಹೇಳುತ್ತವೆ. ಸಿಖ್ಖರ ಮಾರಣ ಹೋಮವೂ ಭಾರತದ ರಾಜಕಾರಣದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಧರ್ಮವು ಹೇಗೆಲ್ಲ ಉಪಯೋಗವಾಗುತ್ತದೆ ಎನ್ನುವುದಕ್ಕೆ ನಮಗೆ ರಾಮಜನ್ಮ ಭೂಮಿಯೂ ಒಂದು ನಿರ್ದಶನವಾಗಿದೆ. ಈ ದೃಷ್ಟಿಯಿಂದ ದುರಂತಗಳ ಸ್ವಭಾವವನ್ನು ಅದರ ಸ್ವರೂಪದಲ್ಲಿ ನೋಡಬೇಕಾಗುತ್ತದೆ. ಆದರೆ ಆಧುನಿಕ ಯುದ್ಧಗಳೂ ಅನೇಕ ದುರಂತವನ್ನು ತರುತ್ತದೆ. ಮಾಯದ ಗಾಯವನ್ನು ಉಂಟು ಮಾಡುತ್ತವೆ. ಅಣುಬಾಂಬ್ ಉಂಟು ಮಾಡಿದ ಗಾಯಗಳು ಸಾಮಾನ್ಯವಲ್ಲ. ಅದೇ ರೀತಿಯಲ್ಲಿ ಕೇರಳದಲ್ಲಿ ಎಂಡೋ ಸಲ್ಫಾನ್ ಉಂಟು ಮಾಡಿದ ನೋವೂ ಕಡಿಮೆಯದಲ್ಲ. ಅವುಗಳ ಫಲಿತಾಂಶವನ್ನು ಒಂದು ಎಂದು ಭಾವಿಸಬೇಕಾದ ಯಾವ ಅಗತ್ಯವೂ ಇಲ್ಲ. ಆದರೆ ಅದರಿಂದ ದುರಂತಗಳು ಆಗಿವೆ. ಮನುಕುಲವನ್ನು ಅವುಗಳು ಪ್ರಶ್ನಿಸಿವೆ. ಯಾವುದೇ ದುರಂತದ ನಾಯಕನಿಗೆ ಒಂದು ದರ್ಶನ ಇರುತ್ತದೆ. ಅದರ ಪರಿಣಾಮವನ್ನು ಅವನು ಎದುರಿಸುತ್ತಾನೆ. ಆದರೆ ಸಾಮಾಜಿಕ ದುರಂತವನ್ನು ಎಲ್ಲರೂ ಎದುರಿಸಬೇಕಾಗುತ್ತದೆ. ಅದರ ಪರಿಣಾಮವೂ ಸೀಮಿತವಾದ ಒಂದು ಕ್ಷಣವನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿ ಬೇರೆ ಅಂಶಗಳೂ ಇರುತ್ತವೆ. ಸಾಮಾಜಿಕ ದುರಂತ ಮತ್ತು ಅದರ ಪರಿಣಾಮವನ್ನು ನಾವು ವಿಭಿನ್ನವಾಗಿಯೂ ನೋಡಬೇಕಾಗುತ್ತದೆ. ನಾಟಕಗಳಲ್ಲಿ ನಡೆಯುವ ದುರಂತವನ್ನು ನಾವು ವ್ಯಕ್ತಿ ಮತ್ತು ಅವನ ಸನ್ನಿವೇಶದ ಹಿನ್ನೆಲೆಯಲ್ಲಿಯೂ ಗಮನಿಸಬೇಕಾಗುತ್ತದೆ. ಅವನಿಗೆ ಅವನದೇ ಆದ ಕಾರಣಗಳೂ ಇರುತ್ತವೆ. ಅವನ ಕಾರಣಗಳು ಅವನ ಬಾಹ್ಯ ಮತ್ತು ಆಂತರಿಕ ಒತ್ತಡಗಳನ್ನು ಹೇಳುತ್ತವೆ. ಆದರೆ ಸಮಾಜದಲ್ಲಿ ನಡೆಯುವ ದುರಂತವು ಅನ್ಯ ಕಾರಣಗಳಿಂದ ಹುಟ್ಟುತ್ತದೆ. ಅದರ ಒತ್ತಡಗಳು ಬೇರೆಯಾಗುತ್ತವೆ. ತನ್ನ ವೈಚಾರಿಕ ಆಲೋಚನೆಯಿಂದ ಗೆಲಿಲಿಯೋ ನೋವು ಅನುಭವಿಸಿದ್ದ. ಅವನ ನೋವು ಅವನ ಪ್ರತಿಭಟನೆಯ ಕಾರಣಕ್ಕೆ ಆಗಿದೆ. ನೋವು ಅನುಭವಿಸುವುದೂ ಕೂಡಾ ಒಂದು ಕಾರಣಕ್ಕೆ. ಮತ್ತು ಅದಕ್ಕೆ

ಒಂದು ಮಾನವ ಶಾಸ್ತ್ರದ ಪರಂಪರೆಯು ಇದೆ. ಪ್ರಭುತ್ವದ ವಿರುದ್ಧ ಮಾತಾಡಿದರೂ ನಾವು ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಈಗ ಒಬ್ಬ ರಾಶನಲ್ ಬುದ್ಧಿಜೀವಿಯು ಬೇರೆ ಬೇರೆ ಹಿಂಸೆಗಳನ್ನು ಅನುಭವಿಸಬೇಕಾಗುತ್ತದೆ. ಸರಕಾರವೂ ನಮ್ಮ ಮಾತುಗಳನ್ನು ನಿಯಂತ್ರಿಸುತ್ತದೆ. ಹಾಗೆ ನೋಡುವುದಿದ್ದರೆ ಆಧುನಿಕ ನಮ್ಮ ಪ್ರಜಾಪ್ರಭುತ್ವವೇ ಒಂದು ಸಂಕೀರ್ಣವಾದ ಸ್ಥಿತಿಯನ್ನು ತಲುಪಿದೆ. ಅದಕ್ಕೆ ಬೇರೆ ಕಾರಣಗಳೂ ಇರಬಹುದು. ಪೋಲಿಸರು ಮತ್ತು ಅವರ ಕಾರ್ಯವೂ ಇದಕ್ಕೆ ಎಷ್ಟು ಪೂರಕವಾಗಿದೆ. ಕಾನೂನುಗಳು ಹೇಗೆ ಇವೆ ಎಂದೂ ಯೋಚಿಸಬೇಕಾಗುತ್ತದೆ. ದುರಂತದ ಸೈದ್ಧಾಂತಿಕವಾದ ನಿಲುವು ಬೇರೆಯಾಗಿದೆ. ಅದು ಬೀರುವ ಪರಿಣಾಮವೂ ಭಿನ್ನವಾಗಿದೆ. ಅದರಲ್ಲಿ ಬರುವ ನಾಯಕನೂ ಸಮಾಜದ ಒಂದು ನಿರ್ದಿಷ್ಟವಾದ ವರ್ಗಕ್ಕೆ ಸೇರಿದವನೂ ಆಗಿರುತ್ತಾನೆ. ಅವನ ಅವನತಿಯು ಒಂದು ಬಗೆಯದು. ಆದರೆ ಆಗಿರುವುದು ನಮ್ಮ ದಿನನಿತ್ಯದ ಸಮಸ್ಯೆಯು ಆಗಿದೆಯೋ ಅದು ದುರಂತವಾಗುವುದಿಲ್ಲ. ದೇಹಕ್ಕೆ ಉಂಟಾಗುವ ಸಣ್ಣ ಗಾಯವು ದುರಂತವಲ್ಲ. ದುರಂತ ಮತ್ತು ಅದರ ಸ್ವರೂಪವು ಶ್ರೇಷ್ಠ ವ್ಯಕ್ತಿಗಳಿಗೆ ಆಗುತ್ತದೆ ಎಂದು ಅಡರ್ನೊ ಹೇಳುತ್ತಾನೆ. ಅವನ ಪ್ರಕಾರ ತೀರಾ ಸಾಮಾನ್ಯ ಮನುಷ್ಯರಿಗೆ ಈ ಮಾದರಿಯ ದುರಂತದ ಅನುಭವ ಆಗುವುದೂ ಇಲ್ಲ. ದಿನ ನಿತ್ಯದ ಪ್ರಶ್ನೆಯು ದುರಂತವಾಗುವುದೂ ಇಲ್ಲ. ಅವುಗಳ ನಿಯಮಗಳು ಬೇರೆಯಾಗಿವೆ. ದಿನ ನಿತ್ಯದ ಪ್ರಶ್ನೆ ಮತ್ತು ಸಾಮಾನ್ಯರ ಪ್ರಶ್ನೆಯು ಭಿನ್ನವಾಗಿದೆ. ಮತ್ತು ಅದರ ಕಾರಣಗಳೂ ಬೇರೆಯಾಗಿದೆ. ಆಧುನಿಕ ನಗರಗಳಲ್ಲಿ ನಡೆಯುವ ಕೊಲೆ ಸುಲಿಗೆಗಳನ್ನು ನಾವು ದುರಂತವೆಂದು ಹೇಳುವುದೂ ಅಸಾಧ್ಯ. ಆಧುನಿಕ ನಗರಗಳು ಬೇರೆ ಬೇರೆ ಕಾರಣಗಳಿಂದ ಭಿನ್ನವಾಗಿದೆ. ಮತ್ತು ಅದರಲ್ಲಿನ ಸಂಗತಿಗಳು ನಡೆಯುವುದು ಕೂಡಾ ವಿಶಿಷ್ಟವಾದ ಕಾರಣಕ್ಕಾಗಿಯೇ ದುರಂತವನ್ನು ನೋಡುವುದು ಅಂದರೆ ಅದು ರಂಗದ ಅನುಭವ ಮತ್ತು ಅದರ ಅನನ್ಯತೆಯು ಬೇರೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ರನ್ನನ ಸಾಹಸ ಭೀಮ ವಿಜಯವನ್ನು ನೋಡಿದರೆ ಈ ಮಾತುಗಳು ಹೆಚ್ಚು ಸ್ಪಷ್ಟವಾಗುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ದುರಂತಕ್ಕೆ ಕಾರಣವಿದೆ. ಅದರಲ್ಲಿ ಕೌರವನಿಗೆ ಕೃಷ್ಣನ ಸಹಾಯವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅದರಲ್ಲಿ ಭೂಮಿ ಮತ್ತು ಅದರ ಅಧಿಕಾರದ ಪ್ರಶ್ನೆಯು ಹೆಚ್ಚು ಮುಖ್ಯವಾಗಿದೆ. ಪ್ರಾಚೀನ ದುರಂತ ನಾಟಕಗಳು ಮತ್ತು ಅವುಗಳ ನಿರೂಪಣೆಯು ಮತ್ತೊಂದು ವಿಧ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿನ ದುರಂತಗಳು ಇನ್ನೊಂದು ಬಗೆ. ದುರಂತವು ನಮಗೆ ಅನೇಕ ಪಾಠಗಳನ್ನು ಹೇಳುತ್ತವೆ ಎನ್ನುವುದು ಸತ್ಯ. ಅದರಲ್ಲಿಯೂ ದುರಂತವು ರೂಪ ಮತ್ತು ವಸ್ತುವಿನ ಪ್ರಶ್ನೆಯು ಅತ್ಯಂತ ಮುಖ್ಯ. ಅದು ವಸ್ತುವನ್ನು ನೋಡುವುದು ಬೇರೆ ಕ್ರಮದಲ್ಲಿ. ಮಹಾಕಾವ್ಯ ಮತ್ತು ದುರಂತ ನಾಟಕಗಳಲ್ಲಿ ಕೆಲವು ವ್ಯತ್ಯಾಸಗಳು ಇವೆ. ಆದರೆ ದುರಂತ ನಾಟಕಗಳ ಬೆಳವಣಿಗೆಯನ್ನು ನೋಡಿದರೆ ಇದರ ಅರ್ಥವು ಬೇರೆ ಥರ ಕಾಣಿಸುತ್ತದೆ. ಅಯಾಸ್ ನಾಟಕದಲ್ಲಿ ಮತ್ತು ಈಡಿಪಸ್ ನಾಟಕದಲ್ಲಿ ವ್ಯಕ್ತಿಗಳು ನಿಜವಾಗಿಯೂ ತುಂಬಾ ಮುಗ್ಧರೇ

ಆಗಿದ್ದಾರೆ. ವಾಸ್ತವವಾಗಿ ಮಹಾಕಾವ್ಯ ಮತ್ತು ಅದರ ಹಿಂದೆ ಇರುವ ಆಲೋಚನೆಯು ತುಂಬಾ ಗಂಭೀರವಾದದ್ದು ಹಾಗೂ ಅದು ಸ್ಪಷ್ಟವಾದದ್ದು. ಅದರಲ್ಲಿ ಖಚಿತವಾದ ದೃಷ್ಟಿಕೋನವು ಇದೆ. ಕಾರ್ಯ ಮತ್ತು ಕಾರಣಗಳನ್ನು ಅದು ನೋಡುವುದು ಬೇರೆ ಆದರೆ ಕ್ರಿಶ್ಚಿಯಾನಿಟಿಯು ಜೀವನ ಮತ್ತು ಅದರ ಸ್ವಭಾವವನ್ನು ನೋಡುವುದು ಬೇರೆ ಥರ. ಅದು ಒಂದು ರೀತಿಯಿಂದ ಜೀವನ ಮತ್ತು ಅದರ ದೃಷ್ಟಿಕೋನಗಳನ್ನು ಬೇರೆ ಥರ ಗ್ರಹಿಸುತ್ತದೆ ಎಂದು ಕಿರ್ಕೆಗಾರ್ಡ ಹೇಳುತ್ತಾನೆ. ದೇವರು ಜೀವನವನ್ನು ಮತ್ತು ನೆರೆಹೊರೆಯವರನ್ನು ಪ್ರೀತಿಸು ಎಂದು ಹೇಳುತ್ತಾನೆ. ಅವನು ಕಷ್ಟವನ್ನು ಕೊಟ್ಟರೂ ಅದರಲ್ಲಿ ಪರೀಕ್ಷೆಯು ಇದೆ. ಅದು ಜೀವನವನ್ನು ಪ್ರೀತಿಸು ಎಂದು ಹೇಳುತ್ತದೆ. ಪ್ರೀತಿಸು ಎನ್ನುವುದಕ್ಕೆ ವಿಶೇಷವಾದ ಅರ್ಥವೂ ಇದೆ. ಜಗತ್ತನ್ನು ಪ್ರೀತಿಸು ಎಂದರೆ ಅದು ವಿಶ್ವಾತ್ಮಕವಾದ ಒಂದು ಅರ್ಥವನ್ನು ಕೊಡುತ್ತದೆ. ಅಷ್ಟೇ ಅಲ್ಲ; ಅದರಲ್ಲಿ ರತಿಯ ಪ್ರತೀಕವೂ ಇದೆ. ಪ್ರೀತಿ ಮತ್ತು ಅದರ ವಿಶ್ವಾತ್ಮಕತೆಯು ಇದರಲ್ಲಿ ಹೆಚ್ಚು ಮುಖ್ಯವಾಗುತ್ತದೆ. ವ್ಯಕ್ತಿಯಾಗಿ ನಾನು ಇನ್ನೊಬ್ಬನನ್ನು ಪ್ರೀತಿಸುತ್ತೇನೆ, ಅದನ್ನು ಗೌರವಿಸುತ್ತೇನೆ ಎನ್ನುವುದು ಅತ್ಯಂತ ಮುಖ್ಯವಾದದ್ದು. ಇದರಲ್ಲಿ ವ್ಯಕ್ತಿ ಎನ್ನುವುದಕ್ಕೆ ಹೆಚ್ಚಿನ ಅರ್ಥವೂ ಇದೆ. ವಾಸ್ತವವಾಗಿ ಕ್ರಿಶ್ಚಿಯಾನಿಟಿಯಲ್ಲಿ ವ್ಯಕ್ತಿ ಮತ್ತು ಅವನ ವ್ಯಕ್ತಿತ್ವಕ್ಕೆ ಹೆಚ್ಚಿನ ಮಹತ್ವವು ಇದೆ.

ಆಧುನಿಕಯುಗವು ಹೇಳುವ ದುರಂತಗಳಲ್ಲಿ ಈ ಮಾದರಿಯ ಕಥಾನಕಗಳು ಇಲ್ಲವಾಗಿದೆ. ಆಧುನಿಕತೆಯು ಅನ್ಯ ದುರಂತಗಳನ್ನು ಕಟ್ಟಿಕೊಟ್ಟಿರುವ ಕ್ರಮಗಳು ಭಿನ್ನವಾಗಿದೆ. ಸಾಹಸಭೀಮ ವಿಜಯದ ಕೌರವನು ಅನೇಕ ಸಂದರ್ಭದಲ್ಲಿ ಸಾಮಾನ್ಯ ಮನುಷ್ಯನಂತೆ ವರ್ತಿಸುತ್ತಾನೆ. ದುರಂತ ಮತ್ತು ಅದರ ಕ್ರಿಯೆಗಳು ಮೂಲತಃ ಒಂದು ಕ್ರಿಯೆಯನ್ನು ಮತ್ತು ಒಂದು ಸ್ವಭಾವವನ್ನು ಹೇಳುವುದೂ ಇಲ್ಲ. ಅದರಲ್ಲಿ ಬೇರೆ ಬೇರೆ ನಿರೂಪಣೆಗಳೂ ಇರುತ್ತವೆ. ಅದರ ಸ್ವರೂಪವು ಮಹಾನ್ ನಿರೂಪಣೆಯೂ ಆಗಬೇಕಾಗಿಯೂ ಇಲ್ಲ. ಅದರ ಸ್ವರೂಪವು ಕಾಲ ಮತ್ತು ಸಮಯಕ್ಕೆ ಅನುಸಾರವಾಗಿ ಬೇರೆಯಾಗುತ್ತದೆ. ಕೆಥಾರ್ಸಿಸ್ ಎನ್ನುವುದನ್ನು ಬರೀ ಒಂದು ಪಠ್ಯಕ್ಕೆ ಸೀಮಿತವಾಗಿ ಅರಿಸ್ಟಾಟಲ್ ಹೇಳಿಲ್ಲ ಎನ್ನುವುದನ್ನು ಇಲ್ಲಿ ದಾಖಲಿಸುವುದು ಅಗತ್ಯವಾಗಿದೆ. ವಾಸ್ತವವಾಗಿ ಯಾವುದೇ ದುರಂತವನ್ನು ಮತ್ತು ಅದರ ಅನುಭವನ್ನು ನೋಡಿದರೆ ನಮಗೆ ಉಂಟಾಗುವ ಖೇದವು ಮನುಷ್ಯತ್ವದ ಕಾರಣಕ್ಕೆ ಆಗಿರುತ್ತದೆ. ಅದನ್ನು ಮಾನವೀಯವಾಗಿಯೂ ನೋಡಬೇಕಾಗುತ್ತದೆ. ಹಾಗೆ ಆದಾಗ ಅದರ ಅರ್ಥಗಳು ಬೇರೆಯಾಗುತ್ತದೆ. ನಾವು ನಮಗೆ ಉಂಟಾಗಿರುವ ದುಃಖ ಮತ್ತು ಯಾತನೆಯನ್ನು ಕಳೆದುಕೊಳ್ಳಬೇಕಾದರೆ ಅದರಿಂದ ಹೊರಗೆ ಬರಬೇಕು. ಹಾಗೆ ಹೊರಗೆ ಬರಬೇಕಾದರೆ ನಮಗೆ ದುರಂತ ನಾಟಕಗಳೂ ಸಹಾಯವನ್ನು ಮಾಡುತ್ತವೆ. ಖೇದ, ಉನ್ಮಾದ ಮತ್ತು ಯಾತನೆಗಳು ಹೇಗೆಲ್ಲಾ ಇರುತ್ತವೆ ಎನ್ನುವುದನ್ನು ದುರಂತ ನಾಟಕಗಳು ಹೇಳುತ್ತವೆ. ಅದರ ನಾಯಕನ

ದುಃಖವು ನಮ್ಮ ದುಃಖವಾದರೆ ಅದನ್ನು ನಾವು ನೋಡುವ ಕ್ರಮವು ಬೇರೆಯಾಗುತ್ತದೆ. ಅದರ ಯಾತನೆಯನ್ನು ತಲ್ಲೀನವಾಗಿ ನೋಡುತ್ತಾ ಅದಗ ಪರಿಣಾಮವನ್ನು ಅನುಭವಿಸುತ್ತೇವೆ. ದೇಶ ಭ್ರಷ್ಟತೆಯನ್ನು ಅನುಭವಿಸುವ ಮತ್ತು ಅದರ ಪರಿಣಾಮವಾಗಿ ತನ್ನ ತಾಯಿಯನ್ನು ಕೂಡುವ, ತನ್ನ ಕಣ್ಣುಗಳನ್ನು ಕಿತ್ತು ಹಾಕಿಕೊಳ್ಳುವ ಈಡಿಪಸ್ ಸಾಮಾನ್ಯವಾದ ಯಾತನೆಯನ್ನು ಅನುಭವಿಸುವುದೂ ಇಲ್ಲ. ಅದನ್ನು ನೋಡಿದರೆ ನಾವು ಹೆಚ್ಚು ಸುಖಿಗಳು ಎಂದು ಅನಿಸುತ್ತದೆ. ಅವನು ಎದರಿಸುವ ಸಮಸ್ಯೆಯೂ ಅತ್ಯಂತ ಕಠಿಣವಾದದ್ದು ಕೂಡಾ ಹೌದು. ಅವನು ಸಾಯುವುದಿಲ್ಲ. ಆದರೆ ಅವನ ಅಂತ್ಯವು ನಿಜವಾಗಿಯೂ ಅತ್ಯಂತ ಭೀಕರವಾಗಿದೆ. ತನ್ನ ಮಕ್ಕಳು ತನಗೆ ಸೋದರರೇ ಅಥವಾ ಮಕ್ಕಳೇ ಎನ್ನುವುದೂ ಬಹಳ ಮುಖ್ಯವಾದ ಸಮಸ್ಯೆ. ಜೀವನವೇ ಅವನಿಗೆ ನರಕವಾಗುತ್ತದೆ. ಅವನು ಹೋರಾಟವನ್ನು ಮಾಡಿದ್ದು ವಿಧಿಯ ವಿರುದ್ಧ. ಆದರೆ ಸೋಲನ್ನು ಅನುಭವಿಸಿದ್ದೂ ಅಷ್ಟೇ ನಿಜ; ಅವನು ನೀತಿಯನ್ನು ಮೀರಿದ್ದಾನೆ. ಅದರ ಅಂಕುಶವನ್ನು ದಾಟಲಾರದವನೂ ಆಗಿದ್ದಾನೆ. ಆಧುನಿಕ ದುರಂತಗಳು ಮತ್ತು ಅದರ ಚಹರೆಗಳು ಇದಕ್ಕಿಂತ ಭಿನ್ನವಾದುದು. ಅಸಹಾಯಕತೆಯನ್ನು ಅನೇಕರು ಅನುಭವಿಸುವವರು ತುಂಬಾ ಜನರು ಇದ್ದಾರೆ. ಅವರಿಗೆ ದಾಟಲು ಆಗುತ್ತಿಲ್ಲ. ಮಾರಣಾಂತಿಕವಾದ ಅನೇಕ ಸಮಸ್ಯೆಗಳು ಇವೆ. ನಡೆಯಲೂ ಆಗದ ಸಮಸ್ಯೆಗಳೂ ಇವೆ. ಮನುಷ್ಯ ಮತ್ತು ಅವನ ಗುಣ ಹಾಗೂ ಅವನ ನಡವಳಿಕೆಗಳು ಕೂಡಾ ಇಲ್ಲಿ ಗಮನಾರ್ಹವಾಗಿದೆ. ವ್ಯಕ್ತಿ ಮತ್ತು ಅವನ ನಡವಳಿಕೆಗಳು ಮತ್ತು ಅವನು ಅನುಭವಿಸುವ ದುರಂತಗಳು ಒಂದು ಬಗೆಯಲ್ಲಿ ಇರುತ್ತವೆ. ದುರಂತ ನಾಟಕಗಳ ಮಹಾನ್ ನಿರೂಪಣೆಗಳು ಮತ್ತೊಂದು ಬಗೆಯಲ್ಲಿ ಇರುತ್ತವೆ. ದುರಂತನಾಟಕಗಳು ಹೇಳುವ ವಿವರಗಳು ಈಗ ಇಲ್ಲವಾಗಿವೆ. ಆದರೆ ಈಗ ಗದ್ಯವು ಹೆಚ್ಚು ಪ್ರಚಲಿತವಾಗಿದೆ. ಇದರಲ್ಲಿ ನಾವು ವಿಭಿನ್ನವಾದ ಜಗತ್ತನ್ನು ನೋಡುತ್ತಿದ್ದೇವೆ. ಆಧುನಿಕ ಸಾಮಾನ್ಯರಾದ ಮನುಷ್ಯರು ಮತ್ತು ಅವರ ವಿವರಣೆಯನ್ನು ಈಗಿನ ಗದ್ಯಗಳು ಹೇಳುತ್ತವೆ. ಗದ್ಯಗಳ ಭಾಷೆ ಮತ್ತು ಅದರ ಚಹರೆಗಳನ್ನು ನೋಡಿದರೆ ಇದು ಅರ್ಥವಾಗುತ್ತವೆ. ಜೀವನ ಮತ್ತು ಅದರ ಅರ್ಥವನ್ನು ಈಗ ನಾವು ಗದ್ಯದಲ್ಲಿ ಕಾಣಲು ಸಾಧ್ಯ. ಗದ್ಯವು ಈಗ ಬಹಳ ಮುಖ್ಯವಾದ ಮಾಧ್ಯಮವೂ ಹೌದು. ರೂಪ ಮತ್ತು ಅದರ ಸಂವೇದನೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ಆಧುನಿಕಯುಗದ ಸಮಾಜ ಮತ್ತು ಅದರ ಸ್ವರೂಪವನ್ನು ಈಗಿನ ಗದ್ಯಗಳು ಹೇಳುತ್ತವೆ. ಆಧುನಿಕಯುಗದ ಸಾಮಾಜಿಕ ಮತ್ತು ಆರ್ಥಿಕ ಜೀವನಗಳಿಗೂ, ಕಾದಂಬರಿಗಳಿಗೂ ಸಂಬಂಧವಿದೆ. ಗ್ರೀಕ್ ನಾಟಕಗಳ ದೃಷ್ಟಿಯಲ್ಲಿ ಬರುವ ಸಮಾಜಕ್ಕೂ ಕಾದಂಬರಿಗಳಲ್ಲಿ ಬರುವ ಸಮಾಜಕ್ಕೂ ವ್ಯತ್ಯಾಸವಿದೆ. ಪುನರುಜ್ಜೀವನ ಕಾಲದ ಸಮಾಜವು ಬದಲಾಗಿದ್ದರಿಂದ ಅದು ದುರಂತವನ್ನು ನಿರಾಕರಿಸಿತು. ಅದರಿಂದ ಅದರ ಸ್ವರೂಪ ಅದರ ಅರ್ಥಗಳು ಬದಲಾದವು. ಪುನರುಜ್ಜೀವನ ಕಾಲದ ಸಮಾಜದಲ್ಲಿ ವ್ಯಾಪಕವಾದ ಬದಲಾವಣೆಯು ಕಾಣಿಸಿತು.

ಅದರ ಹಿಂದೆ ಹೊಸದಾದ ಮನೋಭಾವವೂ ಇತ್ತು. ರಾಜಕೀಯವಾದ ಬದಲಾವಣೆಯೂ ಕೂಡಾ ಈ ದೃಷ್ಟಿಯಿಂದ ಗಮನಾರ್ಹ. ಅದೂ ಚಾರಿತ್ರಿಕ ಬದಲಾವಣೆಗೆ ಕಾರಣವೂ ಆಯಿತು. ಇಡೀ ಸಮಾಜ ಮತ್ತು ಅದರ ದೃಷ್ಟಿಕೋನವೇ ಅನೇಕ ಸಂಗತಿಗಳನ್ನು ಹೇಳುತ್ತವೆ. ಸಮಾಜದೊಳಗೆ ನಡೆಯುವ ಸಂಗತಿಗಳಿಗೂ ಅದರ ದರ್ಶನಕ್ಕೂ ಸಂಬಂಧವಿದೆ. ಸಮಾಜದಲ್ಲಿ ಆಂತರಿಕವಾದ ಸಂಬಂಧವನ್ನು ನಾವು ಬೇರೆ ಬೇರೆ ರೀತಿಯಲ್ಲಿ ನೋಡಲು ಸಾಧ್ಯ. ಈಗ ಯಾವುದೇ ನಾಯಕರು ಇಲ್ಲದ ಮಧ್ಯಮವರ್ಗವು ಇದೆ. ಅವರ ಜೀವನವು ಬೇರೆಯಾಗಿದೆ. ಅವರ ನಿಲುವು ಬದಲಾಗಿದೆ. ಅವರ ಜೀವನದಲ್ಲಿ ಯೋಚಿಸಲಾಗದ ಅನೇಕ ಸಂಗತಿಗಳು ನಡೆಯುತ್ತವೆ. ಇಡೀ ಜಗತ್ತು ಮತ್ತು ಅದರ ಸ್ವರೂಪವನ್ನು ಈಗ ಒಂದು ಹಿಡಿಯಲ್ಲಿ ಹೇಳುವುದು ಅತ್ಯಂತ ಕಷ್ಟ. ಪುನರುಜ್ಜೀವನ ಕಾಲದ ಅನೇಕ ಸಂಗತಿಗಳು ಕೆಲವು ಬದಲಾವಣೆಗೆ ಕಾರಣವಾದವು. ಈಗ ವಾಸ್ತವವಾಗಿ ಒಂದು ಚಾರಿತ್ರಿಕವಾದ ಬಿಕ್ಕಟ್ಟು ಇದೆ. ಆದುನಿಕಯುಗದ ಶಕ್ತಿಯು ಬೇರೆಯಾಗಿದೆ. ದುರಂತ ನಾಟಕಗಳನ್ನು ನಾವು ಈಗ ಒಂದು ಪಳೆಯುಳಿಕೆಯ ಥರ ನೋಡುತ್ತಿದ್ದೇವೆ. ಹಾಗೆ ನೋಡುವುದಿದ್ದರೆ ಈಗ ಬೀದಿಯ ಬದಿಯಲ್ಲಿಯೂ ದುರಂತವಾಗಬಹುದು. ಬೀದಿ ಬದಿಯಲ್ಲಿ ನಡೆಯುವ ವ್ಯಾಪಾರವೂ ಒಂದು ಸಮಾಜದ ದುರಂತವನ್ನು ಹೇಳುತ್ತವೆ. ಒಂದು ರೀತಿಯಲ್ಲಿ ಇದು ಬದಲಾದ ಸಂಗತಿಯನ್ನು ಹೇಳುತ್ತದೆ. ಆದುನಿಕಯುಗ ಅದರ ಪತನಗಳು ಬೇರೆ ರೀತಿಯಲ್ಲಿಯೂ ನಡೆಯುತ್ತಿವೆ. ಮೌಲ್ಯಗಳಿಗೂ ವಿವಿಧ ರೀತಿಯ ಬಿಕ್ಕಟ್ಟುಗಳು ಬಂದಿವೆ. ಮಾನವೀಯತೆಯನ್ನು ಈಗ ಅಂತಿಮವಾದ ಜೀವನ ಮೌಲ್ಯವೆಂದು ಹೇಳಲಾಗುತ್ತದೆ. ಹಿಂದಿನ ಸಹಿಸಲು ಅಸಾಧ್ಯವಾದ ನೋವುಗಳು ಈಗ ಮರೆಯಾಗಿವೆ. ಅದಕ್ಕೆ ವೈದ್ಯಕೀಯವಾದ ಚಿಕಿತ್ಸೆಯೂ ಇದೆ. ಅಮಲು ನೋವನ್ನು ಮರೆಸುತ್ತದೆ. ಪ್ರಜಾಪ್ರಭುತ್ವದಲ್ಲಿ ಕ್ರಿಮಿನಲ್ ವಿವರಣೆಗಳೂ ಬೇರೆಯಾಗಿವೆ. ಸಮಾಜವಾದವು ವ್ಯಕ್ತಿಯನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆ ರೀತಿಯಲ್ಲಿ. ಅದನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುತ್ತದೆ. ವರ್ತಕಶಾಹಿಯು ಮನುಷ್ಯರನ್ನು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾದ ರೀತಿಯಲ್ಲಿ. ವ್ಯಾಪಾರದಲ್ಲಿ ಉಂಟಾಗುವ ನಷ್ಟವೂ ಒಂದು ಬಗೆಯಲ್ಲಿ ದುರಂತವೇ ಆದರೂ ಅದರ ಹಿನ್ನೆಲೆಯಲ್ಲಿ ಬೇರೆ ಸಂಗತಿಗಳೂ ಇರುತ್ತವೆ. ಈಗ ಭಾರತದಲ್ಲಿ ನೇಕಾರರು, ಬುಟ್ಟಿ ಹೆಣೆಯುವವರು, ಸಾಮಾನ್ಯರು ಅಂತರ್‌ರಾಷ್ಟ್ರೀಯವಾದ ಬಂಡವಾಳವಾದದ ದೆಸೆಯಿಂದ ಜೀವನವನ್ನು ಕಷ್ಟದಿಂದ ಸಾಗಿಸುತ್ತಿದ್ದಾರೆ. ಈಗ ಕಾರ್ಮಿಕರು ಮತ್ತು ಅವರ ಸಮಸ್ಯೆಯು ಬೇರೆಯಾಗಿದೆ. ಬಂಡವಾಳವಾದ ಅದರ ಸಮಸ್ಯೆಯು ಭಿನ್ನವಾಗಿದೆ. ಇದು ಸಮಾಜ ಮತ್ತು ಅದರ ಪಲ್ಲಟವನ್ನು ಹೇಳುತ್ತದೆ. ಸಮಾಜ ಮತ್ತು ಅದರ ಚರಿತ್ರೆಯೂ ಬದಲಾಗುತ್ತದೆ. ಕಾರ್ಮಿಕರ ಹೊಸ ಸಮಸ್ಯೆಯು ಬಂದಿದೆ. ಹೊಸ ಸಮಾಜ ಮತ್ತು ಅದರ ನಿರ್ಮಾಣವನ್ನು ಈಗ ಹೇಗೆ ನೋಡಬೇಕು ಎನ್ನುವುದೂ ಮುಖ್ಯವಾದ ಸಮಸ್ಯೆಯೇ ಆಗಿದೆ.

ರಾಜಕೀಯವಾದ ಹೊಸ ವ್ಯಾಖ್ಯೆಗಳೂ ಬಂದಿವೆ. ಯಾವುದನ್ನು ನಂಬಬೇಕು ಯಾವುದನ್ನು ನಂಬಬಾರದು ಎನ್ನುವುದೇ ನಿಜವಾದ ಸಮಸ್ಯೆಯೇ ಆಗಿದೆ. ರೈತರು ಮತ್ತು ಅವನ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ ಎನ್ನುವುದೇ ತೊಡಕಾಗಿದೆ. ಯಾವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ತಿಳಿದಿರಬೇಕಾಗುತ್ತದೆ. ಬ್ರೆಕ್ಟನಲ್ಲಿ ವಾಸ್ತವವಾಗಿ ಕೇಂದ್ರಕ್ಕೆ ಬರುತ್ತಾರೆ. ಆದರೆ ನಮ್ಮ ಈಗಿನ ಸಮಾಜದಲ್ಲಿ ಯಾರು ಕೇಂದ್ರಕ್ಕೆ ಬರಬೇಕು ಎನ್ನುವುದೇ ಮುಖ್ಯವಾಗಿದೆ. ಒಂದು ಸಮಾಜದ ವರ್ಗವು ಹೇಗೆ ಬದಲಾಗುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎಂದು ನೋಡಬೇಕಾಗುತ್ತದೆ. ವ್ಯಕ್ತಿಯು ಈಗ ಬಲಿಪಶುವಾಗಲು ಬೇರೆ ಬೇರೆ ಕಾರಣಗಳೂ ಇವೆ. ಒಂದು ವರ್ಗವು ಮತ್ತೊಂದು ವರ್ಗವನ್ನು ಶೋಷಣೆ ಮಾಡುತ್ತದೆ. ಹಾಗೆ ನೋಡುವುದಿದ್ದರೆ ಸಮಾಜದಲ್ಲಿ ಕಾರ್ಮಿಕರಿಗೆ ಹೆಚ್ಚು ಶಕ್ತಿಯು ಇದೆ. ಕಾರ್ಮಿಕರ ಶಕ್ತಿಗೆ ದೊಡ್ಡದಾದ ಚರಿತ್ರೆಯೂ ಇದೆ. ಇಂಥಾ ಸಂಗತಿಗಳನ್ನೇ ಬ್ರೆಕ್ಟ್ ಹೇಳಿದ. ಅವನಲ್ಲಿ ಯಾರು ಬಲಿಪಶುವಾಗುತ್ತಾರೆ ಎನ್ನುವುದೂ ಅಷ್ಟೇ ಮುಖ್ಯ. ವಿಶ್ವಾತ್ಮಕವಾದ ನ್ಯಾಯ ಮತ್ತು ಅದರ ವಿಚಾರಗಳನ್ನು ಅವನು ಹೇಳುತ್ತಾನೆ. ಮನುಷ್ಯ ಮತ್ತು ಅವನ ದೇಹ ಮತ್ತು ಅವನ ದುಡಿಮೆ ಹಾಗೂ ಅವನ ಶಕ್ತಿಯನ್ನು ಆಧುನಿಕ ಮಾರುಕಟ್ಟೆಯು ಗ್ರಹಿಸುವುದು ಬೇರೆ ಬಗೆಯಲ್ಲಿ. ಈವತ್ತು ವ್ಯಕ್ತಿ ಮತ್ತು ಅವನ ಶಕ್ತಿಯನ್ನು ಮಾರುಕಟ್ಟೆಯು ಕೊಂಡುಕೊಳ್ಳುತ್ತದೆ. ಈ ಕಾರಣದಿಂದ ಆಧುನಿಕ ದುರಂತ ಮತ್ತು ಅದರ ಸ್ವರೂಪವು ಬೇರೆಯಾಗಿದೆ. ಸಾಮಾನ್ಯ ಅನುಭವ ಮತ್ತು ಅದರ ಅರ್ಥಗಳೂ ವ್ಯತ್ಯಾಸವಾಗಿದೆ. ದುರಂತ ನಾಟಕಗಳಲ್ಲಿ ಬರುವ ಅದೃಷ್ಟದ ಸಮಸ್ಯೆಯು ಭಿನ್ನವಾಗಿವೆ. ಅದರಲ್ಲಿ ಆತ್ಮದ ಪ್ರಶ್ನೆಯು ಬಹಳ ಮುಖ್ಯವಾಗಿವೆ. ದುರಂತವು ನಿಜವಾಗಿಯೂ ಅತ್ಯಂತ ಭೀಕರವೂ ಆಗಿದೆ. ಅದರಲ್ಲಿ ಬರುವ ಸೌಂದರ್ಯದ ಪ್ರಶ್ನೆಯು ಕಾದಂಬರಿ ಅಥವಾ ಇತರ ಪ್ರಕಾರಗಳಂತೆ ಇಲ್ಲ. ಅದರಲ್ಲಿ ಚಂಪೂ ಮಾದರಿಯನ್ನು ಕಾಣಲು ಸಾಧ್ಯವಾಗುವುದೂ ಇಲ್ಲ. ಅದರ ಸ್ವರೂಪವೂ ಈ ದೃಷ್ಟಿಯಿಂದ ಭಿನ್ನವಾಗಿದೆ. ದುರಂತದಲ್ಲಿ ಬರುವ ಮನಸ್ಸು ಮತ್ತು ಅದರ ಸಮಸ್ಯೆಯು ನಮಗೆ ಬೇರೆ ಅರ್ಥಗಳನ್ನು ಕೊಡುತ್ತವೆ. ದುರಂತ ನಾಟಕದ ರೂಪವು ಪರಿವರ್ತನೆಯನ್ನು ಹೇಳುತ್ತದೆ. ಅದರಲ್ಲಿ ವಿಧಿಯ ಪ್ರಶ್ನೆಯೂ ಅತ್ಯಂತ ಸಂಕೀರ್ಣವಾಗಿದೆ. ದುರಂತ ಮತ್ತು ಅದರ ಮಾದರಿಗಳೂ ಭಿನ್ನವಾಗಿವೆ. ವ್ಯಕ್ತಿಯು ಅತ್ಯಂತ ಅದೃಷ್ಟವಂತನಾಗಿದ್ದರೆ ಅವನ ಜೀವನವು ಒಂದು ಬಗೆಯಲ್ಲಿ ಇರುತ್ತದೆ. ಆದರೆ ದುರಾದೃಷ್ಟವಂತನಾದರೆ ಅವನು ಪಡುವ ಯಾತನೆಗಳು ಒಂದರೆಡಲ್ಲ ಎನ್ನುವುದನ್ನೇ ಅವುಗಳು ಹೇಳುತ್ತವೆ. ಅದನ್ನು ನೋಡುವ ಪ್ರೇಕ್ಷಕನು ಮುಂದೆ ಏನು ಎಂದು ಕೇಳುವಂತೆ ಆಗುತ್ತದೆ. ದುರಂತ ನಾಟಕದಲ್ಲಿ ಬರುವ ನಾಯಕನ ದುರಂತವೂ ಅವನ ಅಹಮಿಕೆಯಿಂದ ಬರುತ್ತದೆ. ಅವನದು ಈ ದೃಷ್ಟಿಯಿಂದ ಸ್ವಯಂಕೇಂದ್ರಿತವಾದ ವ್ಯಕ್ತಿತ್ವವೂ ಹೌದು. ಕರುಣೆ ಮತ್ತು ವಿಷಾದವೂ ಇರುತ್ತವೆ.

ದುರಂತಕ್ಕೆ ಕಾರಣವಿರುತ್ತದೆ. ಅದರಲ್ಲಿ ಕೆಲವು ಪ್ರಕರಣಗಳೂ ಇರುತ್ತವೆ. ಸಾವು ಮತ್ತು ಜೀವನದ ವೈರುಧ್ಯಗಳೂ ಇದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ವ್ಯಕ್ತಿಯು ಕೆಲವು ಕಾರಣಗಳಿಗಾಗಿ ದುರಂತವನ್ನು ಅಪ್ಪುತ್ತಾನೆ. ನಾಯಕನ ಸಾವು ನಮಗೆ ಅವನಲ್ಲಿ ಕರುಣೆಯನ್ನು ಹುಟ್ಟಿಸುತ್ತದೆ. ಸ್ಥಾನ ಮತ್ತು ಅದರ ಅರಿವೂ ಇದರಲ್ಲಿ ಬಹಳ ಮುಖ್ಯ. ಜೀವನವನ್ನು ಮತ್ತು ದುರಾದೃಷ್ಟವನ್ನು ಅವನು ಹೊಂದಿರುವುದು ಮತ್ತು ಜೀವನ ಮತ್ತು ಅದರ ವಿಫಲತೆಯನ್ನು ಅನುಭವಿಸುವುದೂ ಇಲ್ಲಿ ಮುಖ್ಯ. ಅತ್ಯಂತ ಬಲಾಢ್ಯನಾದ ವ್ಯಕ್ತಿಯು ಕೂಡಾ ಅವನತಿಯನ್ನು ಹೊಂದಬಹುದು ಎನ್ನುವುದನ್ನು ಇದು ಹೇಳುತ್ತದೆ. ವ್ಯಕ್ತಿಯು ಸ್ಥಿರತೆಯನ್ನು ಹೊಂದಬೇಕಾದರೆ ಯಾವ ರೀತಿಯ ಅರಿವು ಬೇಕಾಗುತ್ತದೆ ಎನ್ನುವುದನ್ನು ದ್ವಂದ್ವಾತ್ಮಕವಾಗಿ ಹೇಳುತ್ತದೆ. ಮನುಷ್ಯನು ಬಲಿಪಶುವಾಗುತ್ತಾನೆ ಗ್ರೀಕ್ ನಾಟಕದ ಪ್ರಾರಂಭದಲ್ಲಿ ಆಡಿನ ತಲೆಯನ್ನು ಕಡಿಯುವ ಹಾಗೆ. ಮೌಲ್ಯ ಮತ್ತು ಅದರ ಅಭಿವ್ಯಕ್ತಿಯು ಇಲ್ಲಿ ಮುಖ್ಯವಾಗುತ್ತದೆ. ವಿಧಿಯು ನಿಗೂಢವಾಗಿದೆ. ಅದೃಷ್ಟ ಮತ್ತು ಅದರ ಪ್ರಶ್ನೆಯು ಸಂಕೀರ್ಣವಾಗಿದೆ. ಹೀಗಾಗಿ ಅದೃಷ್ಟ ಮತ್ತು ದುರಾದೃಷ್ಟ ಎನ್ನುವುದಕ್ಕೆ ಇದರಲ್ಲಿ ಬೇರೆ ಬೇರೆ ಅರ್ಥಗಳು ಇವೆ. ಮತ್ತೊಂದು ದೃಷ್ಟಿಯಿಂದ ಹೇಳುವುದಾದರೆ ಇದರಲ್ಲಿ ನೈತಿಕತೆ ಮತ್ತು ಅದರ ಪ್ರಶ್ನೆಗಳೂ ಸೇರಿಕೊಂಡಿವೆ. ಯಾರು ಅಧಿಕಾರವನ್ನು ನಡೆಸುತ್ತಾರೆ ಮತ್ತು ಯಾರು ಇದರಲ್ಲಿ ಆಳ್ವಿಕೆಗೆ ಒಳಗಾಗುತ್ತಾರೆ ಎನ್ನುವುದೂ ಬಹಳ ಮುಖ್ಯ. ವ್ಯಕ್ತಿಯು ಹೇಗೆ ಹಾಳಾಗುತ್ತಾನೆ ಮತ್ತು ಅದರ ಕಾರಣವು ಏನು ಎನ್ನುವುದೂ ಅದರ ತಾತ್ವಿಕವಾದ ಸಮಸ್ಯೆ. ವ್ಯಕ್ತಿಯ ಸಣ್ಣ ಅಹಂಕಾರವೂ ಹೇಗೆ ವ್ಯಕ್ತಿಯನ್ನು ನಾಶ ಮಾಡುತ್ತದೆ ಎನ್ನುವುದೇ ಇದರ ತಿರುಳಾಗಿದೆ. ಕೊನೆಗೆ ಸಾವು ಕೂಡಾ ಅನಿವಾರ್ಯವಾದ ಸಂಗತಿಯು ಆಗುತ್ತದೆ. ಆದರೆ ಇಲ್ಲಿ ಸಾವು ಮಹತ್ವದ ಅರ್ಥವನ್ನು ಕೊಡುತ್ತದೆ. ಮತ್ತು ಅದರಲ್ಲಿ ಭಿನ್ನತೆಯು ಇರುತ್ತದೆ. ಅದು ತರ್ಕವನ್ನು ಸೂಚಿಸುತ್ತದೆ. ದುರಂತವು ಯಾವುದೇ ಮೌಲ್ಯವನ್ನು ಹೇಳದೇ ಇದ್ದರೆ ಅದರಲ್ಲಿ ವಿಶಿಷ್ಟತೆಯು ಸಾಧ್ಯವಾಗುವುದೂ ಇಲ್ಲ. ದುರಂತದ ನಿಯಮವು ಸುಖಾಂತದ ನಿಯಮವಲ್ಲ. ಅದರಲ್ಲಿ ನಗೆಯು ಅಸಾಧ್ಯ. ಸಾವು ಮತ್ತು ವಿಧಿ ಎರಡೂ ಗಂಭೀರವಾದ ಪ್ರಶ್ನೆಗಳೇ ಆಗಿವೆ. ಸಾವು ಇದರಲ್ಲಿ ಮಹತ್ವದ ಘಟನೆ. ಸಾವನ್ನು ನೋಡಿ ಯಾರೂ ನಗುವುದಿಲ್ಲ. ಅದರಲ್ಲಿ ಅಳು ಮಹತ್ವದ್ದು. ಬಾಹ್ಯದ ದುರಂತವು ನೋಡುವುದೂ ಬೇರೆ ರೀತಿಯಲ್ಲಿ. ಆಧುನಿಕ ನಾಟಕಗಳಲ್ಲಿ ನಡೆಯುವ ಅನೇಕ ಬಗೆಯ ದುರಂತಕ್ಕೂ ಆಧುನಿಕ ಸಂಗತಿಗಳಿಗೂ ಸಂಬಂಧವಿದೆ. ಆದರೆ ಆಧುನಿಕ ದುರಂತ ನಾಟಕಗಳು ಹಿಂದಿನ ದುರಂತ ನಾಟಕಗಳಿಗೆ ಪರ್ಯಾಯವಲ್ಲ. ಪ್ರಾಚೀನ ದುರಂತ ನಾಟಕಗಳಲ್ಲಿ ವ್ಯಕ್ತಿ ಮತ್ತು ಅವನ ಜವಾಬ್ದಾರಿಯ ಪ್ರಶ್ನೆಯು ಬರುತ್ತದೆ. ಸ್ವಾತಂತ್ರ್ಯ ಮತ್ತು ಅದರ ಸಮಸ್ಯೆಯನ್ನು ಆಧುನಿಕ ಜಗತ್ತನ್ನು ನೋಡುವುದು ಒಂದು ರೀತಿಯಲ್ಲಿ. ಆದರೆ ಸ್ವಾತಂತ್ರ್ಯ ಮತ್ತು ಅದರ ಜವಾಬ್ದಾರಿಯನ್ನು ಯಾರು ಹೊರುತ್ತಾರೆ ಎನ್ನುವುದೂ ಸಮಸ್ಯೆ. ಹಾಗೆ ನೋಡುವುದಿದ್ದರೆ ದುರಂತದ

ನಾಯಕರು ಸೂಕ್ಷ್ಮ ಸಂವೇದನೆಯನ್ನು ಉಳ್ಳವರು ಆಗಿರುತ್ತಾರೆ. ಅದರಲ್ಲಿ ಅಂದರೆ ದುರಂತ ನಾಟಕಗಳಲ್ಲಿ ನ್ಯಾಯ ಮತ್ತು ಅನ್ಯಾಯಗಳಿಗೆ ನಿರ್ದಿಷ್ಟವಾದ ಒಂದು ಚೌಕಟ್ಟು ಇದೆ. ದುಃಖ ಮತ್ತು ಅಸೌಖ್ಯವನ್ನು ಅದು ಹೇಳುವುದೂ ಬೇರೆ ರೀತಿಯಲ್ಲಿ. ನಾರ್ಥ್‌ಫ್ರೈ ದುರಂತ ನಾಟಕಗಳಲ್ಲಿ ಕೆಲವು ನಿಯಮಗಳು ಇರುತ್ತವೆ ಎಂದು ಹೇಳುತ್ತಾನೆ. ದುರಂತದ ಚಿಂತನೆ ಮತ್ತು ಅದೃಷ್ಟದ ಸಮಸ್ಯೆಗೆ ಒಂದು ಸಂಬಂಧವು ಇದೆ ಎಂದು ಅವನ ಭಾವನೆಯು ಆಗಿದೆ. ವ್ಯಕ್ತಿಯು ವಿಫಲನಾಗುವುದು ಮತ್ತು ಅದರ ಕಾರಣವನ್ನು ಹೇಳುವುದು ಇಲ್ಲಿ ಮುಖ್ಯ. ವ್ಯಕ್ತಿಯು ಯಾವ ಕಾರಣಕ್ಕೆ ವಿಫಲನಾಗುತ್ತಾನೆ ಎನ್ನುವುದೂ ಇಲ್ಲಿ ಪ್ರಧಾನ ವಿಷಯ. ವ್ಯಕ್ತಿ ಮತ್ತು ಅವನ ಅವನತಿಯನ್ನು ದುರಂತವು ಹೇಳುವಾಗ ಕ್ರಿಯೆಯು ಅತ್ಯಂತ ಮಹತ್ವದ ಸ್ಥಾನವನ್ನು ಪಡೆಯುತ್ತದೆ ಎನ್ನುವುದು ಎಲ್ಲರಿಗೂ ಗೊತ್ತು. ಮನುಷ್ಯ ಮತ್ತು ಅವನ ವಿಫಲತೆ ಹಾಗೂ ಅವನ ಸ್ವಾತಂತ್ರ್ಯ ಹಾಗೂ ಜೀವನದ ಕಷ್ಟಕರವಾದ ಸಂಗತಿಗಳು ಮುಖ್ಯ. ವಾಸ್ತವವಾಗಿ ದುರಂತ ನಾಟಕಗಳು ಮನುಷ್ಯ ಮತ್ತು ಅವನ ಕ್ರಿಯೆಯನ್ನು ಸೂಚಿಸುತ್ತದೆ. ಪುರಾಣ ಮತ್ತು ಅದರ ಸ್ವಭಾವವನ್ನು ಹೇಳುವುದು ದುರಂತದಲ್ಲಿ ಬಹಳ ಮುಖ್ಯ. ಅದರಲ್ಲಿ ನಾಗರಿಕತೆ ಮತ್ತು ಅದರ ಸ್ವರೂಪದ ಪರಿಚಯವೂ ಇದೆ. ದುರಂತದಲ್ಲಿ ಕ್ರಿಯೆಯು ಮೂಲತಃ ಒಂದು ಸೂಚನೆಯೂ ಆಗಿರುತ್ತದೆ. ಅದರಲ್ಲಿ ಸಂಕೇತವು ಬಹಳ ಮುಖ್ಯವಾಗುತ್ತದೆ. ಕ್ರಿಯೆಯೂ ಒಂದು ಸ್ಥಳವನ್ನು ಹೇಳುತ್ತದೆ. ಸತ್ಯದ ಅನಾವರಣವನ್ನು ಅದು ಪ್ರಸ್ತುತಪಡಿಸುತ್ತದೆ. ಸತ್ಯವೇ ವಾಸ್ತವವಾಗಿ ಈಡಿಪಸ್‌ನಲ್ಲಿ ದುರಂತಕ್ಕೆ ಕಾರಣ. ಅದು ಚಾರಿತ್ರಿಕ ಬದಲಾವಣೆಯನ್ನು ಹೇಳುತ್ತದೆ. ಮನುಷ್ಯ ಮತ್ತು ಅವನ ಕ್ರಿಯಾಶೀಲತೆಯನ್ನು ಅದು ಹೇಳುವ ಕ್ರಮವು ಮಾತ್ರ ಬೇರೆಯಾಗಿದೆ. ದುರಂತ ನಾಟಕಗಳಿಗೆ ಅವುಗಳದೇ ಆದ ಸ್ಥಾನವು ಚಾರಿತ್ರಿಕ ಕಾರಣದಿಂದ ಉಂಟಾಗಿವೆ. ದುರಂತ ನಾಟಕಗಳಲ್ಲಿ ಅನೇಕ ರೀತಿಯ ವ್ಯಂಗ್ಯವೂ ಇರುತ್ತದೆ. ಅವುಗಳ ರಚನೆಯಲ್ಲಿ ವಿಶಿಷ್ಟತೆಯು ಇದೆ. ಯಾರು ಬಲಿಪಶುವಾಗುತ್ತಾನೆ ಎನ್ನುವುದೂ ಅದರಲ್ಲಿ ಬಹಳ ಮುಖ್ಯ. ಹಾಗೆ ನೋಡುವುದಿದ್ದರೆ ಅದು ವಿಶ್ವಾತ್ಮಕವಾದ ಅನೇಕ ಸಂಗತಿಗಳನ್ನು ಹೇಳುತ್ತವೆ. ಮನುಷ್ಯ ಮತ್ತು ದೇವರ ಸಂಬಂಧವನ್ನು ದುರಂತ ನಾಟಕಗಳು ಹೇಳುತ್ತವೆ. ಆದರೆ ದುರಂತವು ಅನೇಕ ವಿಷಯಗಳನ್ನು ಹೇಳುತ್ತವೆ. ಅದರಲ್ಲಿ ಕೋರಸ್‌ನ ಪಾತ್ರವು ಅತ್ಯಂತ ಮಹತ್ವದ್ದೂ ಹೌದು. ಕೋರಸ್ ಕೆಲವು ಎಚ್ಚರವನ್ನು ಕೊಡುತ್ತವೆ. ಗ್ರೀಕ್ ದುರಂತ ನಾಟಕಗಳಲ್ಲಿ ಪ್ರಾಚೀನವಾದ ದೇಶ ಮತ್ತು ಪ್ರಭುತ್ವದ ಸ್ವರೂಪವು ಎದ್ದು ಕಾಣಿಸುತ್ತದೆ. ಈಡಿಪಸ್ ನಾಟಕದಲ್ಲಿ ನಾಯಕನು ಅನುಭವಿಸುವ ನೋವು ಅವನ ಮನೋಸ್ಥಿತಿಯನ್ನು ಹೇಳುತ್ತದೆ. ಅದು ದೇಹದ ನೋವಿಗಿಂತ ಮಾನಸಿಕ ನೋವು ಹೇಗೆ ಪೀಡಿಸುತ್ತದೆ ಎನ್ನುವುದರ ಚಿತ್ರಣವೂ ಹೌದು. ಅದರೊಂದಿಗೆ ಅದು ನೀತಿಯನ್ನು ಹೇಳುತ್ತದೆ. ಹೇಗೆ ವರ್ತಿಸಬೇಕು ಎನ್ನುವುದನ್ನು ಸೂಚಿಸುತ್ತದೆ. ಈ ಪ್ರಶ್ನೆಗಳು ಬರೀ ಒಂದು ದುರಂತವನ್ನು ಮಾತ್ರವೇ

ಹೇಳುತ್ತಿಲ್ಲ. ಅದು ಅದೃಷ್ಟ ಮತ್ತು ವ್ಯಕ್ತಿಯ ಪ್ರಜ್ಞೆಯ ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತದೆ ಎಂದು ಹೆಗೆಲ್ ಹೇಳುತ್ತಾನೆ. ಗ್ರೀಕ್ ನಾಟಕವು ಹೇಳುವ ಮಹತ್ವದ ಸಂಗತಿಯೆಂದರೆ ವ್ಯಕ್ತಿಯು ಎಷ್ಟರ ಮಟ್ಟಿಗೆ ಸ್ವತಂತ್ರನಾಗಿದ್ದಾನೆ ಎಂದು ಮಾತ್ರವೇ. ಇದರಲ್ಲಿ ಕ್ರಿಶ್ಚಿಯನ್ ನೀತಿಶಾಸ್ತ್ರದ ಪ್ರಶ್ನೆಯೂ ಸೇರಿಕೊಂಡಿದೆ. ಮನುಷ್ಯ ಮತ್ತು ಅವನ ಮನೋಗತವೂ ಇದರಲ್ಲಿ ಸೇರಿಕೊಂಡಿವೆ. ಪಾಪ ಮತ್ತು ಅದರ ಪ್ರಜ್ಞೆಯು ವ್ಯಕ್ತಿಯನ್ನು ಏನು ಮಾಡುತ್ತದೆ ಎನ್ನುವುದೂ ಇದರಲ್ಲಿ ಬಹಳ ಮುಖ್ಯವಾದ ಸಮಸ್ಯೆಯೂ ಆಗಿದೆ. ವಿಶ್ವಾತ್ಮಕತೆ ಮತ್ತು ಬಂಧನವನ್ನು ದುರಂತ ನಾಟಕಗಳು ಹೇಳುವ ವಿಧಾನವು ಕುತೂಹಲಕಾರಿಯಾಗಿದೆ. ಮಾತು ಮತ್ತು ಅದರ ಪರಿಣಾಮವನ್ನು ಹೇಳುತ್ತದೆ. ಒಂದು ತತ್ವಜ್ಞಾನವನ್ನು ಹೇಳುತ್ತದೆ. ದುರಂತವನ್ನು ನಾವು ಕೃತಿ ಮತ್ತು ಅದರ ಸಂದರ್ಭದ ಹಿನ್ನಲೆಯಲ್ಲಿಯೂ ನೋಡಬೇಕಾಗುತ್ತದೆ. ಅದು ಪಠ್ಯದ ಹೊರಗೆಯೂ ಇರುತ್ತದೆ. ನಮಗೆ ಆಲೋಚನೆಯನ್ನು ಹೇಳುತ್ತದೆ. ಕ್ರಿಯೆಯನ್ನು ಸೂಚಿಸುತ್ತದೆ. ಭಾವನೆಗಳು ಮತ್ತು ಮನಸ್ಸು ಅದರಲ್ಲಿ ಮುಖ್ಯವಾಗುತ್ತದೆ. ಲೌಕಿಕ ಮತ್ತು ಅಲೌಕಿಕವನ್ನು ಹೇಳುತ್ತದೆ. ದುರಂತದಲ್ಲಿ ಬರುವ ವ್ಯಂಗ್ಯವೂ ಅರ್ಥಪೂರ್ಣವಾಗಿರುತ್ತದೆ. ಅದು ಪ್ರಜ್ಞೆಗೂ ನಮ್ಮ ಕ್ರಿಯೆಗೂ ಇರುವ ವ್ಯತ್ಯಾಸದ ದ್ಯೋತಕವೂ ಆಗಿದೆ. ಅನೇಕ ದುರಂತ ನಾಟಕಗಳು ಜೀವನ ಮತ್ತು ಅದರ ಸಂಘರ್ಷವನ್ನು ಹೇಳುತ್ತವೆ. ದುರಂತ ಮತ್ತು ಅದರ ಪರಿಣಾಮವನ್ನು ನೋಡುವಾಗ ಈ ಮಾದರಿಯ ಸಂಘರ್ಷಗಳು ಏನಿವೆಯೋ ಅದರ ಅರ್ಥವನ್ನೂ ಗ್ರಹಿಸಬೇಕಾದ ಅಗತ್ಯವೂ ಇದೆ. ಸಂಘರ್ಷವೆಂದರೆ ಅದು ವ್ಯಕ್ತಿ ಮತ್ತು ಅವನ ದೃಢತೆಯನ್ನು ಸೂಚಿಸುತ್ತದೆ. ಅವನು ಅದರಿಂದ ಹಿಂದೆ ಸರಿಯಲಾರ. ಅವನಿಗೆ ಅದೇ ಕಾರಣಕ್ಕೆ ವಿಧಿಯು ಎದುರಾಗುತ್ತದೆ. ಅವನು ಅದರ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಒಂದು ಅನನ್ಯತೆಯ ಪ್ರಶ್ನೆಯೂ ಅದರಲ್ಲಿ ಇರುತ್ತದೆ. ಹಾಗೂ ಅದನ್ನು ಗ್ರಹಿಸುವಾಗ ಅದರಲ್ಲಿ ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯು ಭಿನ್ನವಾಗಿದೆ. ಹಾಗೂ ಇದರಲ್ಲಿ ವ್ಯಕ್ತಿಯು ಅನುಭವಿಸುವ ಯಾತನೆಗೆ ವಿಶಿಷ್ಟವಾದ ಆಯಾಮವೂ ಇರುತ್ತದೆ. ಸ್ವಾತಂತ್ರ್ಯ ಮತ್ತು ಅಸ್ತಿತ್ವವು ಇದರಲ್ಲಿ ಭಿನ್ನವಾದ ಅರ್ಥವನ್ನು ಹೇಳುತ್ತದೆ. ಅಸ್ತಿತ್ವವಾದದಲ್ಲಿ ವ್ಯಕ್ತಿ ಮತ್ತು ಅವನ ಅನನ್ಯತೆಗೆ ಹೇಗೆ ಸಂಬಂಧವಿರುತ್ತದೆಯೋ ಅದರಂತೆ ಇಲ್ಲಿ ವ್ಯಕ್ತಿ ಮತ್ತು ಅವನ ಚಟುವಟಿಕೆಗೆ ಒಂದು ಸಂಬಂಧವಿದೆ. ಸ್ವಾತಂತ್ರ್ಯ ಮತ್ತು ವ್ಯಕ್ತಿಯ ಘನತೆಯ ಪ್ರಶ್ನೆಯು ಇಲ್ಲಿ ಗಮನಾರ್ಹವಾಗಿದೆ. ವಾಸ್ತವವಾಗಿ ಇದರಲ್ಲಿ ಪ್ರಾಚೀನ ಗ್ರೀಕ್ ಚರಿತ್ರೆಯು ಕಾಣಿಸಿಕೊಳ್ಳುತ್ತದೆ. ಮತ್ತು ಹೀಗಾಗುವುದರ ಮೂಲಕವೇ ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯು ಬಹಳ ಮುಖ್ಯವಾಗುತ್ತದೆ. ವ್ಯಕ್ತಿಯ ದೃಢವಾದ ನಿಶ್ಚಯವನ್ನು ಮತ್ತು ಅದರ ಮೇಲೆ ಉಂಟಾಗುವ ಆಘಾತವನ್ನು ದುರಂತ ನಾಟಕಗಳು ಹೇಳುತ್ತವೆ. ಹೀಗೆ ಆಗುವಾಗ ಅದೃಷ್ಟದ ಪ್ರಶ್ನೆಯೂ ಬರುತ್ತದೆ. ದೇವರು ಮತ್ತು ಅವನ ಮುನಿಸು ಹೇಗೆ ವ್ಯಕ್ತಿಯನ್ನು ದುರಂತದ ಕಡೆಗೆ ಕರೆದುಕೊಂಡು

ಹೋಗುತ್ತದೆ ಎಂದು ದುರಂತ ನಾಟಕಗಳು ಹೇಳುತ್ತವೆ. ದುರಂತ ಮತ್ತು ಅದರ ತಾತ್ವಿಕತೆಯೇ ಬಹಳ ಮುಖ್ಯ. ಮನುಷ್ಯ ಮತ್ತು ಅವನ ಕಷ್ಟಗಳನ್ನು ಹಾಗೂ ಅದರ ಸ್ವರೂಪಗಳನ್ನು ಇವುಗಳು ಹೇಳುತ್ತವೆ. ಅದರ ಜೊತೆಗೆ ದುರಂತ ಎನ್ನುವುದೂ ಬಹಳ ಮುಖ್ಯವಾದ ತಾತ್ವಿಕತೆಯನ್ನು ವಿವರಿಸುತ್ತದೆ. ತನ್ನ ನಿಲುವಿಗೆ ಬದ್ಧನಾದ ವ್ಯಕ್ತಿಯು ಹೇಗೆ ಕಷ್ಟವನ್ನು ಅನುಭವಿಸುತ್ತಾನೆ ಎನ್ನುವುದೂ ಇಲ್ಲಿ ಬಹಳ ಮುಖ್ಯವಾದ ತಿರುಳು. ಜಗತ್ತು ಮತ್ತು ಅದರ ಕೌರ್ಯವನ್ನೂ ದುರಂತ ನಾಟಕಗಳು ಹೇಳುತ್ತವೆ. ದುರಂತ ಮತ್ತು ಅದರ ಅರ್ಥವನ್ನು ಹೇಳಲು ಅಲೌಕಿಕ ಶಕ್ತಿಗಳನ್ನು ತರಲಾಗುತ್ತದೆಯೇ ಎನ್ನುವುದೂ ಬಹಳ ಮುಖ್ಯವಾಗಿದೆ. ಇದಕ್ಕೆ ಒಂದು ಪರಂಪರೆಯು ಇದೆ. ಅದೃಷ್ಟವಂತ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯನ್ನು ಇವುಗಳು ಹೇಳುತ್ತವೆ. ದುರಂತ ನಾಟಕಗಳಲ್ಲಿ ಬರುವ ಮಾಸ್ಕ್, ಕೋರಸ್, ಆಚರಣೆಗಳು ಮತ್ತು ನೃತ್ಯಗಳು ವಿಶಿಷ್ಟವಾದ ಅರ್ಥವನ್ನು ಹೇಳುತ್ತವೆ. ಯಾವುದನ್ನು ನಿಜವಾದ ಫ್ಯಾಕ್ಟ್ ಆಗಿದೆಯೋ ಅದರ ಮೌಲ್ಯವನ್ನು ಇವುಗಳು ಹೇಳುತ್ತವೆ. ನೀತಿ ಮತ್ತು ಅದರ ಶಾಸ್ತ್ರವನ್ನು ಇವುಗಳು ಹೇಳುತ್ತವೆ. ಮನುಷ್ಯ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯು ಎಷ್ಟು ಗಂಭೀರವಾದದ್ದು ಎನ್ನುವುದನ್ನು ಇದು ಹೇಳುತ್ತದೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯು ಅತ್ಯಂತ ಸಂಕೀರ್ಣವೂ ಆಗಿದೆ. ವ್ಯಕ್ತಿಯ ಸಾವು ಅವನ ಅದೃಷ್ಟ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯನ್ನು ನಿರಚನಗೊಳಿಸುತ್ತದೆ. ದುರಂತನಾಟಕಗಳು ವ್ಯಕ್ತಿಯನ್ನು ನೋಡುವ ಕ್ರಮಗಳು ಬೇರೆಯಾಗಿವೆ. ವ್ಯಕ್ತಿ ಮತ್ತು ಅವನ ಪ್ರಶ್ನೆಗಳು ಸಾಮಾನ್ಯವಾದ ಒಂದು ಸಂಗತಿಯು ಅಲ್ಲವೆಂದು ಹೇಳುತ್ತವೆ. ಆದರೆ ಯಾವಾಗ ದುರಂತವನ್ನು ನಾವು ಒಂದು ಅನುಕ್ರಮತೆಯ ಹಿನ್ನೆಲೆಯಲ್ಲಿ ನೋಡುತ್ತೇವೆಯೋ ಆಗ ಅದರ ಅರ್ಥಗಳು ಬೇರೆಯಾಗುತ್ತವೆ. ಅದರಲ್ಲಿ ಸಾಮಾನ್ಯವಾದ ಒಂದು ಘಟನೆಯು ಮಾತ್ರವೇ ಮುಖ್ಯವಾಗುವುದೂ ಇಲ್ಲ. ಅದರಲ್ಲಿ ಅಧಿಕಾರದ ನಿರೂಪಣೆಯೂ ಬೇರೆಯಾಗುತ್ತದೆ. ಬರೀ ಸ್ಥಳೀಯವಾದ ಒಂದು ಸಂಗತಿಯೂ ಆಗಿರುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಅಸ್ತಿತ್ವವನ್ನು ದುರಂತವು ನೋಡುವ ಕ್ರಮವು ಬೇರೆಯಾಗುತ್ತದೆ. ಮನುಷ್ಯನನ್ನು ಕಾಡುವ ದೇವರು ಅಥವಾ ವಿಧಿಯು ಒಂದು ಕಡೆಗೆ ಇದ್ದರೆ ಮನುಷ್ಯನು ಮತ್ತೊಂದು ಕಡೆಯಲ್ಲಿ ಇದ್ದಾನೆ. ಅವರ ಸಮಸ್ಯೆಗಳಲ್ಲಿ ವ್ಯತ್ಯಾಸವೂ ಇದೆ. ಯಾಕೆಂದರೆ ಮನುಷ್ಯನು ವಿಧಿಯ ಪರೀಕ್ಷೆಗೆ ಗುರಿಯಾಗುವುದು ಅಂದರೆ ಅದು ಅವನ ಗ್ರಹಚಾರವೂ ಆಗುತ್ತದೆ. ಕಾರ್ಯ ಮತ್ತು ಕಾರಣಗಳ ಅರಿವು ಇದರಲ್ಲಿ ಬೇರೆಯಾಗುತ್ತದೆ. ಯಾವ ಕಾರಣಕ್ಕೆ ವ್ಯಕ್ತಿಯನ್ನು ಪರೀಕ್ಷೆಗೆ ಗುರಿಮಾಡಲಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯು ಇಲ್ಲಿ ಸಂಕೀರ್ಣವಾಗಿದೆ. ಯಾವುದು ಸತ್ಯ ಮತ್ತು ಯಾವುದು ಅಸತ್ಯ ಎನ್ನುವುದೂ ಇಲ್ಲಿ ಬಹಳ ಮುಖ್ಯ. ವ್ಯಕ್ತಿಯು ವಿಧಿಯ ವಿರುದ್ಧ ಹೋರಾಟ ಮಾಡುವುದು ಎಂದರೆ ಅವನು ಸ್ವಲ್ಪ ಮಟ್ಟಿಗೆ ಕುಪಿತನಾಗುವುದೂ

ಹೌದು. ವಿಧಿಯಿಂದ ತಪ್ಪಿಸಿಕೊಳ್ಳುವುದು ಅಂದರೆ ಅದು ಬೇರೆ ಪ್ರಶ್ನೆ. ಮನುಷ್ಯ ಮತ್ತು ಅವನ ಸ್ವಾತಂತ್ರ್ಯವನ್ನು ಹರಣ ಮಾಡುವುದು ವಿಧಿ. ವಿಧಿಗೆ ಸ್ವಾತಂತ್ರ್ಯದ ಅರಿವಿಲ್ಲ. ಮನುಷ್ಯನು ಅದನ್ನು ಪಡೆಯಬೇಕಾಗುತ್ತದೆ. ಸ್ವಾತಂತ್ರ್ಯವೂ ಇದರಲ್ಲಿ ಒಂದು ಅವಶ್ಯಕತೆಯು ಆಗಿದೆ. ಆದ್ದರಿಂದ ದುರಂತ ನಾಟಕಗಳ ಹಿಂದೆ ಇರುವ ಆಲೋಚನೆಯು ಬೇರೆಯಿದೆ. ಅದನ್ನು ನಾಯಕ ಮತ್ತು ಅವನ ಜೀವನದ ಕ್ರಮದಲ್ಲಿಯೂ ನೋಡುವುದು ಸಾಧ್ಯ. ವ್ಯಕ್ತಿಯು ಪ್ರತ್ಯೇಕವಾಗುತ್ತಾನೆ. ಅವನು ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಯತ್ನವನ್ನು ಮಾಡುತ್ತಾನೆ. ಅವನಿಗೆ ಅವನದೇ ಆದ ಸ್ಥಾನವೂ ಇದೆ. ಅವನು ತನ್ನ ಸ್ವಾತಂತ್ರ್ಯ ಮತ್ತು ಅದರ ರಕ್ಷಣೆಯನ್ನು ಕುರಿತು ಹೇಳುತ್ತಾನೆ. ಅವನಿಗೆ ಅವನದೇ ಆದ ಅನನ್ಯತೆಯೂ ಇದೆ. ಸ್ವಾತಂತ್ರ್ಯ ಮತ್ತು ಅದರ ಸ್ವರೂಪಗಳು ಬೇರೆಯಿವೆ. ಸ್ವಾತಂತ್ರ್ಯ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಲ್ಲಿ ವ್ಯಕ್ತಿ ಹಾಗೂ ಅವನ ಅಸ್ತಿತ್ವದ ಹಿನ್ನಲೆಯಲ್ಲಿ ನೋಡಬೇಕಾಗುತ್ತದೆ. ಅವನ ಚಟುವಟಿಕೆ ಮತ್ತು ಅದರ ಅಸ್ತಿತ್ವವು ಬೇರೆಯಾಗಿದೆ. ವ್ಯಕ್ತಿ ಮತ್ತು ಅವನ ಸ್ವಭಾವವೂ ಬೇರೆಯಾಗಿದೆ. ಸ್ವಾತಂತ್ರ್ಯ ಮತ್ತು ವ್ಯಕ್ತಿಯ ಘನತೆಯ ಪ್ರಶ್ನೆಯು ಬೇರೆಯಾಗುತ್ತದೆ ಎನ್ನುವುದು ಇದರ ಸಾರ. ಒಂದು ಅರ್ಥದಲ್ಲಿ ಗ್ರೀಕ್ ದುರಂತ ನಾಟಕಗಳು ಪ್ರಾಚೀನವಾದ ಗ್ರೀಕ್ ಚರಿತ್ರೆಯನ್ನು ಹೇಳುತ್ತವೆ. ಸ್ವಾತಂತ್ರ್ಯ ಮತ್ತು ಅದರ ಅರ್ಥವೂ ಇದರಲ್ಲಿ ಭಿನ್ನವಾಗುತ್ತದೆ. ವ್ಯಕ್ತಿ ಮತ್ತು ಅವನ ಮನೋಸ್ಥಿತಿಯ ಪ್ರಶ್ನೆಯೂ ಬಹು ಮುಖ್ಯವಾದ ಅಂಶವಾಗಿದೆ. ಗ್ರೀಕ್ ದುರಂತ ನಾಟಕದಲ್ಲಿ ಕಾಣುವ ಮತ್ತೊಂದು ಅಂಶವೆಂದರೆ ವ್ಯಕ್ತಿ ಮತ್ತು ಅವನ ಮನೋಸ್ಥಿತಿಯು ಸ್ವಾತಂತ್ರ್ಯ ಮತ್ತು ಅದೃಷ್ಟವನ್ನು ಹೇಳುತ್ತದೆ. ದೇವರು ಮತ್ತು ಅವನ ಮುನಿಸು ಮಹತ್ವದ ತಿರುವಿಗೆ ಕಾರಣವಾಗುತ್ತದೆ. ದುರಂತದ ತಾತ್ವಿಕತೆಯು ಈ ದೃಷ್ಟಿಯಿಂದ ದೇವರು ಮತ್ತು ಮನುಷ್ಯರ ನಡುವಣ ಸಂಬಂಧವನ್ನು ಹೇಳುತ್ತದೆ. ಅದು ಸೈದ್ಧಾಂತಿಕವಾದ ಪ್ರಶ್ನೆಯೂ ಹೌದು. ಮನುಷ್ಯ ಮತ್ತು ಅವನ ಕಷ್ಟಗಳಿಗೆ ದುರಂತ ನಾಟಕಗಳಲ್ಲಿ ನಿರ್ದಿಷ್ಟವಾದ ಆಯಾಮವೂ ಇದೆ. ಕ್ರೂರವಾದ ಒಂದು ಜಗತ್ತೂ ಇಲ್ಲಿ ದುರಂತಕ್ಕೆ ಕಾರಣವಾಗುತ್ತದೆ. ದುರಂತಕ್ಕೆ ಬೇರೆ ಆಯಾಮವೂ ಇರುತ್ತದೆ. ದುರಂತಕ್ಕೂ ಒಂದು ಪರಂಪರೆಯು ಇದೆ. ವ್ಯಕ್ತಿ ಮತ್ತು ಅವನ ಅದೃಷ್ಟದ ಪ್ರಶ್ನೆಯು ಇಲ್ಲಿ ಸಂಕೀರ್ಣವಾಗಿರುತ್ತದೆ. ಸ್ವಾತಂತ್ರ್ಯ ಮತ್ತು ಅದೃಷ್ಟಗಳ ಸಂಬಂಧವನ್ನು ಒಂದು ಮೌಲ್ಯವಾಗಿಯೂ ಈ ಕೃತಿಗಳು ಹೇಳುತ್ತವೆ. ನೈತಿಕತೆ ಮತ್ತು ಅದರ ಮೌಲ್ಯಗಳು ಬಹಳ ಮುಖ್ಯವಾಗುತ್ತವೆ. ಒಂದು ಸಣ್ಣ ಆಕಸ್ಮಿಕವೂ ಹೇಗೆ ವ್ಯಕ್ತಿಯನ್ನು ಬದಲು ಮಾಡುತ್ತದೆ ಎನ್ನುವುದನ್ನೇ ಇವುಗಳು ಹೇಳುತ್ತವೆ. ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ಒಂದು ಅರ್ಥದಲ್ಲಿ ದುರಂತವು ಹೆಚ್ಚು ವಿವರಿಸುತ್ತದೆ. ಮತ್ತು ಅದರದೇ ಆದ ವಿನ್ಯಾಸವನ್ನು ರೂಪಿಸುತ್ತದೆ. ದುರಂತವು ಒಂದು ಗಳಿಗೆಯಲ್ಲಿ ನಡೆಯುವುದೂ ಇಲ್ಲ. ಅದು ಹಂತ ಹಂತವಾಗಿಯೇ ಜರುಗುತ್ತದೆ. ವ್ಯಕ್ತಿ ಮತ್ತು ಅವನ ಸ್ವಾತಂತ್ರ್ಯದ ಪ್ರಶ್ನೆಯು ಸಂಕೀರ್ಣವೂ ಹೌದು. ಈಡಿಪಸ್ ನಾಟಕದಲ್ಲಿ ವ್ಯಕ್ತಿಯು ಒಬ್ಬ ಗ್ಲಾಮರಸ್ ನಾಯಕನೂ ಅಲ್ಲ.

ಅವನ ದುರಂತವು ನಮ್ಮ ಎಲ್ಲರ ದುರಂತವೂ ಅಲ್ಲವಾಗಿದೆ. ಮತ್ತು ಅದರಲ್ಲಿ ವ್ಯಕ್ತಿತ್ವ ಮತ್ತು ಅದರ ಘರ್ಷಣೆಯೂ ಭಿನ್ನವಾಗಿದೆ. ಅವನ ನಡವಳಿಕೆಯಿಂದಲೂ ಇದು ನಡೆದಿದೆ. ದುರಂತದ ನಾಯಕನು ವಾಸ್ತವವಾಗಿ ಜಗತ್ತಿನಿಂದ ಹೊರಗೆ ಹಾಕಲ್ಪಟ್ಟವನೂ ಆಗಿದ್ದಾನೆ. ಹಾಗೆ ನೋಡುವುದಿದ್ದರೆ ವ್ಯಕ್ತಿಯು ಮೂಲಭೂತವಾಗಿ ಕೆಲವು ರೀತಿಯ ಕರುಣೆಯನ್ನು ಅಪೇಕ್ಷಿಸುತ್ತಾನೆ. ಗುಣ ಮತ್ತು ನಡತೆಯೂ ಈ ಕಾರಣಕ್ಕೆ ಬಹಳ ಮುಖ್ಯವಾಗುತ್ತದೆ. ದುರಂತ ಮತ್ತು ಅದರ ಕಾರಣವನ್ನು ನಾವು ಅತ್ಯಂತ ಸಲೀಸು ಎಂದು ಭಾವಿಸಬೇಕಾದ ಕಾರಣವಿಲ್ಲ. ಹಾಗೆ ನೋಡುವುದಿದ್ದರೆ ವ್ಯಕ್ತಿಯು ಹಾಸ್ಯಾಸ್ಪದವಾಗುವುದು ಬೇರೆ. ಅಥವಾ ಅವನು ಸ್ವತಃ ಹಾಸ್ಯ ಮಾಡುವುದು ಬೇರೆ. ಆದರೆ ಇದರಲ್ಲಿನ ಕುಸುರಿ ಕೆಲಸವನ್ನು ನಾವು ದುರಂತದಲ್ಲಿ ಕಾಣಲು ಸಾಧ್ಯವಾಗುವುದೂ ಇಲ್ಲ. ಯಾವುದನ್ನು ನಾವು ದುರಂತವೆಂದು ಹೇಳುತ್ತೇವೆಯೋ ಅದರ ಸ್ವರೂಪಕ್ಕೆ ಭಿನ್ನತೆಯು ಇದೆ. ವ್ಯಕ್ತಿಯು ಪ್ರತ್ಯೇಕವಾಗುವುದು ಮತ್ತು ಜನರಿಂದ ಕರುಣೆಗೆ ಗುರಿಯಾಗುವುದು ಬಹಳ ಮುಖ್ಯವಾದ ಅಂಶ. ದುರಂತದಲ್ಲಿ ವ್ಯಕ್ತಿ ಮತ್ತು ಅವನ ಪಲಾಯನವು ನಿರ್ದಿಷ್ಟವಾದ ಕಾರಣಕ್ಕೆ ನಡೆಯುತ್ತದೆ. ಸಮಸ್ಯೆಯಿಂದ ವ್ಯಕ್ತಿಯು ತಪ್ಪಿಸಿಕೊಳ್ಳುತ್ತಾನೆ. ಅದು ಅವನಿಗೆ ನೋವನ್ನೂ ತರುತ್ತದೆ. ಪಲಾಯನ ಮತ್ತು ಸಾವು ಎರಡೂ ದುರಂತಗಳೇ. ನಾಯಕನು ತನ್ನ ಕ್ರಿಯೆಯಿಂದ ಇದನ್ನು ಸೂಚಿಸುತ್ತಾನೆ. ಪಲಾಯನ ಮತ್ತು ಅದರ ವಿಮುಖತೆಯೂ ಒಂದು ಸಮಸ್ಯೆಯೇ ಆಗಿದೆ. ನಾಯಕ ಮತ್ತು ಅವನ ನಡತೆಯ ಮೇಲೆ ನಡೆಯುವ ಹಲ್ಲೆಯು ಸಾಮಾನ್ಯವಾದದ್ದು ಅಲ್ಲ. ಸ್ಥಾನಮಾನದ ಅರಿವು ವ್ಯಕ್ತಿಯನ್ನು ಗ್ರಹಿಸುವುದು ಬೇರೆ ಮಾದರಿಯಲ್ಲಿ. ಅವನು ದುರಂತದಿಂದ ತಪ್ಪಿಸಿಕೊಳ್ಳಲಾರ. ಯಾವುದೇ ಒಂದು ಪ್ರಕರಣವೂ ಅವನ ಜೀವನದಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಅವನ ಬದ್ಧತೆಯೂ ಬೇರೆಯಾಗಿದೆ. ಪ್ರತಿಯೊಂದು ನಾಟಕದಲ್ಲಿಯೂ ಬೇರೆ ಬೇರೆ ರೀತಿಯ ಕಷ್ಟಗಳ ಚಿತ್ರಣವು ಇರುತ್ತದೆ. ಅದುವೇ ಆಯಾ ನಾಟಕಗಳ ಉದ್ದೇಶವನ್ನು ಹೇಳುತ್ತವೆ. ಸ್ವಂತಿಕೆ ಮತ್ತು ಅನ್ಯವೆನ್ನುವುದೂ ಇದರಲ್ಲಿ ಬೇರೆಯಾಗುತ್ತದೆ. ವ್ಯಕ್ತಿಯು ತನ್ನ ತಪ್ಪನ್ನು ಅರಿಯುತ್ತಾನೆ. ಅದರ ಸಮಸ್ಯೆಯಿಂದ ಅವನು ಹೊರಗೆ ಬರಲಾರ. ಆದರೆ ಯಾವುದೇ ದುರಂತ ನಾಟಕಗಳು ಬರೀ ಒಂದು ನೀತಿಯ ಪ್ರಶ್ನೆಯನ್ನು ಮಾತ್ರವೇ ಹೇಳುತ್ತದೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅದರಲ್ಲಿ ಸಮಾಜ ಮತ್ತು ಚರಿತ್ರೆಯ ವಿವರಣೆಯೂ ಇರುತ್ತದೆ ಎಂದು ರೇಮಾಂಡ್ ವಿಲಿಯಂಸ್ ಹೇಳುತ್ತಾನೆ. ದುರಂತ ನಾಟಕಕ್ಕೂ ಅದೃಷ್ಟದ ತರ್ಕಕ್ಕೂ ಒಂದು ಸಂಬಂಧವಿದೆ. ದುರಂತವು ಮಹತ್ವದ ತಿರುವಿನಿಂದ ಶುರುವಾಗುತ್ತದೆ. ದುರಂತ ಮತ್ತು ಅದರ ಸ್ವರೂಪವು ಈ ದೃಷ್ಟಿಯಿಂದ ಅಂದರೆ ಪರಿಣಾಮದ ಕಾರಣದಿಂದ ಅತ್ಯಂತ ಆಳದಲ್ಲಿ ಇರುತ್ತದೆ. ನಾಯಕನಿಗೆ ಸ್ವಂತಿಕೆಯ ಪರಿಜ್ಞಾನವೂ ಇರುತ್ತದೆ. ದುರಂತವು ಹೇಳುವ ಕತೆಗಳು ಜೀವನ ಮತ್ತು ಅದರ ಸಂಕಷ್ಟವನ್ನು ವಿವರಿಸುತ್ತದೆ.

ಆದರೆ ಈ ಎಲ್ಲಾ ಕತೆಗಳಿಗೆ ಚಾರಿತ್ರಿಕ ಆಯಾಮವೂ ಇರುತ್ತದೆ. ದುರಂತ ಮತ್ತು ಅದರ ದೃಷ್ಟಿಕೋನವನ್ನು ಬ್ರೆಕ್ಟ್ ಬದಲಿಸುತ್ತಾನೆ. ಅವನು ದುರಂತದಲ್ಲಿ ಇರಬೇಕಾದ ಏಕತೆಯನ್ನು ಬದಲಿಸುತ್ತಾನೆ. ಅಂತ್ಯದಲ್ಲಿ ಕಾಣಿಸಿಕೊಳ್ಳುವ ದುರಂತವನ್ನು ಅವನು ಸ್ವೀಕರಿಸುವುದೂ ಇಲ್ಲ. ಆದ್ದರಿಂದ ಅವನಲ್ಲಿ ದುರಂತ ಮತ್ತು ಅದರ ತಾತ್ವಿಕತೆಯು ಬದಲಾಗುತ್ತದೆ. ಬ್ರೆಕ್ಟ್ ದುರಂತದ ಹಿನ್ನಲೆಯಲ್ಲಿ ಇರುವ ಅಲೌಕಿಕವನ್ನು ಒಪ್ಪುವುದಿಲ್ಲ. ಅಲೌಕಿಕವಾದ ನಂಬಿಕೆಯನ್ನು ಅವನು ಅಂಗೀಕರಿಸುವುದೂ ಇಲ್ಲ. ಅದೃಷ್ಟ ಮತ್ತು ಅದರ ಕುರಿತಾದ ನಂಬಿಕೆಯು ಅವನಿಗೆ ಅಗತ್ಯವಿಲ್ಲ. ಪ್ರೇಕ್ಷಕರು ಅತ್ಯಂತ ಮುಗ್ಧವಾಗಿ ಒಂದು ಸ್ಥಿತಿಯನ್ನು ಒಪ್ಪಬೇಕು ಎನ್ನುವುದನ್ನು ಬ್ರೆಕ್ಟ್ ಅಂಗೀಕರಿಸುವುದೂ ಇಲ್ಲ. ಪ್ರೇಕ್ಷಕರು ನಾಟಕವನ್ನು ನೋಡುತ್ತಾ ಅದರ ಓಘಕ್ಕೆ ಮರುಳಾಗುವುದು ಬೇಡವೆಂದು ಬ್ರೆಕ್ಟ್ ಭಾವಿಸುತ್ತಾನೆ. ಅವನ ಪ್ರಕಾರ ನಾಟಕವು ನಮ್ಮ ಭಾವವನ್ನು ಬದಲಿಸಬೇಕಾಗುತ್ತದೆ. ಅದು ನಾಟಕೀಯವಾದ ಸನ್ನಿವೇಶದಿಂದ ನಮ್ಮನ್ನು ಮೋಡಿ ಮಾಡಬಾರದು. ಈ ಕಾರಣದಿಂದ ಅವನಲ್ಲಿ ದುರಂತ ಮತ್ತು ಅದರ ಕಲ್ಪನೆಯು ಭಿನ್ನವಾಗುತ್ತದೆ. ದುರಂತ ಮತ್ತು ಅದರ ವಿನ್ಯಾಸವು ಬೇರೆಯಾಗಬೇಕಾಗುತ್ತದೆ ಎಂದು ಅವನು ಹೇಳುತ್ತಾನೆ. ದುರಂತ ಮತ್ತು ಅದರ ಸ್ವಭಾವವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆದರೆ ದುರಂತ ನಾಟಕಗಳಲ್ಲಿ ದುರಂತವೆನ್ನುವುದು ಕೂಡಾ ಅತ್ಯಂತ ಅನಿವಾರ್ಯವಾಗುತ್ತದೆ. ಅದನ್ನು ಹೊರತು ಮಾಡುವುದು ಅಸಾಧ್ಯವೆಂದು ಹೇಳುತ್ತಾನೆ. ಮನುಷ್ಯ ಮತ್ತು ಅವನ ಕಷ್ಟವನ್ನು ಹೊರತುಪಡಿಸಿದರೆ ದುರಂತವೇ ಅಸಾಧ್ಯ. ಆದರೆ ಬ್ರೆಕ್ಟ್ ಕೊಡುವ ಸನ್ನಿವೇಶಗಳು ಬೇರೆಯಾಗಿವೆ. ಅವನು ದೇವರಿಲ್ಲದ ಜಗತ್ತನ್ನು ಹೇಳುತ್ತಾನೆ. ಆದ್ದರಿಂದಲೇ ಅವನಲ್ಲಿ ದುರಂತದ ಕಲ್ಪನೆಯು ಬೇರೆಯಾಗುತ್ತದೆ. ಆದರೆ ವ್ಯಕ್ತಿ ಮತ್ತು ಅವನ ದುರಂತವನ್ನು ಅಲ್ಬರ್ಟ್ ಕಮೂ ಕೂಡಾ ಬೇರೆ ರೀತಿಯಲ್ಲಿ ಹೇಳುತ್ತಾನೆ. ವ್ಯಕ್ತಿಯ ದುರಂತವನ್ನು ಹೇಳುವ ಕ್ರಮವು ಬೇರೆಯಾಗುತ್ತದೆ. ಆಧುನಿಕತೆ ಮತ್ತು ಅದರ ಸಮಸ್ಯೆಯೂ ಕೂಡಾ ವ್ಯಕ್ತಿಯ ದುರಂತವನ್ನು ಸೂಚಿಸುತ್ತಾದೆ. ವ್ಯಕ್ತಿಯು ಅಸಹಾಯಕತೆಯನ್ನು ಹೇಳುತ್ತಾನೆ. ಅವನ ಪ್ರಕಾರ ವ್ಯಕ್ತಿಯೂ ಕೆಲವು ಕಾರಣಗಳಿಂದ ಸಮಸ್ಯೆಯನ್ನು ಎದುರಿಸುತ್ತಾನೆ. ಮತ್ತು ಅದನ್ನು ಅವನು ಗ್ರಹಿಸವುದೂ ಕೂಡಾ ವ್ಯಕ್ತಿ ಕೇಂದ್ರಿತವಾದ ಹಿನ್ನೆಲೆಯಲ್ಲಿ ಮಾತ್ರವೇ. ವ್ಯಕ್ತಿ ಮತ್ತು ಅವನ ದುರಂತವನ್ನು ಅವನು ಹೇಳುತ್ತಾನೆ. ಮತ್ತು ಕಮೂ ಅವನು ತುಂಬಾ ಉದ್ದೇಶಪೂರ್ವಕವಾಗಿ ಇದನ್ನು ನಿರೂಪಿಸುತ್ತಾನೆ. ಅವನಿಗೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಬೇರೆಯಾಗುತ್ತದೆ. ಕಮೂ ರೆಬೆಲ್ ಆದ ವ್ಯಕ್ತಿಯನ್ನು ಚಿತ್ರಿಸುತ್ತಾನೆ. ಅವನಿಗೆ ಅದು ಮುಖ್ಯ. ಜೀವನ ಮತ್ತು ಅದರ ಸಾಧ್ಯತೆಯೂ ಬೇರೆಯಾಗುತ್ತದೆ. ಕತೆಯನ್ನು ಹೇಳುವುದು ಮಾತ್ರವೇ ಅವನ ಗುರಿಯಲ್ಲ. ಅನ್ಯಾಯ ಮತ್ತು ಅದರ ಪ್ರತಿರೋಧವು ಅವನಿಗೆ ಬಹಳ ಮುಖ್ಯವಾಗುತ್ತದೆ. ಅವನಲ್ಲಿ ದುರಂತವು ಬೇರೆಯಾಗುತ್ತದೆ. ಆಧುನಿಕತೆಯು ಹೇಳುವ

ದುರಂತವನ್ನು ಕಮೂ ಹೇಳುವ ಕ್ರಮವೂ ಭಿನ್ನವಾಗಿದೆ. ಜೀವನವನ್ನು ಹೇಗೆ ನೋಡಬೇಕು ಮತ್ತು ಅದರ ಅರ್ಥವು ಯಾವ ಬಗೆಯದು ಎನ್ನುವುದರ ಬಗ್ಗೆ ಅವನಿಗೆ ಕುತೂಹಲವಿದೆ. ದುರಂತವೂ ಒಂದು ದೃಷ್ಟಿಯಿಂದ ಅವನಿಗೆ ಸಂವಾದಿಯೂ ಆಗಿದೆ. ಸತ್ಯ ಮತ್ತು ಅದರ ರೂಪವನ್ನು ಬೇರೆ ರೀತಿಯಲ್ಲಿ ನೋಡುವ ಕ್ರಮವನ್ನು ಮಾಡುತ್ತಾನೆ. ನೀತಿ, ಕಾನೂನು, ಸತ್ಯವನ್ನು ಅವನು ಬೇರೆ ರೀತಿಯಲ್ಲಿ ಗ್ರಹಿಸುವ ಯತ್ನವನ್ನು ಮಾಡುತ್ತಾನೆ. ಸ್ವಾಯತ್ತತೆಯನ್ನು ಒಪ್ಪುತ್ತಾನೆ. ದುರಂತವು ನಡೆಯುವುದು ಮತ್ತು ಅದನ್ನು ಅನುಭವಿಸುವುದೂ ಬೇರೆ ಕಾರಣಕ್ಕೆ. ದುರಂತ ನಾಟಕಗಳಲ್ಲಿ ದೊರೆಯುವ ಶ್ರೇಷ್ಠ ವ್ಯಕ್ತಿಯು ಕಮೂವಿನಲ್ಲಿ ನೋಡಲು ಬರುವುದೂ ಇಲ್ಲ. ಹಾಗೆ ನೋಡುವುದಿದ್ದರೆ ವ್ಯಕ್ತಿಯನ್ನು ನೋಡುವಾಗ ಅವನ ಸ್ಥಾನಮಾನವನ್ನು ಮಾತ್ರವೇ ನೋಡಲು ಬರುವುದೂ ಇಲ್ಲವೆಂದು ನವ್ಯವು ಹೇಳುತ್ತದೆ. ಬರೀ ಸ್ಥಾನ ಮಾನವು ಯಾವುದೋ ಒಂದು ಕಾರಣಕ್ಕೆ ದೊರೆಯುವುದೂ ಇಲ್ಲ. ಇದನ್ನು ಕಮೂ ಹೇಳುವಾಗ ಅದರ ಸಾಧ್ಯತೆಯನ್ನು ಅಲ್ಲಗಳೆಯುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಅವನು ಒಂದು ದೃಷ್ಟಿಕೋನದಲ್ಲಿ ನೋಡುತ್ತಾನೆ. ಅವನು ಅವನ ಪಾಡಿಗೆ ಶ್ರೇಷ್ಠನಾಗುವುದೂ ಇಲ್ಲ. ವ್ಯಕ್ತಿಯು ಬೇರೆ ಬೇರೆ ಕಾರಣಗಳಿಂದ ದುರ್ಬಲನೂ ಆಗುತ್ತಾನೆ. ವ್ಯಕ್ತಿಗೆ ನವ್ಯದ ಪ್ರಕಾರ ಕೆಲವು ಮನುಷ್ಯ ಸಹಜವಾದ ಆಕಾಂಕ್ಷೆಗಳು ಇರುತ್ತವೆ. ಅದನ್ನು ಬರೀ ಸ್ಥಾನಮಾನದಿಂದ ನೋಡಬೇಕಾಗಿಯೂ ಇಲ್ಲ. ಮನುಷ್ಯನು ಅನುಭವಿಸುವ ಯಾತನೆಗೆ ಒಂದು ದೈವವೇ ಕಾರಣವಾಗಬೇಕಾಗಿಯೂ ಇಲ್ಲ. ವ್ಯಕ್ತಿ ಮತ್ತು ಅವನ ಸಾಧ್ಯತೆಯು ಬೇರೆಯಾಗುತ್ತದೆ. ದುರಂತ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಆದರೆ ನವ್ಯವು ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಬೇರೆ. ಅದರಲ್ಲಿ ವ್ಯತ್ಯಾಸವಿದೆ. ವ್ಯಕ್ತಿ ಮತ್ತು ಅವನ ಬಯಕೆಗಳಲ್ಲಿ ವ್ಯತ್ಯಾಸವೂ ಇದೆ. ವ್ಯಕ್ತಿ ಮತ್ತು ಅವನ ಸ್ವಭಾವವನ್ನು ನಾವು ಈ ದೃಷ್ಟಿಯಿಂದ ಕೇವಲ ಒಂದು ಕೋನದಲ್ಲಿ ನೋಡಬೇಕಾದ ಅಗತ್ಯವಿಲ್ಲ. ವ್ಯಕ್ತಿಯನ್ನು ಅವನ ಇತಿಮಿತಿಯೊಳಗೆ ಅರ್ಥ ಮಾಡಿಕೊಳ್ಳಬೇಕು ಎನ್ನುವುದು ಇಲ್ಲಿ ಮುಖ್ಯವಾಗಿದೆ. ವ್ಯಕ್ತಿ ಮತ್ತು ಅವನ ಜೀವನವನ್ನು ಈ ದೃಷ್ಟಿಯಿಂದ ಅವನು ಉದಾತ್ತಗೊಳಿಸುವುದೂ ಇಲ್ಲ. ಇದರಲ್ಲಿ ಮತ್ತೆ ಅವನು ಹೇಳುವ ಸಂಗತಿಗಳು ಬೇರೆಯಾಗಿದೆ. ಅವನ ಪ್ರಕಾರ ವ್ಯವಸ್ಥೆ ಮತ್ತು ಅದರ ಅದರ ಪರಿಣಾಮವು ಮನುಷ್ಯನನ್ನು ವಿವಿಧ ರೀತಿಯಲ್ಲಿ ನಿರೂಪಿಸುತ್ತದೆ. ದುರಂತವು ವ್ಯಕ್ತಿಯನ್ನು ಆವರಿಸಿಕೊಳ್ಳುವುದು ಮತ್ತು ಅದನ್ನು ಬಗೆಹರಿಸಿಕೊಳ್ಳಲು ಯತ್ನಿಸುವುದು ಬಹಳ ಮುಖ್ಯವಾಗಿದೆ. ವ್ಯಕ್ತಿ ಮತ್ತು ಅವನ ಸಂವೇದನೆಗಳನ್ನು ಒಂದು ಕೇಂದ್ರದ ಮೂಲಕವೇ ವಿವರಿಸುವ ಯತ್ನವನ್ನು ಕಮೂ ಮೊದಲಾದವರು ಮಾಡುತ್ತಾರೆ. ಅವರಲ್ಲಿ ಅದೃಷ್ಟದ ಪ್ರಶ್ನೆಯು ಬರುವುದೂ ಇಲ್ಲ. ರೊಮಾಂಟಿಕ್ ಯುಗದಲ್ಲಿ ನಿಸರ್ಗ ಮತ್ತು ಅದರ ಪರಿಣಾಮವು ಬೇರೆಯಾಗುತ್ತದೆ. ನಿಸರ್ಗವನ್ನು ಅದು ದೇವರೆಂದು ನಂಬುತ್ತಾ ಬಂದಿದೆ.

ಅದರಿಂದ ಅದರ ಅಂತಸತ್ವವು ಬೇರೆಯಾಗುತ್ತದೆ. ಆಧುನಿಕ ಯುಗದ ಕಥನ ಕ್ರಮವನ್ನು ಬೆಂಜಮಿನ್ ಹೇಳುವಾಗ ಅದರ ಭಿನ್ನವಾದ ಸಾಧ್ಯತೆಯನ್ನು ಅವನು ಗ್ರಹಿಸುತ್ತಾನೆ. ವಾಸ್ತವತೆಯು ಹೇಳುವ ಕ್ರಮವನ್ನು ಗ್ರಹಿಸಬೇಕಾದ ಅಗತ್ಯವೂ ಇದೆ. ಅದರಲ್ಲಿ ಹೊಸತು ಮತ್ತು ಹಳೆಯದರ ಸಂಘರ್ಷವೂ ಇದೆ. ಆಧುನಿಕೋತ್ತರ ಸಮಾಜ ಮತ್ತು ಅದರ ವ್ಯಾಖ್ಯೆಯನ್ನು ಮಾಡುವಾಗ ಅದು ಅಸ್ಪಷ್ಟವಾಗಿದೆ ಎಂದೂ ನೋಡಬೇಕಾಗುತ್ತದೆ. ಮನುಷ್ಯ ಮತ್ತು ಅವನ ಸ್ಥಾನಮಾನವು ಕುಟುಂಬಕ್ಕೆ ಪಲ್ಲಟವಾಗಿದೆ ಎಂದು ಫ್ರಾಯ್ಡ್ ಹೇಳುತ್ತಾನೆ. ಆಧುನಿಕ ಯುಗವು ವಾಸ್ತವವಾಗಿ ಕೆಲವು ರೀತಿಯ ಕಾರಣಗಳನ್ನು ಒಳಗೊಂಡಿರುತ್ತದೆ. ಅದು ಕಾರಣವನ್ನು ಅತ್ಯಂತ ಮಹತ್ವದ್ದು ಎಂದು ಹೇಳುತ್ತದೆ. ಅದರ ಮೂಲಕವೇ ಅದು ಅನೇಕವನ್ನು ಸಾಧಿಸುವ ಯತ್ನವನ್ನು ಮಾಡುತ್ತದೆ. ಡಾರ್ವಿನ್ನನ ವಿಕಾಸವಾದವು ಮತ್ತೆ ಕೆಲವು ವಿಷಯವನ್ನು ಹೇಳುತ್ತದೆ. ಅದು ಉದ್ದೇಶವನ್ನು ಪ್ರಧಾನವೆಂದು ಗಣಿಸುತ್ತದೆ. ಲೈಂಗಿಕ ಅತೃಪ್ತಿಯು ಕೂಡಾ ವ್ಯಕ್ತಿಯನ್ನು ಬೇರೆ ರೀತಿಯಲ್ಲಿ ನೋಡುತ್ತದೆ. ಅದು ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ಆಧುನಿಕ ನಿರೂಪಣೆಗಳಲ್ಲಿ ವ್ಯಕ್ತಿಯೇ ಪ್ರಧಾನವಾಗಿದ್ದಾನೆ. ಅದರಲ್ಲಿ ದೇವತೆಗಳು ಇಲ್ಲ. ಗ್ರೀಕ್ ದುರಂತದಲ್ಲಿ ಅಸಮತೆಯ ದೃಷ್ಟಿಕೋನವೂ ಇದೆ. ಯಾಕೆಂದರೆ ವ್ಯಕ್ತಿಯನ್ನು ದೇವತೆಗಳು ಆಳುತ್ತಾರೆ. ಆಧುನಿಕತೆಯಲ್ಲಿ ಕಾರಣ ಮತ್ತು ಅದರ ಸ್ವರೂಪವೂ ಬಹಳ ಮುಖ್ಯವಾಗುತ್ತದೆ. ಕಾರಣವೂ ಅತ್ಯಂತ ಮಹತ್ವದ್ದು ಎಂದೂ ಗ್ರಹಿಸಬೇಕಾಗುತ್ತದೆ. ಕಾರಣವು ಕೆಲವನ್ನು ಕೇಂದ್ರೀಕರಿಸುತ್ತದೆ. ಸಾಂಪ್ರದಾಯಿಕ ವಿಮರ್ಶಕರು ಕೆಲವನ್ನು ಮಾತ್ರವೇ ಗ್ರಹಿಸುತ್ತಾರೆ. ಅವರಿಗೆ ಕಾರಣವು ಮುಖ್ಯವಲ್ಲ. ದುರಂತ ಮತ್ತು ಅದರ ವಿಶ್ವಾತ್ಮಕತೆಯನ್ನು ನಾವು ನೋಡಬೇಕಾದ ಅಗತ್ಯವೂ ಬೇರೆಯಿದೆ. ಉನ್ನತವಾದದ್ದು ಮಾತ್ರವೇ ಪತನವನ್ನು ಹೊಂದುತ್ತದೆ. ಅದನ್ನು ಸಾಂಪ್ರದಾಯಿಕರು ಹೇಳುವ ಕ್ರಮವು ಬೇರೆಯಾಗಿದೆ. ಕಾಫ್ಕಾನ ದಿ ಟ್ರಯಲ್ ಕೃತಿಯಲ್ಲಿ ಸಮಸ್ಯೆಯು ಹೆಚ್ಚು ಮುಖ್ಯವಾಗುತ್ತದೆ. ಅದರಲ್ಲಿ ನ್ಯಾಯ ಮತ್ತು ಅದರ ಕಲ್ಪನೆಗಳು ಬೇರೆಯಾಗಿವೆ. ಪ್ರಭುತ್ವ ಮತ್ತು ಅದರ ಸ್ವರೂಪವನ್ನು ಕಾಫ್ಕನು ಹೇಳುವ ಕ್ರಮವು ಬೇರೆಯಾಗುತ್ತದೆ. ಪ್ರಭುತ್ವವೂ ಕೂಡಾ ಕೆಲವು ಸಮಾನತೆಯನ್ನು ಹೇಳುತ್ತದೆ. ಆದರೆ ಅದರ ಸ್ವರೂಪವೂ ಭಿನ್ನವಾಗುತ್ತದೆ. ಅದರೊಂದಿಗೆ ಫುಕೋ ಹೇಳುವ ಅಧಿಕಾರ ಸಿದ್ಧಾಂತವು ಭಿನ್ನವಾದ ನಿಲುವನ್ನು ಹೇಳುತ್ತದೆ. ಮತ್ತೆ ಒಂದು ಅಂಶವನ್ನು ಇಲ್ಲಿ ಗುರುತಿಸಬೇಕಾಗುತ್ತದೆ. ಹತ್ತೊಂಬತ್ತನೆಯ ಶತಮಾನದ ಅನಂತರ ನಿಸರ್ಗ ಮತ್ತು ಅದರ ಚರ್ಚೆಯು ಬೇರೆಯಾಯಿತು. ಕಾನೂನು ಮತ್ತು ಅದರ ವ್ಯಾಪ್ತಿಯೂ ಬೇರೆಯಾಯಿತು. ಕಾಫ್ಕನ ದಿ ಟ್ರಯಲ್ ಕಾದಂಬರಿಯಲ್ಲಿ ಬರುವ ಮುಖ್ಯವಾದ ಮಾತು ಎಂದರೆ ಯಾವುದು ನಮಗೆ ಅಗತ್ಯವಿದೆಯೋ ಅದನ್ನು ಮಾತ್ರವೇ ನಂಬಿದರೆ ಸಾಕು. ನಂಬಿಕೆ ಮತ್ತು ಅದೃಷ್ಟವು ಜೊತೆಗೆ ಹೋಗುತ್ತದೆ ಎಂದು ಇದರ ಅರ್ಥವಲ್ಲ. ನಂಬಿಕೆಯೂ ಕೆಲವೊಮ್ಮೆ ಕುಸಿಯುತ್ತದೆ. ಸಾಮಾಜಿಕ

ಕಾನೂನುಗಳು ಕೆಲವೊಮ್ಮೆ ಅತ್ಯಂತ ಶಕ್ತಿಯುತವೂ ಆಗಿದೆ ಎಂದು ಬೆಂಜಮಿನ್ ಹೇಳುತ್ತಾನೆ. ಕಾನೂನು ಮತ್ತು ಅದರ ಸನ್ನಿವೇಶಗಳು ಭಿನ್ನವಾದ ನಿಲುವನ್ನು ತಳೆಯುತ್ತವೆ. ಅವುಗಳ ನೆಲೆಯೂ ಬೇರೆಯಾಗುತ್ತದೆ. ಆದರೆ ದುರಂತ ನಾಟಕಗಳು ಹೇಳುವ ನ್ಯಾಯದ ಕಲ್ಪನೆಯು ಬೇರೆಯಾಗುತ್ತವೆ. ಅವುಗಳು ಅಲೌಕಿವಾದ ಕಾನೂನನ್ನು ಹೇಳುತ್ತವೆ. ಹದಿನೇಳನೆಯ ಶತಮಾನನದ ಪ್ರಗತಿಪರತೆ ಮತ್ತು ಹತ್ತೊಂಬತ್ತನೆಯ ಶತಮಾನದ ವಿಕಾಸವಾದ ಅನೇಕವನ್ನು ರೂಪಿಸಿವೆ. ಅದರ ಸಾಧ್ಯತೆಗಳು ಬೇರೆಯಾಗಿದ್ದವು. ಆಧುನಿಕಯುಗದ ಸಂವೇದನಾಶೀಲತೆಯ ಚರ್ಚೆಯು ಮತ್ತೆ ಬೇರೆ ವಿಷಯಗಳನ್ನು ಹೇಳಿವೆ. ಆಧುನಿಕಯುಗವು ವಾಸ್ತವವಾಗಿ ದೇಹವನ್ನು ಒಂದು ಕೇಂದ್ರವಾಗಿಸಿದೆ. ದೇಹವನ್ನು ಮಾತ್ರವೇ ಕೇಂದ್ರವಾಗಿರಿಸಿಕೊಂಡ ಚರ್ಚೆಗಳು ಚರಿತ್ರೆಯನ್ನು ಕೇಂದ್ರವಾಗಿರಿಸಿಕೊಂಡಿಲ್ಲ ಎನ್ನುವುದೂ ಇಲ್ಲಿ ಉಲ್ಲೇಖನೀಯ. ನಾಯಕ ಮತ್ತು ಅವನ ಪ್ರತಿರೋಧದ ಕ್ರಮವು ಈಗ ಬೇರೆಯಾಗಿದೆ. ವ್ಯಕ್ತಿ ಮತ್ತು ಅವನ ಚಹರೆಗಳಲ್ಲಿ ವ್ಯತ್ಯಾಸವಾಗುವುದು ಅವನ ಸನ್ನಿವೇಶದಿಂದ ಎನ್ನುವುದೂ ಅವನ ನಿಲುವು. ಸಮೂಹ ಮತ್ತು ವ್ಯಕ್ತಿಗಳ ನಡುವೆ ವ್ಯತ್ಯಾಸವಿದೆ. ವ್ಯಕ್ತಿಯನ್ನು ಒಬ್ಬ ವ್ಯಕ್ತಿ ಮಾತ್ರವಾಗಿ ನೋಡಿದರೆ ಅದರಲ್ಲಿ ವ್ಯತ್ಯಾಸವಾಗುತ್ತದೆ. ವ್ಯಕ್ತಿಯನ್ನು ನೋಡುವುದು ಮತ್ತು ಗ್ರಹಿಸುವುದು ಒಂದು ಕೇವಲ ಕೇಂದ್ರವಾಗಿ ಮಾತ್ರವೇ ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ. ಸಮೂಹ ಮತ್ತು ಅದರ ಅದೃಷ್ಟವನ್ನು ನೋಡುವುದು ಮತ್ತು ಗ್ರಹಿಸುವುದು ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ಅದೃಷ್ಟದ ಪ್ರಶ್ನೆಯು ಬೇರೆಯಾಗುತ್ತದೆ. ವ್ಯಕ್ತಿಯು ಅನೇಕವನ್ನು ಪ್ರತಿನಿಧಿಸುವುದೂ ಇಲ್ಲ. ಧರ್ಮ ಮತ್ತು ಅದರ ಸ್ವರೂಪವನ್ನು ಮೊದಲು ಒಂದು ರೀತಿಯಲ್ಲಿ ನೋಡಬೇಕಾಗುತ್ತದೆ. ಅದರ ಅರ್ಥವೂ ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ದುರಂತವನ್ನು ಒಂದು ದೃಷ್ಟಿಯಲ್ಲಿ ನೋಡಬೇಕಾಗುತ್ತದೆ ಎಂದು ದುರಂತ ನಾಟಕಗಳು ಹೇಳುತ್ತವೆ. ಪ್ರಾಚೀನ ಗ್ರೀಕರ ನಿಲುವನ್ನು ಇದು ಹೇಳುತ್ತದೆ. ಅದರಲ್ಲಿಯೂ ಅದು ಆಗಿನ ಮೀಮಾಂಸೆಯನ್ನು ಮಂಡಿಸುತ್ತದೆ. ಆದರೆ ಕ್ರಿಶ್ಚಿಯನ್ ನಂಬಿಕೆಗಳು ಬೇರೆ ರೀತಿಯಲ್ಲಿ ಇರುತ್ತದೆ. ಅವರು ದೇವರ ಪೂರ್ಣತೆಯನ್ನು ಒಪ್ಪುತ್ತಾರೆ. ಧಾರ್ಮಿಕ ನಂಬಿಕೆಯೆ ಬಹಳ ಮುಖ್ಯವೆಂದು ಅದು ಹೇಳುತ್ತದೆ. ಥಿಯಾಲಜಿಯ ಪ್ರಕಾರ ಕೇಡು ಮತ್ತು ಅದರ ನಾಶವನ್ನು ದೇವರು ಮಾಡುತ್ತಾನೆ. ಕೆಲವು ಧಾರ್ಮಿಕವಾದ ನಂಬಿಕೆಗಳು ಬಹಳ ಮುಖ್ಯ. ಧರ್ಮವೂ ಕೆಲವು ತಪ್ಪೊಪ್ಪಿಗೆಯನ್ನು ಹೇಳುತ್ತದೆ. ತಪ್ಪೊಪ್ಪಿಗೆ ಎನ್ನುವುದು ಹೇರಲಾಗುವ ಮೌಲ್ಯವೇ ಆಗಿದೆ. ಕೆಲವು ನಿಷೇಧಾತ್ಮಕವಾದ ಲಕ್ಷಣಗಳೂ ಇದರಲ್ಲಿ ಇರುತ್ತದೆ. ದೇವರು ಮತ್ತು ನಾಯಕರ ನಡುವೆ ಕೆಲವು ಆಯ್ಕೆಗಳನ್ನು ದುರಂತವು ಇಡುತ್ತದೆ. ಅದರಲ್ಲಿ ವಿಶ್ವಾತ್ಮಕತೆಯು ಇದೆ ಎಂದು ಭಾವಿಸುತ್ತದೆ. ಯಾವುದನ್ನು ಅನ್ಯಾಯ ಮತ್ತು ಯಾವುದು ನ್ಯಾಯಯುತವಾದ್ದು ಎನ್ನುವುದೇ ಇದರಲ್ಲಿ ಬಹಳ ಮುಖ್ಯವಾದ ಸಮಸ್ಯೆ. ದುರಂತ ನಾಟಕಗಳಲ್ಲಿ ಬಿರುಕುಗಳು ಕೂಡಾ ಬಹಳ

ಮುಖ್ಯ. ಅದು ಅಷ್ಟು ಸುಲಭದಲ್ಲಿ ನಡೆಯುವುದೂ ಇಲ್ಲ. ಜೀವನ ಮತ್ತು ಅದರ ಕಷ್ಟಗಳು ಬಹಳ ಮುಖ್ಯವಾಗಿ ಕೆಲವನ್ನು ಹೇಳುತ್ತದೆ. ಜೀವನವೂ ಕಷ್ಟವಾಗುವುದೂ ಕೂಡಾ ನಿರ್ದಿಷ್ಟವಾದ ಕಾರಣಕ್ಕೆ ಎನ್ನುವುದು ಅದರ ವಾದವಾಗಿದೆ. ನೈತಿಕತೆ ಮತ್ತು ಅದರ ಅಪಮೌಲ್ಯವನ್ನು ಅದು ಹೇಳುತ್ತದೆ. ವ್ಯಕ್ತಿಯು ಹಾಳಾಗುವುದು ಅನ್ನುವುದಕ್ಕೆ ಕೆಲವು ಅರ್ಥಗಳೂ ಇವೆ. ಅದು ತನ್ನಿಂದ ತಾನೇ ಆಗಿಲ್ಲ. ಅದಕ್ಕೆ ದೈವ ಮತ್ತು ಅದರ ಮುನಿಸು ಕಾರಣ. ಯಾವುದೇ ಸಣ್ಣ ಸಮಸ್ಯೆಯು ದುರಂತಕ್ಕೆ ಕಾರಣವಾಗುವುದೂ ಇಲ್ಲ. ವ್ಯಕ್ತಿಗೂ ಅವನಿಗೆ ಆಗುವ ಶಿಕ್ಷೆಗೂ ದುರಂತದ ಆಶಯಕ್ಕೂ ಒಂದು ಸಂಬಂಧವಿದೆ. ವ್ಯಕ್ತಿಯು ಅನೇಕವನ್ನು ಅನುಭವಿಸುತ್ತಾನೆ. ಆ ಅನುಭವವು ಮನುಷ್ಯ ಮತ್ತು ಅವನ ಜೀವನದ ಮೌಲ್ಯವನ್ನು ಹೇಳುತ್ತದೆ. ವ್ಯಕ್ತಿ ಮತ್ತು ಅವನ ಜೀವನದ ಕಷ್ಟಗಳು ಕೃತಿಗಳಲ್ಲಿ ವ್ಯಕ್ತವಾಗುತ್ತವೆ. ಯಾರು ವಿಜಯಿ ಆಗುತ್ತಾರೆ ಎನ್ನುವುದೇ ಇದರಲ್ಲಿ ಅತ್ಯಂತ ಮುಖ್ಯವಾದ ಸಂಗತಿಯೂ ಆಗಿದೆ. ವ್ಯಕ್ತಿ ಮತ್ತು ಅವು ಅನುಭವಿಸುವ ಪ್ರಾಯಶ್ಚಿತ್ತಕ್ಕೂ ಸಂಬಂಧವಿದೆ. ಅದಕ್ಕೆ ಒಂದು ನಿರ್ದಿಷ್ಟವಾದ ಸ್ವರೂಪವೂ ಇದೆ. ಯಾವುದೇ ಒಂದು ರಚನೆ ಮತ್ತು ಅದರ ಅರ್ಥವೂ ಈ ಮೂಲಕ ವ್ಯಕ್ತವಾಗುತ್ತದೆ. ಆದರೆ ದುರಂತ ನಾಟಕವು ಹೇಳುವ ಮೌಲ್ಯವು ಬರೀ ಆಧ್ಯಾತ್ಮಿಕವಾಗಿ ಇರಬೇಕೆಂದೇನೂ ಇಲ್ಲ. ದುರಂತವು ಒಂದು ತಾತ್ವಿಕವಾದ ನೆಲೆಯೆಂದು ಮಾತ್ರವೇ ನಾವು ಭಾವಿಸಬೇಕಾಗುತ್ತದೆ. ಮನುಷ್ಯ ಮತ್ತು ದೈವಗಳ ನಡುವಣ ಸಂಬಂಧ ಮತ್ತು ಅವುಗಳ ಸಂಘರ್ಷಕ್ಕೆ ವಿವಿಧ ಆಯಾಮವೂ ಇದೆ. ದೇವರು ಮತ್ತು ವ್ಯಕ್ತಿಯ ಸಮಸ್ಯೆಯನ್ನು ಒಂದೇ ತಕ್ಕಡಿಯಲ್ಲಿ ಇಟ್ಟು ನೋಡಲು ಬರುವುದೂ ಇಲ್ಲ. ಎಲ್ಲಿಯೋ ನ್ಯಾಯ ಮತ್ತು ಅದರ ಪರಿಣಾಮವು ಆಗುತ್ತದೆ ಎನ್ನುವುದೂ ಇಲ್ಲಿ ಮುಖ್ಯವಾದ ಸಂಗತಿಯೂ ಹೌದು. ಒಂದು ಸಣ್ಣ ತಪ್ಪು ಕೂಡಾ ದುರಂತಕ್ಕೆ ಕಾರಣವಾಗಬಹುದು ಎಂದು ಲುಕಾಕ್ಸ್ ಹೇಳುತ್ತಾನೆ. ಪಾಪಕ್ಕೂ ದುರಂತ ನಾಟಕದಲ್ಲಿ ಅರ್ಥವಿದೆ. ರಂಗದ ಮೇಲೆ ನಡೆಯುವ ದುರಂತವನ್ನು ಪ್ರೇಕ್ಷಕರು ನೋಡುತ್ತಾರೆ. ದುರಂತ ನಾಟಕಗಳಲ್ಲಿ ಅಪರಾಧ ಮತ್ತು ಶಿಕ್ಷೆಯ ಪ್ರಮಾಣವು ಯಾವ ಬಗೆಯದು ಎನ್ನುವುದೂ ಮುಖ್ಯವಾದ ಪ್ರಶ್ನೆಯೇ ಆಗಿದೆ. ನಾಯಕನು ಶಿಕ್ಷೆಯನ್ನು ಅನುಭವಿಸುತ್ತಾನೆ. ದುರಂತವು ಕೆಲವು ಸಿದ್ಧಾಂತವನ್ನು ಹೇಳುತ್ತದೆ. ನಾಯಕನು ವಾಸ್ತವವಾಗಿ ವ್ಯಭಿಚಾರಿಯು ಅಲ್ಲ. ಅವನು ಅದನ್ನು ಹೇಳುತ್ತಾ ಇಲ್ಲ. ಅವನಿಗೆ ಅವನದೇ ಆಗಿರುವ ಕೆಲವು ಗುಣಗಳೂ ಇವೆ. ಅವನು ವರ್ಚಸ್ವಿ. ಅವನಿಗೆ ಅದೃಷ್ಟವು ಕೈಕೊಡುತ್ತದೆ. ಅವನತಿಯೂ ಇದರಲ್ಲಿ ಒಂದು ಮುಖ್ಯವಾದ ಆಶಯ. ಕ್ಷಮೆಯೂ ಇದರಲ್ಲಿ ಒಂದು ತತ್ವವಾಗಿದೆ. ಇದರಲ್ಲಿ ಬರುವ ಕರುಣೆಯು ಬಹಳ ದೊಡ್ಡದಾದ ಪ್ರಶ್ನೆಯೇ ಆಗಿದೆ. ಇದರಲ್ಲಿ ಬರುವ ಶಿಕ್ಷೆಯು ಯಾವುದೇ ರೀತಿಯಲ್ಲಿ ಕರುಣೆಯನ್ನು ಹೇಳುವುದಿಲ್ಲ. ಅದು ಹೇಳುವುದು ನೀತಿಯನ್ನು ಮಾತ್ರವೇ ಅಲಲ್ಲ. ಅದರಲ್ಲಿ ಮತ್ತೆ ಬೇರೆ ಪ್ರಶ್ನೆಗಳೂ ಸೇರಿಕೊಳ್ಳುತ್ತವೆ. ವ್ಯಕ್ತಿ ಮತ್ತು ಅವನ

ಸ್ಥಾನಮಾನವು ಬಹಳ ಮುಖ್ಯ. ಹಾಗೆಂದು ಅದರಲ್ಲಿ ನೀತಿಪಾಠ ಮಾತ್ರವೇ ಇದೆ ಎಂದೂ ಭಾವಿಸಬಾರದು. ಅದರಲ್ಲಿ ವ್ಯಕ್ತವಾಗುವ ಧೋರಣೆಯನ್ನು ಕಾರಣಗಳ ಹಿನ್ನೆಲೆಯಲ್ಲಿಯೂ ನೋಡಬಹುದು. ಒಂದು ಪರಿವರ್ತನೆಯ ಸಮಸ್ಯೆಯನ್ನು ಅದು ಹೇಳುತ್ತದೆ. ದುರಂತದ ನಾಟಕಗಳು ಅಗತ್ಯವೂ ಇತ್ತು ಎಂದು ಬೆಂಜಮಿನ್ ಹೇಳುತ್ತಾನೆ. ಅವನ ಪ್ರಕಾರ ಅದು ಚಾರಿತ್ರಿಕ ಅಗತ್ಯವೂ ಹೌದು. ಪರಿವರ್ತನೆ ಮತ್ತು ಅದರ ಮುಖಗಳು ಇದರಲ್ಲಿ ತಾತ್ವಿಕ ಭಿತ್ತಿಯಾಗಿಯೂ ಬರುತ್ತದೆ. ದುರಂತ ನಾಟಕಗಳಲ್ಲಿ ಬರುವ ದೇವತೆಗಳು ಪ್ರಾಚೀನವಾದ ಕೆಲವು ನಂಬಿಕೆಗಳನ್ನು ಹೇಳುತ್ತವೆ. ಆದ್ದರಿಂದ ಆ ದೇವತೆಗಳು ಎತ್ತಿಕೊಳ್ಳುವ ಪ್ರಶ್ನೆಗಳು ಪ್ರಭುತ್ವಕ್ಕೆ ಪೂರಕವಾಗಿತ್ತೇ ಎನ್ನುವುದನ್ನೂ ನೋಡಬೇಕಾಗುತ್ತದೆ. ಅದು ಮತ್ತೊಂದು ಕಡೆಯಿಂದ ಜನಾಂಗದ ಕತೆಯೂ ಆಗುತ್ತದೆ. ಅದು ನಿರ್ದಿಷ್ಟವಾದ ಕತೆಗಳನ್ನು ಹೇಳುತ್ತವೆ. ವಿಷಯವನ್ನು ಪ್ರತಿಪಾದಿಸುತ್ತದೆ. ಅದರಲ್ಲಿ ಬರುವ ಭಾವನೆಗಳು ಒಂದು ನಾಗರಿಕತೆಯ ಮತ್ತು ತಾತ್ವಿಕತೆಯ ಮುಕ್ತಾಯವನ್ನು ಹೇಳುತ್ತವೆ. ಈಡಿಪಸ್ ನಾಟಕದಲ್ಲಿ ಬರುವ ರತಿ ಪ್ರತೀಕವು ವಾಸ್ತವವಾಗಿ ಬಹಳ ಮುಖ್ಯವಾದದು ಎಂದು ಫ್ರಾಯ್ಡ್ ಹೇಳುತ್ತಾನೆ. ಈಡಿಪಸ್ ಎನ್ನುವುದೂ ಅನಾಗರಿಕವಾದ ಒಂದು ಭಾವನೆಯನ್ನು ಹೇಳುತ್ತದೆ ಎಂದು ಫ್ರಾಯ್ಡ್ ಹೇಳುತ್ತಾನೆ. ಲೈಂಗಿಕತೆ ಮತ್ತು ಕುಟುಂಬವನ್ನು ಅದು ಬೇರೆ ರೀತಿಯಲ್ಲಿ ವ್ಯಕ್ತಪಡಿಸುತ್ತದೆ ಎಂದು ಅವನು ಹೇಳುತ್ತಾನೆ. ಅದು ಹೇಳುವ ವಿಧಿ ನಿಷೇಧಗಳು ಸಮಾಜಕ್ಕೆ ಬೇಕಾಗುತ್ತದೆ ಎಂದೂ ನಾವು ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಇವುಗಳು ಸಮಾಜ ಮತ್ತು ಚರಿತ್ರೆಯನ್ನು ಹೇಳುತ್ತವೆ. ಅವುಗಳು ಪ್ರಾಚೀನವಾದ "ಪೊಲೀಸ್ ಸ್ಟೇಟ್" ಎನ್ನುವುದನ್ನು ಹೇಳುತ್ತವೆ. ಒಂದು ನಂಬಿಕೆಯು ಮಾತ್ರವೇ ಇಲ್ಲಿ ಬಹಳ ಮುಖ್ಯವಾಗುತ್ತದೆ. ಮೌಲ್ಯ, ಸಂಬಂಧ, ರಚನೆ, ಭಾವನೆಗಳು, ನೀತಿ ಮತ್ತು ಇತರ ಸಂಗತಿಗಳನ್ನು ಹೇಳುತ್ತವೆ. ಸಂಸ್ಕೃತಿಯನ್ನು ದುರಂತ ನಾಟಕಗಳು ವಿಶಿಷ್ಟವಾಗಿಯೂ ಹೇಳುತ್ತವೆ. ನಿಯಮವೂ ಇದರಲ್ಲಿ ಪ್ರಧಾನವಾಗಿದೆ. ನಂಬಿಕೆಗಳು ಮತ್ತು ಸಂಸ್ಥೆಗಳ ನಡುವಣ ಆಂತರಿಕ ಸಂಬಂಧಗಳನ್ನು ಇವುಗಳು ನಿರೂಪಿಸುತ್ತವೆ. ಭಾವನೆಗಳು ಮತ್ತು ಸಂಸ್ಕೃತಿಯ ವಿವರಗಳು ಇದರಲ್ಲಿ ಅತ್ಯಂತ ಮುಖ್ಯವಾಗಿವೆ. ಒಂದು ದುರಂತದ ತತ್ವಜ್ಞಾನವನ್ನು ಇವುಗಳು ಹೇಳುತ್ತವೆ. ಬಯಕೆಗಳಿಗೂ, ಸಮಾಜಕ್ಕೂ ಇರುವ ಸಂಬಂಧವು ಯಾವ ಬಗೆಯದು ಮತ್ತು ಅದರ ನಿರೂಪಣೆಯು ಹೇಗೆ ಎನ್ನುವುದನ್ನು ಇವುಗಳು ಹೇಳುತ್ತವೆ. ಚೋಮನ ದುಡಿಯಂಥ ಕಾದಂಬರಿಗಳಲ್ಲಿ ಬರುವ ದುರಂತದ ವ್ಯಕ್ತಿತ್ವಕ್ಕೂ ಇದಕ್ಕೂ ವ್ಯತ್ಯಾಸವಿದೆ. ಸಮಾಜ ಮತ್ತು ಬಯಕೆಯನ್ನು ಇವುಗಳು ಹೇಳುತ್ತವೆ. ಕೆಲವು ಬಯಕೆಗಳಿಗೆ ಸೀಮಿತವಾದ ಸ್ವರೂಪವೂ ಇರುತ್ತದೆ. ಶತ್ರುತ್ವಕ್ಕೂ ಸೀಮಾರೇಖೆಗಳು ಇವೆ. ಕಾನೂನು ಮತ್ತು ಅದಕ್ಕೆ ತೋರಿಸುವ ವಿಧೇಯತೆಯೂ ಬಹಳ ಮುಖ್ಯವಾಗುತ್ತದೆ. ಕಾನೂನು ಮತ್ತು ಅದರ ಸ್ವರೂಪವೂ ಭಿನ್ನವಾಗುತ್ತದೆ. ಕೆಲವನ್ನು ಒಪ್ಪಬಹುದು ಮತ್ತು ಕೆಲವನ್ನು ನಿರಾಕರಿಸಬಹುದು. ರಾಜಕಾರಣ ಮತ್ತು ಅದರ ಚಹರೆಗಳನ್ನು ದುರಂತ ನಾಟಕಗಳು

ಹೇಳುತ್ತವೆ ಎನ್ನುವುದೂ ಅತ್ಯಂತ ಸ್ಪಷ್ಟವಾಗಿದೆ. ಅದರ ತತ್ವಜ್ಞಾನಕ್ಕೆ ಬೇರೆ ಆಯಾಮಗಳೂ ಇವೆ. ದುರಂತ ಮತ್ತು ಅದರ ಸಾಮಾಜಿಕ ಭಾವನೆಗಳಿಗೂ ವಿವಿಧ ಆಯಾಮಗಳು ಇವೆ. ಕರುಣೆ ಮತ್ತು ಭಯವೂ ಮನಸ್ಸಿಗೆ ಸಂಬಂಧಪಟ್ಟ ಕ್ರಿಯೆಗಳೂ ಹೌದು. ಹಾಗೆ ನೋಡುವುದಿದ್ದರೆ ಕರುಣೆ ಮತ್ತು ಕೇಡುಗಳ ಭಿನ್ನವಾದ ನೆಲೆಗಳನ್ನು ದುರಂತ ನಾಟಕಗಳು ಹೇಳುತ್ತವೆ. ಅದರ ಕರುಣೆಯು ಭಯವನ್ನು ಕೂಡಾ ಸೂಚಿಸುತ್ತವೆ. ಅರಿಸ್ಟಾಟಲ್‌ನ ಪ್ರಕಾರ ದುರಂತದ ಅನುಭವ ಮತ್ತು ಕರುಣೆಯು ದುರಂತದ ತಾತ್ವಿಕ ಅಡಿಗಟ್ಟಾಗಿದೆ. ನೋವು ಮತ್ತು ಸುಖ ಎರಡೂ ಇದರಲ್ಲಿ ದ್ವಂದ್ವಾತ್ಮಕವಾಗುತ್ತದೆ. ಅಮರ್ತ್ಯಸೇನ್ ಹೇಳುವಂತೆ ಕರುಣೆಯೂ ಕೂಡಾ ಒಂದು ಅಹಮಿಕೆಯನ್ನು ವಿವರಿಸುತ್ತದೆ. ಅದು ಭಾವನಾತ್ಮಕವಾಗುತ್ತದೆ. ಅದರ ಅನನ್ಯತೆಯೂ ಭಿನ್ನವಾಗಿದೆ. ನೋವು ಮತ್ತು ಸುಖವು ದುರಂತದಲ್ಲಿ ಸಾಮಾನ್ಯವಾಗಿದೆ. ಕರುಣೆಯೂ ಒಂದು ಭಾವನೆ ಹಾಗೂ ಅದರ ಅರ್ಥವೂ ಬೇರೆಯಾಗುತ್ತದೆ. ದುರಂತ ನಾಟಕಗಳಲ್ಲಿ ನೀತಿ ಮತ್ತು ಕರುಣೆಯು ಜೊತೆಗೆ ಹೋಗುತ್ತವೆ. ಕರುಣೆಯನ್ನು ಭಾವ ಎಂದೂ ಹೇಳಬಹುದು. ಅದು ಮಾನವೀಯತೆಯನ್ನು ನಿರೂಪಿಸುತ್ತದೆ. ನೀತಿಯ ಶ್ರೇಷ್ಠತೆಯೇ ಬಹಳ ಮುಖ್ಯವಾದ ಭಾವನೆಯೂ ಆಗಿದೆ. ಖಾಸಗಿ ಭಾವನೆ ಅದರ ಸ್ವರೂಪವನ್ನೂ ರಾಜಕಾರಣವನ್ನು ದುರಂತವು ಹೇಳುತ್ತವೆ. ಆದ್ದರಿಂದಲೇ ಅದರಲ್ಲಿ ಸಂಕೀರ್ಣತೆಯು ಇದೆ. ಗಂಭೀರವಾದ ನಾಟಕಗಳು ಗೈರು ಹಾಜರಿಯಾದಾಗ ಅದರ ಸ್ವರೂಪದಲ್ಲಿ ಬದಲಾವಣೆಯು ಆಗುತ್ತದೆ. ಈ ಅರ್ಥದಲ್ಲಿ ಗಂಭೀರ ನಾಟಕಗಳ ಬದಲಿಗೆ ಕಾದಂಬರಿಗಳು ಬಂದವು. ನಿರೂಪಣೆಗಳು ಬದಲಾದವು. ಆದರೆ ಅದರಲ್ಲಿ ಬಂದ ಸತ್ವಗಳು ಬೇರೆ ಬಗೆಯವೂ ಆಗಿವೆ. ಕಾದಂಬರಿಯಲ್ಲಿ ಬರುವ ದುರಂತ ಮತ್ತು ಅದರ ಸ್ವರೂಪವು ಒಂದು ಬಗೆಯದು. ಅದರಲ್ಲಿ ಬರುವ ಸಂಘರ್ಷವನ್ನು ಮತ್ತೆ ಬೇರೆ ರೀತಿಯಲ್ಲಿ ನೋಡಲು ಸಾಧ್ಯವಾಗುತ್ತದೆ. ಅಶ್ವತ್ಥಾಮನ್ ಮತ್ತು ಗ್ರಾಮಾಯಣವನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಗ್ರಾಮಾಯಣ ಮತ್ತು ಅದರ ದುರಂತಕ್ಕೆ ಇಡೀ ಪಾದಳ್ಳಿಯೇ ಸಾಕ್ಷಿಯು ಆಗುತ್ತದೆ. ಅಶ್ವತ್ಥಾಮನ್ ನಾಟಕದಲ್ಲಿ ಬರುವ ವಿವರಣೆಗಳು ಬೇರೆಯಾಗಿವೆ. ಅದರಲ್ಲಿ ತಾರತಮ್ಯವೂ ಇದೆ. ಅದರಲ್ಲಿ ಸ್ಥಳಾಂತರ ಮತ್ತು ಅದರ ಸಮಸ್ಯೆಯು ಇದೆ. ಅದು ಶುದ್ಧವಾಗಿ ಅಯಾಸ್ ನಾಟಕವನ್ನು ಕನ್ನಡದ ಭಾಷೆಗೆ ತಂದಂತೆ ಆಗಿದೆ. ಸ್ಥಳ ಮತ್ತು ಕಾಲದ ಅಂತರವು ಇದರಲ್ಲಿ ಎದ್ದು ಕಾಣಿಸುತ್ತದೆ. ಇದರಲ್ಲಿ ಕಾಣುವ ಸಂಗತಿಗಳು ಇಲ್ಲಿಯವು ಅಲ್ಲವೆಂದು ಅನೇಕ ವಿಮರ್ಶಕರು ಹೇಳಿದ್ದು ಮಾತ್ರವೇ ಅಲ್ಲದೆ ಅದನ್ನು ಪುರಾಣದ ಅಶ್ವತ್ಥಾಮ ಹಾಗೆ ಇದ್ದೇ ಇಲ್ಲ ಎಂದು ಹೇಳಿದವರೂ ಇದ್ದಾರೆ. ಇದರಲ್ಲಿ ಅಲ್ಲಿಯ ಭಾವನೆಗೂ ನಮ್ಮ ಭಾವನೆಗೂ ಸಂಬಂಧವನ್ನು ಕಲ್ಪಿಸಿದರು. ಕಾರಂತರ ಕಾದಂಬರಿಗಳಲ್ಲಿ ಅತ್ಯಂತ ಹೆಚ್ಚು ಚರ್ಚೆಯಾದ ಮರಳಿಮಣ್ಣಿಗೆ ಕಾದಂಬರಿಯಲ್ಲಿ ಒಂದು ವಿವರವು ಬರುತ್ತದೆ. ಲಚ್ಚನದು. ಅವನು ಬೇರೆ ಬೇರೆ ಚಟಗಳಿಗೆ ಸಿಕ್ಕಿದವನು. ಅದರಿಂದಲೇ

ಅವನಿಗೆ ದುರಂತವು ಆಗುತ್ತದೆ. ಇದನ್ನು ಕಾರಂತರು ಹೇಳುವಾಗ ಲಚ್ಚನ ಜೀವನ ಮತ್ತು ಅದರ ಕ್ರಮದಿಂದಲೇ ಅವನತಿಯನ್ನು ಹೊಂದುತ್ತಾನೆ ಎಂದು ಭಾವಿಸುತ್ತಾರೆ. ಇದರ ಹಿಂದೆ ಇರುವ ಚಾರಿತ್ರಿಕ ಸನ್ನಿವೇಶಗಳು ಬೇರೆಯಾಗಿವೆ. ಅಶ್ವತ್ಥಾಮನ್, ಗದಾಯುದ್ಧ, ಚೋಮನದುಡಿ ಕಾದಂಬರಿಗಳ ಹಿಂದೆ ಬೇರೆ ಬೇರೆ ದುರಂತಗಳು ಇವೆ. ಬೇರೆ ಬೇರೆ ಸನ್ನಿವೇಶಗಳೂ ಇವೆ. ಅವುಗಳ ಸಂಕೇತಗಳು ಬೇರೆ ಬೇರೆಯಾಗಿವೆ. ಈ ಬರಹಗಳ ಲೋಕದೃಷ್ಟಿಯು ಬೇರೆ ಬೇರೆಯಾಗಿವೆ. ಕಾರಂತರ ಕಾದಂಬರಿಗಳಲ್ಲಿ ಒಂದು ನಿಶ್ಚಿತವಾದ ದೃಷ್ಟಿಕೋನವೂ ಇದೆ. ಅವುಗಳ ಸಂಕೇತವೂ ಅತ್ಯಂತ ಭಿನ್ನ. ಹಾಗೆ ನೋಡಿದರೆ ವ್ಯಕ್ತಿಗಳು ನಿರ್ದಿಷ್ಟವಾದ ಕಾರಣಕ್ಕೆ ಬಲಿಯಾಗುತ್ತಾರೆ. ವಾಸ್ತವವಾಗಿ ಅವರು ಪರಿಸರ ಮತ್ತು ಅದರ ಪರಿಣಾಮವನ್ನು ಬೇರೆ ಬೇರೆ ರೀತಿಯಲ್ಲಿ ಎದುರಿಸುತ್ತಾರೆ. ಅದರಲ್ಲಿ ವ್ಯಕ್ತಿ ಮತ್ತು ಅವನ ದುರಂತಕ್ಕೆ ಸಮಾಜ ಮತ್ತು ಅದರ ನೀತಿಗಳೂ ಕಾರಣವಾಗಿವೆ. ಒಂದು ನಿರ್ದಿಷ್ಟವಾದ ಕಾರಣವೇ ಅದರಲ್ಲಿ ವ್ಯಕ್ತಿ ಮತ್ತು ದುರಂತಕ್ಕೆ ಕಾರಣವಾಗುತ್ತದೆ. ಆದರೆ ಅವುಗಳ ತಾತ್ವಿಕ ದೃಷ್ಟಿಕೋನವು ಆಧುನಿಕ ಯುಗದ್ದೂ ಆಗಿದೆ. ಆಧುನಿಕಯುಗದ ದುರಂತವು ರನ್ನ ಹೇಳಿದ ಗದಾಯುದ್ಧದ ಮಾದರಿಯದು ಅಲ್ಲವೆನ್ನುವುದನ್ನು ನೆನಪು ಮಾಡುವುದು ಅಗತ್ಯವಾಗಿದೆ. ವಾಸ್ತವತಾವಾದವು ಹೇಳುವ ದುರಂತಗಳು ಒಂದು ಸಮಾಜದ ಸ್ಥಿತಿಗತಿಗಳನ್ನು ಹೇಳುತ್ತವೆ. ಅದರಲ್ಲಿ ಸಮಾಜ ಮತ್ತು ಸಂಸ್ಕೃತಿಯ ಪ್ರಶ್ನೆಗಳು ಮಾತ್ರವೇ ಇಲ್ಲ. ಅದರಲ್ಲಿ ಆರ್ಥಿಕತೆ ಮತ್ತು ಚರಿತ್ರೆಯ ಪ್ರಶ್ನೆಗಳೂ ಸೇರಿಕೊಂಡಿವೆ. ಚೋಮನ ದುಡಿ ಕಾದಂಬರಿಯು ಇದಕ್ಕೆ ನಿರ್ದಶನವಾಗಿದೆ. ವ್ಯಕ್ತಿಯಾಗಿ ಚೋಮ ಮತ್ತು ಅವನ ದುರಂತಗಳು ಮಾತ್ರವೇ ಇಲ್ಲ. ಅದರ ಬದಲು ಅದು ಸಮಾಜ ಮತ್ತು ಅದರ ನೀತಿಯಲ್ಲಿನ ದೋಷವೇ ದುರಂತಕ್ಕೆ ಕಾರಣವಾಗಿದೆ. ಅವನ ಜಾತಿಯ ಪ್ರಶ್ನೆಗಳು ಇವೆ. ಹೊಲೆಯರು ಭೂಮಿಯನ್ನು ಹೊಂದುವುದು ಮತ್ತು ಅದನ್ನು ಉಳುವುದು ತಪ್ಪು ಎನ್ನುವ ಸಮಾಜದ ಧೋರಣೆಯು ಅದರಲ್ಲಿ ಇದೆ. ಈ ದೃಷ್ಟಿಯಿಂದ ಕನ್ನಡದಲ್ಲಿ ಬಂದ ಅನೇಕ ಕಾದಂಬರಿಗಳಲ್ಲಿ ಭೂಮಿ ಮತ್ತು ಅದರ ಒಡೆತನದ ಪ್ರಶ್ನೆಯು ಅತ್ಯಂತ ಸಂಕೀರ್ಣವಾಗಿದೆ. ಹಾಗೂ ಅದರಲ್ಲಿ ಜಾತಿ ಮತ್ತು ಅದರ ತಾರತಮ್ಯದ ಪ್ರಶ್ನೆಗಳು ಬಂದಿವೆ. ಆಧುನಿಕತೆಯು ಬದಲಾಗಿದೆ. ಅದರಲ್ಲಿ ಬರುವ ಸಂಪ್ರದಾಯಗಳು ಬದಲಾಗಿವೆ. ಜೀವನವನ್ನು ನೋಡುವ ಮತ್ತು ಗ್ರಹಿಸುವ ಕ್ರಮದಲ್ಲಿ ವ್ಯತ್ಯಾಸಗಳು ಆಗಿವೆ. ಜೀವನವನ್ನು ಹೇಗೆ ನೋಡಬೇಕು ಮತ್ತು ಅದರ ಮೌಲ್ಯಗಳು ಯಾವ ರೀತಿಯದು ಎನ್ನುವುದೇ ಇಲ್ಲಿ ಮುಖ್ಯವಾದ ಪ್ರಶ್ನೆಯು ಆಗುತ್ತದೆ. ವಾಸ್ತವವಾಗಿ ಇಲ್ಲಿ ಬೇರೆ ಪ್ರಶ್ನೆಗಳಿವೆ. ಜೀವನವನ್ನು ಮೌಲ್ಯಯುತವಾಗಿಯೇ ಗ್ರಹಿಸುವುದು ಅತ್ಯಂತ ಅಗತ್ಯವೆಂದು ಕಾರಂತರ ಕಾದಂಬರಿಗಳು ಹೇಳುತ್ತವೆ. ಈ ಮೌಲ್ಯಗಳು ಬದಲಾಗುತ್ತವೆ. ಅದರ ಹಿಂದೆ ಇರುವ ದೃಷ್ಟಿಕೋನವೂ ಬದಲಾಗುತ್ತದೆ. ಜೀವನದ ಸಾರ್ಥಕತೆಯು ಇರುವುದೇ ಅದರ ಸಾರ್ಥಕದಲ್ಲಿ ಎನ್ನುವುದು ಕಾರಂತರ

ನಿಲುವು. ಒಂದು ವೇಳೆ ನಾವು ಮೌಲ್ಯವನ್ನು ಕಳೆದುಕೊಂಡರೆ ಅದಕ್ಕೆ ಯಾವುದೇ ಅರ್ಥವು ಇಲ್ಲವೆನ್ನುವುದನ್ನು ಕಾರಂತರು ಹೇಳುತ್ತಾರೆ. ಆದರೆ ಈ ಮೌಲ್ಯಗಳ ಪತನವು ವ್ಯಕ್ತಿ ಮತ್ತು ಅವನ ದುರಂತಕ್ಕೆ ಕಾರಣವಾಗುತ್ತದೆ. ಕಾರಂತರು ಇದನ್ನು ಹೇಳಿದ್ದು ದಿನನಿತ್ಯದ ಭಾಷೆಯ ಮೂಲಕವೇ ಎನ್ನುವುದು ಇಲ್ಲಿ ಗಮನಾರ್ಹವಾದ ಸಂಗತಿ. ಹಾಗೆ ನೋಡುವುದಿದ್ದರೆ ರನ್ನನ ಕಾವ್ಯದಲ್ಲಿ ಬರುವ ದುರಂತದ ಪ್ರಶ್ನೆಯು ವ್ಯಕ್ತವಾಗುವುದು ಅದರ ಗಂಭೀರವಾದ ಮಾತುಗಳಲ್ಲಿ. ಅದನ್ನು ರನ್ನನು ಹೇಳಲು ಬಳಸುವುದು ಶಿಷ್ಟವಾದ ಒಂದು ಭಾಷಿಕವಾದ ಕ್ರಮವನ್ನು. ಇಲ್ಲಿ ಮತ್ತೆ ಒಂದು ಅಂಶವನ್ನು ಹೇಳುವುದೂ ಸೂಕ್ತವಾಗಿದೆ. ರನ್ನ ಕೌರವನು ದುರಂತವನ್ನು ಅನುಭವಿಸುವುದು ರಾಜ್ಯದ ಕಾರಣದಿಂದ. ಅದನ್ನು ಹೇಳಲು ರನ್ನ ಸಂಸ್ಕೃತದ ಮಾತುಗಳನ್ನು ಬಳಸುತ್ತಾನೆ. ಅವು ಆಡುನುಡಿಗಳು ಅಲ್ಲ. ಭಾಷೆಯಲ್ಲಿ ಸಂಸ್ಕೃತವನ್ನು ತಂದದ್ದರಿಂದ ಅದರಲ್ಲಿ ಭಾಷಿಕವಾಪ ಒಂದು ಶಿಷ್ಟತೆಯು ಎದ್ದು ಕಾಣುತ್ತದೆ. ಆಧುನಿಕ ದುರಂತಗಳ ಕಲ್ಪನೆಯು ಈ ದೃಷ್ಟಿಯಿಂದ ಬೇರೆಯಾಗಿವೆ. ಸಾಮಾನ್ಯನಾದ ವ್ಯಕ್ತಿಯು ಹೇಗೆ ದುರಂತವನ್ನು ಅನುಭವಿಸುತ್ತಾನೆ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಅದಕ್ಕೆ ತಕ್ಕ ಮಾತುಗಳು ಬರುತ್ತವೆ. ಹಾಗೆ ನೋಡುವುದಿದ್ದರೆ ಆಧುನಿಕ ಬರಹಗಳು ಹೇಳುವ ದುರಂತಗಳಿಗೆ ಬೇರೆ ಬೇರೆ ಆಯಾಮವೂ ಇರುತ್ತದೆ. ಕಾದಂಬರಿಗಳಲ್ಲಿ ಮತ್ತು ಕತೆಗಳಲ್ಲಿ ಬೇರೆ ಬೇರೆ ದುರಂತದ ಕಲ್ಪನೆಗಳು ಇರುತ್ತವೆ. ಅವುಗಳು ಅಂತಿಮವಾಗಿ ಸಮಾಜ ಮತ್ತು ಅದರ ಪರಿಣಾಮವನ್ನು ಹೇಳುತ್ತವೆ. ಸಮಾಜ ಮತ್ತು ಅವುಗಳ ನಡುವೆ ಇರುವ ಬೇರೆ ಬೇರೆ ಭಾವನೆಗಳನ್ನು ಅವುಗಳು ಹೇಳುತ್ತವೆ. ಚೋಮ ಮತ್ತು ಅವನ ದುರಂತವು ಒಂದು ಬಗೆಯದಾದರೆ ತಿರುಮಲಾಂಬರ ಕಾದಂಬರಿಯಲ್ಲಿ ಬರುವ ನಭಾಳ ದುರಂತವು ಮತ್ತೊಂದು ಬಗೆಯದು. ಅವುಗಳು ಒಂದು ಅರ್ಥದಲ್ಲಿ ಸಮಾಜ ಮತ್ತು ಅವುಗಳ ವರ್ಗಗಳು, ಮತ್ತು ಸಮಾಜದಲ್ಲಿ ಇರುವ ತಾರತಮ್ಯವನ್ನು ಹೇಳುತ್ತವೆ. ಆಧುನಿಕ ಕಾದಂಬರಿಗಳು ಹೇಗೆ ದುರಂತವನ್ನು ಹೇಳುತ್ತವೆ ಮತ್ತು ಅದರ ಪರಿಣಾಮಗಳು ಯಾವ ಬಗೆಯವು ಎನ್ನುವುದನ್ನು ಇವುಗಳು ಹೇಳುತ್ತವೆ. ಆಧುನಿಕ ಕತೆಗಳು ದುರಂತವನ್ನು ಹೇಳುವ ಕ್ರಮಗಳು ಬೇರೆಯಾಗಿವೆ ಎನ್ನುವುದಕ್ಕೆ ಕನ್ನಡದಲ್ಲಿ ಹೇರಳವಾದ ಸಾಕ್ಷಿಗಳು ಇವೆ. ಆಧುನಿಕ ಕಾದಂಬರಿಗಳು ವಾಸ್ತವವಾಗಿ ಸಮಾಜ ಮತ್ತು ಅವುಗಳ ಸಂಬಂಧಗಳ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಹೇಳುತ್ತವೆ. ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳು ಬರುತ್ತವೆ. ಕೆಲವು ದುರಂತಗಳು ಸಮಾಜ ಮತ್ತು ಅದರ ಸ್ವರೂಪದಲ್ಲಿ ಇದೆಯಾದರೆ ಮತ್ತೆ ಕೆಲವು ಕುಟುಂಬವನ್ನು ಹೇಳುತ್ತವೆ. ಮತ್ತೆ ಕೆಲವು ಗಂಡು ಮತ್ತು ಹೆಣ್ಣಿನ ಸಂಬಂಧವನ್ನು ಹೇಳುತ್ತವೆ. ಒಂದು ಅರ್ಥದಲ್ಲಿ ದುರಂತ ನಾಟಕಗಳನ್ನು ಆಧುನಿಕ ಕಾದಂಬರಿಗಳು ಅರಗಿಸಿಕೊಂಡಿವೆ. ಕೆಲವು ಕಾದಂಬರಿಗಳಲ್ಲಿ ಬರುವ ದುರಂತವು ವ್ಯಕ್ತಿಯನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿಯಾಗಿ ಅವನ ಸೋಲು ಮತ್ತು ಗೆಲುವನ್ನು ಮಾತ್ರವೇ ಅವುಗಳು ಪ್ರತಿನಿಧಿಸುತ್ತವೆ. ವ್ಯಕ್ತಿಯನ್ನು ಆಧುನಿಕ ಕಾದಂಬರಿಗಳು ನೋಡಿದ ಕ್ರಮವು ಬೇರೆಯಾದ್ದರಿಂದ ಅದರ ಸ್ವರೂಪವೂ

ಬೇರೆಯಾಯಿತು. ಸ್ವಂತಿಕೆ ಮತ್ತು ಅದರ ಪತನವನ್ನು ಆಧುನಿಕ ಕಾದಂಬರಿಗಳು ಹೇಳುತ್ತವೆ. ವ್ಯಕ್ತಿಯ ಸ್ವಂತ ದುಃಖವನ್ನು ಅವುಗಳು ನಿರೂಪಿಸುತ್ತವೆ. ಸ್ವ ಮರುಕವೆನ್ನುವುದು ಕೂಡಾ ಒಂದು ಭಾವನೆಯೇ ಆಗಿದೆ. ಸ್ವ ಮರುಕವು ಒಂದು ರೀತಿಯಿಂದ ಜೀವನವನ್ನು ಮಾತ್ರವೇ ಹೇಳುತ್ತವೆ. ಬುದ್ಧಿಜೀವಿಗಳು ಮತ್ತು ಅವರ ದುರಂತವು ಒಂದು ಬಗೆಯದು. ಸಾಮಾನ್ಯರ ದುರಂತವು ಮತ್ತೊಂದು ಬಗೆಯದು. ಸಾಮಾನ್ಯರು ಮತ್ತು ಅವರ ದುರಂತವು ಬೇರೆ ಬೇರೆ ಕಾರಣಗಳಿಂದಲೂ ಬರುತ್ತದೆ. 'ಚಂದ್ರಗಿರಿಯ ತೀರದಲ್ಲಿ' ಬರುವ ದುರಂತವು ಧರ್ಮ ಮತ್ತು ಅದರ ನೀತಿಯನ್ನು ಹೇಳುತ್ತದೆ. ಹಾಗೆ ನೋಡುವುದಿದ್ದರೆ ವಾಸ್ತವವಾದದಲ್ಲಿ ಬರುವ ದುರಂತವನ್ನು ಪ್ರದೇಶದ ಹಿನ್ನೆಲೆಯಿಂದಲೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲಿ ಸ್ವಾತಂತ್ರ್ಯ ಮತ್ತು ಅದರ ಪರಿಣಾಮವೂ ದುರಂತವನ್ನು ಬೇರೆ ಬೇರೆ ರೀತಿಯಲ್ಲಿ ನಿರೂಪಿಸಲು ಅನುವು ಮಾಡಿಕೊಡುತ್ತದೆ. ಸ್ವಾತಂತ್ರ್ಯ ಮತ್ತು ಅದರ ರೀತಿಗಳು ನಮಗೆ ಬೇರೆ ಸಂಗತಿಗಳನ್ನು ಹೇಳುತ್ತವೆ. ಯಾವುದು ಹೆಚ್ಚು ಅರ್ಥಪೂರ್ಣ ಮತ್ತು ಯಾವುದು ಅರ್ಥಹೀನ ಎನ್ನುವುದೂ ಇಲ್ಲಿ ಗಮನಾರ್ಹ. ವ್ಯಕ್ತಿ ಮತ್ತು ಅವನ ನಿಲುವು ಹಾಗೂ ಅವನ ಜೀವನವು ಒಂದು ಬಗೆಯಲ್ಲಿ ಇರುತ್ತದೆ. ವ್ಯಕ್ತಿ ಮತ್ತು ಜೀವನಕ್ರಮದಲ್ಲಿ ಉಂಟಾಗುವ ವ್ಯತ್ಯಾಸಗಳು ಬೇರೆ ಬೇರೆ ರೀತಿಯಲ್ಲಿಯೂ ಇರುತ್ತದೆ. ಜೀವನದಲ್ಲಿ ಬರುವ ಅನೇಕ ಸಂಗತಿಗಳನ್ನು ಕಾದಂಬರಿಗಳು ಹೇಳುತ್ತವೆ. ಅದರಲ್ಲಿ ಬರುವ ದುರಂತಕ್ಕೂ, ಸಮಾಜಕ್ಕೂ ಒಂದು ಸಂಬಂಧವಿದೆ. ಕಾದಂಬರಿಗಳನ್ನು ಈ ದೃಷ್ಟಿಯಿಂದ ಸಮಾಜ ಮತ್ತು ಅದರ ಸ್ವರೂಪದೊಂದಿಗೆ ವಿವರಿಸಲು ಸಾಧ್ಯ ಎನ್ನುವುದನ್ನು ಲೂಶಿಯನ್ ಗೋಲ್ಡ್‌ಮನ್ ಹೇಳುತ್ತಾನೆ. ದುರಂತವು ಒಂದು ಬಗೆಯಲ್ಲಿ ಜೀವನದ ಕೆಲವು ಕ್ರಮಗಳನ್ನು ಹೇಳುತ್ತವೆ. ಕಾದಂಬರಿಯ ಸಮಗ್ರತೆಯು ಕೂಡಾ ಇದನ್ನು ಪ್ರತಿಪಾದಿಸುತ್ತವೆ. ದುರಂತವು ಸಮಾಜದಲ್ಲಿನ ತಿರಸ್ಕಾರವನ್ನು ಹೇಳುತ್ತದೆ. ಹೌದು ದುರಂತವೂ ಒಂದು ಬಗೆಯಲ್ಲಿ ಜೀವನದ ಒಂದು ಸಂಗತಿಯು ಅಂದರೆ ಎಲ್ಲವೂ ದುರಂತವೇ ಆಗಿರಬೇಕಾದ ಅಗತ್ಯವಿಲ್ಲ. ಅದರಲ್ಲಿ ಒಂದು ಅಂಶವು ಮಾತ್ರವೇ ದುರಂತವು ಆಗುತ್ತದೆ. ಹಾಗೆ ನೋಡುವುದಿದ್ದರೆ ದುರಂತವೆಂದರೆ ಅದು ಸಂಸ್ಕೃತಿ ಮತ್ತು ಅದರ ಭಾಗವೇ ಆಗುತ್ತದೆ. ಯಾವುದನ್ನು ದುರಂತವೆಂದು ಹೇಳುತ್ತೇವೆಯೋ ಅದು ನಿರ್ಣಯವಾಗುವುದು ಸಮಾಜ ಮತ್ತು ಸಂಸ್ಕೃತಿಯಲ್ಲಿ ಎನ್ನುವುದನ್ನು ಮರೆಯಬಾರದು. ಅದು ನಿರೂಪಣೆಯಲ್ಲಿಯೂ ಕಾಣಿಸಿಕೊಳ್ಳುತ್ತದೆ. ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಭಿನ್ನವಾಗಿ ನೋಡಬೇಕಾಗುತ್ತದೆ. ದುರಂತವನ್ನು ನೋಡುವುದು ಮತ್ತು ಅದರ ನಿಲುವನ್ನು ನಾವು ಗ್ರಹಿಸುವುದು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ದುರಂತ ಮತ್ತು ಅದರ ಅರಿವಿನಲ್ಲಿ ಬೇರೆ ಅಂಶಗಳೂ ಸೇರಿಕೊಳ್ಳುವ ಸಾಧ್ಯತೆಯು ಇರುತ್ತದೆ. 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಒಂದು ದುರಂತವಿದೆ. ಅದರ ಚಿತ್ರಣವು ಊರು ಬೆಂಕಿಯ ಮೂಲಕವೇ

ವ್ಯಕ್ತವಾಗುತ್ತದೆ. ಆದರೆ ಇಲ್ಲಿ ಅದು ಜಯಂತಿ ಮತ್ತು ರಫಿಯವರ ಪ್ರೇಮವನ್ನು ಹೇಳುತ್ತಿಲ್ಲ. ಅವರು ದುರಂತವನ್ನು ನೋಡುತ್ತಾರೆ. ಅದರಲ್ಲಿ ಅವರ ಪ್ರೇಮವು ಗೆಲ್ಲುತ್ತದೆ. ಆದರೆ ಅದನ್ನು ಅವರು ನೋಡುವುದು ಎತ್ತರದಿಂದ. ದುರಂತವು ಯಾವ ರೀತಿಯಲ್ಲಿಯೂ ಕಾಣಿಸಿಕೊಳ್ಳಬಹುದು ಎನ್ನುವುದಕ್ಕೆ ಇದು ಸಾಕ್ಷಿಯು ಹೌದು. ಕಾರಂತರ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ದುರಂತದ ಮಾದರಿಯು ಬೇರೆ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವುದೂ ಇಲ್ಲ. ಒಡಲಾಳದಲ್ಲಿ ಒಂದು ದುರಂತವಿದೆ. ಅದು ಭೂಮಿ ಮತ್ತು ಅದರ ವ್ಯವಹಾರಕ್ಕೆ ಸಂಬಂಧಪಟ್ಟಿಲ್ಲ. ಆಧುನಿಕ ಕಾದಂಬರಿಗಳು ಈ ದೃಷ್ಟಿಯಲ್ಲಿ ಅವನತಿಯನ್ನು ಹೇಳುತ್ತವೆ. ಅವುಗಳಲ್ಲಿ ಅದರ ಅರ್ಥವು ಬೇರೆಯಾಗುತ್ತವೆ. ಅವುಗಳಲ್ಲಿ ದುಃಖವು ಕಾಣಿಸುವುದು ಬೇರ ಕ್ರಮದಲ್ಲಿಯೂ ಹೌದು. ದುರಂತವು ನಮ್ಮ ಸಂವೇದನೆಯನ್ನು ತಟ್ಟುತ್ತದೆ. ಒಡಲಾಳವು ಹೇಳುವ ಅನೇಕ ವಿವರಗಳು ದಲಿತರನ್ನು ಮಾತ್ರವೇ ಹೇಳುತ್ತಿಲ್ಲ. ಅದು ಭೂಮಿ ಮತ್ತು ಅದರ ಒಡೆತನವನ್ನು ವಿವರಿಸುತ್ತಾ ಇಲ್ಲ. ಕೋಳಿಯು ಇಲ್ಲಿ ಸಾಕವ್ವನ ಜೀವನದ ಒಂದು ಭಾಗವಾಗಿದೆ. ದುರಂತವು ಒಂದು ಅರ್ಥದಲ್ಲಿ ಸಂಸ್ಕೃತಿಯ ಕೆಲವು ಅಂಶಗಳನ್ನು ಹೇಳುತ್ತವೆ. ಅದರಲ್ಲಿಯೂ ದುರಂತವು ಸಮಾಜ ಮತ್ತು ಅದರ ಭಾಗವೂ ಕಾಣಿಸುತ್ತದೆ. ಅದರಲ್ಲಿ ತಾರತಮ್ಯವು ಹೇಗೆ ಕಾಣಿಸುತ್ತದೆ ಎನ್ನುವುದೂ ಬಹಳ ಮುಖ್ಯವಾಗುತ್ತದೆ. ಆಧುನಿಕ ಜಗತ್ತಿನ ದುರಂತಗಳಿಗೆ ಒಂದು ಸ್ವರೂಪವು ಇಲ್ಲ. ಅದು ಬದಲಾಗುತ್ತದೆ ಮತ್ತು ವ್ಯತ್ಯಾಸವೂ ಆಗುತ್ತದೆ. ಇಲ್ಲಿ ನಡೆಯುವ ದುರಂತವು ಓದುಗರಿಗೆ ತಟ್ಟುತ್ತದೆ. ಆಧುನಿಕ ಕತೆಗಳು ದುರಂತವನ್ನು ಬೇರೆ ಬೇರೆ ವಿಧದಲ್ಲಿ ಹೇಳುತ್ತದೆ. ಅದರಲ್ಲಿ ವಿನಾಶವು ಭಿನ್ನವಾಗುತ್ತದೆ. ವಾಸ್ತವವಾದಿ ಬರಹದಲ್ಲಿ ಬರುವ ದುರಂತಗಳು ನಿಜವಾಗಿಯೂ ಬೇರೆ ವಿಧದಲ್ಲಿ ಇರುತ್ತದೆ. ಅದು ವಿಚ್ಛಿದ್ರಕಾರಿ. ಹಾಗೆ ನೋಡುವುದಿದ್ದರೆ ಯಾವುದೇ ಸಮಾಜದಲ್ಲಿ ದುರಂತವು ನಡೆಯಲು ಬೇರೆ ಬೇರೆ ಕಾರಣ. ಅದನ್ನು ಏಕಕೇಂದ್ರವಾಗಿ ನೋಡಲು ಸಾಧ್ಯವೂ ಆಗಲಾರದು. ಕತೆಗಳಲ್ಲಿ ನಡೆಯುವ ದುರಂತ ಮತ್ತು ಅದರ ಕಾರಣವನ್ನು ನಾವು ಈವತ್ತು ಬೇರೆ ಮಾದರಿಯಲ್ಲಿ ನೋಡಲು ಸಾಧ್ಯವಾಗುತ್ತದೆ. ದೇಸಾಯಿ ಮತ್ತು ಚಿತ್ತಾಲರ ಕಾದಂಬರಿಗಳಲ್ಲಿ ಬರುವ ಕೇಂದ್ರವು ಒಂದು ಬಗೆಯದು. ಅದರಲ್ಲಿ ಬರುವ ದುರಂತವನ್ನು ನಾವು ನಾಗರಿಕ ಜಗತ್ತು; ವ್ಯಕ್ತಿ ಸಂಬಂಧಗಳ ಹಿನ್ನೆಲೆಯಲ್ಲಿಯೂ ನೋಡಲು ಸಾಧ್ಯವಾಗುತ್ತದೆ. ಶಿಕಾರಿಯ ನಾಗಪ್ಪನಿಗೆ ಉಂಟಾಗುವ ಭಯವು ಒಂದು ರೀತಿಯದು. ಅವನನ್ನು ಯಾರೋ ಬೇಟೆಯಾಡುತ್ತಾರೆ ಎನ್ನುವ ಆತಂಕವು ಅವನಿಗೆ ಉಂಟಾಗುತ್ತದೆ. ಆದರೆ ಇದನ್ನು ನಾವು ಸಾರಾ ಅವರ ಕಾದಂಬರಿಗಳಲ್ಲಿ ಕಾಣಲಾರೆವು. ಇದಕ್ಕೆ ವ್ಯತ್ಯಾಸವಿದೆ. ಕಾದಂಬರಿಗಳು ಬಾಹ್ಯವನ್ನು ಈ ದೃಷ್ಟಿಯಲ್ಲಿ ನೋಡುವ ಕ್ರಮವು ಬೇರೆಯಾಗುತ್ತದೆ. ನಾಟಕಗಳು ಮತ್ತು ಅದರ ಕ್ರಿಯೆಗಳಲ್ಲಿ ಬೇರೆ ಬೇರೆ ಬಗೆಯ ದುರಂತದ ಚಿತ್ರಣವು ಇರುತ್ತದೆ. ಆದರೆ ಈ

ಚಿತ್ರಣವನ್ನು ಕಾದಂಬರಿಯಲ್ಲಿ ನೋಡಲಾರೆವು. ಕಾದಂಬರಿಯ ವಸ್ತು ಮತ್ತು ಅದರ ಕ್ರಿಯೆಗಳ ಸ್ವರೂಪವು ಒಂದು ಬಗೆಯದು. ಮತ್ತು ಅದರ ಅರ್ಥವೂ ಬೇರೆ ಮಾದರಿಯದು ಆಗುತ್ತದೆ. ಅದರಲ್ಲಿ ಬರುವ ಸ್ವರೂಪವೇ ಸಾಮಾಜೀಕರಣವನ್ನು ಹೇಳುತ್ತದೆ. ಕಾದಂಬರಿಗಳು ನಿತ್ಯವನ್ನು ಹೇಳುವ ಮತ್ತು ಗ್ರಹಿಸುವ ಕ್ರಮವು ಭಿನ್ನವಾಗುತ್ತದೆ. ಅದರಲ್ಲಿ ಬರುವ ನಿರೂಪಣೆಯು ಬೇರೆಯಾಗುತ್ತದೆ. ಆದರೆ ಆಧುನಿಕೋತ್ತರವಾದಗಳು ಸಹಜತೆಯನ್ನು ಪ್ರಶ್ನೆ ಮಾಡುತ್ತವೆ. ಅದರಲ್ಲಿ ಬರುವ ಪ್ರಶ್ನೆಗಳು ಬೇರೆಯಾಗುತ್ತವೆ. ಆಧುನಿಕತಾವಾದವು ಸಾಮಾನ್ಯರು ಮತ್ತು ಅವರ ಸಮಸ್ಯೆಗಳನ್ನು ಅಷ್ಟು ಹೇಳುವುದಿಲ್ಲ. ದುರಂತ ಮತ್ತು ಅದರ ಭಾವನೆಗಳನ್ನು ಬರೀ ಬುದ್ಧಿಜೀವಿಗಳಿಗೆ ಮಾತ್ರವೇ ಅದು ಅನ್ವಯಿಸುತ್ತದೆ. ಶೋಷಿತರು ಮತ್ತು ಅವರ ಜೀವನ ಹಾಗೂ ಅವರ ದುರಂತವು ಒಂದು ಬಗೆಯಲ್ಲಿ ಇರುತ್ತದೆ. ಅದರ ಸ್ವರೂಪವೂ ಬೇರೆಯಾಗುತ್ತದೆ. ಕಾದಂಬರಿಗಳಲ್ಲಿ ಬರುವ ದುರಂತ ಮತ್ತು ಅದರ ದುರಂತದ ಅರಿವು ಈ ದೃಷ್ಟಿಯಿಂದ ಅದರ ನಿರೂಪಣೆಯಲ್ಲಿ ನೋಡಲು ಸಾಧ್ಯವಾಗುತ್ತದೆ. ಕನ್ನಡ ಕಾದಂಬರಿಗಳಲ್ಲಿ ಬರುವ ದುರಂತ ಮತ್ತು ಅದರ ಸ್ವರೂಪವು ನಮ್ಮ ರಾಜಕೀಯ ಮತ್ತು ಸಾಂಸ್ಕೃತಿಕ ಸನ್ನಿವೇಶವನ್ನು ಹೇಳುತ್ತದೆ. ಸಂಸ್ಕಾರ ಕಾದಂಬರಿಯಲ್ಲಿ ಬರುವ ದುರಂತವು ಜಾತಿ ಮತ್ತು ಅದರ ಚರಿತ್ರೆಯನ್ನು ಹೇಳುತ್ತದೆ. ಪ್ರಾಣೇಶಾಚಾರ್ಯನ ದುರಂತವು ಅವನ ಸ್ವಂತವನ್ನು ಹೇಳುವುದೂ ಅಷ್ಟೇ ನಿಜ. ಅವನ ನಂಬಿಕೆಗಳಲ್ಲಿ ಒಂದು ಆಧ್ಯಾತ್ಮಿಕ ಅಂಶವೂ ಸೇರಿಕೊಳ್ಳುತ್ತದೆ. ಆದರೆ ಶಿಕಾರಿಯ ನಾಗಪ್ಪ ಮತ್ತು ಅವನ ದುರಂತವು ಮತ್ತೊಂದು ಬಗೆಯದು. ಅದರ ಸಾಮಾಜಿಕ ಜೀವನ ಮತ್ತು ಅದರ ಪ್ರಕ್ರಿಯೆಗಳು ಬೇರೆಯಾಗಿವೆ. ಆದರ್ಶವಾದ ಮತ್ತು ವಾಸ್ತವವು ಅದರಲ್ಲಿ ಬೇರೆಯಾಗುತ್ತದೆ. ಅತ್ಯಂತ ಹೆಚ್ಚು ಸಂವೇದನಾಶೀಲನಾದ ವ್ಯಕ್ತಿಯ ದುರಂತವನ್ನು ಈ ಕಾದಂಬರಿ ಹೇಳುತ್ತದೆ. ಅದರ ಲೋಕದೃಷ್ಟಿಯು ಬೇರೆಯಾಗುತ್ತದೆ. ಕನ್ನಡ ಕಥನಗಳಲ್ಲಿ ಬರುವ ದುರಂತವು ಒಂದು ಚಾರಿತ್ರಿಕ ಹಿನ್ನೆಲೆಯನ್ನು ಹೇಳುತ್ತದೆ. ಜೀವನ ಮತ್ತು ಆದರ ಸ್ವರೂಪ ಹಾಗೂ ದುರಂತಗಳ ನಡುವೆ ಒಂದು ಸಂಬಂಧವಿದೆ. ಜೀವನದ ಆದರ್ಶಗಳು ಕೈಗೂಡದೇ ಹೋದರೆ ಆಗ ದುರಂತ ಸಂಭವಿಸುತ್ತದೆ. ಕನ್ನಡದ ಕಾದಂಬರಿಗಳು ಹೇಳುವ ದುರಂತಗಳು ನಿಜವಾದ ಅರ್ಥದಲ್ಲಿ ಸಮಾಜ ಮತ್ತು ಅದರ ಶ್ರೇಣೀಕರಣವನ್ನು ಹೇಳುತ್ತದೆ. ಕುಡಿಯರ ಕೂಸು ಕಾದಂಬರಿಯಲ್ಲಿ ಒಂದು ದುರಂತವು ಇದೆ. ಆದರೆ ಅದು ಏರ್ಪಟ್ಟಿದ್ದು ವ್ಯಕ್ತಿ ಮತ್ತು ಅವನ ಜೀವನದ ಸಾಧ್ಯತೆಯಿಂದ. ವ್ಯಕ್ತಿ ಮತ್ತು ಅವನ ಜೀವನ ಹಾಗೂ ದುರಂತಗಳಿಗೆ ನವ್ಯಕಾದಂಬರಿಗಳು ಹೇಳಿದ ಕಾರಣಗಳು ಬೇರೆ ರೀತಿಯ ವ್ಯಾಖ್ಯೆಯನ್ನು ಹೇಳುತ್ತದೆ. ಯಾವುದೇ ರೀತಿಯಲ್ಲಿ ನಾವು ಒಂದು ವಿಷಯದ ಜೊತೆಗೆ ಒಪ್ಪಂದವನ್ನು ಮಾಡಲು ಸಾಧ್ಯವಾಗದೇ ಹೋದರೆ ಅದರ ಅರ್ಥವು ಬೇರೆಯಾಗುತ್ತದೆ. ಅದರಲ್ಲಿ ದುರಂತವು ಕಾಣಿಸುತ್ತದೆ. ಕನ್ನಡದ ಕೆಲವು ಕಾದಂಬರಿಗಳು

ದೊಡ್ಡ ರಾಜಕಾರಣವನ್ನು ಹೇಳುತ್ತದೆ. ಅದರಲ್ಲಿ ಸಮಾಜ ಮತ್ತು ಅದರ ಅಸ್ತಿತ್ವವೂ ಇರುತ್ತದೆ. ಕನ್ನಡದ ಕಾದಂಬರಿಗಳು ನಿಜವಾಗಿಯೂ ಒಂದು ಮಹತ್ವದ ಪ್ರಶ್ನೆಯನ್ನು ಎತ್ತಿಕೊಂಡಿದೆ. ಅದನ್ನು ಸಮಾಜ ಮತ್ತು ಚರಿತ್ರೆಯ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಕಾದಂಬರಿಗಳಲ್ಲಿ ಬರುವ ನಾಯಕರು ನಿಜವನ್ನು ಸೂಚಿಸುತ್ತಾರೆ. ಆಧುನಿಕ ಕಾದಂಬರಿಗಳು ಆಧುನಿಕ ಹಿಂಸೆಯನ್ನು ಹೇಳುತ್ತದೆ. ಈ ಹಿಂಸೆಗಳು ಮನೆ, ಸಮಾಜ, ಸಂಸ್ಕೃತಿಯನ್ನು ಹೇಳುತ್ತದೆ. ಹಿಂಸೆ ಮತ್ತು ಅದರ ಪರಿಣಾಮಗಳನ್ನು ಅವುಗಳು ಸೂಚಿಸುತ್ತವೆ.

ರಂಗ ಪ್ರದರ್ಶನ ಮತ್ತು ಅದರ ಸ್ವರೂಪವು ಒಂದು ಸೌಂದರ್ಯವೂ ಆಗುತ್ತದೆ. ರಂಗಭೂಮಿಯು ವಾಸ್ತವವಾಗಿ ಒಂದು ಪ್ರದರ್ಶನವೂ ಹೌದು. ಅದು ಪ್ರದರ್ಶನ ಎಂದ ಕೂಡಲೇ ಅದನ್ನು ನಾವು ಬರೀ ರಂಗ ಮಾತ್ರವೇ ಆಗಿದೆ ಎಂದು ಹೇಳಲು ಸಾಧ್ಯವೂ ಇಲ್ಲ. ಅದರಲ್ಲಿ ಸಮಾಜ ಮತ್ತು ಅದರ ಉಪಯೋಗಕ್ಕೆ ಬರುವ ಅನೇಕ ಸಂಗತಿಗಳು ಇರುತ್ತವೆ ಎನ್ನುವುದನ್ನು ಮರೆಯಬಾರದು. ಕಲಾತ್ಮಕತೆಯನ್ನು ಬಿಟ್ಟ ರಂಗವು ಇಲ್ಲವಾಗಿದೆ. ರಂಗ ಮತ್ತು ಅದರ ಭಾಷೆಗಳು ಈವತ್ತು ಬೇರೆ ರೀತಿಯಲ್ಲಿಯೂ ಇದೆ. ಅದನ್ನು ಆಂಗಿಕ ಎಂದು ಹೇಳುತ್ತೇವೆ. ಆದರೆ ಸನ್ನೆಗಳು ಯಾವ ರೀತಿಯಲ್ಲಿ ಇರುತ್ತದೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದು ಇಲ್ಲಿ ಮುಖ್ಯ. ಯಾವುದೇ ರಂಗಭೂಮಿ ಮತ್ತು ಅದರ ಪರಿಣಾಮಕ್ಕೆ ಬೇರೆ ಆಯಾಮವೂ ಇರುತ್ತದೆ. ರಂಗ ಮತ್ತು ಅದರ ಭಾಷೆಗೆ ವಿಭಿನ್ನವಾದ ಒಂದು ಆಯಾಮವೂ ಇರುತ್ತದೆ. ಇಲ್ಲಿ ಮತ್ತೆ ಕೆಲವು ಪ್ರಶ್ನೆಗಳು ಇರುತ್ತವೆ. ಯಾವುದೇ ರಂಗಭೂಮಿಯು ಕೆಲವನ್ನು ರೂಪಿಸುತ್ತದೆ. ಅದರ ಅಗತ್ಯವೂ ಅದೇ ರೀತಿಯಲ್ಲಿ ಇರುತ್ತದೆ. ವಾಸ್ತವವಾಗಿ ಮತ್ತೆ ನಾವು ಇದನ್ನು ಒಂದು ದೃಷ್ಟಿಕೋನದಲ್ಲಿಯೂ ನೋಡಬೇಕಾಗುತ್ತದೆ. ಅಂದರೆ ರಂಗಭೂಮಿ ಮತ್ತು ಅದರ ಚಟುವಟಿಕೆಗಳು ಬೇರೆ ಬೇರೆ ಆಯಾಮವನ್ನು ಹೊಂದಿರುತ್ತದೆ. ರಂಗಭೂಮಿಯು ನಮಗೆ ಬದ್ಧತೆಯೂ ಆಗಬೇಕಾಗುತ್ತದೆ. ಅದು ಪ್ರಾತಿನಿಧಿಕವಾದ ಒಂದು ಚಟುವಟಿಕೆಯೂ ಆಗಿರುತ್ತದೆ. ನಮ್ಮ ಕಾಲವನ್ನು ಅದು ಬೇರೆ ರೀತಿಯಲ್ಲಿಯೂ ನೋಡುತ್ತದೆ. ನಾಟಕ ಮತ್ತು ಅದರ ಪರಿಣಾಮವು ಒಂದು ಸುಂದರವಾದ ಪ್ರತಿಕ್ರಿಯೆಯನ್ನು ಹುಟ್ಟು ಹಾಕುತ್ತದೆ. ಅದು ಸಮಾಜವನ್ನು ಮತ್ತೊಂದು ಕೋನದಲ್ಲಿ ನೋಡಲು ಯತ್ನವನ್ನು ಮಾಡುತ್ತದೆ. ಅದು ಪರಿವರ್ತನೆಯನ್ನು ತರುತ್ತದೆ. ರಂಗಭೂಮಿಯು ಕೆಲವನ್ನು ಹೇಳುತ್ತದೆ. ಮತ್ತು ಅದರ ಮೂಲಕವೇ ನಾವು ಅನೇಕವನ್ನು ಕಲಿಯುತ್ತೇವೆ. ರಂಗದ ಕ್ರಿಯೆಯು ಮೂಲಭೂತವಾಗಿ ಸಮೂಹವನ್ನು ಬೇರೆ ರೀತಿಯಲ್ಲಿ ಹೇಳುತ್ತದೆ. ಅದರ ಸಂವಹನವು ನಮಗೆ ಅನೇಕವನ್ನು ಸೂಚಿಸುತ್ತದೆ. ರಂಗ ಎನ್ನುವುದು ಮೂಲಭೂತವಾಗಿ ಒಂದು ವಿಜ್ಞಾನವೇ ಅಲ್ಲ. ಅದು ರಂಗಭೂಮಿ. ಅಂದರೆ ಅದನ್ನು ನಾವು ವೇದಿಕೆಯಲ್ಲಿ ನೋಡುತ್ತೇವೆ. ಪ್ರಭುತ್ವವನ್ನು ನಾವು ರಂಗದ ಮೂಲಕವೂ ವಿರೋಧಿಸಲು ಸಾಧ್ಯ.

ಬ್ರೆಕ್ಟ್‌ನಲ್ಲಿ ರಂಗಭೂಮಿಯು ಒಂದು ಸೀಮಿತವಾದ ಪರಿಧಿಯನ್ನು ಒಳಗೊಂಡಿಲ್ಲ. ಅವನು ಪರಕೀಯತೆಯನ್ನು ಹೇಳುವುದು ಬರೀ ಒಂದು ಚೌಕಟ್ಟಿನಲ್ಲಿಯೂ ಅಲ್ಲವೆನ್ನುವುದು ಇಲ್ಲಿ ಗಮನಾರ್ಹ. ಹಾಗೆ ನೋಡುವುದಿದ್ದರೆ ಯಾವುದೇ ವೈಜ್ಞಾನಿಕವಾದ ಸಂಗತಿಗಳು ಸುಂದರವೇ ಆಗಿರುತ್ತದೆ. ಐನ್‌ಸ್ಟೀನ್ ಮೂಲತಃ ಯಾವುದನ್ನು ಹೇಳಿದನೋ ಅದಕ್ಕೆ ಮೂಲಭೂತವಾಗಿ ಕೆಲವು ಆಯಾಮಗಳು ಇದೆ. ಅದು ಅಗತ್ಯವಾಗಿತ್ತು. ಅದರಲ್ಲಿ ಮೂಲಭೂತವಾದ ಕೆಲವು ಸತ್ವಗಳು ಇವೆ. ರಂಗಭೂಮಿಯು ನಮಗೆ ಯಾಕೆ ಆಪ್ತವಾಗುತ್ತದೆ ಎನ್ನುವುದನ್ನು ನೋಡಿದರೆ ಇದರ ಅರಿವು ನಮಗೆ ಆಗುತ್ತದೆ. ರಂಗಭೂಮಿಯನ್ನು ನಾವು ಬರೀ ಸುಂದರ ಎಂದು ಹೇಳುವುದು ನಿಜವಾದರೂ ಅದರಲ್ಲಿ ಅದು ಮಾತ್ರವೇ ಇಲ್ಲ. ಅದರಲ್ಲಿ ಜೀವನದ ಕಥನವು ಇದೆ. ಆ ಕಥನವು ನಮಗೆ ವೈಜ್ಞಾನಿಕವಾಗುತ್ತದೆ. ರಂಗ ಪ್ರಯೋಗವನ್ನು ನಾವು ಅವೈಜ್ಞಾನಿಕ ಎಂದು ಹೇಳಬೇಕಾದ ಅಗತ್ಯವೇ ಇಲ್ಲ. ಮನುಷ್ಯರಾಗಿ ನಾವು ಹೇಗಿರಬೇಕು ಮತ್ತು ಹೇಗೆ ಇರಬಾರದು ಎಂದು ಅದು ಹೇಳುತ್ತದೆ. ನಮಗೆ ಇದು ಅರಿವಾದರೆ ಮಾತ್ರವೇ ನಮಗೆ ಹೊಸದು ಸಾಧ್ಯವಾಗುತ್ತದೆ. ಆದರೆ ರಂಗಭೂಮಿಯನ್ನು ನಾವು ನೋಡುವಾಗ ಕೇವಲ ಒಂದು ರೀತಿಯಲ್ಲಿ ಮಾತ್ರವೇ ನೋಡುತ್ತೇವೆ. ಹಳೆಯ ಮತ್ತು ಹೊಸ ರಂಗಭೂಮಿಯೆರಡೂ ಮೂಲಭೂತವಾಗಿ ಮನುಷ್ಯ ಮತ್ತು ಅವನ ಅವಸ್ಥೆಗಳನ್ನು ಹೇಳುತ್ತವೆ. ಅದರಲ್ಲಿ ಜೀವನದ ಚಿತ್ರವು ಬೇರೆ ಕಾರಣಕ್ಕೂ ರೂಪಿತವಾಗಿರುತ್ತದೆ. ದುರಂತ ನಾಟಕಗಳು ಮತ್ತು ಅದರ ಪರಿಣಾಮಗಳು ಒಂದು ರೀತಿಯಲ್ಲಿದ್ದರೆ; ಸುಖಾಂತಗಳು ಮತ್ತೊಂದು ಪರಿಣಾಮವನ್ನು ಬೀರುವುದೂ ನಿಜ. ಆದರೆ ದುರಂತವು ಮೂಲಭೂತವಾಗಿ ದುರಂತವನ್ನು ವಿವರಿಸುವಾಗ ಅದರಲ್ಲಿ ಜೀವನ ಮತ್ತು ಅದರ ಸಾಧ್ಯತೆಯನ್ನು ಹೇಳಿಕೊಳ್ಳುತ್ತದೆ. ಭಯ ಮತ್ತು ಕರುಣೆಯು ನಮ್ಮನ್ನು ಶುದ್ಧಿಗೊಳಿಸುತ್ತದೆ. ಅದು ಒಂದು ಅರ್ಥವನ್ನು ಹೇಳುತ್ತದೆ ಮತ್ತು ಅದರ ಕೆಲಸವು ಬರೀ ಒಂದು ಸುಖವನ್ನು ಕೊಡುವುದು ಮಾತ್ರವೇ ಎಂದು ಭಾವಿಸಬೇಕಾದ ಅಗತ್ಯವೇ ಇಲ್ಲ. ಸರಳವಾದ ಸುಖ ಮತ್ತು ಸರಳವಾದ ಪರಿಣಾಮವು ಅದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಸುಖವನ್ನು ಅದು ನೀಡುವುದು ಬೇರೆ ಕಾರಣಕ್ಕೂ ಆಗಿರುತ್ತದೆ. ಮತ್ತೆ ನಾವು ನೋಡಬೇಕಾದ ಸಂಗತಿಯೆಂದರೆ ಯಾವುದನ್ನು ಈವತ್ತು ದುರಂತವೆಂದು ಹೇಳುತ್ತಿದ್ದೇವೆಯೋ ಅದರ ಸ್ವರೂಪವು ರಂಗಕ್ಕೆ ಬಂದಾಗ ಅದರ ಅನುಭವ ಮತ್ತು ಅದರ ಸ್ವರೂಪವು ಬೇರೆಯಾಗುತ್ತದೆ. ನಾಟಕವು ಒಂದು ಉತ್ಪಾದಕವಾದ ಸಂಗತಿಯು ಮಾತ್ರವೇ ಆಗಿರುತ್ತದೆ. ಅದರ ಫಲಿತಾಂಶವೂ ಈ ದೃಷ್ಟಿಯಿಂದ ಬೇರೆಯಾಗಿರುತ್ತದೆ. ಯಾವುದು ನಮಗೆ ಸುಖವನ್ನು ಕೊಡುತ್ತದೆ ಮತ್ತು ಯಾವುದು ನಮಗೆ ದುಃಖವನ್ನು ತರುತ್ತದೆ ಎನ್ನುವುದು ಆಯಾ ಸಂದರ್ಭವನ್ನು ಆಧರಿಸಿಕೊಂಡು ಇರುತ್ತದೆ. ಸರಳವಾದ ಸುಖವನ್ನು ನಾವು ನೋಡುವುದು ಮತ್ತು ಗ್ರಹಿಸುವುದು ಒಂದು ಕೋನದಿಂದ ಮಾತ್ರವೇ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಆದರೆ ಸುಖವು ಉತ್ಪಾದಿತವಾದ್ದೂ

ಹೌದು. ಅಂದರೆ ಸುಖವನ್ನು ನೋಡುವಾಗ ಅದರಲ್ಲಿ ಬರುವ ಸುಖವು ನಾಟಕದಿಂದ ಜನ್ಯವಾಗಿದೆ ಎಂದೇ ತಿಳಿಯಬೇಕಾಗುತ್ತದೆ. ವಾಸ್ತವವಾಗಿ ಯಾವುದೇ ಕಲೆಯು ಮನುಷ್ಯರಿಂದ ಉತ್ಪಾದಿತವಾದ್ದು. ಮತ್ತು ಅದರಲ್ಲಿ ಉತ್ಪಾದನೆಯು ಭಾಷೆಯ ಮೂಲಕವೇ ನಡೆಯುತ್ತದೆ ಎಂದು ಹೇಳಬೇಕಾಗುತ್ತದೆ. ರಂಗಕಲೆಯೆನ್ನುವುದೂ ಕೂಡಾ ಜನರಿಂದ ರಚನೆಯು ಆಗಿದೆ. ಅದರಲ್ಲಿ ಸತ್ಯ ಮತ್ತು ಮಿಥ್ಯೆ ಎರಡೂ ಇರುತ್ತದೆ. ಅದು ಕೆಲವನ್ನು ನಮಗೆ ಭ್ರಮಿಸುವ ಹಾಗೆ ಮಾಡುತ್ತದೆ. ಯಾವುದೇ ಕಲೆಗಳು ಮೂಲಭೂತವಾಗಿ ಕೆಲವನ್ನು ಹೇಳುತ್ತವೆ. ಅದು ಸ್ವಲ್ಪ ಮಟ್ಟಿಗಾದರೂ ನಮಗೆ ಸುಖವನ್ನು ಕೊಡುತ್ತವೆ. ರಂಗಕಲೆಗಳಿಗೆ ಸಮಾಜದಲ್ಲಿ ಯಾಕೆ ಅನನ್ಯವಾದ ಸ್ಥಾನವು ಇದೆ ಎಂದರೆ ಅದರಲ್ಲಿ ಜೀವನ ಮತ್ತು ಅದರ ಪ್ರತಿಫಲನವು ಕಾಣುವಂತೆ ಇರುತ್ತದೆ. ಇಲ್ಲಿ ನಾಟಕವು ನಮಗೆ ದೃಶ್ಯದ ಮೂಲಕವೇ ಅನ್ಯವನ್ನು ಹೇಳುತ್ತವೆ. ಅದು ಕಾಣಿಸುವುದು ಮತ್ತು ಅದರಲ್ಲಿ ಜೀವನದ ನೇರ ನುಡಿಗಳು ಇರುತ್ತವೆ. ನಾಟಕಗಳು ನಮಗೆ ಕೆಲವು ಸೂಚನೆಗಳನ್ನು ಕೊಡುತ್ತವೆ. ನಾಟಕ ಎನ್ನುವುದೇ ಮೂಲಭೂತವಾಗಿ ಕೆಲವು ಪ್ರಕ್ರಿಯೆಗಳನ್ನು ಹೇಳುತ್ತವೆ. ರಂಗಭೂಮಿಯು ಕೆಲವು ವಿಚಾರಗಳನ್ನು ಹೇಳುವಾಗ ಅದರದೇ ಆದ ನಿಲುವನ್ನು ಹೊಂದಿರುತ್ತವೆ. ಹಾಗೆ ನೋಡುವುದಿದ್ದರೆ ರಂಗಭೂಮಿಯು ತನ್ನದೇ ಆದ ಕೆಲವು ಅನುಕೂಲವನ್ನು ಮಾಡಿಕೊಂಡಿರುತ್ತವೆ. ಅದು ನಿರೂಪಿಸುವುದು ಮೂಲಭೂತವಾಗಿ ಕೆಲವು ಅಂಶಗಳನ್ನು ಮಾತ್ರವೇ. ಅದರಲ್ಲಿ ಕೆಲವು ರೀತಿಯ ಸತ್ವವು ಇರುತ್ತದೆ. ಅದೇ ನಮಗೆ ದಾರಿಯನ್ನು ಹೇಳುತ್ತದೆ. ವಾಸ್ತವವಾಗಿ ರಂಗಭೂಮಿಯು ಹೇಳುವ ಕೆಲವು ಅಂಶಗಳನ್ನು ನಾವು ಅದು ಕ್ರಿಯೆ ಮತ್ತು ಅದರ ಸ್ಥಾನಮಾನದ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಅದು ಕೊಡುವ ಸುಖವನ್ನು ನಾವು ಬರೀ ದೈಹಿಕವಾದ ಒಂದು ಪ್ರಕ್ರಿಯೆ ಎಂದು ಹೇಳಬೇಕಾಗಿಯೂ ಇಲ್ಲ. ರಂಗದ ಮೇಲೆ ಇರುವ ಅನೇಕ ಸೆಟ್ಟಿಂಗ್‌ಗಳು ಕೂಡಾ ನಮಗೆ ಹೊಸದಾದ ದಿಕ್ಕನ್ನು ಹೇಳುತ್ತವೆ. ಅದರಲ್ಲಿ ನಾಟಕಕ್ಕೆ ಬೇಕಾದ ಹಿನ್ನೆಲೆಯೂ ಇರುತ್ತದೆ. ಇದು ಬ್ರೆಕ್ಟನ ನಿಲುವು. ದುರಂತ ಮತ್ತು ಅದರ ಹಿಂದೆ ಇರುವ ಮನೋಭಾವನೆಗಳು ಬೇರೆಯಾಗಿರುತ್ತವೆ. ಅದು ಭಯ ಮತ್ತು ದುಃಖವನ್ನು ಹೇಳುತ್ತದೆ. ಬಯಕೆಗಳು ಈಡೇರದೆ ಹೋದಾಗ ಅಲ್ಲಿ ಒಂದು ದುರಂತದ ಛಾಯೆಯು ಬರುತ್ತದೆ. ಇಡೀ ಜೀವನ ಮತ್ತು ಅದರಲ್ಲಿ ನಡೆಯುವ ಸಂಘರ್ಷಗಳನ್ನು ದುರಂತವು ಹೇಳುತ್ತದೆ. ದುರಂತ ನಾಟಕದಲ್ಲಿ ವ್ಯಕ್ತಿ ಮತ್ತು ಅವನ ಭಾವನೆಗಳಿಗೆ ಬೇರೆ ಅರ್ಥವೂ ಇರುತ್ತದೆ. ವಾಸ್ತವವಾಗಿ ಹೋಮರ್ ಹೇಳಿದ ಯುದ್ಧಗಳು ಮತ್ತು ಕನ್ನಡದಲ್ಲಿ ಪಂಪ ಹೇಳಿದ ಯುದ್ಧಗಳು ನಮಗೆ ಬೇರೆಯಾದ್ದುದನ್ನು ಹೇಳುತ್ತವೆ. ಪಂಪ ಅದನ್ನು ಅಂದರೆ ಯುದ್ಧವನ್ನು ಹೇಳುವುದು ಮತ್ತು ಅದನ್ನು ಗ್ರಹಿಸುವುದು ಬೇರೆ ನೆಲೆಯಲ್ಲಿ. ಅದರಲ್ಲಿ ರಾಜ್ಯ ಮತ್ತು ಅದರ ಕಥಾನಕವೂ ಇದೆ. ಅದರಲ್ಲಿ ಸೋತವರು ಮತ್ತು ವೀರರು ಸತ್ತ ಕಥಾನಕವೂ ಇದೆ. ಸೈನಿಕರು ಸಾಯುತ್ತಾರೆ. ಅವರು ಸಾಯುವುದು ದೊರೆಗಾಗಿ. ಅದರ ಅಭಿವ್ಯಕ್ತಿಯು ಬೇರೆಯಾಗಿದೆ. ಅದರಲ್ಲಿ

ಬರುವ ಚಿತ್ರಣವನ್ನು ಮತ್ತು ಆಧುನಿಕ ಕೋಮುದಂಗೆಗಳು ಹಾಗೂ ಅದರ ಪರಿಣಾಮಗಳನ್ನು ನಾವು ಒಂದೇ ರೀತಿಯಲ್ಲಿ ನೋಡಲು ಬರುವುದೂ ಇಲ್ಲ. ಪಂಪ ರಾಜ್ಯ ಮತ್ತು ಅದರ ಸಂಘರ್ಷಗಳನ್ನು ಒಂದು ರೂಪಕವಾಗಿ ನೋಡುತ್ತಾನೆ. ಚಕ್ರವರ್ತಿ ಪದವಿ ಮತ್ತು ಅದರ ಕುರಿತಾದ ವ್ಯಾಮೋಹ ಹಾಗು ಅದರ ಕುರಿತಾದ ನಿರಸನ ಎರಡೂ ಆದಿಪುರಾಣದಲ್ಲಿ ಬರುತ್ತದೆ. ಬಾಹುಬಲಿಯು ನಿರಸನವನ್ನು ಹೊಂದಿದ್ದು ಒಂದು ಮಹತ್ವದ ಪ್ರತೀಕ. ವ್ಯಕ್ತಿಯಾಗಿ ಭರತನಿಗೆ ಮಹತ್ವಾಕಾಂಕ್ಷೆಯು ಇದೆ. ಆದರೆ ಈ ಅಭಿವ್ಯಕ್ತಿಯನ್ನು ಪಂಪ ವಿಶಿಷ್ಟವಾಗಿಯೂ ಮಾಡುತ್ತಾನೆ. ಭರತನು ತನ್ನ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಬಾಹುಬಲಿಯು ರಾಜ್ಯವನ್ನು ಬಿಟ್ಟು ಹೋಗುವುದು ನಮಗೆ ದುರಂತದ ಥರ ಅನಿಸುವುದಿಲ್ಲ. ಯಾಕೆಂದರೆ ಧಾರ್ಮಿಕವಾಗಿ ಅವನು ಮಾಡಿದ್ದು ಸರಿ ಹಾಗೂ ಅದರಲ್ಲಿ ಅರ್ಥವೂ ಇದೆ. ಅವನು ತಪಸ್ಸನ್ನು ಮಾಡುತ್ತಾನೆ. ಅದರ ಅರ್ಥಪೂರ್ಣತೆಯೆ ಹೆಚ್ಚು ಮುಖ್ಯವಾಗುತ್ತದೆ. ಪಂಪ ಇದನ್ನು ಹೇಳುವಾಗ ಇದರಲ್ಲಿ ಇರುವ ಉದಾತ್ತತೆಯನ್ನು ಹೇಳುತ್ತಾನೆ. ಅದರ ಭಾಷೆಯೇ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ವಾಸ್ತವವಾಗಿ ಬಾಹುಬಲಿಯು ಮತ್ತು ಅವನ ಪ್ರವೇಶವು ಕೊನೆಗೆ ಆಗುತ್ತದೆ. ವಾಸ್ತವವಾಗಿ ದುರಂತ ನಾಟಕಗಳಲ್ಲಿ ಒಂದು ವಿಶಿಷ್ಟವಾದ ಸಂಪ್ರದಾಯವೂ ಇತ್ತು. ಅದನ್ನು ಅವರು ವಾದ್ಯಗಳ ಮೂಲಕ ಹೇಳುತ್ತಿದ್ದರು. ವಾದ್ಯಗಳು ಭಾವನೆಗೆ ಪೂರಕವಾಗುತ್ತದೆ. ಆದರೆ ನಮಗೆ ದುರಂತ ನಾಟಕಗಳ ಅವಕಾಶಗಳು ಇಲ್ಲ. ಆದ್ದರಿಂದ ಪಂಪ ಅದನ್ನು ಇಡೀ ಚಂಪೂವಿನಲ್ಲಿ ಹೇಳುವಾಗ ಅದರ ಸೊಗಸು ಕಾವ್ಯ ಮತ್ತು ಸಂಗೀತದ ಛಾಯೆಯನ್ನು ಒಳಗೊಳ್ಳುತ್ತದೆ. ಭರತನು ಹೋಗುವುದು ತಪಸ್ಸಿಗೆ ಆದರೆ ಅದು ಅವನ ದುರಂತವು ಅಲ್ಲ. ಅದು ತ್ಯಾಗ. ಈ ತ್ಯಾಗವು ಅತ್ಯಂತ ಮುಖ್ಯವಾಗುತ್ತದೆ. ಅವನಿಗೆ ರಾಜ್ಯವನ್ನು ಆಳುವ ಬಯಕೆಯು ಇಲ್ಲ. ಅದರಿಂದ ನೋವು ಆಗುತ್ತಿಲ್ಲ. ಅವನು ಸಲೀಸಾಗಿ ರಾಜ್ಯವನ್ನು ತೊರೆಯುತ್ತಾನೆ. ತ್ಯಾಗ ಮತ್ತು ಅದರ ಮೌಲ್ಯಗಳ ಮಹತ್ವವು ಇದರ ಮೂಲಕವೇ ತಿಳಿಯುತ್ತದೆ. ಆದಿಪುರಾಣವು ಅತ್ಯಂತ ಮುಖ್ಯವಾಗುವುದು ಇದರಿಂದ. ಗ್ರೀಕ್ ದುರಂತ ನಾಟಕಗಳಲ್ಲಿ ದುರಂತ ಮತ್ತು ಅದರ ಹಾಡುಗಳಿಗೆ ಅವಿನಾಭಾವ ಸಂಬಂಧವೂ ಇದೆ. ಆದರೆ ಅದು ನಾಟಕದಲ್ಲಿ ಒಂದು ಭಾಗವು ಆಗಿದೆ. ಇನ್ನೊಂದು ಭಾಗವು ಬೇರೆ. ಅದು ಅತ್ಯಂತ ಶಕ್ತಿಶಾಲಿಯಾದ ಸಂಗತಿ. ಜೀವನ ಮತ್ತು ಅದರ ಹೋರಾಟಗಳು ಹಾಗೂ ಅದರ ಪರಿಣಾಮಗಳು. ವಿಧಿ ಮತ್ತು ಅವನ ಶಕ್ತಿಯ ಎದುರು ಮನುಷ್ಯ ಮತ್ತು ಅವನ ಅವನ ಭಾವನೆಗಳು ಏನಾಗುತ್ತವೆ ಎನ್ನುವುದನ್ನು ದುರಂತದ ನಾಟಕಗಳು ನಮಗೆ ಹೇಳುತ್ತವೆ. ಆದರೆ ಮಧ್ಯಯುಗೀನ ಸಂದರ್ಭದಲ್ಲಿ ಬೇರೆ ಕಲ್ಪನೆಗಳು ಬಂದವು. ಕ್ರಿಶ್ಚಿಯಾನಿಟಿ ಮತ್ತು ಅದರ ಧೋರಣೆಗಳು ವ್ಯತ್ಯಾಸವಾದವು. ವ್ಯಕ್ತಿ ಮತ್ತು ಅವನ ಪಾಪಗಳು ಹಾಗೂ ಅವನ ಜೀವನದ ಪ್ರಶ್ನೆಗಳಿಗೆ ಬೇರೆ ಆಯಾಮವೂ ಬಂತು. ಸ್ವಂತದ ಪ್ರಜ್ಞೆಯು ಹೆಚ್ಚು ಮುಖ್ಯವಾಯಿತು. ಮನಸ್ಸು ಮತ್ತು ಅದರ ತಲ್ಲಣಗಳು ದುರಂತಕ್ಕೆ ಕಾರಣವು ಆಗುತ್ತದೆ ಎಂದು ಭಾವಿಸಲಾಯಿತು. ಸ್ವಕೀಯತೆ ಮತ್ತು ಪ್ರಜ್ಞೆಗಳ

ಪ್ರಶ್ನೆಗಳು ಭಿನ್ನವಾದವು. ಇಲ್ಲಿ ಕನ್ನಡದ ಪ್ರಶ್ನೆಯನ್ನು ಎತ್ತಿಕೊಳ್ಳಬಹುದು. ಕುಮಾರವ್ಯಾಸನಲ್ಲಿ ರನ್ನನ ಥರದ ಸುಯೋಧನ ಕಾಣಿಸುವುದಿಲ್ಲ. ಕೃಷ್ಣನ ಅಸ್ತಿತ್ವ ಮುಖ್ಯವಾಗುತ್ತದೆ. ಅವನು ದೇವರು. ಅವನಿಗೆ ಅನೇಕವು ತಿಳಿದಿದೆ ಎನ್ನುವ ಧೋರಣೆಯಲ್ಲಿ ಕುಮಾರವ್ಯಾಸನು ಹೊರಡುತ್ತಾನೆ. ದೇವರಾದ ಕೃಷ್ಣ ಮತ್ತು ಮನುಷ್ಯನಾದ ಕೌರವ ಇವರ ನಡುವೆಯೇ ಮಾತುಕತೆಗಳು ನಡೆಯುತ್ತವೆ. ಆದರೆ ಸನ್ನಿವೇಶ ಮತ್ತು ಅದರ ಪರಿಣಾಮಗಳು ಬೇರೆಯಾಗುತ್ತವೆ. ಇಲ್ಲಿನ ಸಂಬಂಧಗಳ ಸ್ವರೂಪವೂ ಭಿನ್ನವಾಗುತ್ತವೆ. ಆದರೆ ಸ್ಮಶಾನ ಕುರುಕ್ಷೇತ್ರವು ಬರುವಾಗ ಅದರ ಧೋರಣೆಯು ಮತ್ತೆ ಭಿನ್ನವಾಗುತ್ತದೆ. ಒಂದೇ ಪಠ್ಯವು ಹೇಗೆ ಬೇರೆ ಬೇರೆ ಕಾಲದಲ್ಲಿ ಬೇರೆ ವಿಧವಾದ ನಿಲುವಿಗೆ ಕಾರಣವು ಆಗುತ್ತದೆ ಹಾಗೂ ದುರಂತದ ಸ್ವರೂಪವು ಹೇಗೆ ಭಿನ್ನವಾಗುತ್ತದೆ ಎಂದು ಇದರಿಂದ ತಿಳಿಯುತ್ತದೆ. ಹಾಗೆ ನೋಡಿದರೆ ಯಾವತ್ತು ದುರಂತವೇ ಇರುತ್ತದೆ ಎಂದು ಹೇಳಲು ಬರುವುದೂ ಇಲ್ಲ. ಚರಿತ್ರೆಯು ವಿಕಾಸವಾಗುತ್ತಾ ಬಂದಂತೆ ದುರಂತ ಮತ್ತು ಅದರ ಚಹರೆಗಳು ಕೂಡಾ ಬದಲಾದವು. ದೇವರು ಮತ್ತು ಮನುಷ್ಯರ ನಡುವೆ ಒಂದು ಹೋರಾಟವು ನಡೆಯುತ್ತದೆ. ಮನುಷ್ಯನು ಅದು ಕೈವಾಡಕ್ಕೆ ಬಲಿಯಾಗುತ್ತಾನೆ ಎಂದು ಹೇಳಲು ಬರುವುದಿಲ್ಲ. ಈಗ ನಾವು ಆಧುನಿಕ ದುರಂತ ನಾಟಕವನ್ನು ಹಳೆಯ ದುರಂತ ನಾಟಕವನ್ನು ನೋಡುವುದೇ ಬೇರೆ ರೀತಿಯಲ್ಲಿ. ಪ್ರೇಕ್ಷಕರಾಗಿ ನಮಗೆ ಬೇರೆ ಅಸ್ತಿತ್ವ ಇದೆ. ದುರಂತ ಮತ್ತು ದುಃಖದ ಭಾವನೆಗಳು ಈಗ ಬದಲಾಗಿವೆ. ಪೋಸ್ಟ್ ಬಾಕ್ಸ್ ನಂ 9 ನೋಡುವಾಗಲೂ ನಮಗೆ ದುರಂತದ ಅನುಭವ ಆಗುತ್ತದೆ. ಆದರೆ ಅದು ಭಿನ್ನವಾದದ್ದು ಎಂದು ತಿಳಿಯುತ್ತದೆ. ಆದರೆ ಈಡಿಪಸ್ ಅಳುವಂತೆ ಅಳು ಈಗಲೂ ರಂಗಭೂಮಿಯಲ್ಲಿ ಇದೆ. ಅದು ನಮಗೆ ಸಹಜವಾದ ಮನುಷ್ಯರ ದುಃಖದಂತೆ ಕಾಣುತ್ತದೆ. ಆಧುನಿಕವಾದ ಜ್ಞಾನವು ನಮಗೆ ದೊರೆತಿದೆ. ನಾವು ಈಗ ನಾಟಕವನ್ನು ಬೇರೆ ಬೇರೆ ತಂತ್ರಜ್ಞಾನದ ಸಹಾಯದಿಂದ ಮಾಡಬಲ್ಲೆವು. ವಾಸ್ತವವಾಗಿ ಒಂದು ಕಾಲಕ್ಕೆ ದುರಂತ ನಾಟಕವನ್ನು ಜನರು ರಾತ್ರಿಯಿಡೀ ನೋಡುತ್ತಿದ್ದರು. ಅದರಲ್ಲಿ ಜನರಿಗೆ ಅದು ಮುಖ್ಯವಾದ ಒಂದು ಮಾಧ್ಯಮವೂ ಆಗಿತ್ತು. ಭಾವನೆಗಳಿಗೆ ಅದು ಆದ್ಯತೆಯನ್ನು ಕೊಟ್ಟಿತು. ಜನರು ಅದರ ಮೂಲಕವೇ ತಮ್ಮ ಅನುಭವನ್ನು ಕಂಡುಕೊಂಡರು. ಅರಿಸ್ಟಾಟಲ್ ಹೇಳಿದ್ದು ಇಲ್ಲಿ ಮುಖ್ಯವಾಗಿದೆ. ಅದು ಕೆಥಾರ್ಸಿಸ್ ಒಂದು ಬಿಡುಗಡೆ. ನಾವು ಅವನನ್ನು ಈವತ್ತಿಗೂ ಪೂರ್ಣವಾಗಿ ಬಿಟ್ಟಿಲ್ಲ. ಅವನ ವಾದಗಳು ಮತ್ತೆ ಮತ್ತೆ ಬೆಳೆಯುತ್ತವೆ. ನಮ್ಮ ಜ್ಞಾನಕ್ಕೆ ಅನುಸಾರವಾಗಿ ಅವನ ಅನ್ವಯವನ್ನು ಮಾಡುತ್ತೇವೆ. ಅರಿಸ್ಟಾಟಲ್ ಹೇಳಿದ್ದು ನಮ್ಮ ಭಾವನೆಗಳು ಮತ್ತು ಅದರ ಬಿಡುಗಡೆಯನ್ನು. ಅದು ಮುಖ್ಯವಾಗಿದೆ. ವಾಸ್ತವವಾಗಿ ಹಾಸ್ಯ ಮತ್ತು ದುರಂತವು ನಮಗೆ ಅಭ್ಯಾಸವಾಗಿದೆ, ದುರಂತವನ್ನು ಮಾನವೀಯವಾದ ಕಾರಣಕ್ಕೆ ಗ್ರಹಿಸುತ್ತೇವೆ, ನಾವು ನಗುತ್ತೇವೆ. ಅದೂ ನಮಗೆ ಅಗತ್ಯವಾಗಿದೆ. ನಗುವನ್ನು ಬೇಡವೆಂದು ಹೇಳಲು ಸಾಧ್ಯವೇ ಇಲ್ಲ. ಅದು ನಮ್ಮ ಪ್ರಜ್ಞೆಯಲ್ಲಿ ಇದೆ. ಅಳುವುದು ಅಗತ್ಯವಾಗಿದೆ ಮತ್ತು ನಗುವುದೂ ಕೂಡಾ.

ಆದರೆ ಯಾವುದು ನಮಗೆ ಹಾಸ್ಯವಾಗಿ ಕಾಣುತ್ತದೆ ಮತ್ತು ಯಾವುದು ನಮಗೆ ಅತ್ಯಂತ ಹೆಚ್ಚು ತಟ್ಟುತ್ತದೆ. ಇವರೆಡೂ ನಮಗೆ ಗೊತ್ತಾಗುವುದು ಆಯಾ ಸನ್ನಿವೇಶದ ವೀಕ್ಷಣೆಯಿಂದ. ನಾವು ಈವತ್ತಿಗೂ ದುರಂತ ಮತ್ತು ಹಾಸ್ಯಗಳು ನಮಗೆ ಕೆಲವು ಅಂಶಗಳಿಂದ ತಿಳಿಯುತ್ತದೆ. ಮನುಷ್ಯ ಮತ್ತು ಅವನ ಯಾತನೆಗಳನ್ನು ದುರಂತವು ಹೇಳುತ್ತದೆ, ಅದರ ಅನನ್ಯತೆಯು ಬೇರೆ. ಗ್ರೀಕಿನಲ್ಲಿ ದುರಂತ ನಾಟಕಗಳು ಹುಟ್ಟುವಾಗ ಅದಕ್ಕೆ ಅದರದೇ ಆದ ಕಾರಣಗಳೂ ಇದ್ದವು. ಆದರೆ ವ್ಯಕ್ತಿ ಮತ್ತು ಅವನ ಅಧಃಪತನವನ್ನು ನೋಡಿದರೆ ನಮಗೆ ಅವನ ಬಗ್ಗೆ ಒಂದು ಕರುಣೆಯು ಬರುತ್ತದೆ, ಈ ಕರುಣೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ ಮಾನವೀಯತೆಯು ಸಾಕು. ಆದರೆ ಈಗ ನಾವು ಮತ್ತೆ ಬೇರೆ ಬೇರೆ ದುರಂತ ನಾಟಕಗಳನ್ನು ನೋಡುತ್ತೇವೆ. ತುಘಲಕ್ ನಾಟಕದಲ್ಲಿಯೂ ವ್ಯಕ್ತಿ ಮತ್ತು ಅವನ ಭ್ರಮನಿರಸನವು ನಮಗೆ ಕಾಣಿಸುತ್ತದೆ. ಆಧುನಿಕ ಅಧಿಕಾರ ಮತ್ತು ಅದರ ರೂಪೀಕರಣವು ಈವತ್ತು ಎಷ್ಟು ಕ್ರೂರವಾಗಿದೆಯೆಂದರೆ ವ್ಯಕ್ತಿ ಮತ್ತು ಸಮೂಹಗಳ ದುರಂತವನ್ನು ಅದು ತರುತ್ತದೆ. ಆದರೆ ಇದರಲ್ಲಿ ಯಾರೂ ಜನರ ಭಾವನೆ ಮತ್ತು ಅವರ ದುರಂತದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಿಲ್ಲ. ಗೌರಿ ಲಂಕೇಶರ ಹತ್ಯೆಯು ನಡೆಯಿತು. ಅದನ್ನು ನೋಡುವುದು ಹೇಗೆ? ಈ ಲೇಖನ ಬರೆಯುತ್ತಿರುವ ವೇಳೆಗೆ ಹಂತಕನು ಸಿಕ್ಕಿಲ್ಲ. ಅವರ ಕೊಲೆಯು ನಡೆದದ್ದು ರಾತ್ರಿ ಎಂಟು ಗಂಟೆಯ ಹೊತ್ತಿಗೆ. ಆದರೆ ಕೊಲೆಯು ನಡೆದದ್ದು ಅತ್ಯಂತ ಹೆಗ್ಗಳಿಕೆಯಿಂದ ಹೇಳಬಹುದಾದ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ. ಸರಕಾರವು ತನ್ನ ಜವಾಬ್ದಾರಿಯನ್ನು ಇನ್ನು ಯಾರದೋ ತಲೆಗೆ ಕಟ್ಟುತ್ತದೆ. ವಾಚುಮನ್ ಅಥವಾ ಪೊಲೀಸರು ಅಥವಾ ಇನ್ನು ಯಾವುದೋ. ಆದರೆ ವಿಷಯವು ಅಷ್ಟು ಸುಲಭವಿಲ್ಲ, ಗೌರಿಯನ್ನು ಕೊಂದದ್ದು ವಿಧಿಯು ಅಲ್ಲ ಒಬ್ಬ ಹಂತಕ. ಆದರೆ ದುರಂತವು ದುರಂತವೇ ಆಗಿದೆ. ಅರಿಸ್ಟಾಟಲ್ ದುರಂತವನ್ನು ಕುರಿತು ಹೇಳಿಕೊಳ್ಳುವಾಗ ಅದರ ಹಿರದೆ ಇರುವ ಆಲೋಚನೆ ಮತ್ತು ಅದರ ಕಾರ್ಯಗಳನ್ನು ಹೇಳುತ್ತಾನೆ. ಆಲೋಚನೆ ಮತ್ತು ಕ್ರಿಯೆಗಳು ಬಹಳ ಮುಖ್ಯವೆಂದು ಅವನು ಪ್ರತಿಪಾದಿಸುತ್ತಾನೆ. ಆದರೆ ಅದು ವ್ಯಕ್ತವಾಗುವುದು ಅದರ ಸಂವಿಧಾನದಲ್ಲಿ. ಆದರೆ ವ್ಯಕ್ತಿ ಮತ್ತು ಅವನ ಕ್ರಿಯೆಗಳು ಅದರಲ್ಲಿ ವ್ಯಕ್ತವಾಗುತ್ತವೆ. ವ್ಯಕ್ತಿಯು ದುರಂತದಲ್ಲಿ ವಿಶಿಷ್ಟನೂ ಹೌದು, ಆದ್ದರಿಂದ ಅವನ ವ್ಯಕ್ತಿತ್ವ ಮತ್ತು ಅವನ ಕ್ರಿಯೆಗಳಿಗೆ ಅರ್ಥವಿದೆ. ಕ್ರಿಯೆ ಮತ್ತು ಭಾವನೆಗಳು ಅದರಲ್ಲಿ ಸಂಮಿಶ್ರವಾದ ಭಾವನೆಗಳನ್ನು ಹೇಳುತ್ತವೆ. ದುರಂತ ನಾಟಕಗಳಲ್ಲಿ ಬರುವ ಸ್ವಗತ ಮತ್ತು ಅದರ ಸ್ವರೂಪವು ನಮಗೆ ಒಂದು ಅರ್ಥವನ್ನು ಕೊಡುತ್ತವೆ. ಅಷ್ಟೇ ಅಲ್ಲ ಅದರಲ್ಲಿ ಬರುವ ಕೋರಸ್ ಕೂಡಾ ಇದಕ್ಕೆ ಪೂರಕವೂ ಆಗಿರುತ್ತದೆ. ಕೋರಸ್ ಕೂಡಾ ವ್ಯಕ್ತಿ ಮತ್ತು ಅವನ ದುರಂತವನ್ನು ಹೇಳಲು ಸಹಾಯವನ್ನು ಮಾಡುತ್ತವೆ. ಅಂದರೆ ಅದರಲ್ಲಿ ವ್ಯಕ್ತಿ ಹಾಗೂ ಅವನ ಭಾವನೆಗೆ ಅದು ಪೂರಕವಾದ ಕೆಲಸವನ್ನು ಮಾಡುತ್ತವೆ. ಸ್ವಗತವನ್ನು ಒಂದು ಅರ್ಥದಲ್ಲಿ ಅದು ಮುಂದುವರಿಸುತ್ತದೆ. ಮೇಳವು ವ್ಯಕ್ತಿ ಮತ್ತು ಅವನ ಹಿನ್ನೆಲೆಯನ್ನು ಒದಗಿಸುತ್ತದೆ. ವ್ಯಕ್ತಿಯಾಗಿ ಅವನ

ಘನತೆಯು ಯಾವುದು ಅವನು ಯಾಕೆ ಹಾಗೆ ಆಗುತ್ತಾನೆ ಮತ್ತು ವಿಧಿಗೂ ಅವನು ಮಾಡುವ ಕೆಲಸಕ್ಕೂ ಏನು ವ್ಯತ್ಯಾಸವಿದೆ ಎನ್ನುವುದನ್ನು ಹೇಳುವುದು ಮೇಳ. ದುರಂತ ನಾಟಕಗಳಲ್ಲಿ ಬರುವ ಕ್ರಿಯೆಗಳು ಸಾಮಾನ್ಯವಾದ ವರ್ಗವನ್ನು ಹೇಳುವುದೂ ಇಲ್ಲ. ಅದರಲ್ಲಿ ಘನತೆಯು ಇದೆ. ಒಂದು ರೀತಿಯಿಂದ ಅದರಲ್ಲಿ ಒಂದು ಮಹಾಕಾವ್ಯದ ಮಾದರಿಯು ಇದೆ ಎಂದು ಕಿರ್ಕೆಗಾರ್ಡ್ ಹೇಳುತ್ತಾನೆ. ಈ ಅರ್ಥದಲ್ಲಿ ಮಹಾಕಾವ್ಯ ಮತ್ತು ಅದರ ಘನತೆಯು ನಮಗೆ ದುರಂತ ನಾಟಕದಲ್ಲಿಯೂ ಸಿಗುತ್ತದೆ. ಈಡಿಪಸ್, ಅಯಾಸ್ ಮುಂತಾದ ನಾಟಕಗಳನ್ನು ನೋಡುವಾಗ ನಮಗೆ ದುರಂತವು ಮತ್ತು ಅದರ ಚಹರೆಯು ಮತ್ತೆ ಯಾವ ರೀತಿಯಲ್ಲಿ ಕಾಣಿಸುತ್ತದೆ ಎಂದೂ ನೋಡಬೇಕಾಗುತ್ತದೆ. ವ್ಯಕ್ತಿಯು ಇಲ್ಲಿ ಒಬ್ಬ ನಾಯಕನು ಮಾತ್ರವೇ ಅಲ್ಲ. ಅವನು ಹಿಂದಿನ ಸಮಾಜ ಮತ್ತು ಹಾಗೂ ವ್ಯಕ್ತಿಯ ಪ್ರಜ್ಞೆಯನ್ನು ಹೇಳುತ್ತಾನೆ. ಅವನ ಕುಟುಂಬ, ಅವನ ಹಿನ್ನೆಲೆ ಮತ್ತು ಅವನ ಸ್ವಭಾವಗಳು ನಮಗೆ ಇಲ್ಲಿ ವಿಶಿಷ್ಟವಾಗಿಯೂ ಕಾಣಿಸುತ್ತದೆ. ಅವನ ಕ್ರಿಯೆಯಿಂದಾಗಿಯೇ ದುರಂತವು ಆಗುತ್ತದೆ. ಆದರೆ ದುರಂತವು ಈಗ ಬದಲಾಗಿದೆ. ವ್ಯಕ್ತಿ ಹಾಗೂ ಅವನ ಪ್ರಜ್ಞೆಯ ಸ್ವರೂಪದಲ್ಲಿ ವ್ಯತ್ಯಾಸವಾಗಿದೆ. ಅವನ ಪ್ರಜ್ಞೆಯು ಈಗ ವಿಷಯ ನಿಷ್ಠವಾದ ಸ್ವರೂಪವನ್ನು ಪಡೆದಿದೆ. ಜೀವನ ಮತ್ತು ಅದರ ಸ್ವರೂಪದಲ್ಲಿ ಉಂಟಾದ ವ್ಯತ್ಯಾಸವು ನಮಗೆ ಹೊಸದಾದ ಪಾಠವನ್ನು ಹೇಳುತ್ತದೆ. ಆಧುನಿಕ ದುರಂತ ನಾಟಕಗಳಿಗೆ ಹಿಂದಿನಂತೆ ಯಾವುದೇ ವಿಧಿ ಮತ್ತು ಪರಂಪರೆಯ ಸ್ವರೂಪವು ಇಲ್ಲ. ಬರೀ ತನ್ನ ಚಟುವಟಿಕೆ ಮತ್ತು ಅದರ ಕಾರಣದಿಂದ ವ್ಯಕ್ತಿಯು ದುರಂತವನ್ನು ಅಪ್ಪುತ್ತಾನೆ. ಅವನು ದೊಡ್ಡ ವ್ಯಕ್ತಿಯೂ ಅಲ್ಲ. ಅವನು ತನ್ನ ಕಾರಣದಿಂದ ದುರಂತವನ್ನು ಅಪ್ಪುತ್ತಾನೆ. ನೋವು ಇದೆ. ಈ ನೋವು ಒಂದು ಆಂತರಿಕವಾದ ಕಾರಣದಿಂದಲೂ ಬರುತ್ತದೆ. ಆದರೆ ಅರಿಸ್ಟಾಟಲ್ ಮೂಲಭೂತವಾಗಿ ಪ್ರಸ್ತಾವಿಸುವುದು ವ್ಯಕ್ತಿ ಮತ್ತು ಅವನ ಅವನ ಪಾಪದ ಭಾವನೆಗಳನ್ನು. ಇದನ್ನು ಈಡಿಪಸ್ ನಾಟಕದಲ್ಲಿ ಕಾಣಬಹುದು. ಕ್ರಿಯೆ ಮತ್ತು ನೋವುಗಳು ಇದನ್ನು ಹೇಳುತ್ತವೆ. ವ್ಯಕ್ತಿಯು ಪಾಪದ ಪ್ರಜ್ಞೆಯಿಂದ ನರಳುವುದು ಮತ್ತು ಅದರ ಮೂಲಕವೇ ದುರಂತವು ಸಂಭವಿಸುವುದು ಇದರಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಆದರೆ ದುರಂತವೂ ಹೇಗೆ ನಮಗೆ ಸೌಂದರ್ಯ ಮತ್ತು ಅದರ ಭಾವನೆಯನ್ನು ಹೇಳುತ್ತದೆ ಎಂದು ಸೂಚಿಸಿದ್ದು. ಈ ನಾಟಕಗಳೇ ಅನ್ನುವುದು ಒಂದು ವಿಶಿಷ್ಟವಾದ ಸಂಗತಿಯೂ ಹೌದು. ಆದರೆ ನೀತಿ ಮತ್ತು ಸೌಂದರ್ಯವು ಇವುಗಳಲ್ಲಿ ಒಂದಾಗುತ್ತವೆ. ನಾಯಕ ಮತ್ತು ಅವನ ಹಿಂದಿನ ಜೀವನಕ್ಕೆ ಈ ನಾಟಕಗಳಲ್ಲಿ ಒಂದು ಅರ್ಥವೂ ಇದೆ. ದುರಂತ ನಾಟಕದ ನಾಯಕನು ಯಾವುದಕ್ಕೋ ಒಂದು ಯಾತನೆಯನ್ನು ಅನುಭವಿಸುತ್ತಾನೆ ಮತ್ತು ಅದರ ಪರಿಣಾಮಗಳನ್ನು ಎದುರಿಸುತ್ತಾನೆ. ವಾಸ್ತವವಾಗಿ ವ್ಯಕ್ತಿಯು ಹಾಗೆ ಯಾಕೆ ಆಗುತ್ತಾನೆ ಎನ್ನುವ ಪ್ರಶ್ನೆಯನ್ನು ಅವುಗಳು ಎತ್ತುತ್ತವೆ. ಇಲ್ಲಿ ನೋಡಬೇಕಾದ್ದು ಬೇರೆ, ಕೇಡು ಎನ್ನುವುದು ಒಂದು ನೈತಿಕವಾದ ಪ್ರಶ್ನೆಯೂ ಆಗುತ್ತದೆ. ಆದರೆ ವ್ಯಕ್ತಿಗೆ ಒಂದು ಮುಗ್ಧತೆಯು ಇದೆ. ಈಗ ದೇವರು

ಮತ್ತು ಅವನ ಪ್ರಶ್ನೆಗಳು ಮುಂದೆ ಬರುವುದಿಲ್ಲ. ದುರಂತವು ಬೇರೆಯಾಗಿದೆ. ವ್ಯಕ್ತಿ ಮತ್ತು ಅವನ ಹುಚ್ಚುತನವು ವ್ಯಕ್ತಿಯನ್ನು ನೋಡುವ ಕ್ರಮಗಳು ದುರಂತಕ್ಕೆ ಕಾರಣವಾಗುತ್ತವೆ. ಸಂಕ್ರಾಂತಿ ನಾಟಕದಲ್ಲಿ ಈ ಮಾದರಿಯ ಸೂಚನೆಗಳು ಇವೆ. ತುಘಲಕ್ ನಾಟಕದಲ್ಲಿ ವ್ಯಕ್ತಿ ಮತ್ತು ಅವನ ಆದರ್ಶಗಳು ಹೇಗೆ ಹಾಸ್ಯಾಸ್ಪದವಾಗುತ್ತವೆ ಹಾಗೂ ಅದರಿಂದ ಏನಾಗುತ್ತದೆ ವರ್ತಮಾನದ ಆರ್ಥಿಕತೆಯು ಹೇಗೆ ವ್ಯಕ್ತಿಯನ್ನು ನೋಡುತ್ತದೆ ಎನ್ನುವುದೂ ಇಲ್ಲಿ ಮುಖ್ಯ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಸ್ತಿತ್ವಕ್ಕೆ ತಾನೇ ಜವಾಬ್ದಾರನೂ ಆಗುತ್ತಾನೆ ಎನ್ನುವುದು ಇಲ್ಲಿ ಮುಖ್ಯ. ವ್ಯಕ್ತಿ ಮತ್ತು ಅವನ ಅಂತರಂಗವನ್ನು ಕಾರ್ನಾಡರು ಹೇಳುವುದು ಭಿನ್ನವಾಗಿ. ಅದರಲ್ಲಿ ಭಾಷೆಯೇ ಇದನ್ನು ಸೂಚಿಸುತ್ತದೆ. ಕಾಲ ಮತ್ತು ಕ್ರಿಯೆಗಳ ಸ್ವರೂಪವು ತುಘಲಕ್ ನಾಟಕದಲ್ಲಿ ಬೇರೆಯಾಗುತ್ತವೆ. ಪ್ರೀತಿ ಮತ್ತು ಕರುಣೆಯ ಸ್ವರೂಪಗಳು ಈ ನಾಟಕದಲ್ಲಿ ಭಿನ್ನವಾದ ಅರ್ಥವನ್ನು ಕೊಡುತ್ತದೆ. ತುಘಲಕ್ ನಾಟಕದಲ್ಲಿ ಬರುವುದು ಮುಖ್ಯವಾಗಿ ಮನೋಸ್ಥಿತಿಯ ಚಿತ್ರಣ. ಈಡಿಪಸ್ ನಾಟಕದಲ್ಲಿ ತಾಯಿಯನ್ನು ಮದುವೆಯಾಗಿದ್ದಕ್ಕೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಆದರೆ ತುಘಲಕ್ ಹಾಗೆ ಅಲ್ಲ ಎನ್ನುವುದು ಸ್ಪಷ್ಟ. ತುಘಲಕ್ ನಾಟಕವು ಮುಖ್ಯವಾಗಿ ಧರ್ಮದ ಪ್ರಶ್ನೆಯನ್ನು ಎತ್ತಿಕೊಳ್ಳುವುದೂ ಇಲ್ಲ. ವ್ಯಕ್ತಿಯಾಗಿ ದುರಾದೃಷ್ಟನಾಗುವುದು ಇಲ್ಲಿ ಪ್ರಧಾನವಾದ ವಿಷಯವೂ ಹೌದು. ಸುಖವಿಲ್ಲ. ನೀತಿಯ ಪ್ರಶ್ನೆಯೂ ಅಲ್ಲ. ಆದರೆ ವ್ಯಕ್ತಿಯು ಇಲ್ಲಿ ಸಮಸ್ಯೆಯನ್ನು ಎದುರಿಸುತ್ತಾನೆ. ದೇವರು ನಮ್ಮ ಪಾಪಗಳನ್ನು ಕ್ಷಮಿಸಬಲ್ಲ. ಆದರೆ ವಿಧಿಯು ನಾಯಕನನ್ನು ಪೀಡಿಸುತ್ತಾನೆ. ಅವನ ಸತ್ವವನ್ನು ಪರೀಕ್ಷೆ ಮಾಡುತ್ತಾನೆ. ಅವನು ಅಂದರೆ ನಾಯಕನ ಸೋಲು ಮತ್ತು ವಿಧಿಯ ಗೆಲುವು ಮಾತ್ರವೇ ಅತ್ಯಂತ ಮುಖ್ಯವಾಗುತ್ತದೆ. ದುರಂತ ಮತ್ತು ಅದರ ಹಿನ್ನೆಲೆಯು ಹೇಗೆ ವ್ಯತ್ಯಾಸವಾಗುತ್ತದೆ ಮತ್ತು ಅದರ ಪರಿಣಾಮವು ಯಾವ ಬಗೆಯದು ಎನ್ನುವುದು ನಮಗೆ ತಿಳಿದಿದೆ. ಆದರೆ ಆಧುನಿಕ ಮತ್ತು ಹಿಂದಿನ ದುರಂತಗಳು ಮತ್ತು ಅವುಗಳ ಸ್ವರೂಪವು ಭಿನ್ನವೆಂದು ಅರ್ಥವಾಗುತ್ತದೆ. ನಮಗೆ ಈಗ ದುರಂತ ಮತ್ತು ಅದರ ಭಾವನೆಗಳನ್ನು ಹೇಳಲು ಸ್ವಗತ ಮತ್ತು ಮೇಳದ ಅವಶ್ಯಕತೆಯು ಇಲ್ಲ. ಸ್ವರೂಪವು ಬದಲಾಗಿದೆ. ಗುಣಮುಖದಲ್ಲಿ ದುರಂತವನ್ನು ನಾಟಕದ ಮೊದಲಿಗೆ ಸೂಚಿಸಲಾಗುತ್ತದೆ. ಕ್ರಿಯೆಗಳು ಅದನ್ನು ಸೂಚಿಸುತ್ತವೆ. ದುರಂತ ಮತ್ತು ಅದರ ಭಾವನೆಗಳು ಈಗ ವ್ಯತ್ಯಾಸವೂ ಆಗುತ್ತದೆ. ವಾಸ್ತವವಾಗಿ ಅರಿಸ್ಟಾಟಲ್ ದುರಂತವನ್ನು ಹೇಳುವಾಗ ಅದು ಭಯವನ್ನು ಕೂಡಾ ಹುಟ್ಟಿಸುತ್ತದೆ ಎಂದು ಹೇಳುತ್ತಾನೆ. ಹೆಗೆಲ್ ಹೀಗೆ ಹೇಳುತ್ತಾನೆ– ದುರಂತವು ಒಂದು ದೃಷ್ಟಿಯಿಂದ ಪ್ರಾತಿನಿಧಿಕವಾದದ್ದು ಮತ್ತು ಅದರಲ್ಲಿ ನಿರ್ದಿಷ್ಟತೆ ಎನ್ನುವುದು ಇರುತ್ತದೆ. ಆದ್ದರಿಂದ ನಾವು ಅದನ್ನು ನೋಡುವಾಗ ನಮಗೆ ಅತ್ಯಂತ ಅಗತ್ಯವಾಗಿ ಬೇಕಾಗಿರುವುದು ಅದರ ಪ್ರಾತಿನಿಧಿಕತೆಯ ಸ್ವರೂಪ. ಆದರೆ ಅರಿಸ್ಟಾಟಲ್ ಭಯ ಮತ್ತು ಅದರ ಭಾವನೆಗಳು ಹಾಗೂ ಅದು ಉಂಟು ಮಾಡುವ ಚಿತ್ರಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತಾನೆ. ಹೆಗೆಲ್ ಕಷ್ಟ ಮತ್ತು ಅದರಿಂದ

ಒದಗುವ ಕರುಣೆಯನ್ನು ಕುರಿತು ಹೆಚ್ಚು ವಿವರಿಸುತ್ತಾನೆ. ಆದರೆ ಇದು ಈ ರೀತಿಯ ಭಾವನೆಗಳು ಆಧುನಿಕ ನಾಟಕದಲ್ಲಿ ನಮಗೆ ಕಂಡು ಬರುವುದೂ ಇಲ್ಲ. ಅದರಲ್ಲಿ ಭಿನ್ನವಾದ ಧೋರಣೆಯು ಇದೆ. ಆದ್ದರಿಂದ ಈಗ ನಮಗೆ ಭಿನ್ನವಾದ ದೃಷ್ಟಿಕೋನವೂ ಬೇಕಾಗುತ್ತದೆ. ಅವನ ಮಾತುಗಳನ್ನು ಮತ್ತೊಮ್ಮೆ ಗಮನಿಸಬೇಕು.

ವ್ಯಂಗ್ಯ, ಅರ್ಥಹಿಂಸೆ, ಮತ್ತು ಸ್ವೀಕೃತಿ ಸಿದ್ಧಾಂತ

ಭಾಷೆಯು ಒಂದು ರೀತಿಯಿಂದ ನಮ್ಮ ಆಲೋಚನೆಯನ್ನು ವ್ಯಕ್ತಪಡಿಸಲು ಇರುವ ಮಹತ್ವದ ಪರಿಕರವೂ ಹೌದು. ಅದನ್ನು ಬೇರೆ ಮಾಡಿ ನೋಡಲು ಬರುವುದೂ ಇಲ್ಲ. ಮತ್ತು ಆಲೋಚನೆಯೇ ಬೇರೆ ಭಾಷೆಯೇ ಬೇರೆ ಎಂದು ಹೇಳಲು ಬರುವುದೂ ಇಲ್ಲ. ಆದರೆ ಭಾಷೆಯು ನಮ್ಮ ಆಲೋಚನೆಯನ್ನು ವ್ಯಕ್ತಪಡಿಸಲು ಇರುವ ಸಾಧನವೆಂದು ಹೇಳಿದರೂ ಅದಕ್ಕೆ ಮಿತಿಯೇ ಇಲ್ಲವೆಂದು ಹೇಳಲು ಅಸಾಧ್ಯ. ಅದಕ್ಕೂ ಅನೇಕ ರೀತಿಯ ಮಿತಿಗಳೂ ಇವೆ. ಅಡಿಗರ ಅತ್ಯಂತ ಸುಪ್ರಸಿದ್ಧವಾದ ಒಂದು ರಚನೆಯನ್ನು ಇಲ್ಲಿ ದಾಖಲಿಸಬಹುದು. "ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು" ಇದು ಒಂದು ಆಲೋಚನೆಯನ್ನು ಹೇಳಿಕೊಳ್ಳುವುದೂ ಇಲ್ಲ. ಇಲ್ಲಿ ಭಾಷೆ ಎನ್ನುವುದು ಸ್ವಾಯತ್ತವೂ ಅಲ್ಲ. ಅದಕ್ಕೆ ಅನೇಕ ರೀತಿಯ ಮಿತಿಗಳು ಇವೆ ಎಂದ ತಕ್ಷಣ ಅದು ಬರೀ ಅಂತರವೆಂದು ಹೇಳಲು ಆಗುವುದಿಲ್ಲ. ಈ ಮಾತನ್ನು ನಾವು ಮುಂದಿನ ಮಾತಿಗೆ ಸಂಯೋಜಿಸಬೇಕಾಗುತ್ತದೆ. ಯಾವ ಬೃಂದಾವನವು ಸೆಳೆಯಿತು ಎನ್ನುವುದಕ್ಕೆ ಮಹತ್ವವಿದೆ. ಇದು ಲೌಕಿಕದ ಮಾತು ಅಲ್ಲ. ನಾವು ಇನ್ನೊಬ್ಬರಿಗೆ ಹೇಳುವ ಮಾತಿನ ರೀತಿಯಲ್ಲಿ ಇದು ಇಲ್ಲವಾಗಿದೆ. ನಾವು ಇನ್ನೊಬ್ಬರಿಗೆ ಹೇಳುವ ಮಾತುಗಳಿಗೆ ಸ್ವರೂಪವಿದೆ. ಮತ್ತು ಅದು ರಚನೆಯಾಗಿದೆ ಎಂದು ಮಾತ್ರ ಅರ್ಥ ಮಾಡಿಕೊಳ್ಳಬೇಕು. ನಾವು ಯಾವುದಾದರೂ ಸಂಗತಿಯನ್ನು ಇನ್ನೊಬ್ಬರಿಗೆ ಹೇಳುವಾಗ ಅದರ ಸ್ವರೂಪವು ಭಿನ್ನವಾಗಿರುತ್ತದೆ. ನೇರ ವಿವರಣೆಯ ಧಾಟಿಯು ಮತ್ತೊಂದು ಬಗೆಯಲ್ಲಿ ಇರುತ್ತದೆ. ಯಾವುದು ವ್ಯಕ್ತವಾಗಿದೆಯೋ ಅದನ್ನು ಮಾತ್ರವೇ ನಾವು ಭಾಷೆ ಎಂದು ಕರೆಯುತ್ತೇವೆ. ಭಾಷೆ ಮತ್ತು ನಮ್ಮ ನಡವಳಿಕೆಗೆ ಸಂಬಂಧವಿದೆ. ಕೈಯನ್ನು ಅಲುಗಾಡಿಸಿದರೆ ಅದನ್ನು ನಾವು ಭಾಷೆ ಎಂದು ಹೇಳುವುದಿಲ್ಲ. ಮಾತಿಗೂ ಒಂದು ಆಶಯ ಎನ್ನುವುದು ಇದೆ. ಅದನ್ನು ನಾವು ಮರೆಯಲು ಬರುವುದೂ ಇಲ್ಲ. ಆಶಯವನ್ನು ಹೊರತುಪಡಿಸಿದ ಭಾಷೆಯು ಇರಲು ಸಾಧ್ಯವೇ ಇಲ್ಲ. ಇಲ್ಲಿ ಮತ್ತೊಂದು

ಪ್ರಶ್ನೆಯು ಇದೆ. ಅನ್ಯರನ್ನು ಕುರಿತು ನಾವು ಹೇಳುವಾಗ ಅದರ ರಚನೆಯು ಒಂದು ವಿಧವಿರುತ್ತದೆ. ಭಾಷೆಯೆನ್ನುವುದು ಯಾವುದೇ ರೀತಿಯ ಅಭಿಪ್ರಾಯವನ್ನು ಮಂಡಿಸದೇ ಹೋದರೆ ಅದನ್ನು ವ್ಯರ್ಥವೆಂದು ಹೇಳುತ್ತೇವೆ. ಭಾಷೆಗೂ ಒಂದು ವಿನಿಮಯ ಮೌಲ್ಯವಿದೆ. ಮತ್ತು ಅದಕ್ಕೆ ಉಪಯೋಗತಾ ಮೌಲ್ಯವೂ ಇದೆ. ಯಾವುದಾದರೂ ಸಂಗತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುವುದು ಒಂದು ಕ್ರಮ. ಅದನ್ನು ಸಾಹಿತ್ಯ ವಿಮರ್ಶೆಯಲ್ಲಿ ಶಬ್ದಚಿತ್ರವೆಂದು ಹೇಳುತ್ತೇವೆ. ಯಾವುದನ್ನು ನಾವು ಶಬ್ದಚಿತ್ರವೆಂದು ಹೇಳುತ್ತೇವೆಯೋ ಅದರಲ್ಲಿ ಇರುವ ಸ್ವರೂಪವು ಭಿನ್ನ ಬಗೆಯದು. ಮತ್ತೊಂದು ತಾರ್ಕಿಕ ವಿವರಣೆ. ಈ ಭಾಷಿಕ ಕ್ರಮದಲ್ಲಿ ವಿಷಯದ ಸ್ಪಷ್ಟತೆಯು ಇರುತ್ತದೆ. ಈ ಬಗೆಯ ಭಾಷೆಯನ್ನು ನಾವು ನೋಡುವ ಕ್ರಮವು ಬೇರೆ. ನಮ್ಮ ಭಾವುಕ ಭಾಷೆಯ ಕ್ರಮವೇ ಬೇರೆ. ಭಾವನೆಗಳನ್ನು ಸೂಚಿಸಲು ನಾವು ಭಾಷೆಯನ್ನು ಬಳಸುತ್ತೇವೆ. ಆದರೆ ಭಾವನೆಯೆನ್ನುವುದೇ ಸಂವಹನದಲ್ಲಿ ಬಹಳ ಮುಖ್ಯ. ನಾವು ಯಾರ ಕುರಿತೋ ಮಾತಾಡುತ್ತೇವೆಯೋ ಅದರಲ್ಲಿ ಅನ್ಯರ ಕುರಿತಾದ ವಿವರಣೆಯು ಇರುತ್ತದೆ. ಆದರೆ ಇಲ್ಲಿ ಅನ್ಯ ಎನ್ನುವುದನ್ನು ಹೇಗೆ ನೋಡುತ್ತೇವೆ ಎನ್ನುವುದು ಬಹಳ ಮುಖ್ಯ. ಒಂದು ನಿರ್ದಿಷ್ಟವಾದ ಸಂಗತಿಯನ್ನು ನಾವು ನೋಡುವಾಗ ಅದರಲ್ಲಿ ತಾತ್ವಿಕ ಪ್ರಶ್ನೆಯು ಬರುತ್ತದೆ. ಮತ್ತೊಂದು ಮಹತ್ವದ ಪ್ರಶ್ನೆಯನ್ನು ಇಲ್ಲಿ ಗಮನಿಸುವುದು ಸೂಕ್ತ. ಭಾಷೆಯನ್ನು ಬಳಸುವಾಗ ನಾವು ನಮ್ಮನ್ನು ವಿವರಿಸಿಕೊಳ್ಳುತ್ತೇವೆ ಎಂದು ಭಾವಿಸಿದರೆ ಅದರ ವ್ಯಾಖ್ಯಾನವು ಒಂದು ಬಗೆಯಲ್ಲಿ ಇರುತ್ತದೆ. ಹೀಗಿದ್ದರೂ ಭಾಷೆಯಲ್ಲಿ ಸಂದೇಶ ಮತ್ತು ಆಶಯ ಎರಡೂ ಬಹಳ ಮುಖ್ಯವಾದುದೇ ಆಗಿರುತ್ತದೆ. ಎದುರಲ್ಲಿ ಇರುವವರ ಕುರಿತು ನಾವು ಹೇಳುವಾಗ ಅದರ ಸ್ವರೂಪವು ಬೇರೆ. ಆದರೆ ಯಾರೂ ನಮ್ಮ ಎದುರಲ್ಲಿ ಇರುವುದಿಲ್ಲವೋ ಆಗ ಅದರ ಸ್ವರೂಪವು ಭಿನ್ನ. ಆದರೆ ಭಾಷೆಯನ್ನು ಕೇವಲ ವಿಷಯನಿಷ್ಠವೆಂದು ಹೇಳುವಂತೆ ಇಲ್ಲ. ಹಾಗೆಯೇ ಅದು ಕೇವಲ ಮನೋಕೇಂದ್ರಿತವೂ ಅಲ್ಲ. ಭಾಷೆಯು ಈ ದೃಷ್ಟಿಯಿಂದ ನಮ್ಮ ಸಮಾಜದ ಆಂತರಂಗಿಕ ಸಂಬಂಧವನ್ನು ಸೂಚಿಸುತ್ತದೆ. ಅದರ ಸಂಬಂಧವು ಸನ್ನಿವೇಶವನ್ನು ಆಧರಿಸಿಕೊಂಡು ಇರುತ್ತದೆ. ಭಾಷೆಯ ಸಾಂದರ್ಭಿಕ ಅರ್ಥವು ಬಹಳ ಮುಖ್ಯವಾಗಿದೆ. ಆದರೆ ಅನೇಕರು ಇದನ್ನು ಗಮನಿಸಲು ಹೋಗುವುದೂ ಇಲ್ಲ. ಸನ್ನಿವೇಶವನ್ನು ಆಧರಿಸಿಕೊಂಡ ನಮ್ಮ ಅಭಿವ್ಯಕ್ತಿಯನ್ನು ನಾವು ಸದಾ ಪುನರ್ ನಿರ್ಮಿಸಿಕೊಂಡು ಹೋಗುತ್ತೇವೆ. ಅದರೊಟ್ಟಿಗೆ ನಾವು ಗಮನಿಸಬೇಕಾದ ಮತ್ತೊಂದು ಅಂಶವಿದೆ. ಬೇರೆ ಬೇರೆ ಸಾಮಾಜಿಕ ಗುಂಪುಗಳು ಭಾಷೆಯನ್ನು ತಮ್ಮ ಅಗತ್ಯಕ್ಕೆ ಅನುಸಾರವಾಗಿ ಬಳಸುತ್ತವೆ. ಹಾಗೆ ಬಳಸುವಾಗ ಕೂಡಾ ಅಲ್ಲಿ ಸಾಮಾಜಿಕ ಸಂಬಂಧವು ಮಹತ್ವದ ಸ್ಥಾನವನ್ನು ಪಡೆಯುತ್ತವೆ. ಯಾವುದೇ ಭಾಷೆಯ ತಾತ್ವಿಕ ನಿರೂಪಣೆಗಳು ಅದರ ಬಳಕೆಯ ಚಾರಿತ್ರಿಕ ಸಂದರ್ಭಗಳು ಬಹಳ ಮಹತ್ವದ್ದೂ ಆಗಿದೆ. ಭಾಷೆಯಲ್ಲಿ ನಾವು ಯಾವ ಪದಗಳನ್ನು ಬಳಸುತ್ತೇವೆ ಎನ್ನುವುದು ಬಹಳ ಮುಖ್ಯ. ಭಾಷೆಯಲ್ಲಿ ಬಳಸುವ ಪದಗಳನ್ನು ಅದರ ರೂಪಗಳನ್ನು ನಾವು ಆಶಯಕ್ಕೆ ಅನುಸಾರವಾಗಿ ನೋಡಬೇಕಾಗುತ್ತದೆ. ಭಾಷೆಯಲ್ಲಿನ ಪ್ರತಿಫಲವು ಇರುವುದೇ ಬಹಳ ಮುಖ್ಯವಾಗಿ ಅರ್ಥಕ್ಕೆ ಅನುಸಾರವಾಗಿ. ಆದರೆ ಇದನ್ನು ನಾವು ಯಾವುದನ್ನು

ಯಾವ ಅರ್ಥದಲ್ಲಿ ಬಳಸಿಕೊಳ್ಳುತ್ತೇವೆ ಎನ್ನುವುದೂ ಬಹಳ ಮುಖ್ಯ. ಆದರೆ ನಿರಚನವಾದಿಗಳು ಭಾಷೆ ಮತ್ತು ಅದರ ರಚನೆಯನ್ನು ನೋಡುವಾಗ ಅವುಗಳನ್ನು ಕೇಳುವವನ ಗ್ರಹಿಕೆಯ ಅನುಸಾರವೆಂದು ಮಾತ್ರವೇ ಪರಿಭಾವಿಸುತ್ತಾರೆ. ಅಂದರೆ ಅವರ ಪ್ರಕಾರ ಕೇಳುವವನ ಉದ್ದೇಶವೇ ಮುಖ್ಯ. ಹೇಳುವವನು ಮತ್ತು ಅವನ ಉದ್ದೇಶ, ಅವನ ಅಗತ್ಯಗಳನ್ನು ಅವರು ಮರೆಯುತ್ತಾರೆ. ಅಥವಾ ಹೇಳುವವನ ಉದ್ದೇಶಗಳನ್ನು ಗ್ರಹಿಸುವ ಅಗತ್ಯವೇ ಇಲ್ಲವೆಂದು ಅವರು ತಿಳಿಯುತ್ತಾರೆ. ಭಾಷೆ ಎನ್ನುವುದು ಇರುವುದೇ ನಮ್ಮ ಅಗತ್ಯಕ್ಕಾಗಿ. ಮತ್ತು ಅದನ್ನು ವಿವರಿಸುವಾಗ ಹೇಳುವ ನಾವು ಮತ್ತು ಕೇಳುವ ಅವರು ಬಹಳ ಮುಖ್ಯ. ಆದ್ದರಿಂದ ನಮ್ಮ ಭಾವನೆಗಳು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ಭಾಷೆ ಎನ್ನುವುದು ಅನಿರ್ದಿಷ್ಟವೆಂದು ನಿರಚನವಾದಿಗಳು ಹೇಳುತ್ತಾರೆ. ಆದರೆ ಅದು ಅನಿರ್ದಿಷ್ಟವಾಗುವುದು ಅಸಾಧ್ಯ. ಯಾಕೆಂದರೆ ನಮ್ಮ ಮಾತುಗಳು, ಅದರ ನಿರ್ದಿಷ್ಟತೆಯ ಬಹಳ ಮುಖ್ಯವಾಗಿರುತ್ತದೆ. ಭಾವನೆ ಎನ್ನುವುದು ಕೂಡಾ ಹೇಳುವವನ ಸನ್ನಿವೇಶ, ಅವನ ಅಗತ್ಯ, ಅವನ ಕಾರಣ, ಅವನ ಉದ್ದೇಶ, ಅವನು ಮಾತಾಡುವ ಕಾಲವನ್ನು ಅವಲಂಬಿಸಿಕೊಂಡು ಇರುತ್ತದೆ. ಈ ವಿಷಯಗಳು ಸಂಕೀರ್ಣವೂ ಹೌದು. ಪದಗಳು ಮತ್ತು ವಾಕ್ಯಗಳು ಹೇಳುವವನ ಮನೋಸ್ಥಿತಿಯನ್ನು ಹೊರತು ಮಾಡಿ ರೂಪುಗೊಳ್ಳುವುದೂ ಇಲ್ಲ. ಭಾಷೆ ಮತ್ತು ಅದರ ಹಿನ್ನೆಲೆಯನ್ನು ಕೇಳುವವನು ಗ್ರಹಿಸಬೇಕಾಗುತ್ತದೆ. ಇಲ್ಲದೇ ಹೋದರೆ ಅವನ ಗ್ರಹಿಕೆಗಳು ಅಸಂಬದ್ಧವಾಗುವ ಸಾಧ್ಯತೆಯೂ ಇರುತ್ತದೆ. ಮಾತನ್ನು ಕೇಳುವವನು ತನಗೆ ಬೇಕಾದಂತೆ ಅರ್ಥವಿಸಲು ಹೊರಟರೆ ಕೇಳುಗ ಕಲ್ಪನೆಯೇ ಮಹತ್ವವನ್ನು ಪಡೆಯುತ್ತದೆ. ಮತ್ತು ಅದುವೇ ಅವನ ಅರ್ಥಹಿಂಸೆಗೆ ಕಾರಣವಾಗುತ್ತದೆ. ಕೇಳುಗನು ಅಥವಾ ಓದುಗನು ಒಂದು ಭಾಷೆಯನ್ನು ತನ್ನ ಅಗತ್ಯಕ್ಕೆ ಅನುಸಾರವಾಗಿ ಬಳಸಲು ಹೊರಟರೆ ಅದರ ಸಾಧ್ಯತೆಯು ಬೇರೆಯಾಗುತ್ತದೆ. ಮತ್ತು ಅದು ಓದಿನ ಅರಾಜಕತೆಯೂ ಆಗುತ್ತದೆ. ಹೇಳುವವನು ಕೇಳುಗನಿಗೆ ತನ್ನ ಭಾಷೆಯ ದಿಕ್ಕನ್ನು ಸೂಚಿಸುತ್ತಾನೆ. ಆದ್ದರಿಂದ ಲೇಖಕ ಮತ್ತು ಅವನ ಉದ್ದೇಶವನ್ನೂ ನಾವು ಅರ್ಥಮಾಡಿಕೊಳ್ಳಬೇಕಾದ ಅಗತ್ಯವೂ ಇದೆ. ಬರೆದು ಮುಗಿಸಿದ ಮೇಲೆ ಲೇಖಕನ ಸಹಿಯ ಅಗತ್ಯವು ಬೇಕಾಗಿಲ್ಲ ಎಂದು ಹೇಳುವುದು ಸರಿಯಲ್ಲ. ಕೃತಿಯೆನ್ನುವುದು ಮುಖ್ಯವಾಗಿ ಲೇಖಕನೊಂದಿಗೆ ಒಂದು ಸಂಬಂಧವನ್ನು ಇಟ್ಟುಕೊಂಡೇ ಇರುತ್ತದೆ. ಬರೆದು ಮುಗಿಸಿದ ಮೇಲೆ ಲೇಖಕ ಮತ್ತು ಕೃತಿಯ ಹೊಕ್ಕುಳ ಬಳ್ಳಿಯ ಸಂಬಂಧವನ್ನು ಕಳಚಿಕೊಂಡಿರುತ್ತದೆ ಎಂದು ಹೇಳುವುದು ಸರಿಯಲ್ಲ. ಮಾರುಕಟ್ಟೆಗೆ ಕೃತಿಯೊಂದು ಬಂದ ಮೇಲೆ ಲೇಖಕನು ಕೃತಿಯ ಮಟ್ಟಿಗೆ ಮೃತಪ್ರಾಯನೂ ಆಗುವುದು ಸಾಧ್ಯವಿಲ್ಲ. ಈ ಅರ್ಥದಲ್ಲಿ ಕೇಳುಗನ ಕಿವಿ, ಓದುಗನ ಕಣ್ಣು ಎರಡೂ ಪ್ರಧಾನವೇ ಆಗಿದೆ. ಘಟಕವಾಗಿ ಮಾತ್ರವೇ ಒಂದು ಕೃತಿಯು ಇರುವುದು ಅಸಾಧ್ಯ. ಅಥವಾ ಅನೇಕ ಪಠ್ಯಗಳು ಎಂದು ಇರುವುದೂ ಇಲ್ಲ. ಬರಹದ ಸೀಮಾರೇಖೆ ಅಥವಾ ಕೇಳುಗನ ಸೀಮಾರೇಖೆ ಬಹಳ ಮುಖ್ಯ. ಆದರೆ ನಮ್ಮ ಮಾತುಗಳು ಎಂದು ಹೇಳುತ್ತೇವೆಯೋ ಅದನ್ನು ನಮ್ಮದೇ ಮಾತು ಎಂದು ಹೇಳಲು ಬರುವುದೂ ಇಲ್ಲ. ಅದಕ್ಕೂ ಬಹಳ ದೊಡ್ಡ ಚರಿತ್ರೆಯು ಇದೆ.

ಅದರ ಮೂಲವೇ ಬಹಳ ಭಿನ್ನ. ಅನೇಕರು ಭಾಷೆಯನ್ನು ಕಟ್ಟಿದ್ದಾರೆ. ಮತ್ತು ಬೇರೆ ಬೇರೆ ಸನ್ನಿವೇಶದಲ್ಲಿ ಬದಲಾಗುತ್ತಾ ಬಂದಿದೆ. ಅದನ್ನು ಹೀಗೆ ಎಂದು ಹೇಳಬಹುದು. ಯಾವ ಕಾಲದಲ್ಲಿ ಅದು ಬದಲಾಗಿದೆಯೋ ಅದನ್ನು ಅಗತ್ಯವೆಂದು ಮಾತ್ರವೇ ಹೇಳುತ್ತೇವೆ. ಹೀಗೆ ಹೇಳುವಾಗ ಅದರ ಸ್ವರೂಪವನ್ನು ಅದರ ಲಕ್ಷಣದ ಹಿನ್ನೆಲೆಯಲ್ಲಿ ಮಾತ್ರವೇ ಹೇಳಲು ಸಾಧ್ಯ. ಬರಹ ಮತ್ತು ಅದರ ಮೌಲ್ಯವನ್ನು ಈ ಅರ್ಥದಲ್ಲಿ ಬರೀ ಕೃತಿಗೆ ಮಾತ್ರವೇ ಅನ್ವಯಿಸಲು ಬರುವುದಿಲ್ಲ. ಬರಹ ಮತ್ತು ಅದರ ಹಿನ್ನೆಲೆಯು ಬಹಳ ಮುಖ್ಯ. ಅದನ್ನು ನಾವು ಏಕಕೇಂದ್ರವೆಂದು ಹೇಳುವ ಅಗತ್ಯವಿಲ್ಲ. ಅದನ್ನು ನೋಡುವಾಗ ಬಹಳ ಎಚ್ಚರದಲ್ಲಿ ಇರಬೇಕಾಗುತ್ತದೆ. ಇದನ್ನೇ ಭಕ್ತಿನ್ ಲೇಖಕನ ಉದ್ದೇಶವೆಂದು ಹೇಳುತ್ತಾನೆ. ಮಾತಿನ ಉದ್ದೇಶ ಮತ್ತು ಲೇಖಕನ ಉದ್ದೇಶ ಎರಡೂ ಒಂದೇ ಅಲ್ಲ. ಆದರೆ ಲೇಖಕನೂ ತನ್ನ ಬರಹವನ್ನು ನಿರ್ದಿಷ್ಟವಾದ ಉದ್ದೇಶಕ್ಕಾಗಿಯೇ ಬಳಸುತ್ತಾನೆ. ಮಾತಿಗೂ ಒಂದು ಗುರಿಯು ಇರುತ್ತದೆ. ಆದರೆ ಅದನ್ನು ಮಾತ್ರವೇ ಸರ್ವಸ್ವ ಎಂದು ಯಾರೂ ಹೇಳುವುದಿಲ್ಲ. ಅಭಿವ್ಯಕ್ತಿಗೊಂಡ ಮಾತಿಗೂ ಒಂದು ಚಹರೆಯು ಇರುತ್ತದೆ. ಮತ್ತು ಅದರ ಹಿಂದೆ ಭಾವನೆ ಮತ್ತು ಅನುಭವ ಎನ್ನುವುದು ಇರುತ್ತದೆ. ಮಾತು ಮತ್ತು ಅದರ ಕಾರಣಗಳನ್ನು ನಾವು ನೋಡಲೇಬೇಕಾಗುತ್ತದೆ. ಈ ಸೂತ್ರವೇ ಬರಹಕ್ಕೂ ಅನ್ವಯವಾಗುತ್ತದೆ. ಮಾತಿಗೆ ಒಂದು ಆಳವಾದ ಅರ್ಥಗಳೂ ಇರುತ್ತವೆ. ಅದನ್ನು ಹೀಗೆಯೂ ಹೇಳಬಹುದು: ಮಾತು ಮತ್ತು ಅದರ ಅಭಿವ್ಯಕ್ತಿ ಮಾತ್ರವೇ ಬಹಳ ಮುಖ್ಯವೆಂದು ಭಾವಿಸಬೇಕಾಗಿಲ್ಲ. ಆಮದು ಎನ್ನುವುದು ನಿರ್ವಾತವೂ ಅಲ್ಲ. ಭಾಷೆ ಮತ್ತು ಅದರ ವಸ್ತು, ಅದರ ಹಿನ್ನೆಲೆಯಲ್ಲಿ ಇರುವ ಅರ್ಥವು ಕೂಡಾ ಬಹಳ ಮುಖ್ಯವೆಂದು ನಾವು ಭಾವಿಸಬೇಕಾಗುತ್ತದೆ. ಭಾಷೆಯನ್ನು ನಾವು ವ್ಯಕ್ತಪಡಿಸುವಾಗ ಸಹಜವೆಂದು ಭಾವಿಸಬೇಕಾಗುತ್ತದೆ. ಅದು ಸರಳವಾಗಿ ಇದ್ದಾಗ ಅದನ್ನು ಸ್ವಭಾವ ಎಂದು ಕರೆಯುತ್ತೇವೆ. ಆದರೆ ಯಾವಾಗ ಮಾತು ಸಂಕೀರ್ಣವಾಗಿದೆಯೋ ಅದನ್ನು ನಾವು ವಕ್ರತೆಯ ಅಭಿವ್ಯಕ್ತಿ ಕರೆಯುತ್ತೇವೆ. ಭಾಷೆಯಲ್ಲಿ ಯಾವಾಗ ಶಬ್ದ ಚಿತ್ರವು ಬರುತ್ತದೆಯೋ ಅದರ ಹಿಂದೆ ಇರುವ ಉದ್ದೇಶವು ಸ್ಪಷ್ಟವೆಂದು ಹೇಳಲು ಸಾಧ್ಯ. ಭಾಷೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರೆ ಅದರ ಗುರಿಯು ನೇರವಾಗಿರುತ್ತದೆ. ಮತ್ತು ಅದನ್ನು ವಾಸ್ತವದ ಕುರಿತು ಲೇಖಕನ ವಿವರಣೆಯೆಂದು ಹೇಳುವುದೂ ಸಾಧ್ಯ. ಆದರೆ ವ್ಯಕ್ತಿವಾದಿ ನಿರೂಪಣೆಯಲ್ಲಿ ಮಾತ್ರವೇ ಒಬ್ಬ ವ್ಯಕ್ತಿಯ ಗ್ರಹಿಕೆಯು ಮುಖ್ಯವಾಗುತ್ತದೆ. ಆದರೆ ಕುವೆಂಪು ಕಾದಂಬರಿಗಳು ಮತ್ತು ಅದರ ವಾಸ್ತವವು ಒಂದು ರೀತಿಯಲ್ಲಿ ಇರುತ್ತದೆ. ಅವರು ಬರೆದ್ದದು ಸಮಾಜವನ್ನು. ಕಾರಂತರು ಬರೆದದ್ದು ಸಮಾಜವನ್ನೇ. ದೇವನೂರು ಬರೆದುದು ಕೂಡಾ ಸಮಾಜವನ್ನೇ ಯಾವುದನ್ನು ನಾವು ಸಾಮಾಜಿಕ ವಾಸ್ತವವೆಂದು ಹೇಳುತ್ತೇವೆಯೋ ಅದು ಕೂಡಾ ನೈತಿಕವಾಗಿ ಕಟ್ಟಲಾಗಿರುವ ಒಂದು ವ್ಯವಸ್ಥೆ. ಈ ಮಾದರಿಯ ನೀತಿಗಳನ್ನು ಲಂಕೇಶರ ಅಕ್ಕ ಕಾದಂಬರಿಯು ಪ್ರಶ್ನೆ ಮಾಡುತ್ತದೆ. ಕಾಫ್ಕಾನ ವಾಸ್ತವ ಮತ್ತು ಅದರ ಹಿಂದೆ ಇರುವ ಪ್ರಶ್ನೆಗಳು ಬೇರೆಯಾಗಿವೆ. ಕಾಫ್ಕಾನ ವಾಸ್ತವ ಮತ್ತು ಅದರ ಸಾಧ್ಯತೆಗಳು ಬೇರೆಯಿದ್ದವು. ಅದು ಕಲ್ಪಿತ ಮತ್ತು ಭಯಾನಕ

ವಾಸ್ತವವಾಗಿದೆ. ಆದರೆ ಅವುಗಳು ಕೂಡಾ ಮನುಷ್ಯರ ಸಂಬಂಧವನ್ನು ಹೇಳುತ್ತವೆ. ಆದರೆ ಈ ಸಂಬಂಧಗಳು ಕೂಡಾ ಮನಸ್ಸಿಗೆ ಸಂಬಂಧಪಟ್ಟವು. ಯಾವುದೇ ಸಂಗತಿಗಳು ನಮ್ಮನ್ನು ಹೇಗೆ ಆಳುತ್ತವೆ ಎನ್ನುವುದೂ ಇಲ್ಲಿ ಮುಖ್ಯ. ನಾವು ಸಂಪ್ರದಾಯ ಮತ್ತು ಆಚರಣೆಗಳನ್ನು ಒಪ್ಪಿಕೊಂಡಿದ್ದೇವೆ. ಅದು ಒಂದು ಯಜಮಾನಿಕೆಯನ್ನು ವಹಿಸುತ್ತದೆ. ಯಾವುದು ಒಳ್ಳೆಯತನ ಮತ್ತು ಯಾವುದು ಕೆಡುಕು ಎನ್ನುವುದೂ ಕೂಡಾ ವಿವೇಕ ಸಂಬಂಧಪಟ್ಟದ್ದು. ಸಂಸ್ಕಾರ ಕಾದಂಬರಿಯ ಪ್ರಾಣೇಶಾಚಾರ್ಯನು ಧಾರ್ಮಿಕವಾದ ಯಜಮಾನಿಕೆಯನ್ನು ಅನುಭವಿಸಿದವನು. ಅವನೇ ಅದರ ಸುಳಿಗೆ ಸಿಕ್ಕಿದವನು. ಬಾಹ್ಯವು ಹೇಗೆ ನಮ್ಮನ್ನು ತೊಡಕಿಗೆ ಸಿಕ್ಕಿಸುತ್ತದೆ ಎನ್ನುವುದಕ್ಕೆ ಅವನೇ ಅತ್ಯುತ್ತಮ ಉದಾಹರಣೆಯೂ ಆಗಿದ್ದಾನೆ. ಆದರೆ ಅಕ್ಕ ಕಾದಂಬರಿಯ ದೇವರಿಗೆ ಆ ಸಮಸ್ಯೆಯು ಇಲ್ಲವಾಗಿದೆ. ಹೇಗೆ ಧಾರ್ಮಿಕವಾದ ಕಾನೂನುಗಳು ನಮ್ಮನ್ನು ಆಳುತ್ತವೆ ಎನ್ನುವುದಕ್ಕೆ ಸಂಸ್ಕಾರ ಕಾದಂಬರಿಯು ಅತ್ಯುತ್ತಮವಾದ ಉದಾಹರಣೆಯ. ಅದು ಕೆಲವು ಒತ್ತಡಗಳನ್ನು ಹೇರುತ್ತವೆ. ಧಾರ್ಮಿಕವಾದ ದುರಹಂಕಾರವು ಅನೇಕ ಸಂದರ್ಭದಲ್ಲಿ ಸಂವೇದನೆಯನ್ನು ಹಾಳು ಮಾಡುತ್ತವೆ ಎನ್ನುವುದಕ್ಕೂ ಅದೇ ಉದಾಹರಣೆ. ನ್ಯಾಯ ಮತ್ತು ಸತ್ಯವನ್ನು ಅವುಗಳು ನಿರೂಪಿಸುವ ರೀತಿಯು ಭಿನ್ನವಾಗಿದೆ. ಆದರೆ ಅಕ್ಕ ಕಾದಂಬರಿಯ ದೇವರಿಗೆ ಧಾರ್ಮಿಕವಾದ ಮೌಲ್ಯಗಳು ಮುಖ್ಯವಾಗುವುದೂ ಇಲ್ಲ. ಅವಳ ಸತ್ಯಗಳೇ ಬೇರೆಯಾಗುತ್ತವೆ. ಅವಳಿಗೆ ಅನೇಕ ವಿಷಯಗಳು ಅತ್ಯಂತ ಸ್ಟುಪಿಡ್ ಥರ ಅನಿಸುತ್ತದೆ. ದೇವರ ಎದುರು ಕೈಕಟ್ಟಿ ಕುಳಿತುಕೊಳ್ಳುವುದು ಮತ್ತು ಪ್ರಾರ್ಥನೆಯನ್ನು ಮಾಡುವುದೂ ಒಂದು ರೀತಿಯಿಂದ ಬಂಧನ. ಪ್ರಾಣೇಶಾಚಾರ್ಯನ ನಡವಳಿಕೆಯು ಈ ಬಗೆಯದು ಹೌದು. ಕೆಲವು ಧಾರ್ಮಿಕವಾದ ರೀತಿಗೆ ಮತ್ತು ನಿಯಮಗಳಿಗೆ ಅರ್ಥಗಳು ಬೇರೆಯಿರಬಹುದು. ಆದರೆ ಅವುಗಳು ಇರುತ್ತವೆ. ಧರ್ಮದ ಎದುರು ಮನುಷ್ಯನೂ ಆಳೇ ಆಗಿದ್ದಾನೆ. ಅವನ ನಂಬಿಕೆಗಳು ಹಾಳಾದಾಗ ಅವನು ಮತ್ತೆ ತನ್ನ ದಾರಿಯನ್ನು ಬೇರೆ ಮಾಡಿಕೊಳ್ಳುತ್ತಾನೆ. ನಂಬಿಕೆ ಮತ್ತು ಅದರ ಪರೀಕ್ಷೆಯೇ ಇಲ್ಲಿ ಮುಖ್ಯವಾಗುತ್ತದೆ. ಆಳುಗಳು ನಮ್ರವಾಗಿರಬೇಕು. ವಿಶ್ವಾಸಾರ್ಹ ಆಗಿರಬೇಕು, ವಿನಯವಂತರಾಗಿರಬೇಕು ಎಂದು ಬೂರ್ಜ್ವಾಗಳು ನಂಬುತ್ತಾರೆ. ಅದನ್ನು ದಾಟಿದರೆ ಕಷ್ಟ. ನಂಬಿಕೆಯೇ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ನಂಬಿಕೆಯನ್ನು ದಾಟಿದರೆ ಪಾಪ ಪ್ರಜ್ಞೆಯು ಹೇಗೆ ಕಾಡುತ್ತದೆ ಎನ್ನುವುದಕ್ಕೆ ಸಂಸ್ಕಾರ ಕಾದಂಬರಿಯೇ ಸಾಕ್ಷಿ. ಯಾವ ನಂಬಿಕೆಗೆ ನಾವು ಪ್ರಾಮಾಣಿಕರು ಆಗಬೇಕಾಗುತ್ತದೆ ಎಂದು ಮಾತ್ರವೇ ಯೋಚಿಸಬೇಕು. ಅನೇಕ ಬಾಹ್ಯ ಆಚರಣೆಗಳು ನಮ್ಮ ಸುಪ್ತವಾದ ಪ್ರಜ್ಞೆಯಲ್ಲಿ ದಾಖಲಾಗುತ್ತದೆ. ಅದನ್ನು ಜನಪ್ರಿಯ ರಾಜಕಾರಣವು ಅದನ್ನು ಅಂಗೀಕರಿಸುತ್ತದೆ. ಪ್ರಭುತ್ವವು ನಂಬಿಕೆಯನ್ನು ತನಗೆ ಬೇಕಾದ ರೀತಿಯಲ್ಲಿ ಬಳಸುತ್ತದೆ. ಅದು ಸಂವೇದನೆಯನ್ನು ಕಳೆದುಕೊಂಡ ಸೂಜಿ ಮದ್ದಿನಂತೆ. ರಾಚನಿಕವಾದ ಒಂದು ಮಟ್ಟವನ್ನು ಮಾತ್ರವೇ ಸೂಚಿಸುತ್ತದೆ. ಮನುಷ್ಯರು ರಾಜ್ಯದ ವ್ಯವಸ್ಥೆಯಲ್ಲಿ ಹೇಗೆ ಇರಬೇಕೆಂದು ಅದು ಹೇಳುತ್ತದೆ. ಅದು ತನಗೆ ಬೇಕಾದ ಭಾಷೆಯನ್ನು ಬಳಸುತ್ತದೆ. ವಾಸ್ತವವಾಗಿ ಭಾಷೆಯೆಂದರೆ ಅದು ಒಂದು ರೂಪ. ಮತ್ತೊಂದು ಅರ್ಥದಲ್ಲಿ ಮಾತಿನ ನಿರೂಪಣೆ ಮತ್ತು ಅದು ಸ್ವಯಂ ಸಂಪೂರ್ಣವೆಂದು ಹೇಳಬೇಕಾಗಿಲ್ಲ.

ಭಾಷೆ ಎಂದರೆ ಅದು ವ್ಯಕ್ತಿಯ ಮನೋಸ್ಥಿತಿಯ ಅಭಿವ್ಯಕ್ತಿ ಎಂದೂ ತಿಳಿಯಬೇಕಾಗುತ್ತದೆ. ಮನೋಸ್ಥಿತಿಯು ಆಗಾಗ ಬದಲಾಗುತ್ತಾ ಹೋಗುತ್ತದೆ. ಅದಕ್ಕೆ ಅನುಸಾರವಾಗಿಯೇ ಮಾತುಗಳು ಇರುತ್ತದೆ. ಮನಸ್ಸು ಮತ್ತು ಭಾಷಿಕ ನಿಯಮಗಳ ಹೊಂದಾಣಿಕೆಯು ಬಹಳ ಮುಖ್ಯ. ನಮ್ಮ ಮನಸ್ಸು ಮತ್ತು ನಮ್ಮ ಸೃಜನಶೀಲತೆಯು ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತದೆ. ಅದು ಅಗತ್ಯವೂ ಹೌದು. ಸೃಜನಶೀಲತೆ ಮತ್ತು ಭಾಷೆಯ ಹೊಂದಾಣಿಕೆಯೇ ಬಹಳ ಮುಖ್ಯ. ಭಾಷೆ ಮತ್ತು ಸೃಜನಶೀಲತೆ ಮತ್ತು ಅದರ ಸಂವಹನವನ್ನು ಒಂದು ಇಡಿಯಾದ ಪ್ರತಿಕ್ರಿಯೆ ಎಂದು ಹೇಳಬೇಕಾಗಿಲ್ಲ. ಅದಕ್ಕೂ ಒಂದು ತಾತ್ವಿಕತೆ ಎನ್ನುವುದೂ ಇರುತ್ತದೆ. ಚಿತ್ರ ಕಲಾವಿದನು ಬಣ್ಣಗಳ ಮೂಲಕ ಮಾತ್ರವೇ ತನ್ನ ಅಭಿವ್ಯಕ್ತಿಯನ್ನು ಸಾಧಿಸುತ್ತಾನೆ. ಅಲ್ಲಿ ಭಾಷೆಯು ಉಪಯುಕ್ತವಲ್ಲ. ಆದರೆ ಲೇಖಕನು ಮಾತ್ರವೇ ಭಾಷೆಯನ್ನು ಬಳಸುತ್ತಾನೆ. ಇಲ್ಲಿ ಬಳಕೆ ಮಾತ್ರವೇ ಮುಖ್ಯ. ಸೃಜನ ಪ್ರಕ್ರಿಯೆಯು ಭಾಷೆಯ ಒಂದು ಅಭಿವ್ಯಕ್ತಿಯಾಗಿರುತ್ತದೆ. ವ್ಯಕ್ತಿಯು ಯಾವ ರೀತಿಯಲ್ಲಿ ಯಾವ ರೀತಿಯ ಅಭಿವ್ಯಕ್ತಿಯನ್ನು ಸಾಧಿಸುತ್ತಾನೆ ಎನ್ನುವುದು ಬಹಳ ಮುಖ್ಯ. ಇಲ್ಲಿ ಮತ್ತೊಂದು ಅಂಶವಿದೆ. ಯಾವಾಗ ನಾವು ಯಾವುದನ್ನು ಬಳಸುತ್ತೇವೆಯೋ ಅದಕ್ಕೆ ಕೇವಲ ತಾತ್ಕಾಲಿಕ ಅರ್ಥ ಮಾತ್ರವೇ ಇದೆ ಎಂದು ಹೇಳಬೇಕಾಗಿಲ್ಲ. ನಿರೂಪಣೆಯಲ್ಲಿ ತನ್ನ ಅನುಭವ ಮತ್ತು ಪರರ ಅನುಭವ ಎನ್ನುವುದು ಬೇರೆಯಾಗಿರುತ್ತದೆ. ತನ್ನ ಅನುಭವವನ್ನು ಹೇಳುವುದು ಒಂದು ರೀತಿಯಲ್ಲಿ. ಆದರೆ ಬೇರೊಬ್ಬರನ್ನು ನಿರೂಪಿಸುವ ಕ್ರಮವು ಬೇರೆಯಾಗಿರುತ್ತದೆ. ಹೀಗಾಗಿಯೇ ಅದಕ್ಕೆ ಕೆಲವು ಗುಣವಿರುತ್ತದೆ. ಮಾತು ಮತ್ತು ಬರಹವೆರಡೂ ಮನಸ್ಸಿನ ಭಾವನೆಗಳನ್ನು ಹೇಳುತ್ತದೆ ಎಂದಾಗ ಅದನ್ನು ಮಾತ್ರವೇ ಪ್ರಮಾಣವೆಂದು ಹೇಳುವುದು ಅಗತ್ಯವಾಗಿದೆ. ಭಾಷೆಯ ಸಂವಹನದಲ್ಲಿ ವಿಶಿಷ್ಟತೆ ಇರುವುದು ಅದರ ವಾಸ್ತವತೆಯಲ್ಲಿಯೂ ಹೌದು. ನಾವು ಯಾಕೆ ಮಾತಾಡುತ್ತೇವೆ ಅಥವಾ ಯಾಕೆ ಬರೆಯುತ್ತೇವೆ ಎನ್ನುವುದನ್ನು ನಮ್ಮದೇ ಕಾರಣವಿರುತ್ತದೆ. ಮನಸ್ಸು ಮತ್ತು ಭಾಷೆಗೆ ದ್ವಂದ್ವಾತ್ಮಕತೆಯು ಇರುತ್ತದೆ. ಆದರೆ ನಾವು ಭಾಷೆಯ ಮೂಲಕವೇ ಹೊರಗಿನ ಜಗತ್ತನ್ನು ನೋಡುತ್ತೇವೆ. ಮತ್ತು ಅದಕ್ಕೆ ಅನುಗುಣವಾಗಿಯೇ ಪ್ರತಿಕ್ರಿಯಿಸುತ್ತೇವೆ. ಅದು ನಮ್ಮ ಗ್ರಹಿಕೆಗೆ ಸಂಬಂಧಪಟ್ಟಿದ್ದು. ಮತ್ತು ಗ್ರಹಿಕೆಯು ನಮ್ಮ ಪ್ರಜ್ಞೆಯನ್ನು ಸೂಚಿಸುತ್ತದೆ. ಹಾಗೂ ಗ್ರಹಿಕೆಯು ನಮ್ಮ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟಿದ್ದೂ ಹೌದು. ಮಾತು ಮತ್ತು ಬರಹ ಎರಡೂ ಈ ದೃಷ್ಟಿಯಿಂದ ಒಂದು ಆವರಣವನ್ನು ಹೊಂದಿರುತ್ತದೆ. ಅದನ್ನು ನಾವು ಮರೆಯಬಾರದು. ನಾವು ಈ ಆವರಣವನ್ನು ಹೊರತುಪಡಿಸಿದರೆ ಅದು ಭಿನ್ನವಾಗುತ್ತದೆ. ಅದರ ಸ್ವರೂಪವನ್ನು ನಾವು ಪ್ರತ್ಯೇಕವೆಂದು ಹೇಳುವ ಸಾಧ್ಯತೆಯೂ ಇರುತ್ತದೆ. ಆದರೆ ಭಾಷೆಯನ್ನು ನಾವು ನೋಡುವಾಗ ಅದರ ಹಿನ್ನೆಲೆಯನ್ನು ಕೃತಿಯಲ್ಲಿಯೂ ನೋಡುವುದು ಅನಿವಾರ್ಯ. ಯಾವುದನ್ನು ಬರೆದಿದ್ದೇವೆಯೋ ಅದು ಮಾತ್ರವೇ ಸತ್ಯವೆಂದು ರೂಪನಿಷ್ಠರು ಹೇಳುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಅದರ ಬದಲು ಅದು ಬರೆದಿರುವ ಮತ್ತು ಬರೆಯದಿರುವ ಪಠ್ಯಗಳ ನಡುವೆ ನಡೆಯುವ ಪ್ರಕ್ರಿಯೆ. ಮಾತು ಮತ್ತು ಅದರ ಪರಿಣಾಮಗಳನ್ನು ನಾವು ಒಂದೇ ರೀತಿಯಲ್ಲಿ

ನೋಡಲು ಬರುವುದೂ ಇಲ್ಲ. ಮಾತಿಗೆ ಯಾವ ಸಾಮಾಜಿಕ ಹೊಣೆಗಾರಿಕೆಯು ಇದೆಯೋ ಅದೇ ರೀತಿಯಲ್ಲಿ ಬರಹಕ್ಕೂ ಸಾಮಾಜಿಕ ಹೊಣೆಗಾರಿಕೆಯು ಇರುತ್ತದೆ. ಅದನ್ನು ಲೇಖಕ ಮಾತ್ರವೇ ಹೊರುತ್ತಾನೆ ಎಂದು ಅರ್ಥವಲ್ಲ. ಈ ದೃಷ್ಟಿಯಿಂದ ಭಾಷೆಗೆ ಅದರದೇ ಆದ ವಿನ್ಯಾಸವೂ ಇರುತ್ತದೆ. ಅದನ್ನು ನಾವು ಯಾವ ಕೋನದಲ್ಲಿ ನೋಡುತ್ತೇವೆ ಎನ್ನುವುದು ಬಹಳ ಮುಖ್ಯ. ಆದರೆ ಯಾವುದನ್ನು ನಾವು ಭಾಷೆ ಮತ್ತು ಅದರ ವಿಶಿಷ್ಟತೆಯೆಂದು ಹೇಳುತ್ತೇವೆಯೋ ಅದು ಕೆಲವರಿಗೆ ಮಾತ್ರವೇ ಸೀಮಿತವಾದ ಪ್ರಕ್ರಿಯೆ ಅಲ್ಲ. ಮತ್ತು ಅದನ್ನು ಪಠ್ಯಕ್ಕೆ ಮಾತ್ರವೇ ಸೀಮಿತ ಮಾಡುವುದೂ ಸರಿಯಲ್ಲ. ಭಾಷೆಗೂ ಒಂದು ಚೌಕಟ್ಟು ಇರುತ್ತದೆ. ಮತ್ತು ಅದಕ್ಕೆ ಅದರದೇ ಆದ ನಿಯಮಗಳೂ ಇರುತ್ತದೆ. ಭಾಷೆ ಮತ್ತು ಅದರ ಸಂಬಂಧವು ಬೇರೆ ಬೇರೆ ಮಾದರಿಯಲ್ಲಿ ಇರಲು ಸಾಧ್ಯ. ಆದರೆ ಅದನ್ನು ನಾವು ನೋಡುವ ಕ್ರಮವು ಬೇರೆ. ಭಾಷೆಗೂ ಒಂದು ನಿರ್ದಿಷ್ಟವಾದ ಚಹರೆಯೂ ಇದೆ. ಅದನ್ನು ಉಲ್ಲಂಘಿಸಿಕೊಂಡು ನೋಡಿದರೆ ಅದರ ಸ್ವರೂಪವೇ ಬೇರೆಯಾಗುತ್ತದೆ. ರೂಪನಿಷ್ಠರು ಭಾಷೆಯನ್ನು ಅದರ ಅಪರಿಚಿತೀಕರಣದಲ್ಲಿ ನೋಡುತ್ತಾರೆ. ಅವರಿಗೆ ಅದು ಮುಖ್ಯವಾಗಿದೆ. ಒಂದು ಪಠ್ಯದಲ್ಲಿ ಒಂದು ಪದವು ಉಂಟು ಮಾಡುವ ಆಗಂತುಕತೆಯು ಕೃತಿಯ ಶಕ್ತಿಯೆಂದು ಅವರು ಭಾವಿಸುತ್ತಾರೆ. ಅದರ ವಕ್ರತೆಯು ಅವರಿಗೆ ಬಹಳ ಮುಖ್ಯವೆಂದು ಅವರಿಗೆ ಅನಿಸುತ್ತದೆ. ಪಠ್ಯ ಮತ್ತು ಅದರ ರೂಪದೊಳಗಿನ ಭಾಷಿಕ ಅಪರಿಚಿತತೆಯು ಬಹಳ ಮುಖ್ಯವೆಂದು ಅವರಿಗೆ ಅನಿಸುತ್ತದೆ. ಆದರೆ ಒಂದು ಪಠ್ಯವನ್ನು ಅದರ ಹಿಂದು ಮುಂದನ್ನು ನೋಡದೇ ಹೇಳುವುದು ಅಸಾಧ್ಯ. ಪಠ್ಯವನ್ನು ಮಾತ್ರವೇ ನೋಡಿ ಅದು ಮತ್ತು ಅದರ ಅಸ್ತಿತ್ವವನ್ನು ಹೇಳಲು ಬರುವುದೂ ಇಲ್ಲ. ಪಠ್ಯ ಮತ್ತು ಅದರ ಅಸ್ತಿತ್ವ ಮಾತ್ರವೇ ಕೃತಿಯಲ್ಲ. ಅದನ್ನು ಆ ರೀತಿಯಲ್ಲಿ ಹೇಳಲು ಬರುವುದೂ ಇಲ್ಲ. ಯಾವುದೇ ಕೃತಿಯನ್ನು ದೇವರು ರಚಿಸಿಲ್ಲ. ಅದು ಮಾನವ ನಿರ್ಮಿತ ಎನ್ನುವುದನ್ನು ಮರೆಯಬಾರದು. ಭಾಷೆಯ ಅರ್ಥವಂತಿಕೆಯು ಇರುವುದು ಕೇಳುಗನಲ್ಲಿ ಅಲ್ಲವೆನ್ನುವುದನ್ನು ಇಲ್ಲಿ ಅರ್ಥಮಾಡಿಕೊಳ್ಳುವುದು ಅಗತ್ಯ. ಕೇಳುಗ ಮತ್ತು ಹೇಳುವವನ ನಡುವಣ ಸಂಬಂಧವನ್ನು ನಾವು ಒಂದು ಕೃತಿಯ ಒಳಗೆ ಕಾಣುವುದು ಅಸಾಧ್ಯ. ಯಾವುದೇ ನೇರ ಮಾತುಗಳಿಗೂ ಪರೋಕ್ಷ ಮಾತುಗಳಿಗೂ ಅನೇಕ ವ್ಯತ್ಯಾಸವಿದೆ. ಅದೇ ರೀತಿಯಲ್ಲಿ ಕೇಳುವವನು ಕೃತಿಯ ಒಳಗೆ ಇಲ್ಲವೆಂದ ಮಾತ್ರಕ್ಕೆ ಅವನು ಬೇರೆ ಎಲ್ಲೋ ಇದ್ದಾನೆ ಮತ್ತು ಅವನು ತನಗೆ ಬೇಕಾದಂತೆ ಕೃತಿಯನ್ನು ಓದುತ್ತಾನೆ ಎಂದು ಹೇಳುವುದು ಅಸಾಧ್ಯ. ಕೃತಿಯೂ ಕೂಡಾ ಆಶಯ ಸಹಿತವೇ ಹೊರತು ಬೇರೆ ಏನೂ ಅಲ್ಲ. ಯಾವುದೇ ಕೃತಿಯು ವಸ್ತು ರಹಿತವಾದ ಸಂಗತಿಯೆಂದು ಹೇಳಬೇಕಾದ ಅಗತ್ಯವಿಲ್ಲ. ಅದು ಆಶಯಕ್ಕೆ ಅನುಸಾರವಾಗಿಯೇ ಇರುತ್ತದೆ. ಅದಕ್ಕೆ ಅನುಗುಣವಾಗಿಯೇ ತನ್ನ ಭಾಷೆಯನ್ನು ಬಳಸುತ್ತದೆ. ಭಾಷೆ ಮತ್ತು ಅರ್ಥದ ರಚನೆಯೂ ಹೌದು. ಯಾವುದೇ ಮಾತು ಮತ್ತು ಅದರ ಅರ್ಥವನ್ನು ನಾವು ನಮಗೆ ಬೇಕಾದ ರೀತಿಯಲ್ಲಿ ಕಟ್ಟಿಕೊಳ್ಳಲು ಬರುವುದೂ ಇಲ್ಲ. ಮಾತು ಅದರ ಸಾಧ್ಯತೆಯನ್ನು ನಾವು ಹೇಗೆ ನೋಡುತ್ತೇವೆ ಎನ್ನುವುದನ್ನು ನಾವು ಅದರ ರಚನೆಯಲ್ಲಿ ನೋಡುತ್ತೇವೆ. ಅದರ ರಚನೆಯು ಬೇರೆಯಾಗುತ್ತಾ

ಹೋಗುವುದು ಆಯಾ ಸಂದರ್ಭಕ್ಕೆ ಅನುಸಾರವಾಗಿ ಮಾತ್ರ. ಹಾಗೆ ನೋಡುವುದಿದ್ದರೆ ಯಾವುದೇ ರಚನೆಯು ಅದರ ಆಂತರಿಕವಾದ ನೆಯ್ಗೆಗೆ ಅನುಸಾರವಾಗಿ ಬೇರೆಯಾಗುತ್ತಾ ಹೋಗುತ್ತದೆ. ಯಾವುದು ಕೃತಿಯಾಗಿದೆಯೋ ಅದನ್ನು ನಾವು ಅದರ ನೆಯ್ಗೆಯ ಮೂಲಕವೇ ನೋಡುತ್ತಾ ಬಂದಿದ್ದೇವೆ. ಆದರೆ ಈ ನೆಯ್ಗೆಯು ಅರ್ಥವನ್ನು ಆಧರಿಸಿಕೊಂಡೇ ಇರುತ್ತದೆ. ಭಾಷೆಯು ಕೇವಲ ಕೃತಿಯನ್ನು ಮಾತ್ರವೇ ಅವಲಂಬಿಸಿಕೊಂಡಿದೆಯೆಂದಾಗಲೀ ಅಥವಾ ಅದಕ್ಕೆ ಅತ್ಯಂತ ವಿಶಿಷ್ಟವಾದ ಶಕ್ತಿಯು ಇದೆಯೆಂದಾಗಲೀ ನಾವು ಹೇಳಲು ಬರುವುದಿಲ್ಲ. ಅದರ ಸ್ವರೂಪದಲ್ಲಿ ಇರುವ ಅನೇಕ ಭಿನ್ನತೆಯಾಗಲೀ ಸಾಂದರ್ಭಿಕವಾಗುತ್ತಾ ಹೋಗುತ್ತದೆ. ರೂಪನಿಷ್ಟರು ಸಾಹಿತ್ಯವನ್ನು ಬಹಳ ದೊಡ್ಡ ಮಾನದಂಡವೆಂಬಂತೆ ನೋಡುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಭಾಷೆಯು ಕೃತಿಯಲ್ಲಿ ಒಂದು ಭಾಗ ಮಾತ್ರವೇ ಆಗಿದೆ. ಅದನ್ನು ಕೃತಿಯಿಂದ ಹೊರತೆಗೆದರೆ ಅದರ ಸ್ವರೂಪವು ಬೇರೆಯಾಗುತ್ತದೆ. ಅದನ್ನು ಕೃತಿಯ ಒಳಗಡೆಗೆ ನೋಡಿದರೆ ಅದರ ಸ್ವರೂಪವು ಅದರ ಆಶಯಕ್ಕೆ ಅನುಗುಣವಾಗಿ ರೂಪುಗೊಂಡಿರುತ್ತದೆ. ಮತ್ತು ನಮಗೆ ವಿಶಿಷ್ಟವಾದ ಅರ್ಥವನ್ನು ಕೊಡುತ್ತದೆ. ಆದರೆ ಹಾಗೆಂದು ಅದುವೇ ಸರ್ವಸ್ವ ಎಂದು ಹೇಳಲು ಬರುವುದೂ ಇಲ್ಲ. ಅದು ಓದುಗನಲ್ಲಿಯೇ ಭಿನ್ನವಾದ ಚಟುವಟಿಕೆ ಎಂದು ಕರೆಯುವಂತಿಲ್ಲ. ಅದನ್ನು ಹಾಗೆ ನೋಡುವುದು ಸಾಧ್ಯವಿಲ್ಲ. ಅದನ್ನು ನಾವು ನೋಡುವುದು ಅದರ ವಸ್ತುವಿನ ಕಾರಣಕ್ಕಾಗಿಯೇ ಅಥವಾ ಅಂಥ ಯಾವ ಉದ್ದೇಶವೂ ನಮಗೆ ಇಲ್ಲವೇ ಎನ್ನುವುದು ಮಾತ್ರವೇ ಮುಖ್ಯ. ಪ್ರತಿಯೊಂದು ಪಠ್ಯಕ್ಕೂ ಅದರದೇ ಆದ ಸ್ಥಳ ಮತ್ತು ಅದರ ಅರ್ಥವೆನ್ನುವುದು ಇರುತ್ತದೆ. ಕೃತಿಯನ್ನು ಸ್ಥಳಾತೀತವೆಂದು ಹೇಳಲು ಬರುವುದೂ ಇಲ್ಲ. ಪಠ್ಯ ಮತ್ತು ಅದರ ಸಂವೇದನೆಯನ್ನು ನಾವು ಕೃತಿಯಿಂದ ಹೊರತುಪಡಿಸಿದರೆ ಆಗ ಅದರ ಅರ್ಥವು ಬೇರೆಯಾಗಲು ಸಾಧ್ಯ ಎನ್ನುವುದನ್ನು ಮಾರ್ಕ್ಸ್‌ವಾದವು ನಿರಾಕರಿಸುವುದೂ ಇಲ್ಲ. ಯಾವುದೇ ಪದಕ್ಕೂ ಅದರ ಅರ್ಥಕ್ಕೂ ಒಂದು ಸಂಬಂಧವಿದೆ. ಆದರೆ ಆ ಸಂಬಂಧವನ್ನು ಖಾಲಿಯಾದ ಜಾಗವೆಂದೋ ಖಾಲಿಯಾದ ಅರ್ಥವೆಂದೋ ಹೇಳುಬರುವುದೂ ಇಲ್ಲ. ಯಾವುದೇ ಸಂಕಥನವೆಂದು ಹೇಳುತ್ತೇವೆಯೋ ಅದು ನಿರುದ್ದೇಶಿತವಂತೂ ಅಲ್ಲ. ಈ ದೃಷ್ಟಿಯಿಂದ ಸಂಕಥನಗಳಿಗೆ ಅದರದೇ ಆದ ಕಾರಣಗಳು ಇರುತ್ತವೆ. ಯಾವುದನ್ನು ಸಂಕಥನವೆಂದು ಹೇಳುತ್ತೇವೆಯೋ ಅದು ಕೂಡಾ ಭಾಷೆ ಮತ್ತು ಇತರ ಪರಿಕರವನ್ನು ಒಳಗೊಂಡಿರುತ್ತದೆ. ಅದರ ವಿನ್ಯಾಸಗಳೂ ಬೇರೆಯಾಗಿವೆ. ಹಾಗೂ ಸಂಕಥನಕ್ಕೂ ಒಂದು ಉದ್ದೇಶವಿರುತ್ತದೆ. ಯಾವುದೇ ಸಂಕಥನಗಳನ್ನು ನಾವು ಅತಾತ್ವಿಕ ಮಾಡಲು ಬರುವುದೂ ಇಲ್ಲ. ವಾಸ್ತವವಾಗಿ ಯಾವುದೇ ಆಂಗಿಕ ಮತ್ತು ದೈಹಿಕ ಸಂಗತಿಗಳನ್ನು ನಾವು ಬಳಸುವುದೇ ನಮ್ಮ ಸಂವಹನದ ಅಗತ್ಯಕ್ಕಾಗಿ ಎನ್ನುವುದನ್ನು ಮರೆಯಬಾರದು. ಮಾತು ಮತ್ತು ಮೌನವನ್ನು ನಾವು ನೋಡುವ ಕ್ರಮವು ಬೇರೆಯಾಗಬೇಕು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯವಾದ ಅಂಶವಾಗಿದೆ. ಅನೇಕ ಸಂದರ್ಭದಲ್ಲಿ ಭಾಷೆಯನ್ನೂ ಮೀರಿದ ಅನೇಕ ಅಭಿವ್ಯಕ್ತಿಗಳು ಇರುತ್ತವೆ. ಅದನ್ನು ನಾವು ಭಾಷೆ ಎಂದು ಹೇಳುವುದಿಲ್ಲ. ಆದರೆ ಅವುಗಳು ಕೂಡಾ ಅಭಿವ್ಯಕ್ತಿಗಳೇ ಆಗಿವೆ. ಲೇಖಕನು ಬರೆಯುತ್ತಾನೆ ಅನೇಕರು ಬರೆಯುವುದಿಲ್ಲವೆಂದು

ಹೇಳಿದರೆ ಅವರನ್ನು ಯಾಕೆ ಬರೆಯುವುದಿಲ್ಲವೆಂದು ಕೇಳಲಾರೆವು. ಹಾಗೆ ನೋಡುವುದಿದ್ದರೆ ಆಲೋಚನೆ ಮತ್ತು ಅದರ ಅಭಿವ್ಯಕ್ತಿಯನ್ನು ನಾವು ನೋಡುವಾಗ ಅದರ ಹಿಂದೆ ಬೇರೆ ಭಾವನೆಗಳೂ ಇವೆ ಎನ್ನುವುದನ್ನು ಮರೆಯಬಾರದು. ಆಲೋಚನೆ ಮತ್ತು ಮಾತು ಜೊತೆಗೆ ಇರುತ್ತವೆ. ಆದರೆ ಮಾತು ಮತ್ತು ಬರಹವು ಜೊತೆಗೆ ಇರುವುದೂ ಇಲ್ಲ. ಯಾವುದೇ ಕೃತಿಯನ್ನು ನಾವು ಮೌನದಲ್ಲಿ ಓದುತ್ತೇವೆ ಎಂದರೆ ಅದನ್ನು ನಾವು ಮೌನದಲ್ಲಿಯೇ ದಾಖಲಿಸಿಕೊಳ್ಳುತ್ತೇವೆ ಎಂದು ಅರ್ಥ. ನಾವು ಬಳಸುವ ಯಾವುದೇ ಪದವನ್ನು ನೋಡಿದರೂ ಅದರ ಅರ್ಥವ್ಯಾಪ್ತಿ ಮತ್ತು ಅದರ ಹಿನ್ನೆಲೆಗಳು ಭಿನ್ನವಾಗುತ್ತವೆ. ಪದಗಳು ಮತ್ತು ಅದರ ಚರಿತ್ರೆಯೇ ಬಹಳ ದೊಡ್ಡದು. ಪದಗಳಿಗೆ ಜ್ಞಾನವೆಂಬ ಚೌಕಟ್ಟು ಇದೆ. ಅದರ ಹಿನ್ನೆಲೆಯಲ್ಲಿ ತಾತ್ವಿಕತೆಯೂ ಇದೆ. ಜ್ಞಾನದ ವಿವರಣೆಯನ್ನು ನಾವು ನೋಡುವುದು ಹೇಗೆ ಎನ್ನುವುದು ಬಹಳ ಮುಖ್ಯ. ಚರಿತ್ರೆ ಮತ್ತು ಅದರ ವಿವರಣೆಯನ್ನು ನಾವು ಈ ದೃಷ್ಟಿಯಿಂದ ಬಹಳ ಮಹತ್ವದ್ದೂ ಹೌದು ಎಂದು ಭಾವಿಸುವುದು ಅಗತ್ಯವೂ ಆಗಿದೆ. ಮಾತಿನಲ್ಲಿ ಯಾವುದನ್ನು ವ್ಯಕ್ತಪಡಿಸುತ್ತೇವೆಯೋ ಅವುಗಳು ಬರೀ ಸಂವಹನವಾಗಿ ಉಳಿದಿಲ್ಲ. ಅದರ ಆಚೆಗೂ ಅನೇಕ ಸಂಗತಿಗಳು ಇರುತ್ತವೆ. ಜ್ಞಾನ ಮತ್ತು ಅದರ ಚರಿತ್ರೆಯು ಒಂದು ಬಗೆಯದಾದರೆ ಸಾಹಿತ್ಯದ ಚರಿತ್ರೆಯು ಮತ್ತೊಂದು ಬಗೆಯದೂ ಹೌದು. ಸಾಹಿತ್ಯ ಅಥವಾ ಆ ಕಲೆಯ ಚರಿತ್ರೆಯು ಒಂದು ಬಗೆಯಲ್ಲಿ ಯಾವುದು ಅಸ್ತಿತ್ವಕ್ಕೆ ಬಂದಿದೆಯೋ ಅದನ್ನು ಮಾತ್ರವೇ ಹೇಳುತ್ತಾ ಬರುತ್ತದೆ. ಆದರೆ ಜ್ಞಾನದ ಚರಿತ್ರೆಯು ಭಿನ್ನವಾದ ರೂಪದಲ್ಲಿದೆ. ಅದನ್ನು ಬರೀ ನಿರೂಪಣೆಯಲ್ಲಿ ಮಾತ್ರವೇ ನೋಡಲು ಬರುವುದಿಲ್ಲ. ಭಾಷೆ ಮತ್ತು ಅದರ ಸಾಧ್ಯತೆಯನ್ನು ಈ ದೃಷ್ಟಿಯಿಂದ ತಾತ್ವಿಕ ಮಾಡುವುದು ಅಗತ್ಯವೇ ಆಗಿದೆ. ಸಾಹಿತ್ಯದ ವಿವರಣೆ ಮತ್ತು ಅದರ ಅಗತ್ಯವು ಬೇರೆ ಬಗೆಯದು. ಬರೀ ಸಾಹಿತಿಗಳಿಂದ ಮಾತ್ರವೇ ಭಾಷೆಯು ಉಳಿದಿಲ್ಲ. ಜ್ಞಾನ ಮತ್ತು ಅದರ ಚರಿತ್ರೆಯು ವ್ಯಕ್ತಿಗಳ ಚರಿತ್ರೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಇವುಗಳ ನಡುವೆ ದ್ವಂದ್ವಾತ್ಮಕವಾದ ಸಂಬಂಧವೂ ಇದೆ. ಆದರೆ ಯಾವುದನ್ನು ನಾವು ಭಾಷೆ ಮತ್ತು ಅದರ ಚಟುವಟಿಕೆ ಎಂದು ಹೇಳುತ್ತೇವೆಯೋ ಅದು ಮೂಲತಃ ಕಟ್ಟಲಾಗಿರುವ ಪ್ರತಿಕ್ರಿಯೆಯು ಆಗಿದೆ. ಮತ್ತು ಭಾಷೆ ಎನ್ನುವುದು ಮುಖ್ಯವಾಗಿ ಸಾಮಾಜಿಕವಾದ ಚಲನೆಯ ಭಾಗವಾಗಿ ಹುಟ್ಟಿಕೊಳ್ಳುತ್ತದೆ. ತನ್ನ ಚಹರೆಯನ್ನು ಬದಲಿಸಿಕೊಳ್ಳುತ್ತದೆ. ಕೃತಿಕಾರ ಭಾಷೆಯನ್ನು ತನಗೆ ಬೇಕಾದಂತೆ ಮುರಿದು ಕಟ್ಟುತ್ತಾನೆ. ಅದು ಅವನ ತಾತ್ವಿಕತೆಯನ್ನು ಸೂಚಿಸುತ್ತದೆ. ಕೃತಿಯ ಭಾಷೆ ಎನ್ನುವುದು ಮುಖ್ಯವಾಗಿ ರಾಜಕೀಯ ಮತ್ತು ಸಾಮಾಜಿಕವಾದ ಪ್ರಕ್ರಿಯೆಯೂ ಹೌದು. ಸಂಸ್ಕೃತಿ ಮತ್ತು ಭಾಷೆಯ ಪ್ರಶ್ನೆಯು ಅಂತರ್ಗತವೂ ಹೌದು. ಭಾಷೆ ಮತ್ತು ಅದರ ಚಟುವಟಿಕೆಯನ್ನು ಕಾಲಘಟ್ಟಕ್ಕೆ ಅನುಗುಣವಾಗಿ ನೋಡುವುದು ಅಗತ್ಯ. ಆದರೆ ಭಾಷೆ ಮತ್ತು ಅದರ ಚಟುವಟಿಕೆಯನ್ನು ನಾವು ಮತ್ತೊಂದು ರೀತಿಯಲ್ಲಿಯೂ ನೋಡಬಹುದು. ಭಾಷೆ ವೈಯಕ್ತಿಕ ಭಾವನೆಗಳನ್ನು ವ್ಯಕ್ತಪಡಿಸುತ್ತದೆ. ಅಂದರೆ ವ್ಯಕ್ತಿಯ ಪ್ರಜ್ಞೆಗೂ ಅವನು ಬಳಸುವ ಮಾತುಗಳಿಗೂ ಒಂದು ಸಂಬಂಧವಿದೆ. ಮಾತಾಡುವವನು ಭಾಷೆಯನ್ನು ತನ್ನ ಉದ್ದೇಶಕ್ಕಾಗಿಯೇ ಬಳಸುತ್ತಾನೆ. ಅದನ್ನು

ಅವನು ಬಳಸುವಾಗ ಖಾಸಗಿ ಆಸ್ತಿಯಂತೆ ಬಳಸುತ್ತಾನೆ. ವ್ಯಕ್ತಿ ಮತ್ತು ಅವನ ಪ್ರಜ್ಞೆ ಪ್ರಶ್ನೆಯೇ ಬಹಳ ಮುಖ್ಯ. ಭಾಷೆಯಲ್ಲಿ ಯಾವುದನ್ನು ರಚಿಸುತ್ತೇವೆಯೋ ಅದು ಪ್ರಶ್ನೆಯೋ, ಉತ್ತರವೋ, ಅಥವಾ ಅಭಿಪ್ರಾಯವೋ ಆಗಿರುತ್ತದೆ. ಆದರೆ ಅಲ್ಲಿ ಅವನು ಭಾಷೆಯನ್ನು ತನಗೆ ಬೇಕಾದಂತೆ ವಾಹಕವೆನ್ನುವಂತೆ ಯಾಕೆ ಬಳಸುತ್ತಾನೆ ಎಂದರೆ ಅದು ಅವನ ತಾತ್ವಿಕ ಅಗತ್ಯವೂ ಆಗಿರುತ್ತದೆ. ಯಾವುದು ಸ್ವಂತ ಯಾವುದು ಮತ್ತೊಬ್ಬ ಎನ್ನುವುದನ್ನು ವಿಂಗಡಿಸುವುದೂ ಇದೇ ಕಾರಣಕ್ಕೆ. ಉದ್ದೇಶ ಮತ್ತು ಬಳಕೆಯು ಭಾಷೆಯಲ್ಲಿ ಬಹಳ ಮುಖ್ಯವಾದ ಪ್ರಶ್ನೆಯು ಆಯಾ ಸಂದರ್ಭಕ್ಕೆ ಅನುಸಾರವಾಗಿ ಬದಲಾಗುತ್ತಾ ಹೋಗುತ್ತದೆ. ಆದರೆ ಅದನ್ನು ಮಾತಾಡುವವನ ಸಂದರ್ಭವನ್ನು ಹೊರತುಪಡಿಸಿಕೊಂಡು ನೋಡಲು ಬರುವುದೂ ಇಲ್ಲ. ಮುದ್ರಣದ ತಂತ್ರಜ್ಞಾನವು ಬಂದ ಮೇಲೆ ಭಾಷೆ ಮತ್ತು ಅದರ ಚಟುವಟಿಕೆಯು ಬೇರೆಯಾಗುತ್ತಾ ಬಂತು. ಮಾತು ಅದರ ವಿವರಣೆಗಳೂ ಬದಲಾದವು. ಅದೇ ರೀತಿಯಲ್ಲಿ ಮಾತನ್ನು ದಾಖಲಿಸಿಕೊಳ್ಳಲು ಬೇರೆ ಬೇರೆ ಮುದ್ರಿಕೆಗಳು ಬಂದವು. ಮಾತಿನ ದಾಖಲೀಕರಣವು ಬೇರೆ ಬೇರೆ ರೂಪದಲ್ಲಿ ಚಾಲ್ತಿಗೆ ಬಂತು. ಮೊದಲು ಮಾತಾಡುವವನು ಮತ್ತು ಕೇಳುಗನು ಮುಖಾಮುಖಿಯಾಗುತ್ತಿದ್ದರು. ಆದರೆ ಧ್ವನಿ ಮುದ್ರಿಕೆಗಳು ಬಂದ ಮೇಲೆ ಅದರ ಚಹರೆಗಳು ಬದಲಾದವು. ಮಾತು ಮತ್ತು ಅದರ ದಾಖಲೀಕರಣವು ಸ್ಥಳ ಮತ್ತು ಸಮಯವನ್ನು ಬದಲಿಸಿದವು. ಧ್ವನಿಮುದ್ರಿಕೆಗಳು ಬಂದ ಮೇಲೆ ಯಾರು ಎಲ್ಲಿ ಬೇಕಾದರೂ ಕೇಳಬಹುದು. ಮಾತನ್ನು ಧ್ವನಿ ಮುದ್ರಿಕೆಯಲ್ಲಿ ಮತ್ತೆ ಮತ್ತೆ ಕೇಳಬಹುದು. ನಮ್ಮ ಧ್ವನಿಯ ಏರಿಳಿತಗಳು ಮತ್ತು ಅದರ ಸ್ವರೂಪಗಳನ್ನು ಟೇಪ್ ರೆಕಾರ್ಡರ್ ದಾಖಲಿಸಿಕೊಳ್ಳುವುದು ಭಿನ್ನವಾಗಿ. ಧ್ವನಿ ವರ್ಧಕಗಳು ಬಂದ ಮೇಲೆ ಮಾತನ್ನು ಎಷ್ಟೋ ದೂರದಲ್ಲಿ ಇರವವನು ಕೇಳಲು ಸಾಧ್ಯ. ಆದರೆ ಯಾವಾಗ ಧ್ವನಿವರ್ಧಕವನ್ನು ಬಳಸುತ್ತೇವೆ ಎನ್ನುವುದು ಕೂಡಾ ಅಷ್ಟೇ ಮುಖ್ಯ. ಸುಮ್ಮನೇ ಧ್ವನಿವರ್ಧಕವನ್ನು ಬಳಸುವುದೂ ಇಲ್ಲ. ಮಾತು ಬರಹ, ಮಾತು ಮತ್ತು ಧ್ವನಿ, ಮಾತು ಸಂವಹನ ಮುಂತಾದವುಗಳನ್ನು ನಾವು ನೋಡುವಾಗ ಅವುಗಳನ್ನು ದ್ವಂದ್ವಾತ್ಮಕವೆಂದೂ ಹೇಳಬೇಕಾಗುತ್ತದೆ. ಮಾತು ಮತ್ತು ಅದರ ಉಪಯೋಗಗಳು ದಿನಂದಿನದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅದನ್ನು ನಾವು ಮರೆಯಬಾರದು. ಆದರೆ ಮಾತು ಎನ್ನುವುದು ನಮ್ಮ ಮನೋಸ್ಥಿತಿಯನ್ನು ಸೂಚಿಸುತ್ತಾ ಹೋಗುತ್ತದೆ. ಮಾತು ಮತ್ತು ಮನಸ್ಸಿಗೆ ಇರುವ ಸಂಬಂಧವು ಸಂಕೀರ್ಣವಾಗಿದೆ. ಅದನ್ನು ವ್ಯಕ್ತವಾಗಿಯೇ ನೋಡುತ್ತೇವೆ. ಮಾತು ಮತ್ತು ಮನಸ್ಸನ್ನು ಶೂನ್ಯ ಪರಿಣಾಮವಾದ ಎಂದೂ ಭಾವಿಸಬೇಕಾಗಿಲ್ಲ. ನಾವು ಮಾತನ್ನು ಸಂಘಟಿಸಿಕೊಂಡು ಬಳಸುತ್ತೇವೆ. ಇಲ್ಲಿ ಇದಕ್ಕೆ ಪೂರಕವಾಗುವ ಅಂಶವನ್ನು ಗಮನಕ್ಕೆ ತಂದುಕೊಳ್ಳಬೇಕು: ಅತ್ಯಂತ ಉದ್ವೇಗದಲ್ಲಿ ಇರುವಾಗ ಮಾತನ್ನು ಹೇಗೆ ವ್ಯಕ್ತಪಡಿಸುತ್ತೇವೆ? ಸಿಟ್ಟಿನಲ್ಲಿ ಇರುವಾಗ ಮಾತನ್ನು ವ್ಯಕ್ತಪಡಿಸುತ್ತೇವೆ? ಮಾತು ಎನ್ನುವುದೇ ಈ ದೃಷ್ಟಿಯಿಂದ ನಮ್ಮ ನಿಲುವೂ ಹೌದು. ಯಾವುದೇ ನಿಲುವು ಇಲ್ಲದ ಮಾತು ಎನ್ನುವುದೂ ಇಲ್ಲ. ಮಾತಿನಲ್ಲಿ ಅಭಿಪ್ರಾಯ;

ನಿಲುವೂ ಇರುತ್ತದೆ. ಮತ್ತು ಮಾತಿನಲ್ಲಿ ಆಂತರಿಕ ತರ್ಕವೂ ಇರುತ್ತದೆ. ನೈತಿಕತೆಯ ಸಂದರ್ಭವು ಬಂದಾಗ ಮಾತು ಎಂದರೆ ಪವಿತ್ರವಾಗುತ್ತದೆ. ಪ್ರಾರ್ಥನೆಯ ಸಂದರ್ಭದಲ್ಲಿ ಮಾತು ಎನ್ನುವುದೂ ಭಿನ್ನವಾದ ಚಹರೆಯನ್ನು ಒಳಗೊಂಡಿರುತ್ತದೆ. ಸಾಮಾಜಿಕ ಮತ್ತು ರಾಜಕೀಯವಾದ ಚಟುವಟಿಕೆಯ ಸಂದರ್ಭದಲ್ಲಿ ಮಾತು ಪ್ರದರ್ಶನಾತ್ಮಕವಾಗಿಯೂ ಇರುತ್ತದೆ. ಮಾತುಗಳನ್ನು ನಾವು ಬರೆಯುತ್ತೇವೆ, ಹೇಳುತ್ತೇವೆ, ಕೇಳುತ್ತೇವೆ, ಓದುತ್ತೇವೆ. ಆದರೆ ಈ ಯಾವ ಚಟುವಟಿಕೆಯು ಬೇರೆ ಬೇರೆ ಸಂದರ್ಭದಲ್ಲಿ ಭಿನ್ನವಾಗುತ್ತಾ ಹೋಗುತ್ತದೆ. ಮನೆಯಲ್ಲಿ ಮಾತಾಡುವಾಗ ಮಿಲಿಟರಿ ಭಾಷೆಯನ್ನು ಬಳಸುವುದೂ ಇಲ್ಲ. ಆಜ್ಞೆಯನ್ನು ನಾವು ಮಾಡುವಾಗ ಅದರಲ್ಲಿ ಯಜಮಾನಿಕೆಯು ಇರುತ್ತದೆ. ನಮ್ಮ ದಿನನಿತ್ಯದ ಮಾತುಗಳು ಸರಳವಾಗಿ ಇರುತ್ತದೆ. ಆದರೆ ಸಾಹಿತ್ಯದಲ್ಲಿ ಈ ಮಾತುಗಳು ಭಿನ್ನವಾಗುತ್ತದೆ. ಅಂದರೆ ಸಾಹಿತ್ಯ ಮತ್ತು ಅದರ ಶೈಲಿಯನ್ನು ಮಾತ್ರವೇ ಬೇರೆ ಎಂದು ಹೇಳುತ್ತೇವೆ. ಭಾಷೆ ಮತ್ತು ಅದರ ರೂಪಗಳು ಬದಲಾಗುವುದು ಅತಾತ್ವಿಕವಂತೂ ಅಲ್ಲ. ಬರಹ ಮತ್ತು ಸಾಹಿತ್ಯದ ಶೈಲಿಯು ಸಾಂಸ್ಕೃತಿಕ ಅಗತ್ಯವಂತೂ ಹೌದು. ಮಾತಿನ ಉದ್ದೇಶ ಮತ್ತು ಅದರ ಪರಿಣಾಮವು ಬೇರೆ. ಅದಕ್ಕೆ ತಕ್ಷಣದ ಉದ್ದೇಶವಿದೆ. ಸಾಹಿತ್ಯದ ಶೈಲಿಯನ್ನು ತಕ್ಷಣದ ಉದ್ದೇಶದ ಹಿನ್ನೆಲೆಯಲ್ಲಿ ನೋಡಲು ಬರುವುದೂ ಇಲ್ಲ. ದಿನಂದಿನದ ಮಾತಿನಲ್ಲಿ ನಾವು ಸ್ಪಷ್ಟತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಆದರೆ ಈ ರೀತಿಯ ಮಾತಿನಲ್ಲಿ ಏರಿಳಿತವೂ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಾತಿನಲ್ಲಿ ಮೌಖಿಕವಾದ ಒಂದು ಸ್ವರೂಪವಿರುತ್ತದೆ. ಮಾತಾಡುವಾಗ ಸ್ಥಳೀಯತೆಯು ಬಹಳ ದೊಡ್ಡ ಪಾತ್ರವನ್ನು ವಹಿಸುತ್ತದೆ. ಯಾವುದೇ ಭಾಷೆಗೆ ಈ ಸ್ಥಳೀಯತೆಯು ಬಹಳ ದೊಡ್ಡದೂ ಹೌದು. ಆದರೆ ವ್ಯಾಕರಣವು ಇಲ್ಲದ ಮಾತುಗಳು ಅಸ್ಪಷ್ಟವಾಗುತ್ತದೆ. ವ್ಯಾಕರಣ ರಹಿತವಾದ ಮಾತುಗಳು ಇರುವುದೇ ಇಲ್ಲ. ಅಭಿವ್ಯಕ್ತಿಯಲ್ಲಿ ಬಹಳ ಮುಖ್ಯವಾದ ಸಂಗತಿಯೆಂದರೆ ಅದರ ಹಿಂದಿರುವ ತಾತ್ವಿಕತೆ. ಈ ತಾತ್ವಿಕತೆಯನ್ನು ನಾವು ಭಾಷೆಯ ರಚನೆಯಲ್ಲಿ ಕಾಣುತ್ತೇವೆ. ಅಭಿವ್ಯಕ್ತಿಯೇ ಪ್ರಧಾನವೆಂದು ಹೇಳುವ ಅಭಿವ್ಯಕ್ತಿವಾದಿಗಳು ಇದನ್ನು ಗುರುತಿಸಲು ಹೋಗುವುದಿಲ್ಲ. ಭಾಷೆ ಮತ್ತು ಅದರ ರಚನೆಗಳನ್ನು ನಾವು ನೋಡುವಾಗ ಇವುಗಳನ್ನು ಗಮನಿಸಿಕೊಳ್ಳುವುದು ಅಗತ್ಯವೂ ಹೌದು. ಆದರೆ ನಾವು ಭಾಷೆಯನ್ನು ನಾವು ಅನೇಕ ಬಾರಿ ಬರೀ ಅಭಿವ್ಯಕ್ತಿಯೆಂದು ಭಾವಿಸಿಕೊಳ್ಳುವುದು ಸರಿಯಾದ ತೀರ್ಮಾನವಲ್ಲ. ಆದ್ದರಿಂದ ಭಾಷೆ ಎಂದರೆ ಅದೊಂದು ದೈವ ಎಂದು ಕರೆಯುವುದು ಈ ದೃಷ್ಟಿಯಿಂದ ಸಮಂಜಸವಾಗುವುದಿಲ್ಲ. ವ್ಯಾಕರಣ ಮತ್ತು ಅದರ ಸಂಯೋಜನೆಯು ಬಹಳ ಅಗತ್ಯವೆಂದು ಹೇಳುತ್ತೇವೆ. ಆದರೆ ಅದನ್ನು ಹೊಲಿಯವವನು ಯಾಕೆ ಹೊಲಿಯುತ್ತಾನೆ ಎನ್ನುವುದೂ ಅಷ್ಟೇ ಮುಖ್ಯ. ಮಾತಿನಲ್ಲಿ ಯಾವಾಗಲೂ ತಾತ್ವಿಕ ಪ್ರಶ್ನೆಯೇ ಬಹಳ ಮುಖ್ಯ. ಮಾತು ಅಭಿವ್ಯಕ್ತಿಯ ಪ್ರಶ್ನೆ. ಆದರೆ ಶೂನ್ಯವಲ್ಲ. ಅದು ಬರೀ ಅಂತರದ ಪ್ರಶ್ನೆಯೂ ಅಲ್ಲ. ಡೆರಿಡಾನಲ್ಲಿ ಅಂತರವೂ ಮುಖ್ಯವಾಗಿದೆ. ಆದರೆ ಇದನ್ನು ಮನೋವಿಜ್ಞಾನದಲ್ಲಿ ಮತ್ತೊಂದು ರೀತಿಯಿಂದ ನೋಡುತ್ತಾರೆ. ಮಾತು ಮತ್ತು ಅದರ ಅಭಿವ್ಯಕ್ತಿಯಲ್ಲಿ ಮನಸ್ಸು ಬಹಳ ಮುಖ್ಯ. ಆದರೆ ಯಾವುದೇ ಸಂಗತಿಯನ್ನು ನಮ್ಮ

ಮನಸ್ಸು ಯಾವ ರೀತಿಯಲ್ಲಿ ಸ್ವೀಕರಿಸುತ್ತದೆ ಎನ್ನುವುದೂ ಬಹಳ ಮುಖ್ಯ. ಇಲ್ಲಿ ಈ ವಿಷಯದ ಕುರಿತು ಕೆಲವು ಮಾತುಗಳನ್ನು ಹೇಳುವುದೂ ತುಂಬಾ ಅಗತ್ಯ. ಅದನ್ನು ಈ ರೀತಿಯಲ್ಲಿ ಕ್ರೋಢೀಕರಿಸಬಹುದು: ಮಾನಸಿಕ ಭ್ರಮೆಯನ್ನು ನಾವು ನೋಡುವುದು ಮತ್ತು ಅದನ್ನು ಸ್ವೀಕರಿಸುವುದು ಭಿನ್ನವಾಗಿ. ಅದನ್ನು ನಾವು ಯಾವಾಗಲೂ ಅನ್ಯವಾಗಿಯೇ ನೋಡುತ್ತೇವೆ. ಆದರೆ ಮಾನಸಿಕ ಭ್ರಮೆಯು ನಮ್ಮ ಅನೇಕ ಮಾತುಗಳನ್ನು ನಿಯಂತ್ರಿಸುತ್ತದೆ. ಅದರ ಕಾರಣವೂ ಸ್ಪಷ್ಟ. ಭ್ರಮೆಯಲ್ಲಿ ಇರುವವನು ವಾಸ್ತವದ ವಿಚಾರಗಳಿಗೆ ಸ್ಪಂದಿಸಲಾರ. ಅವನ ವರ್ತನೆಗಳು ಬೇರೆ. ಮಾನಸಿಕವಾಗಿ ಯಾರು ಹೆಚ್ಚು ಬಳಲುತ್ತಾರೆಯೋ ಅವರು ಬಳಸುವ ಭಾಷೆಯನ್ನು ನಾವು ನೋಡುವ ಕ್ರಮ ಕೂಡಾ ಬೇರೆಯಾಗಿದೆ. ಮನಸ್ಸು ಮತ್ತು ಅದರ ಭ್ರಮೆಯು ನಮ್ಮನ್ನು ಬೇರೆ ಬೇರೆ ರೀತಿಯಲ್ಲಿ ಕಾಡುತ್ತದೆ. ಮತ್ತು ಅದರ ಸ್ವರೂಪವೂ ಭಿನ್ನ. ಅದರ ಪರಿಣಾಮವು ನಮ್ಮ ಮಾತುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಹೇಳುವುದು ಮತ್ತು ಅದನ್ನು ಕೇಳಿಸಿಕೊಳ್ಳುವುದು ಎರಡೂ ಭಿನ್ನವಾದ ಕ್ರಮಗಳು. ಆದರೆ ಭ್ರಮಿತನು ತನ್ನ ಪಾಡಿಗೆ ಮಾತಾಡುತ್ತಾನೆ. ಮತ್ತು ಉಳಿದವರ ಮಾತನ್ನು ಅದರ ಅರ್ಥವನ್ನು ಅಷ್ಟಾಗಿ ಕೇಳಿಸಿಕೊಳ್ಳುವುದೂ ಇಲ್ಲ. ಯಾರು ಹೆಚ್ಚು ಮಾನಸಿಕವಾಗಿ ಹೆಚ್ಚು ಭ್ರಮೆಗೆ ಗುರಿಯಾಗಿದ್ದಾರೆಯೋ ಅವರ ಹೇಳುವ ಮಾತುಗಳು ಬುದ್ಧಿಜೀವಿಯ ಥರ ಇರಲು ಸಾಧ್ಯವೇ ಇಲ್ಲ. ಯಾರನ್ನು ನಾವು ಹುಚ್ಚರು ಎಂದು ಹೇಳುತ್ತೇವೆಯೋ ಅವರ ಜೀವನ ಮತ್ತು ಅವರ ನಡವಳಿಕೆಗಳು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಇರಲು ಸಾಧ್ಯವೇ ಇಲ್ಲ. ಅದನ್ನು ಅವರ ವರ್ತನೆಗಳಲ್ಲಿ ಕಾಣುತ್ತೇವೆ. ನಾವು ಮತ್ತು ನಮ್ಮ ಜೀವನದ ಕ್ರಮಗಳು ಚಾರಿತ್ರಿಕವಾಗಿ ಒಂದು ಸನ್ನಿವೇಶಕ್ಕೆ ತಕ್ಕ ಹಾಗೆ ನೋಡುವಂತೆ ಮಾಡಲಾಗಿದೆ. ಅಂದರೆ ಯಾವುದನ್ನು ಅನುಭವಿಸುತ್ತಿದ್ದೇವೆಯೋ ಅದು ನಿರ್ದಿಷ್ಟವಾದ ಇತಿಹಾಸವೂ ಹೌದು. ಆದರೆ ಅದಕ್ಕೆ ತಕ್ಕಂತೆ ನಾವು ಮಾತಾಡುತ್ತೇವೆ. ಆದರೆ ಭ್ರಮಿತನು ಈ ರೀತಿಯಲ್ಲಿ ವರ್ತಮಾನ ಮತ್ತು ಅದರ ಸನ್ನಿವೇಶಗಳನ್ನು ನಿರ್ದಿಷ್ಟವಾಗಿ ಎದುರಿಸಲಾರ. ಅವನು ಗತವನ್ನು ಹೇಳುತ್ತಿರಬಹುದು. ಅಥವಾ ಇದ್ದಕ್ಕಿದ್ದಂತೆ ಅಳುತ್ತಿರಬಹುದು. ಅಥವಾ ಸಿಟ್ಟು ಮಾಡಿಕೊಳ್ಳುತ್ತಿರಲೂಬಹುದು. ಅಳುತ್ತಿರುವವರು, ಸಿಟ್ಟು ಮಾಡಿಕೊಂಡಿರುವವರು, ಸದಾ ಉರಿ ಮುಸುಡು ಮಾಡಿಕೊಳ್ಳುವವರು ನಿಜವಾಗಿಯೂ ಹುಚ್ಚರಲ್ಲ. ವ್ಯಗ್ರತೆ, ಅಳು, ವಿಷಾದ ಮುಂತಾದವುಗಳೂ ಕೂಡಾ ನಮ್ಮ ಭಾವನೆಗಳು ಆಗಿವೆ. ಯಾವಾಗ ನಾವು ಅಳುತ್ತೇವೆಯೋ ಆಗಿನ ನಮ್ಮ ಮಾತುಗಳು ಯಾವ ರೀತಿಯಲ್ಲಿ ಇರುತ್ತದೆ ಎನ್ನುವುದನ್ನು ಯೋಚಿಸುವುದು ಮುಖ್ಯ. ಅದೇ ರೀತಿಯಲ್ಲಿ ನಾವು ಯಾವಾಗ ವ್ಯಗ್ರರಾಗುತ್ತೇವೆಯೋ ಆಗ ನಮ್ಮ ಮಾತುಗಳು ಸ್ಪಷ್ಟವಾಗಿಯೂ ಇರುವುದೂ ಇಲ್ಲ. ಆದರೆ ಇದನ್ನು ನಾವು ಭ್ರಮಿತರಿಗೆ ಹೇಳಿದರೆ ಅವರ ಕ್ರಮವು ಯಾವುದು ಇರುತ್ತದೆ ಎಂದು ಕೇಳಿದರೆ ಸ್ಪಷ್ಟವಾಗುತ್ತದೆ. ಮನಸ್ಸು ಎನ್ನುವುದು ಅಸ್ತವ್ಯಸ್ತವಾದರೆ ಅದರ ಸ್ವರೂಪವು ಅದರ ಅಭಿವ್ಯಕ್ತಿಯೂ ಬೇರೆಯಾಗುತ್ತದೆ. ಅದರಲ್ಲಿ ಯಾವುದನ್ನು ನಾವು ಹೇಳಲು ಹೊರಡುತ್ತೇವೆಯೋ ಅದು ಕೂಡಾ ಸರಿಯಾದ ಅಭಿವ್ಯಕ್ತಿಯು ಆಗುವುದೂ ಇಲ್ಲ. ಅದರಲ್ಲಿ ಬೇರೆ ಬೇರೆ ಅಂಶಗಳು ಸೇರಿಕೊಂಡು ಬಿಡುತ್ತವೆ. ಯಾವುದೇ

ಮಾತುಗಳಿಗೆ ನಮ್ಮ ನಮ್ಮ ಮನಸ್ಸು ಕೂಡಾ ಪ್ರಧಾನವಾಗಿದೆ. ಹಾಗೂ ಮಾತು ಎನ್ನುವುದು ಬಹಳ ಮುಖ್ಯವಾಗಿ ಬಹಿರಂಗ. ಅದೂ ಒಂದು ಚಟುವಟಿಕೆಯೂ ಹೌದು. ಅನೇಕರು ಭಾಷೆ ಮತ್ತು ಅದರ ಪರಿಣಾಮಗಳನ್ನು ನೋಡುವ ಕ್ರಮವೇ ಬೇರೆ. ಮಾತಿನಲ್ಲಿ ಯಾವುದನ್ನು ವ್ಯಕ್ತಪಡಿಸುತ್ತೇವೆಯೋ ಅದು ವ್ಯಕ್ತವಾಗುವ ಸಂದರ್ಭದಲ್ಲಿ ಅದರದೇ ಆದ ಒಂದು ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಮಾತಾಡುವುದು ಎಂದರೆ ಅದರ ಮೂಲಕ ನಾವು ನಮ್ಮದೇ ಆದ ಒಂದು ಅಭಿವ್ಯಕ್ತಿಯನ್ನು ಸಂಪಾದಿಸುವುದು ನಿಜ. ಆದರೆ ಅದಕ್ಕೂ ಒಂದು ಇತಿಮಿತಿಯೆನ್ನುವುದು ಇದೆ. ಕೆಲವನ್ನು ನಾವು ಹೇಳಲಾರೆವು. ಮತ್ತು ಅದರಿಂದ ನಾವು ಕೆಲವು ಸಂವಹನದ ತೊಡಕನ್ನು ಎದುರಿಸುವುದೂ ಅಷ್ಟೇ ನಿಜ. ಆಗ ನಾವು ಬೇರೆ ಪರಿಕರವನ್ನು ಬಳಸಿಕೊಳ್ಳುವುದೂ ಸತ್ಯ. ಆದರೆ ಈ ಪರಿಕರಗಳು ಯಾವಾಗಲೂ ಒಂದು ಮಾದರಿಯದು ಆಗಿರುವುದೂ ಇಲ್ಲ. ಸಾಹಿತ್ಯದ ಚರಿತ್ರೆ, ಭಾಷೆಯ ಚರಿತ್ರೆ, ತತ್ವಜ್ಞಾನದ ಚರಿತ್ರೆ ಮುಂತಾದವುಗಳಿಗೆ ಅವುಗಳದೇ ಆದ ಒಂದು ನೀತಿಗಳಿರುತ್ತವೆ. ಅದನ್ನು ಹೊರತುಪಡಿಸಿ ಇರಲು ಸಾಧ್ಯವೇ ಇಲ್ಲ. ಯಾವುದನ್ನು ನಾವು ಕ್ರಿಯಾತ್ಮಕವಾದ ಚಟುವಟಿಕೆಯೆಂದು ಹೇಳಿದ್ದೇವೆಯೋ ಅದು ಕೂಡಾ ನಮ್ಮ ಅಗತ್ಯವೇ ಆಗಿದೆ. ಕೃತಿಕಾರನು ತನ್ನ ಉದ್ದೇಶವನ್ನು ಕೃತಿಯ ಮೂಲಕವೇ ಹೇಳುತ್ತಾನೆ. ಆದರೆ ಅದರಲ್ಲಿ ಮತ್ತೆ ಬೇರೆ ಬೇರೆ ವಿಧಗಳಿರುತ್ತವೆ. ಕೃತಿಯ ಭಾಷೆಯನ್ನು ನಾವು ಕೇವಲ ಕೃತಿಯ ಭಾಷೆಯಾಗಿ ನೋಡಲು ಅಸಾಧ್ಯ. ಅದರ ನಿರ್ವಹಣೆಯೇ ಬೇರೆ ಯಾವುದೇ ಕೃತಿಯನ್ನು ನಾವು ನೋಡುವಾಗ ಅದರ ಜೊತೆಗೆ ಇರುವ ಚರಿತ್ರೆಯನ್ನು ಗಮನಿಸಬೇಕು ಎನ್ನುವುದು ಮಾರ್ಕ್ಸ್‌ವಾದದ ನಿಲುವು. ನಾವು ಹೊರಗಿನ ಜಗತ್ತನ್ನು ಹೇಗೆ ಗ್ರಹಿಸುತ್ತೇವೆ ಎನ್ನುವುದು ಮೂಲಭೂತವಾಗಿ ಭಾಷೆಯ ಪ್ರಶ್ನೆಯೇ ಆಗಿದೆ. ಹಾಗೆಯೇ ಭಾಷೆ ಮತ್ತು ಅದರ ಹಿಂದೆ ಇರುವ ಅನೇಕ ಸಾಧ್ಯತೆಗಳು ಇರುವುದೂ ಕೂಡಾ ಇದೇ ಹಿನ್ನೆಲೆಯಲ್ಲಿಯೇ. ಯಾವುದೇ ಭಾಷೆ ಮತ್ತು ಅದರ ಹಿಂದಿರುವ ಅನೇಕ ಆಲೋಚನೆಗಳನ್ನು ನಾವು ನೋಡಬೇಕಾಗಿರುವುದೂ ಹೀಗೆಯೇ. ಭಾಷೆಯಲ್ಲಿ ಯಾವುದನ್ನು ನಾವು ರೂಪಿಸುತ್ತೇವೆಯೋ ಅದಕ್ಕೆ ಅನುಸಾರವಾದ ಉತ್ತರವನ್ನು ಪಡೆಯುತ್ತೇವೆ. ಬಾಯಿಯಲ್ಲಿ ಅದರ ಅರ್ಥವನ್ನು ಯಾರೂ ಧಿಕ್ಕರಿಸಲಾರರು. ಭಾಷೆ ಮತ್ತು ಅದರ ಸಾಧ್ಯತೆಗಳು ಈ ಕಾರಣದಿಂದ ಬೇರೆಯಾಗುತ್ತಾ ಹೋಗುವುದು ಅದರ ಬಳಕೆಯ ವಿಧಾನದಲ್ಲಿ ಮಾತ್ರವೇ. ಯಾವುದೇ ಭಾಷೆ, ಅದರ ಅಭಿವ್ಯಕ್ತಿ ಮನುಷ್ಯರಿಂದ ಮನುಷ್ಯರಿಗೆ ಬೇರೆಯಾಗುವುದು ಪ್ರಜ್ಞೆಯ ಕಾರಣದಿಂದ ಎನ್ನುವುದನ್ನು ಕೂಡಾ ಲಕ್ಷಿಸಬೇಕಾಗುತ್ತದೆ. ಅಂದರೆ ಪ್ರಜ್ಞೆ ಮತ್ತು ಭಾಷೆಗೆ ಈ ದೃಷ್ಟಿಯಿಂದ ನಿಕಟವಾದ ಸಂಬಂಧವೂ ಇದೆ. ಭಾಷೆ ಮತ್ತು ಅದರ ಸಾಧ್ಯತೆಯನ್ನು ನೋಡುವಾಗ ಅದರ ಮತ್ತೊಂದು ಹಿನ್ನೆಲೆಯನ್ನೂ ನೋಡಬೇಕಾಗುತ್ತದೆ. ಭಾಷೆ ಎನ್ನುವುದು ಮೂಲಭೂತವಾಗಿ ಮನಸ್ಸು ಮತ್ತು ಅದರ ವ್ಯಾಪಾರವನ್ನು ಹೊಂದಿದೆ. ಮನಸ್ಸಿನಲ್ಲಿ ಇರುವುದನ್ನು ನಾವು ಭಾಷೆಯಲ್ಲಿ ಸಂಪೂರ್ಣವಾಗಿ ಹೇಳಲಾರೆವು. ಭಾಷೆ ಮತ್ತು ಅದರ ವ್ಯಾಪಾರವನ್ನು ನಾವು ನೋಡುವಾಗ ಇದನ್ನು ಅರ್ಥ ಮಾಡಿಕೊಳ್ಳಬೇಕು ನಿಜ. ಆದರೆ ಅದರಿಂದಲೇ ಎಲ್ಲವೂ ಆಗುತ್ತದೆ ಎಂದು ಅರ್ಥವಲ್ಲ.

ಭಾಷೆಯೂ ಒಂದು ವಿಧಾನ ಮಾತ್ರವೇ ಆಗಿದೆ. ಅದನ್ನು ಹೇಳುವುದು ಎಂದರೆ ಯೋಚಿಸಿ ಹೇಳುಬಹುದಾದ್ದು ಮಾತ್ರವೇ ಎಂಬುದನ್ನು ಗ್ರಹಿಸಬೇಕು. ನಮ್ಮ ಜೀವನದ ಕ್ರಮಗಳನ್ನು ಮತ್ತು ಯೋಚನೆಯ ಕ್ರಮವನ್ನು ನಾವು ಭಾಷೆಯಲ್ಲಿ ಹೇಳಬೇಕಾಗುತ್ತದೆ. ಅದು ಅಗತ್ಯವೂ ಹೌದು. ಭಾಷೆಗೆ ಒಂದು ರೂಪವಿದೆ. ಅದರ ಮೂಲಕವೇ ನಾವು ಅನೇಕವನ್ನು ಹೇಳಬೇಕಾಗುತ್ತದೆ. ಭಾಷೆಯಲ್ಲಿ ಯಾವುದನ್ನು ಹೇಳಲು ಸಾಧ್ಯವೋ ಅದನ್ನು ಮಾತ್ರವೇ ಹೇಳುತ್ತೇವೆ. ಆದರೆ ಅನೇಕವನ್ನು ನಾವು ಹೇಳಲು ಸಾಧ್ಯವಾಗುವುದೂ ಇಲ್ಲ. ಆಗ ಅದನ್ನು ವ್ಯಕ್ತಪಡಿಸದೇ ಹೋಗುತ್ತೇವೆ. ಮಾತು ಮತ್ತು ಅದರ ಸಾಧ್ಯತೆಯೇ ಹಾಗೆ. ಹಾಗಿದ್ದರೆ ಭಾಷೆಯ ಮೂಲಕ ನಾವು ಏನನ್ನು ಆಡುತ್ತೇವೆ ಎಂದು ಕೇಳಿದರೆ ಉತ್ತರವು ಸುಲಭ. ಯಾವುದು ಸಮ್ಮತವೋ ಅದನ್ನು ಮಾತ್ರವೇ ಹೇಳುತ್ತೇವೆ. ಉಳಿದ ಸಂಗತಿಗಳನ್ನು ನಿರೂಪಿಸಲು ಹೋಗುವುದೂ ಇಲ್ಲ. ಭಾಷೆಯಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ಎನ್ನುವುದು ಪ್ರಶ್ನೆಯಲ್ಲ. ಅದನ್ನು ಹೇಳುವಾಗ ಅದರ ಹಿಂದೆ ಯಾವುದು ಇದೆ ಎನ್ನುವುದೇ ಬಹಳ ಮುಖ್ಯವಾದ ಪ್ರಶ್ನೆ. ಭಾಷೆಯು ಇರುವುದೇ ಸಂಬಂಧವನ್ನು ಸಾಧಿಸಲು ಮತ್ತು ಸಂವಹನಕ್ಕಾಗಿ. ಆದರೆ ಅನೇಕರು ಇದನ್ನು ಯೋಚಿಸಲು ಹೋಗುವದೂ ಇಲ್ಲ. ಭಾಷೆ ಮತ್ತು ಅದರ ಹಿಂದೆ ಇರುವ ಅಭಿಪ್ರಾಯ ಮಾತ್ರವೇ ಮುಖ್ಯವಾಗಿದೆ. ಭಾಷೆ ಮತ್ತು ಅದರ ಸಾಧ್ಯತೆಯನ್ನು ಈ ಹಿನ್ನೆಲೆಯಿಂದ ಗ್ರಹಿಸುವ ಅಗತ್ಯವೂ ಇದೆ. ಕೃತಿಯ ಭಾಷೆಯು ಲೇಖಕನ ಭಾಷೆಯೂ ಹೌದು. ಅದನ್ನು ನಾವು ನೋಡುವಾಗ ಅದು ಬರೀ ಒಬ್ಬನ ಮಾತು ಎಂದು ಭಾವಿಸಬಾರದು. ಭಾಷೆಯು ಒಂದು ರೀತಿಯಿಂದ ಬಹಳ ದೊಡ್ಡದಾದ ವಾಗ್ವಾದವೂ ಹೌದು. ಯಾವುದನ್ನು ನಾವು ಕೃತಿಯ ಭಾಷೆ ಎಂದು ಕರೆಯುತ್ತೇವೆಯೋ ಅದು ಹೆಚ್ಚು ಇಷ್ಟವಾಗುವುದು ಬುದ್ಧಿಜೀವಿಗಳಿಗೆ. ಆದರೆ ಕಲಾತ್ಮಕ ಮಾತು ಎನ್ನುವುದು ಅವರ ಮಟ್ಟಿಗೆ ಬಹಳ ಮಹತ್ವದ್ದೂ ಹೌದು. ಭಾಷೆ ಮತ್ತು ಅದರ ಸಾಧ್ಯತೆಯನ್ನು ಅವರು ಹೆಚ್ಚುಗಾರಿಕೆ ಎಂದು ಭಾವಿಸುತ್ತಾರೆ. ಭಾಷೆ ಮತ್ತು ಅದರ ದಿಕ್ಪಲ್ಲಟವನ್ನು ಬಹಳ ದೊಡ್ಡದು ಎಂದು ಭಾವಿಸುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಅದನ್ನು ಬಹಳ ದೊಡ್ಡದು ಎಂದು ಭಾವಿಸಬೇಕಾಗಿಯೂ ಇಲ್ಲ. ಬೇರೊಬ್ಬರು ಮಾತಾಡುವ ಕ್ರಮವನ್ನು ಲೇಖಕರು ತಮ್ಮ ಬರಹದಲ್ಲಿ ಬಳಸುತ್ತಾರೆ. ಅದು ಅವರಿಗೆ ಸಲೀಸಾದ ಪ್ರಕ್ರಿಯೆಯೂ ಹೌದು. ಅವರು ಅದನ್ನು ಅನುಕರಿಸುತ್ತಾರೆ. ಭಾಷೆ ಮತ್ತು ಅದರ ಶೈಲಿಯು ಈ ಕಾರಣದಿಂದ ಬಹಳ ಮಹತ್ವದ್ದು ಎಂದೂ ಅದನ್ನು ಬಹಳ ಪವಿತ್ರವಾದುದು ಎಂದೂ ಭಾವಿಸಬೇಕಾಗಿಯೂ ಇಲ್ಲ. ಭಾಷೆ ಮತ್ತು ಅದರ ಪರಿಣಾಮವನ್ನು ನಾವು ಕೇವಲ ಕೃತಿಗೆ ಮಾತ್ರವೇ ಅನ್ವಯಿಸಬೇಕಾದ ಅಗತ್ಯವೂ ಇಲ್ಲ. ಅದನ್ನು ಹಾಗೆ ನೋಡುವ ಅವಶ್ಯಕತೆಯು ಇಲ್ಲ. ಆದರೆ ಭಾಷೆ ಎನ್ನುವುದು ಮೂಲಭೂತವಾಗಿ ಒಂದು ನಿಯಮಕ್ಕೆ ಒಳಪಟ್ಟಿದೆ. ಅದನ್ನು ಮೀರಿ ನಾವು ಯಾವುದೇ ರೀತಿಯ ರಚನೆಯನ್ನು ಮಾಡಿದರೂ ಅದು ಅರ್ಥಹೀನವಾಗಿ ಬಿಡುತ್ತದೆ. ಮತ್ತು ಅದನ್ನು ಜೋಡಿಸಬಲ್ಲೆವೇ ಹೊರತು ಅದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ನಾವು ಅನುಭವಿಸಲಾರೆವು. ಭಾಷೆಗೆ ಉಪಯೋಗದ ಮೌಲ್ಯವಿದೆ. ಅದನ್ನು ನಿರಾಕರಿಸಲು ಬರುವುದೂ ಇಲ್ಲ. ಆದರೆ ಇದನ್ನು ಹೇಗೆ

ಅರ್ಥಮಾಡಿಕೊಳ್ಳಬೇಕು ಎನ್ನುವುದೇ ಮುಖ್ಯವಾದ ಪ್ರಶ್ನೆ. ಭಾಷೆಯೇ ಒಂದು ನಿಯಮ. ಅದನ್ನು ನಾವು ನಮ್ಮ ಮನಸ್ಸಿಗೆ ಬೇಕಾದಂತೆ ಸಂಯೋಜಿಸುತ್ತೇವೆ. ಅದರೆ ಅದನ್ನು ಲೇಖಕರ ಮಾತು ಎಂದು ನಾವು ಭಾವಿಸುತ್ತೇವೆ. ಭಾಷೆಯನ್ನು ಲೇಖಕನು ಹೊಸತಾಗಿ ಕಟ್ಟಿಲ್ಲ. ಅದನ್ನು ಅವನು ರೂಪಿಸುವಾಗ ಅದರ ಹಿಂದೆ ಅವನ ಯೋಚನೆಯು ಇದೆ. ಕಲಾತ್ಮಕವಾದ ಭಾಷೆಯನ್ನು ಅನಗತ್ಯವಾಗಿ ಪ್ರತ್ಯೇಕವೆಂದು ರೂಪನಿಷ್ಟರು ಭಾವಿಸುತ್ತಾರೆ. ಭಾಷೆಯ ಕುರಿತಂತೆ ರೂಪನಿಷ್ಟರ ಸಮಸ್ಯೆಯು ಭಿನ್ನವಾಗಿದೆ. ಅದನ್ನು ಅವರು ಭಾಷಿಕ ವಿಶಿಷ್ಟತೆಯೆಂದು ಹೇಳುತ್ತಾರೆ. ಅದಕ್ಕೆ ಅವರು ಅನನ್ಯವೆಂದು ಭಾವಿಸಿರುವುದೂ ನಿಜ. ಯಾವುದನ್ನು ಅವರು ವಿಶಿಷ್ಟವೆಂದು ಹೇಳುತ್ತಾರೆಯೋ ಅದು ಭಾಷಿಕ ರಚನೆಯು ಮಾತ್ರವೇ ಆಗಿದೆ. ಆದರೆ ಯಾವುದನ್ನು ಅತ್ಯಂತ ವಿಶಿಷ್ಟವಾದುದು ಎಂದು ಹೇಳುತ್ತಾರೆಯೋ ಅದು ಮೂಲಭೂತವಾಗಿ ಒಂದು ರಚನೆ ಅಥವಾ ಸಹಯೋಗ ಮಾತ್ರವೇ ಆಗಿರುತ್ತದೆ. ಅದು ನಿರೂಪಣೆ ಮಾತ್ರವೇ ಆಗಿದೆ. ವ್ಯಕ್ತಿಯನ್ನು ಭಾಷೆಯನ್ನು ತನಗೆ ಬೇಕಾದಂತೆ ಬಳಸುತ್ತಾನೆ. ಭಾಷೆಯು ತನ್ನ ಆಲೋಚನೆ ಮತ್ತು ಮಾತಿನ ನಡುವಣ ಸಹಯೋಗ ಮಾತ್ರವೇ ಆಗಿದೆ. ಮನಸ್ಸು ಯಾವುದನ್ನು ಗ್ರಹಿಸಿದೆಯೋ ಅದನ್ನು ಮಾತ್ರವೇ ನಾವು ಭಾಷೆಯಲ್ಲಿ ವ್ಯಕ್ತಪಡಿಸುತ್ತೇವೆ. ಯಾವುದೇ ರೀತಿಯಲ್ಲಿ ಆಲೋಚಿಸದೆ ನಾವು ಮಾತಾಡಲಾರೆವು. ಯಾವುದು ನಮ್ಮ ಭಾವನೆಯು ಆಗಿದೆಯೋ ಅದನ್ನು ಮಾತ್ರವೇ ನಾವು ನಮ್ಮ ಮಾತಿನಲ್ಲಿ ವ್ಯಕ್ತಪಡಿಸುತ್ತೇವೆ. ಮಾತು ಮತ್ತು ಅದರ ಸಾಧ್ಯತೆಯು ಭಿನ್ನವಾದುದು ಎಂದು ಹೇಳುವಾಗಲೂ ಇದರ ಅರಿವು ನಮಗೆ ಇರಬೇಕಾಗುತ್ತದೆ. ಇಲ್ಲಿ ಇದಕ್ಕೆ ಪೂರಕವಾದ ಮತ್ತೊಂದು ಮಾತನ್ನು ಹೇಳುವುದು ಸೂಕ್ತ. ಕೃತಿಯನ್ನು ನಾವು ಮೌನದಲ್ಲಿ ಓದುತ್ತೇವೆ ಎಂದಾಗಲೂ ಅಲ್ಲಿ ಮಾತು ಮತ್ತು ಅನಿಸಿಕೆಗಳು ದಾಖಲೀಕರಣವಾಗುತ್ತದೆ. ಮಾತು ಮತ್ತು ಅದರ ದಾಖಲೀಕರಣವು ನಮ್ಮ ಮನಸ್ಸಿಗೆ ಸಂಬಂಧಪಟ್ಟಿದ್ದೂ ಹೌದು. ಆದರೆ ಇದನ್ನು ನಾವು ವ್ಯತ್ಯಾಸವೆಂದೋ, ಅಂತರವೆಂದೋ ಕರೆಯಬೇಕಾದ ಅಗತ್ಯವಿಲ್ಲ. ಇದು ಗ್ರಹಿಕೆಗೆ ಸಂಬಂಧಪಟ್ಟಿದ್ದು ಹೌದು. ಪದಗಳನ್ನು ನಾವು ಜೋಡಿಸುವಾಗ ಅದರ ಹಿನ್ನೆಲೆಯಲ್ಲಿ ಚರಿತ್ರೆಯು ಇದೆ. ಪದವೆಂದರೆ ಅದು ನಮ್ಮ ಜ್ಞಾನದ ಚರಿತ್ರೆಯನ್ನು ಹೇಳುತ್ತದೆ. ಯಾವ ಪದಗಳನ್ನು ನಾವು ಜೋಡಿಸುತ್ತೇವೆಯೋ ಅದಕ್ಕೂ ಒಂದು ಹಿನ್ನೆಲೆಯಿದೆ. ಮತ್ತು ಅವುಗಳು ತಾತ್ವಿಕವೂ ಆಗಿದೆ. ಮಾತಿನಲ್ಲಿ ಯಾವುದನ್ನು ಹೇಳುತ್ತೇವೆಯೋ ಅದು ಬರೀ ಸಂವಹನ ಮಾತ್ರವೇ ಅಲ್ಲ. ಚರಿತ್ರೆ ಮತ್ತು ಅದರ ಭಾಗವಾಗಿ ಮಾತುಗಳು ಇವೆ. ಪದಗಳಿಗೆ ಇರುವ ಇತಿಹಾಸವು ಸಣ್ಣದು ಅಲ್ಲ. ಆದರೆ ಭಾಷೆ ಮತ್ತು ಅದರ ಸಾಧ್ಯತೆಗಳು ಭಿನ್ನವಾಗಿವೆ. ಅದನ್ನು ಹೇಳುವಾಗ ಒಂದು ರೀತಿಯಲ್ಲಿ ಹೇಳುತ್ತೇವೆ. ಮಾತು ಕೂಡಾ ತಾತ್ವಿಕತೆಯ ಭಾಗವಾಗಿಯೇ ಬರುತ್ತದೆ. ಅದನ್ನು ನಿರೂಪಿಸುವಾಗ ಯಾವ ರೀತಿಯಲ್ಲಿ ಹೇಳುತ್ತೇವೆ ಎನ್ನುವುದು ಬಹಳ ಮುಖ್ಯ. ಯಾವುದರ ಜೊತೆಗೆ ಯಾವ ರೀತಿಯಲ್ಲಿ ಸಂಬಂಧವನ್ನು ಇಟ್ಟುಕೊಂಡಿರುತ್ತೇವೆಯೋ ಅದಕ್ಕೆ ಅನುಸಾರವಾಗಿ ಮಾತಾಡುತ್ತೇವೆ. ಯಾವುದನ್ನು ಭಾಷೆಯ ನಿಜವಾದ ಸಂರಚನೆಯೆಂದು ಹೇಳುತ್ತೇವೆಯೋ ಅದಕ್ಕೆ ಅನುಸಾರವಾಗಿಯೇ ನಾವು ಮಾತಾಡುತ್ತೇವೆ. ಅದು ನಮ್ಮ ಅಗತ್ಯವೂ ಹೌದು. ಆದರೆ ಗೊತ್ತಿರಬೇಕಾದ


ಮತ್ತೊಂದು ಅಂಶವಿದೆ. ಮಾತು ಮತ್ತು ಬರಹವೆರಡೂ ನಮ್ಮ ತಾತ್ವಿಕ ಅಗತ್ಯಗಳೇ ಆಗಿವೆ. ಬರಹವೆನ್ನುವುದು ನಮ್ಮ ಕ್ರಿಯೆಯ ಭಾಗವೂ ಹೌದು. ಸಾಹಿತ್ಯದ ಚರಿತ್ರೆ, ಭಾಷೆಯ ಚರಿತ್ರೆ, ಮತ್ತು ಸಂವಾದದ ಚರಿತ್ರೆಗಳು ಇದ್ದೇ ಇರುತ್ತವೆ. ಯಾವುದನ್ನು ನಾವು ಸೃಜನಶೀಲತೆಯೆಂದು ಹೇಳುತ್ತೇವೆಯೋ ಅದನ್ನು ನೋಡುವುದು ಎಂದರೆ ಅದರ ತಾತ್ವಿಕತೆಯೊಂದಿಗೆ ನಾವು ಅನುಸಂಧಾನ ಮಾಡುವುದೂ ಹೌದು ಎನ್ನುವುದನ್ನು ಇಲ್ಲಿ ಮರೆಯಬಾರದು. ಯಾವುದೇ ಕೃತಿಗೂ ಅದರ ತಾತ್ವಿಕತೆಗೂ ಒಂದು ಸಂಬಂಧವಂತೂ ಇದ್ದೇ ಇರುತ್ತದೆ. ಧರ್ಮ, ನೀತಿ, ವಿಜ್ಞಾನ ಮತ್ತು ಕಲೆಯು ಕೂಡಾ ತಾತ್ವಿಕ ಪ್ರಶ್ನೆಗಳೇ ಆಗಿವೆ. ಸಾಹಿತ್ಯ ಮತ್ತು ಸಮಾಜಕ್ಕೆ ನಂಟು ಇದೆ. ಯಾವುದನ್ನು ನಾವು ಸಾಮಾಜಿಕ ಜೀವನ ಎಂದು ಹೇಳುತ್ತೇವೆಯೋ ಅದನ್ನು ಆರ್ಥಿಕತೆಯೊಂದಿಗೆ ಗುರುತಿಸಲೇಬೇಕಾಗುತ್ತದೆ. ಇದರ ಅರ್ಥ ಸಿದ್ಧಾಂತವೇ ಮುಖ್ಯ ಮತ್ತು ಅದು ಸರ್ವಸ್ವ ಎಂದು ಅಲ್ಲ. ಪ್ರತಿಯೊಂದು ಸಿದ್ಧಾಂತವೂ ಪ್ರಯೋಗದ ಅವಶ್ಯಕತೆಯನ್ನು ಹೇಳುತ್ತದೆ. ಮತ್ತು ಪ್ರಯೋಗವು ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳುವ ಅಂಶವೂ ಹೌದು. ಸಿದ್ಧಾಂತವೆನ್ನುವುದನ್ನು ನಾವು ಪ್ರಯೋಗ ರಹಿತವೆಂದು ತಿಳಿದುಕೊಂಡರೆ ಅದು ಶುಷ್ಕ ವೇದಾಂತವಾಗುವ ಅಪಾಯವಿದೆ.

* **ರಂಗಪ್ಪನ ಗೊಂಬೆ ಹಾಗೂ ಇತರೆ ಕತೆಗಳು**/ ಡಾ. ಕೆ.ಶಿವರಾಮ ಕಾರಂತರ ಸಣ್ಣಕತೆಗಳು೧೦೦/-
* **ಮೈಗಳ್ಳನ ದಿನಚರಿಯಿಂದ**/ಶಿವರಾಮ ಕಾರಂತರ ಹರಟೆ ಮತ್ತು ವಿಡಂಬನೆಗಳು ೮೦/-*
* **ಹಸಿವು ಭಾಗ-೧**/ಶಿವರಾಮ ಕಾರಂತರ ಸಣ್ಣ ಕತೆಗಳು ೭೫/-
* **ಹಾವು ಮತ್ತು ಕವಿಕರ್ಮ ಭಾಗ - ೨**/ಶಿವರಾಮ ಕಾರಂತರ ಸಣ್ಣ ಕತೆಗಳು ೧೦೦/-
* **ತೆರೆಯ ಮರೆಯಲ್ಲಿ ಭಾಗ - ೩**/ಶಿವರಾಮ ಕಾರಂತರ ಸಣ್ಣ ಕತೆಗಳು ೫೦/-
* **ವಚನಕಾರರು ಮತ್ತು ಅಂಬೇಡ್ಕರ್**/ವಿಮರ್ಶೆ/ಡಾ. ಜಿ.ಪ್ರಶಾಂತ ನಾಯಕ ೧೦೦/-
* **ಅಂಬೇಡ್ಕರ್ ಮತ್ತು ಕುವೆಂಪು**/ವಿಮರ್ಶೆ/ಡಾ. ಜಿ.ಪ್ರಶಾಂತ ನಾಯಕ ೧೦೦/-
* **ಗದ್ದೆಯಂಚಿನ ದಾರಿ**/ಲಲಿತ ಪ್ರಬಂಧ/ಎಲ್.ಸಿ. ಸುಮಿತ್ರ ೧೨೦/-
* **ಹಗಲುಕಗ್ಗೊಲೆ ಮಾನ್ಯ ರಾಜಾ ಮತ್ತಿ ತಿಮ್ಮಣ್ಣ ನಾಯಕ**/ ಐತಿಹಾಸಿಕ ಕಾದಂಬರಿ / ಡಾ. ಬಿ.ಎಲ್. ವೇಣು ೪೦೦/-
* **ಹೊನ್ನ ಹೊಳೆಯ ಅರಸು ಮತ್ತು ಇತರ ಕಥೆಗಳು**/ **ಮಕ್ಕಳ ಕಥೆಗಳು**/ ಭಾರತೀಸುತ ೨೫೦/-
* **ರಾಷ್ಟ್ರೀಯ-ಹಬ್ಬಗಳು, ದಿನಾಚರಣೆಗಳು**/ ಶಕುಂತಲ ಯು. ೧೪೦/-
* **ಹಿರಿಯರ ಹಾದಿ-೩**/ (ಸ್ಫೂರ್ತಿದಾಯಕ ಕಿರುಕತೆಗಳು)/ ಪ್ರೊ. ಎಂ.ಎನ್.ಸುಂದರರಾಜ್೧೫೦/-
* **ಹಿರಿಯರ ಹಾದಿ-೪**/ (ಸ್ಫೂರ್ತಿದಾಯಕ ಕಿರುಕತೆಗಳು)/ ಪ್ರೊ. ಎಂ.ಎನ್.ಸುಂದರರಾಜ್೧೫೦/-
* **ಬಸವಣ್ಣ ಮತ್ತು ವರ್ತಮಾನ ಬದುಕು**/ ಡಾ. ವಸಂತ ಕುಮಾರ್ ೨೦೦/-*
* **ಕೃಷಿ ಸಂರಕ್ಷಣೆ**/ ಡಾ. ಹೆಚ್.ಎಸ್. ವಿರೂಪಾಕ್ಷಪ್ಪ ೨೯೦/-
* **ಮನಮಲ್ಲಿಗೆ**/ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳು / ಡಾ.ಕೆ. ಎಸ್. ಪವಿತ್ರ ೧೬೦/-
* **ವಿಜ್ಞಾನ ಪರಂಪರೆಗೆ ಪ್ರಾಚೀನ ಭಾರತೀಯರ ಕೊಡುಗೆಗಳು**/ ಡಾ. ಟಿ. ನಿರಂಜನ ಪ್ರಭು ೬೦/-
* **ಏಳುಕೊಳ್ಳ-ಏಳುಕೋಟಿ**/ ವಿಮರ್ಶೆ / ಡಾ. ಮಂಜುನಾಥ್ ಬೇವಿನಕಟ್ಟೆ ೧೫೦/-*
* **ಅರಳು ಮನಸ್ಸು**/ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳು / ಡಾ.ಕೆ.ಎಸ್. ಪವಿತ್ರ ೧೫೦/-
* **ಯಕ್ಷರಂಗ ದರ್ಶನ**/ಯಕ್ಷರಂಗ ಕಲಾವಿದರ ಪರಿಚಯ/ಸತೀಶ.ಜಿ.ನಾಯ್ಕ ಮಹಿಮೆ ೨೨೦/-
* **ಅಂತರ್ಜಾಲ ಬಳಕೆ**/ಡಾ. ಎ.ಎಸ್.ಕುಮಾರಸ್ವಾಮಿ ೩೫೦/-
* **ನಿಚ್ಚಂಪೊಸತು**/ಡಾ. ಕುಮಾರಚಲ್ಯ ೧೩೦/-
* **ಮಹಾವೀರ ಮಡಿವಾಳ ಮಾಚಿದೇವ**/ ಕಾದಂಬರಿ/ ಜಿ.ವಿ.ಸಂಗಮೇಶ್ವರ ೩೮೦/-
* **ಹೊನ್ನಾಳಿ ಹೊದ್ತ** / ವಿಮರ್ಶೆ / ಡಾ. ಚನ್ನೇಶ್ ಹೊನ್ನಾಳಿ ೨೮೦/-
* **ಹೊನ್ನಾಳಿ ಸೀಮೆಯ ಕಥನ ಸಾಹಿತ್ಯ**/ ಕಥಾ ಸಂಕಲನ / ಡಾ.ಚನ್ನೇಶ ಹೊನ್ನಾಳಿ ೨೪೦/-
* **ಕಬೀರದಾಸರ ಕನ್ನಡ ದೋಹೆಗಳು**/ಇಟಗಿ ಈರಣ್ಣ ೧೦೦/-
* **ಕನ್ನಡ ಶಾಯಿರಿಗಳು**/ಇಟಗಿ ಈರಣ್ಣ ೧೫೦/-
* **ಇಂಡಿಯಾದೊಳಗೊಂದು ಇಣುಕು**/ ಪ್ರವಾಸಿ ಕಥನ /ಡಾ.ಜಿ.ಕೆ.ರಮೇಶ ೧೬೦/-
* **ಸಮಾನತೆಯ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್**/ಗೊಪಜ್ಜಿ ನಾಗಪ್ಪ ೭೫/-
* **ಸರಳ ಛಂದಸ್ಸು**/ಡಾ. ಕುಮಾರಚಲ್ಯ ೧೮೦/-
* **ದಲಿತಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು...**/ಡಾ.ಎನ್.ಚಿನ್ನಸ್ವಾಮಿ ಸೋಸಲೆ ೨೪೦/-
* **ಸುಲಭದಲ್ಲಿ ತಕ್ಷಣ ಚಿಕಿತ್ಸೆ** [ಆಯುರ್ವೇದ ಚಿಕಿತ್ಸಾ ಮಾರ್ಗದರ್ಶಿ] / ದಿ.ಪ. ಮಂಗರಸಿ ೮೦/-

* **ನಿತ್ಯನೂತನ ಗಾದೆಗಳು**/ (೨೫೦ ಗಾದೆಗಳು ವಿವರಣೆಯೊಂದಿಗೆ)
ಸಂ. ತುರುವನೂರು ಮಲ್ಲಿಕಾರ್ಜುನ, ದೀಪಾಕುಬಸದ್ ೧೦೦/-
* **ವಿಜ್ಞಾನ ಸಾಮಾನ್ಯ ಜ್ಞಾನ ಪ್ರಶ್ನೋತ್ತರಗಳು**/ಎಸ್.ಟಿ. ರಜನಿಕಾಂತ (ಟಿ.ಆರ್.ಕೆ) ೮೦/-
* **ಆ ಬದಿಯ ಹೂವು**/ದೀಪ್ತಿ ಭದ್ರಾವತಿ ೯೦/-
* **ನ್ಯಾಯದಾನದ ಪೀಠದಿಂದ**/(ಅನುವಾದ) ಮಾಣಿಕ್ ಪಟವರ್ಧನ್ ೨೨೦/-
* **ಪ್ರಾಯೋಗಿಕ ವಿಮರ್ಶೆ**
ಪ್ರ.ಸಂ: ಡಾ.ಜಿ.ಎಸ್. ಶಿವರುದ್ರಪ್ಪ. ಸಂ. ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ೧೮೦/-
* **ಬುದ್ಧವಚನ**/(ಧಮ್ಮಪದದ ಭಾವಾನುವಾದ)/ನಾ.ನಂಜಮ್ಮ ೭೦/-
* **ಕೊಳಗ**/ಕಾದಂಬರಿ ಡಾ.ನಾ.ಡಿಸೋಜ. ೧೭೦/-
* **ಪಂಚತಂತ್ರ**/(ಮಕ್ಕಳ ಕಥಾಮಾಲೆ-೧) ಡಾ.ನಾ.ಡಿಸೋಜ ೪೦/-
* **ಹಿತೋಪದೇಶ**/(ಮಕ್ಕಳ ಕಥಾಮಾಲೆ-೨) ಡಾ.ನಾ.ಡಿಸೋಜ ೩೫/-
* **ಗುರುದೇವರ ಕಥೆಗಳು**/(ಮಕ್ಕಳ ಕಥಾಮಾಲೆ-೩) ಡಾ.ನಾ.ಡಿಸೋಜ ೪೫/-
* **ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು**/(ಮಕ್ಕಳ ಕಥಾಮಾಲೆ-೪)/ಡಾ.ನಾ.ಡಿಸೋಜ ೪೫/-
* **ಗುಬ್ಬಿ ಬಂತು ಗೂಡಿಗೆ**/(ಮಕ್ಕಳ ಕಥಾಮಾಲೆ-೫) ಡಾ.ನಾ.ಡಿಸೋಜ ೪೫/-
* **ಆನೆ ಹುಡುಗ ಅಬ್ದುಲ್ಲ ಮತ್ತು ಅಂಬುಗ ಎಂಬ ಹಕ್ಕಿ**/(ಮಕ್ಕಳ ಕಥಾಮಾಲೆ-೬)
ಡಾ. ನಾ. ಡಿಸೋಜ ೪೫/-
* **ಮಿಲಿಟ್ರಿ ಮಾಮಾ**/(ಮಕ್ಕಳ ಕಥಾಮಾಲೆ-೭) ಡಾ.ನಾ.ಡಿಸೋಜ ೪೫/-
* **ಹಾ! ಸವಿಗನ್ನಡ**/(ಚಿಂತನ ಬರಹಗಳು) ಡಾ.ನಾ.ಡಿಸೋಜ ೩೦/-*
* **ವಿವೇಕ ವಿವೇಚನೆ**/(ಚಿಂತನ ಬರಹಗಳು) ಡಾ.ನಾ.ಡಿಸೋಜ ೪೫/-*
* **ಜಾನಪದ ಸ್ವರೂಪ**/ಡಾ. ಹಾ.ಮಾ. ನಾಯಕ ೬೦/-
* **ಕನಕದಾಸರ ಶ್ರೀ ಹರಿಭಕ್ತಿಸಾರ**/(ವ್ಯಾಖ್ಯಾನ-ವಿಶ್ಲೇಷಣೆ) ಸಂಪುಟ-೧ ಎಂ.ಆರ್.ಎಸ್. ೪೦೦/-
* **ಕನಕದಾಸರ ಶ್ರೀ ಹರಿಭಕ್ತಿಸಾರ**/(ವ್ಯಾಖ್ಯಾನ-ವಿಶ್ಲೇಷಣೆ) ಸಂಪುಟ-೨ ಎಂ.ಆರ್.ಎಸ್. ೪೦೦/-
* **ರವೀಂದ್ರನಾಥ ಠಾಕೂರ್**/(ವ್ಯಕ್ತಿಚಿತ್ರ) ಡಾ. ಹಾ.ಮಾ. ನಾಯಕ ೧೫೦/-
* **ಚಿತ್ರದುರ್ಗದ ಮಹಾಮಾತಾಶ್ರೀ ಓಬಳವ್ವ ನಾಗತಿ**/(ಐತಿಹಾಸಿಕ ಕಾದಂಬರಿ)
ಡಾ. ಬಿ.ಎಲ್. ವೇಣು ೨೫೦/-
* **ಬಿಚ್ಚುಗತ್ತಿ ಭರಮಣ್ಣನಾಯಕ**/(ಡಾ. ಬಿ.ಎಸ್. ವೇಣು) ೨೫೦/-
* **ಮನೆಕಟ್ಟಿ ನೋಡು**/(ಲೇಖನಗಳ ಸಂಗ್ರಹ) ಬಿ. ಗಣಪತಿ ಉತ್ತುಂಗ ೧೦೦/-*
* **ಮನನೀಯರು**/(ವ್ಯಕ್ತಿ ಪರಿಚಯ) ಬಿ. ಗಣಪತಿ ಉತ್ತುಂಗ ೬೦/-*
* **ಅಣ್ಣಾ ಹಜಾರೆ**/(ವ್ಯಕ್ತಿಚಿತ್ರ) ಗಿರೀಶ್ ಜಕಾಪುರೆ ೮೦/-
* **ಎತ್ತಿನಗಾಡಿ ಎಕ್ಸ್‌ಪ್ರೆಸ್**/(ಲಘು ಪ್ರಬಂಧಗಳು) ವಿನಿಶಾ ರಿಯಾ ೧೨೦/-
* **ಪ್ರೇಮ ನವೋದಯ**/(ವಿಮರ್ಶೆ) ಡಾ. ಜಿ. ಪ್ರಶಾಂತ ನಾಯಕ ೧೨೦/-
* **ನಾನಕ್ಕೆ ನಿನ್‌ತಂಗೆ!**/(ವಿಮರ್ಶೆ) ಡಾ. ಜಿ. ಪ್ರಶಾಂತ ನಾಯಕ ೧೧೦/-
* **ಪ್ರೇಮ ಭಾವಗೀತೆಗಳು**/(ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ) ೬೫/-

* **ಅಂಕುರ**/(ಚುಟುಕು ಹನಿ ಮಿನಿಗಳ ಸಮ್ಮಿಲನ ಸಂಕಲನ) ನೂರ್ ಸಮದ್ ಅಬ್ಬಲಗೆರೆ ೫೦/-*
* **ಪೂರ್ವಭಾಷಿ** [ಕವನ ಸಂಕಲನ] ತಾರಿಣಿ ಶುಭದಾಯಿನಿ ೬೦/-*
* **ಕಡವು ಮನೆ**/(ಮೂರು ನೀಳ್ಗಥೆಗಳು) ಫಕೀರ್ ಮುಹಮ್ಮದ್ ಕಟ್ಪಾಡಿ ೧೧೦/-
* **ಸಾವಿರದ ರೆಕ್ಕೆ**/(ಕವನ ಸಂಕಲನ) ಜಿ.ಪಿ.ಬಸವರಾಜು ೬೦/-
* **ಗಂಡುಗಲಿ ಮದಕರಿನಾಯಕ**/(ಕಾದಂಬರಿ) ಬಿ.ಎಲ್. ವೇಣು ೧೮೦/-
* **ಗಿಡಗಳ ಮೇಲೆ ಧೂಳು**/(ಕಾದಂಬರಿ) ಗೋವಿಂದ ಮಿಶ್ರ
ಅನುವಾದ : ಆರ್.ಪಿ. ಹೆಗಡೆ ೧೫೦/-*
* **ಒಡೆದ ಕನ್ನಡಿ**/(ಕಾದಂಬರಿ) ಡಾ. ಕೇಶವಶರ್ಮ ಕೆ ೧೯೫/-*
* **ಮುಖವಾಡದವರು**/(ಕಾದಂಬರಿ) ಡಾ.ನಾ.ಡಿಸೋಜ ೮೦/-
* **ಶತಕತ್ರಯರು**/(ಸಂಸ್ಕೃತಿ ಚಿಂತನ ಬರಹಗಳು) ಜೆ.ವಿ. ಜಯರಾಜಶೇಖರ ೮೫/-
* **ಲಿಂಗಲೀಲಾ ಚಾರಿತ್ರ ಸಂಗ್ರಹ** /(ಸಂಸ್ಕೃತಿ ಚಿಂತನ ಬರಹಗಳು)ಜೆ.ವಿ. ಜಯರಾಜಶೇಖರ ೮೫/-
* **ನುಡಿಗನ್ನಡಿ**/(ಚಿಂತನ ಬರಹಗಳು) ಸಿ.ಟಿ. ಶೈಲಾ ಜಯಕುಮಾರ ೭೫/-*
* **ನಿಮ್ಮ ಕನಸಿನ ರಹಸ್ಯ**/(ವೈಜ್ಞಾನಿಕ ದೃಷ್ಟಿಕೋನದ ಬರಹಗಳು) ತಡಸೂರು ಉಮೇಶ್ ೭೫/-*
* **ನಾವು ಸಂತೋಷವಾಗಿರುವುದು ಹೇಗೆ?**/(ವ್ಯಕ್ತಿತ್ವ ವಿಕಾಸದ ಲೇಖನಗಳು)
ಎನ್.ಬಿ.ವೀರನಗೌಡ ೧೨೦/-
* **ಎಷ್ಟು ಬಣ್ಣದ ಇರುಳು**/(ಕವನ ಸಂಕಲನ) ಮುದ್ದು ತೀರ್ಥಹಳ್ಳಿ ೧೦೦/-
* **ಒಂದು ಚಂದ್ರನ ತುಂಡು**/(ಲಘು ಬರಹಗಳು) ಮುದ್ದು ತೀರ್ಥಹಳ್ಳಿ ೧೦೦/-
* **ಮಿಲಿನಿಯಮ್ ಕನ್ನಡ ಸಾಮಾನ್ಯ ಅಧ್ಯಯನ ಕೋಶ**/ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ೨೦೦/-
* **ಗ್ರಹಿಕೆ**/(ಮಹಿಳಾ ದೃಷ್ಟಿಕೋನದ ಲೇಖನಗಳು) ಡಾ.ಈ.ಯರ್ರಿಸ್ವಾಮಿ ೧೫೦/-*
* **ಲಿಂಗ ವ್ಯವಸ್ಥೆ ಸಂಕಥನ/ಪ್ರೇಮ ಅಪಚಂದ**/(ಮಹಿಳಾ ದೃಷ್ಟಿಕೋನದ ಲೇಖನಗಳು) ೧೦೦/-
* **ಮಹಿಳೆ ಮತ್ತು ಜಾತಿಶ್ರೇಣಿಕರಣ : ಅಂಬೇಡ್ಕರ್ ದೃಷ್ಟಿಕೋನ**/ಡಾ.ಈ.ಯರ್ರಿಸ್ವಾಮಿ ೧೫೦/-
* **ಸೊಗಡು**/(ಸಂಸ್ಕೃತಿ ಚಿಂತನೆ) ಡಾ.ಈ.ಯರ್ರಿಸ್ವಾಮಿ ೧೦೦/-*
* **ಹಾಸ್ಯಲಹರಿ**/(ಹಾಸ್ಯ) ೩೦/-
* **ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ**/(ವ್ಯಕ್ತಿ ಚಿತ್ರಣ)
ಡಾ. ಹಣಮಂತರಾಯ ದೊಡ್ಡಮನಿ ೨೦೦/-
* **ಕುಮಾರರಾಮ**/(ವ್ಯಕ್ತಿ ಚಿತ್ರಣ) ಷಣ್ಮುಖಪ್ಪ ೮೦/-
* **ಹಿರಿಯರ ಹಾದಿ**/(ಸ್ಫೂರ್ತಿದಾಯಕ ಕಿರುಕತೆಗಳು) ಪ್ರೊ. ಎಂ.ಎನ್.ಸುಂದರರಾಜ್ ೧೪೦/-
* **ಹಿರಿಯರ ಹಾದಿ ಭಾಗ-೨**/(ಸ್ಫೂರ್ತಿದಾಯಕ ಕಿರುಕತೆಗಳು)
ಪ್ರೊ. ಎಂ.ಎನ್.ಸುಂದರರಾಜ್ ೧೫೦/-
* **ನೀಲನಕ್ಷೆ : ಕನ್ನಡ ವಿಮರ್ಶೆ : ಇಟ್ಟ ಹೆಜ್ಜೆ ತೊಟ್ಟ ರೂಪ** :/ಡಾ.ಕೇಶವಶರ್ಮ ಕೆ. ೨೮೦/-
* **ಕಂಡದ್ದು – ಕಾಡಿದ್ದು: ಸಮಾಜವಾದಿ ಸಂಕಥನಗಳು-೫**/ಡಿ.ಎಸ್.ನಾಗಭೂಷಣ ೨೪೦/-
* **ಕುವೆಂಪು ಸಾಹಿತ್ಯದರ್ಶನ**/ಡಿ.ಎಸ್.ನಾಗಭೂಷಣ ೯೫/-
* **ಕುವೆಂಪು ಪುನರಾನ್ವೇಷಣೆ**/ಡಿ.ಎಸ್.ನಾಗಭೂಷಣ ೨೪೦/-

* ಲೋಹಿಯಾ ಕೈಪಿಡಿ/ಡಿ.ಎಸ್.ನಾಗಭೂಷಣ ೨೫/-
* ಲೋಹಿಯಾ ವಾಣಿ/ಡಿ.ಎಸ್.ನಾಗಭೂಷಣ ೨೫/-
* ಲೋಹಿಯಾ ಜೊತೆಜೊತೆಯಲಿ/ಡಿ.ಎಸ್.ನಾಗಭೂಷಣ ೧೭೫/-
* ಜೆ.ಪಿ. ಕೈಪಿಡಿ/ಡಿ.ಎಸ್.ನಾಗಭೂಷಣ ೨೫/-
* ಭಾರತೀಯ ಷೋಡಶ ಸಂಸ್ಕಾರಗಳು/(ವೈಜ್ಞಾನಿಕ ದೃಷ್ಟಿಕೋನ)
  ಡಾ. ಶ್ರೀ ಷ.ಬ್ರ. ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು, ವೀರಾಪುರ ೧೦೦/-*
* ನೂರೊಂದು ಮುತ್ತು ರತ್ನಗಳು/(ವ್ಯಕ್ತಿ ಚಿತ್ರಣಗಳು) ಜಿ.ಬಿ.ರುದ್ರಪ್ಪ ೧೫೦/-
* ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ/ರೇಖಾ.ಬಿ. ೧೨೦/-*
* ಕಾಯಕಯೋಗಿ ಸರ್.ಎಂ.ವಿಶ್ವೇಶ್ವರಯ್ಯ/ಡಾ. ಪ್ರದೀಪ್‌ಕುಮಾರ್ ಹೆಬ್ರಿ ೧೨೦/-
* ಗ್ರೀನ್ ರೂಮಿನಲ್ಲಿ/(ಕವನಸಂಕಲನ) ದೀಪ್ತಿ ಭದ್ರಾವತಿ ೫೦/-
* ಮೀನಂಬುಳ/(ವಿಮರ್ಶಾ ಲೇಖನಗಳು) ಕೆ.ಆರ್.ಕೃಷ್ಣಯ್ಯ ೧೫೦/-
* ಪ್ರೇಮಜಾಲ/(ಕಾದಂಬರಿ) ಬಿ.ಎಲ್.ವೇಣು ೧೧೦/-
* ಮಲೆನಾಡಿಗ/ಡಾ.ನಾ.ಡಿ.ಸೋಜ ಅಭಿನಂದನಾ ಗ್ರಂಥ ೨೫೦/-
* ಹಾರುವ ಹಕ್ಕಿಗೆ ಹಸಿರೆಲೆ ತೋರಣ/(ಸಮಗ್ರ ಮಕ್ಕಳ ಕಿರು ಕಾದಂಬರಿಗಳು)
  ಡಾ.ನಾ.ಡಿಸೋಜ ೬೦೦/-
* ಮಧುರಾಲಾಪ/(ಶರ್ಮ) ಗೀತಗೋವಿಂದ ಅನುವಾದ ೫೦/-
* ಕನ್ನಡ ವ್ಯಾಕರಣ ಸಿಂಚನ/ಶಿವಲಿಂಗೇಗೌಡ ೧೨೦/-
* ಮಹಿಳೆ, ಮಾಧ್ಯಮ, ಮಾರುಕಟ್ಟೆ/(ಮಹಿಳಾ ವಿಮರ್ಶಾ ಲೇಖನಗಳು)
  ವಿಜಯ್‌ಕುಮಾರ್ ಹೆಚ್. ೫೦/-
* ಆರೋಗ್ಯ ಸಂರಕ್ಷಣ/ (ಆಯುರ್ವೇದ ಚಿಕಿತ್ಸಾ ಮಾರ್ಗದರ್ಶಿ) ಡಾ॥ ಚೇತನ್‌ಕುಮಾರ್ ೧೨೦/-



ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವು ದ್ವಂದ್ವಾತ್ಮಕವಾಗಿದೆ. ಆದರೆ ಅದರ ಕುರಿತು ನಾವು ಮತ್ತೆ ಕೆಲವು ಅಂಶಗಳನ್ನು ಯೋಚಿಸಬೇಕಾದ ಅಗತ್ಯವೂ ಇದೆ. ಹಾಗೆಂದು ಯಾವುದೇ ವಿಷಯಗಳು ತನ್ನಿಂದ ತಾನೇ ಉಂಟಾಗುವುದಿಲ್ಲ. ಈ ದೃಷ್ಟಿಯಿಂದ ವಾಸ್ತವತೆಯೇ ನಮಗೆ ಬಲವನ್ನು ಕೊಡುತ್ತದೆ.

ಅಂದರೆ ವಾಸ್ತವವು ಬರೀ ಸಾಹಿತ್ಯಕ್ಕೆ ಮಾತ್ರವೇ ಸೀಮಿತವಾದ ಚಟುವಟಿಕೆ ಎಂದೂ ಭಾವಿಸಬೇಕಾದ ಅಗತ್ಯವಿಲ್ಲ. ಆದರೆ ಯಾವುದೇ ಬದಲಾವಣೆ ಮತ್ತು ಅದರ ಸಾಧ್ಯತೆಗಳಿಗೂ ವಿವಿಧ ಆಯಾಮಗಳೂ ಇರುತ್ತವೆ.

ಈ ರೀತಿ ಸಾಹಿತ್ಯ ಮತ್ತು ಅದರ ಸಾಮಾಜಿಕ ಸಂಬಂಧವು ವಿಶ್ಲೇಷಿಸುವ ಕೃತಿ ಇದಾಗಿರುತ್ತದೆ.

ಪ್ರಕಾಶಕರು

ವಿನ್ಯಾಸ: ನಿಸ್ಸ ಕಲ್ಲೋ ಜೋಸರ್

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ೧೦೦ ಅಡಿ ರಸ್ತೆ,
ರಾಜೇಂದ್ರನಗರ, ಶಿವಮೊಗ್ಗ
ದೂ. ೯೪೪೯೮ ೮೭೩೯೦
geethanjalipusthakaprakashana@gmail.com

ISBN : 978-93-86855-39-8
9 789386 855398
₹ 160/-